ಸಾಹಿತ್ಯ ವಾರ್ಷಿಕ

1982

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು



ಕನ್ನಡ ಅಧ್ಯಯನ ಕೇಂದ್ರಮಾಲೆ 50

ಸಾಹಿತ್ಯ ವಾರ್ಷಿಕ 1982

ಸಂಪಾದಕರು

ಜಿ. ಎಸ್. ಶಿವರುದ್ರಪ್ಪ

ಸಹಾಯಕ ಸಂಪಾದಕರು

ಎಸ್. ವಿ. ವಿಮಲ

ಸಹಕಾರ

ಬೆಂಗಳೂರು ವಿಶ್ವವಿದ್ಯಾಲಯ

ಗ್ರಂಥಭಂಡಾರದ ಅಧಿಕಾರ ವರ್ಗ

ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SAHITYA VARSHIKA 1982 (Year Book of Literature, 1982) A review of Kannada books on literature published in 1982
Edited by Dr. G. S. Shivarudrappa
(Centre of Kannada Studies Series No. 50)
Published by Prasaranga, Bangalore University, Bangalore
Pp. 365 + xvi 1986

ಪ್ರಧಾನ ಸಂಪಾದಕರು
ಡಾ. ಜಿ. ಎಸ್. ಶಿವರುದ್ರಪ್ಪ

ಪ್ರಕಾಶಕರು :
ಕೆ. ಮರುಳಸಿದ್ಧಪ್ಪ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560 056

ಪ್ರಕಟಣ ಸಹಾಯಕ :
ಬಿ. ಕೆ. ಕರೀಗೌಡ

ಬೆಲೆ : 11-00

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಶಿಕ್ಷಣದಲ್ಲಿ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸುತ್ತಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತವು ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನೂ ವಿಶೇಷೋಪನ್ಯಾಸಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಈ ಪಂಕ್ತಿಗೆ ಇದೀಗ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ಶಾಖೆಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವು ಸೇರುತ್ತಿದೆ. ಇದರಿಂದಾಗಿ ವಿಶ್ವವಿದ್ಯಾಲಯದ ಒಂದೊಂದು ಅಧ್ಯಯನ ಶಾಖೆಯ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗೆ ತಕ್ಕಮಟ್ಟಿನ ಪ್ರೇರಣೆಯೂ ದೊರೆಯುತ್ತಿದೆ. ಈ ರೀತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರ ಇಂಥ ಕೃತಿಗಳನ್ನು ಪ್ರಕಟಣೆಗೆ ಸಿದ್ಧಪಡಿಸುತ್ತಿರುವುದು ಪ್ರಶಂಸನೀಯವಾಗಿದೆ. ಪ್ರತಿಯೊಂದು ವಿಭಾಗವೂ ಹೀಗೆ ತನ್ನ ವಿಭಾಗದ ಹೆಸರಿನಲ್ಲಿ ಕೃತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ ಹೊರತರಲು ಮುಂದೆ ಬರುವುದೆಂದು ನಂಬಿದ್ದೇನೆ.

ವಿಶ್ವವಿದ್ಯಾಲಯದ ನಿಜವಾದ ಹಿರಿಮೆ ಅದರ ಬೌದ್ಧಿಕ ಸಾಧನೆ ಹಾಗೂ ಅಭಿವ್ಯಕ್ತಿಗಳಲ್ಲಿದೆ. ಆದರೆ ಈ ಕಾರ್ಯದಲ್ಲಿ ಆತುರ ಸಲ್ಲದು; ವಿಶ್ವವಿದ್ಯಾಲಯ ಪ್ರಕಟಿಸುವ ಕೃತಿಗಳು ಅದರ ಮತ್ತು ವಿವಿಧ ಅಧ್ಯಯನ ವಿಭಾಗಗಳ ಘನತೆಯನ್ನು ಕಾಯ್ದುಕೊಳ್ಳುವಂತಿರಬೇಕು. ಈ ಕಾರ್ಯದಲ್ಲಿ ನಾವು ಹೊರತರುವ ಕೃತಿಗಳ ಸಂಖ್ಯೆ ಮುಖ್ಯವಲ್ಲ; ಗಾತ್ರ ಮುಖ್ಯವಲ್ಲ; ಗುಣ ಮುಖ್ಯ.

ಕನ್ನಡ ಅಧ್ಯಯನ ಕೇಂದ್ರದ ಅಧ್ಯಾಪಕರು ಹಾಗೂ ಇತರ ಕಾಲೇಜುಗಳ ಅಧ್ಯಾಪಕರು ಸೇರಿ ಸಿದ್ಧಪಡಿಸಿರುವ ಈ 'ಸಾಹಿತ್ಯ ವಾರ್ಷಿಕ 1982' ಕನ್ನಡದಲ್ಲಿ 1982ರಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಕುರಿತ ವಿಮರ್ಶಾತ್ಮಕ ಸಮೀಕ್ಷೆಯಾಗಿದೆ. ವರ್ಷವರ್ಷವೂ ಈ ಬಗೆಯ 'ಸಾಹಿತ್ಯ ವಾರ್ಷಿಕ'ವನ್ನು ಸಿದ್ಧಗೊಳಿಸಿ ಪ್ರಕಟಿಸುವ ಈ ಯೋಜನೆ, ಕನ್ನಡ ಸಾಹಿತ್ಯ ವಿಮರ್ಶೆಯ ಬೆಳವಣಿಗೆಯಲ್ಲಿ ಮೌಲಿಕವಾದ ಪಾತ್ರವನ್ನು ವಹಿಸುವುದೆಂಬ ನಂಬಿಕೆ ಇದೆ. ಈ ಕಾರ್ಯಕ್ಕಾಗಿ ಕನ್ನಡ ಅಧ್ಯಯನ ಕೇಂದ್ರವನ್ನು ಅಭಿನಂದಿಸುತ್ತೇನೆ.

ಡಾ. ಡಿ. ಶಂಕರ ನಾರಾಯಣ
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ಮುನ್ನುಡಿ

ಸಾಹಿತ್ಯ ವಾರ್ಷಿಕ—1982

ಇದು 1982 ನೆಯ ಸಾಲಿನಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳ ಒಂದು ವಿಮರ್ಶಾತ್ಮಕ ಸಮೀಕ್ಷೆ. ಇದನ್ನು ನಡೆಯಿಸಿದವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮತ್ತು ಇತರ ಕಾಲೇಜುಗಳ ಅಧ್ಯಾಪಕರು. ಇದೊಂದು ಸಾಮೂಹಿಕ ಪ್ರಯತ್ನ. ಈ ಪ್ರಯತ್ನ ಪ್ರತಿವರ್ಷವು ಮುಂದುವರಿಯುತ್ತದೆ.

ಹೀಗೆ ಪ್ರತಿವರ್ಷವೂ ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಪ್ರಕಟವಾಗುವ ಕೃತಿಗಳ ವಿಮರ್ಶಾತ್ಮಕ ಸಮೀಕ್ಷೆಯನ್ನು ಸಿದ್ಧಪಡಿಸಿ ಪ್ರಕಟಿಸುವುದು, ಈ ಯೋಜನೆಯ ಉದ್ದೇಶವಾಗಿದೆ.

ಇದು ಸುಲಭವಾದ ಕಾರ್ಯವೇನಲ್ಲ. ಬಹುಸಂಖ್ಯೆಯಲ್ಲಿ ವರ್ಷ ವರ್ಷವೂ ಪ್ರಕಟವಾಗುವ ಸಾಹಿತ್ಯ ಕೃತಿಗಳ ಜಾಡು ಹಿಡಿದು ಗುರುತಿಸುವುದು, ಅನಂತರ ಅವುಗಳನ್ನೆಲ್ಲ ಒಂದೆಡೆ ಕೂಡಿಸಿಕೊಳ್ಳುವುದು ಮೊದಲನೆಯ ಕಷ್ಟ. ಅವುಗಳನ್ನು ತೀರ ಮುಖಾಮುಖಿ ನಿಂತು ವಿಮರ್ಶಿಸುವುದು ಎರಡನೆಯ ಕಷ್ಟ. ಕೃತಿಗಳಿಗೆ, ಕೃತಿಕಾರರಿಗೆ ತೀರ ಸಮೀಪದಲ್ಲಿಯೆ ನಿಂತು ಅಂದಂದಿನ ಕೃತಿಗಳನ್ನು ಅಂದಂದೇ ವಿಮರ್ಶಿಸುತ್ತೇವೆಂದು ಹೊರಡುವುದು ಪ್ರಿಯವಾದ ಕೆಲಸವೇನಲ್ಲ. ಆದರೂ ಅಗತ್ಯವಾಗಿ ಮಾಡಬೇಕಾದ ಕಾರ್ಯ ; ತಪ್ಪೋ ಒಪ್ಪೋ ಯಾರಾದರೂ ಮಾಡಲೇ ಬೇಕಾದ ಕಾರ್ಯ. ಅದನ್ನು ನಾವು ಮಾಡಲು ಹೊರಟಿದ್ದೇವೆ. ನಾವು ಹೊರಟಿರುವ ಉದ್ದೇಶ ಒಳ್ಳೆಯದು—ಎಂಬುದೇ ನಮ್ಮ ಬೆಂಬಲಕ್ಕೆ ಇರುವ ಧೈರ್ಯ.

ಇದು ಆಯಾ ವರ್ಷ ಪ್ರಕಟವಾಗುವ ಪುಸ್ತಕಗಳನ್ನು ಪಟ್ಟಿಮಾಡುವ ಅಥವಾ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸುವ ಪ್ರಾಥಮಿಕ ನೆಲೆಯಲ್ಲಿ ಪರ್ಯಾವಸಾನವಾಗುವ ಸ್ವರೂಪದ್ದಲ್ಲ. ಆಗಲೇ ಹೇಳಿರುವಂತೆ ಆಯಾ ವರ್ಷದ ಸಾಹಿತ್ಯ ಕೃತಿಗಳನ್ನು ಸಮೀಕ್ಷಿಸುವ ಸ್ವರೂಪದ್ದು. ಇಲ್ಲಿರುವ ಒಂದೊಂದು ಸಾಹಿತ್ಯ ಪ್ರಕಾರದ ಪರಿಶೀಲನೆಯಲ್ಲಿ ಆಯಾ ಲೇಖಕರ ಪರಿಮಿತಿಗಳನ್ನು ಪರಿಶೀಲನ ಸಾಮರ್ಥ್ಯದ ತಾರತಮ್ಯಗಳನ್ನು ಓದುಗರು ಗುರುತಿಸಬಹುದು. ಆಯಾ ವಿಭಾಗದ ಸಮೀಕ್ಷೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರು ಜವಾಬ್ದಾರರು.

ನಾಳೆ, ಕನ್ನಡದಲ್ಲಿ ಯಾವುದೇ ಒಂದು ಸಾಹಿತ್ಯ ಪ್ರಕಾರವನ್ನು ಕುರಿತು ಕೆಲಸ ಮಾಡಲು ತೊಡಗುವವರಿಗೆ ಈ "ಸಾಹಿತ್ಯ ವಾರ್ಷಿಕ" ಗಳಿಂದಾಗುವ ಪ್ರಯೋಜನ

ಆಪ್ಪಿಪ್ಪಲ್ಲ. ಯಾವ ಯಾವ ವರ್ಷ ಕನ್ನಡದಲ್ಲಿ ಏನೇನು ಕೃತಿಗಳು ಪ್ರಕಟವಾಗಿವೆ ಸಾಹಿತ್ಯದ ಯಾವ ಯಾವ ಪ್ರಕಾರಗಳಲ್ಲಿ ಏನೇನು ಕೆಲಸ ನಡೆದಿದೆ, ಯಾವ ದೃಷ್ಟಿ-ಧೋರಣೆಗಳು ಅವುಗಳ ಹಿನ್ನೆಲೆಗಿವೆ ಎಂಬುದು ನಾಳಿನ ವಿಮರ್ಶಕರಿಗೆ ಹಾಗೂ ಸಂಶೋಧಕರಿಗೆ ಮೂಲಭೂತ ಸಾಮಗ್ರಿಯಾಗಿ ಇದರಿಂದ ಒದಗುತ್ತದೆ. ಹಾಗೆಯೇ ಪ್ರತಿಯೊಂದು ವರ್ಷದ ಸಾಹಿತ್ಯದ ಸಾಧನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವವರ ಪಾಲಿಗೆ ಮತ್ತು ಸಾಹಿತ್ಯ ಚರಿತ್ರೆಯ ಲೇಖಕನಿಗೆ ಇದೊಂದು ಖಣದ ಗಣಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಕಾರ್ಯದಲ್ಲಿ ನಾವು ಕೇವಲ ಸಾಹಿತ್ಯ ಸಂಬಂಧಿಯಾದ ಕೃತಿಗಳನ್ನು ಮಾತ್ರ, ಅದರಲ್ಲೂ 1982 ರಲ್ಲಿ ಮೊದಲ ಮುದ್ರಣವನ್ನು ಕಂಡ ಕೃತಿಗಳನ್ನು ಮಾತ್ರ ಪರಿಶೀಲನೆಗೆ ಎತ್ತಿಕೊಂಡಿದ್ದೇವೆ. ಕನ್ನಡದಲ್ಲಿ ಪ್ರಕಟವಾಗುವ ವೈಜ್ಞಾನಿಕ, ಮಾನವಿಕ, ಶೈಕ್ಷಣಿಕ ಇತ್ಯಾದಿ ಬೇರೆ ಬೇರೆ ವಿಷಯಗಳನ್ನು ಪರಿಗಣಿಸಿಲ್ಲ. ಅದಕ್ಕೆ ಕಾರಣ, ಈ ಕಾರ್ಯದಲ್ಲಿ ತೊಡಗಿರುವ ನಮಗೆ ಸಾಹಿತ್ಯೇತರ ವಿಷಯಗಳನ್ನು ಕುರಿತು ಪರಿಶೀಲಿಸಲು ಅಥವಾ ವಿಮರ್ಶಿಸಲು ಸಾಮರ್ಥ್ಯವಾಗಲೀ, ಅಧಿಕಾರವಾಗಲೀ ಇಲ್ಲ. ಹೀಗಾಗಿ ಕೇವಲ ಸಾಹಿತ್ಯ ಸಂಬಂಧಿಯಾದ ಕೃತಿಗಳ ಪರಿಶೀಲನೆಯನ್ನು ಈ "ಸಾಹಿತ್ಯ ವಾರ್ಷಿಕ" ದಲ್ಲಿ ಕಾಣಬಹುದು. ಹಾಗೆಯೆ ಇಲ್ಲಿ 1982 ರಲ್ಲಿ ಪ್ರಕಟವಾದ ಎಲ್ಲ ಸಾಹಿತ್ಯ ಸಂಬಂಧಿಯಾದ ಕೃತಿಗಳನ್ನು ಗಮನಿಸಿದ್ದೇವೆ ಎಂದು ಹೇಳುವ ಧೈರ್ಯವಿಲ್ಲ. ಯಾಕೆಂದರೆ, ಆಯಾ ವರ್ಷ ಪ್ರಕಟವಾದ ಸಮಸ್ತ ಸಾಹಿತ್ಯ ಕೃತಿಗಳನ್ನು ಸಕಾಲದಲ್ಲಿ ಗುರುತಿಸಿ ಒಂದೆಡೆ ಕೂಡಿಸುವ ವ್ಯವಸ್ಥೆ ಸಾಧ್ಯವಾಗುತ್ತಿಲ್ಲ. ಅಲ್ಲದೆ 1982 ರಲ್ಲಿ ಪ್ರಕಟವಾದ ಎಷ್ಟೋ ಕೃತಿಗಳು ಕಾರಣಾಂತರದಿಂದ ಕಾಣಲು ದೊರೆಯುವುದಿಲ್ಲ. ಆದರೂ ವಿಶ್ವವಿದ್ಯಾಲಯದ ಗ್ರಂಥ ಭಂಡಾರದ ಅಧಿಕಾರಿಗಳು ನಮಗೆ ಒತ್ತಾಸೆಯಾಗಿ ನಿಂತು ಸಾಧ್ಯವಾದಷ್ಟು ಮಟ್ಟಿಗೆ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ದೊರಕಿಸಿಕೊಟ್ಟಿದ್ದಾರೆ. ನಮ್ಮ ಕೋರಿಕೆಯ ಮೇರೆಗೆ, 'ಪ್ರಜಾವಾಣಿ' ಪತ್ರಿಕೆಯವರು ಪ್ರತಿವಾರದ 'ಸಾದರ ಸ್ವೀಕಾರ' ವಿಭಾಗದಲ್ಲಿ, ಸ್ವೀಕಾರವಾದ ಕೃತಿಗಳು ಪ್ರಕಟವಾದ ವರ್ಷವನ್ನು, ಕಾಣಿಸಿ ಈ ಒಂದು ಯೋಜನೆಯಲ್ಲಿ ಸಹಕರಿಸಿದ್ದಾರೆ. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಆಗಾಗ ಬಂದ ಪುಸ್ತಕ ವಿಮರ್ಶೆಯೂ ಮತ್ತು ಮೈಸೂರಿನಿಂದ ಪ್ರಕಟವಾಗುವ 'ಗ್ರಂಥಲೋಕ' ಸಹ ನಮ್ಮ ಈ ಪರಿಶೀಲನೆಗೆ ನೆರವಾಗಿದೆ. ಹೀಗೆ ಲೇಖಕರ, ಪ್ರಕಾಶಕರ, ವಿಮರ್ಶಕರ, ಪತ್ರಿಕೆಗಳ ಮತ್ತು ಗ್ರಂಥ ಭಂಡಾರದ ನಿರಂತರ ಸಹಕಾರದಿಂದ ಮಾತ್ರ ಇಂಥ ಯೋಜನೆ ಯಶಸ್ವಿಯಾಗುವ ಸಾಧ್ಯತೆಗಳಿವೆ.

ನಮಗೆ ತಿಳಿದ ಮಟ್ಟಿಗೆ ಸಾಹಿತ್ಯ ವಾರ್ಷಿಕದಂತಹ ಯೋಜನೆಯನ್ನು ಬಹುಶಃ ಯಾವ ಒಂದು ಭಾರತೀಯ ವಿಶ್ವವಿದ್ಯಾಲಯವು ಕೈಗೊಂಡಂತೆ ತೋರುವುದಿಲ್ಲ.

ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಕನ್ನಡ ಅಧ್ಯಯನ ಕೇಂದ್ರವು ಸಕ್ರಿಯವಾಗಿ ಪಾಲುಗೊಳ್ಳುವ ಒಂದು ಅವಕಾಶವನ್ನು ಈ ಯೋಜನೆ ಒದಗಿಸಿದೆ ಎಂದು ನಾವು ಭಾವಿಸಿದ್ದೇವೆ.

ಈ ವರ್ಷದ ಸಂಪುಟದಲ್ಲಿಯೂ ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದ ಗೊಂಡ ಕೃತಿಗಳ ಸಮೀಕ್ಷೆ, ಪ್ರತಿಯೊಂದು ವಿಷಯ ವಿಭಾಗದ ಕೊನೆಯಲ್ಲಿ ಬರುವಂತೆ ನೋಡಿಕೊಳ್ಳಲಾಗಿದೆ. 1982 ರಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನ ಗಳು ಎಲ್ಲೆಲ್ಲಿ ಪ್ರಕಟವಾಗಿವೆ ಎಂಬ 'ಲೇಖನ ಸೂಚಿ'ಯೊಂದು ಮುಂದುವರಿದಿದೆ.

ಇದುವರೆಗೂ ಪ್ರಕಟವಾದ 'ಸಾಹಿತ್ಯ ವಾರ್ಷಿಕ' ಗಳನ್ನು ಓದಿ, ತುಂಬಾ ಉತ್ಸಾಹದಿಂದ ಹಲವರು ಉಪಯುಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಸಂಪುಟದಿಂದ ಸಂಪುಟಕ್ಕೆ ಆಗುತ್ತಿರುವ ಸೂಕ್ತವಾದ ತಿದ್ದುಪಡಿ ಮತ್ತು ಮಾರ್ಪಾಡುಗಳು ಇಂಥ ಸಲಹೆಗಳ ಪರಿಣಾಮ. ಇದು ಈ ಯೋಜನೆಯಲ್ಲಿ ಪ್ರಕಟವಾಗುತ್ತಿರುವ ಹನ್ನೆರಡನೆಯ ಸಾಹಿತ್ಯ ವಾರ್ಷಿಕ.

ಈ ಯೋಜನೆಗೆ ಕನ್ನಡ ಅಧ್ಯಯನ ಕೇಂದ್ರದ ಆಚೆಗಿನ, ಬೆಂಗಳೂರು ವಿಶ್ವವಿದ್ಯಾಲಯದ ಇತರ ಕಾಲೇಜುಗಳ ಅಧ್ಯಾಪಕರ ನೆರವನ್ನು ಪಡೆದುಕೊಳ್ಳುತ್ತ ಇರುವುದು ಒಂದು ವಿಶೇಷ ಸಂಗತಿಯಾಗಿದೆ. ನಮ್ಮ ಕೋರಿಕೆಯನ್ನು ಮನ್ನಿಸಿ ಈ ಯೋಜನೆಯಲ್ಲಿ ನೆರವು ನೀಡಿದ ಎಲ್ಲಾ ಅಧ್ಯಾಪಕರಿಗೂ ನಮ್ಮ ಕೃತಜ್ಞತೆಗಳು.

ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲು ಸಹಕರಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರ ವರ್ಗಕ್ಕೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥ ಭಂಡಾರದ ಅಧಿಕಾರ ವರ್ಗಕ್ಕೆ ಹಾಗೂ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಶೀಲಿಸುವ ಶ್ರಮ ತೆಗೆದುಕೊಂಡ ಲೇಖಕರಿಗೆ, ಈ ಕೃತಿಯ ಪ್ರಕಟಣೆಯ ಹೊಣೆಯನ್ನು ಉತ್ಸಾಹದಿಂದ ಹೊತ್ತ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಡಾ. ಕೆ. ಮರುಳಸಿದ್ದಪ್ಪ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಜಿ. ಎಸ್. ಶಿವರುದ್ರಪ್ಪ
ಸಂಪಾದಕರು

ಪ್ರಕಾಶಕರ ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವಿಕಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ಪ್ರಸಾರಾಂಗ ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಬರಲಿರುವ ವರ್ಷಗಳಲ್ಲಿ ಇಂಥ ಹಲವಾರು ವಿಷಯಗಳ ಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಉದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಪ್ರಸ್ತುತ ಕೃತಿ, 'ಸಾಹಿತ್ಯ ವಾರ್ಷಿಕ 1982' ಕನ್ನಡ ಅಧ್ಯಯನ ಕೇಂದ್ರದ ಅಧ್ಯಾಪಕರು ಹಾಗೂ ಇತರ ಕಾಲೇಜುಗಳ ಅಧ್ಯಾಪಕರು ಸೇರಿ ಸಿದ್ಧಪಡಿಸಿರುವ ವಿಮರ್ಶಾ ಸಂಕಲನ. 1982ರಲ್ಲಿ, ಕನ್ನಡದಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಕುರಿತು ವಿಮರ್ಶಾತ್ಮಕವಾಗಿ ಸಮೀಕ್ಷಿಸಲಾದ ಕೃತಿ ಇದಾಗಿದೆ. ವರ್ಷವರ್ಷವೂ ಈ ಬಗೆಯ 'ಸಾಹಿತ್ಯವಾರ್ಷಿಕ'ವನ್ನು ಕನ್ನಡ ಅಧ್ಯಯನ ಕೇಂದ್ರವು ಸಿದ್ಧಗೊಳಿಸುತ್ತಿರುವುದು ತುಂಬಾ ಸ್ವಾಗತಾರ್ಹವಾದ ಸಂಗತಿ. ಈ ಕೃತಿಯನ್ನು ಸಿದ್ಧಪಡಿಸಿ, ಕನ್ನಡ ಅಧ್ಯಯನ ಕೇಂದ್ರ ಮಾಲೆಗೆ, ಪ್ರಸಾರಾಂಗದ ಪ್ರಕಟಣೆಗೆ ವರ್ಷವರ್ಷವೂ ನೆರವು ನೀಡುತ್ತಾ ಬರುತ್ತಿರುವ ಡಾ॥ ಜಿ. ಎಸ್. ಶಿವರುದ್ರಪ್ಪನವರಿಗೂ, ಇನ್ನಿತರ ಲೇಖಕರಿಗೂ ವಿಶ್ವವಿದ್ಯಾಲಯದ ಪ್ರಸಾರಾಂಗದ ಪರವಾಗಿ ನನ್ನ ವಂದನೆಗಳು. ಈ ಕೃತಿಯನ್ನು ಸಕಾಲದಲ್ಲಿ ಮುದ್ರಿಸಿಕೊಟ್ಟ ವಿಶ್ವವಿದ್ಯಾಲಯದ ಮುದ್ರಣಾಲಯದ ಸಿಬ್ಬಂದಿ ಅಭಿನಂದನೆಗೆ ಪಾತ್ರರು.

ಕೆ. ಮರುಳಸಿದ್ದಪ್ಪ
ನಿರ್ದೇಶಕರು
ಪ್ರಸಾರಾಂಗ

ಪರಿವಿಡಿ

ಸಾಹಿತ್ಯ ವಾರ್ಷಿಕ 1982

ಎಂಭತ್ತೆರೆಡರ ಕಾವ್ಯ : ನವ್ಯದ ಮುಪ್ಪಿನ ಪ್ರಭಾವ

ಡಿ. ಆರ್. ನಾಗರಾಜ್

ಈ ವರ್ಷದ ಒಟ್ಟು ಫಸಲನ್ನು ನೋಡಿದಾಗ ಅನ್ನಿಸುವುದು ನವ್ಯಕಾವ್ಯ ಮಾರ್ಗ ಒಂದು ಸೃಜನಶೀಲಮಾರ್ಗವಾಗಿ, ಅನುಭವವನ್ನು ಮಂಡಿಸುವ ಒಂದು ಕ್ರಮವಾಗಿ ಇನ್ನೂ ಪ್ರಭಾವಶಾಲಿಯಾಗಿಯೇ ಉಳಿದಿದೆ ಎಂದು. ಆದರೆ, ಕಾವ್ಯ ಮಾರ್ಗಗಳು ಬಹುಬೇಗ ಮುಪ್ಪಿಗೆ ಬಂದುಬಿಡುತ್ತವೆ. ಈಗಿನ ಬಹುಪಾಲು ತರುಣ ಕವಿಗಳ ಕಾವ್ಯಶೈಲಿ ನವ್ಯದ ಮುಪ್ಪಿಗೆ ಹುಟ್ಟಿದೆಯಾದ್ದರಿಂದ ಓದುವಾಗ ಸಾಕಷ್ಟು ಆಳವಾದ ಅಸಮಾಧಾನ ಉಂಟಾಗುತ್ತದೆ. ನವ್ಯ ಕಾವ್ಯದ ಕೆಲವು ಮುಖ್ಯ ಗುಣಗಳು ಇಲ್ಲಿ ಕಾಣುವ ರೀತಿಯಂತೂ ಇರಿಸುಮುರಿಸನ್ನ ಹುಟ್ಟಿಸು ತ್ತದೆ.

ನವ್ಯ ಕಾವ್ಯದ ಮುಖ್ಯಗುಣ ಅನುಭವದ ಜೊತೆಗೆ ರಮ್ಯ ತನ್ಮಯತೆ ಸಾಧಿಸದೆ, ಆತ್ಮವಿಶ್ಲೇಷಣೆಯ ಪ್ರಯತ್ನದ ನೆಲೆಯಲ್ಲಿಯೇ ಅನುಭವವನ್ನು ಕಾಣು ವುದು. ಮರಗಳ ನಡುವೆ ನಿಂತು ಮರವೇ ಆಗಿಬಿಡುವುದು, ಹಸಿರಿನ ನಡುವೆ ನಿಂತಾಗ ಆತ್ಮವೇ ಹಸುರುಗಟ್ಟುವ ತೀವ್ರತೆ ನವೋದಯದ ಮುಖ್ಯ ಲಕ್ಷಣ. ಆದರೆ, ನವ್ಯರು ಅನುಭವಕ್ಕೆ ಬೆಲೆಕಟ್ಟುವ ಪ್ರಯತ್ನ ಮಾಡುತ್ತಾರೆ. ಈ ಗುಣ, ಈಚಿನ ತರುಣ ಕವಿಗಳಲ್ಲಿ ಕಾಣುವ ಕ್ರಮ ಹೇಗೆ ಎಂದರೆ ಅನುಭವದ ಮೂಲ ಸತ್ವವೇ ಕಾಣದೆ, ವ್ಯಾಖ್ಯಾನದ ನೆರಳೇ ಹಬ್ಬಿ ನಿಂತಿರುತ್ತದೆ. ಎಲ್ಲವೂ ವಾರ್ತೆ, ಅನೇಕ ರೀತಿಯ ವಾರ್ತೆ ಹೇಳುವ ಪ್ರಯತ್ನವನ್ನು ಮಾಡುತ್ತ ಬೋರು ಹೊಡೆಸು ತ್ತವೆ. ಗಾಂಭೀರ್ಯ, ಏಕಾಗ್ರತೆ ಮತ್ತು ಜಡತೆಗಳ ನಡುವಿನ ವ್ಯತ್ಯಾಸವೇ ಮರೆ ಯಾಗಿಬಿಡುತ್ತದೆ. ಇದು ಈ ವರ್ಷದಲ್ಲಿ ಬಂದಿರುವ ಒಂದು ಹಂತದ ಪ್ರಬುದ್ಧತೆ ಪ್ರಕಟಿಸುವ ಕವಿಗಳ ಬಗೆಗಿನ ಮಾತು.

ಆದರೆ, ಈ ಬಗೆಯ ಏಕಾಗ್ರತೆ ಇರದ ತರುಣ ಕವಿಗಳ ಇನ್ನೊಂದು ಗುಂಪಿದೆ. ಅವರಿಗೆ ಮಾಧ್ಯಮದ ಬಗ್ಗೆ ಅರಿವೇ ಇಲ್ಲ. ಅಂದರೆ, ಏನೊ ಅನ್ನಿಸುತ್ತದೆ, ಅದನ್ನೇ ಬರೆಯುತ್ತಾರೆ. ಅನ್ನಿಸಿಕೆ ಮತ್ತು ಬರವಣಿಗೆಗಳ ನಡುವೆ ಕಾವ್ಯ ಎಂಬ ಮಾಧ್ಯಮ ಇದೆ ಎಂಬುದನ್ನೇ ಅವರು ಮರೆಯುವುದರಿಂದ ಈ ರೀತಿಯ ಕೃತಿಗಳನ್ನು ಓದುವುದಂತೂ ಹಿಂಸೆಯೇ ಸರಿ.

ಈ ವರ್ಷದಲ್ಲಿ ಒಂದು ಸಮಾಧಾನದ ಸಂಗತಿ ಎಂದರೆ, ರಾಮಚಂದ್ರಶರ್ಮ, ಲಕ್ಷ್ಮೀನಾರಾಯಣಭಟ್ಟ, ಸಿ. ಪಿ. ಕೆ ಯವರ ಅನುವಾದದ ಕೃತಿಗಳು ಬಂದಿವೆ. ಅನುವಾದದ ಬಗ್ಗೆ ತಾತ್ವಿಕ ಚರ್ಚೆ ನಡೆಸಲು ತಮ್ಮ ತಮ್ಮ ರೀತಿಯಲ್ಲಿ ಇಲ್ಲಿ ಅವಕಾಶ ಮಾಡಿವೆ. ಈ ವರ್ಷದ ಸಾಹಿತ್ಯವಾರ್ಷಿಕದ ಬರವಣಿಗೆಯಲ್ಲಿ ಇದೊಂದೇ ನನಗೆ ತೃಪ್ತಿ ನೀಡಿದ ಅಂಶ.

ಭಾರತ ಸಿಂದುರಶ್ಮಿ : ವಿ. ಕೃ. ಗೋಕಾಕ್

ಅತ್ಯಂತ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿರುವ ಮಹಾಕಾವ್ಯ ಇದು. ತನ್ನ ತಾತ್ವಿಕ ಪರಿಕಲ್ಪನೆಯ ದೃಷ್ಟಿಯಿಂದ ಇದು ರಾಮಾಯಣ ದರ್ಶನಕ್ಕಿಂತ ಹೆಚ್ಚು ವೈವಿಧ್ಯಮಯವಾದದ್ದು. ಮತ್ತು ಮೂಲಭೂತವಾಗಿ ನೋಡಿದರೆ ಈ ಎರಡು ಸಂಗತಿಗಳೇ ಈ ಕೃತಿಯ ದೊಡ್ಡ ಸಮಸ್ಯೆಯೂ ಹೌದು.

ವಿಚಾರಗಳ ಬಗೆಗೆ ಆಳವಾದ ಆಕರ್ಷಣೆ ಹೊಂದಿರುವ ಬಹುಪಾಲು ಕವಿಗಳ ಸಮಸ್ಯೆ ಇದು : ಕವನದ ಹಿನ್ನೆಲೆಯಲ್ಲಿ, ಅದರ ಸ್ಥೂಲ ರೂಪದಲ್ಲಿ ಅತ್ಯಂತ ಶಕ್ತಿ ಶಾಲಿಯಾದ ಬಹುಮುಖೀ ವೈಚಾರಿಕ ಹಂದರವಿರುತ್ತದೆ. ಆದರೆ, ಅದು ಕಾವ್ಯದ ಸೂಕ್ಷ್ಮ ರೂಪಗಳಿಗೆ ಇಳಿಯುವುದಿಲ್ಲ. ಪರಿಕಲ್ಪನೆ ಮತ್ತು ಪ್ರಯೋಗ ಗಳ ನಡುವಿನ ಅಂತರ ಆ ಕೃತಿಯ ವಿಫಲತೆಗೆ ಕಾರಣವಾಗುತ್ತದೆ. ಕಾವ್ಯದ ಸೂಕ್ಷ್ಮ ರೂಪಗಳಲ್ಲಿ, ಭಾಷೆ, ಲಯ, ಪ್ರತಿಮೆ, ಶಿಲ್ಪ ಮುಂತಾದವುಗಳ ಸೃಜನಶೀಲ ಶೋಧನೆ ಇಲ್ಲವಾಗುತ್ತದೆ. ಕವಿಯ ವೈಚಾರಿಕ ಭಾರಕ್ಕೆ ಸಿಕ್ಕಿ ಒದ್ದಾಡುವ ಬಡ ಪ್ರಾಣಿಗಳಂತೆ ಇವು. ಅನೇಕ ರಾತ್ರಿಗಳ ದೀರ್ಘದಣಿವಿನ ಓದಿನ ನಂತರ 'ಭಾರತ ಸಿಂಧು ರಶ್ಮಿ'ಯ ಸಮಸ್ಯೆ ಕೂಡಾ ಇದೇ ಎಂದು ಅನ್ನಿಸಿತು. ಅಲ್ಲಲ್ಲಿ ಗಾಢವಾದ ಭಾಗಗಳು ಅನುಭವಕ್ಕೆ ಬರುತ್ತಿವೆ ಎನ್ನುವ ಹೊತ್ತಿಗೆ ಅವು ಜಡವಾಗಿ ಹೋಗುತ್ತಿದ್ದವು. ಅತ್ಯಂತ ಗಾಢವಾದ ಸಿದ್ಧತೆ ಪ್ರತಿ ಘಟದಲ್ಲಿ ಕಂಡರೂ ಅವು ಸಾರ್ಥಕ ಕಾವ್ಯವಾಗಿ ಫಲಿಸದೆ ಹೋಗುತ್ತದಲ್ಲ, ಕಾರಣವೇನಿರಬಹುದು ?

ಪ್ರಸ್ತುತ ಬರಹದ ಸೀಮಿತ ಚೌಕಟ್ಟಿನಲ್ಲಿ ಇದಕ್ಕೆ ಉತ್ತರಗಳನ್ನು ಹುಡುಕು ವುದು ಸಾಧ್ಯವಿಲ್ಲವಾದರೂ, ಕೆಲವು ಸ್ಥೂಲ ಸೂಚನೆಗಳನ್ನಾದರೂ ನೀಡುವ ಪ್ರಯತ್ನ ಮಾಡಬಹುದು ಎನ್ನಿಸುತ್ತದೆ. ಮೊದಲನೆಯದು, ಈ ಕಾವ್ಯದ ವಸ್ತು ವಿಸ್ತಾರವನ್ನು ಕವಿ ನಿರ್ವಹಿಸಿರುವ ಕ್ರಮ. ನಾನು ಮಾತನಾಡುತ್ತಿರುವುದು ಕತೆಯ ವಿಸ್ತಾರವನ್ನಲ್ಲ. ಬದಲಾಗಿ, ಇದೇ ಕಾವ್ಯದ ಹಂದರದೊಳಗೆ ಕವಿ ತುಂಬಲು ತುರುಕಲು ಪ್ರಯತ್ನಿಸಿರುವ ಅನೇಕ ರೀತಿಯ ಪೌರಾಣಿಕ, ಮಾನವ ಶಾಸ್ತ್ರೀಯ, ಆಧ್ಯಾತ್ಮಿಕ ಸಾಮಗ್ರಿಯ ಬಗೆಗೆ. ಒಂದು ನಿರ್ದಿಷ್ಟ ಅಂಶವನ್ನು ಇಲ್ಲಿ ನೋಡ ಬಹುದು : ಅದು ಈ ಕಾವ್ಯದಲ್ಲಿ ಬರುವ ಮಿಥ್‌ಗಳನ್ನು ಕುರಿತದ್ದು.

ಮಿಥ್ ಮತ್ತು ಮಹಾಕಾವ್ಯ ಇವೆರಡರ ಸಂಘಟನಾಕ್ರಮ, ದರ್ಶನ ಪೂರಾ ಬೇರೆ ಬೇರೆ ರೀತಿಯಂವು. ಈ 'ಮಿಥೋಸ್' ಮತ್ತು 'ಎಪೋಸ್' (Mythos and Epos) ಗಳು ಸಂಸ್ಕೃತಿಯೊಂದರ ಭಿನ್ನ ಚಾರಿತ್ರಿಕ ಘಟ್ಟಗಳಿಗೆ ಸೇರಿದಷ್ಟೇ ಅಲ್ಲದೆ ತಮ್ಮ ಉದ್ದೇಶ, ರೂಪ, ಚಲನೆಗಳಲ್ಲಿ ಪೂರ್ಣವಾಗಿ ಭಿನ್ನವಾದವುಗಳು ಹಲವೊಮ್ಮೆ ಪರಸ್ಪರ ವಿರುದ್ಧವಾದವುಗಳು ಕೂಡ ಹೌದು. ಹೋಮರನಲ್ಲಿ ಇವುಗಳು ಬೆರೆತಂ, ಘರ್ಷಿಸಿರುವ ರೀತಿ ಕುತೂಹಲಕರವಾದದ್ದು. ಹೋಮರ್ ಮನಸ್ಸು ಈ ಮಿಥ್‌ಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ 'ಸಂಘಟಿಸುತ್ತದೆ' ಮತ್ತು ಆ ಪ್ರತಿಮೆಯಂಲ್ಲಿ ಮಿಥ್‌ಗಳನ್ನು ನಿರಾಕರಿಸುತ್ತದೆ. ಇಲ್ಲಿ ಎಪೋಸ್ ಅನ್ನುವುದು ಅತ್ಯಂತ ಮೂಲಭೂತ ಅರ್ಥದಲ್ಲಿ ರ್‍ಯಾಶನಲಿಸ್ಟಿಕ್ ರೀತಿಯಲ್ಲಿ ಕೆಲಸಮಾಡಿ ಅವುಗಳನ್ನು ತನ್ನೊಳಗೆ ಅರಗಿಸಿಕೊಂಡು ಒಂದು ಏಕಾತ್ಮಕ ಕಥನವನ್ನು ಹೇಳುತ್ತದೆ. ಎಷ್ಟೇ ಆಗಲಿ, 'ಒಡಿಸ್ಸಿ' ಕಾವ್ಯದ ವಸ್ತುವೂ ಕೂಡಾ ಇದೇ ತಾನೆ. ಒಡಿಸ್ಯೂಸ್ ಒಂದು ಅವೈಚಾರಿಕ, ನಿಗೂಢ ಜಗತ್ತಿನಲ್ಲಿ ಸಂಚರಿಸುವ ಒಬ್ಬ ಹೀರೋ. ಹೀಗಾಗಿ, ಇಲ್ಲಿ ಕಥೆಯ ಹಂತದಲ್ಲಿ ಹೀರೋನ ವ್ಯಕ್ತಿತ್ವ ಮತ್ತು ಕಾವ್ಯಶರೀರದ ಹಂತದಲ್ಲಿ ಮಿಥ್‌ನ ನಿರಾಕರಣೆ ಎರಡೂ ಒಂದೇ ಆಗಿ ಬಿಡುತ್ತದೆ.

ಆದರೆ, 'ಭಾರತ ಸಿಂಧು ರಶ್ಮಿಯಲ್ಲಿ' ಬರುವ ಮಿಥ್‌ಗಳು ಕೃತಿಗೆ 'ಸಮಗ್ರತೆ (!) ('Comprohensiveness') ಮಾತ್ರ ಕೊಡಲು ಬಂದಂತಿವೆ. ಮೊದಲ ಸಂಪುಟದ ಅನೇಕ ಭಾಗಗಳು ಒಟ್ಟಾರೆಯಾಗಿ ಅಪ್ರಸ್ತುತವಾಗಿ ಕಾಣುವುದಕ್ಕೆ ಬಹುಶಃ ಇದೇ ಕಾರಣ. ಚರಿತ್ರೆ, ಮಾನವಶಾಸ್ತ್ರ, ಮೈಥಾಲಜಿಗಳು ಇಲ್ಲಿ ಕಾವ್ಯದ ಸೃಜನಶೀಲ ಸಂದರ್ಭದಲ್ಲಿ ಬೆರೆಯದೇ ಹೋಗುತ್ತವೆ. ಕೃತಿಯ ಉದ್ದಕ್ಕೂ ಈ ಸಮಸ್ಯೆ ಹಾಗೇ ಉಳಿದು ಬಿಟ್ಟಿದೆ.

ಈ ಕೃತಿಯ ಇನ್ನೊಂದು ಸಮಸ್ಯೆ ಎಂದರೆ ಒಂದು ನಿರ್ದಿಷ್ಟ ಯುಗದ ಜೀವನ ಕ್ರಮವನ್ನು, ಅಂದರೆ ವೈದಿಕ ಯುಗದ ಜೀವನ ಕ್ರಮವನ್ನು ಚಿತ್ರೀಕರಿಸುವಾಗ ಅದನ್ನು ಪೂರ್ಣವಾಗಿ ತಾತ್ವೀಕರಿಸಿಬಿಟ್ಟಿರುವುದು. ಜೀವನದ ದೈನಂದಿನ ಲಯಗಳನ್ನು, ಅವುಗಳ ಚಾರಿತ್ರಿಕ ನಿರ್ದಿಷ್ಟತೆ, ಪದಾರ್ಥ ಜಗತ್ತಿನ ಪ್ರಮಾಣಗಳನ್ನು ಇಲ್ಲಿ ಸಂಪೂರ್ಣವಾಗಿ ಕೈಬಿಡಲಾಗಿದೆ. ಹೋಮರನ, ಓಲ್ಡ್ ಟೆಸ್ಟ್‌ಮೆಂಟಿನ [ಈ ಉದಾಹರಣೆ ಇಲ್ಲಿ ಪ್ರಸ್ತುತ ಎಂದುಕೊಂಡಿದ್ದೇನೆ] ಮಹತ್ವ ಇರುವುದು ಇಲ್ಲಿಯೇ. ಅವುಗಳ 'ಪ್ರಿಮಿಟಿವಿಟಿ' ಮತ್ತು ಅಲ್ಲಿ ಮನುಷ್ಯರು ತಮ್ಮ ನಿಜ ವಾತಾವರಣದೊಡನೆ ಕಾಣಿಸಿಕೊಳ್ಳುವ ರೀತಿಯೇ ಅವುಗಳಿಗೆ ಅನನ್ಯ ಸೊಬಗನ್ನು ನೀಡಿವೆ. ತನ್ನ ಊಟ, ಪ್ರೇಮ, ಬಟ್ಟೆ, ಕತ್ತಿ. ಗುರಾಣಿ, ಬೇಟೆ, ಪೂಜಾವಿಧಿಗಳೊಂದಿಗೆ ಅವರು ಕಾಣಿಸಿಕೊಳ್ಳುವ ರೀತಿಯೇ ಆಕರ್ಷಕ. ಆ ಜೀವನ ಕ್ರಮದ ಸ್ಪಷ್ಟತೆಯೇ ಅವಕ್ಕೆ ಅಪೂರ್ವ ನಿಗೂಢತೆಯನ್ನು ನೀಡಿವೆ. ಆದರೆ, ಇಲ್ಲಿ

ಎಲ್ಲವನ್ನೂ ತಾತ್ವೀಕರಿಸಲಾಗಿದೆ. ಮನುಷ್ಯರು ತಮ್ಮ ಚಾರಿತ್ರಿಕ ಪ್ರಾಚೀನ ರೂಪದಲ್ಲಿ ಕಾಣುವುದೇ ಇಲ್ಲ. ಒಂದು ಆಧ್ಯಾತ್ಮಿಕ ತರ್ಕ ಎಲ್ಲವನ್ನೂ ಅವಾಸ್ತವ ಎಂಬ ಸ್ಥಿತಿಗೆ ತಂದುಬಿಟ್ಟಿದೆ. ಮನುಷ್ಯರ ಮೂಲಕ ತತ್ವವನ್ನು ಕಾಣುವ ಪ್ರಯತ್ನವಲ್ಲ ಇಲ್ಲಿರುವುದು. ತತ್ವಗಳನ್ನೇ ಮನುಷ್ಯರಾಗಿಸುವ ಪ್ರಯತ್ನ ನಡೆದಿದೆ ಇಲ್ಲಿ. ಎಲ್ಲವೂ ಬಣ್ಣ ಬಳಿದುಕೊಂಡಿವೆ. ಕೆಲವು ಭಾಗದಲ್ಲಿನ ಪ್ರಕೃತಿ ದರ್ಶನ ಇದರಿಂದ ಹೊರತು.

ಮಹಾಕಾವ್ಯದ ಶಾಸ್ತ್ರೀಯ ಶಿಲ್ಪದ ದೃಷ್ಟಿಯಿಂದ ನೋಡಿದರೆ, ಈ ಕೃತಿ ತನ್ನೊಳಗೆ ಅನೇಕ ಹೊಸತನಗಳನ್ನು ಇರಿಸಿಕೊಂಡಿದೆ. ಮಹಾಕಾವ್ಯ ಲಕ್ಷಣ ಗಳನ್ನು ಚರ್ಚಿಸುವ ಆಕೆಡಮಿಕ್ ಚರ್ಚೆಗೆ ಇದರಿಂದ ಸಮೃದ್ಧವಾದ ವಸ್ತು ಸಿಗಬಹುದು.

ಆದರೆ, ಮಹಾಕಾವ್ಯ ಎನ್ನುವುದು ಕಾದಂಬರಿಯ ಪೂರ್ವ ಪ್ರಕಾರ ಎನ್ನುವು ದನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸಿದಾಗ ಈ ಕೃತಿಯ ಮಿತಿಗಳು ಹೊರ ಬೀಳು ತ್ತವೆ. ಈ ಕೃತಿಯ ಗಾತ್ರ, ಸಾಧನೆಗಳು ಏನಿದ್ದರೂ ಮಹಾಕಾವ್ಯ ಲಕ್ಷಣ ಗ್ರಂಥಕ್ಕೆ ಹೊಸದೊಂದು ಅಧ್ಯಾಯ ಸೇರಿಸುವ ಆಕೆಡಮಿಕ್ ರೀತಿಯದು ಮಾತ್ರ.

ಅನಾಮಿಕ ಆಂಗ್ಲರು : ಕೆ. ಎಸ್. ನಿಸಾರ್ ಅಹಮದ್

ಆಧುನಿಕ ಕನ್ನಡ ಕಾವ್ಯದ ವಿದ್ಯಾರ್ಥಿಗಳಿಗೆ ಪರಿಚಿತ ಕವಿಯಾದ ನಿಸಾರರ ಎಂಟನೆಯ ಸಂಕಲನ ಇದು. ಈ ಕೃತಿಯಲ್ಲಿ ಅವರ ಶಕ್ತಿ ಮತ್ತು ಮಿತಿಗಳೆರಡೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮೊದಲಿಂದ ನಿಸಾರರ ಕಾವ್ಯದ ಪ್ರಮುಖ ಸಮಸ್ಯೆ ಎಂದರೆ ಸ್ಥಗಿತ ಗ್ರಹಿಕೆ. ಅಂದರೆ, ಕವನದ ಮೊದಲಲ್ಲೇ ಒಂದು ನಿರ್ದಿಷ್ಟ ರೀತಿಯ ಅನುಭವ ಗ್ರಹಿಕೆ ಬಂದು ಮುಂದೆ ಇಡೀ ಕವನದಲ್ಲಿ ಅದೇ ಬೇರೆ ಬೇರೆ ಮಾತುಗಳಲ್ಲಿ ಬಂದು ಹೋಗುತ್ತದೆ. ಹೀಗಾಗಿ. ಕವನಕ್ಕೆ ಅನಿವಾರ್ಯ ಬೆಳವಣಿಗೆ ಎಂಬುದೇ ಇರುವುದಿಲ್ಲ. ಇದು ನಿಸಾರರ ಕಾವ್ಯದ ಮುಖ್ಯ ಮಾದರಿ. ಈ ಸಂಕಲನದ 'ಖಾಲಿ ಸೈಟುಗಳು', 'ನಗರ ನಿವಾಸಿಗಳು' ಕವನಗಳು ಇದಕ್ಕೆ ಸಾಕ್ಷಿ. ಬೆಂಗಳೂರಿನ ಹೊಸ ಬಡಾವಣೆಗಳ ನಿವಾಸಿಯಾದ ನನಗೆ ಈ ಕವನ ತುಂಬ ಪ್ರಿಯವಾಗಿ ಕಂಡಿತು. ಕೆಲವು ಸೈಟು ಮದುವೆ ಲೇಟಾದ ಕನ್ನೆಯರೆ ಥೇಟು— ಈ ರೀತಿಯ ಸಾಲುಗಳ ಇಡೀ ಕವನದುದ್ದಕ್ಕೂ ಧಂಡಿಯಾಗಿ ಸಿಕ್ಕಿ ಉಲ್ಲಾಸ ಗೊಳಿಸುತ್ತವೆ. ನಿಸಾರರು ಇಂಥ ಕಡೆಗಳಲ್ಲಿ ಅಪಾರ ಲವಲವಿಕೆಯಿಂದ ಬೀಗಬಲ್ಲರು. ಡೆಯ ಭಾಗದಲ್ಲಿ ಕವನವನ್ನು ಹೊಸ ಗಾಂಭೀರ್ಯದ ಎತ್ತರಕ್ಕೆ ಒಯ್ಯುವ ಪ್ರಯತ್ನ

ಎವೆ. ಆದರೆ ಹಿಂದೆ ಎಲ್ಲೂ ಇದಕ್ಕೆ ಸಿದ್ಧತೆಯಿಲ್ಲವಾದ್ದರಿಂದ ಈ ಗಾಂಭೀರ್ಯ ನೆನೆದ ಪಟಾಕಿಯಂತೆ ಹತ್ತದೆ ಹೋಗುತ್ತದೆ.

ಈಚೆಗೆ ನಿಸಾರರ ಕಾವ್ಯದಲ್ಲಿ ಒಂದು ಹೊಸ ಆಯಾಮವನ್ನು ಕಾಣುತ್ತೇವೆ. ಅಥವಾ ಹಿಂದೆ ತೀರಾ ಚಿಕ್ಕ ಪಾತಳಿಯಲ್ಲಿ ಹರಿಯುತ್ತಿದ್ದುದು ಈಗ ದೊಡ್ಡ ಪಾತ್ರದಲ್ಲಿ ಹರಿದಿದೆ. ಕವಿಯ ಮಾತಿನಲ್ಲೇ ಹೇಳುವುದಾದರೆ ಅದು 'ನಿರ್ಮೊಹನಿದ್ದೂ ನಿರ್ಮಂತಾಗದ' ತಳಮಳ. ಈ ಕೃತಿಯಲ್ಲೂ 'ರಂಗೋಲಿ ಮತ್ತು ಮಗ' ಕವನದಲ್ಲಿ ಅದು ಕಾಣುತ್ತದೆ. ಈ ಕವನ ಮೇಲುನೋಟಕ್ಕೆ ಯಶಸ್ವಿ ಅಂತ ಅನ್ನಿಸಿದರೂ ಕೊಂಚ ಎಚ್ಚರಿಕೆಯ ಓದಿನ ನಂತರ ಅದು ಸೀಮಿತ ಅಂತ ತಿಳಿಯುತ್ತದೆ. ಈ ಅಂಶವನ್ನು ಇನ್ನಷ್ಟು ವಿಸ್ತೃತವಾಗಿ ಹೇಳುವ ಅವಶ್ಯಕತೆಯಿದೆ.

ತಮ್ಮ ಮುಸ್ಲಿಂ ಐಡೆಂಟಿಟಿಯ ಜೊತೆಗೆ ನಿಸಾರರು ನಡೆಸಿರುವ ಸಂವಾದ ಸೀಮಿತ ಸಾಮಾಜಿಕ ಸಂಬಂಧಗಳದು. ತಕ್ಷಣದ ಸಾಮಾಜಿಕತೆಯದು. ಮುಸ್ಲಿಂ ಐಡೆಂಟಿಟಿಯ ಆಳವಾದ ಸಾಂಸ್ಕೃತಿಕ ನೆನಪುಗಳ, ಪ್ರತಿಮೆಗಳ, ಧಾರ್ಮಿಕ ಲೋಕಗಳ ಜತೆಗಿನ ಮುಖಾಮುಖಿ ಅಲ್ಲ. ಅಂಥ ಜಗತ್ತಿನ ಜೊತೆಗೆ ಆಪ್ತವಾದ ಸಂಬಂಧವಿದ್ದು 'ನಿರ್ಮಂತಾಗುವ' ಪ್ರಯತ್ನವಲ್ಲ ಅದು. ಬಹುಶಃ ನಿಸಾರರಿಗೆ ಆಗ ಭಾಷೆಯ ಜತೆಗಿನ ಸಂಬಂಧ, ಅನುಭವ ನಿರ್ವಹಣೆಯ ಕ್ರಮ ಪೂರ್ತಿ ಬೇರೆಯಾಗುತ್ತದೆ. ಆದ್ದರಿಂದ, ಶಿಕ್ಷಣದ ಸಾಮಾಜಿಕ ಮುಖಾಮುಖಿಯನ್ನು ಎಷ್ಟೇ ಚುರುಕಾಗಿ ಹೇಳಿದರೂ ಅದು ಕಾವ್ಯದ ಆಕೃತಿಯ ದೃಷ್ಟಿಯಿಂದ ಹೊಸ ಆಯಾಮವನ್ನೇನೂ ಸಾಧಿಸುವುದಿಲ್ಲ.

ಅಂಥ ಮಹತ್ವಾಕಾಂಕ್ಷೆಯ ಪ್ರಯತ್ನಗಳನ್ನು ಈ ಸಂಕಲನದಲ್ಲಿ ನಿಸಾರರು ಮಾಡಿಲ್ಲ. ಕಾವ್ಯದ ಜೊತೆಗೆ ಅವರಿಗೆ ಆ ರೀತಿಯ ಹಠದ, ವ್ರತದ ರೀತಿಯ ಸಂಬಂಧ ಇಲ್ಲವೊ ಏನೊ. ಆದರೆ, ಉದ್ದಕ್ಕೂ ನಿಸಾರರ ಒಂದು ವಿಶಿಷ್ಟ ಸಾಧನೆ ನಮಗೆ ಆತ್ಮೀಯವಾಗುತ್ತಾ ಹೋಗುತ್ತದೆ. ಅದು ಭಾಷೆಯನ್ನು ಹೊಸ ರೀತಿಯ ಬಳಕೆಗಳಿಗೆ, ಹೊಸ ನುಡಿಗಟ್ಟುಗಳಿಗೆ ನಿಸಾರರು ಒಗ್ಗಿಸುವ ಕ್ರಮ.

ಹೂವು ಹೆಣ್ಣು ತಾರೆ : ಚಂದ್ರಶೇಖರ ಪಾಟೀಲ

ಚಂದ್ರಶೇಖರ ಪಾಟೀಲರ ಈಚಿನ ಸಂಕಲನಗಳಂತೆ['ಗಾಂಧೀಸ್ಮರಣೆ'ಯಿಂದೀಚೆಗೆ ಈ ಸಂಕಲನ ಕೂಡಾ ಅವರ ಶಕ್ತಿ ಮತ್ತು ಮಿತಿಗಳನ್ನು ಒಟ್ಟಿಗೇ ಪ್ರಕಟಿಸುತ್ತದೆ. ಲಯಕಲ್ಪನೆ, ಭಾಷಾಪ್ರಯೋಗಗಳಲ್ಲಿ ಪಾಟೀಲರ ಪರಿಣತಿ ದೊಡ್ಡ ಮಟ್ಟದ್ದು. ಇಲ್ಲಿರುವ ಯಾವ ಪದ್ಯವನ್ನು ತೆಗೆದರೂ ಚಂಪಾರ ವ್ಯಕ್ತಿ ವಿಶಿಷ್ಟತೆ ಥಟಕ್ಕನೆ ಗೋಚರಿಸುತ್ತದೆ. ಈಚಿನ ಕನ್ನಡ ಕಾವ್ಯದಲ್ಲಿ ಕಾಣೆಯಾಗಿರುವ ಬುದ್ಧಿವಂತ

ರಂಜಕ ಗುಣ ಇಲ್ಲಿರುವ ರೀತಿ ನಿಜಕ್ಕೂ ಮೆಚ್ಚಿಗೆಗಳಿಸುವಂಥದ್ದು. ಪಾಟೀಲರಿಗೆ ಇಂಥ ಪದ್ಯಗಳು ಲೀಲಾಜಾಲವಾದವುಗಳು. 'ಒಂದು ಆಕಳ ಸಮಾಚಾರ', 'ಬಸವ ಪುರಾಣ', 'ಒಂದು ಚಲಾವಣೆ ಲಾವಣಿ', 'ಮುರಾರಜಿಗೊಂದು ಮನು'–ಈ ಕವನಗಳಂತೂ ಕನ್ನಡದ ಅರಿಸ್ಟೋಫೇನ್ಸ್ ಪ್ರತಿಭೆ ಇದು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಆದರೆ, ಇನ್ನು ಕೆಲವು ಪದ್ಯಗಳಲ್ಲಿ, ಕೆಲವು 'ಗಂಭೀರ' ಪದ್ಯಗಳಲ್ಲಿ ಅವರ ಬೌದ್ಧಿಕ ತೀವ್ರತೆ ಮಾಯವಾಗಿ ಮಧ್ಯಮ ವರ್ಗದವರ ನೈತಿಕ ಗೊಣಗಾಟ ಕೇಳುತ್ತದೆ. ಅಂದರೆ ಏಕೊ ಪಾಟೀಲರಲ್ಲಿ ಬೌದ್ಧಿಕ ತೀವ್ರತೆ, ಸೃಜನಶೀಲ ಚುರುಕು ಮತ್ತು ನೈತಿಕ ಟೀಕೆ ಒಟ್ಟಿಗೇ ಹೋಗುವುದಿಲ್ಲ. 'ನನ್ನ ಕವನದಣಿದಿವೆ', 'ಗಾಂಧಿಯನ್ನು ಕಂಡಿಲ್ಲ', 'ಜೇಪಿ ಸತ್ತಿಲ್ಲ', 'ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸಾವು'—ಈ ಪದ್ಯಗಳು ಮೇಲಿನ ಮಾತುಗಳನ್ನು ಹೇಳುವಾಗ ನನ್ನ ಮನಸ್ಸಿನಲ್ಲಿ ನಿಂತಿವೆ.

ಇವೆರಡಕ್ಕಿಂತ ಕೊಂಚ ಭಿನ್ನವಾದ ಒಂದೆರಡು ಪದ್ಯಗಳು ಈ ಸಂಕಲನದ ಮೌಲಿಕತೆಯನ್ನು ಹೆಚ್ಚಿಸಿವೆ. 'ಬಸವ' ಪದ್ಯವಂತೂ ಪಾಟೀಲರ ಅತ್ಯುತ್ತಮ ಪದ್ಯಗಳಲ್ಲೊಂದು. ಬುದ್ಧಿಯ ತೀವ್ರತೆ ತನ್ಮಯಂತೆಗಳು ಬೆರೆತಿರುವ ಕ್ರಮ ನಿಜಕ್ಕೂ ಮೆಚ್ಚಿಗೆ ತರಿಸುವಂಥದು.

ಈ ಪದ್ಯವನ್ನು ಓದಿದಾಗ ನನಗೆ ಅನ್ನಿಸಿದ್ದು, ಅಪಾರ ಶಕ್ತಿಗಳಿರುವ ಪಾಟೀಲರು ತಮ್ಮ ಕಾವ್ಯ ಮತ್ತು ಜೀವನದ ಬಗೆಗಿನ ಸಂಬಂಧದ ಕಲ್ಪನೆಗಳಿಂದಾಗಿ ಶಕ್ತಿಯಿದ್ದರೂ ದೊಡ್ಡದನ್ನು ಸಾಧಿಸದೆ ಹಾಗೇ ಕುಳಿತಿದ್ದಾರೆ ಎಂದು. ಸ್ವಂತ ಶಕ್ತಿಯ ಸೀಮಿತ ಬಳಕೆಯ ಒಂದು ಉದಾಹರಣೆ ಇದು.

ಕೋಟಿತೀರ್ಥ : ಜಯಂತ ಕಾಯ್ಕಿಣಿ

ಕಾವ್ಯರಚನೆಯ ಕಸುಬಿನ ಬಗ್ಗೆ ಜಯಂತ ಕಾಯ್ಕಿಣಿಯವರಿಗೆ ಇರುವ ಶ್ರದ್ಧೆ ಇಲ್ಲಿಯ ಪದ್ಯದಲ್ಲೂ ಸಾಬೀತಾಗುತ್ತದೆ. ಆದರೆ, ಸಮಸ್ಯೆ ಇರುವುದು ಇಲ್ಲಿ ಪ್ರತೀತವಾಗುವ ಕಾವ್ಯ ಕಲ್ಪನೆ ಮತ್ತು ಪ್ರಯೋಗದ ಬಗ್ಗೆ. ವಸ್ತು ಪ್ರತಿರೂಪ ಮತ್ತು ಪ್ರತಿಮಾ ಜಗತ್ತಿನ ನಿರ್ಮಾಣದ ಬಗ್ಗೆ ಕವಿಗೆ ಅಂಥ ಏಕಾಗ್ರತೆ ಇಲ್ಲ. ಕಾವ್ಯವೆಂದರೆ ಮೂಲತಃ ಚಿಂತನಪರ, ಅದೇ ಗಂಭೀರ ಕಾವ್ಯ ಎಂಬ ತತ್ವ ಇಲ್ಲಿ ಪ್ರಯೋಗಗೊಂಡಿದೆ. ಪ್ರತಿಮೆಗಳು ಬಂದದ್ದಾದರೆ ಅವು ಸೀಮಿತ ಉದ್ದೇಶದ ಹೊಳಹಿಗಷ್ಟೆ ನಿಂತುಹೋಗುತ್ತವೆ. ಚಿಂತನ ಪರತೆ ತೀರಾ ಭಾರವಾಗಿ, ಜಡವಾಗಿಬಿಡುವುದನ್ನು 'ಕೋಟಿ ತೀರ್ಥ' ಕವನದಲ್ಲೇ ಕಾಣಬಹುದು. ನಿರ್ದಿಷ್ಟ ವಿವರಗಳು ಬಂದು ಕೂಡಿಕೊಳ್ಳುತ್ತಾ ಹೋದರೂ ಅದನ್ನೆಲ್ಲ ಕಟ್ಟಬಲ್ಲ, ವಿವರಗಳನ್ನು, ಪ್ರತಿಮೆಗಳ ಹಂತಕ್ಕೆ ಒಯ್ಯಬಲ್ಲ ಒಂದು ಸೃಜನಶೀಲ ದರ್ಶನ ಕವನದಲ್ಲಿಲ್ಲ. ಇಡೀ ಸಂಕಲನದ

ಸಮಸ್ಯೆ ಇದು ಎಂದು ನನಗೆ ಅನ್ನಿಸಿದೆ : ವಿವರಗಳು ಪ್ರತಿಮೆಯಾಗಿ ಬೆಳೆಯುದೇ ಹೋಗುತ್ತದೆ.

ಜಯಂತ ಕಾಯ್ಕಿಣಿಯವರು ಮಹತ್ವಾಕಾಂಕ್ಷಿಗಳು ಎನ್ನುವುದು 'ಯಕ್ಷಲೋಕ' ಕವನದಿಂದ ತಿಳಿಯುತ್ತದೆ. ಮಧ್ಯೆ ಮಧ್ಯೆ ಸೊಗಸಾದ ಪ್ಯಾಸೇಜ್‌ಗಳು ಇಲ್ಲಿ ಇವೆಯಾದರೂ ಕವನ ಉದ್ದವಾಗುತ್ತಾ ಹೋಗುವ ರೀತಿ ಅಷ್ಟೇನೂ ತೃಪ್ತಿಕರ ವಾಗಿಲ್ಲ. ಇಲ್ಲಿ ಜಯಂತ ಕಾಯ್ಕಿಣಿಯವರು ಅತ್ಯಂತ ಸಾಹಸದ ದಾರಿಯೊಂದನ್ನು ಹಿಡಿದಿದ್ದಾರೆ. ಸಾಮಾನ್ಯವಾಗಿ ದೊಡ್ಡ ಕವನಗಳು, ಕನ್ನಡದಲ್ಲಿ ಈಚೆಗೆ, ಒಂದು ಕಥನದ ಸೂತ್ರವನ್ನು ಅವಲಂಬಿಸಿರುತ್ತವೆ. ಶಿವಪ್ರಕಾಶ್, ವೆಂಕಟೇಶಮೂರ್ತಿ, ಲಕ್ಷ್ಮಣರಾವ್, ಸಿದ್ಧಲಿಂಗಯ್ಯನವರ ಕವನಗಳು ಇದಕ್ಕೆ ಸಾಕ್ಷಿ. ಇಂಥ ಕಡೆಗಳಲ್ಲಿ ಮೇಲು ನೋಟದ ಯಶಸ್ಸು ಸಿಗುವುದು ಸುಲಭ. ಆದರೆ, ಕಾಯ್ಕಿಣಿ ಕಥನದ ಸೂತ್ರ ಬಿಟ್ಟು ನೆನಪಿನ ಆಕಾಶದಲ್ಲಿ ನಿಂತಿದ್ದಾರೆ. ಈ ಕವನದ ಬಗ್ಗೆ ನನಗೆ ಉಂಟಾದ ಅತೃಪ್ತಿ ಎಂದರೆ, ಮತ್ತೆ ವಿವರಗಳು ಕೇಂದ್ರವೊಂದಕ್ಕೆ ಕೂಡಿಕೊಳ್ಳದೆ ಡೆಪ್ತ್ ಅನ್ನು ಗಳಿಸಿಕೊಳ್ಳುವುದಿಲ್ಲ. ಆದರೆ, ಲಯದ ಮಟ್ಟಿಗೆ ಈಗಿನ ಉಳಿದ ತರುಣ ಕವಿಗಳಿಗಿಂತ ಭಿನ್ನವಾದ ಪ್ರಯೋಗ ಮಾಡಿದ್ದಾರೆ. ಅರ್ಥಲಯಕ್ಕನು ಸಾರವಾಗಿ ಚಿಕ್ಕ ಚಿಕ್ಕ ಸಾಲಿಗೆ ನಿಲ್ಲುವ ಬದಲು, ಒಂದರೊಳಗೊಂದು ಹರಿಯುವ ಲಯವನ್ನೂ ಬಳಸಿದ್ದಾರೆ. ಈ ಪ್ರಯತ್ನ ಇಡೀ ಕೃತಿಯುದ್ದಕ್ಕೂ ಇದೆ.

ಜಯಂತ ಕಾಯ್ಕಿಣಿಯವರಿಗೆ ಕವನದಲ್ಲಿ ಕತೆಯ ಅಂಶಗಳನ್ನೂ ತುರುಕುವ ಚಟ–ಕೆಲವು ಪದ್ಯಗಳಲ್ಲಿ ಇದು ತೀರಾ ಹೆಚ್ಚಾಗಿದೆ. (ಉದಾ : ಊರು ನಾನು ಸಾವು)

ಒಟ್ಟಾರೆಯಾಗಿ ಹೇಳುವುದಾದರೆ, ಈ ವರ್ಷದ ಸಂಕಲನಗಳಲ್ಲಿ ಬಹುಶಃ ಅತ್ಯುತ್ತಮವಾದದ್ದು ಇದು. ಇದರ ಜೊತೆಗೆ ಗಂಭೀರವಾಗಿ ತೊಡಗಿಕೊಂಡು ಕೆಲವು ಮಹತ್ವದ ಪ್ರಶ್ನೆಗಳನ್ನು ಚರ್ಚಿಸಲು ಸಾಧ್ಯವಿದೆ. ಅಷ್ಟರಮಟ್ಟಿಗೆ ಈ ಲೇಖಕ ಕವಿಗೆ ಕೃತಜ್ಞ. ಈ ಸಂಕಲನವನ್ನು ಆಧರಿಸಿ ನವ್ಯಕಾವ್ಯದ ಈಚಿನ ದಿನಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಸಲು ಸಾಧ್ಯ.

ಸುಳ್ಳುಬರುಕಿ : ವೇಣುಗೋಪಾಲ ಸೊರಬ

"ಮುಂಚಿನ ಕವನಗಳಲ್ಲಿ ಕಾಣುತ್ತಿದ್ದ ಅರ್ಥಕ್ಲಿಷ್ಟತೆ ಇಲ್ಲವೆ ಅದಕ್ಕೆ ವ್ಯತಿರಿಕ್ತವಾದ ಗದ್ಯತನದಿಂದ ಈ ಸಂಗ್ರಹದ ಕವಿತೆಗಳು ಪಾರಾಗಿರುವುದು ಪ್ರಶಂಸನೀಯ" ಎಂದು ಶ್ರೀ ನಿಸಾರ್ ಅಹಮದ್ ಅವರು ಈ ಕೃತಿಯ ಬಗ್ಗೆ ಅಭಿಪ್ರಾಯಪಟ್ಟಿದ್ದಾರೆ. ಕೊಂಚ ಉದಾರವಾಗಿ ನೋಡಿದರೆ ನಿಸಾರರ ಮಾತು ಸರಿ ಎಂದು ಒಪ್ಪಬಹುದು. ಈ ಸಂಕಲನವೂ ಸೇರಿದಂತೆ ಒಟ್ಟಾರೆಯಾಗಿ ವೇಣು

ಗೋಪಾಲ ಸೊರಬರ ಕಾವ್ಯದ ಮುಖ್ಯ ಸಮಸ್ಯೆ ಎಂದರೆ ಸೃಜನಶೀಲ ಏಕಾಗ್ರತೆ ಮತ್ತು ಜಡ ಗಾಂಭೀರ್ಯಗಳ ನಡುವೆ ಗೆರೆ ಅಳಿಸಿ ಹೋಗಿರುವುದು. ಗದ್ಯ ಮತ್ತು ಗದ್ಯಗಂಧಿಯಾದ ಕಾವ್ಯಲಯ ಇವೆರಡರ ನಡುವಿನ ವ್ಯತ್ಯಾಸದ ಬಗ್ಗೆ ಎಚ್ಚರವಿರದೆ, ಶುಷ್ಕಗದ್ಯವನ್ನೇ ತಂದೆಳೆಯುವುದು – ಇದು ಕೂಡಾ ಸೊರಬರ ಸಮಸ್ಯೆ.

ಈ ಸಂಕಲನದಲ್ಲಿ ಸರಳವಾಗುವುದರ ಈ ಸಮಸ್ಯೆಗಳನ್ನು ದಾಟಲು ಯತ್ನಿಸಿದ್ದಾರೆ. ಆದರೆ, ಅಸ್ಪಷ್ಟತೆ ಇಲ್ಲೂ, ಈ ಸಂಕಲನದ ಉತ್ತಮ ಕವನಗಳಲ್ಲೂ ('ಚಳಿ' ಧಾಳಿ - 2, ಸುಳ್ಳು ಬುರುಕಿ) ಉಳಿದು ಕೊಂಡಿದೆ. ಕವನವೊಂದರಲ್ಲಿ ಆಶಯವನ್ನು ನಿಗೂಢವಾಗಿ ಸೂಚಿಸಿಬಿಡುವುದಷ್ಟೆ ಕವಿಯ ಕೆಲಸ ಎಂದು ಸೊರಬರು ಭಾವಿಸಿದಂತಿದೆ. ಕವನದ ಶಿಲ್ಪವೊಂದರಲ್ಲಿ ಅವು ಒಂದು ನಿರ್ದಿಷ್ಟ ಚಲನಾಲಯದಲ್ಲಿರಬೇಕು ಎಂಬುದನ್ನು ಮರೆತಿದ್ದಾರೆ. ಒಂದು ದೃಷ್ಟಿಯಿಂದ ಕವನವೊಂದಕ್ಕೆ ಬಿಡಿಗಳನ್ನು, ಅತ್ತಿತ್ತ ಚೆದರಿ ಬಿದ್ದಿರುವ ಬಿಡಿಗಳನ್ನು ಕೂಡಿಸಿ ಆಡುವ, ಅಂತಿಮ ರೂಪವೊಂದನ್ನು ಕಟ್ಟುವ ಗುಣವಿರಬೇಕು. ಅದನ್ನೇ ಒಳಪದರಗಳಿರುವ ಕವನವೆನ್ನುವುದು. ಆದರೆ, ಸೊರಬರು ಇಲ್ಲಿ ಅಸ್ಪಷ್ಟ ಸೂಚನೆಯ ಹಂತದಲ್ಲೇ ಉಳಿವ ಅನ್ಯೋಕ್ತಿ ಎಂಬರ್ಥದಲ್ಲಿ ಕವನದ ಶಿಲ್ಪವನ್ನು ಕಂಡಿದ್ದಾರೆ.

ಲಯದಲ್ಲಿ ಹೊಸದಾರಿ ತುಳಿಯಲು ಪ್ರಯತ್ನಿಸಿರುವ ಸೊರಬರ ಮುಂದಿನ ಕೃತಿಗಳು ದೊಡ್ಡ ಮಟ್ಟದ ಸಫಲತೆಯನ್ನು ಪಡೆಯಲಿ ಎಂದು ಈ ಲೇಖಕ ಹಾರೈಸುತ್ತಾನೆ.

ಗೆಲ್ಲಬೇಕು: ಎಚ್. ಎಚ್. ಗಂಗಾಧರಾಚಾರ್

ನವ್ಯಕಾವ್ಯ ಮಾರ್ಗದಿಂದ ಅನೇಕ ಸಂಗತಿಗಳನ್ನು ಗಂಗಾಧರಾಚಾರರು ಕಲಿತಿದ್ದಾರೆ. ಆದ್ದರಿಂದ, ಇಲ್ಲಿರುವ ಎಲ್ಲ ಪದ್ಯಗಳಲ್ಲಿ ಕಾಣುವ ಗಾಂಭೀರ್ಯ ಕವಿಯ ಬಗ್ಗೆ ಗೌರವ ಹುಟ್ಟಿಸುತ್ತದೆ. ಪ್ರತಿಮಾನಿಷ್ಠಮಾರ್ಗವನ್ನು ಪೂರ್ಣವಾಗಿ ಬಿಟ್ಟುಕೊಟ್ಟಿರುವ ಆಚಾರರು ಗದ್ಯದಲ್ಲಿ ಕಾಣುವ ವಾಕ್ಯಗಳನ್ನೇ ಬರೆಯುತ್ತಾರೆ. ಕ್ರಿಯಾಪದಗಳನ್ನು ಬಳಸುವ ರೀತಿ ಕೂಡಾ ಗದ್ಯದಂತೆಯೇ. ಈ ಕಾರಣಕ್ಕಾಗಿ ಇಲ್ಲಿರುವ ಕವನಗಳು ನಮ್ಮನ್ನು ಮೊದಲ ನೋಟಕ್ಕೆ ಆಕರ್ಷಿಸದೆ ಹೋಗಿಬಿಡುತ್ತವೆ. ಇಲ್ಲಿರುವ ಬಹುಪಾಲು ಪದ್ಯಗಳು ಏನನ್ನೊ Inform ಮಾಡಲು ಹೊರಡುತ್ತವೆ. ಕಾವ್ಯ ಹುಟ್ಟುವುದೇ ಈ 'ವಾರ್ತೆ' ನಿಂತಾಗ. ಕಾವ್ಯಕ್ಕೂ ಮಂತ್ರಕ್ಕೂ ಮೂಲದಲ್ಲಿ ಒಂದು ರೀತಿಯ ನಂಟಿದೆ ಎಂದು ಸಂಪ್ರದಾಯಸ್ಥರು ಹೇಳುವುದು ಈ ಹಿನ್ನೆಲೆಯಲ್ಲಿಯೇ.

ಅನುಭವಕ್ಕಿಂತ ಅದರ ವ್ಯಾಖ್ಯಾನವೇ ಅತಿಯಾಗಿ ಹೋಗುವುದು ಈಚಿನ ನವ್ಯಕಾವ್ಯ ಮಾರ್ಗದ ಪ್ರಮುಖ ಲಕ್ಷಣ. ಇಲ್ಲಿಯ 'ಸರಳ ರೇಖೆ', 'ಅಸ್ತಿತ್ವ',

'ಬದುಕು','ಹುಟ್ಟಿದ್ದಕ್ಕೆ', ಮುಂತಾದ ಕವನಗಳು ಜಡವಾಗಿ ಕಾಣುವುದಕ್ಕೆ ಇದೇ ಕಾರಣ. ತಾತ್ವಿಕ ಅನ್ವೇಷಣಕ್ಕಿಂತ ಮುಖ್ಯವಾಗಿ ಮತ್ತೆ [illegible]ಯು ವಾಪಸಾಗಲಿ ಕನ್ನಡ ಕಾವ್ಯಕ್ಕೆ ಎಂದು ಅನ್ನಿಸುವುದು ಈ ರೀತಿಯ ಕವನಗಳನ್ನು ನೋಡಿದಾಗಲೇ, ಈ ಮಾರ್ಗದ ಎರಕದಲ್ಲೇ ರಚನೆಯಾಗಿರುವ ಕವನಗಳಲ್ಲಿ ಅತ್ಯುತ್ತಮವಾದವು 'ಈ ಯುಗದ ಇಂದ್ರರು' ಮತ್ತು 'ವೃಕ್ಷ' ಕವನಗಳು.

ಒಟ್ಟಾರೆಯಾಗಿ, ಈ ರೀತಿಯ ಕವನಗಳನ್ನು ಓದಿದಾಗ ಅನ್ನಿಸುವುದು ಲಯದ ಮಿತಿ ಸಂವೇದನೆಯ ಮಿತಿಯೆ ಎಂದು?

ಪ್ರಶ್ನೆ : ಶಶಿಕಲಾ ವಸ್ತ್ರದ

ಶಶಿಕಲಾರ ಎರಡನೆ ಕವನ ಸಂಕಲನ ಇದು. ಒಟ್ಟಾರೆಯಾಗಿ, ಮನಸ್ಸಿನಲ್ಲಿ ಸಾಲ್ಕೂ ಕಾಲ ನಿಂತು ನಮ್ಮನ್ನು ಕೆಣಕಬಲ್ಲ ಕವನಗಳು ಈ ಸಂಕಲನದಲ್ಲಿ ಇಲ್ಲ. ಇದಕ್ಕೆ ಬಹು ಮುಖ್ಯ ಕಾರಣ ಕವಯತ್ರಿಯ ಶೈಲಿಯಲ್ಲಿ ಕಾಣುವ ಅತಿ ಪರಿಚಿತತೆ. ಎಲ್ಲ ಕಡೆಗೂ ಹಬ್ಬಿ ನಿಂತಿರುವ ಲಯವೇ ಇಲ್ಲೂ ಕಾಣುವುದರಿಂದ ವ್ಯಕ್ತಿವಿಶಿಷ್ಟತೆ ಇಲ್ಲಿ ಕಾಣುವುದಿಲ್ಲ. ಬಹುಶಃ ಆಳದಲ್ಲಿ ಇದು ಜೀವನದರ್ಶನದ ಸಾಧಾರಣತೆಯ ಅಭಿವ್ಯಕ್ತಿಯೂ ಇರಬಹುದು. ಅಧಿಕೃತ ಕಾವ್ಯ ತನ್ನ ಮೂಲನೆಲವಾದ ದೈನಂದಿನ ಸಾಧಾರಣತೆಯನ್ನು ಬಿಡಿಸಿಕೊಂಡು ಅನನ್ಯವಾಗುವುದರ ಕಡೆಗೆ ತುಡಿಯುತ್ತದೆ. ಪರಿಚಿತದ ವಲಯದಲ್ಲಿದ್ದೂ ಅಪೂರ್ವವಾಗಲು ಹಂಬಲಿಸುತ್ತದೆ. ಇದು ಸಾಧ್ಯವಾಗುವುದು ಭಾಷೆ, ಲಯ, ಮತ್ತು ಶಿಲ್ಪಗಳಲ್ಲಿ.

ಈಗ ಕೃತಿಯಲ್ಲೇ ಇರುವ ಅಂಶಗಳ ಕಡೆಗೆ ಗಮನ ಕೊಟ್ಟರೆ, ಇಲ್ಲಿ ಮುಖ್ಯವಾಗಿ ಕಾಣುವುದು ಮಿತಿಗಳನ್ನು, ಮಧ್ಯಮವರ್ಗದ ಮಿತಿಗಳನ್ನು ಮೀರಬಯಸುವ ಮನಸ್ಸೊಂದನ್ನು. ಎಲ್ಲವನ್ನೂ ಐರನ್ ಮಾಡಿ ಹಾಕುವ, ಸಭ್ಯತೆಯ 'ಫಿನಿಷಿಂಗ್ ಟಚ್' ಕೊಡುವ ಈ ಜೀವನ ಕ್ರಮದ ವಿರುದ್ಧ ಪ್ರತಿಭಟನೆಯೇ ಈಗ ಕಾವ್ಯ ಸೃಷ್ಟಿಯ ಮೂಲ ಸ್ಥಿತಿ. ಖಾಸಗಿ ಜಗತ್ತೊಂದು ಇಡೀ ಸಾರ್ವಜನಿಕ ಲೋಕಕ್ಕೆ ಪ್ರತಿಯಾಗಿ ರೂಪಗೊಳ್ಳುತ್ತದೆ. ಈ ಅನುಭವದ ಕೆಲವು ಮುಖಗಳನ್ನು ಇಲ್ಲಿಯ ಕೆಲವು ಕವನಗಳು ದುರ್ಬಲವಾಗಿಯಾದರೂ ಹಿಡಿಯಲು ಯತ್ನಿಸುತ್ತವೆ. 'ಅಕ್ಷರ ಪ್ರೀತಿ' ಇಂಥದೊಂದು ಪ್ರಯತ್ನ. ಆದರೆ ಇಲ್ಲಿ ಅದರ ರೂಪಕ ವಿವರಗಳ ಬದಲಾಗಿ, ವ್ಯಾಖ್ಯಾನವನ್ನು ಕಾಣುತ್ತೇವೆ. ಪ್ರತಿಮೆಗಳನ್ನಲ್ಲ, ಅವುಗಳ ತಾತ್ಪರ್ಯವನ್ನು ಕಾಣುತ್ತೇವೆ. ಈ ಕವಯತ್ರಿಯ ಕವನ ಕಟ್ಟುವ ರೀತಿಯ ಮೂಲ ದೌರ್ಬಲ್ಯ ಇದೇ ಎಂದು ನನಗನಿಸುತ್ತದೆ: ಪ್ರತಿಮೆಯ ಬದಲು, ತಾತ್ಪರ್ಯದ ಸೃಷ್ಟಿ. ಇದೇ ಮಾತು ಅವರ 'ಅರ್ಥ' ಕವನಕ್ಕೂ ಸಲ್ಲುತ್ತದೆ. ಕವನಕ್ಕೆ, ತೀವ್ರತೆ ಇದ್ದರೂ ಅದು ಮೇಲ್ಪದರಿನದಷ್ಟೇ ಆಗುತ್ತದೆ. 'ಮೂಕಿ' ಎಂಬ

ತುಂಟ ಕವನ ಈ ಸಂಕಲನದ ಯಶಸ್ಸುಗಳಲ್ಲೊಂದು. ಒಟ್ಟಾರೆಯಾಗಿ, ಈ ಕೃತಿಯಲ್ಲಿ ಸಾಕಷ್ಟು ಬಿಸಿಯಾದ ಭಾವ ತೀವ್ರತೆ ಇದೆ. ಉಳಿದ ಕವಯತ್ರಿಯರಿಗಿಂತ ಒಂದೆರಡು ತೂಕ ಹೆಚ್ಚೇ ಇದ್ದರೂ, ಮಾಧ್ಯಮ ನಿಷ್ಠೆಯ ಕೊರತೆಯ ಕಾರಣಕ್ಕಾಗಿ ಅವು ಸಮರ್ಥ ಕವನ ರೂಪಕ್ಕೆ ಬರುವುದಿಲ್ಲ. ತಮ್ಮ ತೀವ್ರತೆಗೆ ತಕ್ಕ ಕಾವ್ಯ ರೂಪವನ್ನು ಕವಯತ್ರಿ ಕಂಡುಕೊಳ್ಳಬೇಕಾದ ಅಗತ್ಯವನ್ನು ಇದು ಹೇಳುತ್ತದೆ.

ಹೊತ್ತು ಮುಳುಗುವ ಮುನ್ನ: ಜಿ. ಎಸ್. ಅವಧಾನಿ

ಶ್ರೀಯುತರ ಮೂರನೆಯ ಸಂಕಲನ ಇದು. ಹಿಂದಿನ ಸಂಕಲನಗಳಲ್ಲಿ ಹೆಚ್ಚು ನಿರ್ದಿಷ್ಟವಾದ ನವ್ಯಕಾವ್ಯಮಾರ್ಗದಲ್ಲಿ ಬರೆಯುತ್ತಿದ್ದವರು, ಈಗ 'ಜನಪರವಾದ ನಿಲುವಿನ' ಅಭಿವ್ಯಕ್ತಿಗೆ ಇಳಿದಿದ್ದಾರೆ. ಆದರೆ, ಹೊಸ ಕಾಳಜಿಗಳನ್ನು, ಅನುಭವವನ್ನು ಹಳೆಯ ನವ್ಯದ ರೀತಿಯಲ್ಲೇ ಹೇಳುತ್ತಿದ್ದಾರೆ. ಹೀಗಾಗಿ, ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಮುಖ್ಯ ಸಮಸ್ಯೆ ಎಂದರೆ, ನವ್ಯದ ಸಾಮಾಜಿಕ ಲಯದ ಮುಖ್ಯ ಗುಣವಾದ ವಿಡಂಬನೆ, ಸಿನಿಕತೆ ಇಲ್ಲೂ ರಾಚಿಕೊಂಡಿದೆ. ನವ್ಯರಲ್ಲಿ ಅದಕ್ಕೆ ಸಾವಯವ ಸಂಬಂಧವಿತ್ತು. ಅಂದರೆ, ಕಾವ್ಯದ ಮಟ್ಟಿಗೆ ಎಂದೂ ಸ್ಥೂಲ ರಾಜಕೀಯದ ಬಗ್ಗೆ ಅವರದು ವಿಡಂಬನೆಯ ದೃಷ್ಟಿಯೇ. ಆದರೆ, ನವ್ಯೋತ್ತರ ಸಾಹಿತ್ಯ ಚಳುವಳಿಗಳಾದ ದಲಿತ-ಬಂಡಾಯದ ನಿಲುವುಗಳು ರಾಜಕೀಯದ ಬಗ್ಗೆ ಆಳವಾದ ಇನ್‌ವಾಲ್ವ್‌ಮೆಂಟಿನ ನಿಲುವನ್ನು ಹೊಂದಿರುವಂಥವು. ಆದ್ದರಿಂದ, ಈ ನಿಲುವಿನ ಬಗೆಗೆ ಹೊಸರೀತಿಯ ಶೈಲಿಯನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯ. ಆದರೆ, ದಲಿತ - ಬಂಡಾಯದ ಬಹುಪಾಲು ಜನ ಕವಿಗಳ ಸಾಮಾಜಿಕ ಲಯ ಈವತ್ತಿಗೂ ವಿಡಂಬನೆಯಂದೇ ಆಗಿದೆ.

ಅವಧಾನಿಯವರು ವಾಚಾಳಿಗಳು.ಹೀಗಾಗಿ, ಇಲ್ಲಿಯ ಬಹುಪಾಲು ಕವನಗಳಲ್ಲಿ ಧಾರಾಳವಾಗಿ ಹರಟೆಹೊಡೆಯುತ್ತಾರೆ[ಹಿಂಭಾಗದ ಕವರ್‌ಪೇಜಿನಲ್ಲಿ ಕವಿಗಳು ಮೈಕಿನ ಮುಂದೆ ನಿಂತಿರುವ ಚಿತ್ರವಿದೆ]. 'ಕವಿತೆ ಅಂದರೆ', 'ಹೊತ್ತುಮುಳುಗುವ ಮುನ್ನ', 'ಉತ್ತರಾಯಣಕೆ ಕಾಯುವುದಿಲ್ಲ' ಪದ್ಯಗಳು ಈ ಅಪಾಯಕ್ಕೆ ಸಾಕ್ಷಿ. ಇಷ್ಟಾದರೂ ಕೆಲವು ಸಾಲುಗಳಲ್ಲಿ ಅವಧಾನಿಯವರು ಹೆಚ್ಚು ನಿರ್ದಿಷ್ಟವಾಗಲು ಪ್ರಯತ್ನ ಮಾಡುತ್ತಾರೆ. ಆಗ, 'ಹೂಬುರುಕಿಯಡಿಗೆ ಗಿಡಗಳು ನಗುವುದಿಲ್ಲ', ಎಂಬ ಭಿನ್ನ ರೀತಿಯ ಸಾಲು ಬರುತ್ತದೆ.

ಆದರೆ ಈ ರೀತಿಯ ಪ್ರಯತ್ನಗಳು ತುಂಬಾ ಕಡಿಮೆ ಎಂಬುದೇ ದೊಡ್ಡ ಕೊರಗಾಗಿ ಉಳಿದು ಬಿಡುತ್ತದೆ.

ನಮ್ಮ ಗೋಡೆಯ ಹಾಡು : ಎಚ್. ಡುಂಡಿರಾಜ್

ಡುಂಡಿರಾಜ್‌ರು ಅಚ್ಚುಕಟ್ಟಾದ ಪದ್ಯಗಳನ್ನು ಬರೆಯಬಲ್ಲರು. ಈಮಾತನ್ನು ಇಲ್ಲಿರುವ ಅನೇಕ ಕವನಗಳು ಸಮರ್ಥಿಸುತ್ತವೆ. ಒಂದು ಸೀಮಿತ ಚೌಕಟ್ಟಿನೊಳಗೆ ಖಚಿತವಾಗಿ ಒಂದು ನಿರ್ದಿಷ್ಟ ಅನುಭವವನ್ನು ರೂಪಿಸಬಲ್ಲರು. "ರಥಬೀದಿಯ ಲ್ಲೊಂದು ರೂಮುಮಾಡಿ", "ದಾಕ್ಷಿಣ್ಯಕ್ಕೆ", 'ಒಂದೂರಿನಲ್ಲೊಂದು ಆಫೀಸು" - ಈ ದೃಷ್ಟಿಯಿಂದ ಈ ಪುಸ್ತಕದ ಅತ್ಯುತ್ತಮ ಕವನಗಳು. ಡುಂಡಿರಾಜರು ಇಲ್ಲಿ ತಮ್ಮ ಶಕ್ತಿಗಳನ್ನೆಲ್ಲಾ ದುಡಿಸಿಕೊಳ್ಳಬಲ್ಲರು ಎಂದರೆ ಒಂದು ನಿರ್ದಿಷ್ಟ ವಿವರಾವರಣ ವಿದ್ದಾಗ. ಆಯ್ದ ವಿವರಗಳೇ ಒಂದು ಸೂತ್ರಬದ್ಧತೆಯನ್ನು ದೃಷ್ಟಿಕೋನದ ಜತೆ ಸೇರಿ ರೂಪಿಸಿಕೊಳ್ಳುತ್ತವೆ.

ಆದರೆ, ಡುಂಡಿರಾಜರಿಗೂ ಈಗಿನ ಯುವಕಾವ್ಯದಲ್ಲಿ ಮಹತ್ವದವರಾದ ಶಿವಪ್ರಕಾಶ್, ವೆಂಕಟೇಶಮೂರ್ತಿಯವರಿಗೂ ಇರುವ ವ್ಯತ್ಯಾಸಗಳ ಬಗೆಗೆ ಯೋಚಿಸಿ ದಾಗ ಡುಂಡಿರಾಜರ ಮಿತಿಗಳು ಅರ್ಥವಾಗುತ್ತವೆ. ಡುಂಡಿರಾಜರು ಸೀಮಿತ ಆಸಕ್ತಿಯ ಕವಿಗಳು. ಆದರೆ, ನಾನು ಮೇಲೆ ಹೇಳಿದ ಇಬ್ಬರು ಕವಿಗಳೂ ಕೂಡಾ ಮಹತ್ವಾಕಾಂಕ್ಷಿಗಳು. ತಮ್ಮ ಶಕ್ತಿಸರ್ವಸ್ವವನ್ನು ಏಕಾಗ್ರತೆಯಿಂದ ಧಾರೆ ಎರೆದು ಕವನವೊಂದನ್ನು ಕಟ್ಟಬಲ್ಲರು. ಆದರೆ, ಡುಂಡಿರಾಜರಿಗೆ ಆ ರೀತಿಯ ಪ್ರಯತ್ನ ಗಳು ಇಲ್ಲಿ ಸಾಧ್ಯವಾಗಿಲ್ಲ. ಇದು ಸಾಧ್ಯವಾಗಬೇಕಾದರೆ ಯಾವುದಾದರೂ ರೀತಿಯ ಗಾಢವಾದ ತಾತ್ವಿಕ ಹುಡುಕಾಟ ಬೇಕು, ಈ ತಾತ್ವಿಕ ಹುಡುಕಾಟಕ್ಕೊಂದು ಕುತೂಹ ಲದ ಗುಣವಿದೆ. ಎಲ್ಲ ಬಗೆಯ ತತ್ವಗಳನ್ನು ದಾಟಿ ತೀವ್ರ ಸೌಂದರ್ಯಸೃಷ್ಟಿಯೇ ಗುರಿ ಯಂದಾಗಲೂ ಅದು ಕೂಡಾ ಒಂದು ಬಗೆಯ ತಾತ್ವಿಕ ಹುಡುಕಾಟವಾಗಿಬಿಡುತ್ತದೆ ಅಧಿಕೃತ ಕವನವೊಂದು ಹುಟ್ಟುವುದು ಆಗಲೇ. ಈಗ ಸದ್ಯಕ್ಕೆ ಡುಂಡಿರಾಜರು ಕಾವ್ಯಾಕೃತಿಯ ನಿರ್ಮಾಣದಲ್ಲಿ ಅಲೆಗರಿಯ ಹಂತದಲ್ಲಿ ಇದ್ದಾರೆ. ಮುಂದೆ ಏನಾ ಗುತ್ತಾರೊ, ಕಾದುನೋಡೋಣ.

ಕಡಲು : ಬೆಳ್ಳೆ ಚಂದ್ರಶೇಖರ ಶೆಟ್ಟಿ

ಹಾಡುಗಳೇ ಹೆಚ್ಚಿರುವ ಸಂಕಲನವಿದು. ಹಾಡು ಮತ್ತು ಕವನ ಎರಡೂ ಒಂದೇ ಕಲ್ಪನೆ ಶೆಟ್ಟಿಯವರಿಗೆ ಇರುವ ಹಾಗೆ ಕಾಣುತ್ತದೆ. ಆದ್ದರಿಂದ, ಕನ್ನಡದಲ್ಲಿ ಸರಾಗವಾಗಿ ಬರುವ ಲಯಗಳು,ಹಾಡಿನಮಟ್ಟುಗಳು ಇಲ್ಲಿ ತುಂಬಿವೆ. ಎಲ್ಲ ರೀತಿಯ ವಸ್ತುಗಳ ಮೇಲೂ ಹಾಡುಗಳಿವೆ, ಎರಡು ಮೂರು ರಚನೆಗಳು, ಹಾಡಿನಾಚೆಗೆ ಹೋಗಲು ಪ್ರಯತ್ನ ಪಟ್ಟಿವೆ. 'ಕ್ಷೌರಿಕ' 'ಬೆಕ್ಕನ್ನು ಇಲಿ ಹಿಡಿಯಿತು' 'ನಿರೀಕ್ಷೆ' ಈ ಜಾತಿಗೆ ಸೇರಿದವುಗಳು. ಇವುಗಳು ಕೂಡಾ ಸಪ್ಪೆ ಅನ್ನಿಸಿದರೂ, 'ಕ್ಷೌರಿಕ' ಪದ್ಯ ಉಳಿದವುಗಳಿಗಿಂತ ಮೇಲು ಎನ್ನಿಸಿಕೊಳ್ಳುತ್ತದೆ.

ಗೆಜ್ಜೆ ದನಿಗಳ ನಡುವೆ : ಎಂ. ಎನ್. ಜೈಪ್ರಕಾಶ್

ಈ ಸಂಕಲನದ ಕವಿ ಈಗ ನಮ್ಮೊಂದಿಗೆ ಇಲ್ಲ. ಯಾವ ಕಾರಣವೋ ಏನೋ ಈ ಕವಿ ಆತ್ಮಹತ್ಯೆ ಮಾಡಿಕೊಂಡರು. ಆದರೆ, ಕುತೂಹಲದ ಸಂಗತಿ ಎಂದರೆ ಅಂಥ ಒಂದು ಸ್ಥಿತಿಯ ಆಗಮನದ ಸೂಚನೆ ಈ ಕೃತಿಯಲ್ಲಿ ಎಲ್ಲೂ ಕಾಣುವುದಿಲ್ಲ.

ಸಾವನ್ನು ನಿರೀಕ್ಷಿಸಿರುವ ಕವಿಗಳು ಅದನ್ನು ಹಿಡಿದಿಡುವ ಪ್ರಯತ್ನ ಮಾಡಿದಾಗ, ಅನೇಕ ಸಾರಿ, ಆ ಪದ್ಯಗಳಲ್ಲಿ ಒಂದು ರೀತಿಯ ರುದ್ರ ಸೌಂದರ್ಯ ಮೂಡುತ್ತದೆ. ನನಗೆ ಸಿಲ್ವಿಯಾ ಪ್ಲಾತ್‌ಳ ಪದ್ಯಗಳ ನೆನಪು. ಆಕೆಯು ಮೂವತ್ತೊಂದನೆ ವಯಸ್ಸಿನಲ್ಲಿ (1963) ಆತ್ಮಹತ್ಯೆ ಮಾಡಿಕೊಂಡಳು. ತನ್ನ ದೇಹ ದಿನೇ ದಿನೇ ಚೂರಾಗುತ್ತಿರುವುದನ್ನು, ಆ ಅವನತಿಗೆ ತನ್ನ ಆತ್ಮ ಪ್ರತಿ ಸ್ಪಂದಿಸುವ ರೀತಿಯನ್ನು ಆಕೆ ದಾಖಲಿಸಿರುವ ರೀತಿ ಅನನ್ಯವಾದದ್ದು. 'ಸಾಯುವುದೂ ಒಂದು ಕಲೆ' ಎಂಬ ಮಾತೂ ಆಕೆಯದೇ.

ಆದರೆ, ಇಲ್ಲಿಯ ಕವನಗಳು ಬೇರೆ ರೀತಿಯವು. ಈ ಕಿರುಕವನಗಳು ಜೀವನ ಸಂತೋಷ, ಪ್ರಣಯ ಮುಂತಾದವುಗಳನ್ನು ಲಲಿತವಹ ಶೈಲಿಯಲ್ಲಿ ಹೇಳುತ್ತವೆ. ಈ ಲಾಲಿತ್ಯವೇ ಕವಿಯ ಸಾವಿನ ಬಗ್ಗೆ, ಆತ್ಮಹತ್ಯೆಯ ಬಗ್ಗೆ ಮತ್ತಷ್ಟು ಚಿಂತನೆಗೆ ತಳ್ಳುತ್ತದೆ. ಈ ಚಿಕ್ಕ ಪದ್ಯಗಳಲ್ಲಿ ನಡೆಸಬಹುದಾದ ಕುಸುರಿಗೆಲಸವನ್ನು ಜಯಪ್ರಕಾಶರು ಸಾಕಷ್ಟು ನಿಪುಣತೆಯಿಂದ ನಿಭಾಯಿಸಿದ್ದಾರೆ. 'ಸಂದೇಶ', 'ಹಕ್ಕಿಗಳು: ಒಂದು ವಿಷಾದ', 'ಮೌಲ್ಯ' 'ಗೊತ್ತಾ' ? ಕವನಗಳು ಚೆಂದದ ರಚನೆಗಳು.

ಈ ಸಂಕಲನದ ಇನ್ನೊಂದು ವೈಶಿಷ್ಟ್ಯವೆಂದರೆ ವಿದ್ಯಾಪತಿಯ ಕೆಲವು ಕವನಗಳ ಅನುವಾದ. ಕನ್ನಡಕ್ಕೆ ಅವು ಸರಾಗವಾಗಿ ಇಳಿದು ಬಂದಿವೆ. ಬಹಳ ಕಡೆಗೆ ಜಯಪ್ರಕಾಶರ ಸ್ವಂತ ಕವನಗಳಿಗೂ ಇವಕ್ಕೂ ವ್ಯತ್ಯಾಸವೇ ಇಲ್ಲ ಎನ್ನುವ ಹಾಗೆ ಬಂದಿವೆ. ಅಂದರೆ, ಜಯಪ್ರಕಾಶರ ಸ್ವಂತ ಪ್ರೇಮಪದ್ಯಗಳಿಗೆ, ನಮ್ಮ ಬಹುಪಾಲು ಸಮಕಾಲೀನ ತರುಣ ಕವಿಗಳ ಪ್ರೇಮ ಕವನಗಳಲ್ಲಿ ಸಮಕಾಲೀನತೆ ಎನ್ನುವುದು ಕಾಣುವುದಿಲ್ಲ. ಈ ಅಂಶವನ್ನು ಸಾಕಷ್ಟು ಆಳವಾಗಿ ಚರ್ಚೆ ಮಾಡಲು ಇದು ತಕ್ಕ ಸ್ಥಳವಲ್ಲವಾದ್ದರಿಂದ ಇದನ್ನು ಇಲ್ಲಿಗೇ ನಿಲ್ಲಿಸುವುದು ಸೂಕ್ತ. ವಿದ್ಯಾಪತಿಯ ಪ್ರೇಮ ಪದ್ಯಗಳ ಹಾಗೆಯೇ ಜಯಪ್ರಕಾಶರದೂ ಕಾಣುತ್ತದೆ ಎಂಬುದು,ಅಷ್ಟೇ ಏಕೆ ಅನೇಕ ಜನ ತರುಣ ಕವಿಗಳ ರಚನೆಗಳು ಹಾಗೇ ಇವೆ ಎಂಬುದು ಸಮಾಧಾನದ ಸಂಗತಿಯಲ್ಲ.

ತ್ರಿಶಂಕು : ವಿಜಯಾ ಸುಬ್ಬರಾಜ್

ಅನುಭವಗಳನ್ನು ನೇರವಾಗಿ ಹೇಳದೆ, ಅವನ್ನೆ ಪ್ರತಿಮೆಯಾಗಿಸದೆ ತಮ್ಮ ಪ್ರತಿಕ್ರಿಯೆಗಳನ್ನು ಹೇಳುತ್ತ ಹೋಗುವ ಈ ಕೃತಿ ಆ ಕಾರಣಕ್ಕಾಗಿಯೇ ಸೃಜನಶೀಲ

ಚುರುಕನ್ನು ಕಳೆದುಕೊಂಡಿದೆ. ನೇರ ಅನುಭವಗಳಿಲ್ಲ, ಬದಲಾಗಿ ಅದರ ಮೇಲಿನ ವ್ಯಾಖ್ಯಾನಗಳಿವೆ ಅಷ್ಟೆ. ನವ್ಯ ಕಾವ್ಯಮಾರ್ಗದ ಅತ್ಯಂತ ದೊಡ್ಡ ದೋಷ ಇದು. ಅಥವಾ ಅದನ್ನು ಸರಳವಾಗಿ ಅನುಕರಿಸುವವರು ಬೀಳುವ ಬಾವಿ ಇದು, ನವೋದಯದಲ್ಲಿ ಅನುಭವವನ್ನೇ ನೇರವಾಗಿ ಎದುರಾಗಿ, ಅದನ್ನೆ ಹಿಡಿದಿಡುವ ಕ್ರಮ ಇತ್ತು. ಕೆಲವು ಕಡೆಗಳಲ್ಲಿ ಕವನದ ಕಡೇ ಭಾಗದಲ್ಲಿ ಆ ಅನುಭವವನ್ನು ವಿವರಿಸುವ ಚಟ ಇತ್ತು. ಪುಟ್ಟಪ್ಪನವರಲ್ಲಿ ಇದು ಸ್ವಲ್ಪ ಹೆಚ್ಚು. ಆದರೆ, ನವ್ಯರ ಅನುಭವ ಮಂಡನೆ ಬೇರೆ ರೀತಿಯದು. ತೀವ್ರ ರೀತಿಯ ಆತ್ಮ ವಿಶ್ಲೇಷಣೆಯದು. ಅನುಭವ-ಆತ್ಮ (Self ಎಂಬರ್ಥದಲ್ಲಿ) ಎರಡೂ ಒಟ್ಟಿಗೇ ಪ್ರಕಟವಾಗುತ್ತಿತ್ತು. ಅಡಿಗರ ಪದ್ಯಗಳು ಇದಕ್ಕೆ ಅತ್ಯುತ್ತಮ ಉದಾಹರಣೆ. ಆದರೆ, ಈಚೆಗೆ ಅನುಭವ ಮಾಯವಾಗಿ ಅದರ ನೆರಳಾದ ವ್ಯಾಖ್ಯಾನಗಳೇ ತುಂಬಿಡುತ್ತವೆ. 'ತ್ರಿಶಂಕು'ವಿನ ಒಟ್ಟು ಕಾವ್ಯಮಾರ್ಗಕ್ಕೆ ಈ ಅಪಾಯ ಕಾಡಿದೆ. "ನೆನಪುಗಳು", "ಭಾವನೆಗಳು", 'ಬಯಕೆ'—ಇವು ಕೆಲವು ಉದಾಹರಣೆಗಳಷ್ಟೆ. ಯಾವ ನಿರ್ದಿಷ್ಟ ನೆನಪೂ ಇಲ್ಲಿ ಕಾಡುವುದಿಲ್ಲ, ಯಾವ ನಿರ್ದಿಷ್ಟ ಭಾವನೆಗಳೂ ಮಾನವಾನುಭವದ ಸನ್ನಿವೇಶದಲ್ಲಿ ಬಂದಿಲ್ಲ. ಬರೀ ಟಿಪ್ಪಣಿಗಳು. ಅಮೂರ್ತ ವಿಚಾರಗಳನ್ನೆ-ಒಣಗದ್ಯ ಎಂಬ ಆರೋಪಕ್ಕೆ ಗುರಿಯಾಗುವ ಭಾಷೆಯಲ್ಲಿ — ಕವಯತ್ರಿ ಕವನದಲ್ಲಿ ಹೇಳಲು ಪ್ರಯತ್ನಿಸುತ್ತಾರೆ.

ಒಂದು ನಿರ್ದಿಷ್ಟ ಅನುಭವದ ಚೌಕಟ್ಟಿನಲ್ಲಿ ರಚನೆಯಾಗಿರುವ ಕವನಗಳೇ ಇಲ್ಲಿಯ ಯಶಸ್ವೀ ರಚನೆಗಳು. 'ಡೈವೋರ್ಸ್', 'ಇವನಿಗೊಂದು ಕಿವಿಮಾತು' ಈ ಸಂಕಲನದಲ್ಲಿ ನನಗೆ ಇಷ್ಟವಾದ ಪದ್ಯಗಳು.

ಚಿಲುಮೆ : ಎಸ್. ಜಿ. ಸ್ವಾಮಿ

ಈ 'ಚಿಲುಮೆ'ಯಲ್ಲಿ ಪ್ರೇಮದ ಹನಿಗಳೇ ಹೆಚ್ಚು. ಹನಿಗಳೆಂದರೆ ನಿಜವಾಗಿಯೂ ಹನಿಗಳೇ ಅವು. ಇನ್ನೇನು ಶುರು ಅನ್ನುವಷ್ಟರಲ್ಲಿ ಮುಗಿದೇ ಹೋಗುತ್ತದೆ. ಇದಕ್ಕಿಂತ ಒಂದು ಜೂರು ದೊಡ್ಡ ಪದ್ಯ ಬರೆಯಲು ಪ್ರಯತ್ನಿಸಿದಾಗ ಸಾಕಷ್ಟು ಗೊಂದಲ ಪ್ರಾರಂಭವಾಗಿಬಿಡುತ್ತದೆ. ಏನನ್ನು ಹೇಳುತ್ತಿದ್ದಾರೆ ಎಂಬ ಅನುಮಾನ ಶುರುವಾಗಿಬಿಡುತ್ತದೆ—('ಆದರೆ' ಪದ್ಯ). 'ಹೋಳಿ ಚಂದ್ರ' ಎಂಬ ಪದ್ಯ ಸ್ವಾಮಿಯವರ ಶಕ್ತಿಯ ಬಗ್ಗೆ ಭರವಸೆ ಹುಟ್ಟಿಸುತ್ತದೆ.

ಗೀತ ಬಸವ : ನೀಲಗಂಗಾ ಚರಂತಿ ಮಠ

ಬಸವಣ್ಣನವರ ಜೀವನದ ಪ್ರಧಾನ ಘಟನೆಗಳನ್ನು ಆಧರಿಸಿ ಬರೆದ ಗೀತಗುಚ್ಛ ಇದು. ಬಸವನಿಗೆ ನಾದಾರಾಧನೆ ಇದು. ಭಕ್ತಿ ಮತ್ತು ತನ್ಮಯತೆ ತುಂಬಿ ಹರಿದಿದೆ. ವಚನದ ಲಯಗಳನ್ನೆ ಅನೇಕ ಕಡೆ ಅನುಕರಿಸಿರುವುದರಿಂದ, ವಚನಗಳನ್ನೆ ನೇರವಾಗಿ

ಬಳಸಿಕೊಂಡಿರುವುದರಿಂದ ರಾಗಹಾಕಿ ಹಾಡಿದರೆ ಇವಕ್ಕೇ ಗಾಂಭೀರ್ಯ, ಸೊಗಸು ಬರುವ ಸಾಧ್ಯತೆ ಇದೆ. ಬಸವನ ಜೀವನವನ್ನು ಕಂಡಿರುವ ರೀತಿಯಲ್ಲಿ ಹೊಸತನವೇನೂ ಇಲ್ಲ.

ಕುತುಬ್ ಮಿನಾರ್ : ಹರಿಕೃಷ್ಣ ಭರಣ್ಯ

ಇಲ್ಲಿಯ ಅನೇಕ ಕವಿತೆಗಳಿಗೆ ಉದ್ದದಲ್ಲಿ ಕುತುಬ್‌ಮಿನಾರ್ ಆಗುವ ಆಸೆ. ಆದರೆ, ಯಾಕೆ ಅಷ್ಟುದ್ದ ಬೆಳೆಯಬೇಕು ಎಂಬ ಕಲ್ಪನೆ, ಆದರ ಜೊತೆಗೆ ಸೃಜನಶಕ್ತಿ ಇಲ್ಲವಾದ್ದರಿಂದ ಬಹುಪಾಲು ಕವಿತೆಗಳು ಬೋರ್ ಹೊಡೆಸಿಬಿಡುತ್ತವೆ. 'ನಾನು' 'ಬೆಳೆದಂತೆ', 'ಪ್ರತೀಕ್ಷೆ', 'ನನಗಾಗಿ ಅಲ್ಲ', 'ಬಂಡಾಯ', 'ಇಲ್ಲ' ಈ ಕವನಗಳ ಸಮಸ್ಯೆ ಎಂದರೆ ಎಂಥದೊ ವಿಚಾರಲಹರಿಯಲ್ಲಿ, ಬಿದ್ದು ವಸ್ತು ಪ್ರತಿ ರೂಪಗಳ ನಿರ್ಮಿತಿಯನ್ನೂ ಪೂರ್ಣವಾಗಿ ಮರೆಯುವುದು. ವಿಚಾರಲಹರಿ ಯಾವಾಗಲೂ ಅನುಭೂತಿಗಳ, ಪ್ರತಿಮೆಗಳ ರೂಪದಲ್ಲಿ ಬರಬೇಕು. ಆದ್ದರಿಂದ ಇಡೀ ಸಂಕಲನದ ಹಿನ್ನೆಲೆಯಲ್ಲಿ ಕಾವ್ಯದ ಬಗೆಗೆ ಒಂದು ಖಚಿತವಾದ ಕಲ್ಪನೆಯೇ ಇಲ್ಲ. ಇಲ್ಲಿ ಪದ್ಯದ ರೂಪದಲ್ಲಿ ಬಂದಿರುವ ಅನಿಸಿಕೆಗಳನ್ನು ಶುದ್ಧ ಗದ್ಯದಲ್ಲೇ ಬರೆದಿದ್ದರೂ ನಡೆಯುತ್ತಿತ್ತು. ಅಂದ ಹಾಗೆ ಇಲ್ಲಿ ಶೈಲಿ ಕೂಡಾ ಶುದ್ಧ ಗದ್ಯದ್ದೆ.

ಭರಣ್ಯರನ್ನು ಕಾಡಿರುವ ಈ ಸಮಸ್ಯೆಗಳು ಈವತ್ತಿನ ಬಹುಪಾಲು ಯುವ ಲೇಖಕರನ್ನು ಕಾಡಿವೆ. ಪದ್ಯಕ್ಕಿರುವ ವಿಶಿಷ್ಟಲಯದ ಅರಿವು ಇಲ್ಲವೇ ಇಲ್ಲದ ಮಂದಿ ಈದಿನ ಪದ್ಯ ಬರೆಯುತ್ತಿದ್ದಾರೆ.

ಇದಕ್ಕೆ ಕಾರಣ, ಕನ್ನಡ ಕಾವ್ಯದ ಪರಂಪರೆಯ ಸನ್ನಿವೇಶದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳದೇ ಇರುವುದು. ಭರಣ್ಯರು ಮುಂದೆಯಾದರೂ ಈ ಸಮಸ್ಯೆ ಗಳಿಂದ ಪಾರಾಗಲಿ ಎಂದು ನನ್ನ ಹಾರೈಕೆ.

ಮತ್ತೇನೆಂದರೆ : ನಾರಾಯಣ ಕಂಗಿಲ

ಕಾವ್ಯದ ಬಗೆಗೆ ಸಾಕಷ್ಟು ಗಂಭೀರ ಕಾಳಜಿಯನ್ನು ಹೊಂದಿರುವ ಸಂಕಲನ ಇದು. ಆದರೆ, ಈ ಗಾಂಭೀರ್ಯ ಬಹಳ ಸಾರಿ ಪರಿಕಲ್ಪನೆಗಳ ಹಂತದಲ್ಲೇ ನಿಂತು ಬಿಟ್ಟಿದೆ. ಇಡೀ ಸಂಕಲನವೇ ಪರಿಕಲ್ಪನೆಗಳ ಭಾರದಿಂದ ಕೊಂಚ ನೊಂದಿದೆ. ಆದರೆ, ಅನೇಕ ಕವಿಗಳಂತೆ [ಜಯಸುದರ್ಶನ] ತಮ್ಮ ತಾತ್ವಿಕ ಗಾಂಭೀರ್ಯವನ್ನು ಉದ್ದುದ್ದನೆ ಭಾಷಣಗಳ ರೂಪದಲ್ಲಿ ಕಂಗಿಲರು ಲಂಬಿಸುವುದಿಲ್ಲ.

'ವಲಸೆಯ ಹಕ್ಕಿ', 'ದರ್ಜಿ', 'ಮತ್ತೇನೆಂದರೆ', 'ಅದೃಶ್ಯ ಕೈಗಳ' ಈ ಸಂಕಲನದ ಅತ್ಯುತ್ತಮ ಪದ್ಯಗಳು ಎಂದು ನನ್ನ ಅನಿಸಿಕೆ.

ಮುಳ್ಳುಗಳ್ಳಿ : ಶ್ರೀನಿವಾಸ ಶೆಟ್ಟಿ

ಈ ಸಂಕಲನ ಒಟ್ಟಾರೆಯಾಗಿ ತಕ್ಷಣದ ಸಮಾಧಾನ ನೀಡುತ್ತದೆ. ಈ ವರ್ಷದ ಬಹುಪಾಲು ಸಂಕಲನಗಳನ್ನು ಓದುವಾಗ ತೀರಾ ದೊಡ್ಡ ಹಿಂಸೆಯಾಗುತ್ತದೆ. ಆದರೆ 'ಮುಳ್ಳುಗಳ್ಳಿ'ಯ ಅನೇಕ ಕವನಗಳು, ಕಿರುಕವನಗಳು–ಸರಿಗೆ, ಶ್ರೀ ಹರಿಯ ಗೋಪಿ, ಬಿಕ್ಕು, ಇಚ್ಛೆ–ನಿಜವಾಗಿಯೂ ಒಬ್ಬ ಬುದ್ಧಿವಂತ ಕವಿಯನ್ನು ನಮಗೆ ಪರಿಚಯಿಸುತ್ತವೆ.

ಶ್ರೀನಿವಾಸ ಶೆಟ್ಟಿಯವರು ಕ್ಲೀಷೆಗಳಿಂದಾಗಿ ಹೊಸ ರೀತಿಯಲ್ಲಿ ತಮ್ಮ ಅನುಭವಗಳನ್ನು ಹೇಳಬಲ್ಲರು. ವಿಡಂಬನೆ ನೈತಿಕ ಸಿಟ್ಟಿನ ಪೋಷಣೆಯಾಗಿ ಮುಗಿಯದೆ ನವಿರಾದ ಹಾಸ್ಯವನ್ನು ಜೊತೆಗೆ ಕರೆತರುತ್ತದೆ. ವಿಡಂಬನೆ ರೂಕ್ಷವಾಗದೆ ಸಹ್ಯಚಿತ್ರಗಳಲ್ಲಿ ಅಭಿವ್ಯಕ್ತವಾಗುತ್ತದೆ. 'ಇಚ್ಛೆ' ಕವನ ರಿಲಿಜಿಯಸ್ ಆದ ಧ್ವನಿಯನ್ನು ಹೊಂದಿದ್ದರೂ ಅದು ಕಾಣಿಸಿಕೊಳ್ಳುವ ರೀತಿ ವಿಶೇಷವಾದದ್ದು.

ನೆಲದ ಹುಳ ಹುಪ್ಪಡಿಗೆ ನಾನು ಮಿದು ಮಣ್ಣಾಗಿ,
ಆಶ್ರಯದ ಗೂಡಾಗಬೇಕು, ಗೆಳೆಯ.
ಅಣಬೆ ತಲೆದಿಂಬಿನಲಿ ಶ್ರೀ ಹರಿಯು ಹಾಯಾಗಿ
ಮಲಗಬೇಕೆನ್ನುವುದು ನನ್ನ ಹೃದಯ

—ಇಚ್ಛೆ

ಈ ರೀತಿಯ ಸಂವೇದನೆಯ ಒಂದು ಅಪಾಯವೆಂದರೆ ಸೀಮಿತ ಆಸಕ್ತಿಗಳಿಗಷ್ಟೇ ಮೀಸಲಾಗಿಬಿಡುವುದು. ಈ ಅಪಾಯವನ್ನು ದಾಟಿ ಶ್ರೀನಿವಾಸ ಶೆಟ್ಟಿಯವರು ಬೆಳೆಯಲೆಂದು ಈ ಲೇಖಕ ಹಾರೈಸುತ್ತಾನೆ.

ರಾಜಮುಕುಟ : ತಲೆಂಗಳ ರಾಮಕೃಷ್ಣ ಭಟ್ಟ .

ಇವನ್ನು 'ಖಂಡಕಾವ್ಯ' ಎಂದು ಹೇಳಲಾಗಿದೆ. ಐತಿಹಾಸಿಕ ವಸ್ತುವನ್ನು ಆಧರಿಸಿ ಹೆಣೆಯಲಾದ ಕಥಾ ಕಾವ್ಯವಿದು. ಇಂಥ ಪ್ರಯತ್ನಗಳ-ಸೋಲು ಗೆಲುವು ತಕ್ಷಣ ತಿಳಿದುಬಿಡುವಷ್ಟು ಸರಳತೆ ಇದಕ್ಕಿರುತ್ತದೆ. 'ಪ್ರಸಿದ್ಧ ಐತಿಹಾಸಿಕ ಘಟನೆಯಾದ ಪನ್ನಾದಾಸಿಯ ತ್ಯಾಗದ ಕತೆಯನ್ನೇ ವಸ್ತುವಾಗಿ ಬಳಸಿಕೊಂಡಿದ್ದೇನೆ' ಎಂದು ಹೇಳಿದ ನಂತರ ಲೇಖಕರು ಇಲ್ಲಿ ವಸ್ತುವು 'ಕಾವ್ಯಕ್ಕೊಂದು ಮಾಧ್ಯಮವೇ ಹೊರತು ವರ್ಣನಾತ್ಮಕ ಕತೆಯಲ್ಲ' ಎಂದೂ ವಿವರಿಸುತ್ತಾರೆ. ಇಂಥ ಪ್ರಯತ್ನಗಳ ಸಮಸ್ಯೆ ಪ್ರಾರಂಭವಾಗುವುದು ಇಲ್ಲಿಯೇ. ಕಥಾ 'ಕಾಲದ' ಜೊತೆಗೆ ಇಲ್ಲಿ ಆಕಾಶ (Space) ಕೂಡಾ ಬೆರೆಯಬೇಕು. ಆಗಲೇ, ಕಥಾಕಾವ್ಯಕ್ಕೆ, ಖಂಡಕಾವ್ಯಕ್ಕೆ ಆಳ ಒದಗಿಬರುವುದು ಆಗಲೇ. ಆ ಸವಾಲಿನಿಂದ ಕವಿ ಜಾರಿಕೊಂಡುಬಿಟ್ಟಿದ್ದಾರೆ.

ಮೊದಲ ಪದ್ಯದಲ್ಲೇ ಕಲ್ಲು ಸಿಕ್ಕಿ ಬೆಚ್ಚಿಸುತ್ತದೆ. 'ಏನಿದು ಅಮಾವಾಸ್ಯೆಯು ಕಗ್ಗತ್ತಲಲ್ಲಿಂತು' ಎಂದು ಪ್ರಾರಂಭಿಸಿ, ತಾರೆ, ದಿಕ್ಕು, ಏನೂ ಕಾಣುವುದಿಲ್ಲ ಎಂದು 'ಕೋಟೆ ಗೋಡೆಗಳೆಲ್ಲ ರೌದ್ರಮಯ ಕಾಂತಿ' ಎಂದು ಅಪ್ಪಣೆ ಕೊಡಿಸುತ್ತಾರೆ. ಮತ್ತೆ ಮುಂದಿನ ಸಾಲಲ್ಲಿ 'ರಾಜವೀಥಿಯಲಿ ಮುಂಬರಿವ ಪಥ'ಗಳೂ ಕಾಣುವುದಿಲ್ಲ ಎನ್ನುತ್ತಾರೆ. ಇಂಥ ಅಸಂಬದ್ಧತೆಯನ್ನು ಏನೆಂದು ಕರೆಯಬೇಕು ?

ಇಡೀ ಕೃತಿ ಖಂಡ ಕಾವ್ಯದ ಸಂಸ್ಪರ್ಶವಿಲ್ಲದೆ ಕತ್ತಲಲ್ಲೇ ಉಳಿದುಬಿಟ್ಟಿದೆ.

ಎರಡು ಸೆಲೆ ಒಂದುನೆಲೆ [ನಾಗೇಶ ರಾಂಪುರ, ಚೆನ್ನಪ್ಪಕಟ್ಟಿ]

ಇಬ್ಬರು ಕವಿಗಳ ಪದ್ಯಗಳು ಎರಡು ಭಾಗಗಳಲ್ಲಿವೆ. ನಾಗೇಶ ರಾಂಪುರರ ಕವನಗಳ ಗುಂಪಿನ ಹೆಸರು 'ಭಾವನಾ'. ಕೊಂಚ ಭಾವುಕವೇ ಎನ್ನಬಹುದಾದ ಶೈಲಿ ರಾಂಪುರರದು. ಆದರೆ, 'ಲಾಯಬ್ರರಿಯೊಳಗೆ', 'ಮದುವೆ' ಪದ್ಯಗಳಲ್ಲಿ ತಮ್ಮ ಭಾವುಕಶೈಲಿಯಿಂದ ಹೊರಗೆ ಹೋಗಲು ಪ್ರಯತ್ನಿಸಿದ್ದಾರೆ. ಚಂದ್ರಶೇಖರ ಪಾಟೀಲರು 'ಸ್ನೇಹದ ಎರಡು ಮಾತು'ಗಳಲ್ಲಿ ಗುರುತಿಸಿರುವ ಹಾಗೆ ಈ ಪದ್ಯಗಳು ಸರಳ ಅನುಭವ ಮತ್ತು ಕೋಮಲ ಭಾವನೆಗಳನ್ನು ಹಿಡಿದಿಡುವ ಪ್ರಯತ್ನ ಮಾಡಿವೆ.

ಚೆನ್ನಪ್ಪ ಕಟ್ಟಿಯವರು ತಮ್ಮ ಜೊತೆಗಾರರಿಗಿಂತ ಹೆಚ್ಚು ಪಳಗಿರುವ ಕವಿ. ಕಳೆದ ದಶಕದ ಕಾವ್ಯಕ್ಕೆ ಸಾಮಾನ್ಯವಾದ ನಿಲುವಾದ ವ್ಯಂಗ್ಯವೇ ಇಲ್ಲಿಯ ಅನೇಕ ಕವನಗಳಲ್ಲಿ ಹರಿದಿದೆ. ಬಹುಶಃ ಈ ವ್ಯಂಗ್ಯವೇ ಕವಿಗೆ ಕವನ ಕಟ್ಟುವ ಕಲೆಯ ಬಗ್ಗೆ ಹೆಚ್ಚು ಪರಿಣತಿಯನ್ನು ನೀಡಿದೆ. 'ಕ (ಕಿ) ವಿ ಮಾತು', 'ವರ್ತುಳ' ಪದ್ಯಗಳು ಕಟ್ಟಿಯವರ ಶ್ರಮಕ್ಕೆ ಒಳ್ಳೆಯ ಫಲ ನೀಡಿರುವ ಪದ್ಯಗಳು.

ಕೆಂಡ ಉಗುಳುವವರು : ಬಿ. ಆರ್. ಪೋಲೀಸ್ ಪಾಟೀಲ

ಇಲ್ಲಿರುವ ರಚನೆಗಳು ಪ್ರತಿಮೆಯ ರೂಪದಲ್ಲಿರುವಂಥವು. ಕವನವೇ ಏಕಾಗ ಬೇಕು ಎಂಬುದರ ಬಗ್ಗೆ ಶ್ರೀಯುತರು ಯೋಚಿಸಿದ ಹಾಗಿಲ್ಲ. ಮಧ್ಯಮ ವರ್ಗದ ಒಬ್ಬ ಪ್ರಜ್ಞಾವಂತ ಮನುಷ್ಯನ ಟೀಕೆ ಟಿಪ್ಪಣಿಗಳಾಗಿ ಇವು ಕಾಣುತ್ತವೆ. ಆದರೆ, ಪದ್ಯಗಳೇ ಎಂಬ ಮಾತಿಗೆ ಉತ್ತರ 'ಅಲ್ಲ' ಎಂದೇ. ರಾಜಕಾರಣದ, ಕ್ರಾಂತಿಕಾರೀ ರಾಜಕಾರಣದ ಕೆಲಸ ಹೊಸ ಆಕೃತಿಗಳನ್ನು ಸೃಷ್ಟಿಸುವುದು ಕೂಡಾ. ಚರಿತ್ರೆ, ಅರ್ಥ ಶಾಸ್ತ್ರ ಮುಂತಾದ ಶಿಸ್ತುಗಳಲ್ಲಿನ ಕ್ರಾಂತಿಕಾರೀ ಚಿಂತಕರನ್ನು ಓದಿದರೆ ಈ ಮಾತು ಸ್ಪಷ್ಟವಾಗುತ್ತದೆ. ಒಂದು ಬಗೆಯ ಹೊಸ ಸೃಜನಶೀಲ ಶಕ್ತಿಯನ್ನು ಕ್ರಾಂತಿಕಾರೀ ಚಿಂತಕರು ತರುತ್ತಾರೆ. ಆದರೆ, ಕನ್ನಡದ ಎಡ ಪಂಥೀಯ ಕಾವ್ಯ ಆ ದೃಷ್ಟಿಯಿಂದ ನಿಜವಾಗಿಯೂ ನಿರಾಸೆಗೊಳಿಸುತ್ತದೆ. ಅಲ್ಲಿಯ ಮೆಜಾರಿಟಿ ಕವಿಗಳು ಪೋಲೀಸ್

ಪಾಟೀಲರ ಹಾಗೆ ಸ್ವಾಗತಾರ್ಹ ಕಾಳಜಿಯ ಹಂತದಲ್ಲಿ ಮಾತ್ರ ಉಳಿಯುವಂಥವರು. ಆದರಾಚೆಗೆ ಯಾವ ಸೃಜನಶೀಲ ಪ್ರಯತ್ನವೂ ಇಲ್ಲ.

ಇಡೀ ಸಂಕಲನದಲ್ಲಿ 'ಸಂಧಿಸಾಧಕ' ಕವನ ತನ್ನ ವಿಟ್ ಮತ್ತು ವಿಡಂಬನೆಗಳಿಂದಾಗಿ ಪರವಾಗಿಲ್ಲ ಎನ್ನಿಸಿಕೊಳುತ್ತದೆ.

ಕಟ್ಟಾಣಿ ಸತಿಯೆಂದು ಕರದೇನ : ಬಾಪೂಗೌಡಾ ಪಾಟೀಲ

ಉತ್ತರ ಕರ್ನಾಟಕದ ಗ್ರಾಮ್ಯದಲ್ಲಿ ಅಥವಾ 'ಸಾಹಿತ್ಯಕ ಗ್ರಾಮ್ಯ'ದಲ್ಲಿ ಇಲ್ಲಿಯ ಎಲ್ಲ ಪದ್ಯಗಳು ಇವೆ. 'ಸಾಹಿತ್ಯಕ ಗ್ರಾಮ್ಯ' ಎಂದರೆ ಸಮಕಾಲೀನ ಆಡುನುಡಿಯಲ್ಲಿ ಇರುವ ಎಲ್ಲ ಪರದೇಸಿ, 'ಫಾರಿನ್' ಪದಗಳನ್ನು ತೆಗೆದು ತಮ್ಮ ಭಾವನಾಲೋಕಕ್ಕೆ ಬೇಕಾದ ಶೈಲಿಯನ್ನು ಸಿದ್ಧಪಡಿಸಿಕೊಳ್ಳುವುದು. ಇದು ಬಹುಮಟ್ಟಿಗೆ ಕೃತಕವೂ, ಸಮಕಾಲೀನ ಸವಾಲುಗಳಿಂದ ದೂರವೂ ಆಗಿ ಉಳಿದು ಬಿಡುತ್ತದೆ. ಕಂಬಾರ, ಚಂದ್ರಶೇಖರ ಪಾಟೀಲರಂಥವರು ತಮ್ಮ ಸಮಕಾಲೀನ ಸಂವೇದನೆಯ ತೀವ್ರತೆಯಿಂದಾಗಿ ಈ ಅಪಾಯಗಳನ್ನು ದಾಟಬಲ್ಲರು.

ಈ ಕವನಗಳು 'ಹಳ್ಳಿಯ ಬದುಕಿನ ಪರಿಸರ'ದ ಹಿನ್ನೆಲೆಯಲ್ಲಿರುವ ಪ್ರೇಮ ಕವನಗಳು. ಆದರೆ, ಸಮಕಾಲೀನ ಜೀವನದ ವ್ಯಕ್ತಿಗಳಂತೆ ಕಾಣದೆ. ಕ್ಯಾಲೆಂಡರಿನ ನಿಸರ್ಗದಂತೆ ವಾಸ್ತವ ದೂರವಾಗಿ ಕಾಣುತ್ತದೆ. 'ಪದಗಳು' ಎಂದೇ ಕರಕೊಂಡಿರುವುದರಿಂದ ಅನುಭವವನ್ನು ತೀವ್ರವಾಗಿ ಕಟ್ಟುವ ಸವಾಲುಗಳಿಂದಲೂ ದೂರವಾಗಿಯೇ ಉಳಿದಿದ್ದಾರೆ. ನನಗೆ ಇಡೀ ಸಂಕಲನದಲ್ಲಿ ಹಿಡಿಸಿದ ಪದ್ಯವೆಂದರೆ 'ನೆನಪಿನ ಕಂತು ತೀರಿಸಿದ್ಹಾಂಗ. ಪ್ರತಿಮೆ, ಭಾವನೆ, ಶೈಲಿ ಮೂರರ ನಡುವೆಯೂ ಐಕ್ಯವಿದ್ದು ಸುಂದರ ಸರಳ ಪದ್ಯ ಎನಿಸಿಕೊಳ್ಳುತ್ತದೆ. ಉಳಿದವುಗಳು ಓದಿ ಮರೆಯಬಹುದಾದ ಪದಗಳು.

ತಿಳದ್ಯೈತಿ ನಿನ್ಬೆಳಕ : ಸುಭಾಸ ಸವದಿ

ಹಿಂದಿನ ಸಂಕಲನದ ಬಗ್ಗೆ ಹೇಳಿದ ಮಾತುಗಳೇ ಭಾಷೆಯ ಮಟ್ಟಿಗೆ ಈ ಸಂಕಲನಕ್ಕೂ ಸಲ್ಲುತ್ತವೆ. ಆದರೆ, ಇದು ವಸ್ತು ಮತ್ತು ಸಾಧನೆಯ ವಲಯಗಳಲ್ಲಿ ಹಿಂದಿನ ಕೃತಿಗಿಂತ ಹೆಚ್ಚಿನ ವ್ಯಾಪ್ತಿ ಪಡೆದಿದೆ. ಹಳ್ಳಿಯ ಬದುಕಿನ ಹಲವಾರು ಮುಖಗಳಿಗೆ ಕವಿ ಹಾಡಿನ ರೂಪಕೊಡಲು ಪ್ರಯತ್ನಿಸಿದ್ದಾರೆ. ಅದು ನಿಸರ್ಗ, ಹಳ್ಳಿಯ ಜನರ ಮೌಲ್ಯಗಳು, ಅವರ ವ್ಯಕ್ತಿತ್ವ-ಈ ಮೂರನ್ನು ಒಳಗೊಳ್ಳಲು ಯತ್ನಿಸುತ್ತದೆ. ನಮ್ಮ ಹಳ್ಳಿಯ ಒಂದು ಕಾಲಕ್ಕೆ ಇದ್ದ ಶ್ರದ್ಧೆ ಮತ್ತು ಜೀವನ ಪ್ರೀತಿಗಳನ್ನು ಇಲ್ಲಿ ಕಾಣಬಹುದು. ಈ ದೃಷ್ಟಿಯಿಂದ 'ಭೂಮಿತಾಯಿ ಕೈಹಿಡಿತಾಳ'

'ಹರಬಿ ಹೊಡದ ಹುಚಾಗಿ ಹೋತ', 'ಹಾಕ ಬೇಕ ಅಂಟಾ' ಸ್ವಾರಸ್ಯಕರ ಪದ್ಯಗಳು.

ಆದರೆ, ನಮ್ಮ ಹಳ್ಳಿಯ ಜೀವನದ ಅಧಿಕೃತ ಚಿತ್ರಣವನ್ನು ಇವು ಕೊಡುತ್ತವೆಯೆ? ಇಲ್ಲ ಎನ್ನಿಸುತ್ತದೆ ಮೇಲುನೋಟಕ್ಕೆ ಎಷ್ಟೇ ಸೌಮ್ಯತೆ ಕಂಡರೂ ನಮ್ಮ ಹಳ್ಳಿಗಳು ಆಳದಲ್ಲಿ ಜ್ವಾಲಾಮುಖಿಗಳಾಗಿವೆ. ಈ ಕವನಗಳಲ್ಲಿರುವ ಮೌಲ್ಯಗಳು ಅಭದ್ರಗೊಳ್ಳಲು ಶುರುವಾಗಿ ಎಷ್ಟೋ ವರ್ಷಗಳಾದವು. ಈವತ್ತು ನಮ್ಮ ಹಳ್ಳಿಗಳು ತೇಜಸ್ವಿ, ಬೆಸಗರಹಳ್ಳಿ ರಾಮಣ್ಣನವರ ಹಳ್ಳಿಗಳು. ಅಂಥ ಕಾಳ ಅನುಭವಗಳಿಗೆ ಸವದಿಯವರು ಗಮನ ಕೊಟ್ಟಿಲ್ಲ. 'ಜಾನಪದ' ಎಂಬುದನ್ನು ರಮ್ಯ ಎಂಬ ಅರ್ಥದಲ್ಲೇ ಕವಿ ಸ್ವೀಕರಿಸಿದ್ದಾರೆ ಎಂಬುದಕ್ಕೆ ಇದೇ ಕೃತಿ ಸಾಕ್ಷಿ.

ಪ್ರಿಯ ಶರಾವತಿ : ಶ್ರೀಪಾದಶೆಟ್ಟಿ

'ನನಗೆ ವಾಚಾಳಿತನವೇ ಪ್ರಿಯ' ಎಂದು ಶೆಟ್ಟಿಯವರು ಮೊದಲೇ ಹೇಳಿಬಿಟ್ಟಿದ್ದಾರೆ. ಮತ್ತು ಅದಕ್ಕೆ ತಕ್ಕಂತೆ ನಡೆದುಕೊಂಡೂ ಇದ್ದಾರೆ. ಈಚಿನ ವರ್ಷದ ಬಹುಪಾಲು ತರುಣರಂತೆ ಶೆಟ್ಟಿಯವರೂ ಸುತ್ತಲಿನ ಹತ್ತು ಹಲವು ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತಾ ಹೋಗುತ್ತಾರೆ. ಮತ್ತದೇ ವ್ಯಂಗ್ಯ, ವಿಡಂಬನೆ ಇವೆರಡೂ ಇಲ್ಲದಿದ್ದಾಗ ಪ್ರಣಾಳಿಕೆಯಂತಹ ಕವನಗಳು. ಎರಡನೇದಕ್ಕೆ 'ಓ ದೇವರೆ' ಉದಾಹರಣೆಯಾದರೆ, ಮೊದಲನೆಯದಕ್ಕೆ ಬಹುಪಾಲು ಸಾರ್ವಜನಿಕ ಕವನಗಳು.

ಆದರೆ, ಕೆಲವು ಕಡೆಗಳಲ್ಲಿ ಭಿನ್ನವಾಗಿ ಬರೆಯಲು ಶೆಟ್ಟಿ ಪ್ರಯತ್ನಿಸಿದ್ದಾರೆ. ಭಿನ್ನ ಪ್ರತಿಮೆಗಳನ್ನು ಬಳಸಲೂ ಯತ್ನಿಸಿದ್ದಾರೆ. 'ಹಡಗು' ಕವನದಲ್ಲಿ ತಿಮಿಂಗಿಲಕ್ಕೆ ಧೂಳಿನ ಚೀಲ ಎಸೆಯುವ ಪ್ರತಿಮೆ ನನ್ನ ಮನಸ್ಸಿನಲ್ಲಿದೆ, ಇಂಥ ಒಂದು ಹೊಸ ಪ್ರತಿಮೆ ನೀಡಬಹುದಾದ ಅರ್ಥ ಸಾಧ್ಯತೆಗಳನ್ನು ಶೆಟ್ಟಿಯವರು ಬಳಸಿಕೊಂಡಿಲ್ಲ ಎನ್ನುವುದೇ ಕೊರಗಿನ ಸಂಗತಿ. ತಮ್ಮ ಪ್ರಾದೇಶಿಕ ಸಾಂಸ್ಕೃತಿಕ ವಿವರಗಳನ್ನು ವಿಶ್ವಾತ್ಮಕ ಪ್ರತಿಮೆಗಳನ್ನಾಗಿ ಎತ್ತಲು ಈ ಪ್ರದೇಶಗಳ ಕವಿಗಳು ಯತ್ನಿಸಬೇಕು ಎಂದು ನನಗೆ ಅನ್ನಿಸುತ್ತದೆ. ಸುತ್ತಲಿನ ಜೀವನದ ವಿವರಗಳಲ್ಲೇ ದಟ್ಟವಾಗಿ ಮುಳುಗಿ ಅದನ್ನೆ ವಿಶ್ವಾತ್ಮಕ ಸೃಜನಶೀಲತೆಗೆ ಎತ್ತಬೇಕು. ಇದು ಸಾಧ್ಯವಾಗಬೇಕಾದರೆ ಸಾಹಿತ್ಯದ ಬಗೆಗಿನ ಕ್ಲೀಷೆ ಕಲ್ಪನೆಗಳಿಂದ ಹೊರಬೇಕು.

ಉತ್ತರ ಕನ್ನಡದ ಬದುಕು ಅಲ್ಲಿಯ ಕಾವ್ಯದಲ್ಲಿ ಬಂದೀತೇ ?

ಶೋಕಸಭೆ : ಬಸವರಾಜ ವಕ್ಕುಂದ

ಸಾಮಾಜಿಕ ಪ್ರಜ್ಞೆ ಇಲ್ಲಿಯ ಕವನಗಳ ಬಂಡವಾಳ. ಈಗಿನ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ವ್ಯಂಗ್ಯಗಳು ನೇರವಾಗಿ ಜೊತೆಗಿರುವುದರಿಂದ, ಆ ಗುಣ

ಇಲ್ಲಿಯೂ ಕಾಣುತ್ತದೆ. (ಮತ್ತು ಇವು ಸಹಜವಾಗೇ ವಿಷಾದಕ್ಕೆ ಜಾರುತ್ತವೆ). ಆದರೆ ಇಲ್ಲಿ ಶೋಕವೇ ಕಡಿಮೆ, ಭಾವಲೋಕದ ದೃಷ್ಟಿಯಿಂದ.

ವಸ್ತುವಿನ ದೃಷ್ಟಿಯಿಂದ ಕೆಲವು ವಿಶಿಷ್ಟ ಪ್ರಯತ್ನಗಳನ್ನು ಇಲ್ಲಿ ಕಾಣಬಹುದು. 'ಯಂತ್ರಾಗಾರ' ಅಂಥ ಒಂದು ಪದ್ಯ. ಮೊದಲೆರಡು ಸಾಲುಗಳು ಕುತೂಹಲ ಹುಟ್ಟಿಸಿದರೂ ನಂತರ ವಸ್ತುವಿನ ಹಿಂದಿನ ಆಂತರಿಕ ವಿಸ್ತಾರವನ್ನು ಹಿಡಿಯಲಾಗದೆ ವಿಫಲವಾಗುತ್ತಾರೆ. 'ಪಿತೃಲಿಂಗಗಳು' ಪದ್ಯಕ್ಕೂ ಈ ಮಾತು ಅನ್ವಯವಾಗುತ್ತದೆ.

ಇದೆಲ್ಲಾ ಓದಿದಾಗ ಅನ್ನಿಸುವುದು ನವೋದಯ ಕಾವ್ಯಮಾರ್ಗದ ಜೊತೆಗೆ ಕವಿಯೊಬ್ಬ ಈಗಲೂ ಆದರ ಅತ್ಯುತ್ತಮ ಹಂತಗಳಲ್ಲಿ ಸಂಬಂಧವಿಟ್ಟುಕೊಳ್ಳುವುದು ಒಳ್ಳೆಯದು ಎಂದು. ಸುಮ್ಮನೆ ತೆಳುಮಾತಿನ ಮಂಟಪ ಕಟ್ಟುತ್ತಾ ಕೂರುವುದು ಆಗ ತಪ್ಪುತ್ತದೆ.

ಬದುಕು ಬರೆಯಿತು : [ಮುಕ್ತಕಗಳ ಸಂಕಲನ]

ಇಲ್ಲಿ ಹೆಚ್ಚುಕಡಿಮೆ ಬದುಕಿನ ಎಲ್ಲ ಕ್ಷೇತ್ರಗಳ ಮೇಲೆ ಮುಕ್ತಕಗಳು ಇವೆ. ಯಾವುದೂ ನೆನಪಿನಲ್ಲಿ ಉಳಿವಂಥ ಚುರುಕು ಪಡೆದಿಲ್ಲ ಎನ್ನುವ ಮಾತು ಬೇರೆ. ಇಂಥ ಮುಕ್ತಕಗಳು ಸಾಮಾನ್ಯವಾಗಿ ಬಹುಸಂಖ್ಯಾತರು ಹೊಂದಿರುವ ತಾತ್ವಿಕತೆಯ ಆಧಾರದ ಮೇಲೆಯೇ ಇರುತ್ತವೆ. ಈ ಕೃತಿ ಕೂಡಾ ಅದಕ್ಕೆ ಹೊರತಲ್ಲ ಕೆಲವೊಮ್ಮೆ ಇಲ್ಲಿ ಅರ್ಥವೇ ಸ್ಪಷ್ಟವಾಗುವುದಿಲ್ಲ(ಉದಾ:-26). 'ಕಾವ್ಯಭಾಷೆ'. ಯಲ್ಲಿ ರಚಿತವಾಗಿರುವ ಈ ಮುಕ್ತಕಗಳು ಕ್ಲೀಷೆ ಎನ್ನಬಹುದಾದ ಉಪಮೆಗಳಲ್ಲಿಯೇ ಮುಗಿದು ಹೋಗುತ್ತವೆ ಎಂದರೆ ಸಾಕು.

ಮುಕ್ತ ಜೀವ : ಕ. ಭಾ. ಪೂರ್ವಾಚಾರ್ಯ

ದೇಶಭಕ್ತಿ, ಆಧ್ಯಾತ್ಮ, ನಿಸರ್ಗಚಿತ್ರಣ ಇವೆಲ್ಲಾ ಇಲ್ಲಿ ತುಂಬಿ ಹರಿದಿವೆ. ಇವುಗಳಿಗೆ ಅಲ್ಲಲ್ಲಿ ಸಾಮಾಜಿಕ ಪ್ರಜ್ಞೆಯೂ ಸೇರಿ ಇಡೀ ಕೃತಿ ತತ್ವಗಳನ್ನು ಹೇಳಲು, ಉಪದೇಶಿಸಲು ಹಾತೊರೆಯುತ್ತದೆ. ಇಡೀ ಕೃತಿಯ ಹಿನ್ನಲೆಯಲ್ಲಿ ಒಂದು ಬಗೆಯ ತೀವ್ರತೆ ಇದೆಯಾದರೂ, ಅದನ್ನು ಕಾವ್ಯದಲ್ಲಿ ತರಬೇಕಾದ ರೀತಿಯ ಬಗ್ಗೆ ಎಚ್ಚರವಿಲ್ಲ. ಆದ್ದರಿಂದ, ಇವುಗಳ ಆಕ್ರೋಶ ಕಾವ್ಯದಲ್ಲಿ ಒಡಮೂಡದೆ ಹೊರಗೇ ಹರಿದಾಡಿ ಹಾಗೆಯೇ ಕರಗಿ ಹೋಗುತ್ತದೆ.

ವಾಸ್ತವ : ಗುರುಪಾದ ಕೆ. ಹೆಗಡೆ

ನವೋದಯ ಕಾವ್ಯಮಾರ್ಗದ ಕೆಲವು ಕೆಟ್ಟ ಅಂಶಗಳನ್ನು ಹೊತ್ತ ಈ ಸಂಕಲನದ ಪದ್ಯಗಳನ್ನು ಆಳವಾಗಿ ವಿಮರ್ಶಿಸಲು ಪ್ರಯತ್ನಿಸುವುದು ತುಂಬ ಕಷ್ಟ. 'ಅನುಭಾವ' ಎಂಬ ಕವನದ ಅನುಭವ, ದರ್ಶನವನ್ನು ಕುವೆಂಪು ಕವನಗಳಲ್ಲಿ

ಅತ್ಯಂತ ಶಕ್ತಿಶಾಲಿ ರೂಪದಲ್ಲಿ ಕನ್ನಡಕಾವ್ಯ ಕಂಡಿರುವುದರಿಂದ ಇದು ತೀರಾ ಸಪ್ಪೆಯಾಗಿ ಕಾಣುತ್ತದೆ. 'ನವ್ಯ' ಮಾರ್ಗದಲ್ಲೂ ಕವಿ ಕವನ ಬರೆಯಲು ಪ್ರಯತ್ನಿಸಿರುವ ಗುರುತು 'ಗೊಂದಲ' ದಲ್ಲಿ ಕಾಣುತ್ತದೆ. ಈ ಕವನವೂ ಬರೀ ಗೊಂದಲವೇ, ಒಂದೆರಡು ಸ್ಯಾಂಪಲ್‌ಗಳನ್ನಷ್ಟೆ ಇಲ್ಲಿ ಕೊಟ್ಟಿದ್ದೇನೆ. ಇಲ್ಲಿಗೆ ಸಾಕು ಎಂದು ತೋರುತ್ತದೆ.

ಸುಮ ಬಂಧನ : ಸುಮಂಗ ಬಾಗಿಲುಕೋಟೆ(ಯಜುರ್ವೇದಿ)

ಮೇಲೆ ಹೇಳಿದಂಥ ರೀತಿ ಮತ್ತು ಮನಸ್ಥಿತಿಗಳೇ ಇಲ್ಲಿಯೂ ಕಾಣುತ್ತವೆ. 'ಮಾತೆ', 'ತಂದೆಗೆ', ನಾನು 'ನೀನು' 'ಕಾಣಿಕೆ', 'ಹೋದೆ ಎಲ್ಲಿಗೆ'–ಹೀಗೇ ಪಟ್ಟಿ ಮುಂದುವರಿಯುತ್ತಾ ಹೋಗುತ್ತದೆ. ಈ ಪದ್ಯಗಳ 'ಕೋಮಲ ಭಾವನೆ'ಗಳೇ ಅವುಗಳ ಸೋಲಿಗೆ ಕಾರಣ. ಕಾವ್ಯಭಾಷೆಯ ಬಗೆಗೆ ಕ್ಲೀಶೆಯಿಂದ ಆಚೆಗೆ ಹೋಗುವ ಪ್ರಯತ್ನವನ್ನೆ ನಾವೆಲ್ಲಿಯೂ ಕಾಣುವುದಿಲ್ಲ.

ಬಿನತಿ : ಸಿ. ಎನ್. ಚೆನ್ನವೀರಯ್ಯ

ಈ ಕೃತಿಯನ್ನು 'ನವ್ಯ ಕವನ ಸಂಕಲನ' ಎಂದು ಕವಿ ಕರೆದಿದ್ದಾರೆ. "ಕೇಣಿಸುತ ಲೆನ್ನಾಪ್ತ ಮಿತ್ರರು । ಪೋಣಿಸೈ ಯಾಮಿಕರ ಕಥೆಯಂ । ......" ಈ ಸಾಲುಗಳಿರುವ, ಇಂಥವೇ ತುಂಬಿರುವ ಕೃತಿಯನ್ನು 'ನವ್ಯ ಕವನ' ಎಂದು ಹೇಗೆ ಕರೆಯಬೇಕೋ ನನಗೆ ತಿಳಿಯದಾಗಿದೆ. ಪಲ್ಲವಿ ಹಾಕಿ ಹಾಡಲು ತಕ್ಕ ಅನೇಕ ರಚನೆಗಳು ಇಲ್ಲಿವೆ. ಪುಟ್ಟಪ್ಪನವರ 'ರಾಮಾಯಣ ದರ್ಶನ'ದಲ್ಲಿ ನಾವು ಕಾಣುವ ಭಾಷಾ ಯೋಗ ಇಲ್ಲಿ ಪ್ರತಿ ಪದ್ಯದಲ್ಲೂ ತುಂಬಿದೆ. ಜೊತೆಗೆ, 'ಸುಪ್ವೀಪದ' ಎಂಬ ಜಾನಪದ ರಚನೆಯೂ ಇಲ್ಲಿದೆ.

ಯಾತ್ರಿಕರು ಮತ್ತು ಆನೆಕಾಲು : ವಿಠ್ಠಲ ಪೇರುಮನೆ

ಕನ್ನಡದಲ್ಲಿ ಚಾಲ್ತಿಯಲ್ಲಿರುವ ಅನೇಕ ಕಾವ್ಯ ಮಾರ್ಗಗಳು ಇಲ್ಲಿ ಆಗಾಗ ತಲೆಹಾಕಿ ವಿಠ್ಠಲ ಪೇರುಮನೆಯವರಿಗೆ ಅನೇಕ ಗೊಂದಲವನ್ನು ತಂದುಹಾಕಿಬಿಟ್ಟಿವೆ. ಆದರೆ, ಮೂಲತಃ ಪೇರುಮನೆಯವರದು ರೊಮ್ಯಾಂಟಿಕ್ ಎನ್ನಬಹುದಾದ ಮನಸ್ಸು, ಶೈಲಿ. ಅತಿವಾಚ್ಯರತಿಗೆ ಪಕ್ಕಾಗಿ ಕವನಗಳು ಸೊರಗಿವೆ. ಕನ್ನಡದ ಸರಳ ಲಯಗಳಿಗೆ ಇಳಿದು ಅಲ್ಲೇ ನಿಂತ ಅನೇಕ ಕವನಗಳು ಇಲ್ಲಿವೆ.

'ಮಿತ್ರ', 'ಗಂಗೆ', 'ಸಂಗಮ', 'ಯಾನ' ಇತ್ಯಾದಿ ಕವನಗಳ ಬಗ್ಗೆ ಚಂದ್ರಶೇಖರ ಪಾಟೀಲರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುನ್ನುಡಿಯ ಮುಲಾಜ್ಯ.

ನೂರೊಂದು : ಸಿ.ಪಿ.ಕೆ.

ಕನ್ನಡ ಸಾಹಿತ್ಯಲೋಕದಲ್ಲಿ ಪರಿಚಿತ ಹೆಸರಾದ ಶ್ರೀ ಸಿ. ಪಿ. ಕೆ.ಯವರ ನೂರೊಂದನೆಯ ಕೃತಿ ಇದು. ಕಾದಂಬರಿಕಾರರಲ್ಲದವರು ಇಂಥ ಸಂಖ್ಯೆಯನ್ನು ತಲುಪುವುದು ತೀರಾ ಅಪರೂಪ. ಇದು 'ವಚನ' (!) ಸಂಕಲನ. ಆದರೆ, ಇಲ್ಲಿ 'ಸ್ಫಟಿಕದ ಶಲಾಕೆ'ಯ ರೀತಿಯಲ್ಲಿ ಮಾತು ಬಳಕೆಯಾಗಿಲ್ಲ. ತೀರಾ ಮಣ್ಣಿಗೆ ಅಂಟಿಕೊಂಡಿರುವ ಭಾಷೆ. ವಚನ ಪ್ರಕಾರದಲ್ಲಿ ಒಂದು ಹಂತದ ಸೀಮಿತ ಯಶಸ್ಸಿಗಾದರೂ ಮಾತು ಉಜ್ವಲತೆಯನ್ನು, ಕೃತಿ ಉಪಮಾ ನಿಷ್ಠತೆಯನ್ನು ಪಡೆಯಬೇಕು. ಆದರೆ, ಕುತೂಹಲದ ಸಂಗತಿ ಎಂದರೆ, ಇಡೀ ಕೃತಿಯಿಂದ್ದಕ್ಕೂ ವಾಚ್ಯಕ್ಕೆ ನಿಂತಿರುವ ವಿಡಂಬನೆಯನ್ನು, ಸಾಮಾಜಿಕ ಟೀಕೆಯನ್ನು ಕಾಣುತ್ತೇವೆಯೇ ಹೊರತು ಪ್ರತಿಮೆಗೇರುವ ಪ್ರಯತ್ನ ಕಾಣುವುದೇ ಇಲ್ಲ. ಇದ್ದುದರಲ್ಲಿ 'ಬೆಳಕು', 'ಗೋಪಾಲಗೌಡರಿಗೆ' ರಚನೆಗಳು ಒಳ್ಳೆಯವುಗಳು.

ಕಮ್ಮಟದ ಕವಿತೆಗಳು : (ಸಂ) ಚೊಕ್ಕಮೂರ್ತಿ ಪಾಟೀಲ

ಕರ್ನಾಟಕ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ 'ಕಾವ್ಯಕಮ್ಮಟ' ಪ್ರಾಯೋಗಿಕ ಕವನ ಸಂಕಲನ ಇದು. (ಜನವರಿ 1981ರಲ್ಲಿ ನಡೆದ ಈ ಕಮ್ಮಟಕ್ಕೆ ಈ ಲೇಖಕನೂ ನಿರ್ದೇಶಕರಿಗೆ ಸಹಾಯಕನಾಗಿ ಭಾಗವಹಿಸಿದ್ದ.) ಕಾವ್ಯ ಬರೆಯುವುದು ಹೇಗೆ ಎಂಬುದನ್ನು ಕಮ್ಮಟವೊಂದರ ಮೂಲಕ ಕಲಿಸಲು ಸಾಧ್ಯವೆ ಎಂಬುದು ತೀರಾ ಹಳೆಯ ಪ್ರಶ್ನೆ. ಆದರೆ, ಒಂದು ಸೀಮಿತ ಅರ್ಥದಲ್ಲಿ ಬೇರೆ ಬೇರೆ ಯಶಸ್ವೀ ಕವನಗಳ, ಕಾವ್ಯಮಾರ್ಗಗಳ ರೂಪಗಳನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿ ತೋರಿಸಿದರೆ ಉದಯೋನ್ಮುಖ ಕವಿಗಳಿಗೆ ಅನುಕೂಲವಾಗುತ್ತದೆ. ಜೊತೆಗೆ, ಕಾವ್ಯಪರಂಪರೆಯಲ್ಲಿ ತಮ್ಮ ಸೃಷ್ಟಿ ಸನ್ನಿವೇಶವನ್ನು ಕೂಡಾ ಸರಿಯಾಗಿ ಅರ್ಥೈಸಿಕೊಳ್ಳಲು ಸಹಾಯವಾಗುತ್ತದೆ.

ಉಸಿರಿಲ್ಲದವರು : (ಸಂ) ಪ್ರಭಾಕರ ಶಿಶಿಲ

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನವರು ತಂದಿರುವ ಸಂಕಲನ ಇದು. ತರುಣ ಕವಿಗಳ ಮೊದಲ ಹಂತದ ಕವನಗಳು ಇಲ್ಲಿವೆಯಾದ್ದರಿಂದ, ಇಂಥ ಕಡೆಗೆ ನಾವು ಸಹಜವಾಗಿ ಕಾಣುವ ಹಸಿಬಿಸಿ ಅರೆಕೊರೆಗಳು ಇಲ್ಲೂ ಕಾಣುತ್ತವೆ. ಸಾಮಾನ್ಯವಾಗಿ ಇಂಥ ಸನ್ನಿವೇಶದಲ್ಲಿ ಕವಿಗಳು ಸಿದ್ಧಮಾರ್ಗಗಳ ಜಾಡಿಗೆ ಬೀಳುವುದು ಸಹಜ. ಇಷ್ಟಾದರೂ, ಒಟ್ಟಾರೆಯಾಗಿ ಈ ಸಂಕಲನದಲ್ಲಿ ಕಾಣುವ ಪ್ರಬುದ್ಧತೆ ಮೆಚ್ಚುವಂಥದ್ದು. ಈಚಿನ ತರುಣ ಜನಾಂಗಕ್ಕೆ ಸಹಜವಾಗಿರುವ ವಿಡಂಬನೆ, ಸಿನಿಕತನಗಳು ಇಲ್ಲೂ ತುಂಬಿದ್ದರೂ ಅವು ಅನೇಕ ಕಡೆ ಸ್ಪಷ್ಟ ಪ್ರತಿಭಟನಾರೂಪ ಪಡೆದಿವೆ ಎಂಬುದು ಗಮನಾರ್ಹ. ಬಿಳಿಮಲೆ, ಪಾರಪ್ಪಾಡಿ, ಶಿಶಿಲರ ಕವನಗಳು ಈ ಸಂಕಲನದ ಅತ್ಯುತ್ತಮ ಕವನಗಳು.

ಒಂದು ಸಂಗತಿಯನ್ನು ಇಲ್ಲಿ ಗಮನಿಸಬೇಕಾಗಿದೆ: ಸಾಮಾನ್ಯವಾಗಿ ಉತ್ತರ ಕರ್ನಾಟಕದ ಕಾಲೇಜುಗಳಿಂದ ಬರುವ ಸಂಕಲನಗಳಿಗಿಂತ ಇದು ಹೆಚ್ಚು ಪ್ರಬುದ್ಧವಾಗಿದೆ. ಇದಕ್ಕೆ ಕಾರಣ ಒಟ್ಟಾರೆಯಾಗಿ ಸಾಹಿತ್ಯಕ ಸಂಸ್ಕೃತಿ ಇಲ್ಲಿ ಹೆಚ್ಚು ಪ್ರಬುದ್ಧ ಎಂಬುದು ಎಂದು ತೋರುತ್ತದೆ.

ಮುಂದೇನೆ ಸಖಿ ಮುಂದೇನೆ : (ಸಂ) ಗುಡಿಬಂಡೆ ಪೂರ್ಣಿಮಾ

ಐದು ಜನ ಕವಯಿತ್ರಿಯರ ಪದ್ಯಗಳು ಇಲ್ಲಿವೆ. ರೂಪದ ದೃಷ್ಟಿಯಿಂದ ಬಹುಪಾಲು ಕವನಗಳು ಒಂದೇ ಎರಕದಲ್ಲಿವೆ. ಒಂದೇ ಆಯಾಮದ, ಸರಳ ಪ್ರತಿಕ್ರಿಯೆಗಳ ರೂಪದ ಕಾವ್ಯ. ಶಶಿಕಲಾ ವಸ್ತ್ರದ, ಲಲಿತಾರ ಪದ್ಯಗಳಲ್ಲಿ ಈಚೆಗೆ ಮಹಿಳಾ ಕಾವ್ಯದಲ್ಲಿ ಕಾಣುತ್ತಿರುವ ಬಂಡಾಯದ ಧ್ವನಿಯಿದೆ. ಲಲಿತಾ ನಾಯಕರ 'ಉಂಟು' ಕವನ ಇಡೀ ಸಂಕಲನದ ಅತ್ಯುತ್ತಮ ಪದ್ಯ ಎಂದು ನನಗೆ ಅನ್ನಿಸಿದೆ. 'ಗಂಡ ಪಂಜರದ ಗಿಳಿಗೆ' ಹಾರಲು ಪರೋಕ್ಷ ಆಹ್ವಾನ ನೀಡುವ ಈ ಕವನಕ್ಕೆ ಸರಳ ಚೆಲುವಿದೆ. ಉಳಿದ ಕವಿಯತ್ರಿಯರಿಗಿಂತ ಹೆಚ್ಚಿನ ಭಾವ ತೀವ್ರತೆಯನ್ನು ಶಶಿಕಲಾ ವಸ್ತ್ರದರ ಕವನಗಳಲ್ಲಿ ಕಾಣಬಹುದು. ಕವಿತೆಯ ಜೊತೆಗೆ, ಒಟ್ಟು ಬದುಕಿನ ಜೊತೆಗೆ ತೀವ್ರತರದ ಸಂಬಂಧವನ್ನು ಇಟ್ಟುಕೊಳ್ಳುವ ಪ್ರಯತ್ನದ ಕೆಲ ಸೂಚನೆಗಳನ್ನು 'ಕವಿತೆಗೆ' ಮತ್ತು 'ಅರ್ಥ' ಕವನಗಳಲ್ಲಿ ನೋಡಬಹುದು. ಇವುಗಳಿಗಿಂತ ಭಿನ್ನವಾದ ರೀತಿಯಲ್ಲಿ ಸೊಗಸಾಗಿರುವ 'ವಾಗ್ಮಿ' ಎಂಬ ಕವನವೂ ಇಲ್ಲಿದೆ.

ಇನ್ನುಳಿದ ಮೂರು ಕವಯಿತ್ರಿಯರ ಪದ್ಯಗಳು– ಗುಡಿಬಂಡೆ ಪೂರ್ಣಿಮಾ, ಉಡುಚಣ, ಮಾಲತಿ ಈ ಮೂರು ಜನಕ್ಕೆ—ಕಾವ್ಯದ ಬಗೆಗಿರುವ ಗಾಂಭೀರ್ಯವನ್ನು ತೋರಿಸುತ್ತವೆಯಾದರೂ ಯಶಸ್ಸು ಅಷ್ಟಾಗಿ ಸಿದ್ಧಿಸಿಲ್ಲ.

ಬೆಳ್ಳಿ ಮೂಡಲಿಲ್ಲ : (ಸಂ.) ಡಿ. ವ್ಹಿ. ಪುರಾಣಿಕ

ಬಹುಮಟ್ಟಿಗಿನ ಆ್ಯಂಥಾಲಜಿಗಳಂತೆ ಇದು ಕೂಡ ಘರಾವರಿ ಕವಿಗಳನ್ನು ಹೊಂದಿದೆ. ಆಧುನಿಕ ಕನ್ನಡ ಕಾವ್ಯಮಾರ್ಗದಲ್ಲಿನ ಎಲ್ಲ ಶೈಲಿಗಳನ್ನು, ಸಂವೇದನೆಗಳನ್ನು ಇಲ್ಲಿ ಕಾಣಬಹುದು. ಆದರೆ, ಬಹುಮಟ್ಟಿಗೆ ನಿರ್ದಿಷ್ಟ ಕಾವ್ಯ ಮಾರ್ಗಗಳ ಅತ್ಯಂತ ಕಳಪೆ ಅನುಕರಣೆಗಳೇ ಇಲ್ಲಿ ತುಂಬಿವೆ. ಆದರೆ, ಇಲ್ಲೊಂದು ಆಶ್ಚರ್ಯದ ಸಂಗತಿ ಇದೆ. ಅದೆಂದರೆ, ಬಹುಪಾಲು ಜನ ಅಧ್ಯಾಪಕ ಕವಿಗಳು ಇಲ್ಲಿದ್ದಾರೆ. ಸಾಹಿತ್ಯದ ಉನ್ನತ ಅಧ್ಯಯನ ಒಂದು ಬಗೆಯ ಗಂಭೀರ ಕಾವ್ಯ ಕೃತಿಯನ್ನು ಕಲಿಸಿ ಕೊಡುತ್ತದೆ ಎಂದು ನಾನು ಭಾವಿಸಿದ್ದೆ. ಇಲ್ಲಿ ಆ ನಿರೀಕ್ಷೆ ಕೂಡಾ ಸುಳ್ಳಾಗಿ ಹೋಗಿದೆ.

ಎಚ್. ಎಸ್. ಭೀಮನಗೌಡರ, ಇಮ್ರಾಪುರ, ಕುಲಗೋಡ, ಶಶಿಕಲಾವಸ್ತ್ರದ ಈ ಕವಿಗಳ ಕೃತಿಗಳು ಈ ಸಂಕಲನದ ಮಟ್ಟಿಗೆ ಒಳ್ಳೆಯ ರಚನೆಗಳು.

ಇಲ್ಲಿರುವ ಕವಿತೆಗಳಲ್ಲಿ ಸಹಜವಾಗಿಯೇ ಅನೇಕ ಹಂತದ ಸಿದ್ಧಿಯ, ಭಾವನಾ ಲೋಕಗಳ ಕವಿಗಳಿದ್ದಾರೆ. ಕೆಲವು ತೀರಾ ತೀರಾ ಪ್ರಾಥಮಿಕ ರಚನೆಗಳು ಎನಿಸಿದರೆ, ಇನ್ನು ಕೆಲವು ನಿರ್ದಿಷ್ಟ ಕಾವ್ಯಮಾರ್ಗಗಳ ದುರ್ಬಲ ಕೂಸುಗಳಾಗಿ ಕೊನೆಗೊಂಡಿವೆ. ನವ್ಯ ಮಾರ್ಗವೇ ಹೆಚ್ಚು ಬಲಿಗಳನ್ನು ತೆಗೆದುಕೊಂಡಿದೆ ಇಲ್ಲಿ. ಕಲೀಮ್, ಚೊಕ್ಕಮೂರ್ತಿ ಪಾಟೀಲ, ಶ್ರೀಧರ ಆರಾಧ್ಯ—ಈ ಇಬ್ಬರು ಈ ಕೃತಿಯಲ್ಲಿರುವ ಅತ್ಯಂತ ಪ್ರಬುದ್ಧ ಕವಿಗಳು. ಇಬ್ಬರದೂ ಒಂದೇ ಸಮಸ್ಯೆ ಕೂಡಾ. ಅತಿ ಮಾತಿನ ಸಮಸ್ಯೆ ಇದು. ಇಡೀ ಸಂಕಲನದ ಸ್ವಾರಸ್ಯಕರ ರಚನೆ ಎಂದರೆ 'ಪ್ರೆಸ್ ರಿಪೋರ್ಟರ್' ಎಂಬ ಕವನ, ಕವಿ ಜೆ. ಕಲೀಮ್ ಬಾಷಾ.

ಇನ್ನು ಉಳಿದ ಕವಿಗಳ ಉತ್ಸಾಹ ಖಂಡಿತ ಮೆಚ್ಚತಕ್ಕದ್ದು.

ದುಂಧುಬಿ : (ಸಂ) ಮಲ್ಲೇಶ್ ಬಾರ್ಕರ್, ಎಸ್. ಎಂ. ಪ್ರಕಾಶ್

ಬಂಡಾಯ ಸಾಹಿತ್ಯ ಚಳುವಳಿಗೆ ಬದ್ಧವಾಗಿ ಬಂದಿರುವ ಕೃತಿ ಇದು. ಇಲ್ಲಿರುವ ಬಹುಮಂದಿಗೆ ಕಾವ್ಯನಿರ್ಮಿತಿಯು ಕಸುಬು ಹೊಸದೇ. ಹೀಗಾಗಿ, ವಸ್ತು ಯಾವುದೇ ಆಗಿರಲಿ, ಕಾಳಜಿ ಯಾವುದೇ ಆಗಿರಲಿ ಇಂಥ ಮೊದಲ ಪ್ರಯತ್ನಗಳಿಗೆ ಕಾಡುವ ಸಮಸ್ಯೆಗಳು ಇಲ್ಲಿಯೂ ಕಾಡಿವೆ. ಅದು ಅಪ್ರಬುದ್ಧತೆ. ರಾಜಕೀಯ ಕಾರ್ಯಕರ್ತನಿಗೂ ಅತ್ಯಂತ ಉನ್ನತ ಹಂತದಲ್ಲಿ ಎಲ್ಲವೂ ಆಯುಧಗಳೇ. ಆತ ಅದನ್ನು ಅತ್ಯಂತ ಎಚ್ಚರಿಕೆಯಿಂದ ರೂಪಿಸುತ್ತಾನೆ. ಕಾವ್ಯದಲ್ಲೂ ಆತ ತಂತ್ರಗಾರನೇ. ಏಕೆಂದರೆ, ತನ್ನ ರಾಜಕೀಯವನ್ನು ವಿರೋಧಿಸುವ ಸಂಸ್ಕೃತಿಯಲ್ಲಿ ಆತ ಮಧ್ಯ ಪ್ರವೇಶಿಸಬೇಕಿರುತ್ತದೆ. ಈ ಮಧ್ಯಪ್ರವೇಶದ ಈಸ್ತೆಟಿಕ್ ಸ್ಟ್ರಾಟಜಿ ಅನಿವಾರ್ಯವಾಗಿ ಸುಭದ್ರವಾಗೇ ಇರಬೇಕಾಗುತ್ತದೆ. ದುರಂತದ ಸಂಗತಿ ಎಂದರೆ, ಇಡೀ ಕೃತಿಯಲ್ಲಿ ಒಬ್ಬ ಕವಿಗೂ ಕೂಡಾ ಈ ರೀತಿಯ ಈಸ್ತೆಟಿಕ್ ಸ್ಟ್ರಾಟಜಿಯ ಕಲ್ಪನೆ ಇಲ್ಲ. ಕೆಟ್ಟ ಮಾತುಗಾರಿಕೆ ಜಟದ ರಚನೆಗಳೇ ಇಲ್ಲಿ ತುಂಬಿವೆ. ಕನ್ನಡ ಕಾವ್ಯ ಪರಂಪರೆಯಲ್ಲಿ ತಾವು ಹೊಸ ದಾರಿ ತುಳಿಯಬೇಕು ಎಂಬ ಸೃಜನಾತ್ಮಕ ಹಠವೇ ಇಲ್ಲಿ ಇಲ್ಲ.

ಯಾವ ಕವನವೂ ನಮ್ಮ ನೆನಪಿನಲ್ಲಿ ಉಳಿಯುವುದಿಲ್ಲ. ಆದರೆ, ನಮ್ಮ ಬುದ್ಧಿಜೀವಿ ವರ್ಗ ಹಳ್ಳಿಯಿಂದ ದಿಳ್ಳಿಯ ತನಕ ರಾಜಕೀಯಕ್ಕೆ ಪ್ರತಿಸ್ಪಂದಿಸುವ ಒಂದು ಆರೋಗ್ಯಕರ ಬೆಳವಣಿಗೆ ಪ್ರಾರಂಭವಾಗಿವೆ ಎಂಬುದಕ್ಕೆ ಈ ಕೃತಿಯೂ ಒಂದು ಉದಾಹರಣೆ. ಈ ಆಕ್ರಾಂತವೆ ಹಲವು ಆಯಾಮಗಳನ್ನು ಗಳಿಸಿಕೊಳ ಬೇಕು. ಅವುಗಳಲ್ಲಿ ಹೊಸ ಶಿಲ್ಪದ ಅನ್ವೇಷಣೆಯೂ ಒಂದು.

ಶ್ರೀಕೃಷ್ಣಕರ್ಣಾಮೃತ: ಸಿ.ಪಿ.ಕೆ.

ಲೀಲಾಶುಕ ರಚಿತ 'ಶ್ರೀಕೃಷ್ಣಕರ್ಣಾಮೃತ'ದ 48 ಪದ್ಯಗಳ ಪದ್ಯಾನುವಾದ ಇದು.

ಸಂಸ್ಕೃತದಿಂದ ಬರುವ ಅನುವಾದಗಳು ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಅನೇಕ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತವೆ, ಅನುವಾದಕ್ಕೆ ಸಂಬಂಧಿಸಿದಂತೆ. ಅವುಗಳಲ್ಲಿ ಮುಖ್ಯವಾದದ್ದು ಎಂದರೆ, ಸಂಸ್ಕೃತ ಮತ್ತು ಕನ್ನಡದ ನಡುವೆ ಇರುವ ಭಾಷಾ ಸಾಮ್ಯತೆ, ಲಯಗಳ ಆತ್ಮೀಯತೆ ಯಾವ ಬಗೆಯದು ಎಂದು. ಬೇಂದ್ರೆಯಂಥವರು ಕನ್ನಡ ಭಾಷೆಯನ್ನೇ ಸಂಸ್ಕೃತದ ಲಯಕ್ಕೆ ಹಿಗ್ಗಿಸುವ ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ಅದರಲ್ಲೂ ಬೇಂದ್ರೆಯವರೇ ಓದಿರುವ ಕೆಲವು ಸಾಲುಗಳನ್ನು ಕೇಳಿದಾಗಂತೂ ಈ ಮಾತು ಸ್ಪಷ್ಟವಾಗುತ್ತದೆ. ಅನುವಾದಗಳ ಸಂದರ್ಭದಲ್ಲಿ ಈ ಪ್ರಶ್ನೆ ಅತ್ಯಂತ ಮುಖ್ಯವಾದದ್ದು. ಮತ್ತು ಅನುವಾದಕ ಈ ಪ್ರಶ್ನೆಗಳನ್ನು ಎದುರಾಗಿಯೇ ಮುಂದೆ ಹೋಗಬೇಕು. ಮತ್ತು ತನ್ನ ಅನುವಾದದಲ್ಲಿ ಸೃಜನಶೀಲವಾಗಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಯತ್ನಿಸಬೇಕು, ಕನ್ನಡದಲ್ಲಿ ಸಾಮಾನ್ಯವಾಗಿ ಈ ರೀತಿಯ ತಾತ್ವಿಕ ಪ್ರಜ್ಞೆ ಅನುವಾದಗಳಲ್ಲಿ ಕಂಡುಬರುವುದಿಲ್ಲ. ಈ ಬಗೆಗೆ ಅನುವಾದಕರು ಕುರುಡಾಗಿರುತ್ತಾರೆ. ಸಿ.ಪಿ.ಕೆ. ಯವರ ಪ್ರಸ್ತುತ ಅನುವಾದ ಕೂಡಾ ಈ ಸಮಸ್ಯೆಯ ಬಗ್ಗೆ ಕುರುಡಾಗಿಯೇ ಇದೆ ಎಂಬುದಕ್ಕೆ ಇಲ್ಲಿರುವ ಪ್ರತಿ ಪದ್ಯವೂ ಸಾಕ್ಷಿ.

ಸಂಸ್ಕೃತ ಮತ್ತು ಕನ್ನಡಗಳ ನಡುವೆ ಆಳವಾದ ಬಾಂಧವ್ಯ, ಅನೇಕ ಸಾಮ್ಯಗಳು ಇವೆಯಾದರೂ ಲಯಲಹರಿಗೆ ಸಂಬಂಧಿಸಿದಾಗ ಮಹತ್ವದ ವ್ಯತ್ಯಾಸಗಳು ಇವೆ. ಮೂಲದ ಭಾಷನ್ನು, ಭಾವನಾಲಯವನ್ನು ಹಿಡಿಯಲು ಪ್ರಯತ್ನಿಸುವಾಗ ಈ ವ್ಯತ್ಯಾಸಗಳ ಅರಿವು ಸೃಜನಾತ್ಮಕತೆಯನ್ನು ಹೆಚ್ಚಿಸುತ್ತದೆ ; ಜೊತೆಗೆ ಸವಾಲುಗಳನ್ನೂ ಸಹ.

ಸಿ.ಪಿ.ಕೆ.ಯವರು ಯಾವುದನ್ನು literalism ಎಂದು ಕರೆಯುತ್ತಾರೊ ಆ ಮಾರ್ಗಕ್ಕೆ ಇಳಿದಿದ್ದಾರೆ. ಆದ್ದರಿಂದ, ಮೂಲದ ಲಯ ಪರಿಣಾಮವನ್ನೂ ಇಲ್ಲಿ ತರುವ ಪ್ರಯತ್ನವನ್ನು ಮಾಡುವುದಿಲ್ಲ. ಕ್ರಿಯಾಪದ, ವಿಭಕ್ತಿ ಪ್ರತ್ಯಯಗಳನ್ನು ಬಳಸಿಕೊಳ್ಳುವ ರೀತಿ ಇದಕ್ಕೆ ಕಾರಣ. ಗದ್ಯದಲ್ಲಿಯಂತೆ ವಾಕ್ಯಗಳನ್ನು ಸಮಗ್ರವಾಗಿಸಿಬಿಡುತ್ತಾರೆ. ಆದ್ದರಿಂದಲೇ, ಮೂಲ ರಚನೆಯಲ್ಲಿ ಇದು ಆಧುನಿಕ ಕನ್ನಡ ಗದ್ಯವೇ ಹೊರತು, ಕವನವಲ್ಲ. ಜೊತೆಗೆ, ಅಲ್ಲಲ್ಲಿ ಕನ್ನಡದಲ್ಲಿ ಕ್ಲೀಷೆಯಾಗಿರುವ ಕಾವ್ಯ ಭಾಷೆಯ ಬಳಕೆ ಸಿ.ಪಿ.ಕೆ.ಯವರ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸಿವೆ. 'ಓರ್ವ' 'ಆಶ್ರಯಿಸುವೆನೈ', 'ಕಾಯ್ಗೆ', 'ಮೋಣ್', 'ಅನುಭವಿಪುದು', 'ಅಲ್ತೆ',

'ಎಮ್ಮ' ಇಂಥವು ಇಡೀ ಪದ್ಯಗಳನ್ನು ಜಡವಾಗಿಸಿಬಿಡುತ್ತವೆ. ಅನುವಾದದಲ್ಲಿ ಒಂದು ಯುಗದ ಸಮಕಾಲೀನ ಭಾಷಾ ಲೋಕ ಎನ್ನುವುದೂ ಕೂಡಾ ಮುಖ್ಯ. ಸಮಗ್ರ ವಾಕ್ಯರಚನೆಯ ಚೌಕಟ್ಟಿನಲ್ಲಿ ಇಂಥವನ್ನೂ ಅವರು ಪೋಣಿಸಿರುವ ರೀತಿ ಹೊಸತನವನ್ನು ಸಂಪೂರ್ಣವಾಗಿ ಹಾಳುಮಾಡಿದೆ.

ಅನುವಾದದ ಬಗೆಗಿನ ತಾತ್ವಿಕ ಚರ್ಚೆಯನ್ನು ಮರೆತು ನೋಡಿದರೆ, ಹೇಗೊ ಯಾವ ರೂಪದಲ್ಲೊ ಅಂತೂ ಒಂದು ಅನ್ಯ ಭಾಷೆಯ ಕೃತಿ ಕನ್ನಡವಲ್ಲಿ ಬಂತಲ್ಲ ಎಂದು ಅನ್ನಿಸಿ ಸಂತೋಷವಾಗುತ್ತದೆ.

ಸುನೀತ : ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ

ಶೇಕ್ಸ್‌ಪಿಯರನ ಸಾನೆಟ್‌ಗಳ ಅನುವಾದ ಪುಸ್ತಕ ರೂಪದಲ್ಲಿ ಕನ್ನಡದಲ್ಲಿ ಬರುತ್ತಿರುವುದು ಇದೇ ಮೊದಲು.

ಪ್ರತಿಯೊಂದು ಜನಾಂಗವೂ ತನ್ನ ಕಾಲಪಟಕ್ಕೆ ತಕ್ಕಹಾಗೆ ಮಹತ್ವದ ಕೃತಿಗಳನ್ನು ಭಾಷಾಂತರಿಸಿಕೊಳ್ಳುತ್ತಾ ಹೋಗುತ್ತದೆ. ಅನುವಾದದ ಯಶಸ್ಸೊಂದನ್ನು ನಿರ್ಧರಿಸುವದು ಈ ಹಿನ್ನೆಲೆಯಲ್ಲಿಯೇ. ಅದು ಆಗಿನ ಸಮಕಾಲೀನ ಕಾವ್ಯ ಪರಂಪರೆಯ ಭಾಷೆಗೆ ಎಂತಹ ಕಾಣಿಕೆಯೊಂದನ್ನು ನೀಡಿದೆ ಎಂಬ ಆಧಾರದ ಮೇಲೆ ಅನುವಾದದ ಕಲಾತ್ಮಕ ಮಹತ್ವ ತಿಳಿಯುತ್ತದೆ. ಈ ಹಿನ್ನೆಲೆಯಿಂದ ನೋಡಿದರೆ ಪ್ರಸ್ತುತ ಸಂಕಲನದ ಯಶಸ್ಸು ಸಂದಿಗ್ಧವಾದದ್ದು. ಇದಕ್ಕೆ ಕಾರಣಗಳು ಅನೇಕವಿವೆ. ಮೊದಲನೆಯ ಕಾರಣವೆಂದರೆ, ಭಟ್ಟರು ಒಂದು ಬಗೆಯ 'ಸಿದ್ಧ ಕಾವ್ಯ ಭಾಷೆಯನ್ನು, ತಮ್ಮ ಅನುವಾದಕ್ಕೆ ಬಳಸಿಕೊಂಡಿದ್ದಾರೆ. ಈ ಬಳಕೆಯಲ್ಲಿ ಸಾಕಷ್ಟು ಪರಿಣತಿಯನ್ನೂ ತೋರುವುದರಿಂದ ಮೇಲುನೋಟಕ್ಕೆ ಈ ಅನುವಾದಗಳು ಸಮರ್ಪಕವಾಗಿಯೂ ತೋರುತ್ತವೆ.

ಆದರೆ, ಈ ಕೃತಿಯ ಅನುವಾದ ರೂಪಗಳ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇರುವುದು ಅನುವಾದದ ಬಗೆಗಿನ ತಾತ್ವಿಕ ನೆಲೆಯಲ್ಲಿ. ಅನುವಾದ ಎನ್ನುವುದು ಸ್ವೀಕೃತ ಭಾಷೆಯಲ್ಲಿನ ಪರಿಚಿತ ನೆಲೆಗಳಿಗೆ ಇಳಿದು ನಿಂತುಬಿಡಬಾರದು. ಅದು ಹೊರಗಿನ ಭಾಷೆಯ, ಕಲಾತ್ಮಕ ಅಭಿವ್ಯಕ್ತಿಯ ಅನನ್ಯತೆಯನ್ನು ಹಿಡಿಯಲು, ಅಂದರೆ ತನ್ನ ಭಾಷೆಯ ಸಾಧ್ಯತೆಯನ್ನು ಹಿಗ್ಗಿಸಲು ಯತ್ನಿಸಬೇಕು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಂಗ್ಲಿಷ್ ಕವನವೊಂದನ್ನು ಕನ್ನಡೀಕರಿಸುವುದು ಅಂಥ ಮಹತ್ವದ ಅನುವಾದ ಎನ್ನಿಸಿಕೊಳ್ಳುವುದಿಲ್ಲ. ಬದಲಾಗಿ, ಕನ್ನಡ ಭಾಷೆಯನ್ನು ಇಂಗ್ಲೀಷೀಕರಿಸುವ, ಅದರ ಅನನ್ಯತೆಯನ್ನು, ಅಪರಿಚಿತತೆಯನ್ನು ಕನ್ನಡದಲ್ಲೂ ಉಳಿಸಿಕೊಳ್ಳುವ ಸಾಹಸದ ಕೆಲಸವಾಗಬೇಕು. ಈ ದೃಷ್ಟಿಯಿಂದ ಭಟ್ಟರ ಅನುವಾದ ನನಗೆ ಅತೃಪ್ತಿಯನ್ನುಂಟುಮಾಡಿತು. ಇಲ್ಲಿಯ ಭಾಷೆ ನಾನು ಹಿಂದೆ ಸೂಚಿಸಿದ

ಹಾಗೆ 'ಕನ್ನಡ ಕಾವ್ಯಭಾಷೆ'ಯದು. ಹೊಸದನ್ನು ಒಗ್ಗಿಸಿಕೊಳ್ಳುವ ಪ್ರಯತ್ನದ ಲಯಗಳೇ ಇಲ್ಲ. ಆದ್ದರಿಂದ, ಒಂದು ಮಟ್ಟದ ಯಶಸ್ಸನ್ನೂ, ಸಾರ್ಥಕತೆಯನ್ನೂ ಇವು ಗಳಿಸಿದ್ದರೂ ಒಟ್ಟಾರೆಯಾಗಿ ಕನ್ನಡದ ವಿಸ್ತರಣೆ ಇಲ್ಲಿ ಸಾಧ್ಯವಾಗಿಲ್ಲ ಎನ್ನಿಸುತ್ತದೆ. ಆದ್ದರಿಂದಲೇ, ಇದನ್ನು ಸಾಂಪ್ರದಾಯಿಕ ಅನುವಾದ ಎಂದು ಕರೆಯಬಹುದು. ಈ ಸಾಂಪ್ರದಾಯಿಕ ಅನುವಾದದ ನೆಲೆಯಿಂದ ನೋಡಿದರೆ ಅನೇಕ ಸಮರ್ಪಕ ಅನುವಾದಗಳು ಇಲ್ಲಿವೆ. ಕೆಲವು ಪದ್ಯಗಳ ಮೂಲ ಸಂಕೀರ್ಣತೆಯನ್ನು ಭಟ್ಟರು ಅರ್ಥಮಾಡಿಕೊಂಡಿಲ್ಲ. [ಉದಾ. 87]. ಇಲ್ಲಿ ಇಡೀಪದ್ಯ Legal and Fiscal ಪ್ರತಿಮಾವಳಿಯಲ್ಲಿ ನಿಂತಿದೆ. ಆದರೆ, ಅನುವಾದದಲ್ಲಿ ಅದು ಹಾರಿಹೋಗಿದೆ. ಹೀಗೆ ಅನೇಕ ಪ್ರತಿಮಾಗುಚ್ಛಗಳು ಅನುವಾದದಲ್ಲಿ ಮಸುಕಾಗಿವೆ.

ಪುಸ್ತಕಕ್ಕೆ ಅಚ್ಚುಕಟ್ಟಾದ ಉಪಯುಕ್ತ ಪ್ರಸ್ತಾವನೆ ಇದ್ದು, ಇದು ಕೃತಿಯ ಮೌಲಿಕತೆಯನ್ನು ಹೆಚ್ಚಿಸಿದೆ.

ಈ ಶತಮಾನದ ನೂರು ಇಂಗ್ಲಿಷ್ ಕವನಗಳು : ರಾಮಚಂದ್ರಶರ್ಮ

ಭಟ್ಟರ ಶೇಕ್ಸ್‌ಪಿಯರ್ ಅನುವಾದವನ್ನು ಸಾಂಪ್ರದಾಯಿಕ ಅನುವಾದ ಎಂದು ಕರೆದಿದ್ದೆ. ಇದನ್ನು ವ್ಯಕ್ತಿವಿಶಿಷ್ಟ ಅನುವಾದ ಎಂದು ಕರೆಯಬಹುದು. ಇದಕ್ಕೆ ಕಾರಣ, ಇಂಗ್ಲಿಷಿನ ಮೂಲ ಕವನರೂಪ ಶರ್ಮರ ವ್ಯಕ್ತಿನಿಷ್ಠತೆಯಲ್ಲಿ ಕರಗಿ ಹೋಗಿದೆ ಎಂಬುದು. ಅನುವಾದದ ಬಗೆಗಿನ ತಾತ್ವಿಕ ಚರ್ಚೆಯಲ್ಲಿ ಇದು ಇನ್ನೊಂದು ಸಮಸ್ಯೆ.

ಹಾಗೆ ನೋಡಿದರೆ, ಇದು ಬಿ.ಎಂ.ಶ್ರೀ. ಅನುವಾದಗಳಿಗಿಂತ ಹೆಚ್ಚಿನ ಪರಿಣತಿ, ಹೆಚ್ಚಿನ ಸಿದ್ಧಿ ಇರುವ ಕೃತಿ. ಆದರೆ, ಶ್ರೀ ಅನುವಾದಗಳಿಗೆ ಒಂದು ವಿಶಿಷ್ಟ ಚಾರಿತ್ರಿಕ ಸನ್ನಿವೇಶ ಸಿದ್ಧವಾಗಿದ್ದು ಅದನ್ನು ಹೊಸ ಸೃಜನಶೀಲ ಎತ್ತರಕ್ಕೆ ಒಯ್ಯಿತು. ಆದರೆ ಶರ್ಮರ ಸಂಕಲನಕ್ಕೆ ಹಾಗಿಲ್ಲ, ಪರಿಸ್ಥಿತಿ.

ಅನುವಾದದ ಬಗೆಗೆ ಶರ್ಮರ ತಾತ್ವಿಕ ನಿಲುವುಗಳು ಒಂದು ದೊಡ್ಡ ವಾಗ್ವಾದವನ್ನು ಸೃಷ್ಟಿಸಬಲ್ಲವು. ನನಗೇ ಹೊಳೆದು ನಾನೇ ಕನ್ನಡದಲ್ಲಿ ಬರೆದಿದ್ದರೆ... ಎಂಬ ನಿಲುವು ಶರ್ಮರದು. ಆ ನಿಲುವಿನಿಂದಾಗಿ ಮೂಲ ಕವಿಗಳ ರೂಪದ ಅನನ್ಯತೆ, ಸಂವೇದನೆಯ ಭಿನ್ನತೆ ಮಾಯವಾಗಿ ಎಲ್ಲವನ್ನೂ ಒಂದೇ ಎರಕದಲ್ಲಿ ಹೊಯ್ದಿಟ್ಟಂತಾಗುತ್ತದೆ. ಹೆಚ್ಚಿನ ಸಿದ್ಧಿ, ಪ್ರಬುದ್ಧತೆಯನ್ನು ಸಾಧಿಸಿದ್ದರೂ, ಈ ಅನುವಾದಗಳ ಏಕರೂಪತೆ ಎನ್ನುವುದು ನಮ್ಮನ್ನು ಅನೇಕ ಗಂಭೀರ ಪ್ರಶ್ನೆಗಳ ಕಡೆಗೆ ಕರೆದೊಯ್ಯುತ್ತದೆ.

ಈ ಕೃತಿಯು ಉದ್ದಕ್ಕೂ ಕವನದ ಆಯ್ಕೆಗಳಲ್ಲಿ ಶರ್ಮರ ಉತ್ತಮ ಅಭಿರುಚಿ ಎದ್ದು ಕಾಣುತ್ತದೆ. ಆದರೆ, ಕೆಲವು ಕಡೆಗಳಲ್ಲಿ ಶರ್ಮರು ಕವನದ ಮೂಲಾರ್ಥವನ್ನು ತಪ್ಪಿಸುವ ಭಿನ್ನ ವ್ಯಾಖ್ಯಾನಕ್ಕೆ ತೊಡಗುತ್ತಾರೆ. ಉದಾ. ಯೇಟ್ಸ್‌ನ 'ಲೀಡಾ ಮತ್ತು ಹಂಸ' ಕವನ. ಮೂಲದಲ್ಲಿ ಈ ಅನುಭವ ಯಾವ ರೀತಿಯದು ಎಂಬ ಬಗ್ಗೆ ಸಂದಿಗ್ಧತೆ ಇದೆ. ಅಥವಾ ನೆಗೆಟಿವ್ ಎಂಬ ಕಡೆಗೇ ಹೆಚ್ಚು ಒತ್ತು ಬೀಳುತ್ತದೆ. ಆದರೆ, ಶರ್ಮರು ಅದನ್ನು ಪೂರ್ಣ ಇತ್ಯಾತ್ಮಕ ಅನುಭವವನ್ನಾಗಿ ಪರಿವರ್ತಿಸಿದ್ದಾರೆ. ಹೀಗೇ ಅನೇಕ ಕಡೆಗೆ.

ಆದರೆ ಒಟ್ಟಾರೆಯಾಗಿ ಶರ್ಮರು ಸಿದ್ಧಿಸಿಕೊಂಡಿರುವ ತಾತ್ವಿಕ ನೆಲೆಯಲ್ಲೇ ಇವನ್ನು ನೋಡಿದರೆ ಈ ಅನುವಾದಗಳ ಯಶಸ್ಸು ಅತ್ಯಂತ ದೊಡ್ಡ ಮಟ್ಟದ್ದು. ಆದ್ದರಿಂದ ಇದನ್ನು ಆಧರಿಸಿ ಅನುವಾದದ ಬಗೆಗೆ ಸೂಕ್ಷ್ಮ ಚರ್ಚೆಗಳನ್ನು ಎತ್ತಲು ಸಾಧ್ಯವಿದೆ. ಇದು ಕೂಡಾ ಕೃತಿಯ ಮಹತ್ವವನ್ನು ಸೂಚಿಸುತ್ತದೆ.

ಸೂರ್ಯನ ಸುತ್ತ : (ಹಿಂದೀಮೂಲ–ಕೇದಾರನಾಥ ಕೋಮಲ್)
ಅನು : ಟಿ. ಜಿ. ಪ್ರಭಾಶಂಕರ ಪ್ರೇಮಿ

ಹಿಂದೀ ಕವಿ ಕೇದಾರನಾಥರ ಈ ಸಂಕಲನದಲ್ಲಿ ಬರೀ ಕಿರು ಕವನಗಳೇ ತುಂಬಿವೆ. ಈ ಕಿರು ಕವನಗಳು ಯಾವಾಗಲೂ ಒಂದು ಸಣ್ಣ ಕಲ್ಪನೆಯ ವಿಲಾಸಕ್ಕೆ ಮಾತ್ರ ಜಾಗ ಕೊಡುವಂಥವು. ಕಾವ್ಯ ಮುಟ್ಟಬಹುದಾದ ಎತ್ತರಗಳಿಗೆ ಇದು ಅವಕಾಶ ಮಾಡಿಕೊಡುವುದಿಲ್ಲ. ಕೆಲವು ಹೊಸ ಕಲ್ಪನೆಯ ಕವನಗಳು ಇಲ್ಲಿವೆ. ಆದರೆ, ರಾಮಾನುಜನ್ ಮತ್ತು ನೀಲು ಕವನಗಳಿಗೆ ಹೋಲಿಸಿದಾಗ ಇವು ಸಪ್ಪೆಯಾಗಿವೆ. ಅನುವಾದ ಅಂಥ ತೊಡಕಿಲ್ಲದೆ ಸರಾಗವಾಗಿದೆ.

ನಾಟಕ

ಕೆ. ವೆಂ. ರಾಜಗೋಪಾಲ

ಈ ಬಾರಿ ವಿಮರ್ಶೆಗೆ ಒಟ್ಟು 28 ಕೃತಿಗಳು (ಐದಾರು ಸಂಗ್ರಹಗಳು ಇವೆ). ದೊರಕಿವೆ. ಒಂದು ವರ್ಷದಲ್ಲಿ ಇಷ್ಟೊಂದು ನಾಟಕಕಾರರು ತೊಡಗಿರುವುದೇ ಹೆಚ್ಚು ! ಇವುಗಳನ್ನು ಮಾಮೂಲು ರೀತಿ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕಗಳೆಂದು ಗುರುತಿಸಬಹುದಾದರೂ ಇಂಥ ವಿಭಜನೆಯು ಸರಿಯೆನಿಸಲಾರದು. ಮಹತ್ವದ ವಿಷಯವೆಂದರೆ ಈಗಿನ ನಾಟಕಕಾರರೆಲ್ಲರೂ ತಮ್ಮ ಸಮಕಾಲೀನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡೇ ನಾಟಕ ರಚನೆಗೆ ತೊಡಗಿದಂತಿದೆ. ಭೂತಕಾಲದಲ್ಲಿಯೂ ವರ್ತಮಾನವನ್ನು ಧ್ವನಿಸುವುದು ಇವರಿಗೆಲ್ಲಾ ಸಾಮಾನ್ಯವಾಗಿದೆಯೆನ್ನಬಹುದು. ಆದುದರಿಂದ ಮಾಮೂಲು ರೀತಿಯ ವಿಭಜನೆಗಿಂತ ಆಕಾಶನಾಟಕಗಳು, ಮೂಕನಾಟಕಗಳು, ಬೀದಿ ನಾಟಕಗಳು ಮತ್ತು ರಂಗ ಪ್ರಯೋಗವ ನಾಟಕಗಳು ಎಂದು ಗುರುತಿಸಲು ಅನುಕೂಲವಾಗಿದೆ. ಇದರಲ್ಲಿ ಪ್ರಾಯೋಗಿಕ ರೀತಿಯೇ ಮುಖ್ಯ ಮಾಧ್ಯಮವನ್ನು ಖಚಿತವಾಗಿ ಸೂಚಿಸುತ್ತದೆ. ಈ ಬಗೆಯಲ್ಲಿ ನಾಟಕಕಾರನ ರಚನೆಯ ಉದ್ದಿಶ್ಯವನ್ನು ವೈಜ್ಞಾನಿಕವಾಗಿ ಒಪ್ಪಿಕೊಂಡಂತಾಗುತ್ತದೆ. ಇಂದಿನ ಸಾಹಿತಿಗಳು ಹಲವು ರೀತಿಯಲ್ಲಿ ವಿಚಾರ ಮಾಡುವುದನ್ನಂತೂ ನಾವು ಕಡೆಗಣಿಸಲಾಗುವುದಿಲ್ಲ. ಈಗಿನ ಆಧುನಿಕ ಪರಿಸರದಲ್ಲಿ ಇಂಥ ಬಗೆಯಂತೂ ತಪ್ಪಾಗುವುದಿಲ್ಲ. ಆದರೂ ಈ ವರ್ಷದ ಪ್ರಯೋಗಗಳಲ್ಲಿ ಅಚ್ಚಾಗದೆ ಇರುವಂಥವೂ ಕಥನರಂಗಭೂಮಿಯ (narrative Theatre) ಪ್ರಯೋಗಗಳೂ ವಿಮರ್ಶೆಗೆ ದೊರಕುತ್ತಿರುವುದಿಲ್ಲ. ಹೀಗೆಯೇ ಮೊದಲ ರಚನೆಯಲ್ಲಿ ಒಂದು ಮಾಧ್ಯಮಕ್ಕಾಗಿಸಿ ನಂತರ ಬೇರೊಂದಕ್ಕೂ ಅಳವಡಿಸಿದಂಥವೂ ಇವೆ. ಉದಾ : ನನ್ನ ಮುದ್ದಿನ ಮುದ್ದಣ ಒಂದು ಇದರಲ್ಲಿನ ಮಾತುಗಾರಿಕೆ ಮತ್ತು ಕ್ರಿಯೆಯನ್ನು ಗಮನಿಸಿದಲ್ಲಿ ಇದನ್ನು ಆಕಾಶ ನಾಟಕವಾಗಿರಲು ರಚಿತವಾದುದು ಎಂಬುದೂ ರಂಗಪ್ರಯೋಗವಾದರೂ ರಂಗಪ್ರಯೋಗದ ಅವಶ್ಯಕತೆಯನ್ನು ಪೂರಯಿಸಲಾರದ್ದೂ ಆಗುತ್ತದೆ. ಆದುದರಿಂದ ಇದನ್ನು ಆಕಾಶ ನಾಟಕವೆಂದೇ ವಿಮರ್ಶಿಸುವುದರಿಂದ ಸಾಹಿತಿಗೆ ಅನ್ಯಾಯವಾಗಲಾರದಷ್ಟೆ. ಹೀಗೆಯೇ 'ಗಾಂಧಾರಿ'ಯಲ್ಲಿ ಪೌರಾಣಿಕ ವಸ್ತುವಿದ್ದು 'ತದ್ರೂಪಿ'ಯಲ್ಲಿ ಕೃತಕ ರಾಜಕೀಯವಿದು ಎರಡರಲ್ಲೂ ಸಾಮಾಜಿಕ ನಿಲುವಿನ ವಿಚಾರವೇ ಬೆಳೆಯುತ್ತದೆ.

ಬೀದಿ ನಾಟಕಗಳು

ಮೊದಲು ಒಂದು ಕತೆಯಾಗಿದ್ದು ಬೀದಿಯ ನಾಟಕವಾದ 'ಧನ್ವಂತರೀ ಚಿಕಿತ್ಸಾ'ದಲ್ಲಿ ಸಮಕಾಲಿಕ ವಿಡಂಬನೆಯೊಂದು ಏಕಕಾಲದಲ್ಲಿ ರಾಜಕೀಯವೂ ಸಾಮಾಜಿಕವೂ ಆಗಿ ಮನ ಸೆಳೆಯುತ್ತದೆ. ಅಂದರೆ ಇವುಗಳೆಲ್ಲಕ್ಕೂ ವರ್ತಮಾನದ ಪ್ರೇಕ್ಷಕನು ಮುಖ್ಯ ಗುರಿಯಾಗಿದ್ದಾನೆಂಬುದನ್ನು ಗಮನಿಸಬೇಕಾಗುತ್ತದೆ. ರಂಗ ಪ್ರಯೋಗಗಳನ್ನು ನೋಡಲಾಗದ ಅಪ್ರೇಕ್ಷಕನಿಗೆ (ಅಥವಾ ಸಾರ್ವಜನಿಕನಿಗೆ) ಕೂಡ ನಡು ಬೀದಿಯಲ್ಲಿ ಹಿಡಿದು ನಿಲ್ಲಿಸಿ ಏನನ್ನೋ ಹೇಳಿ ಸೈಯೆನ್ನಿಸಿಕೊಳ್ಳುವ (ವಿರೋಧ ಕೂಡ ತತ್‌ಕ್ಷಣದಲ್ಲೇ ಮೂಡಬಹುದು) ಉದ್ದಿಶ್ಯದಿಂದ ನಟ, ನಿರ್ದೇಶಕ ಮತ್ತು ನಾಟಕಕಾರನಲ್ಲದೆ ರಂಗ ಪ್ರಯೋಗದ ತಾಂತ್ರಿಕ ವರ್ಗವೂ ಪ್ರಯತ್ನ ಮಾಡಿದುದರ ಫಲವಾಗಿ ಒಂದು ಹೊಸ ಪ್ರಕಾರವೇ ಹುಟ್ಟಿರುವುದಲ್ಲದೆ ಈ ಮೂಲಕ ರಂಗ ಪ್ರಯೋಗವು ತನ್ನ ಸೀಮಿತವನ್ನು ದಾಟಿರುವುದೂ ಗಮನಾರ್ಹ. ಇದರಿಂದ ಕನ್ನಡ ರಂಗ ಭೂಮಿಗೆ ವಿಶೇಷ ಸೇವೆ ಸಂದಂತೆಯೂ ಆದೀತು. ಆದರೆ ಈ 'ಬೀದಿ ನಾಟಕ'ವು ಮುಖ್ಯವಾಗಿ ನಮ್ಮ ರಾಜಕೀಯ ಸಮಕಾಲಿಕತೆಯಿಂದ ಹುಟ್ಟಿ ಅದರ ಮಿತಿಯಲ್ಲಿಯೇ ಉಳಿದುಕೊಂಡರೂ ತೆಗೆದುಹಾಕುವಂಥದೇನಲ್ಲ. ಇಂಥ ರಚನೆಗಳು ಕಾಲ ಮೀರಿದರೆ ಹಣ್ಣೆಲೆಗಳಂತೆ ಜಾರಿ ಮಣ್ಣಾಗಬಹುದು. ಅದೂ ಅಲ್ಲದೆ ಬೀದಿನಾಟಕವೆಂದರೆ (ಹಳೆಯ ಬಯಲಾಟವಲ್ಲ). ಸಾಹಿತ್ಯಕ್ಕಿಂತ ಪ್ರಯೋಗದ ರೀತಿಗೇ ಒತ್ತು ಹೆಚ್ಚಾಗುವಂಥದು. ಇಲ್ಲಿ 'ಬೆಲ್ಚಿ'ಯಂಥ ಪ್ರಚಂಡ ಕೃತಿಗೆ ಕೂಡ ಕಾಲದ ಮುದ್ರೆ ಬಿದ್ದು ಹೋಗುತ್ತದೆ. ನಿಜಕ್ಕೂ ಈ ನಾಟಕವೇ ಕನ್ನಡ ಬೀದಿ ನಾಟಕಗಳ ತಾಯಿಯೆಂದು ಗುರುತಿಸಬಹುದು. ಇದರ ಯಶಸ್ಸಿನಿಂದ ಪ್ರೇರಿತರಾದ ಪ್ರಸಿದ್ಧ ನಿರ್ದೇಶಕರು, ನಾಟಕಕಾರರು ಮತ್ತು ನಟನಟಿಯರು ಈ ಬಗೆಯಲ್ಲಿ ದುಡಿದು ಪ್ರಚಾರಗೊಳಿಸಿದರು. ಇದಕ್ಕಾಗಿ ನಾಟಕಗಳನ್ನು ರಚಿಸುತ್ತಾ ಬಂದಿರುವ ನಾಟಕಕಾರ್ತಿ ವಿಜಯಾ ತಮ್ಮ ಒಂದು ವಿಶಿಷ್ಟ ಸಂಗ್ರಹವನ್ನು ಪ್ರಕಟಿಸಿರುವುದು ಹೆಚ್ಚು 'ಬೆಲ್ಚಿ' ಕೂಡ ಪುಸ್ತಕ ರೂಪದಲ್ಲಿ ಕಾಣದಿರುವಾಗ ಬೀದಿ ನಾಟಕದ ದೌರ್ಬಲ್ಯಗಳು ಏನೇ ಇದ್ದರೂ ಇದನ್ನು ಕನ್ನಡ ರಂಗಭೂಮಿಯ 'ಒಂದು ವಿಸ್ತರಣೆ'ಯನ್ನಾಗಿಸಿ ಸಾಧಿಸಿದ ಹಿರಿಮೆಯು ಈಕೆಗೂ ಸಲ್ಲಬೇಕಾದೀತು.

ಮೂಕ ನಾಟಕಗಳು :

ಜೀವನ ನಿಷ್ಠೆಯ ಪ್ರಗತಿಶೀಲ ಧೋರಣೆಯಿಂದ ಶ್ರೀನಿವಾಸರಾಜು ತಮ್ಮ ಐದು ಮೂಕ ನಾಟಕಗಳನ್ನು ಪ್ರಕಟಿಸಿದ್ದಾರೆ. ಇವುಗಳೆಲ್ಲಾ ರಂಗಭೂಮಿಯಲ್ಲಿ ಪ್ರಯೋಗವಾಗಿವೆ ಮತ್ತು ಈ ಬಗೆಯ ತನ್ನ ಅಭ್ಯಂತರದಲ್ಲಿಯೇ ಪ್ರೇಕ್ಷಕರನ್ನು ವಿಚಾರದಲ್ಲಿ ತೊಡಗಿಸುವಂಥವಾಗಿವೆ. ಐರೋಪ್ಯ ದೇಶಗಳಲ್ಲಿ ಅದರಲ್ಲೂ ಜರ್ಮನಿಯಲ್ಲಿ 'ಮೈಮ್‌ಪ್ಲೇ' ಹೆಸರುವಾಸಿಯಾದ ಎಂದು 'ಮೂಕ ನಾಟಕಗಳು' ತಮ್ಮದೇ

ಆದ ಒಂದು ಸ್ಥಾನಮಾನವನ್ನು ರಂಗಭೂಮಿಯಲ್ಲಿ ಪಡೆದಿವೆ. ಅದು ತಿಳಿದೋ ತಿಳಿಯದೆಯೋ ನಮ್ಮ ಪಂಡಿತರು ಈ ಬಗೆಗೆ ತಾತ್ಸಾರ ಮಾಡಿದ್ದಾರೆ. ಯಾರೇ ಆಗಲಿ ಇಂತಹ ರಚನೆಗಳು ಪ್ರಯೋಗವಾಗಿ ಪುಸ್ತಕ ರೂಪದಲ್ಲಿ ಬಂದಿರುವುದು ಕನ್ನಡದಲ್ಲಿ ಮಾತ್ರವೆಂಬುದೂ, ಇವುಗಳಲ್ಲಿ 'ಫೀನಿಕ್ಸ್' ಎಂಬ ಕೃತಿಯು ದೆಹಲಿಯಲ್ಲಿ ಪ್ರಯೋಗವಾದಾಗ ಅಲ್ಲಿಯ ವಿಮರ್ಶಕರ ಗಮನವನ್ನು ಸೆಳೆಯಿತೆಂಬುದೂ ಮುಖ್ಯ. ಇವುಗಳನ್ನು ಯಾವುದೇ ಯಶಸ್ವೀ ಏಕಾಂಕ ನಾಟಕಗಳಿಗೆ ಹೋಲಿಸಬಹುದು. ಇಲ್ಲಿಯ ವಸ್ತು, ಘಟನೆ, ಮತ್ತು ಸಂದರ್ಭದ ವ್ಯಾಪಕತೆಯು ಖಚಿತವಾಗಿರುವುದ ರಿಂದಲೇ ಇವು ಕಲಾತ್ಮಕವಾಗಿವೆ. ಇದಕ್ಕೆ ಅರಿಸ್ಟಾಟಲನ ಕಾವ್ಯಮೀಮಾಂಸೆಯನ್ನು ಬಳಸಬಹುದು. ಈ ಪ್ರಕಾರವು (ಮೂಕ ನಾಟಕ) ಕನ್ನಡದಲ್ಲಿ ಬೆಳೆಯದೇ ಹೋದರೂ) ಅದಕ್ಕೆ ಇದರ ಸಾಮರ್ಥ್ಯವನ್ನು ಮೀರಿದ ಕಾರಣಗಳೇ ಇರಬಹು ದಾಗಿದೆ. ಇವು ಮೂಕ ಪ್ರಯೋಗಗಳಾದರೂ (ಹಿನ್ನೆಲೆಯ ಸಂಗೀತವಿರಬಹುದು.) ಬದುಕಿನ ಜೀವಂತತನವು ಇವುಗಳಲ್ಲಿ ರಸಾರ್ದ್ರವಾಗುತ್ತದೆ ಮತ್ತು ಪ್ರೇಕ್ಷಕರನ್ನು ವಿಚಾರಕ್ಕೆ ಒಳಪಡಿಸುತ್ತವೆ. ಇವುಗಳು ಒಳ್ಳೆಯ 'ಕಾಮಿಡಿ'ಗಳೇ ಹೊರತು ಪ್ರಹಸನಗಳಲ್ಲ.

ಆಕಾಶ ನಾಟಕಗಳು :

ಮೇಲಿನ ಎರಡೂ ಬಗೆಗಳಿಗಿಂತ ಜನಪ್ರಿಯವಾಗುವಂತೆ ಮಧ್ಯಮ ವರ್ಗದ ಆಸ್ವಾದನೆಗೆ ಎಟಗುವ ಮಾಧ್ಯಮವೊಂದು ಆಕಾಶ ನಾಟಕಗಳಲ್ಲಿದೆ. ಕೇವಲ ಧ್ವನಿಗಳ ಮೂಲಕ ಸಂವೇದನೆಯನ್ನು ಸಾಧಿಸುತ್ತಾ ಮಾತಿನ ಎಲ್ಲಾ ಬಗೆಗಳನ್ನೂ ಇಲ್ಲಿ ಕಾಣುತ್ತೇವಷ್ಟೇ. ಅಲ್ಲದೆ ಸಂಗೀತವನ್ನೂ ಅಳವಡಿಸಿ ಆ ಮೂಲಕ ಮನರಂಜನೆ ಯನ್ನು ಹೆಚ್ಚಿಸಲು ಅನುಕೂಲವಿರುವುದರಿಂದ ಇದೊಂದು ಕಾಲ್ಪನಿಕ ರಂಗ ಭೂಮಿಯಾಗಿ ಉಳಿದು ಬಂದಿದೆ. ಇದರಲ್ಲಿ ಸಾಹಿತ್ಯ ಮತ್ತು ಸಂಗೀತಗಳ ಮಿಲನ ವಾಗಿ ನಾಟಕ ರಚನೆಗಿಂತ ಸುಲಭವೂ ಯಾವುದೇ ಬಗೆಯ ಕಥನವನ್ನು ಅಳವಡಿಬಲ್ಲ ಅನುಕೂಲವೂ ಇದೆ. ಗೀತ ನಾಟಕಗಳಂತೂ ಆಕಾಶ ನಾಟಕಗಳ ಒಂದು ಬಗೆಯಾಗಿಯೇ ಉಳಿದುಕೊಂಡಿವೆ. ಮ. ಗು. ಬಿರಾದಾರರ 'ಜೀವಂತ ಗೋರಿಗಳು' ಮತ್ತು 'ಹದ್ದುಗಳು' ತುಂಬು ಬಿರುಸಿನ ಅಥವಾ ಶಕ್ತಿಯುತ ರಚನೆಗಳಾಗಿವೆ. ಇವುಗಳಲ್ಲಿ ದಲಿತರ ನೋವಿನ ಅನುಭವವು ತೀವ್ರವಾಗಿ ಎಂಥ ಕೇಳುಗನನ್ನೂ ಭಾವುಕತೆಗೆ ಸೆಳೆಯಬಲ್ಲುದಾಗಿವೆ. ಇವುಗಳ ರಚನಾ ವಿಧಾನದಲ್ಲಿ ವಿಶೇಷವಾಗಿ ಫ್ಲ್ಯಾಷ್ ಬ್ಯಾಕ್-ದೃಶ್ಯಗಳು ಬಳಕೆಯಾಗಿವೆ. ಒಂದು ಆರೋಗ್ಯಕರವಾದ ಸಾಮಾ ಜಿಕ ಧೋರಣೆಯೂ ಕೆಲಸ ಮಾಡುವುದರಿಂದ ಗೀತ ನಾಟಕಕ್ಕಿಂತಲೂ ಹೆಚ್ಚು ಯಶಸ್ವಿಯಾಗಿವೆ.

ಆಕಾಶ ನಾಟಕಗಳಲ್ಲಿ ಸಾಹಿತ್ಯದ ಕೈ ಮೇಲಾಗಿರುವ 'ನನ್ನ ಮುದ್ದಿನ ಮುದ್ದಣ' ಎಂಬ ವಸಂತಕವಲಿಯವರ ಕೃತಿ ರಂಗಭೂಮಿಯಲ್ಲೂ ಪ್ರಯೋಗವಾಗಿರುವ ಕೃತಿ. ಕವಿ ಮುದ್ದಣನ ಬಗ್ಗೆ ಕನ್ನಡ ಬರಹಗಾರರೆಲ್ಲರಿಗೂ ವಿಮರ್ಶಕರಲ್ಲಿ ಬಹುಪಾಲಿಗೂ ಮತ್ತು ದಕ್ಷಿಣ ಕನ್ನಡ ವಿದ್ಯಾವಂತರೆಲ್ಲರಿಗೂ ಮೆಚ್ಚಿಕೆಯಾಗುವಂಥ ವಸ್ತುವಾಗಿರುವುದರಿಂದಲೇ ಈ ಕೃತಿ ತನ್ನ ಪ್ರಸಿದ್ಧಿಯನ್ನು ಸಾಧಿಸಿಕೊಂಡಿದೆ. ಅಂದರೆ ಇಂತಹ ಪೂರ್ವಭಾವಿ ಪ್ರೇರಣೆಯಿಂದ ಈ ರೂಪಕವು ಜನಪ್ರಿಯತೆಯನ್ನು ಗಳಿಸಿದೆ. ಸಾಮಾನ್ಯವಾಗಿ ವಸ್ತು ಹೊಸದಾಗಿದ್ದರೆ ಇಂಥ ಅನುಕೂಲಗಳಿರುವುದೇ ಇಲ್ಲ. ಅವು ಕ್ರಮೇಣ ಸಂಗ್ರಹವಾಗಿ ಅನಂತರವೇ ಅದರ ಕರ್ತೃವಿಗೆ ಭೇಷಗಿರಿ ದೊರಕುವುದು. ಕವಲಿಯವರು ಮುದ್ದಣ ಕವಿಯ ವ್ಯಕ್ತಿತ್ವವು ಕರುಣಾಜನಕವಾಗಿ ಒಡಮೂಡುವಂತೆ ಮಾಡಲು ಮಾತ್ರ ಯಶಸ್ವಿಯಾಗಿದ್ದಾರೆ. ರಂಗಪ್ರಯೋಗದಲ್ಲಿ ಇದರ ಕ್ರಿಯಾಂಶವು ಕಡಿಮೆಯಾಗುವುದರಿಂದ ಆಕಾಶ ನಾಟಕವಾಗಿಯೇ, ಇದು ಹೆಚ್ಚು ಗೆಲುವಾಗುತ್ತದೆ. ಇನ್ನು ಬರಿಯ ಆಕಾಶ ನಾಟಕಗಳಾಗಿಯೇ ಗಮನ ಸೆಳೆಯುವ ಕೃತಿಗಳಲ್ಲಿ ಗೌರೀಶ ಕಾಯ್ಕಿಣಿಯವರ ಕೃತಿ 'ಆಕಾಶನಾಟಕಗಳು' ಎಂಬುದಿದೆ. ಇವುಗಳ ಚೌಕಟ್ಟು ಏಕಾಂಕಗಳಂತೆ ಇರುವ 'ಅಗ್ನಿಕನ್ಯಾ ದ್ರೌಪದಿ' ಮತ್ತು 'ಮನೆ ತುಂಬ ಮಕ್ಕಳು'. ಗೆಲುವಾದ ಕೃತಿಗಳು-ಕಾಯ್ಕಿಣಿಯವರು ಮಾತುಬಳಸುವ ಮಿತಿಯಲ್ಲಿ ನಿಸ್ಸೀಮರು. ಇಲ್ಲಿ ಮಾತಿನ ಓಟವೇ ಈ ರೂಪಕಗಳ ಮುಕ್ಕಾಲುಪಾಲು ಗೆಲುವನ್ನ ಸಾಧಿಸುತ್ತದೆ. ಮನೆ ತುಂಬ ಮಕ್ಕಳು ಒಂದು ದುರ್ಬಲ ವಿಚಾರ ಮತ್ತು ಪ್ರಚಾರಕ್ಕಾಗಿ ಬಳಕೆಯಾಗುವ ಅಜೀವ ವಸ್ತು. ಆದರೆ ಕಾಯ್ಕಿಣಿಯವರ ಹಾಸ್ಯದ ಸುರುಳಿಗಳಲ್ಲಿ ಪ್ರಚಾರಕ್ಕೂ ಜೀವ ಬಂದಿದೆ ಮತ್ತು ಪ್ರಯೋಜನಕಾರಿಯಾಗಿದೆ. ಇದಂತೂ ಒಂದು ಶುದ್ಧ ಆಕಾಶ ನಾಟಕವಾಗಿದೆ ಎಂಬುದನ್ನು ಮರೆಯಬಾರದು.

ಉಳಿದ ಇಬ್ಬರ ಕೃತಿಗಳಲ್ಲಿ ಕೆರಳ್ಳಿ ಗುರುನಾಥ ರೆಡ್ಡಿಯವರ ರಚನೆಗಳು ಮಕ್ಕಳಿಗಾಗಿ ರಚಿತವಾದುವು. ಹೀಗೆಯೇ ಬಾಪೂಗೌಡ ಪಾಟೀಲರ 'ಸತ್ಯದ ಸಂಗತಿ.' ಎಂಬುದು ಒಂದು 'ಅಲಿಗೊರಿ'ಯಾಗಿದೆ. ಸತ್ಯಕ್ಕೆ ಎದುರಾಗುವ ಸುಳ್ಳು, ಲಂಚ, ಮೋಸ, ಬಲಾತ್ಕಾರ–ಇವುಗಳನ್ನು ಮೂರ್ತಗೊಳಿಸುವಂತೆ ಸಂಬಂಧವನ್ನು ಹೆಣೆದು ರಚಿಸಲಾಗಿದೆ. ಧ್ವನಿಗಳನ್ನು ಬಳಸುವುದರಲ್ಲಿಯೂ ಅತಿರೇಕವಾಗುವುದುಂಟು. ಇಂಥವು ಒಮ್ಮೆಯಾದರೂ ಪ್ರಯೋಗವಾಗುವುದೇ ಹೆಚ್ಚಳಿಕೆ.

ಉಳಿದ 22 ಗ್ರಂಥಗಳಲ್ಲಿ ಆರು ದೊಡ್ಡ ನಾಟಕಗಳು ಮತ್ತು ಒಂದು ವಿಮರ್ಶೆಗೆ ಸಮವಾಗಿ ನಿಲ್ಲಬಲ್ಲವು. ಇವುಗಳ ಪ್ರದರ್ಶನವೂ ಹಾಗೆಯೇ. ಮೊದಲಿಗೆ ದಿವಂಗತ ಶ್ರೀರಂಗರ 'ದಾರಿ ಯಾವುದಯ್ಯಾ ವೈಕುಂಠಕೆ' ?-ಒಂದು ವಿಚಾರಪ್ರಧಾನವಾದ ನಾಟಕ. ಇದರಲ್ಲಿ ಪ್ರಪಂಚದ ಎರಡು ದೊಡ್ಡ ರಾಷ್ಟ್ರಗಳ ಧೋರಣೆಗಳನ್ನು

ಕುರಿತು ವಿಡಂಬನಗೊಳಿಸುವ ವಿಚಾರವಿದೆ. ಇವೆರಡೂ ರಾಷ್ಟ್ರಗಳನ್ನು ಅವರವರ ಐ.ಸಿ.ಬಿ.ಎಂ. ಪಾತ್ರಗಳನ್ನಾಗಿ ಮಾಡಿ ವಿಚಾರವನ್ನು ಬೆಳೆಸುತ್ತಾ ಮಾನವ (ನಮ್ಮ) ಪ್ರಗತಿಯು ಶಿಲಾಯುಗದ ಸ್ಥಿತಿಗತಿಗೆ ಹೋಲುತ್ತದೆ–ಎಂದು ಸಮರ್ಥಿಸುವುದಾಗಿದೆ. ಶ್ರೀರಂಗರ ಈ ಬಗೆಯು ಅವರದೇ ವೈಶಿಷ್ಟ್ಯವೂ ಆಗಿದೆ. ಆದರೆ ಕೇವಲ ಬುದ್ಧಿ ಜೀವಿಗಳನ್ನು ಎಚ್ಚರಿಸುವಂತೆ ದೃಷ್ಟಾಂತಗಳನ್ನು ಜೋಡಿಸುತ್ತಾ ಪ್ರೇಕ್ಷಕರನ್ನು ನಗಿಸುತ್ತಾ ಬೆಳೆಯುವುದು ಶ್ರೀರಂಗರ ಬೌದ್ಧಿಕ ಸಾಮರ್ಥ್ಯವನ್ನು ತೋರಿಸುತ್ತದೆಯಾದರೂ ಈ ಕೃತಿಯು ಶ್ರೇಷ್ಠ ನಾಟಕವೆಂದಾಗಲಿ ಶ್ರೀರಂಗರ ಇತರ ಕೃತಿಗಳಿಗಿಂತ. ಶ್ರೇಷ್ಠವಾದುದೆಂದಾಗಲಿ ಆಗಲಾರದು. 1965ರ ವೇಳೆಗೆ ರಚಿತವಾಗಿ ಪ್ರಪಂಚದ ನ್ಯೂಕ್ಲಿಯರ್ ಪ್ರಯೋಗಗಳೂ ಹೊಸದಾಗಿದ್ದವು. ಕನ್ನಡದಲ್ಲಿ ಆಧುನಿಕ ನಾಟಕಗಳು-ಇನ್ನೂ ಪ್ರಾರಂಭದ ದಿಸೆಯಲ್ಲಿದ್ದಾಗ ಇದರ ಪ್ರಯೋಗವು ನಮ್ಮ ಪ್ರೇಕ್ಷಕರಿಗಿಂತಲೂ ಪತ್ರಿಕಾ ಪ್ರತಿನಿಧಿಗಳನ್ನು ಆಕರ್ಷಿಸಿರಬಹುದಷ್ಟೆ. ಏಕೆಂದರೆ ಇದರಲ್ಲಿ ಅಂದಿನ ಜಾಗತಿಕ ರಾಜಕಾರಣವನ್ನು ಟೀಕಿಸಿದಂಥಾಗಿದ್ದುಂಟು. ಮುಂದೆ ಪ್ರಸನ್ನರ 'ತದ್ರೂಪಿ' ಮತ್ತು ರಾಮಚಂದ್ರದೇವರ 'ರಥಮುಸಲ'-ಎಂಬ ಎರಡು ಕೃತಿಗಳನ್ನು ಪರಿಶೀಲಿಸಬಹುದು. ಇವೆರಡರ ರಚನಾ ಉದ್ದೇಶ್ಯವೂ ಒಂದೇ ಆಗಿದೆ. ಇವೆರಡರಲ್ಲೂ ಸರ್ವಾಧಿಕಾರವನ್ನು ಅಲ್ಲಗಳೆಯುವುದೇ ಆಗಿದೆ. 'ತದ್ರೂಪಿ, ಯನ್ನು ನೋಡಿದಾಗ ಹಿಟ್ಲರನನ್ನು ಕುರಿತೇ ಇದು ರಚಿತವಾಗಿರಬೇಕೆನ್ನಿಸುತ್ತದೆ. ಎರಡನೇ ಮಹಾ ಯುದ್ಧಕ್ಕೆ ಕಾರಣಕರ್ತನಾದ ಈ ವ್ಯಕ್ತಿ–ರಾಕ್ಷಸ ಪಾತ್ರ-ತೀರಿಕೊಂಡ 40 ವರ್ಷಗಳ ನಂತರವೂ ಭಯಂಕರವಾಗಿಯೇ ಉಳಿದಿವೆ. ಇವನ್ನು ತೋರಿಸುವುದಕ್ಕಾಗಿಯೇ ಈ ಕೃತಿಯು ರಚನೆಯಾಗಿದೆ. ಇದರಲ್ಲಿ ಎಂದೆಂದಿಗೂ ಒಬ್ಬ ಮಹಾ ಸರ್ವಾಧಿಕಾರಿಯ ಬಗ್ಗೆ ಪ್ರೇಕ್ಷಕರು ವಿಚಾರ ಮಾಡುವಂತೆಯೂ ಆಗುತ್ತದೆ. ಪ್ರಸನ್ನರಿಗೆ ತಮ್ಮ ನಾಟಕಗಳನ್ನೂ ಅಚ್ಚುಕಟ್ಟಾಗಿ ಪ್ರದರ್ಶಿಸುವ ಹವ್ಯಾಸವೂ ಇದೆಯಷ್ಟೆ. ಆದುದರಿಂದ ಇದರಲ್ಲಿ ರಂಗಭೂಮಿಗೆ ಮೀರಿದುದೇನೂ ಸೇರಿರುವುದಿಲ್ಲ. ಆದರೆ ಪ್ರಸನ್ನರ ಈವರೆಗಿನ ಮೂರು ನಾಟಕಗಳು ಮೊದಲಿಗೆ ಸಿನಿಮಾ ಮತ್ತು ಸಾಹಿತ್ಯ ರೂಪಗಳಲ್ಲಿ ಪ್ರಸಿದ್ಧಿಯನ್ನು ಪಡೆದಂಥ ಬೇರೆಯವರ ಕೃತಿಗಳೇ ಆಗಿವೆ. ಮೊದಲಿಗೆ ಮಣಿಕೌಲರ ದುವಿಧಾ (ಚಿತ್ರ), ಸತ್ಯಜಿತ್‌ರಾಯ್ ಅವರ ಶತರಂಜ ಕೇ ಕಿಲಾಡಿ (ಚಿತ್ರ) (ಇವರು ನಿರ್ದೇಶಿಸಿದ 'ಮದರ್' ಬ್ರೆಕ್ಟನ ಅನುವಾದ ಮತ್ತು ಗೆಲಿಲಿಯೋಗಾಲಿಲಿ ಕೂಡ ಹಾಗೆಯೇ). ಪ್ರಸನ್ನರಿಗೆ ಸ್ಫೂರ್ತಿ ನೀಡಿದ 'ತದ್ರೂಪಿ'ಯ ಮೂಲವು ಚಾರ್ಲಿಚಾಪ್ಲಿನ್ನರ 'ದಿ ಗ್ರೇಟ್ ಡಿಕ್ಟೇಟರ್' ಎಂಬ ಚಿತ್ರ. ಇದರ ಜೊತೆಗೆ ಮಾರ್ಕ್ವೆಸ್ಟರ ಕಾದಂಬರಿಯನ್ನೂ ಹೆಸರಿಸಿದ್ದಾರೆ. ಜೊತೆಗೆ ಕುರೋಸಾವಾನ ಇತ್ತೀಚಿನ ಚಿತ್ರ-ಎಂದು ನಾಟಕಕಾರರೇ ಹೇಳಿಕೊಂಡಿದ್ದಾರೆ. ಇವರ ಪ್ರೇರಣಾಮಾಲೆ ಬಹಳ ಮಹತ್ವದ್ದೆಂಬುದೇನೋ ನಿಜ. ತಮ್ಮ ಕೃತಿಗೆ 'ತದ್ರೂಪಿ' ಎಂಬ ಹೆಸರನ್ನು ಇರಿಸಿದ್ದಾರೆ. ವಾಸ್ತವವಾಗಿ ಈ ನಾಟಕದ

ನಾಯಕ ಒಬ್ಬ ಸರ್ವಾಧಿಕಾರಿ ಮತ್ತು ಅವನ ಪ್ರತಿಪಾತ್ರದ ದುರ್ಗತಿ. ಇದರಲ್ಲಿ ಒಬ್ಬ ಸರ್ವಾಧಿಕಾರಿ(ನಾಯಕ) ಯ ಸರ್ವಾಂಗೀಣ ಗೇಲಿಯೂ ಅದರ ಅಸಹ್ಯ ಸ್ಥಿತಿಯೂ ಆಗಿದೆಯಷ್ಟೆ. ಇಂತಹ ರಚನೆಗೆ ಎರಡು ಜಗತ್ಪ್ರಸಿದ್ಧ ಚಿತ್ರಗಳು ಆಧಾರವಾಗಿವೆಯೆಂಬುದಂತೂ ನಿರ್ವಿವಾದ.

'ತದ್ರೂಪಿ'ಯ ಸಂಭಾಷಣೆಗಳು ಅಪರೂಪಕ್ಕೆ ಮಾತ್ರ ವ್ಯಂಗ್ಯವಾಗುವುದನ್ನೂ ಸಾಮಾನ್ಯವಾಗಿ ನಾಟಕ ಸಾಹಿತ್ಯದ ಕಾವ್ಯ ಸತ್ವವಿಲ್ಲದಿರುವುದನ್ನೂ ಗಮನಿಸಬಹುದು. ಆದರೆ ದೃಶ್ಯ ಸಾಮರ್ಥ್ಯವೊಂದೇ ಮೇಲುಗೈಯಾಗಿ ಇಡೀ ನಾಟಕದ ಧ್ವನಿಯು ಸರಳವಾಗುತ್ತದೆ. ಅಥವಾ ಪ್ರೇಕ್ಷಕರಿಗೆ ಇದರ ಸಾಹಿತ್ಯದ ಕಡೆಗೆ ಹೆಚ್ಚು ಗಮನ ಕೊಡಬೇಕಾಗುವುದಿಲ್ಲ ಎನ್ನಬಹುದು. ಪ್ರಸನ್ನರ ಪ್ರಯೋಗವೇ 'ತದ್ರೂಪಿ'ಯ ಹಿರಿಮೆಯೂ ಆಗುತ್ತಿದೆ. ಆದುದರಿಂದ ಈ ಕೃತಿಯು ಒಂದು ಒಳ್ಳೆಯ ಅನುವಾದದ ಮಟ್ಟದಲ್ಲಿ ರಚಿತವಾಗಿದೆ ಎನ್ನದೆ ವಿಧಿಯಿಲ್ಲ. ಇಲ್ಲವೇ ಇದೊಂದು ಶ್ರೇಷ್ಠ ಕಾದಂಬರಿಯ ರೂಪಾಂತರವಾಗಿದೆ.

ರಥಮುಸಲದ ಉದ್ದಿಶ್ಯಕೂಡ ಸರ್ವಾಧಿಕಾರವನ್ನು, ಅದರ ಭಯಾನಕತೆ ಸಹಿತ ಬಯಲಿಗೆಳೆಯುವುದೇ ಆಗಿದೆ. ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಒದಗಿದ್ದಾಗ ಅರಿವಾದ ಅನುಭವಗಳು ಸಹಜವಾಗಿ ಈ ನಾಟಕಕಾರರನ್ನು ಎಚ್ಚರಿಸಿದ ಫಲವಾಗಿ ಈ ನಾಟಕವನ್ನು ರಚಿಸಿದ್ದಾರೆಂದೂ ರಂಗಪ್ರಯೋಗಕ್ಕಿಂತ ಸಾಹಿತ್ಯಕ ಸ್ಥಿತಿಗತಿಯೇ ಇದರ ಮೇಲುಗೈಯಂತೂ ಹೇಳಬಹುದು. ಇವರ ವಸ್ತುವು ನಮ್ಮ ಇತಿಹಾಸದಲ್ಲಿ ಕ್ರಿ ಪೂ. ಐದನೇ ಶತಮಾನಕ್ಕೆ ಸೇರಿದ್ದು, ಈಗ ನಾವು ಕಾಣುತ್ತಿರುವ ಯುದ್ಧಗಳಲ್ಲಿ ಟ್ಯಾಂಕ್ ಹೇಗೋ ಹಾಗೆ ಭಯಂಕರವಾದ ಒಂದು ಆಯುಧ 'ರಥಮುಸಲ' ಎಂಬುದು ಶೋಧಿಸಿರುವುದೇ ಹೆಚ್ಚು ಬೆಲೆಯುಳ್ಳ ಆಧಾರವಾಗಿದೆ. ಅಜಾತ ಶತ್ರುವು ಇಂಥ ಆಯುಧದ 'ಕಡತ' (ಯಾ 'ಫ್ಯಲ್')ವನ್ನು ಪಡೆದುಕೊಳ್ಳಲು ಹೂಡಿದ ರಾಜತಂತ್ರಕ್ಕೆ ಕೌಟಿಲ್ಯನ ರಾಜತಂತ್ರದ ಜಾಣತನವೂ ಅನ್ವಯವಾಗಿರುತ್ತದೆ. ಅದರ ಬಲದಿಂದ ಅಜಾತಶತ್ರುವು ಭಯಂಕರ (ರಾಕ್ಷಸ) ಸ್ವರೂಪವನ್ನು ತಾಳಿ ನಿಲ್ಲವುದನ್ನೂ ಈ ನಾಟಕದಲ್ಲಿ ಮುಖ್ಯಾಂಶವಾಗಿ ಕಾಣುತ್ತೇವೆ. ಇಂಥ ಪ್ರಯತ್ನದಲ್ಲಿ ಎರವಲಿನ ಪ್ರಶ್ನೆಯೇ ಬರುವಂತಿಲ್ಲ. ಆದುದರಿಂದ ಇದೊಂದು 'ಅಸಲಿ ಕೃತಿ'ಯಾಗಿದೆ. ರಾಮಚಂದ್ರದೇವ ತಮ್ಮ ರಚನೆಯಲ್ಲಿ ತೊಡಗಿದಾಗ ಷೇಕ್ಸ್‌ಪಿಯರ್‌ನಿಂದ ಕಲಿತಿರಬಹುದಾದರೂ ಪ್ರಸನ್ನರಂತೆ ದೃಶ್ಯವನ್ನು ಕಾಪಿ ಮಾಡಿದಂತೆ ಎಲ್ಲಿಯೂ ಆಗಿರುವುದಿಲ್ಲ. ನಮ್ಮ ದೇಶದ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಕೃತಿಯನ್ನು ಗಮನಿಸಿದರೆ ಇದು ಪ್ರೇಕ್ಷಕರನ್ನು ಹಲವು ರೀತಿಯಲ್ಲಿ ವಿಚಾರಕ್ಕೆ ಒಳಪಡಿಸಬಲ್ಲ ಸಾಮರ್ಥ್ಯವು ಅರಿವಾಗುತ್ತದೆ. ಇಲ್ಲಿ ನಾಟಕಕಾರರ

ಮಹತ್ವಾಕಾಂಕ್ಷೆಯೂ ಕಂಡು ಬರುತ್ತದೆ. ಉದಾ : ಇದರ ಯಾವುದೇ ಪಾತ್ರವಾಗಲಿ ತನ್ನನ್ನು ಸಂಪೂರ್ಣವಾಗಿ ಬಿಚ್ಚಿಕೊಳ್ಳದೇ ನಾಟಕಕ್ರಿಯೆಯು ತೀವ್ರತೆಯಾಗುತ್ತದೆ. ಇದರ ನಾಯಕನಾದ ಅಜಾತಶತ್ರುವಿನ ಪಾತ್ರ ಕೂಡ ಇದಕ್ಕೆ ಹೊರತಾಗುವುದಿಲ್ಲ. ಆದರೆ ಅವನ ನಡವಳಿಕೆಯನ್ನು ಹುಡುಕಿದರೆ ಎಲ್ಲವೂ ಸುಸಂಬದ್ಧವಾಗಿರುವುದು ಕಂಡುಬರುತ್ತದೆ, ವಸ್ಯಕಾರನ ಪಾತ್ರವೂ ಹಾಗೆಯೇ—

ಈ ನಾಟಕದ ಕಥಾನಕದಲ್ಲಿ ಒಂದು 'ಪ್ಯಾರಬಲ್' ಇರುವಂತಿದೆ. ಇದರ ಅವಯುವಗಳು ಹಾಗೆ ಹೊಂದಿಕೊಂಡಿವೆ. –ಚಿನ್ನವನ್ನು ಗೋಪ್ಯವಾಗಿ ಒಂದು ದ್ವೀಪಕ್ಕೆ ಸಾಗಿಸಿದ ವಸ್ಯಕಾರನೇ ಅದರ ಗೋಪ್ಯವನ್ನು ಅರಿಯಲಾಗುವುದಿಲ್ಲ. ಅದು ಪಿಂಗಳೀಕನಿಗೆ ಸಲ್ಲುತ್ತದೆ. ಕುತಂತ್ರದಲ್ಲಿ ಯಶಸ್ವಿಯಾಗುವ ವಸ್ಯಕಾರ (ಅವನ ಪತ್ನಿ ಕೂಡ) ವಂಚಿತನಾಗುತ್ತಾನೆ. ಅದು ಸ್ವಾತಂತ್ರ್ಯವನ್ನು ಸಂಪಾದಿಸಲು ಸಾಹಸಿಯಾದ ಪಿಂಗಳೀಕನಿಗೇ ಅದು ಸುಲಭವಾಗಿಸಿಗುತ್ತದೆ– ಆದುದರಿಂದ ಇದನ್ನು ಸ್ವಾತಂತ್ರ್ಯದ ಪರವಾದ parable ಎಂದೂ ಸರ್ವಾಧಿಕಾರಿಗೂ ಅದರ ಅಂಶವುಳ್ಳವರಿಗೂ ವಿರುದ್ಧವಾಗಿ, ನೀತಿಯುತವಾಗಿ, ನಿಲ್ಲುವುದೆಂಬುದನ್ನೂ ಗಮನಿಸಬಹುದು. ಆದರೂ ಇದು ಗಿರೀಶಕಾರ್ನಾಡರ ತುಘಲಕ್ ನಾಟಕವನ್ನು ನೆನಪಿಗೆ ತರುವ ರಚನೆಯಾಗಿದೆ. (ಆದರೆ ಕಾಪೀ ಮಾಡಿದಂತೇನೂ ಇಲ್ಲ). ಕೇವಲ ಕರ್ನಾಟಕ ಪ್ರಭಾವವಿದೆಯೆನ್ನಬಹುದು. ಇದು ರಾಮಚಂದ್ರ ದೇವರ ಮೊದಲ ನಾಟಕವೂ ಒಂದು ಶ್ರೇಷ್ಠ ಮಟ್ಟದ ಕೃತಿಯೆಂದೂ ಹೇಳಬಹುದು.

ರಾಮಚಂದ್ರದೇವರ ನಾಟಕ ಕಲೆಯಲ್ಲಿ 'ಬಿಕ್ಕಟ್ಟು' ಸಹಜವಾಗಿದೆ. ಇವರ ಮುಂದಿನ ಕೃತಿಗಳಲ್ಲಿ ಇದು ಚೆನ್ನಾಗಿ ವಿಕಾಸವಾಗಬಲ್ಲುದೆಂದೂ ಹೇಳಬಹುದು. ಪ್ರಸನ್ನರ 'ತದ್ರೂಪಿ'ಯಲ್ಲಿ ಇಂಥ ವಿಕಾಸವು ಪರಿಪೂರ್ಣವಾಗಿರುವುದನ್ನೂ ಇಲ್ಲಿ ಹೋಲಿಕೆಗೆ ನೆನೆಯಬಹುದು.

'ಚಂದ್ರಗುಪ್ತ' ಕೀರ್ತಿನಾಥ ಕುರ್ತಕೋಟಿಯವರ ನಾಟಕ. ವಿಶಾಖದತ್ತನ 'ಮುದ್ರಾರಾಕ್ಷಸ'–ನಾಟಕಕ್ಕೆ ಇತಿಹಾಸಿಕ ಮೆರುಗು ಬಿದ್ದಿದೆಯಷ್ಟೆ. ನಮ್ಮ ಇತಿಹಾಸದ ಒಂದು ವಿಶೇಷ ಘಟನೆಯನ್ನು ದಾಖಲು ಮಾಡುವಲ್ಲಿ ಅದು ಸಮರ್ಥವಾಗಿ ಉಳಿದುಕೊಂಡು ಬಂದಿದೆ. ಆದರೂ ಇದರಲ್ಲಿ 'ರೊಮ್ಯಾಂಟಿಕ್' ಆದ ಆಸಕ್ತಿಯು ಇಂದಿನ ರಾಜಕೀಯ ಸಂದರ್ಭದಲ್ಲಿ ಕಂಡುಬರುವುದಿಲ್ಲ. ಬಹುಶಃ ಈ ಕಾರಣಕ್ಕಾಗಿಯೇ ನಮ್ಮ ನಿರ್ದೇಶಕರು ಇದರ ಬಗ್ಗೆ ಕಣ್ಣು ಹಾಯಿಸಿರುವುದಿಲ್ಲ. ನಾಯಕಿಯೇ ಇಲ್ಲದಂತೆ ರಚಿತವಾಗಿರುವ ಈ ನಾಟಕದ ಬಗ್ಗೆ ಆಕರ್ಷಣೆಯನ್ನುಂಟುಮಾಡಲು ಕೀರ್ತಿನಾಥ ಕುರ್ತಕೋಟಿಯವರು 'ಚಂದ್ರಗುಪ್ತ' ಎಂದು ರಚಿಸಿದ್ದಾರೆ.

ಒಂದು ರೀತಿಯಲ್ಲಿ ಇದು ಒಂದು ಕಾಲಕ್ಕೆ ತಕ್ಕಂತೆ ಹುಟ್ಟಿದ ಮಾರ್ಪಾಟು ಅಥವಾ ಪುನರ್ನಿರ್ಮಾಣ-ಎನ್ನಬಹುದು. ರಂಗಭೂಮಿಯಲ್ಲಿ ಇಂತಹ ಪ್ರಯತ್ನವು ನ್ಯಾಯವಾಗಿಯೇ ಒದಗಿ ಬರುತ್ತದೆ. ಚಂದ್ರಗುಪ್ತನ ಪ್ರಣಯ ಪ್ರಸಂಗವೊಂದು ಒದಗಿಬಂದಿರುವಂತೆ ರಚಿತವಾಗಿರುವ ಈ ನಾಟಕದಲ್ಲಿ 'ಮುದ್ರಾ ರಾಕ್ಷಸ'ದ ಸತ್ವಕ್ಕೆ ಯಾವುದೇ ಕೊರತೆಯುಂಟಾಗಿರುವುದಿಲ್ಲ. ಹೀಗೆ ದರ್ಶನೀಯವೂ ಆಗಿರುವ ರಚನೆಯನ್ನು ನಮ್ಮ ನಿರ್ದೇಶಕರು ಗಮನಿಸಬೇಕಾದ ಅಗತ್ಯವಿದೆ. ಇಂಥ ಪುನರ್ನಿರ್ಮಾಣವು ತುಂಬ ಮೆಚ್ಚತಕ್ಕ ಪ್ರಯತ್ನವೂ ಆಗಿದೆ. ಗೂಢಚಾರರ ಪ್ರವೇಶದಿಂದ ಮೊದಲಾಗುವ ಈ ನಾಟಕವು ಅವರಿಂದಲೇ ಮುಕ್ತಾಯವನ್ನು ಪಡೆಯುತ್ತದೆ. ಅಲ್ಲದೆ ಆಕರ್ಷಣೀಯವಾದ ಪ್ರಯೋಗ ಸಾಧ್ಯತೆಗಳನ್ನೆಲ್ಲಾ ಪಡೆದಿದೆ.

ಸಮಕಾಲಿಕವಾದ ಸಾಮಾಜಿಕ ಘರ್ಷಣೆಯ ಪ್ರಕಾಶಕ್ಕೆ ಲಂಕೇಶರ 'ಸಂಕ್ರಾಂತಿ' ಒಂದು ಸಮರ್ಥ ಕೃತಿಯಾಗಿದೆಯಷ್ಟೆ. ಇಂತಹ ಉದ್ದೇಶದಿಂದ ಈಚೆಗೆ ನಾಟಕ ರಚನೆಗೆ ತೊಡಗಿದವರಲ್ಲಿ ಮೇಘಮಿತ್ರರು ಒಬ್ಬರು. ಇವರ ಮೊದಲ ಕೃತಿ 'ಎಚ್ಚತ್ತ ಏಕಲವ್ಯ'. ಎರಡನೆಯ ಕೃತಿಯೇ 'ದಾಟುವವರು'. ಇದು ತನ್ನ ಹೆಸರಿನಲ್ಲಿಯೇ ವ್ಯಂಗ್ಯವನ್ನು ಸೂಚಿಸುತ್ತದೆ. ಇದನ್ನು ಅವರು 'ಒಂದು ವೈಜ್ಞಾನಿಕ ಮನೋಧರ್ಮದ ನಾಟಕ. ಇದರಲ್ಲಿ ವರ್ಣ ಹೋರಾಟದ ನಿರರ್ಥಕತೆಯನ್ನಷ್ಟೇ ಅಲ್ಲ. ಅದರ ಗಂಡಾಂತರಕಾರೀ ಪರಿಕರಗಳನ್ನು ವರ್ಗ ಹೋರಾಟದ ಪರಿಣತಿಯಲ್ಲಿ ಬಹಿರಂಗಗೊಳಿಸಲಾಗಿದೆ.' ಎಂದಿದ್ದಾರೆ. ಹಾಗೆಯೇ ಧರ್ಮವು ಮತಗಳಾಗಿ ಒಡೆದ ಕನ್ನಡಿಯಾಯಿತ್ತು. ಕನ್ನಡಿಯ ಚೂರುಗಳು ನಿರರ್ಥಕ ಅಷ್ಟೇ ಅಲ್ಲ, ಘಾತಕ ಕೂಡ ಎಂದೂ ಮತ್ತೊಂದೆಡೆ ಮುಖ್ಯ ಪಾತ್ರವಾದ ಮಾದಣ್ಣನ ಕೈಲಿ "ಗಾಂಧಿ ಪಾಂದಿಯಂಥವರ ರಿಫಾರ್ಮೇಶನ್ ಏನೂ ಪ್ರಯೋಜನವಾಗದು. ಇದಕ್ಕೆ ಮಾರ್ಕ್ಸ್-ಎಂಜಲ್ಸ್‌ರಂಥವರ ಅಪರೇಷನ್ ಒಂದೇ ಕೊನೆ ಉಪಾಯ"ಎಂದೂ ಹೇಳಿಸುತ್ತಾರೆ. ಇದರಿಂದ ನಾಟಕಕಾರರ ಉದ್ದಿಶ್ಯವು ಖಚಿತವಾಗಿದೆ.

ಈ ನಾಟಕವು ನಮ್ಮನ್ನು ಕಾಡುತ್ತಿರುವ ವರ್ಗ (+ವರ್ಣ) ಹೋರಾಟದ ಗೊಂದಲಕ್ಕೆ ಪರಿಹಾರವನ್ನೇನೂ ಹೇಳುವುದಿಲ್ಲ. ಉಪಾಯವನ್ನೂ ಸೂಚಿಸುವುದಿಲ್ಲ. ಆದುದರಿಂದ ಇದೊಂದು ತುಂಬ ಗಂಭೀರವೂ ಮುಖ್ಯವೂ ಆದ ನಾಟಕವಾಗಿದೆ. ಇದರ ವಿಚಾರದ ವಿಸ್ತರಣೆಯನ್ನು ತೋರಿಸುವುದಕ್ಕೋಸ್ಕರ ನಾಟಕಕಾರರು ಕೇವಲ ತರ್ಕವನ್ನು ಅವಲಂಬಿಸಿದ ನಾಲ್ಕೈದು ದೃಶ್ಯಗಳನ್ನು ನಡುವೆ ಸೇರಿಸಿದಂತಿದೆ. ಇದರಲ್ಲಿ ನಾಲ್ಕನೇ ದೃಶ್ಯವಾದ ಮೇಲೆ ಒಂಭತ್ತರವರೆಗೂ ಇರುವ ಭಾಗವನ್ನು ಬಿಟ್ಟರೂ ನಾಟಕಕ್ಕೆ ಬಾಧೆ ಬರುವುದಿಲ್ಲ.

ಇದರ ಪಾತ್ರಗಳಲ್ಲಿ ಬಂಡಾಯಗಾರ ರಂಗಯ್ಯನು ಕವಿಯಾಗಿ ಉರಿಯುತ್ತಿರುವ ಒಂದು ಸಂಸ್ಥೆಯಂತೆ ಕಂಡುಬರುತ್ತಾನೆ. (ಇಲ್ಲಿ ಕನ್ನಡದ ಒಬ್ಬ ಬಂಡಾಯಗಾರ ಕವಿಯನ್ನು ನನಪಿಗೆ ತರುವಂತಾಗಿದೆ.) ಸಮಕಾಲಕವಾಗಿ ಅಂದರೆ 80ರ

ಮೊದಲ ವರ್ಷಗಳಲ್ಲಿ ತಮಿಳು ನಾಡಿನಲ್ಲಿ ಹರಿಜನರು ಮೇಲುವರ್ಗದವರ ಹಿಂಸೆಯನ್ನು ತಡೆಯಲಾರದೆ ಸಾಮೂಹಿಕವಾಗಿ ಮುಸಲ್ಮಾನ ಧರ್ಮವನ್ನು ಸ್ವೀಕರಿಸತೊಡಗಿದ್ದ ಘಟನೆಗಳು ಸಾಂಕ್ರಾಮಿಕವಾಗತೊಡಗಿದ್ದಾಗ ಈ ಕೃತಿ ಒಡಮೂಡಿದಂತೆಯೂ ತೋರುತ್ತದೆ. ಆದರೆ ಇದರ ಕಥಾನಕದಲ್ಲಿ ಹರಿಜನೋದ್ಧಾರಕ್ಕೆಂದು ತಮ್ಮ ತಮ್ಮ ಜಾತಿಗಳಿಗೆ (ಹಿಂದೂ, ವೀರಶೈವ, ಕ್ರಿಶ್ಚಿಯನ್ ಮತ್ತು ಮುಸಲ್ಮಾನ) ಸೇರಿಸಿಕೊಳ್ಳಲು ಧರ್ಮ ಗುರುಗಳು ಮುಂದಾಗಿ ಬಂದು ಇಲ್ಲಿಯ ನಾಯಕನ ಸವಾಲಿಗೆ ಸೋಲುತ್ತಾರೆ. ಇದೇ ಈ ಕೃತಿಯ ಸಾರ್ಥಕತೆಯೂ ಆಗಿದೆ. ಆದುದರಿಂದ ಇದೊಂದ ಧಾರ್ಮಿಕ ವಿಶ್ಲೇಷಣೆ ಮಾತ್ರವಾಗದೆ ಒಂದು ರಾಜಕೀಯ-ವಿಡಂಬನೆಯೂ ಆಗುವಂತಿದೆ. ಮೇಘ ಮಿತ್ರರ ಮಾತಿನ ಶೈಲಿಯನ್ನು ಗಮನಿಸಿದಲ್ಲಿ ಅದರ ಹರಿತ ಮತ್ತು ಕಾವ್ಯಸತ್ವಗಳು ಅವಿಭಾಜ್ಯವಾಗಿ ಪರಿಣಾಮಕಾರಿಯಾಗುತ್ತವೆ. ನಮ್ಮ ಬೇರೆ ಯಾವ ನಾಟಕಕಾರರಿಗೂ ಈ ಬಗೆಯ ಕಸುವು ಸಾಧ್ಯವಾಗಿರುವುದಿಲ್ಲ. ಆದರೆ ಈ ನಾಟಕಕಾರರು ದೃಶ್ಯಮಾಧ್ಯಮವನ್ನು ಕ್ರಿಯಾಶೀಲವಾದ ಘಟನೆಗಳಿಂದ ಮತ್ತು ಒಂದು ಖಚಿತವಾದ ಕಥಾನಕದಿಂದ ಕೂಡಿಸಿದ್ದಲ್ಲಿ ಇಲ್ಲಿಯ ನಾಟಕ ಸತ್ವವು ಪ್ರಚಂಡವಾಗುತ್ತಿತ್ತು. ಉಳಿದ ವಿಚಾರಗಳಲ್ಲಿ ಈ ನಾಟಕಕಾರರಿಂದ ಶ್ರೇಷ್ಠ ಮಟ್ಟದ ನಾಟಕಗಳನ್ನು ಆಶಿಸಬಹುದಾಗಿದೆ.

ಬುದ್ಧಿವಂತಿಕೆಯು ಪ್ರಧಾನವಾಗಿ ರಂಗ ಸಾಧ್ಯತೆಯನ್ನು ಚೆನ್ನಾಗಿ ಅರಿತವರಲ್ಲಿ ನಾ. ಶ್ರೀನಿವಾಸರು ಗಮನಾರ್ಹರು. ಇವರ 'ಕನಸಿನವರು' ಮತ್ತು 'ಕುರಿತೇರು'-ಇವೆರಡೂ ಏಕಾಂತಗಳಾಗಿ ನಿರ್ದೇಶಕನಿಗೆ ಖುಷಿಯನ್ನು ಕೊಡಬಲ್ಲ ಪ್ರಯೋಗಗಳಾಗುತ್ತವೆ. ಅದರಲ್ಲೂ 'ಕುರಿತೇರು' - ಅರಿಸ್ಟೊಫೇನಿಸನನ್ನು ನೆನಪಿಸುವ, ಕನ್ನಡದಲ್ಲಿ ಚದುರಂಗರ 'ಇಲಿಬೋನು' ಜಾತಿಗೆ ಸೇರುವ ಒಂದು ಕೃತಿ. ನಾಟಕಕಾರರು ಇದರಲ್ಲಿನ ವ್ಯಂಗ್ಯವನ್ನು ಕಲಾತ್ಮಕವಾಗಿಸಿರುವುದರಿಂದ ಇದೊಂದು ಆಧುನಿಕ ಸಮರ್ಥ ನಾಟಕವಾಗಿದೆ.

ಶೂದ್ರ ಶ್ರೀನಿವಾಸರ 'ಗಾಂಧಾರಿ' ನಾಟಕವು ಈ ಸಾಲಿನಲ್ಲಿ ಒಂದು ಒಳ್ಳೆಯ ಕೃತಿಯಾದರೂ ಕುರುಡಿಯಾದ ರಾಜಕುಮಾರಿ ಗಾಂಧಾರಿಯ ಪಾತ್ರವನ್ನು ಅಭಿನಯಿಸಿ ನಾಯಕಿಯ ಸ್ಥಾನಮಾನವನ್ನು ಸಾಧಿಸುವುದು ಸುಲಭವಲ್ಲ. (ಆದುದರಿಂದ ಇದರ ಮೊದಲ ಪ್ರಯೋಗವು ಸೊರಗಿದೆ). ನಾಟಕಕಾರರು ನಾಯಕಿಯ ಎರಡನೇ ಮುಖವೆನ್ನುವಂತೆ ದಾಸಿ ಸುಮತಿಯ ಪಾತ್ರವನ್ನು ತಂದಿರುವರಾದರೂ ಎರಡೂ ಪಾತ್ರಗಳು ಮುಖ್ಯವಾಗುತ್ತವೆ. ಈ ನಾಟಕದ ವಸ್ತುವಿನಲ್ಲಿಯೇ ಒಂದು ವಿಶಿಷ್ಟತೆಯಿರುವುದರಿಂದ ಇದು ಒಂದು ಮುಖ್ಯ ಕೃತಿಯಾಗಿದೆ. ಮಹಾಭಾರತದ ಯುದ್ಧಕ್ಕೆ ತಾಯಿಯಾದ ಗಾಂಧಾರಿಯ ಹೊಟ್ಟೆಕಿಚ್ಚು ಕಾರಣವೆನ್ನುವಂತೆ ಪಂಪ ಸೂಚಿಸುತ್ತಾನೆ. ಆದರೆ ಶ್ರೀನಿವಾಸರು ಒಂದು ಹೊಸ ಕಾರಣವನ್ನು ಇಲ್ಲಿ ಸಮರ್ಥಿಸಿದ್ದಾರೆ. ತಾಯಿಯಾದವಳು ಮಕ್ಕಳ ಲಾಲನೆ-ಪಾಲನೆಗಳಲ್ಲಿ ತನ್ನ

ಮಕ್ಕಳನ್ನು ಸಮಾಜ ಪ್ರಿಯರನ್ನಾಗಿ ಮಾಡದೇ ಹೋದಲ್ಲಿ 'ಮಹಾ ಭಾರತ' ವಾಗುತ್ತದೆ–ಎಂದು ನಮ್ಮ ನಾಟಕದ ಕಥಾನಕವನ್ನು ರೂಪಿಸಿದ್ದಾರೆ. ಆದುದರಿಂದ ಇದೊಂದು ಗಮನಾರ್ಹ ಕೃತಿಯಾಗಿದೆ.

ಉಳಿದ ನಾಟಕರರಲ್ಲಿ ಇಬ್ಬರನ್ನು ಗುರುತಿಸಬಹುದು. ಮೊದಲಿಗೆ ಮುಂಚೂಣಿಯ ರಾಜಕೀಯ ಪಟುವಾಗಿರುವ ಎಂ. ವೀರಪ್ಪ ಮೊಯಿಲಿಯವರ ಎರಡು ನಾಟಕಗಳು ಮತ್ತು ಕನ್ನಡ ನಾಟಕಗಳ ಪ್ರಯೋಗದಲ್ಲಿ ಹೆಸರುವಾಸಿಯಾದ ಪ್ರೊ. ಬಿ. ಚಂದ್ರಶೇಖರ್ ಅವರ ಒಂದು ನಾಟಕ.

ಮೊಯಿಲಿಯವರಿಗೆ ನಾಟಕ ರಚನೆಗೆ ಸಿಕ್ಕಿರುವ ಅವಕಾಶವೇ ಅಚ್ಚರಿಯನ್ನುಂಟುಮಾಡುತ್ತದೆ. ಏಕೆಂದರೆ, ಇಂದಿನ ರಾಜಕೀಯವು ಯಾವುದೇ ಸಾಹಿತಿಗೂ ಭಯಂಕರವಾಗಿ ಅಪ್ರಮಾಣಿಕ ವಲಯವಾಗಿ ತೋರುತ್ತದೆ. ಮೊಯಿಲಿಯವರು ಮೊದಲಿಗೆ ಒಬ್ಬ ಬುದ್ಧಿವಂತ ಬರಹಗಾರರಿದ್ದಿರಬಹುದು ಎಂಬುದಕ್ಕೆ ಅವರ ನಾಟಕಗಳು ಆಧಾರವಾಗುತ್ತದೆ. ಇವುಗಳನ್ನು ಓದಿದರೆ ಪ್ರಯೋಗಕ್ಕೆ ತೊಡಕಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸಂಭಾಷಣೆಯು ಒಂದು ಸರಳವಾದ ಹದದಲ್ಲಿ ಮೇಲುವರ್ಗದವರ ತಿದ್ದಿದ ಮಾತುಕತೆಯಾಗಿ ಬೆಳೆಯುತ್ತದೆ. ಪ್ರೇಮವನ್ನು ಒಂದು ಆದರ್ಶದ ಸಮಸ್ಯೆಯಾಗಿ ಪರಿಗಣಿಸಿ ಒಂದರಲ್ಲಿ ದುರಂತದ ತಪ್ಪೊಪ್ಪಿಗೆಯನ್ನು ಮತ್ತೊಂದರಲ್ಲಿ ಗಂಡಿನ ನೀಚತನವನ್ನು ಬಯಲುಮಾಡುವುದನ್ನೂ ಕಾಣುತ್ತೇವೆ. ಒಂದು ರೀತಿಯಲ್ಲಿ ಇವುಗಳು ಕನ್ನಡ ಸಣ್ಣಾಟವಾದ 'ಸೋಮಪ್ರಾಯ-ಭೀಮರಾಯ' ಕೃತಿಯನ್ನು ಆಧುನಿಕಗೊಳಿಸಿದಂತೆಯೂ ಎರಡನೆಯದರಲ್ಲಿ 'ಆಷಾಡಭೂತಿ'ಯನ್ನು ಆಧುನಿಕ ರೂಪಕ್ಕೆ ತಂದಂತೆಯೂ ತೋರಬಹುದು. ಒಟ್ಟಿನಲ್ಲಿ ಇವು ಜನಪ್ರಿಯ ವಸ್ತುಗಳೆಂಬುದು ಮುಖ್ಯ. ಮೊಯಿಲಿಯವರ ಈ ಕೃತಿಗಳಿಗೆ ನೃತ್ಯ ಮತ್ತು ಹಾಡುಗಳ ಮಸಾಲೆಯನ್ನು ಸೇರಿಸಿಕೊಂಡರೆ ಒಳ್ಳೆಯ ಕಂಪನಿ ನಾಟಕಗಳಾಗುತ್ತವೆಂದು ಧೈರ್ಯವಾಗಿ ಹೇಳಬಹುದು. ಇವರು ತಮ್ಮ ರಾಜಕೀಯ ಅನುಭವಗಳನ್ನು ಸಾಹಿತ್ಯಕ್ಕೆ ತಂದಲ್ಲಿ ತುಂಬ ಪ್ರಾಮಾಣಿಕವಾದ ರಾಜಕೀಯ ನಾಟಕಗಳೋ ಕಾದಂಬರಿಗಳೋ ದೊರಕಬಹುದೆಂದು ಇವರ ಕೃತಿಗಳು ಆಶಯವನ್ನುಂಟುಮಾಡುತ್ತವೆ.

ಪ್ರೊ. ಬಿ.ಸಿ.ಯವರ 'ಸಂಚಯನ' ಪ್ರಯೋಗದಲ್ಲಿ ಯಶಸ್ವಿಯಾಗಿರುವ ನಾಟಕ. ಆದರೆ ಇದರ ವಸ್ತು-ವಿಸ್ತರಣೆಯು ತೆಳುವಾದುದು. ಸುಮಾರು ಮುಕ್ಕಾಲು ಪಾಲು ರಂಗದ ಮೇಲೆ ತಮ್ಮ ಇರವನ್ನು ಸಮರ್ಥಿಸುವ ಎರಡನೆಯ ಹಂತದ ಪಾತ್ರಗಳೆಲ್ಲಾ ನಾಟಕದ ಸಂದಿಗ್ಧ ಪರಿಸ್ಥಿತಿಯಲ್ಲಿ ಮತ್ತು ನಂತರ ದುರ್ಬಲವಾಗಿ ಬಿಡುತ್ತವೆ. ಆದುದರಿಂದ ಇದರ ವಸ್ತುವಿನಲ್ಲಿ ಇಬ್ಸನ್‌ನ 'ಡಾಲ್ಸ್ ಹೌಸ್'

ನೆನಪಾಗುವುದಲ್ಲದೆ, ಒಂದು ದುರ್ಬಲ ಘಟನೆಯನ್ನೇ ದೊಡ್ಡದನ್ನಾಗಿ ಮಾಡಿದಂತಿದೆ. ಅಂದರೆ ನಾಟಕದ ಮುಖ್ಯ ಘಟನೆಯು ಒಂದು ಅಪರೂಪದ ಘಟನೆಯಾಗಬಹುದೆಂಬ ಸೂಕ್ಷ್ಮವಾದ ಸೂತ್ರದ ಮೇಲೆ ಜರಗುವ ಕಸರತ್ತಾದಂತಿದೆ. ಇದು ನಮ್ಮ ಶಿಷ್ಟವರ್ಗದ ವಿಚಾರ ಮಾತ್ರವಾದೀತೆಂಬುದು ಇದರ ಮತ್ತೊಂದು ಮಿತಿಯನ್ನೂ ತೋರಿಸುತ್ತದೆ. ಆದರೂ 'ಸಂಜಯನ'ವು ಒಳ್ಳೆಯ ನಾಟಕದ ಮಾತುಗಾರಿಕೆಯನ್ನು 'ಕ್ರಿಯಾಪರ' ಜಾಣ್ಮೆಯನ್ನು ಒಳಗೊಂಡಿದೆ. ನಮ್ಮ ಇಂದಿನ ಸಾಮಾಜಿಕ ಸ್ಥಿತಿ-ಗತಿಯಲ್ಲಿ ಒಂದು ಸರಳ ವಾಸ್ತವ ಘಟನೆಯಿಂದ ನಾಟಕವನ್ನು ರಚಿಸುವುದು ಕಷ್ಟ. ಆದುದರಿಂದ ಈ ಕೃತಿ ಸ್ವಾಗತಾರ್ಹವಾಗಿದೆ.

ಉಳಿದ ನಾಟಕಗಳೆಂಬ ರಚನೆಗಳಲ್ಲಿ 'ದುರ್ಗದ ಸಿಂಹಿಣಿ ಓಬವ್ವ' (ಎಚ್. ವಿ. ನಾಯಕರ ಕೃತಿ) ಈಗಿನ ಒಂದು ಕಂಪನಿ ನಾಟಕವೂ, 'ಧರ್ಮವೀರ ಗುರು ಗೋವಿಂದ ಸಿಂಹ' (ಟಿ. ವಿಶ್ವನಾಥರಾವ್ ಅವರ ಕೃತಿ) ಎಂಬುದು ಸಂಭಾಷಣೆಯ ರೂಪದಲ್ಲಿರುವ ನಮ್ಮ ದೇಶ ಪ್ರೇಮದ ಅತಿರೇಕ ವಿಚಾರಧಾರೆಯೂ, 'ಎಲ್ಲಾರು ಅಂಥವ್ರು' (ಜಿ. ಶೌಕತ್ ಅಲಿಯವರ ಕೃತಿ) ಒಂದು ಸಾಮಾನ್ಯ ರಾಜಕೀಯ ವಿಡಂಬನೆಯೂ, 'ಮೃತ್ಯು' (ಕುಮಾರಪ್ರೇಮರ ಕೃತಿ) ನಮ್ಮ ಹಳಸಲು ತಾತ್ವಿಕ ಮನೋಧರ್ಮದ ಒಂದು ರೂಪಕವೂ 'ಜಾರಿದ ಹೆಜ್ಜೆ' ಮತ್ತು 'ಚಿಂತಾಕೃತಿ' (ಅಮರ ಹಂಸರ ಕೃತಿಗಳು) ಎರಡೂ ತೀರ ದುರ್ಬಲ ರಚನೆಗಳೂ, 'ತರೀಕೆರೆಯ ಗಂಡುಗಲಿ' (ಆರ್. ಕೃಷ್ಣ ತಂತ್ರಿ-ಕಿಟ್ಟು ಅವರ ಕೃತಿ) ಒಂದು ಐತಿಹಾಸಿಕತೆಯ ಸಂಭಾಷಣೆಯೂ, 'ಏನ್ಬಂತಪ್ಪ ಕಾಲ' (ಸಿ. ಎನ್. ಚೆನ್ನವೀರಯ್ಯನವರ ಕೃತಿ) ಬೈಗುಳದ ಹಂತಕ್ಕಿಳಿಯುವ ರಚನೆಯಾಗಿದ್ದು ಆದರ್ಶದ ಧೋರಣೆಯಿಂದ ಕೂಡಿದ ರಚನೆಯೂ. . . ಅಲ್ಲದೆ ಉಳಿದ ನಾಲ್ಕು ನಾಟಕಗಳನ್ನು ಅವುಗಳ ದೌರ್ಬಲ್ಯಕ್ಕಾಗಿಯೇ ವಿವರಿಸಬೇಕಾಗಿದೆ.

ಹೀಗೆ ಬಂದವುಗಳಲ್ಲಿ ರಘುಸುತರ 'ಸಪ್ತರ್ಷಿಗಳು' ಒಂದು ರಚನೆ. ಬಿ. ಎ. ಸನದಿಯವರ 'ನೀಲಾಂಬಿಕಾ' ಎರಡನೆಯದು, ಇವೆರಡೂ ಐತಿಹಾಸಿಕ ಕೃತಿಗಳು. ಮೊದಲನೆಯದು 1942ರಲ್ಲಿ ನಡೆದ 'ಚಲೇಜಾವ್' ಗಾಂಧೀ ಚಳುವಳಿಗೆ ಸಂಬಂಧಿಸಿದ್ದು ಪಾಟ್ನಾದಲ್ಲಿ ನಡೆದ ಒಂದು ಘಟನೆಯನ್ನು ವಸ್ತುವಾಗಿ ಉಳ್ಳದ್ದು – ಅದೂ ಪತ್ರಿಕೆಯಲ್ಲಿ ಬಂದ ಒಂದು ರಿಪೋರ್ಟಿನಿಂದ ರೂಪತಾಳಿದುದು. ಕೇವಲ ಗಾಂಧೀಪ್ರೇಮ ಮತ್ತು ರಾಷ್ಟ್ರಪ್ರೇಮಗಳ ಆವೇಶದಿಂದ ಪಾತ್ರಗಳನ್ನೆಲ್ಲಾ ಸೃಷ್ಟಿಸಿದ್ದಾರೆ. ಆ ಪಾತ್ರಗಳೂ ವಿದ್ಯಾರ್ಥಿಗಳಾದ ಕಾರಣ ಮತ್ತು ಆದರ್ಶದ ಆಧಾರದಿಂದ ವ್ಯಕ್ತಿತ್ವವಿಲ್ಲದಂಥವು. ಆದುದರಿಂದ ಈ ಕೃತಿಯು ಬುದ್ಧಿವಂತರ ಮಾತಿರಲಿ ವಿದ್ಯಾರ್ಥಿಗಳಿಗೆ ಕೂಡಾ 'ಅಥೆಂಟಿಕ್' ಅನ್ನಿಸುವುದಿಲ್ಲ. ಹೈಸ್ಕೂಲಿನ ಹಂತದಲ್ಲಿ ದೇಶಪ್ರೇಮದ ಪಾಠಕ್ಕಾಗಿ ಇವನ್ನು ಅಭಿನಯಿಸಬಹುದಷ್ಟೆ!

ಬಿ. ಎ. ಸನದಿಯವರ 'ನೀಲಾಂಬಿಕಾ' ವೀರಶೈವ ಕ್ರಾಂತಿಯ ಮುದ್ರೆಯನ್ನು ಧಾರ್ಮಿಕವಾಗಿ ಪಡೆದಂಥ ಕೃತಿ. ಇದರಲ್ಲಿ ಅಸ್ಪಷ್ಟವಾಗಿ ಕಾಡುತ್ತಿರುವ ಬಸವಣ್ಣ ಬಿಜ್ಜಳರ ಸಂಬಂಧವಿದೆ. (ಪಿ. ಲಂಕೇಶರ ಸಂಕ್ರಾಂತಿಯಲ್ಲೂ ಇದು ಪ್ರಧಾನವಾಗಿದೆ). ಈ ವಿಷಯವನ್ನು ಜಾಣ್ಮೆಯಿಂದ ತೊಡಗಿದರೂ ಬುದ್ಧಿವಂತ ಪ್ರೇಕ್ಷಕರಿಗೆ 'ಅಪ್ರಾಮಾಣಿಕ ಪ್ರಯತ್ನ' ವಾಗಿಬಿಡುವ ಭಯವಂತೂ ಇದೆಯಷ್ಟೆ. ವೀರಶೈವ ಭಕ್ತರಿಗೆ ಮಾತ್ರ ಈ ಸಮಸ್ಯೆಯಿರುವುದೇ ಇಲ್ಲ. ಏಕೆಂದರೆ ಇದರಲ್ಲಿ ಅಂತಹ ಸಮಂಜಸತೆಯನ್ನು ಸಾಧಿಸಲಾಗಿದೆ. ಉಳಿದ ಯಾವುದೇ ಸೂಕ್ಷ್ಮ ಸಂವೇದನೆಗೂ ಇದರಲ್ಲಿ ಅವಕಾಶವಿದ್ದಂತೆ ತೋರುವುದಿಲ್ಲ. ಯಾವುದೇ ನಾಟಕವಾಗಲಿ ತನ್ನ ಸಂದರ್ಭದಲ್ಲಿ ಮಾನವ ಸಂವೇದನೆಯ ಸೂಕ್ಷ್ಮ ಪದರಗಳಲ್ಲಿ ದುಡಿಯುವಾಗಲೇ ಪರಿಣಾಮಕಾರಿಯಾಗುತ್ತದೆ. ಜಾತಿಪ್ರೇಮವು ಒಂದು ಮಾರಕವಾದ ಅಂಟೆಂಬುದರಿಂದಲೇ ಇಂಥ ರಚನೆಗಳು ಸೋಲುತ್ತವೆ.

ಮೂರನೆಯ ಕೃತಿಯಾಗಿ ಬಿ. ಎಸ್. ಸ್ವಾಮಿಯವರ 'ಬಿಟ್ಟೇನೆಂದರೆ ಬಿಡದೀಮಾಯೆ' ನಾಲ್ಕನೆಯದು ರಾಮದಾಸರ 'ಗರುಡಗಂಬ' - ಇವೆರಡೂ ಸಮಕಾಲಿಕ ಸಾಮಾಜಿಕ ದೌರ್ಬಲ್ಯಗಳನ್ನು ಕುರಿತ ಕೃತಿಗಳಾಗಿವೆ. ಇವೆರಡರಲ್ಲೂ ನಮ್ಮ ಮಾತಿನ ಬಳಕೆಯು ಹರಿತವಾಗಿದೆ. ಇದು ಎಲ್ಲಿಯೂ 'ಗದ್ಯ'ವೂ ಆಗುವುದಿಲ್ಲ 'ಪದ್ಯ'ವೂ ಆಗುವುದಿಲ್ಲ. ಈ ವಿಷಯದಲ್ಲಿ ಸ್ವಾಮಿಯವರು ಹೆಚ್ಚು ಸಮರ್ಥರು ; ರಾಮದಾಸರು ತಮ್ಮ ವಿಡಂಬನೆಯನ್ನು ಸಮರ್ಥಿಸುವುದರಲ್ಲಿ ಗಟ್ಟಿಗರು.

'ಬಿಟ್ಟೇನೆಂದರೆ ಬಿಡದೀಮಾಯೆ' – ಇಂದಿನ ವಿದ್ಯಾರ್ಥಿ ಜೀವನದ ಅತಿರೇಕಗಳನ್ನು ಒಳಗೊಳ್ಳುತ್ತದೆ. ಈ ವಿಷಯದಲ್ಲಿ ಹಿರಿಯರ ಅತೃಪ್ತಿಯೇ ಸ್ವಾಮಿಯವರ ಆಧಾರ. ಇಂಥ ನೀತಿಯನ್ನು ಪ್ರತಿಪಾದಿಸುವ ಕೃತಿಯಾಗಿರುವುದರಿಂದಲೇ ಇದೊಂದು ಕಲಾತ್ಮಕತೆಯನ್ನು ಹೀನಾಯಗೊಳಿಸುತ್ತದೆ. ಇದನ್ನು ಯಾವ ರೂಪದಲ್ಲಿ ಪ್ರತಿಪಾದಿಸಿದರೂ ರಚನೆಯು ವ್ಯರ್ಥವಾಗುತ್ತದೆ. ಸ್ವಾಮಿಯವರು ಬಳಸಿರುವ ಸಂಭಾಷಣೆ ಮಾತ್ರ ಮಾತಿಗೆ ಹತ್ತಿರವಾಗಿದ್ದು ಗಟ್ಟಿಯಾದ ಸಾಧನೆಯೂ ಆಗಿದೆ - ಎಂಬುದು ಒಂದೇ ಸಮಾಧಾನ. ಕಲಾವಿದರಲ್ಲಿ ಸಾಮಾನ್ಯವಾಗಿ ಒಂದೊಂದು ಅತಿರೇಕವಿರುತ್ತದೆಯಾದರೂ ಅದರಿಂದಲೆ ಅವರು ಕಲಾವಿದರೆಂದು ಹೇಳುವುದು ಸರಿಯಲ್ಲ. ಈ ನಾಟಕ ರಚನೆಯು ವಿದ್ಯಾರ್ಥಿಗಳ ಕಣ್ಣು ತೆರೆಯಿಸಲು ಸಿದ್ಧವಾಗಿದ್ದರೂ ಇದರ ದರ್ಶನದಿಂದ ಅಪ್ರಾಮಾಣಿಕವಾಗಿಯೂ ತೋರಬಹುದಾಗಿದೆ. ಹೀಗೆ ಈ ಕೃತಿಯ ಪರಿಣಾಮವು ಕಲಾತ್ಮಕತೆಗೆ ಸೇರುವುದಿಲ್ಲ ಎನ್ನಬಹುದು. ಒಟ್ಟಿನಲ್ಲಿ ಇದೊಂದು ವ್ಯರ್ಥ ಕೃತಿಯಾಗಿದೆ.

ಕೊನೆಯದಾಗಿ ರಾಮದಾಸರ 'ಗರುಡಗಂಬ' ಎಂಬ ನಾಟಕ. 'ಗರುಡಗಂಬ'ವು ಒಂದು ಪುರಾತನ ಮತ್ತು ನಮ್ಮ ಸಂಸ್ಕೃತಿ(?)ಯ ಸಂಕೇತ. 'ಈ ನಮ್ಮ ಭಾರತದಲ್ಲಿ

ನಡೆದ ಹಾಗೂ ನಡೆಯುತ್ತಿರುವ ಧಾರ್ಮಿಕ ಹಾಗೂ ರಾಜಕೀಯ ಶಕ್ತಿಗಳ ನಿಜ ಸ್ವರೂಪವನ್ನು ಬಯಲು ಮಾಡುವ ಪ್ರಯತ್ನ ಇಲ್ಲಿದೆ' ಎಂಬುದು ರಾಮದಾಸರ ಉದ್ದಿಶ್ಯ. ಅಂದರೆ ಇದೊಂದು ರಾಜಕೀಯ - ಸಾಮಾಜಿಕ ವಿಡಂಬನೆ. ಇಲ್ಲಿಯ ಕೆಲವು ಪಾತ್ರಗಳನ್ನು ರಾಜಕೀಯ ವಲಯದಲ್ಲೂ ಗುರುತಿಸುವಂತಿದೆ. ಇದರ ನಾಯಕನಾದ ವಿವೇಕ - ಮಾತ್ರ ಸಮಕಾಲಿಕ ಬುದ್ಧಿಜೀವಿಯಾಗುತ್ತಾನೆ. ನಾಟಕದ ಕೊನೆಯ ಹಂತದಲ್ಲಿ ಈತನ ಕೊಲೆಯು ಒಂದು ರಾಜಕೀಯ - ಸಾಮಾಜಿಕ ಹಂತದ ಕೊಲೆಯಾಗುತ್ತದೆ. ಇದೊಂದು ವಿಚಾರಾರ್ಹವಾದುದಾಗಿದೆ.

'ಗರುಡಗಂಬ'ವು ಒಂದು ವಾಚಾಳಿತನದ ದುರ್ಬಲ ರಚನೆಯಾಗಿದೆ. ಆದರೂ ಎಲ್ಲರಿಗೂ ತಟ್ಟನೆ ಅರ್ಥವಾಗುವಂತೆ 'ವಿವೇಕದ ಕೊಲೆ'ಯ ಪ್ರಜ್ಞೆ ಮಾತ್ರ ಮಾಡಬಹುದಾಗಿದೆ. ಆದುದರಿಂದ ಇದನ್ನು ರಂಗಭೂಮಿಯ ನಾಟಕ ವನ್ನಾಗಿ ಪರಿಗಣಿಸುವುದಕ್ಕಿಂತ ಬೀದಿನಾಟಕವಾಗಿ ಗುರುತಿಸಬಹುದು. ವಿಜಯಾ ರವರ ಬೀದಿನಾಟಕಗಳಲ್ಲಿ ಈ ವಿಚಾರಧಾರೆಯಲ್ಲದೆ ನಾಟಕೀಯ ಅಂಶಗಳೂ ಸೇರಿ ಕೊಂಡಿರುವುದರಿಂದ ಈ ಕೃತಿಯೇನೂ ವಿಶೇಷವಾದುದಲ್ಲ.

ಈ ವರ್ಷದ ಒಂದು ವಿಶಿಷ್ಟಕೃತಿಯಾಗಿ ಚಂದ್ರಶೇಖರ ಕಂಬಾರರ 'ಕನ್ನಡ ನಾಟಕ ಸಂಪುಟ'ವನ್ನು ಗುರುತಿಸಬಹುದು. ಇದರಲ್ಲಿ ಅವರ ಮತ್ತು ನಮ್ಮ ಸಮಕಾಲಿಕ ಸಮರ್ಥ ನಾಟಕಕಾರರ ಕೃತಿಗಳು ಸಂಪಾದಿತವಾಗಿವೆ. ಇದರಲ್ಲಿ ಹೊಸಗನ್ನಡದ 19 ಕೃತಿಗಳು ಸೇರಿವೆ. ಒಟ್ಟು 1250 ಪುಟಗಳ ಈ ಗ್ರಂಥದ ಬೆಲೆ ಕೇವಲ ರೂ 50. ಕನ್ನಡ ಸಾಹಿತ್ಯ ಪರಿಷತ್ತು ಇಂಥ ಒಂದು ಸಂಗ್ರಹಾರ್ಹ ವಾದ ಕೃತಿಯನ್ನು ಪ್ರಕಟಿಸಿರುವುದು ಮೆಚ್ಚತಕ್ಕ ಕೆಲಸವೇ ಆಗಿದೆ. ಇದಕ್ಕೆ ಚಂದ್ರಶೇಖರ ಕಂಬಾರರ ಬೆಲೆಯುಳ್ಳ ಮುನ್ನುಡಿಯು ಸೇರಿದೆಯಷ್ಟೆ. ಇದರಲ್ಲಿ ಸೇರಿರುವ ಕನ್ನಡ ಬಯಲಾಟವು ಒಂದು 'ದ್ರಾವಿಡ ಕೊಡುಗೆ,' ಎಂಬ ವಿಚಾರನಂತೂ ಎಲ್ಲಾ ವಿದ್ವಾಂಸರಿಗೂ ಮುಖ್ಯವಾದುದಾಗಿದೆ. ಕಂಬಾರರ ಈ ಸಂಪಾದನೆಯಲ್ಲಿ ಗದ್ಯ ಮತ್ತು ಗೀತ ಹಾಗೂ ಸಂಗೀತ ಎಂಬ ಮೂರೂ ಬಗೆಗಳು ಸೇರಿಕೊಂಡಿರುವುದರಿಂದ ಇವುಗಳನ್ನು ಮೂರು ಬೇರೆ ಬೇರೆ ಸಂಪುಟಗ ಳಾಗಿಸಿ ಪ್ರಕಟಿಸಬಹುದಾಗಿತ್ತೆಂದೂ ಪರಿಷತ್ತಿಗೆ ಇದರಿಂದ ಕೊರತೆಯಾಗುತ್ತಿರಲಿಲ್ಲ ವೆಂದೂ ಹೇಳಬಹುದಾಗಿದೆ.

ಸಣ್ಣ ಕತೆ

ಎಚ್. ಎಸ್. ವೆಂಕಟೇಶಮೂರ್ತಿ

ಎಂಭತ್ತೆರಡರಲ್ಲಿ ಪ್ರಕಟವಾದ ಹದಿನೈದು ಸ್ವತಂತ್ರ ಕಥಾಸಂಕಲನಗಳು ಪರಿಶೀಲನೆಗೆ ದೊರೆತಿವೆ. ಉಳಿದ ಹನ್ನೊಂದು ಅನುವಾದಿತ ಕೃತಿಗಳು ಹಿಂದಿಯಿಂದ ಒಂದು; ಇಂಗ್ಲೀಷ್‌ನಿಂದ ಒಂದು; ಉಳಿದ ಒಂಭತ್ತು ವಿಶ್ವಕಥಾಕೋಶ ಮಾಲೆಯಲ್ಲಿ ಜಗತ್ತಿನ ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಕೃತಿಗಳು.

ಸಮೃದ್ಧಿಯ ದೃಷ್ಟಿಯಿಂದ ಹದಿನೈದು ಸ್ವತಂತ್ರ ಕೃತಿಗಳು ಬಂದಿರುವುದು ಕಡಿಮೆ ಎಂದೇ ಹೇಳಬೇಕು. ಆದರೆ ಗುಣ ಮೌಲ್ಯದ ದೃಷ್ಟಿಯಿಂದ ಈ ಹದಿನೈದರಲ್ಲಿ ಎಂಟಾದರೂ ಗಂಭೀರ ಅಭ್ಯಾಸವನ್ನು ಅಪೇಕ್ಷಿಸುವ ಕೃತಿಗಳಾಗಿರುವುದು ಸಂತೋಷ ಪಡಬೇಕಾದ ಸಂಗತಿ. ಈಗಾಗಲೇ ಪ್ರಸಿದ್ಧರಾಗಿರುವ ಹಳೆಯ ಲೇಖಕರ ಸಂಗ್ರಹ ಹೆಚ್ಚಾಗಿಲ್ಲ. ಶಾಂತಿನಾಥ ದೇಸಾಯಿಯರ 'ಪರಿವರ್ತನೆ' ಯೊಂದೇ ಅಂತಹ ಸಂಕಲನ. ದೇಸಾಯಿಯರ ಕಥಾ ಸಾಹಿತ್ಯದಲ್ಲಿ 'ಪರಿವರ್ತನೆ' ಒಂದು ಮುಖ್ಯ ಘಟ್ಟವನ್ನೂ, ಹೊಸ ತಿರುವನ್ನೂ ಸೂಚಿಸುವಂತಿದೆ. ಒಂದು ನಿಶ್ಚಿತ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ವ್ಯಕ್ತಿಗಳ ಅಂತರಂಗ ಶೋಧನೆ ನಡೆಯುವುದು ಈ ಸಂಗ್ರಹದ ಗುಣಾತ್ಮಕ ಅಂಶವಾಗಿದೆ. ಕಾವ್ಯದಲ್ಲಿ ಹೆಸರು ಮಾಡಿರುವ ಕೆ. ವಿ. ತಿರುಮಲೇಶ್ ಮತ್ತು ಜಯಂತ ಕಾಯ್ಕಿಣಿ ಈ ವರ್ಷ ತಮ್ಮ ಪ್ರಥಮ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರಿಬ್ಬರ ಕಾವ್ಯದಲ್ಲಿ ಕಂಡು ಬಂದ ಶಕ್ತಿ ಈ ಕತೆಗಳಲ್ಲೂ ಪ್ರಕಟವಾಗಿರುವುದು ಸಮಾಧಾನ ಪಡಬೇಕಾದ ಅಂಶ. ಬಹಳ ದಿನಗಳ ನಂತರ ಈಶ್ವರಯ್ಯ, ಎಂ. ಬಿ. ನಟರಾಜ ತಮ್ಮ ಮೊದಲ ಕಥಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಜಿ. ಎಸ್. ಉಬರಡ್ಕ, ಎ. ವಿ. ಲಕ್ಷ್ಮೀನಾರಾಯಣ, ರಾಘವೇಂದ್ರ ಪಾಟೀಲ ಕಥಾಸಾಹಿತ್ಯದಲ್ಲಿ ಹೆಸರು ಮಾಡುತ್ತಿರುವ ತರುಣರು. ಆದರೂ ರಾಘವೇಂದ್ರ ಪಾಟೀಲ ತಮ್ಮ 'ಪ್ರತಿಮೆಗಳು' ಕಥಾಸಂಕಲದಲ್ಲಿ ಪ್ರತಿಮೆಗಳು, ಕಾಪಜ್ಜ, ಬಸತ್ತಿಯಂಥ ಕತೆಗಳಿಂದ ಬಹಳಷ್ಟು ನಿರೀಕ್ಷೆ ಕೆರಳಿಸಿದ್ದಾರೆ.

ಈ ವರ್ಷ ಹೊರಬಂದಿರುವ ಕೆಲವು ಅನುವಾದಿತ ಕೃತಿಗಳೂ ಉಲ್ಲೇಖನೀಯವಾಗಿವೆ. ಅವುಗಳಲ್ಲಿ ತಿಪ್ಪೇಸ್ವಾಮಿಯವರ 'ಗಂಗಾ ಕಾವೇರಿ', ದಕ್ಷಿಣ ಅಮೆರಿಕಾದ ಕತೆಗಳ ಸಂಗ್ರಹ 'ಕಿವುಡು ವನದೇವತೆ', ಫ್ರಾನ್ಸ್‌ನ ಕತೆಗಳ ಸಂಗ್ರಹ

'ನಿಗೂಢಸೌಧ', ಜರ್ಮನಿಯ ಕತೆಗಾರರನ್ನು ಪರಿಚಯಿಸುವ 'ಬಾಲಪೋಧಾವಿ' ಮುಖ್ಯವಾದವು.

ಒಟ್ಟಾರೆ, 82ರ ಸಣ್ಣ ಕತೆಗಳ ಬೆಳೆ ತೃಪ್ತಿದಾಯಕ ಎಂದೇ ಹೇಳಬೇಕು.

ಪರಿವರ್ತನೆ: ಶಾಂತಿನಾಥ ದೇಸಾಯಿ

ಎಪ್ಪತ್ತನೇ ದಶಕದಲ್ಲಿ, ಮೂರು ವರ್ಷದ ಕಾಲಾವಧಿಯಲ್ಲಿ ಬರೆದ ಏಳು ಕತೆಗಳನ್ನು, ಶಾಂತಿನಾಥ ದೇಸಾಯಿ ಅವರು 'ಪರಿವರ್ತನೆ' ಎಂಬ ಅವರ ಐದನೇ ಕಥಾಸಂಗ್ರಹದಲ್ಲಿ ಒಟ್ಟುಮಾಡಿ ಕೊಟ್ಟಿದ್ದಾರೆ. ಈ ಎಲ್ಲ ಕತೆಗಳ ಹಿನ್ನೆಲೆಗೂ ಒಂದು ನಿಶ್ಚಿತ ಸಾಂಸ್ಕೃತಿಕ ಪರಿವೇಶವಿದೆ. ಅದು ಬದಲಾದ ಸಾಮಾಜಿಕ ಸಂದರ್ಭ, ಆ ಬದಲಾವಣೆ ವ್ಯಕ್ತಿಗಳಮೇಲೆ ತರುವ ಒತ್ತಡಗಳಿಂದ ಸೃಷ್ಟಿಯಾದದ್ದು. ಕ್ಷಿಪ್ರ ಗತಿಯಲ್ಲಿ ಧಾಳಿ ಮಾಡುತ್ತಿರುವ ಆಧುನಿಕತೆ, ಮೌಲ್ಯಪರಿವರ್ತನೆ ಮಾಡುವ ಸಂಧಿ ಕಾಲದಲ್ಲಿ ಗಂಡು, ಹೆಣ್ಣು ತಮ್ಮ ನಡುವಿನ ಅನೇಕ ಬಗೆಯ ಸಂಬಂಧಗಳನ್ನು ಅರ್ಥೈಸಿಕೊಳ್ಳುವ, ಅದು ಸಾಧ್ಯವಾಗದೆ ಹೋಗುವಾಗ ವೇದನೆಪಡುವ ಚಿತ್ರಗಳು ಈ ಕತೆಗಳ ಉದ್ದಕ್ಕೂ ಬರುತ್ತದೆ. ತಾಯಿ–ಮಗ, ಅಕ್ಕ–ತಮ್ಮ, ಗಂಡ-ಹೆಂಡತಿ, ಇಷ್ಟು ಮಾತ್ರವಲ್ಲ ವಿವಾಹೇತರ ಸಂಬಂಧಗಳೂ ಇಲ್ಲಿ ಬರುತ್ತವೆ. ಅರ್ಥಪೂರ್ಣ ಸಂಬಂಧಕ್ಕಾಗಿ ಹಾತೊರೆಯುವವರದ್ದು ಒಂದು ಪಕ್ಷವಾದರೆ, ಎಲ್ಲವನ್ನೂ ಲಘು ವಾಗಿ ತೆಗೆದುಕೊಂಡು, ಆಯಾ ಕ್ಷಣಗಳನ್ನು ತೀವ್ರವಾಗಿ ಜೀವಿಸುತ್ತಾ ಹೋಗುವ ವರದ್ದು ಇನ್ನೊಂದು ಪಕ್ಷ. ಈ ಎರಡು ತೆರನಾದ ವ್ಯಕ್ತಿತ್ವಗಳ ನಿರಂತರ ತಿಕ್ಕಾಟ, ಸೂಕ್ಷ್ಮ ಮನೋಪ್ರವೃತ್ತಿಯ ಮೊದಲ ತೆರೆದ ಮುಂದಿ ಹತಾಶರಾಗುವ, ತಪ್ತ ರಾಗುವ ಸಂದರ್ಭಗಳು ಇಲ್ಲಿ ಅನೇಕ ಬಂದಿವೆ. ಇದಕ್ಕೆ ಪೂರಕವಾಗುವಂತೆ ಹಳೆಯ ಮತ್ತು ಹೊಸ ಜಗತ್ತುಗಳ ಸಂಬಂಧವೂ ದೇಸಾಯರ ಪ್ರಮುಖ ಆಸಕ್ತಿಯಾಗಿದೆ. ಆದರೆ ಈ ಜಗತ್ತುಗಳ ನಡುವಿನ ಕದಕ ಈ ಸಂಬಂಧವನ್ನು ಅಂತರದಲ್ಲೇ ಪರಿಭಾವಿಸುವುದರಿಂದ, ತೀವ್ರ ಪರಿಣಾಮ ದೇಸಾಯರಲ್ಲಿ ಸಾಮಾನ್ಯವಾಗಿ ಉಂಟಾಗುವುದಿಲ್ಲ. ಜಗತ್ತು ಹಳೆಯದಾಗಲೀ, ಹೊಸದಾಗಲೀ ವ್ಯಕ್ತಿಯ ಸಂಬಂಧದ ತೊಡಕು, ಮನೋವಿಕ್ಷಿಪ್ತತೆ ಇದ್ದದ್ದೇ. ಹಳೆಯ ಜಗತ್ತಿನಲ್ಲಿ ಹೊಂದಾಣಿಕೆಯ ಹುಸಿ ಪರಿಹಾರವಿತ್ತು. ಆಧುನಿಕ ಜಗತ್ತಿನಲ್ಲಿ ಸಾಮಾಜಿಕ ಸಂಸ್ಥೆಗಳ ಕಟ್ಟು ಸಡಿಲಿರುವುದರಿಂದ, ಪ್ರೇಮ ಪ್ರೀತಿಯ ಬಗ್ಗೆ ರೊಮಾಂಟಿಕ್ ಆದ ಪಾವಿತ್ರ್ಯಭಾವ, ಕುಗ್ಗಿರುವುದರಿಂದ ಛಿದ್ರಗೊಳ್ಳುವ ಸಂಬಂಧಗಳು ವ್ಯಕ್ತಿ ಯನ್ನು ಏಕಾಕಿತನದ ದುರಂತಕ್ಕೆ ತಳ್ಳುತ್ತವೆ. ದೇಸಾಯರ ಕತೆಗಳಾದರೂ ಹೇಳಲು ಯತ್ನಿಸುವುದು ಇದನ್ನೇ.

'ಪರಿವರ್ತನೆ'ಯಲ್ಲಿ ಬೇಬಿ ಎನ್ನುವ ಮೇಲ್ಜಾತಿಯ ಹುಡುಗಿ, ಸಿಂಪಿಗರ ಹುಡುಗ ಮಹೇಶನೊಂದಿಗೆ ಓಡಿಹೋಗುವ ಸಂದರ್ಭವಿದೆ. ಈಗ ಮಧ್ಯ ವಯಸ್ಕರಾಗಿರುವ ಹುಡುಗಿಯ ತಂದೆ, ಅವನ ಗೆಳೆಯ ರಾಜಶೇಖರ (ಕತೆಯ ನಿರೂಪಕ) ತಮ್ಮ ಪ್ರಾಯದ ದಿನಗಳಲ್ಲಿ 'ಫ್ಲರ್ಟ್' ಮಾಡಿದವರೇ. ಆದರೆ ಮದುವೆ ಬೇರೆ, ಪ್ರೀತಿಪ್ರಕರಣ ಬೇರೆ ಎಂಬ ವಿಂಗಡಣೆ, ಅವರ ಬದುಕಿನ ಕ್ರಮಗಳನ್ನು ಕ್ಷೇಮವಾಗಿ ಇಟ್ಟಿತ್ತು! ಆಧುನಿಕ ಜಗತ್ತಿನಲ್ಲಿ, ಹೊರಗಿಂದ ಹೇರಲಾಗುವ ಸಾಮಾಜಿಕ ಸಂಸ್ಥೆಗಳು ಸಡಿಲಾಗಿರುವ ಕಾರಣ, ಇಂದಿನ ಗಂಡು ಹೆಣ್ಣು ಎರಡನ್ನೂ ಒಂದೇ ನೆಲೆಯಲ್ಲಿ ಅಪೇಕ್ಷಿಸುತ್ತಾ, ಆ 'ಬುದ್ಧಿವಂತ' ಹಿರಿಯರಿಗೆ ತಲೆನೋವಾಗಿ ಪರಿಣಮಿಸುತ್ತವೆ.

"ಬದಲಾಗುತ್ತಿರುವ ಸಮಾಜದ ಒಂದು ಯಃಕಶ್ಚಿತ ಸಮಸ್ಯೆ ಇದು. ಇದನ್ನು ಹೊಸ ರೀತಿಯಿಂದ, ಹೊಸ ಮೌಲ್ಯಗಳ ದೃಷ್ಟಿಯಿಂದ ಬಿಡಿಸಬೇಕೇ ಹೊರತು, ಈ ಹಳೇ ಪಾರಂಪಾರಿಕ ರೀತಿಯಿಂದ ಬಿಡಿಸಬಾರದು"—ಎಂದು ನಿರೂಪಕ ರಾಜಶೇಖರ ಬಲ್ಲವನು. ಹುಡುಗಿಯ ತಂದೆ ಚಂದ್ರು ಮಗಳ ಸಮಸ್ಯೆಯನ್ನು ಪಾರಂಪಾರಿಕ ದೃಷ್ಟಿಕೋನದಿಂದ ನೋಡಿ, ಬಿಡಿಸಲಿಕ್ಕೆ ಹೊರಬರುವನು. ಅವನ ಗೆಳೆಯ ರಾಜಶೇಖರ ಅದೇ ಸಮಸ್ಯೆಯನ್ನು ಹೊಸ ಮೌಲ್ಯಗಳ ದೃಷ್ಟಿಯಿಂದ ಬಿಡಿಸ ಹೊರಟವನು. ಬೇಬಿಯ (ಹುಡುಗಿಯ) ಮನಸ್ಸನ್ನು ಪರಿವರ್ತಿಸಲೆ ಯತ್ನಿಸುವಾಗ ರಾಜಶೇಖರ ಅವಳಿಗೆ ಹೇಳುವ ಮಾತುಗಳು : 'ಹಳೇ ಕಾಲದಾಗ ಹುಡುಗಿಯರ ಲಗ್ನಾ ಲಗೂನೆಮಾಡಿ, ಅವರಲ್ಲಿಯ ಸಾಹಸ, ಆಶೆ, ಆಕಾಂಕ್ಷಾ ಎಲ್ಲಾ ಕೊಂದು ಲಗೂನೆ ಅವರನ್ನು ತಾಯಂದಿರನ್ನಾಗಿ ಮಾಡಿ, ಜವಾಬ್ದಾರಿಗಳ ಕೈಗೊಂಬೆಮಾಡಿ ಒಗೆದು ಬಿಡ್ತಿದ್ದರು, ಮನೇ ಅನ್ನೋ ಜೈಲಿನ್ಯಾಗ. ನಿನಗೂ ಆ ಹಳೇ ಮಂದಿಗೂ ಏನೂ ಫರಕಿಲ್ಲ...'

'ಬರ್ಟ್ರಾಂಡ್ ರಸೆಲ್ ಏನ್ ಹೇಳ್ತಾನ ಗೊತ್ತದೆಯೇನು– ಈ ಬದಲಾದ ಆಧುನಿಕ ಜೀವನದಲ್ಲಿ ಲೈಂಗಿಕ ಪಾವಿತ್ರ್ಯಕ್ಕೆ ಕಿಮ್ಮತ್ತಿಲ್ಲ ಅಂತ ಹೇಳ್ತಾನ. ಸಮಾಜ ಸುಧಾರಣ ಎಷ್ಟು ಭಯಂಕರ ವೇಗದಿಂದ ನಡದದ ಗೊತ್ತದೆಯೋ ಇಲ್ಲೋ. ಜಾತಿ ಪಾತಿಗಳ ಬೇಲಿ ಹೋಗಲಿಕ್ಕೆ ಹತ್ಯಾವ. ಘಟಸ್ಫೋಟ, ಪುನರ್ವಿವಾಹ, ವಿಧವಾವಿವಾಹ, ಏನ್ ಬೇಕಾದ್ದ ಆಗಲಿಕ್ಕೆ ಹತ್ಯಾವ. ಇಂಥಾ ಕಾಲದಾಗ ವ್ಯಾಲ್ಯೂಜ್ ಅಂತಾರಲ್ಲ ಅವು ಬದಲಾಗೋ ಮುಂದ–ನಿನಗೆ ಆದೇನಾದರೂ ತಪ್ಪ ಮಾಡ್ದೆ ಅಂತ ಅನ್ನಿಸಿದ್ದರ ಈ ವಿಚಾರಾನ ತಗದ ಹಾಕಿ ಬಿಡು–ಬೇರ ದರಸಲೆ ತಗದ ಹಾಕಿ ಬಿಡು..."

ಸಂಪ್ರದಾಯವಾದಿಯಂತೆ ಕಾಣುವ ಚಂದ್ರುವಾಗಲೀ (ಹುಡುಗಿಯ ತಂದೆ), ಆಧುನಿಕನಂತೆ ಕಾಣುವ ರಾಜಶೇಖರನಾಗಲೀ (ನಿರೂಪಕ), ಆಳದಲ್ಲೇನೋ

ಒಂದೇ. ಬೇಬಿಯನ್ನು ಮಹೇಶನಿಂದ ಅಗಲಿಸಲು ಅವರು ಹೂಡುವ ವಿಧಾನಗಳು ಬೇರೆಯವಾದರೂ, ಅವು ಬಯಸುವ ಪರಿಣಾಮ ಒಂದೇ. ಅದು ಸಾಂಪ್ರದಾಯಿಕತೆಯಲ್ಲಿ ಬೇರೂರಿದ ಮನಸ್ಸು ಮಾತ್ರ ಬಯಸುವಂಥದ್ದು. ಯತ್ನದಲ್ಲಿ ಇಬ್ಬರೂ ವಿಫಲರಾಗಿ, ಬೇಬಿ ಮಹೇಶನೊಂದಿಗೆ ಓಡಿ ಹೋಗಿಯೇ ಹೋಗುತ್ತಾಳೆ. ಆಗ ರಾಜಶೇಖರ ಹುಡುಗಿಯ ತಂದೆಗೆ ಹೇಳುವ ಹಿತವಚನ :

"ಇನ್ನು ನಾವು ಹಳೇ ಫೀಡೀ ಜನ. ನಾವೇ ನಮ್ಮ ಮನಸ್ಸನ್ನ ಬದಲು ಮಾಡಿಕೊಳ್ಳಬೇಕು. ಅಂದರೇನೇ ನಮ್ಮ ಬಾಳುವಿ ಛಂದ..."

ಆದರೆ ಈ ಅರಿವು ಕೂಡ ಲೋಕಾಭಿರಾಮವಾಗಿ ಬಂದದ್ದು, ಮನಸ್ಸಿನ ಆಳದ ಲ್ಲ ಎಂಬುದರಲ್ಲೇ ವಿಶೇಷವಿದೆ. ಜೀವನ ಅಂದರೇನು ಗೊತ್ತದೆಯೇನು ನಿನಗ ? ಹಾಹಾಹಾ ! ಜೀವನಂದರ—ಇದನ್ನು ತಗೋ ಏನಪಾ–ನಾ ಆಮ್ಯಾಲೆ ಹೇಳ್ತೀನಿ...', ಎಂದು ವಿಸ್ಕಿಯನ್ನು ಒಡ್ಡುತ್ತಾ ರಾಜಶೇಖರ ಮಾತು ಜಾರಿಸುವಾಗ, ಯಾವ ವಿಶ್ಲೇಷಣೆಗೂ ದಕ್ಕದೆ ತನ್ನ ಪಾಡಿಗೆ ತಾನು ಸಾಗುವ ಜೀವನದ ನಿಗೂಢತೆ ಹೊಳೆದು, ಕತೆಗೆ ಮತ್ತೊಂದು ಅರ್ಥದ ಹೊಳಹು ಕೂಡಿಕೊಳ್ಳುತ್ತದೆ.

ಮದುವೆಯಾದ ಕೆಲವರ್ಷಗಳ ಸುಂದರ ದಾಂಪತ್ಯದ ಅನಂತರ, ಛಿದ್ರಿಸಿಕೊಳ್ಳುವ ಸಂಬಂಧದಿಂದ ನೋಯುವ ದಂಪತಿಗಳ ಚಿತ್ರ 'ಯಾಕೆ' ಎಂಬ ಕತೆಯಲ್ಲಿ ಬಂದಿದೆ.

ನೀವು ನನಗೆ ಬೇಕಾಗಿಲ್ಲ–ನನ್ನ ನಿಮ್ಮ ಬಂಧನದಲ್ಲಿ ಅರ್ಥವಿಲ್ಲ. ಅರ್ಥವಿಲ್ಲ. ಯಾಕೆ ಯಾಕೆ ಅಂತ ಮತ್ತ ಮತ್ತ ಕೇಳ ಬ್ಯಾಡ್ರಿ ಪ್ಲೀಜ್...ನನಗೆ ಬಿಟ್ಟು ಬಿಡಿರಿ ನನಗೆ ಈ ಬಂಧನದ ನರಕವಾಸ ಸಾಕಾಗೇದ–ಇನ್ನು ಎಷ್ಟಂತ ಸಹನ ಮಾಡೋದು· ದೇವರೇ ನನ್ನ ಬಿಡುಗಡೆ ಮಾಡು–ಎಂದು ಚೀರುವ ಪ್ರಮೀಳ ಒಂದು ಕಡೆ 'ನಾನೇನು ತಪ್ಪು ಮಾಡಿದ್ದೇನೆ...? ದೇವರೇ, ಯಾರಿಗೆ ಮೊರೆ ಹೊಗಲಿ, ನನಗೇಕೆ ಈ ಶಿಕ್ಷೆ...? '–ಎಂದು ಮೊರೆಯುವ ಅವಳ ಗಂಡ ಇನ್ನೊಂದು ಕಡೆ. ತಮ್ಮ ದಾಂಪತ್ಯದ ಛಿದ್ರತೆಗೆ ಕಾರಣವೇ ತಿಳಿಯದೆ ಇರುವುದು ಅವರ ವೇದನೆಯನ್ನು ಮತ್ತಷ್ಟು ತೀವ್ರಗೊಳಿಸುವ ಅಂಶವಾಗಿದೆ. ಆಧುನಿಕತೆ ಅವರ ವಿಚ್ಛೇದನಕ್ಕೆ ಸಹಾಯಕ ವಾಗುತ್ತದೆ ಎಂಬುದು ಸಾಮಾಜಿಕ ಸಂಗತಿ. ಆದರೆ ಛಿದ್ರತೆ ಉಂಟಾದ್ದು ಯಾಕೆ ಎಂಬುದೇ ಜೀವನದ ನಿಗೂಢತೆಯ ಕಡೆ ನಮ್ಮನ್ನು ಸೆಳೆಯುವ ಅಂಶ.

'ಹುಚ್ಚ' ಎಂಬ ಇನ್ನೊಂದು ಕತೆಯಲ್ಲಿ ರಾಜಶೇಖರನ ಹಾಗೇ ಮಾತಾಡುವ ಪ್ರೊಫೆಸರ ಪಾಟೀಲರನ್ನು ನಾವು ನೋಡುತ್ತೇವೆ. ಪಾಟೀಲನ ಸ್ಟೂಡೆಂಟ್ ಹೇಮಾ ಈ ಕಥೆಯ ನಾಯಕಿ. ಆನಂದ ಎಂಬ ತನ್ನ ಸಹವಿದ್ಯಾರ್ಥಿಯೊಂದಿಗೆ ನಿಕಟ

ಸ್ನೇಹ ಹೊಂದಿದವಳು. ಆದರೆ ಆನಂದ ಇದ್ದಕ್ಕಿದ್ದಂತೆ ಬೇರೆ ಹುಡುಗಿಯನ್ನು ಮದುವೆಯಾದಾಗ ಆ ಆಘಾತವನ್ನು ಎದುರಿಸಲಾರದೆ ತತ್ತರಿಸಿ ಹೋಗುತ್ತಾಳೆ. 'ಫ್ರೆಂಡ್‌ಶಿಪ್ ಬೇರೆ, ಲಗ್ನ ಬೇರೆ.' ಎಂದು ಹೇಳಬಹುದಾದ ಆನಂದನ ವಿಚಾರ ಅವಳಿಗೆ ಅರಗಿಸಿಕೊಳ್ಳಲಿಕ್ಕೆ ಕಷ್ಟ. 'ನಮ್ಮದು ಮುಖ್ಯವಾಗಿ ಅಕೆಡೆಮಿಕ್ ಫ್ರೆಂಡ್‌ಶಿಪ್ಪು. ಉಳಿದಿದ್ದೇನಾದರೂ ಆಗಿದ್ದರೆ ಸಿನೇಮಾ, ನಾಟಕ, ಪಿಕ್ ನಿಕ್ಕ್, ಹಗ್ಗಿಂಗ್, ಕಿಸ್ಸಿಂಗ್ ಇತ್ಯಾದಿ ಅವೆಲ್ಲಾ ಬಯ್ ಪ್ರಾಡಕ್ಟ್ಸ್'—ಎಂದು ಹೇಳುವುದು ಸಾಧ್ಯವಾಗಬಹುದಾದರೇ ಎಂದು ಹತಾಶಳಾಗಿ ಹೇಮಾ ಯೋಚಿಸುತ್ತಾಳೆ.

ತಪ್ತಳಾದ ಹೇಮಾಳಿಗೆ ಪ್ರೊ. ಪಾಟೀಲ ಸಮಾಧಾನಗೊಳಿಸುವ ರೀತಿ ನೋಡಿ: "ಹೇಮಾ, ಇಂಥಾ ಸಂಗತಿಗಳು ಜೀವನದಲ್ಲಿ ಎಷ್ಟೋ ಬರ್ತಾವೆ, ಹೋಗ್ತಾವೆ. ಅವಕ್ಕೆ ಭಾಳ ಮಹತ್ವಕೊಡಬಾರದು. ನೀವೆಲ್ಲ ಹಿಂದುಸ್ಥಾನದ ನವಸ್ತ್ರೀಯರು— ಪುರುಷರ ಹೆಗಲಿಗೆ ಹೆಗಲು ಹಚ್ಚಿ ಸರಿಸಮಾನರಾಗಿ ದುಡಿಯುವಂಥವರು. ವಿದುಷಿಗಳು. ಕ್ರಾಂತಿ ಮಹಿಳೆಯರು. ನೀವು ಸಾದಾ ಹೆಣ್ಣು ಮಕ್ಕಳಲ್ಲ. ನಿಮಗೆ ಹೊಸ ದೃಷ್ಟಿಕೋನಬೇಕು. ಹೊಸ ಪ್ರಯಾರಿಟೀಸ್ ಬೇಕು. ಹಳೇರೀತಿಯ ರೊಮ್ಯಾಂಟಿಕ್ ಲವ್ಹ್, ಪ್ಯುರಿಟ್ಯಾನಿಕಲ್ ಸೆಕ್ಸ್ ಮುಂತಾದುವುಗಳಿಗೆ ಮಹತ್ವ ಕೊಡಬಾರದು. ಯು ಮಸ್ಟ್ ಟೇಕ್ ಎವ್ರಿಥಿಂಗ್ ಇನ್ ಯುವರ್ ಸ್ಟ್ರೈಡ್ ! ಕೆಲಸ ಮುಖ್ಯ— ಮುಂದಿನ ಗುರಿ ಮುಖ್ಯ !"

ಈ ಆಧುನಿಕತೆಯ ಉಪನ್ಯಾಸ, ಪಾಟೀಲನ ವೈಯಕ್ತಿಕ ಹಿತಾಸಕ್ತಿಯಿಂದ ಮೂಡುವುದೆಂಬುದೇ ಇಲ್ಲಿನ ವಿಶೇಷ.

ಕತೆಯ ಕೊನೆಯಲ್ಲಿ ಬರುವ ಹುಚ್ಚ, ಹೇಮಾಳ ವಿಕ್ಷಿಪ್ತ ಮನಃಸ್ಥಿತಿಯ ಪ್ರತೀಕವಾಗುವುದು, ಸರಳವಾದ ಅರ್ಥೈಸುವಿಕೆಗೆ ಸಾಧ್ಯವಾಗದ ಜೀವನ ವಿನ್ಯಾಸ ವೊಂದು ಆ ನೆಲೆಯಲ್ಲಿ ಸಿದ್ಧವಾಗುವುದು ಕತೆಯ ಗೆಲುವಿನ ಅಂಶಗಳಾಗಿವೆ.

ಎರಡು ವಿಭಿನ್ನ ಜಗತ್ತುಗಳು ಕೂಡದೆ ಹೋಗುವುದು 'ಪ್ರಯಾಣ' ಎಂಬ ಕತೆಯಲ್ಲಿ ತುಂಬ ಚೆನ್ನಾಗಿ ಬಂದಿದೆ. ಹಳ್ಳಿಯಲ್ಲಿರುವ ಕಿಶೋರನ ಅಕ್ಕನದು ಒಂದು ಜಗತ್ತು. ಪೇಟೆಯಲ್ಲಿ ಮೇರಿಯನ್ನು ಮದುವೆ ಮಾಡಿಕೊಂಡಿರುವ ಕಿಶೋರನದು ಇನ್ನೊಂದು ಜಗತ್ತು. ದೇವಕ್ಕ ಕಿಶೋರನನ್ನು ಸಾಕಿ ಬೆಳೆಸಿದವಳು, ಚಿಕ್ಕವಯಸ್ಸಿನಲ್ಲಿ ಗಂಡನ್ನ ಕಳಕೊಂಡು ವಿಧವೆಯಾದವಳು. ಮಾಸ್ತರನೊಬ್ಬನೊಂದಿಗೆ ಅವಳ ಅಕ್ರಮ ಸಂಬಂಧವೂ ಇತ್ತು. ಕಿಶೋರ ಆ ಹಳೇ ಜಗತ್ತಿನಿಂದ ಅನಾಯಾಸವಾಗಿ ಪಾರಾಗಿ ತನ್ನ ಬೇರೊಂದು ಜಗತ್ತನ್ನೇ ನಿರ್ಮಿಸಿದ್ದ. ಸ್ಕೂಲ ಆಫ್ ಇಕನೊಮಿಕ್ಸ –ಪಿಎಚ್.ಡಿ ಮಾಡುವಾಗ ಮೇರಿ ಡಿಕಾಸ್ಟಾಳ ಗುರ್ತು-ಗುರ್ತಿನಿಂದ ಗೆಳೆತನವಾದ ಪ್ರೀತಿ-ಮುಂದೆ ಮೇರಿಯ ಧೈರ್ಯ, ಪ್ರೇರಣೆ, ಜಿಗುಟುತನ ಇವುಗಳಿಂದಾಗಿ

ಕಿಶೋರನ ಹೊಸ ಜಗತ್ತು ನೋಡು ನೋಡುವುದರೊಳಗೇ ನಿರ್ಮಾಣವಾಗಿತ್ತು. ಆದರೆ ಅವನ ತಬ್ಬಲಿ ಅಕ್ಕ ಮಾತ್ರ ಆ ಹಳೇ ಜಗತ್ತಿನ ನರಕದೊಳಗೇ ನೊಂದು, ಬೆಂದು, ಕೊಳೆತು ಸತ್ತು ಹೋದಳು.

ದೇವಕ್ಕ ಸತ್ತಮೇಲೆ, ಊರಿಗೆ ಹೊರಟ ಕಿಶೋರ ಮಾರ್ಗ ಮಧ್ಯದಲ್ಲೇ ತನ್ನ ಪ್ರಯಾಣದ ದಿಕ್ಕು ಬದಲಿಸಿ ಹೆಂಡತಿ ಮಗನೊಂದಿಗೆ ಮಹಾಬಲೇಶ್ವರದ ಕಡೆಯದಾರಿ ಹಿಡಿಯುವಲ್ಲಿ ಕತೆಯ ಪರಿಣಾಮವಿದೆ.

ಕಿಶೋರನ ವಿಚಾರ: 'ನಾವು ಜಮಖಂಡಿಗೆ ಹೋಗೋದರಿಂದ ಯಾರಿಗೆ ಏನು ಆಗಬೇಕಾಗೆದ ? ಬರೀ ಮನಸ್ಸಿಗೆ ಒಣಾ ತೊಂದರೆ. ಅಲ್ಲಿ ಯಾರ ಕಣ್ಣೂನಾ ಒರಸ ಬೇಕಾಗಿಲ್ಲ. ಮತ್ತ ನನ್ನ ಕಣ್ಣೂ ಯಾರೂ ಒರಸಲಾರರು....

'ನಾನೂ...?' ಎನ್ನುತ್ತಾಳೆ ಮೇರಿ. 'ನೀನು? ನೀನೂ ಒರಿಸಲಾರಿ...' ಎಂಬ ಮಾತು ಕಿಶೋರ ನುಂಗಿಕೊಳ್ಳುತ್ತಾನೆ.

ಹೀಗೆ ಆತ್ಯಂತಿಕವಾದ ನಗ್ನ ಸತ್ಯಗಳನ್ನು ಎದುರಿಸುವಲ್ಲೇ ದೇಸಾಯರ ಕತೆಗಳ ವೈಶಿಷ್ಟ್ಯವಿದೆ.

ಒಟ್ಟಾರೆ 'ಪರಿವರ್ತನೆ' ದೇಸಾಯಿಯವರ ಒಂದು ಮುಖ್ಯ ಕಥಾ ಸಂಕಲನ ವಾಗಿದೆ. ಅವರ ಸಾಮಾಜಿಕ ಗ್ರಹಿಕೆ ಕತೆಗಳಿಗೆ ಒಂದು ಹಿನ್ನೆಲೆಯಾಗಿ ಒದಗುತ್ತದೆ. ಆದ್ದರಿಂದ ಅವರಲ್ಲಿ ಕಾಣುವುದು ಸಾಮಾಜಿಕ ಕಾಳಜಿ ಎನ್ನುವುದಕ್ಕಿಂತ, ವ್ಯಕ್ತಿಯ ಸಂದಿಗ್ಧತೆಗಳ ಬಗ್ಗೆಯೇ ಅವರ ಕಾಳಜಿ ಇದೆ ಎನ್ನಬಹುದು. ಬದಲಾದ ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಗಳು ಎದುರಿಸುವ ಸಮಸ್ಯೆ, ವೇದನೆ, ಸಂದಿಗ್ಧಗಳೇ ಅವರ ಕತೆಗಳ ಮುಖ್ಯ ಸಾಮಗ್ರಿಯಾಗುತ್ತದೆ. ಈ ದೃಷ್ಟಿಯಿಂದ ಈಗಲೂ ದೇಸಾಯಿ ಅವರದ್ದು ನವ್ಯ ಮನೋಧರ್ಮವೇ (ವ್ಯಕ್ತಿ ಕೇಂದ್ರಿತವಾದದ್ದು). ಆದರೆ ಈ ವ್ಯಕ್ತಿಯನ್ನು ಒಂದು ನಿಶ್ಚಿತ ಸಾಮಾಜಿಕ ಪರಿವೇಶದಲ್ಲಿ ಇಟ್ಟು ನೋಡುತ್ತಾರೆಂಬ ಕಾರಣ ದೇಸಾಯರ ಕತೆಗಳು ಕನ್ನಡ ಕಥಾ ಸಂಪ್ರದಾಯದಲ್ಲಿ ತಮ್ಮದೇ ಆದ ಮುಖ್ಯ ಸ್ಥಾನ ಪಡೆಯುತ್ತವೆ.

ನಾಯಕ ಮತ್ತು ಇತರರು : ಕೆ. ವಿ. ತಿರುಮಲೇಶ್

ಕವಿ ಎಂದು ಪ್ರಸಿದ್ಧರಾಗಿರುವ ಕೆ. ವಿ. ತಿರುಮಲೇಶರ ಮೊದಲ ಕಥಾ ಸಂಕಲನ : ನಾಯಕ ಮತ್ತು ಇತರರು. ಒಂಭತ್ತು ಕತೆಗಳ ಈ ಸಂಗ್ರಹದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗದ ಎರಡು ಕತೆಗಳು ಅನ್ವೇಷಣೆ : ರೂಮು ; ಅನ್ವೇಷಣೆ: ದಾರಿ. ಇಲ್ಲಿನ ಕಥಾನಾಯಕನಿಗೆ ಹೆಸರಿಲ್ಲ. ಯಾರೂ ಆಗಬಹುದಾದ ಅವನ ಹೆಸರನ್ನು ನಾಯಕನೆಂದೇ ಗುರುತಿಸಲಾಗಿದೆ. ಆದರೆ ಪಾರಂಪರಿಕ ನಾಯಕನ

ಚಾರಿತ್ರ್ಯಕ್ಕೆ ತೀರ ಭಿನ್ನವಾದ ಚಾರಿತ್ರ್ಯ ಇವನದು. ಅಸಂಬದ್ಧವೆನಿಸುವ ಜೀವನ ಸಂದರ್ಭದಲ್ಲಿ ಸಿಲುಕಿಕೊಂಡ ಈತ ಏಕಾಕಿ ಬದುಕಿನ ಅರ್ಥಹೀನತೆ, ಅಸಂಬದ್ಧತೆ, ಕ್ರೌರ್ಯವನ್ನು ತೀವ್ರವಾಗಿ ಅನುಭವಿಸುವ ವ್ಯಕ್ತಿ. ದುಃಸ್ವಪ್ನದಂಥ ವಾತಾವರಣದಲ್ಲಿ ತೊಳಲಾಡುವ ನಾಯಕನ ಮನಃಸ್ಥಿತಿ ಕಾಮು, ಕಾಫ್ಕರ ನಾಯಕರನ್ನು ನೆನಪಿಸುವಂಥದು. ಕತೆಗಳು ಕಟ್ಟಿಕೊಡುವ ವಾತಾವರಣ ಕೂಡ ಅದೇ ಬಗೆಯದು. ಇಡೀ ಕತೆಯ ವಾತಾವರಣ ಒಂದು 'ಅಸಂಗತ' ಸ್ಥಿತಿಯನ್ನು ಓದುಗರ ಮುಂದೆ ಸೃಷ್ಟಿಸುತ್ತದೆ. ಇಂಥ ಮನಃಸ್ಥಿತಿಯನ್ನು ಒಮ್ಮೆಯಲ್ಲ ಒಮ್ಮೆ ಸೂಕ್ಷ್ಮ ಮನಸ್ಕರೆಲ್ಲಾ ಅನುಭವಿಸಿಯೇ ಇರುವುದರಿಂದ, ಕತೆಗಳ ಪರಿಣಾಮ ಕೂಡ ತೀವ್ರವಾದುದೆನಿಸುತ್ತದೆ. ನವ್ಯದ ಉಚ್ಛ್ರಾಯದ ಸಂದರ್ಭದಲ್ಲಿ ಈ ಬಗೆಯ ಕತೆಗಳು ನಮ್ಮಲ್ಲಿ ಸಾಕಷ್ಟು ಬಂದುವಷ್ಟೇ ?

ಭಾಗ ೨ ಮತ್ತು ಭಾಗ ೩ ರ ಕತೆಗಳು ಬೇರೆ ಬಗೆಯವೇ ಆಗಿವೆ. ಇಲ್ಲಿ ತಿರುಮಲೇಶರು ತಮ್ಮದೇ ಆದ ಕಥನವಿಧಾನದ ಶೋಧಕ್ಕೆ ತೊಡಗಿದಂತಿದೆ. ತೀರ ವಾಸ್ತವ ಎನಿಸುವ ಬರವಣಿಗೆಯ ಕ್ರಮ. ಮಾಸ್ತಿಯವರನ್ನು ನೆನಪಿಸುವ ಶೈಲಿ. ಆದರೆ ಮನಸ್ಸಿನ ವಿಚಿತ್ರ ಪ್ರವೃತ್ತಿಗಳನ್ನು ಹಿಡಿಯುವುದೇ ಉದ್ದೇಶ. ಆಧುನಿಕೀಕರಣಕ್ಕೆ ಒಳಪಡುತ್ತಿರುವ ಸಾಮಾಜಿಕ ಸ್ಥಿತಿಯೂ ಹಿನ್ನೆಲೆಯಲ್ಲಿ ಇರುತ್ತದೆ. ದಾಸಣ್ಣನೆಂಬ ದರ್ಜಿಯ ಏಳು ಬೀಳುಗಳನ್ನು ಆಧುನಿಕೀಕರಣದ ಪರಿಣಾಮದೊಂದಿಗೆ ಮೇಳೈಸಿಕೊಡುವ ಪರಿವರ್ತನೆ ಈ ರೀತಿಯಲ್ಲಿ ಬಂದಿರುವ ಸೊಗಸಾದ ಕತೆ (ತೇಜಸ್ವಿಯವರ ಕತೆಯೊಂದನ್ನು ನೆನಪಿಸುವುದಾದರೂ).

'ವಸುಂಧರೆಯ ಮುಖ' ಎಂಬ ಕತೆ ಮನಸ್ಸಿನ ವಿಚಿತ್ರ ಪ್ರವೃತ್ತಿಯನ್ನು ಹಿಡಿಯುವ ಆಸಕ್ತಿಯುಳ್ಳದ್ದು. ತಾನು ಹಿಂದೊಮ್ಮೆ ಪ್ರೀತಿಸಿದ್ದ ವಸುಂಧರೆ ಈಗ ಏಕಾಕಿ ಬರುತ್ತೇನೆಂದು ಪತ್ರ ಬರೆದಿದ್ದಾಳೆ. ತನ್ನ ಸದ್ಯದ ಸಂಸಾರ ಸ್ಥಿತಿಯಲ್ಲಿ ಅವಳನ್ನು ಎದುರಿಸಲು ಬಯಸದೆ ಮನೋಹರ, ಅವಳ ಕಣ್ತಪ್ಪಿಸಲು ಯತ್ನಿಸುತ್ತಾನೆ. ಕತೆಯ ಕೊನೆಯಲ್ಲಿ ಅವಳನ್ನು ನೋಡದೆ ಇರುವುದು ಅಸಾಧ್ಯ ಎಂಬ ಮನಃಸ್ಥಿತಿ ತಲಪಿ, ಅವಳಿಗಾಗಿ ಕಾತರಿಸಿ ಓಡುವ ಮನೋಹರನಿಗೆ, ರೈಲಿನಲ್ಲಿ ಕುಳಿತ ಅವಳ ಮುಖವನ್ನು ಮಾತ್ರ ನೋಡುವುದು ಸಾಧ್ಯವಾಗುತ್ತದೆ. ಕಳೆದು ಹೋದ ಜೀವನದ ಮುಖ ನಮಗೆ ದಕ್ಕದೆ ಹೋಗುವ ದುರಂತ ಕತೆಯಲ್ಲಿ ಪರಿಣಾಮಕಾರಿಯಾಗಿ ಮೂಡುತ್ತದೆ.

ಇಬ್ಬರ, ಕಳ್ಳರ ಕತೆಯನ್ನು ಹೇಳುವ 'ಲಕಡೀಕಾ ಪುಲ್' ಇನ್ನೂ ವಿಚಿತ್ರವಾದ ಆದರೆ ಆಕರ್ಷಕವಾದ ಕತೆ. ಇಲ್ಲಿಯ ಕಳ್ಳರ ಶುಷ್ಕ ಮನಸ್ಸುಗಳಲ್ಲೂ ಸಣ್ಣಗೆ ಹೊಗೆಯುವ ಪ್ರೇಮದ ಕಾತರ ಅನನ್ಯವಾಗಿ ಬರುತ್ತದೆ. ಕತೆಯ ಶೈಲಿ, ವಾತಾ

ವರಣ ಚಿತ್ರಣ, ಪರಿಣಾಮ ರಮಣೀಯತೆ ತನ್ನಷ್ಟಕ್ಕೇ ವಿಶಿಷ್ಟವಿದ್ದು ಲೇಖಕರ ವೈಯಕ್ತಿಕ ಛಾಪು ಕತೆಯ ಮೇಲೆ ಬೀಳುತ್ತದೆ (ಇದೇ ವಸ್ತುವಿನ ಕವಿತೆಯೊಂದನ್ನೂ ಈ ಲೇಖಕರು ಬರೆದಂತೆ ನೆನಪು).

ಅರ್ಥಪೂರ್ಣ ಸಂವಹನ ಸಾಧ್ಯವಾಗದೆ ಹೋಗುವುದರಿಂದ ಉಂಟಾಗುವ ಟೆನ್ಶನ್ 'ಉಪ್ಪು' ಎಂಬ ಕತೆಯಲ್ಲಿ ಬರುತ್ತದೆ. ಇಲ್ಲಿನ ಪಾತ್ರಗಳು ಭಾಷೆ–ಸಾಹಿತ್ಯದ ವಿದ್ಯಾರ್ಥಿಗಳಾಗಿರೋದು ಕತೆಗೆ ಸೊಗಸಾದ ದುರಂತ ವ್ಯಂಗ್ಯದ ದನಿ ನೀಡುತ್ತವೆ. 'ವಾಮನ ಮಾಸ್ತರರ ಏಳು ಬೀಳು' ಒಬ್ಬ ವ್ಯಕ್ತಿಯ ಮೇಲೆ ಕಣ್ಣಿಟ್ಟು, ಇಡೀ ವಾತಾವರಣ ವ್ಯಕ್ತಿಯ ಮನಸ್ಸನ್ನು ಎಳಿಸಿ ಬೀಳಿಸುವ ಕ್ರಮಂದ ಕತೆ. ತೇಜಸ್ವಿ ಈ ಬಗೆಯ ಕೆಲವು ಸೊಗಸಾದ ಕತೆಗಳನ್ನು ಬರೆದಿದ್ದಾರೆ. ತಿರುಮಲೇಶರ ಕತೆಯಲ್ಲಿ ಸೊಗಸಾದ ನಿರೀಕ್ಷೆ (observations) ಗಳಿವೆ. ಕೊನೆಯಲ್ಲಿ ಸ್ವಲ್ಪ ಕುಂಟಿದಂತೆನಿಸಿದರೂ ಕತೆ ಸಾಕಷ್ಟು ಪರಿಣಾಮಕಾರಿಯಾಗಿದೆ.

ತಿರುಮಲೇಶರ ಕತೆಗಳ ವಿಶಿಷ್ಟ ಲಕ್ಷಣ ಅವುಗಳ ಭಾಷೆಯ ಬಳಕೆಯಲ್ಲಿ ಇದೆ. ಅನುಭವದ ಯಾವುದೇ ಸೂಕ್ಷ್ಮ ಪಲುಕನ್ನೂ ಅನಾಯಾಸವಾಗಿ ಹಿಡಿಯುವ ಶಕ್ತಿ ಈ ಭಾಷೆಗಿದೆ. ಸೂಕ್ಷ್ಮವಾದ ನಿರೀಕ್ಷಣೆಗಳಿಂದ ಶೈಲಿ ಹೊಸದನ್ನು ತೆರೆಯುತ್ತಾ ಹೋಗುತ್ತದೆ. ಇಡೀ ಸಂಗ್ರಹದಲ್ಲಿ ತುಂಬ ಹೊಸದೆನಿಸುವ 'ಲಕಡೀ ಕಾ ಪುಲ್' ತಿರುಮಲೇಶರ ಸ್ವಂತಿಕೆಯನ್ನು ತೋರಿಸುವಂಥದ್ದು. ಉಳಿದ ಕೆಲವು ಕತೆಗಳು ಪರಿಣಾಮಕಾರಿಯಾಗಿದ್ದರೂ ಕನ್ನಡ ಕಥಾ ಸಂದರ್ಭಕ್ಕೆ ಹೊಸವೆನಿಸುವುದಿಲ್ಲ.

ಪ್ರತಿಮೆಗಳು : ರಾಘವೇಂದ್ರ ಪಾಟೀಲ

ಪ್ರತಿಮೆಗಳು ರಾಘವೇಂದ್ರ ಪಾಟೀಲರ ಎರಡನೇ ಕಥಾ ಸಂಕಲನ. ಒಡಪುಗಳು ಎಂಬ ಮೊದಲ ಕಥಾಸಂಕಲನದಲ್ಲಿ ಇವರು ಹುಟ್ಟಿಸಿದ್ದ ನಿರೀಕ್ಷೆಯನ್ನು ಬಹುಮಟ್ಟಿಗೆ ಸಫಲಗೊಳಿಸಿರುವ ಸಂಕಲನ.

ಪಾಟೀಲರ ಯಾವುದೇ ಕತೆಯಲ್ಲೂ ಗಟ್ಟಿಮುಟ್ಟಾದ ಒಂದು ಕಥಾಹಂದರ ವಿರುತ್ತದೆ. ಕತೆ ಹೇಳುತ್ತಲೇ ಅನುಭವದ ಸೂಕ್ಷ್ಮಗಳಲ್ಲಿ ಓದುಗನನ್ನು ತೊಡಗಿಸುವುದು ಇವರ ಕಥನವಿಧಾನವಾಗಿದೆ. ಈ ಕತೆಗಳು ಚಿತ್ರಿಸುವ ಪರಿಸರ ಖಚಿತವಾದುದು. ಗೋಕಾವಿ ಕಡೆಯ ಹಳ್ಳಿಗಳ ವಾತಾವರಣ, ಜೀವನ ವಿಧಾನ, ಆಚರಣೆಗಳು, ಅಲ್ಲಿನ ಭಾಷಾ ವೈಶಿಷ್ಟ್ಯದೊಂದಿಗೆ ಪಾಟೀಲರ ಕತೆಗಳಲ್ಲಿ ಆಕಾರ ಪಡೆಯುತ್ತವೆ. ಕತೆಗಳ ಒತ್ತು ಗ್ರಾಮೀಣ ಬದುಕಿನತ್ತ ಇರುವುದಾದರೂ, ಆಧುನಿಕತೆ, ನಗರ ಜೀವನದ ಹೊರಗಣ ಆಕ್ರಮಣಗಳೂ ಇಲ್ಲಿ ಸೂಕ್ಷ್ಮವಾಗಿ ಬಂದೇ ಬರುತ್ತವೆ. ಆದರೆ ಕತೆಯ ನೆಲೆ ಮಾತ್ರ ಗ್ರಾಮೀಣ ಪರಿಸರದ್ದಾಗಿದೆ. ಹಾಗೆಯೇ

ಪಾಟೀಲರ ಬಹಳ ಕತೆಗಳು ಅವರ ಬಾಲ್ಯದ, ನೆನಪಿನ ಸೆಲೆಗಳನ್ನು ಆಧರಿಸಿದವಾಗಿರು ತ್ತವೆ. ಇವರ ಪಾತ್ರಗಳು ಜೀವದ ಶಕ್ತಿಯನ್ನು ಅದರ ಉತ್ಕರ್ಷದಲ್ಲಿ ತೋರಿಸುವ ಪಾತ್ರಗಳಾಗಿರುತ್ತವೆ. ಅವರ ಪ್ರೀತಿ, ದ್ವೇಷ, ರಾಗಗಳು ತೀವ್ರಸ್ತರದವು. ಅಂತೆಯೇ ಪಾತ್ರಗಳ ಸ್ವಭಾವ ಚಿತ್ರಣದಲ್ಲಿ ಜಟಿಲತೆ ಇರುತ್ತದೆ. ಇವ ಒಳ್ಳೆಯವ, ಇವ ಕೆಟ್ಟವ, ಎಂದು ಸರಳವಾಗಿ ನಿರ್ಣಯಿಸಲು ಬರದಂತೆ ಜಟಿಲವಾದ ಹೆಣಿಗೆ ಇರುತ್ತದೆ. ಪರಿಣಾಮವಾಗಿ ಈ ಪಾತ್ರಗಳ ಕೃತಿಗಳು ಕೂಡ ಸರಲ ತಾರ್ಕಿಕ ವಿಶ್ಲೇಷಣಕ್ಕೆ ಸಿಕ್ಕುವಂತಿರುವುದಿಲ್ಲ. ಘಟನೆ ಘಟನೆಯಂತಿರುತ್ತಲೇ ಪ್ರತೀಕಾತ್ಮಕ ವಾಗುವ, ಗದ್ಯ ಗದ್ಯದಂತೆ ಇರುತ್ತಲೇ ಕಾವ್ಯದ ಹೊಗರು ಪಡೆಯುವ ಈ ಲೇಖಕರ ಕಥನ ಕಲೆ ಕನ್ನಡ ಕಥಾಸಂದರ್ಭದಲ್ಲಿ ತನ್ನ ಪಕ್ಕಾ ದೇಸೀತನದಿಂದಲೇ ಗಮನೀಯವೆನಿಸುತ್ತದೆ. ಆದ್ದರಿಂದಲೇ ನವ್ಯದ ಸಂದರ್ಭದ ನಂತರ ರಾಘವೇಂದ್ರ ಪಾಟೀಲರ ಮತ್ತು ಅವರಂತೆ ಬರೆಯುವ ಇತರರ ಕಥನ ಕ್ರಮ ನಮಗೆ ಮುಖ್ಯ ವೆನಿಸುತ್ತವೆ.

ಸಂಗ್ರಹದ ಮುಖ್ಯ ಕತೆಗಳಲ್ಲಿ ಒಂದಾದ ಪ್ರತಿಮೆಗಳು ಜೀವನದ ಎರಡು ಮಾದರಿಗಳ ಮುಖಾಮುಖಿಯಿಂದ ಅಭಿನೀತವಾಗುವ ಕತೆ. ಒಂದು ಗ್ರಾಮೀಣ ವಾದ, ಶಕ್ತವಾದ, ಉತ್ಸಾಹಪೂರ್ಣವಾದ ಬಸ್ಯಾನ ವ್ಯಕ್ತಿತ್ವ. ಇನ್ನೊಂದು ಶಿಷ್ಟವಾದ, ಆಧುನಿಕತೆಯ ಸ್ಪರ್ಶ ಪಡೆದ, ಉರಿಯುವ ನಿರಾಶೆಯ ನಿರೂಪಕನ ವ್ಯಕ್ತಿತ್ವ. ಇಬ್ಬರೂ ಬಾಲ್ಯದ ಗೆಳೆಯರು. ಬಾಲ್ಯದಲ್ಲಿ ಒಟ್ಟಿಗೇ ಸಂಜೀವಿನೀ ಕಡ್ಡಿ ಸಂಪಾದಿಸಲು ಹೋರಾಡಿದವರು. ಸಂಜೀವಿನಿ ಸಂಪಾದಿಸುವ ಹಾದಿಯಲ್ಲಿ ಜೀವಹಿಂಸೆಯಷ್ಟೇ ವಾಸ್ತವ ಸತ್ಯವಾಗುವ ವ್ಯಂಗ್ಯ ಈ ಪ್ರಾರಂಭದ ಪ್ರತೀಕದಲ್ಲೇ ಬಂದಿದ್ದು, ಒಟ್ಟು ಕತೆಯ ಧ್ವನಿಗೆ ಅದು ಉಚಿತವಾದ ಧ್ವನಿ ಪರಂಪರೆಯನ್ನು ನೀಡುವಂತೆ ಬಂದಿದೆ. ಕತೆಯ ಕೊನೆಗೆ, ಹೆಂಡತಿ ಹಲವಿಳಿಯುತ್ತಾ ಹೋದಂತೆ, ಬಸ್ಯಾ ಜೀವನವಿಮುಖಿಯಾಗುವ, ಸೋರಿಹೋಗುವ ಚಿತ್ರ ಕತೆಗೆ ತರ್ಕಕ್ಕೆ ಮೀರುವ ಅರ್ಥವಂತಿಕೆಯನ್ನು ನೀಡುತ್ತದೆ. 'ಕತೆಯ ಕೊನೆಗೆ ಬರುವ ಜೋಲಿಯ ಪ್ರತಿಮೆ ತುಂಬ ಶಕ್ತವಾದುದು. ಎತ್ತರದ ಮರಹತ್ತಿ ತಾನು ನಿಂತ ಕೊಂಬೆಯನ್ನೇ' ಕಡಿಯುವ ಬಸ್ಯಾನ ಚಿತ್ರ ಕತೆಯ ದ್ರವ್ಯವನ್ನು ಪ್ರತಿಮಾತ್ಮಕವಾಗಿ ವ್ಯಂಜಿಸುವ ಲೇಖಕರ ಶಕ್ತಿಯನ್ನು ಸಮರ್ಥವಾಗಿ ವ್ಯಕ್ತಪಡಿಸುತ್ತದೆ.

'ಕಾಡಜ್ಜ' ಸಂಗ್ರಹದ ಇನ್ನೊಂದು ಮುಖ್ಯ ಕತೆ. ಮೊಮ್ಮಗನಿಗಾಗಿ ತೇಗದ ಉಯ್ಯಾಲೆ ಮಾಡಿಕೊಡಲು ಮರದ ಖರೀದಿಗೆ ನಗರಕ್ಕೆ ಹೋದ ಕಾಡಜ್ಜ, ನಗರದಲ್ಲೇ ಸತ್ತು, ಅವನ ಕಳೇಬರವನ್ನು ಹಳ್ಳಿಗೆ ತರಲಾಗುತ್ತದೆ. ಅವನ ಸಂಸ್ಕಾರದ ವಿಧಿಯಲ್ಲಿ ಕತೆಯ ವಿವರಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಹಳ್ಳಿಯ ರಾಜಕೀಯ, ರೀತಿ ನೀತಿ, ಸಂಬಂಧಗಳ ಗಟ್ಟಿತನ, ತೀವ್ರವಾದ ಪ್ರೀತಿ ಆಸ್ಫೋಟಗೊಳ್ಳುವ ವಿಚಿತ್ರರೀತಿ–ಇವುಗಳಿಂದ ಕತೆ ಗಟ್ಟಿಯಾಗುತ್ತಾ ಹೋಗುತ್ತದೆ. ಇದೇ ಕವಿತೆಯ ಮುಖ್ಯ ಎಳೆ ಎಂದು ಖಡಾಖಂಡಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಕತೆಯಲ್ಲಿ ಹಲವು ಎಳೆಗಳು ಹೊಸೆದುಕೊಂಡು ಸಂಕೀರ್ಣತೆ ಪ್ರಾಪ್ತವಾಗುತ್ತದೆ. ನಗರಕ್ಕೆ ಹೊರಟ ಕಾಡಜ್ಜ ರೈಲಿನಲ್ಲಿ ತಾನು ಕೂತ ಹಲಗೆ ಯಾವ ಜಾತಿಯದೆಂದು ಪರೀಕ್ಷಿಸುವುದು, ಬಸ್‌ಸ್ಟ್ಯಾಂಡಿನಲ್ಲಿ ತನ್ನ ಕೈಚೀಲ ಕೆಳಗೆ ಇರಿಸದೆ ನಿಲ್ಲುವುದು, ಕಾಡಜ್ಜನ ಅಸ್ಥಿಸಂಚಯನ ಸಂದರ್ಭದಲ್ಲಿ ಕಾಕ ಮೂಳೆಗಳನ್ನು ಜಜ್ಜಿ ಜಜ್ಜಿ ಚೀಲಕ್ಕೆ ತುಂಬಿದಾಗ, ಕಾಡಜ್ಜನ ಮಗ ಕಾಕನ ಮೇಲೆ ಹಾರಿಬಿದ್ದು ಅವನನ್ನು ಹೊಡೆಯ ತೊಡಗುವುದು, ಆಮೇಲೆ ಹೊಡೆಸಿಕೊಂಡ ಕಾಕಾನೂ ಸೇರಿದಂತೆ ಎಲ್ಲರೂ ಸ್ವಿಚ್ಚು ಹಾಕಿದಂತೆ ಒಮ್ಮೆಗೇ ಗೋಳೋ ಎಂದು ಅಳುವುದು ಮೊದಲಾದುವು ಪಾಟೀಲರ ನಿರೀಕ್ಷಣಾ ಸಾಮರ್ಥ್ಯವನ್ನು ತೋರಿಸತಕ್ಕ ಅಂಶಗಳಾಗಿವೆ.

ಬಸತ್ತಿ ಎಂಬ ನೀಳ್ಗತೆಯಲ್ಲಿ ಈ ಲೇಖಕರ ಕಥನವಿಧಾನ ತನ್ನ ಉತ್ಕರ್ಷವನ್ನು ಕಂಡಿದೆ ಎನ್ನಬಹುದು. ಬೆಳೆಯುವ ಮಗನ ದೃಷ್ಟಿಯಲ್ಲಿ ತಂದೆಯ ವ್ಯಕ್ತಿತ್ವ ರೂಪಿತವಾಗುತ್ತಾ ಹೋಗುತ್ತದೆ. ತಂದೆಯ ಬಗ್ಗೆ ಮಗನ ಗ್ರಹಿಕೆಗಳೂ ಬದಲಾಗುತ್ತಾ ಹೋಗುತ್ತವೆ. ಇದು ಕತೆಯ ಒಂದು ಎಳೆ. ತಂದೆಯ ತಂಗಿ, ತನ್ನ ಓರಿಗೆಯ ಬಸತ್ತಿಯ ವಿಚಿತ್ರ ವ್ಯಕ್ತಿತ್ವ ಮತ್ತು ದುರಂತ ಕತೆಯ ಇನ್ನೊಂದು ಎಳೆ. ಗ್ರಾಮೀಣ ರಾಜಕೀಯ, ಧೂರ್ತತೆ, ರೀತಿ ರಿವಾಜು, ಅಭಿಮಾನ, ಪ್ರೀತಿ ವ್ಯಕ್ತವಾಗುವ ವಿಚಿತ್ರ ಕ್ರಮಗಳು–ಇದು ಕತೆಯ ಇನ್ನೊಂದು ಎಳೆ. ವೈಯಕ್ತಿಕತೆ, ಸಾಮಾಜಿಕತೆ, ಧಾರ್ಮಿಕತೆ, ಲೈಂಗಿಕತೆ ಹೀಗೆ ಅನೇಕ ನೆಲೆಗಳನ್ನು ಒಳಗು ಮಾಡಿಕೊಳ್ಳುವ ಬಸತ್ತಿ ಪಾಟೀಲರ ಮುಖ್ಯಕತೆ ಆಗಿರುವಂತೆ, ಕನ್ನಡ ಕಥಾಸಂದರ್ಭದಲ್ಲಿ ಗಮನಿಸಬೇಕಾದ ಕತೆಯೂ ಆಗಿದೆ.

ಈಗ ಸಂಗ್ರಹಕ್ಕೆ ಅನಂತಮೂರ್ತಿಯವರು ಬರೆದ ಮುನ್ನುಡಿ ಈ ಕತೆಗಳ ಗ್ರಹಿಕೆಗೆ ಸಹಾಯಕವಾಗುವಂತಿದೆ ಮಾತ್ರವಲ್ಲ, ತನ್ನಷ್ಟಕ್ಕೇ ಅನೇಕ ಒಳನೋಟದ ಹೊಳಹುಗಳನ್ನು ಸ್ಫುರಿಸುವ ಬರವಣಿಗೆಯಾಗಿದೆ. ಅವರು ಸೂಚಿಸಿರುವಂತೆ ಪಾಟೀಲರಂಥ ಕತೆಗಾರ ಮುಂದೆ ಬೆಳೆಯಬೇಕಾಗಿದ್ದು ತಮ್ಮ ಸಮೃದ್ಧ ಅನುಭವವನ್ನು ಹೊಸದಾಗಿ ಕಾಣಿಸುವ ನಿಟ್ಟಿನಲ್ಲಿ. ಮನಸ್ಸಿನ ಬೆಳವಣಿಗೆ, ಮಾಗುವಿಕೆ, ಬೆಳವಣಿಗೆಯ ಹಾದಿಯಾಗಬಲ್ಲುದು. ತಮ್ಮ ಬಾಲ್ಯ ಮತ್ತು ನೆನಪಿನ ಸೆಲೆಗಳನ್ನು ವರ್ತಮಾನದಲ್ಲಿ ಹೇಗೆ ಇರಿಸಿ ಅರ್ಥೈಸಬಲ್ಲರೆಂಬುದರ ಮೇಲೆ ಈ ಲೇಖಕರ ಮುಂದಿನ ಬೆಳವಣಿಗೆ ಅವಲಂಬಿಸಿದೆ ಎನಿಸುತ್ತದೆ. ಹಳೆಯ ಜಗತ್ತನ್ನು ನುಚ್ಚುನೂರುಮಾಡುತ್ತಿರುವ ಹೊಸ ಜಗತ್ತು, ಪಾಟೀಲರನ್ನು ಹೇಗೆ ಆಕ್ರಮಿಸುವುದೋ ಕಾದು ನೋಡಬೇಕಾಗಿದೆ.

ತೆರೆದಷ್ಟೇ ಬಾಗಿಲು : ಜಯಂತ ಕಾಯ್ಕಿಣಿ

ತೆರೆದಷ್ಟೇ ಬಾಗಿಲು ಜಯಂತ ಕಾಯ್ಕಿಣಿ ಅವರ ಮೊದಲ ಕಥಾಸಂಕಲನ. ಈ ಸಂಗ್ರಹದ ಆರು ಕತೆಗಳನ್ನು ಎಪ್ಪತ್ತರ ದಶಕದಲ್ಲೂ, ಧನಂಜಯ ಎಂಬ ಕೊನೆಯ ಕತೆಯನ್ನು 1981 ರಲ್ಲೂ ಬರೆದಿದ್ದಾರೆ. ಎಂದರೆ ತಮ್ಮ ಕವಿತೆಗಳ ಜೊತೆ ಜೊತೆಗೇ ಈ ಕತೆಗಳನ್ನೂ ಕಾಯ್ಕಿಣಿ ಬರೆದುಕೊಂಡು ಬಂದಿದ್ದಾರೆ. ಅವರ ಕವಿತೆಗಳಂತೆ ಈ ಕತೆಗಳೂ ತಮ್ಮ ಹಚ್ಚಿಕೊಂಡು ಬರೆಯುವ ಭಾವ ತೀವ್ರತೆ ಮತ್ತು ತೋರಿಕೆ ಇಲ್ಲದ ಪ್ರಾಮಾಣಿಕ ಲಕ್ಷಣಗಳಿಂದ ಆಕರ್ಷಕವಾಗಿರುವುದು ಸಂತೋಷದ ಸಂಗತಿ.

ಆಧುನಿಕ ಸಮಾಜದಲ್ಲಿನ, ವ್ಯಕ್ತಿಗಳ ನಡುವಿನ ಸಂಬಂಧವೇ ಜಯಂತರ ಹೆಚ್ಚಿನ ಕತೆಗಳ ಆಸಕ್ತಿಯಾಗಿದೆ. ಇದು ದೇಸಾಯರ ಕತೆಯಲ್ಲಿ ಬರುವಂತೆ ಗಂಡು–ಹೆಣ್ಣಿನ ನಡುವಿನ ಸಂಬಂಧ ಮಾತ್ರ ಆಗಿರುವುದಿಲ್ಲ. ತಂದೆ ಮಗ, ಗಂಡ ಹೆಂಡತಿ, ವಿವಾಹೇತರ ಸ್ತ್ರೀಪುರುಷ ಸಂಬಂಧ, ಮೇಲ್ವರ್ಗದವ ಕೆಳವರ್ಗದವ ಇವರ ನಡುವಿನ ಸಂಬಂಧ, ಮೇಲ್ಜಾತಿ ಕೆಳಜಾತಿಯವರ ನಡುವಿನ ಸಂಬಂಧ–ಹೀಗೆ ಮನುಷ್ಯ ಸಂಬಂಧಗಳ ವಿಶ್ಲೇಷಣೆ ಸೂಕ್ಷ್ಮವಾದ ವಿವರಗಳ ದಾಖಲೆಯಿಂದ ನಡೆಯುವುದು ಈ ಲೇಖಕರ ಬರವಣಿಗೆಯ ವೈಶಿಷ್ಟ್ಯವಾಗಿದೆ. ಸಾಮಾನ್ಯವಾಗಿ ಎಲ್ಲ ಕತೆಗಳಲ್ಲೂ ಇಬ್ಬರು ಗೆಳೆಯರು ಪರಸ್ಪರ ತಮ್ಮ ತಮ್ಮ ವೈಯಕ್ತಿಕ ಜಗತ್ತುಗಳೊಂದಿಗೆ ಮುಖಾಮುಖಿಯಾಗುವುದು ಈ ಕತೆಗಳ ಒಂದು ಮುಖ್ಯ ಲಕ್ಷಣ. (ಹೀಗೆ ಗೆಳೆತನ ಮತ್ತೆ ಮತ್ತೆ ಪ್ರಸ್ತಾಪವಾಗುವ ಅಡಿಗರ ಕಾವ್ಯ ನೆನಪಾದುದರಿಂದ ಮಾತ್ರ ಇಲ್ಲಿ ದಾಖಲಿಸುತ್ತಿದ್ದೇನೆ). ಆನಂದ ಪಬ್ಬು, ಗೌತಮಶರ್ಮ–ನಿರೂಪಕ, ಭಗೀರಥ–ನಿರೂಪಕ, ಧನಂಜಯ–ಪ್ರಭಾಕರರಾವ್, ಈ ಜೋಡಿಗಳು ಇಂಥ ಮಾದರಿಯನ್ನು ಸೂಚಿಸುತ್ತವೆ. ಅನೇಕ ವೇಳೆ ಈ ಗೆಳೆಯರು, ಒಬ್ಬರ ವ್ಯಕ್ತಿತ್ವ ಇನ್ನೊಬ್ಬರಿಗೆ ಪೂರಕವಾಗುವಂತೆ ಬರುವುದುಂಟು. ಹೆಚ್ಚಿನ ಎಲ್ಲ ಕತೆಗಳೂ ಆತ್ಮಕಥಾನಕ ಶೈಲಿಯಲ್ಲಿದ್ದು (First person narration), ಇನ್ನೊಂದು ಪಾತ್ರದ ಮೂಲಕ ತನ್ನನ್ನು ಶೋಧಿಸಿಕೊಳ್ಳುವ, ಅರ್ಥೈಸಿಕೊಳ್ಳುವ ತಂತ್ರ ಪ್ರಧಾನವಾಗಿದೆ. ವ್ಯಕ್ತಿತ್ವಗಳು ಒಂದನ್ನೊಂದು ಪ್ರಭಾವಿಸುವ, ಆಕ್ರಮಿಸುವ ರೀತಿ ಇಲ್ಲಿ ಚಿತ್ರಿತವಾಗುವುದರ ಜೊತೆಗೆ ಇಂಥ ಆಕ್ರಮಣಗಳನ್ನು ವಿರೋಧಿಸುವ ವ್ಯಕ್ತಿತ್ವದ ಹೋರಾಟವನ್ನು ಜೊತೆ ಜೊತೆಗೇ ಕೊಡಲಾಗುತ್ತದೆ.

ಸಂಕಲನದ ಮುಖ್ಯ ಕತೆಗಳಲ್ಲಿ ಒಂದಾದ 'ಇದ್ದಾಗ ಇದ್ದಾಂಗ'ದಲ್ಲಿ ಪಬ್ಬು ಮತ್ತು ಆನಂದರ ಸಂಬಂಧವನ್ನು ಮೇಲಿನ ನೆಲೆಯಲ್ಲಿ ಅರ್ಥೈಸಲಿಕ್ಕೆ ಬರುತ್ತದೆ. ಅವರಿಬ್ಬರ ಜಗತ್ತುಗಳೂ ಬೇರೆಯಾಗಿವೆ. ಅವರಿಬ್ಬರೂ ಪ್ರತಿನಿಧಿಸುವ ಜೀವನ ಮೌಲ್ಯಗಳು ಭಿನ್ನವಾಗಿವೆ. ಹೀಗಾಗಿ ಆನಂದ ಅಂದುಕೊಳ್ಳುವಂತೆ ಪಬ್ಬು

ಅವನಿಗಿಂತ ತೀರ ಬೇರೆಯೇ ಅನ್ನಿಸಿ ಬಿಡುತ್ತಿದ್ದ. ಹಳ್ಳಿಯಲ್ಲಿ ಬ್ರಿಜ್ಜಿನ ನಿರ್ಮಾಣ ಶುರುವಾದಂತೇ ಹಳ್ಳಿಯ ಜೀವನ ಕ್ರಮದಲ್ಲೂ ತೀವ್ರ ಬದಲಾವಣೆಗಳು ಶುರು ವಾದವು. ಅವು ಸಹಜವಾಗಿಯೇ ಪಬ್ಬು ಮತ್ತು ಆನಂದರನ್ನು ವಿರುದ್ಧ ದಿಕ್ಕಿಗೇ ಸೆಳೆದುಕೊಂಡು ಹೋದವು. ಎರಡು ಅತಿಯನ್ನು ತಾಗುವಂತೆ ರೂಪಿತವಾದ ಈ ವ್ಯಕ್ತಿತ್ವಗಳು ಕತೆಯ ಕೊನೆಯಲ್ಲಿ ಪರಸ್ಪರ ಸಂಧಿಸಿದಾಗ, ಆನಂದನಿಗೆ ಪಬ್ಬು ತನ್ನದೇ ಒಂದು ಅಂಶ ಎನಿಸಿ ಬಿಡುವುದು ಪರಿಣಾಮಕಾರಿಯಾಗಿ ಬಂದಿದೆ. ಪಬ್ಬು ಹೋದ ನಂತರ ತೀವ್ರ ಒಂಟಿತನದ ಪ್ರಜ್ಞೆಯಲ್ಲಿ ನರಳುವ ಆನಂದ ಮಾಂಶಿಯನ್ನು ನಿರ್ವಿಕಾರ ಭಾವದಿಂದ ಒಪ್ಪಿಕೊಳ್ಳುವುದು, ಕನಸುಗಾರಿಕೆಯಿಂದ ಹೊರಳಿದ ಆತ ಕಟು ವಾಸ್ತವವನ್ನು ಧೈರ್ಯವಾಗಿ ಎದುರಿಸುವ ಮನಃ ಸ್ಥಿತಿಗೆ ತಲಪಿದ ಎಂಬುದರ ಸೂಚನೆಯಾಗಿದೆ. ಇದು ಆನಂದ ಒಪ್ಪಿಕೊಂಡ ಪಬ್ಬುವಿನ ವ್ಯಕ್ತಿತ್ವದ ಒಂದು ಭಾಗವೂ ಆಗಿದೆ.

ದಿಗಂಬರ ಕತೆಯಲ್ಲಿ ನಿರೂಪಕ, ಗೌತಮಶರ್ಮನ ವ್ಯಕ್ತಿತ್ವದ ಆಕ್ರಮಣ ವನ್ನು ಎದುರಿಸುವಲ್ಲೇ ತನ್ನನ್ನು ಹುಡುಕಿಕೊಳ್ಳುವ ಕ್ರಮ ಇದೆ. ಆಕ್ರಮಣಕ್ಕೆ ಒಳಗಾಗಿ ತನ್ನನ್ನು ಶೋಧಿಸಿಕೊಳ್ಳುವುದನ್ನು ನಾಯಕ ಇಷ್ಟಪಡುವುದಿಲ್ಲ. ಸಹಜ ವಾಗಿ ಬದುಕುವ ಡ್ರೈವರ್ ಒಬ್ರಿ, ಕೃತ್ರಿಮವಾದ ಗೌತಮನ ಜೀವನ ರೀತಿಗೆ ಬದಲಾದ, ಇನ್ನೊಂದು ಬದುಕಿನ ಸಾಧ್ಯತೆಯಂತೆ ಕಂಡುಬರುತ್ತಾನೆ. ಆದರೆ ಒಬ್ರಿಯ ವ್ಯಕ್ತಿತ್ವ ಕೂಡ ಆಕ್ರಮಣದ ಇನ್ನೊಂದು ಬಗೆಯೇ ಆಗುವುದರಿಂದ, ಅದನ್ನು ದಿಗಿಲಿನಿಂದ ನಿರೀಕ್ಷಿಸುತ್ತಿರುವಲ್ಲಿ ಕತೆ ತನ್ನ ಸೂಕ್ಷ್ಮತೆಯನ್ನು ಉಳಿಸಿ ಕೊಳ್ಳುತ್ತದೆ.

ತೆರೆದಷ್ಟೇ ಬಾಗಿಲು ಕತೆಯಲ್ಲಿ ಈ ಸಂಬಂಧದ ತೊಡಕುಗಳನ್ನು, ಪಲಾಯನ ದಿಂದ ನಿವಾರಿಸಿಕೊಳ್ಳುವ ಇನ್ನೊಂದು ಕ್ರಮ ಇದೆ. ದಿನೂಮಾ ಮಗನ ವ್ಯಕ್ತಿತ್ವ ವನ್ನು ಎದುರಿಸಲಾರದೆ, ಪ್ರೇಯಸಿ ಸರೋಜಳೊಂದಿಗೆ ಊರುಬಿಟ್ಟು ಹೋಗಲು ಯೋಚಿಸುತ್ತಾನೆ. ಮಗ ಸಂಜು ಈ ತೊಡಕನ್ನು ನಿವಾರಿಸುವಂತೆ ತಾನೇ ಅಲ್ಲಿಂದ ಕಳಚಿಕೊಳ್ಳಲು ನಿರ್ಧರಿಸುತ್ತಾನೆ.

ಸಂಗ್ರಹದ ಇನ್ನೊಂದು ಮುಖ್ಯಕತೆ 'ದೀಪಗಳು'. ಅದರಲ್ಲಿ ಶ್ರೀನಿವಾಸನ ಯೋಚನಾಕ್ರಮವನ್ನು ನೋಡಿ: 'ವ್ಯಕ್ತಿ ವ್ಯಕ್ತಿಗಳು ದೂರವಿರುವಾಗ ಕಲ್ಪನೆಗಳು ಊಹೆಗಳು ತಮಗೆ ಬೇಕಾದ ದಾರಿಯಲ್ಲಿ ಗರಿಬಿಚ್ಚಿ ಕುಣಿದು ಊಹೆಯೂ ಸತ್ಯವೇ ಎಂಬಷ್ಟು ಮಾನಸಿಕವಾಗಿ ವ್ಯಕ್ತಿಗಳನ್ನು ಹತ್ತಿರ ನಿಲ್ಲಿಸುತ್ತದೆ. ಮತ್ತು ವಾಸ್ತವಕ್ಕೂ ಇದಕ್ಕೂ ಇರುವ ನಿಜವಾದ ಅಂತರ ಮನಗಂಡಾಗ ಅದನ್ನು ಒಪ್ಪಿಕೊಳ್ಳುವ ಅಥವಾ ಎದುರಿಸುವ ಮನೋಸ್ಥೈರ್ಯ ನಮ್ಮಲ್ಲಿ ಉಳಿಯುವುದಿಲ್ಲ. ಆಗ ನಾವು ಸುಲಭ ದಲ್ಲೇ ಅಗ್ಗವಾಗುತ್ತೇವೆ.'

ಸೂರಪ್ಪ, ಸೂರಪ್ಪ ಸಾಕಿ ಬೆಳೆಸಿದ (ತಾನು ಇಷ್ಟಪಟ್ಟ ಹುಡುಗಿ) ಪರಿಮಳ, ಇಟ್ಟುಕೊಂಡ ಸುಭದ್ರಾ, ಅವಳ ತಮ್ಮ ವಿಶುಮಳ್ಳ ಇವರ ಸಂಬಂಧಗಳ ಗೋಜಲನ್ನು ಬಿಡಿಸಲಾಗದೆ, ಎದುರಿಸಲಾಗದೆ ಹತಾಶನಾಗುವ ಶ್ರೀನಿವಾಸ (ನಿರೂಪಕ) 'ಈ ಸಂಪರ್ಕಗಳು ಬೇಡ ಬೇಡ' ಎಂದು ಚೀರುವ ನೆಲೆಗೆ ಕತೆಯ ಕೊನೆಯಲ್ಲಿ ಬಂದು ಮುಟ್ಟುತ್ತಾನೆ.

ತುಂಬ ಹೃದಯಸ್ಪರ್ಶಿಯಾದ 'ಫೋಟು' ಕತೆಯಲ್ಲಿ ಸ್ನೇಹಿತರ ಮತ್ತು ಅವರ ಪತ್ನಿಯರ ಸಂಬಂಧಗಳ ತೊಡಕು ಇನ್ನೂ ಸೂಕ್ಷ್ಮ ಮತ್ತು ಸಹಜ ದೈನಿಕ ವಿವರಗಳಲ್ಲಿ ಮೂರ್ತಗೊಂಡು, ಲೇಖಕರ ಸಾಮರ್ಥ್ಯವನ್ನು ಸೂಚಿಸುವಂತಿದೆ.

ಜಯಂತರದ್ದು ಸೀಮಿತಕಾಳಜಿ. ವಸ್ತುವೈವಿಧ್ಯ ಅಷ್ಟಾಗಿ ಕಾಣುವುದಿಲ್ಲ. ಆದರೆ ಅವರ ಸೂಕ್ಷ್ಮವಾದ, ಪ್ರಾಮಾಣಿಕವಾದ ಅನುಭವ ಶೋಧನೆಯ ಕ್ರಮ ಅತ್ಯಂತ ವಿಶಿಷ್ಟವಾದದ್ದು. ಆದರಿಂದ ಅವರ ಕತೆಗಳ ಓದು ಒಂದು ಹೃದಯಸ್ಪರ್ಶಿ ಅನುಭವವಾಗಿ ಮಾರ್ಪಡುತ್ತದೆ.

ಪ್ರಮಾಣ : ಈಶ್ವರಯ್ಯ

ಈಶ್ವರಯ್ಯನವರು ಸುಮಾರು ಇಪ್ಪತ್ತು ವರ್ಷಗಳಿಂದಲೂ ಕತೆಗಳನ್ನು ಬರೆದುಕೊಂಡು ಬಂದಿದ್ದಾರೆ. ಆದರೆ ಅವರ ಕತೆಗಳು ಪುಸ್ತಕರೂಪದಲ್ಲಿ ಈಗ ಹೊರಬಂದಿವೆ. 'ಪ್ರಮಾಣ' ಕಥಾಸಂಗ್ರಹದಲ್ಲಿ ಹತ್ತು ಕತೆಗಳಿವೆ. ಸೂಚ್ಯವಾದ, ನಿಯಂತ್ರಿತವಾದ ಬರವಣಿಗೆಯ ಕ್ರಮ ಎಲ್ಲ ಕತೆಗಳಲ್ಲೂ ಕಂಡುಬರುತ್ತದೆ. ಕುತೂಹಲ ಕೆರಳಿಸುವಂತೆ ಕತೆಯನ್ನು ನಿರೂಪಿಸಿಕೊಂಡು ಹೋಗಿ ಬದುಕಿನ ನಿಗೂಢತೆಯನ್ನು, ಅತಾರ್ಕಿಕತೆಯನ್ನು, ವಿರೋಧವನ್ನು ಸೂಚಿಸುವಂತೆ ಸೂಕ್ಷ್ಮವಾಗಿ ಕತೆಯ ಕೊನೆಯಲ್ಲಿ ನಿಗೂಢತೆಯ ಎಳೆಯೊಂದನ್ನು ಸೂಚಿಸುವುದು ಈಶ್ವರಯ್ಯನವರ ಕಥಾತಂತ್ರವಾಗಿದೆ. ಮುನ್ನುಡಿಯಲ್ಲಿ ಯಶವಂತ ಚಿತ್ತಾಲರು ಇದನ್ನು ತುಂಬ ಸಮರ್ಥವಾಗಿ ಗುರ್ತಿಸಿ ವಿಶ್ಲೇಷಿಸಿದ್ದಾರೆ. ಅವರು ಸೂಚಿಸಿರುವಂತೆ ಈಶ್ವರಯ್ಯನವರ ಕತೆಗಳ ವೈಶಿಷ್ಟ್ಯ 'ಘಟನೆಗಳನ್ನು ಒಂದು ವಿಶೇಷ ಕ್ರಮದಲ್ಲಿ ಜೋಡಿಸುವುದರಲ್ಲಿ ಇದೆ. ಈ ಜೋಡಣೆ ನಿರ್ಮಿಸಿದ ರಚನಾವಿನ್ಯಾಸದ ಪರಿಣಾಮವಾಗಿಯೇ ಕತೆ ತನ್ನ ಬಿಗಿದ ಮುಷ್ಟಿಯನ್ನು ಒಂದು ವಿಶೇಷ ಗಳಿಗೆಯಲ್ಲಿ ಮಾತ್ರ ಬಿಚ್ಚುತ್ತ ಒಳಗಿನ ಗುಟ್ಟನ್ನು ಪ್ರಕಟಿಸುತ್ತದೆ. ಹಾಗೂ, ಹಾಗೆ ಪ್ರಕಟಿಸಿದ್ದನ್ನು ಈವರೆಗಿನ ಎಲ್ಲದಕ್ಕೂ ಹೊಂದಿಕೊಳ್ಳುವಂತೆ ಓದುಗನನ್ನು ಆಹ್ವಾನಿಸುತ್ತದೆ. ಯಾಕೆಂದರೆ, ಹಾಗೆ ಹೊಂದಿಸಿಕೊಂಡು ಓದಿದಾಗ ಮಾತ್ರ ಕತೆ ಅರ್ಥವಾಗುತ್ತದೆ. ಸ್ಪಷ್ಟಪಡಿಸುವುದಕ್ಕಿಂತ ಸೂಕ್ಷ್ಮವಾಗಿ ಸೂಚಿಸುವುದರಲ್ಲೇ ಕತೆಗಾರ ಹೆಚ್ಚಿನ ತೃಪ್ತಿ ಕಂಡಂತಿದೆ. ಇದನ್ನೇ ಬೇರೆ ರೀತಿಯಲ್ಲಿ, ಮೆಚ್ಚು ಮಾತಿನಲ್ಲಿ ಹೇಳಬಹುದಾದರೆ

ಇಡೀ ಕತೆಗೆ ಒಂದು ಸುಂದರ ಒಗಟಿನ ರೂಪ ಕೊಟ್ಟದ್ದು ಇಲ್ಲಿಯ ತಂತ್ರದ ಸಾಧನೆಯಾಗಿದೆಯಷ್ಟೇ ಅಲ್ಲ, ಇಲ್ಲಿಯ ಹಲವು ಕತೆಗಳ ಮೆರೆಯಿಸಿದ ಹೊಸತನವೂ ಆಗಿದೆ. ಒಗಟನ್ನು ಬಿಡಿಸುವುದರಲ್ಲೇ ಕತೆ ಕೊಡುವ ಸಂತೋಷವಡಗಿದೆ ಎನ್ನಬಹುದು.' (ಮುನ್ನುಡಿ : ಯಶವಂತ ಚಿತ್ತಾಲ).

ಈಶ್ವರಯ್ಯನವರ ಕತೆಗಳಿಗೆ ಇಂತಹ ಒಗಟಿನ ಬಗೆಯ ಬಂಧವಿರುವುದಾದರೂ, ಕೇವಲ ಚಮತ್ಕಾರ ಈ ರಚನೆಗಳ ಉದ್ದೇಶವಾಗಿರುವುದಿಲ್ಲ. ಬದುಕಿನ ಗಹನತೆಗೆ ಮನಸ್ಸು ತೆತ್ತ ಕಾರಣ, ಅದರ ನಿಗೂಢವನ್ನು ತೀವ್ರವಾಗಿ ಪರಿಭಾವಿಸುವ ರೀತಿಯಲ್ಲಿ ಹುಟ್ಟುವ ತುಬ್ಬುಗಾರ ಅಂಶ ಇದಾಗಿದೆ. 'ಪ್ರಮಾಣ' ಕತೆಯಲ್ಲಿ ಈ ತಂತ್ರ ತನ್ನ ಗಹನತೆಯೊಂದಿಗೆ ಕಾಣಿಸುವುದು ನೋಡಿದಾಗ ಲೇಖಕರ ಕಥನ ಕ್ರಮದ ಬಗ್ಗೆ ಮೆಚ್ಚುಗೆ ಉಂಟಾಗುತ್ತದೆ. ತನ್ನ ಹುಟ್ಟಿನ ಮತ್ತು ಆದರಿಂದ ತನಗೆ ಒದಗಿದ ಸಾಮಾಜಿಕ ಅಂತಸ್ತು, ಆಸ್ತಿಯ ಮೇಲಿನ ಹಕ್ಕು ಹುಸಿಹೋಗುವಾಗ, ಯಾವ ಕಾರಣಕ್ಕಾಗಿ ತಾನು ಕುಂಞಕಣ್ಣನನ್ನು ತಿರಸ್ಕರಿಸಿದ್ದನೋ, ಅದೇ ಕಾರಣಕ್ಕಾಗಿ ಶಂಕರ ತನ್ನನ್ನು ತಿರಸ್ಕರಿಸಿಕೊಳ್ಳುವುದು ಬದುಕಿನ ವಿರೋಧವಿನ್ಯಾಸವಾಗಿದೆ. ಶಂಕರನ ಸಮಸ್ಯೆ ಒಂದೇ ಉಸುರಿನಲ್ಲಿ ವೈಯಕ್ತಿಕವೂ, ಸಾಮಾಜಿಕವೂ, ಆರ್ಥಿಕವೂ ಆಗುವುದು ಕತೆಯ ಹಿರಿಮೆಯನ್ನು ಸೂಚಿಸುವಂಥ ಅಂಶ. ಈ ಲೈಂಗಿಕ ಪಾವಿತ್ರ್ಯ ಮತ್ತು ವಂಶವೃಕ್ಷದ ಸಮಸ್ಯೆ ಈ ಲೇಖಕರನ್ನು ಮತ್ತೆ ಮತ್ತೆ ಕಾಡುವ ಒಂದು ಸಂಗತಿಯಾಗಿದೆ. 'ಚೇಳು' ಕತೆಯಲ್ಲಿ ಈ ಸಮಸ್ಯೆ ಪುನಃ ಕಾಣಿಸಿಕೊಂಡಿದೆ. ಸಂಕಲನದ ಇನ್ನೊಂದು ಯಶಸ್ವೀ ಕತೆಯಾದ 'ಬೆಂಕಿ'ಯಲ್ಲಿ ಕಲ್ಯಾಣಿಯ ಸಾವಿಗೆ ಮಾಧವದಾಯನೊಂದಗಿನ'ಅನೈತಿಕ ಸಂಬಂಧ' ಕಾರಣವಾಗುವುದನ್ನು ನೋಡುತ್ತೇವೆ. 'ನಿಮಗೂ ಸೂತಕ ಉಂಟು, ಹೋಗುವ ಮೊದಲು ಒಂದು ತಂಬಿಗೆ ನೀರು ನೀವೂ ಸುರಿದುಕೊಳ್ಳಿ' ಎಂಬ ತಮ್ಮನ ಮಾತು ಕೇವಲ ನಿಗೂಢದ ಸ್ಫೋಟಕ್ಕಾಗಿ ಬಂದಿಲ್ಲ. 'ನೈತಿಕ ಜವಾಬ್ದಾರಿ' ಒಪ್ಪಿಕೊಳ್ಳಬೇಕೆಂಬ, ತನ್ನ 'ಪಾಪದ ಹೊರೆ' ಹೊರಬೇಕೆಂಬ ಸೂಚನೆ ಕೂಡ ಈ ಮಾತಿನ ಮೂಲಕ ಬಂದ ಹಾಗಿದೆ. ಮೆಟ್ಟಿಲುಗಳ ಕತೆಯಲ್ಲಿ ನಾಯಕನ ಪತನ, ಅವನ ಹೆಂಡತಿ ಮೆಟ್ಟಿಲಿಳಿಯುವ ಕ್ರಿಯೆಯಲ್ಲಿ ಧ್ವನಿತವಾಗಿ, ಅವು ಪರಸ್ಪರ ಪೂರಕವಾಗುವ ದಾರುಣ ವ್ಯಂಗ್ಯವಿದೆ.

ಓಡಿ ಹೋದವನು ಸಂಗ್ರಹದ ಇನ್ನೊಂದು ಮುಖ್ಯ ಕತೆ. ತನ್ನ ಹುಟ್ಟಿದ ಊರು, ಹೆಂಡತಿ, ತಾಯಿ, ತಂದೆ ಬಿಟ್ಟು ಮುಂಬಯಿಗೆ ಓಡಿ ಹೋಗುವ ರವಿ ಮತ್ತು ಹಳ್ಳಿಯಲ್ಲೇ ನೆಲಸಿ ಸಹಜವಾದ ಜೀವನೋತ್ಸಾಹದಲ್ಲಿ ಜ್ವಲಿಸುವ ವಿಶ್ವ ಇಬ್ಬರೂ ಎರಡು ವಿಭಿನ್ನ ಜೀವನ ಕ್ರಮಗಳನ್ನು ಪ್ರತಿನಿಧಿಸುವ ತರುಣರು. ಅಕ್ರಮದಿಂದ ದಂಡಿಯಾಗಿ ಹಣ ಸಂಪಾದಿಸಿಕೊಂಡು ಬರುವ ರವಿ ಹಳ್ಳಿಯ ಬದುಕಿಗೆ, ತನ್ನ ಹೆಂಡತಿಗೆ ಕೂಡ ಹೊರಗಾಗಿ ನಿಲ್ಲುವುದು ರವಿಯ ವೈಯಕ್ತಿಕ

ದುರಂತ. ಜೀವನೋತ್ಸಾಹದ ಚಿಲುಮೆಯಾದ ವಿಶ್ವ ಕ್ಯಾನ್ಸರ್‌ಗೆ ತುತ್ತಾಗಿ ಮರಣೋನ್ಮುಖನಾಗಿರುವುದು ಮಾತ್ರ ಕತೆಯ ದುರಂತ. ವಿಶ್ವ ಸಾಯುತ್ತಿರುವ ಸಂಸ್ಕೃತಿಯ ಪ್ರತೀಕವಾಗಿದ್ದಾನೆಯೇ? ರವಿಯ ತಂದೆ, ತಾಯಿ, ಹೆಂಡತಿ ರವಿಗೆ ವಿಮುಖವಾಗಿ, ವಿಶ್ವನನ್ನು ಒಪ್ಪಿಕೊಳ್ಳುವಲ್ಲಿ ಈ ಕತೆಯ ವಿಚಿತ್ರವಾದ ದಾರುಣ ಪರಿಣಾಮ ಸಾಧಿತವಾಗುತ್ತದೆ.

ಮನಸ್ಸಿನ ಅಸ್ವಸ್ಥತೆಯನ್ನೇ ವಿಜೃಂಭಿಸುವ, ಅದನ್ನು ಸಮತೋಲನ ಗೊಳಿಸುವ ಇನ್ನೊಂದು ಮನೋಧರ್ಮವನ್ನು ಕತೆಯ ವಿನ್ಯಾಸದಲ್ಲಿ ತೋರಿಸದ 'ಶವವಾಗಿ ತೂಗುತ್ತೇನೆ,' 'ಚೇಳು', ನನಗೆ ಇಷ್ಟವಾಗದ ಕತೆಗಳು. ಚಿತ್ತಾಲರು ತುಂಬ ಸೊಗಸಾದ ಕತೆ ಎಂದಿರುವ 'ಭೃಂಗದ ಬೆನ್ನೇರಿ' ಕೂಡ ಹಗಲುಗನಸಿನ ಒಂದು ಲಹರಿಯಾಗಿ ಮಾತ್ರ ಕಾಣುವುದರಿಂದ ಪರಿಣಾಮಕಾರಿ ಎನಿಸುವುದಿಲ್ಲ. ಕತೆಗೆ ಅಗತ್ಯವಾದ ದೃಢವಾದ ವಾಸ್ತವಿಕ ಸ್ನಾಯುಗಳೇ ಅದಕ್ಕೆ ಇಲ್ಲ.

ಆದರೆ ಪ್ರಮಾಣ, ಬೆಂಕಿ, ಓಡಿಹೋದವನು ಕತೆಗಳ ಮೂಲಕ ಈಶ್ವರಯ್ಯ ನವರು ನಮ್ಮ ಗಮನೀಯ ಕತೆಗಾರರಲ್ಲಿ ಒಬ್ಬರಾಗುತ್ತಾರೆ.

ಅಪೂರ್ಣ ಚಿತ್ರಿಕೆಗಳು : ಎ. ವಿ. ಲಕ್ಷ್ಮೀನಾರಾಯಣ,

ಹೊಸಪೀಳಿಗೆಯ ಗಮನೀಯ ಕತೆಗಾರರಲ್ಲಿ ಒಬ್ಬರಾದ ಎ. ವಿ. ಲಕ್ಷ್ಮೀ ನಾರಾಯಣ ತಮ್ಮ ಒಂಬತ್ತು ಕತೆಗಳನ್ನು ಸಂಗ್ರಹಿಸಿ ಅಪೂರ್ಣ ಚಿತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಲಕ್ಷ್ಮೀನಾರಾಯಣರ ಹೆಚ್ಚಿನ ಕತೆಗಳು ದಾರುಣ ಸ್ಮರಣ ಮಾಲಿಕೆಯ ಹಾಗೆ ಇರುತ್ತವೆ. ಮಲೆನಾಡಿನ ಹಳ್ಳಿಯೊಂದರಲ್ಲಿ ತಾವು ಪಡೆದ ಬಾಲ್ಯದ ಅನುಭವಗಳನ್ನು ಮೆಲುಕು ಹಾಕುತ್ತಾ, ಈಗ ನಗರದ ಕೃತಕ ಬದುಕಿಗೆ ರೋಸಿಕೊಂಡು ತ್ರಸ್ತನಾದ ನಾಯಕನ ಮನೋವೇದನೆಗಳು ಈ ಕತೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಒಂದು ಕಳೆದು ಹೋದ ಪ್ರಪಂಚ, ಇನ್ನೊಂದು ದಕ್ಕಿಸಿಕೊಳ್ಳಲಾಗದ ಪ್ರಪಂಚ. ಇವುಗಳ ನಡುವೆ ಭಾವುಕ ಮನಸ್ಸು ಪರಿತಪಿಸು ವುದು ಇಲ್ಲಿ ಮುಖ್ಯವಾಗುತ್ತದೆ, ಆಧುನಿಕ ಜೀವನದಲ್ಲಿ ಯಾಂತ್ರಿಕವಾಗುವ ಸಂಬಂಧಗಳೂ ಕಥಾನಾಯಕನ ತಹತಹಕ್ಕೆ ಕಾರಣವಾಗುತ್ತವೆ. ಲಕ್ಷ್ಮೀನಾರಾಯಣ ರಿಗೆ ದಶಕಗಳ ಹಿಂದಿನ ಹಳ್ಳಿಯ ಜೀವನದ ಬಗೆಗೆ ಇರುವ ನಾಸ್ಟಾಲಜಿ ಗಿಣಿಮರಿಯಿಂ ಒಳಗೆ ನನ ಜೀವ ಮೊದಲಾದ ಕತೆಗಳಲ್ಲಿ ತುಂಬ ಹೃದಯಸ್ಪರ್ಶಿಯಾಗಿ ಬರುತ್ತದೆ. ಮುಖ್ಯವಾಗಿ ಭಾವುಕವಾದ, ಹೃದಯಸ್ಪರ್ಶಿಯಾದ ಈ ಲೇಖಕರ ಕಥಾಶೈಲಿ ಅವರ ಮನೋಧರ್ಮಕ್ಕೆ ತಕ್ಕುದಾಗಿದೆ. ಕತೆಗಳ ಶೈಲಿಯ ಕಾವ್ಯಾತ್ಮಕತೆ, ಭಾವಗೀತಾತ್ಮ ಕತೆ ಕತೆಗಳ ಪರಿಣಾಮವನ್ನು ಹೃದ್ಯಗೊಳಿಸುವಲ್ಲಿ ಸಹಕರಿಸುತ್ತದೆ. ಈ ಭಾಷೆಗೆ ಇರುವ ಚಿತ್ರಕ ಶಕ್ತಿ ಕೂಡ ಅತ್ಯುತ್ತಮ ಮಟ್ಟದ್ದು. ಕತೆಗಳ ಧಾಟಿಯಲ್ಲಿ ಆತ್ಮ

ವ್ಯಂಗ್ಯ ಮುಖ್ಯವಾಗುವುದರಿಂದ, ಅಸ್ವೀಕೃತ ಎಂಬ ಚೆಲುವಾದ ಕತೆಯಲ್ಲಿ ಕಾಣುವಂತಹ ನವುರಾದ ಹಾಸ್ಯವನ್ನು ತರುವುದೂ ಅವರಿಗೆ ಸಾಧ್ಯವಾಗುತ್ತದೆ.

ಲಕ್ಷ್ಮೀನಾರಾಯಣರ ಕತೆಗಳಲ್ಲಿ ಬುದ್ಧಿಗಿಂತ ಭಾವದ ಎಳೆಗಳೇ ಪ್ರಧಾನವಾದುವು. ಆದರೆ ಭಾವನೆಯನ್ನು ಎಲ್ಲೂ ಜನಪ್ರಿಯ ಕತೆಗಾರರ ಮಾದರಿಯಲ್ಲಿ ಇವರು ಸೋರಿ ಹೋಗಲು ಬಿಡುವುದಿಲ್ಲ. ತನ್ನ ಪ್ರಾಣವ ಬಿಟ್ಟಿತು, ಅವಸಾನ, ಬಂದನಾ ಹುಲಿರಾಯ ಮೊದಲಾದ ಕತೆಗಳಲ್ಲಿ ಇವರು ಭಾವವನ್ನು ಸಂಯಮಿಸುವ ರೀತಿ ಆಶ್ಚರ್ಯ ತರುವಂತಿದೆ. ಆದರೆ ಈ ಕತೆಗಳ ಭಾವ ಪ್ರಧಾನ ಲಕ್ಷಣ ಜೀವನದ ಒಟ್ಟು ಗ್ರಹಿಕೆಯಲ್ಲಿ ಸೋಲುವುದೇನೋ ಎನ್ನಿಸುತ್ತದೆ. ಗ್ರಾಮ್ಯ ಜೀವನ ಸುಂದರ, ನಗರ ಜೀವನ ದುರ್ಭರ ಎಂಬುದು ಸರಳ ಗ್ರಹಿಕೆಯಾಗಬಹುದು. ಈ ದೃಷ್ಟಿಯಿಂದ ಲಕ್ಷ್ಮೀನಾರಾಯಣ ತಮ್ಮ ಕತೆಗಳಿಗೆ ಬೌದ್ಧಿಕತೆಯಿಂದ ಗಳಿಸಿಕೊಡಬೇಕಾದ್ದು ಬಹಳವಿದೆ ಅನ್ನಿಸುತ್ತದೆ.

ಲಕ್ಷ್ಮೀನಾರಾಯಣರ ಕತೆಗಾರಿಕೆಯ ಮುಖ್ಯಗುಣ ಅವರ ಪ್ರಾಮಾಣಿಕತೆ, ಭಾವನಾತ್ಮಕತೆ, ಸೂಕ್ಷ್ಮತೆಗಳಲ್ಲಿ ಇದೆ. ಈ ಗುಣಗಳಿಂದಲೇ ಅವರು ಮನಸ್ಸು ಹಿಂಡುವಂಥ ಕತೆಗಳನ್ನು ಬರೆಯಬಲ್ಲರು. ಆದರೆ ಓದುಗರ ಮನಸ್ಸನ್ನು, ಚಿಂತನೆಯನ್ನು ಬೆಳೆಸುವಂಥ ಕತೆಗಾರಿಕೆಗೆ ಬದುಕನ್ನು ಅದರ ಎಲ್ಲ ಕಠೋರವಾಸ್ತವದ ನೆಲೆಯಲ್ಲಿ ನೋಡಿ ಅರಗಿಸಿಕೊಳ್ಳುವ ಜೀರ್ಣ ಶಕ್ತಿ ಬೇಕಾಗುತ್ತದೆ. ಈ ಲೇಖಕರ ಮುಂದಿನ ಕತೆಗಳು ಈ ನೆಲೆಯವಾದಾವೇ ಎಂಬುದನ್ನು ಆಸಕ್ತಿಯಿಂದ ಓದುಗರು ನಿರೀಕ್ಷಿಸಬೇಕಾಗಿದೆ.

ಕೆಂಡಸಂಪಿಗೆ : ಬಿ. ಶಾಮಸುಂದರ

ಕೆಂಡ ಸಂಪಿಗೆ ಬಿ. ಶಾಮಸುಂದರರ ಮೂರನೇ ಕಥಾಸಂಕಲನ. ಸಂಕಲನದಲ್ಲಿ ಹನ್ನೊಂದು ಕತೆಗಳಿವೆ. ನೇರವಾದ, ಸರಳವಾದ ನಿರೂಪಣೆ ಈ ಕತೆಗಳ ಲಕ್ಷಣವಾಗಿದೆ. ಚೊಕ್ಕವಾಗಿ ಕತೆ ಹೇಳುವ ಈ ಲೇಖಕರು, ಕತೆಯ ಪರಿಣಾಮಕ್ಕಾಗಿ ಘಟನೆಗಳನ್ನು ಅವಲಂಬಿಸುತ್ತಾರೆ. ಆದರೆ ಅವುಗಳ ಸಂಭಾವ್ಯತೆ, ಸಹಜತೆಯ ಕಡೆ ಹೆಚ್ಚಿನ ಲಕ್ಷ್ಯ ಇರುವುದಿಲ್ಲ. ಸಾಯಲಾರದವನು ಕತೆಯಲ್ಲಿ ಜೀವನದಲ್ಲಿ ರೋಸಿದ ಶ್ರೀಧರ ಅನೇಕ ವರ್ಷಗಳಿಂದ ಅನೇಕ ರೀತಿಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾ ಬಂದಿರುತ್ತಾನೆ. ಪ್ರತಿ ಬಾರಿ ಆತ್ಮಹತ್ಯೆಗೆ ಪ್ರಯತ್ನಿಸುವಾಗಲೂ ಒಂದೊಂದು ಕಾರಣವಿರುತ್ತದೆ. ಮೊದಲ ಬಾರಿ ಅವನು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಅವನು ಪ್ರೇಮಿಸಿದ್ದ ಮಂಜುಳ ಅವನ ತಂದೆಯ ಅತ್ಯಾಚಾರಕ್ಕೆ ಗುರಿಯಾಗಿ ಆತ್ಮಹತ್ಯೆ ಮಾಡಿಕೊಂಡಾಗ. ಎರಡನೆಯ ಬಾರಿ ಜಾತಿಯ ಕಾರಣದಿಂದ ಇವನಿಗೆ ಉದ್ಯೋಗದಲ್ಲಿ ಬಡ್ತಿ ತಪ್ಪಿದಾಗ. ಈ ಮಧ್ಯೆ ಅವನು ಮದುವೆಯಾದ ರಾಧೆ ಮಗುವನ್ನು

ಹಡೆದು ಮೃತಳಾಗುತ್ತಾಳೆ. ಶ್ರೀಧರ ಕುಡುಕನಾಗುತ್ತಾನೆ. ಅವನ ಇಲಾಖೆಯಲ್ಲಿ ಜಾತಿಯ ಪಿಡುಗು ಇದ್ದದ್ದೇ. ಇವನ ಹೆಸರಿಗೆ ಮಸಿ ಬಳಿಯಲು ಚಂಪಾ ಎಂಬ ಹುಡುಗಿಯನ್ನು ಪ್ರಯೋಗಿಸುತ್ತಾರೆ-ಇವನನ್ನು ಕಂಡರಾಗದವರು. ಆ ಅವಮಾನ ಸಹಿಸಲಾಗದೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಸಾಯಲು ಪ್ರಯತ್ನಿಸುತ್ತಾನೆ. ಆದರೆ ಆಗಲೂ ಆತ್ಮಹತ್ಯೆಯ ಯತ್ನ ವಿಫಲವಾಗುತ್ತದೆ. ವೈದ್ಯರು ಇವನನ್ನು ಬದುಕಿಸುತ್ತಾರೆ. ಒಂದು ಮಾದರಿಗಾಗಿ ಹೀಗೆ ಕತೆಯೊಂದನ್ನು ವಿವರವಾಗಿ ಬಿಡಿಸಿ ತೋರಿಸಿದ್ದೇನೆ. ಇಷ್ಟೆಲ್ಲಾ ಘಟನೆಗಳನ್ನು ಹೆಣೆದೂ ಬರವಣಿಗೆ ಪರಿಣಾಮಕಾರಿ ಆಗುವುದಿಲ್ಲ. ಕಾರಣ ಸೂಕ್ಷ್ಮಗಳಲ್ಲಿ ವಿವರವನ್ನು ಕಾಣಿಸುವಲ್ಲಿ ಲೇಖಕರಿಗೆ ಆಸಕ್ತಿ ಇಲ್ಲ. ಗಟ್ಟಿಯಾದ ದನಿಯ ಈ ಮೇಲುಮೇಲಿನ ಬರವಣಿಗೆಯ ಕ್ರಮ ಇಚ್ಛಿತ ಪರಿಣಾಮ ಬೀರುವಲ್ಲಿ ಸೋಲುವುದು ಅನಿವಾರ್ಯ. ಕಿಟ್ಟಿಯ ತಾತ ಎಂಬ ಕತೆ ಕೂಡ. ಹೀಗೇ ವೃದ್ಧಾಪ್ಯದ ಸಮಸ್ಯೆಯನ್ನು ಭಾವಾತಿರೇಕದಲ್ಲಿ ಹೇಳುತ್ತಾ ಹೋಗುವುದರಿಂದ ಸೋಲುತ್ತದೆ. ಕೆಂಡಸಂಪಿಗೆಯಲ್ಲಿ ತಮ್ಮ ಹೊಸ ದಾಂಪತ್ಯದ ನಡುವೆ ಅನಪೇಕ್ಷಿತ ಅತಿಥಿಯಾಗಿ ಉಳಿದ ಲಲಿತಳನ್ನು ಸಾಗುಹಾಕಲು ಗಂಡ ಹೂಡುವ ಉಪಾಯ, ಬಹಳ ಕ್ರೂಡ್ ಆದ ರೀತಿಯಲ್ಲಿ ಲಲಿತಳ ಬಗ್ಗೆ ಆಸಕ್ತಿ ತೋರುತ್ತಾ ಹೋಗುವುದು! ಪರಿಣಾಮವಾಗಿ ಹೆಂಡತಿಯೇ ಲಲಿತಳನ್ನು ಅವಳ ಮನೆಗೆ ಕಳಿಸಲು ಮುಂದಾಗುತ್ತಾಳೆ! ತಮ್ಮ ಮೂರನೇ ಕಥಾ ಸಂಗ್ರಹದಲ್ಲೂ ಲೇಖಕರು ಈ ಅಬ್ಬರದ, ಸೂಕ್ಷ್ಮರಹಿತ ಬರವಣಿಗೆ ನೀಡುತ್ತಿರುವುದು ಗಮನಿಸಿದಾಗ ತೀವ್ರ ನಿರಾಶೆಯಾಗುತ್ತದೆ.

ನೋಟಕ : ಎಂ. ಬಿ. ನಟರಾಜ್

ಸುಮಾರು ಹತ್ತು ವರ್ಷಗಳ ಕಾಲಾವಧಿಯಲ್ಲಿ ಬರೆದ ಒಂಬತ್ತು ಕತೆಗಳನ್ನು 'ನೋಟಕ'ದಲ್ಲಿ ನಟರಾಜ್ ಸಂಗ್ರಹಿಸಿಕೊಟ್ಟಿದ್ದಾರೆ. ನಟರಾಜರದು ಸಾವಧಾನದ ಸಂಯಮ ಪೂರ್ಣ ಶೈಲಿ. ಕತೆಗಳು ಸಹಜವಾಗಿ ಅರಳಿಕೊಳ್ಳುತ್ತವೆ. ವಿವರಗಳು ಖಚಿತವಾಗಿ, ಸೂಕ್ಷ್ಮವಾಗಿ ನಿರೂಪಿತವಾಗುವುದು ನೋಡಿದಾಗ ಕಥನದ ಬಗ್ಗೆ ಈ ಲೇಖಕರಿಗಿರುವ ಆತ್ಮವಿಶ್ವಾಸ ಸ್ಪಷ್ಟವಾಗುತ್ತದೆ. ನೋಟಕದಲ್ಲಿ ಚಿಕ್ಕ ಹುಡುಗನ ಕಣ್ಣಲ್ಲಿ ಅನುಭವವನ್ನು ನೋಡುವ ಕ್ರಮ, ತಂತ್ರದ ದೃಷ್ಟಿಯಿಂದ ಈಗ ಹಳತು ಎಂಬಂತೆ ತೋರಬಹುದು. ಆದರೆ ಪ್ರಸಾದು (ಚಿಕ್ಕ ಹುಡುಗ) ಅನುಭವವನ್ನು ಎದುರಿಸುವ ಕ್ರಮದಲ್ಲಿ ಉದ್ವಿಗ್ನನಾಗುತ್ತಾ ಹೋಗುವುದು, ಅವನು ನೋಡಿದ ಅನುಭವದ ಉಗ್ರತೆಗೆ ಸಂಬಂಧಿಸಿರದೆ, ಆ ಬಗ್ಗೆ ಹಿರಿಯರ ವಿಭಿನ್ನ ಪ್ರತಿಕ್ರಿಯೆ ಕಾರಣವಾಗುವುದು ಈ ಕತೆಯಲ್ಲಿ ತುಂಬ ಚೆನ್ನಾಗಿ ನಿರೂಪಿತವಾಗುತ್ತದೆ. ಗಂಡು ಹೆಣ್ಣಿನ ನಿಕಟ ಸಂಬಂಧ ತಮ್ಮದೇ ಆದಲ್ಲಿ ಒಂದು, ಇನ್ನೊಬ್ಬರಾದಾಗ ಇನ್ನೊಂದು, ಪ್ರಾಣಿಪ್ರಪಂಚದ್ದಾದಾಗ ಬೇರೊಂದು ಬಗೆಯದು ಆಗಿ ಪ್ರತಿಕ್ರಿಯೆ ಬಂದಾಗ

ಪ್ರಸಾದುವಿಗೆ ಆ ಅನುಭವಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕು ಎಂಬುದು ಗೊಂದಲವಾಗಿ, ನೋಟಕ, ಕತೆಯ ಕೊನೆಯಲ್ಲಿ ನೋಟಕ ಮಾತ್ರವಾಗಿ ಉಳಿಯದೆ ತಾನೂ ಉರಿಯುವ ಅನುಭವದ ಮಧ್ಯೆ ಹಾರಿಕೊಳ್ಳುವುದು ಈ ಕತೆಯಲ್ಲಿ ಮೆಚ್ಚತಕ್ಕ ಅಂಶವಾಗಿದೆ.

'ಉತ್ತರ'ದಲ್ಲಿ ನಿರೂಪಕನ ಯೌವನದ ತಹತಹಗಳು ತೀರ ಸಹಜವಾದ ದೈನಿಕ ವಿವರಗಳಲ್ಲೇ ಸ್ಫುಟಗೊಳ್ಳುತ್ತಾ ಹೋಗುವುದು ಚೆನ್ನಾಗಿ ಬಂದಿದೆ. ಇಂಥ ಕಡೆ ಮಹತ್ವದ ಘಟನೆಗಳ ಅಗತ್ಯವೇ ಕತೆಗಾರರಿಗೆ ಬೀಳುವುದಿಲ್ಲ. ಒಳ್ಳೆಯ ಕತೆಗಾರ ತೀರ ಸಾಮಾನ್ಯವೆಂಬಂತೆ ತೋರುವ ದೈನಿಕದಿಂದಲೂ ಮಹತ್ವದ ಸಂಗತಿಯನ್ನು ಧ್ವನಿಸಬಲ್ಲನಷ್ಟೇ? ಹೀಗೆ ಸಾಮಾನ್ಯ ವಿವರಗಳಲ್ಲೇ ಗಹನವಾದದ್ದು ಹೇಳಬೇಕೆಂಬ ಮಾರ್ಗವನ್ನು ನಟರಾಜರು ಆರಿಸಿಕೊಂಡಿದ್ದಾರೆ. ಎದುರುಮನೆಯ ಹುಡುಗಿ ಮತ್ತು ನಾಯಕನ ನಡುವೆ ಸಹಜವಾಗಿ ಅರಳುವ ಮುದ್ದು ಹುಡುಗಿ ವೀಣಾಳ ಪಾತ್ರ, ಒಂದು ಪ್ರತೀಕದಂತೆಯೂ ರೂಪ ತಾಳುವುದು ಈ ಲೇಖಕರ ಬರವಣಿಗೆಯ ಶಕ್ತಿಯನ್ನು ತೋರಿಸುವಂತಿದೆ.

ಇಡೀ ಸಂಗ್ರಹದಲ್ಲಿ ನಾನು ತುಂಬಾ ಇಷ್ಟಪಟ್ಟ ಕತೆ 'ಉತ್ಸವ'. ಪುರಾಣದ ಕತೆಯೊಂದಕ್ಕೆ ಸಮಾನಾಂತರವಾಗಿ ವರ್ತಮಾನದಲ್ಲಿ ಅಂಥ ಒಂದು ಘಟನೆ ನಡೆದಂತೆ ರೂಪಿತವಾಗಿರುವುದರಲ್ಲಿ ವೈಶಿಷ್ಟ್ಯವಿಲ್ಲ. ಆದರೆ ಉತ್ಸವವೊಂದರ ರಿಚುಯಲ್ ಮೂಲಕ ಆ ಎರಡೂ ಒಂದೇ ಎಂಬಂತೆ ಬೆಸೆಯುವಲ್ಲಿ ಕತೆಯು ದುರಂತದ ಪಾಕವನ್ನು ಸಿದ್ಧಪಡಿಸಿರುವುದು ತುಂಬ ಚೆನ್ನಾಗಿ ಬಂದಿದೆ. ಆದರೆ ನಾಯಕನ ಬಂಡಾಯ ಸರಿಯಾದ ದಿಕ್ಕಿನಿಂದ ಸ್ಫೂರ್ತಿಗೊಳ್ಳದ್ದು ಕತೆಯ ಒಂದು ದುರ್ಬಲ ಎಳೆ.

ಆದರೆ 'ಪ್ರತಿಮೆ' ಕತೆಯಲ್ಲಿ ನಾಯಕ ಬಂಡಾಯ ಹೂಡುವುದು ತನ್ನ ವಿರುದ್ಧವೇ ಆಗಿರುವುದು ಆ ಕತೆಗೆ ಹೊಸ ಆಯಾಮ ನೀಡುತ್ತದೆ. ದೊಡ್ಡ ದೊಡ್ಡ ಮಾತುಗಳ ಆಸರೆಯಲ್ಲಿ ಬದುಕಿನ ಆಗ್ನಿ ದಿವ್ಯಕ್ಕೆ ಬೆನ್ನುಹಾಕಿದ್ದ ನಾಯಕ, ಮಾವನ ಸಾವು, ಅತ್ತೆಯ ಜೀವನ ಹೋರಾಟ, ಸಾವಿತ್ರಿಯ ದುರಂತಗಳನ್ನು ಪರಿಭಾವಿಸಿದ ಮೇಲೆ ಬದುಕಿನ ವಾಸ್ತವ ನೆಲೆಗೆ ಹಿಂದಿರುಗುವುದು ಕತೆಗೆ ವಿಶೇಷ ಅರ್ಥವಂತಿಕೆಯನ್ನು ನೀಡುತ್ತದೆ.

ಈ ಕತೆಗಳಲ್ಲಿ ಇಷ್ಟೆಲ್ಲ ಗುಣಾತ್ಮಕ ಅಂಶಗಳಿದ್ದೂ ಇವು ಏಕೆ ಓದುಗನನ್ನು ಆಲ್ಹಾದಿಸುವಂತಹ ಅನುಭವ ನೀಡುತ್ತಿಲ್ಲ? ಕನ್ನಡ ಕಥಾಸಂದರ್ಭದಲ್ಲಿ ನಟರಾಜರ ವಸ್ತು ಮತ್ತು ಅವನ್ನು ಕಾಣಿಸುವ ಕ್ರಮ ತೀರ ಹೊಸದಾಗಿರುವುದೇ ಅದಕ್ಕೆ ಕಾರಣವೆಂದು ಭಾವಿಸುತ್ತೇನೆ. ಈ ದೃಷ್ಟಿಯಿಂದ ನಟರಾಜರು ಬರೆಯಬಹುದಾದ ಹೊಸ ಕತೆಗಳನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ.

ಚಿಕ್ಕದೊಂದು ಗಿಳಿಯ ಸಾಕಿ : ಜಿ. ಎಸ್. ಉಬರಡ್ಕ

'ಚಿಕ್ಕದೊಂದು ಗಿಳಿಯ ಸಾಕಿ' ಜಿ.ಎಸ್. ಉಬರಡ್ಕರ ಮೊದಲ ಕಥಾಸಂಕಲನ. ಏಳು ಕತೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಎಲ್ಲವೂ ಚಿಕ್ಕ, ಚೊಕ್ಕ ಕತೆಗಳು. ಸುಬ್ರಾಯ ಚೊಕ್ಕಾಡಿಯವರು ಮುನ್ನುಡಿಯಲ್ಲಿ ಗುರ್ತಿಸಿರುವಂತೆ ಈ ಲೇಖಕರ ಕತೆಗಳಲ್ಲಿ ವಿಶ್ಲೇಷಣೆಗಿಂತ ನಿರೀಕ್ಷಣೆಗೇ ಹೆಚ್ಚಿನ ಒತ್ತು ಬೀಳುತ್ತದೆ. ಆದರೆ ನಿರೀಕ್ಷಣೆಗಳ ಆಯ್ಕೆ ಮತ್ತು ಜೋಡಣೆಯಲ್ಲಿ ಸಾಂಕೇತಿಕತೆ ತರುವುದು ಅವರಿಗೆ ಸಾಧ್ಯವಾಗುವುದರಿಂದ, ಕತೆಗಳು ಆಸಕ್ತಿ ಹುಟ್ಟಿಸುತ್ತವೆ.

ಡಾಂಭಿಕತೆಯ ಬಗ್ಗೆ ತಿರಸ್ಕಾರ, ಸಹಜವಾದ ಜೀವನ ಪ್ರೀತಿ, ಮನುಷ್ಯೇತರ ಪ್ರಪಂಚದ ಬಗ್ಗೆಯೂ ಸಹಜವಾದ ಆಸಕ್ತಿ ಈ ಕತೆಗಳಲ್ಲಿ ಕಂಡುಬರುತ್ತದೆ. 'ಚಿಕ್ಕದೊಂದು ಗಿಳಿಯ ಸಾಕಿ' ಮತ್ತು 'ಒಂದು ಬಡಕಾಗೆಯ ಕತೆ'ಗಳಲ್ಲಿ ಬರುವ ಗಿಳಿ, ಕಾಗೆಗಳು ಬೇರೊಂದಕ್ಕೆ ಸಂಕೇತವಾಗುವಂತೇ, ತಮ್ಮ ಸ್ವಂತ ಅಸ್ತಿತ್ವದ ನೋವನ್ನು ವ್ಯಕ್ತಗೊಳಿಸುವುದರಿಂದ ಕತೆಗಳು ವಿಶೇಷವಾದ ಆಸಕ್ತಿ ಹುಟ್ಟಿಸುತ್ತವೆ.

ನನ್ನ ದೃಷ್ಟಿಯಲ್ಲಿ ಸಂಕಲನದ ಅತ್ಯುತ್ತಮ ಕತೆ ಗೋಡೆಗಳ ನಡುವೆ. ಇಲ್ಲಿನ ನಾಯಕಿಯ ಮನಸ್ಸು ಗಂಡನ ಮತ್ತು ಶ್ರೀಮಂತ ವೈದ್ಯರ ನಡುವೆ ತೂಗಾಡುವುದು ಸೂಕ್ಷ್ಮವಾಗಿ ಬಂದಿದೆ. ಅವಳು ಕುಲಟೆ ಎಂಬ ಸುಲಭ ನಿರ್ಣಯಕ್ಕೆ ಬರಲಾಗುವುದಿಲ್ಲ. ಇಲ್ಲಿ ದಾಂಪತ್ಯದ ಪಾವಿತ್ರ್ಯವನ್ನು ವೈಭವೀಕರಿಸಲಾಗಿಲ್ಲ. ಆದರೆ ಆ ದಂಪತಿಗಳ ಸಂಬಂಧ ದಾಂಪತ್ಯದ ಚೌಕಟ್ಟಿಗೂ ಮೀರಿದ್ದು ಎಂಬುದನ್ನು ಅದ್ಭುತವಾಗಿ ಧ್ವನಿಸಲಾಗಿದೆ. ಹೆಂಡತಿ ವೈದ್ಯರೊಂದಿಗೆ ಸಂಬಂಧ ಪಡೆಯುವುದನ್ನು ತೀರ ವ್ಯಾವಹಾರಿಕ ನೆಲೆಯಲ್ಲಿ ಒಪ್ಪಿಕೊಳ್ಳಲಾಗುವಂತೆಯೇ, ಗಂಡ ಹೆಂಡತಿಯ ಸಂಬಂಧ ಸಾಮಾಜಿಕ ಮೌಲ್ಯ ಶ್ರೇಣಿಗೆ ಮಿಕ್ಕಿದ್ದು ಎಂಬುದು ಕತೆಯಲ್ಲಿ ಸೂಕ್ಷ್ಮವಾಗಿ ಬಂದಿದೆ. ಅದನ್ನು ಗಂಡ ಹೆಂಡತಿಯ ಸಂಬಂಧ ಎನ್ನುವುದಕ್ಕಿಂತ ಗಂಡು ಹೆಣ್ಣಿನ ವಿಶಿಷ್ಟ ಸಂಬಂಧ ಎನ್ನುವುದೇ ಯುಕ್ತ. ತನ್ನ ಹೆಂಡತಿ ವೈದ್ಯರ ಸಂಬಂಧ ತಿಳಿದೂ, ಆಕೆಯಿಲ್ಲದ ಬಾಳು ಅಸಾಧ್ಯ ಎನ್ನಿಸಿ ಪತಿ ಅವಳ ಬಳಿಗೆ ಹಿಂದಿರುಗುವುದು ಸೂಕ್ಷ್ಮ ವಿವರಗಳಲ್ಲಿ ವ್ಯಕ್ತವಾಗಿದೆ. ಇಂಥ ಕತೆಯನ್ನು ತಮ್ಮ ಮೊದಲ ಸಂಗ್ರಹದಲ್ಲಿ ನೀಡಬಲ್ಲ ಲೇಖಕನ ಬಗ್ಗೆ ಹೆಚ್ಚಿನ ನಿರೀಕ್ಷೆ ಕೆರಳುವುದು ಸಹಜವೇ ಆಗಿದೆ.

ಚಂದನಾ : ಕಮಲಾ ಹಂಪನಾ

ಚಂದನದಲ್ಲಿ ಎಂಟು ಕತೆಗಳಿವೆ. ಇತಿಹಾಸ, ಶಾಸನ, ಪುರಾಣ ಮತ್ತು ಜಾನಪದದಲ್ಲಿ ದೊರೆಯುವ ಬೇರೆ ಬೇರೆ ಕಥಾ ಪ್ರಸಂಗಗಳನ್ನು ಆಧರಿಸಿ, ಅವನ್ನು ಸಣ್ಣ ಕತೆಗಳ ರೂಪದಲ್ಲಿ ಪುನಾರಚಿಸಿರುವುದು ಈ ಸಂಗ್ರಹದ ಲಕ್ಷಣವಾಗಿದೆ. ಕತೆಗಳು ಓದಿಸಿಕೊಳ್ಳುವಂತಿವೆ.

ರೆಕ್ಕೆ ಮುರಿದಿತ್ತು : ಕಮಲಾ ಹಂಪನಾ

ರೆಕ್ಕೆ ಮುರಿದಿತ್ತು ಕಥಾ ಸಂಕಲನದಲ್ಲಿ ಒಂಬತ್ತು ಕತೆಗಳಿವೆ. ಬದುಕಿನ ವಿಶ್ಲೇಷಣೆ ಇಲ್ಲಿ ಹೆಣ್ಣಿನ ದೃಷ್ಟಿಯಿಂದ ಆಗುತ್ತದೆ. ಕಮಲಾ ಅವರು ಕತೆ ಹೇಳುವ ತಂತ್ರವನ್ನು ಸಾಧಿಸಿಕೊಂಡಿದ್ದಾರೆ. ಎಲ್ಲ ಕತೆಗಳಲ್ಲೂ ಸರಳ ನೇರ ನಿರೂಪಣೆ ಇದೆ. ಸುಗಂಧಿ, ಕಾಮನಬಿಲ್ಲು, ರೆಕ್ಕೆ ಮುರಿದಿತ್ತು ಓದಬಹುದಾದ ಕತೆಗಳು. ಹೇಳಬೇಕಾದ ಕತೆಯನ್ನು ಹೇಳಿ ಮುಗಿಸಿ ವಿರಮಿಸುವುದು ಇವರ ಬರವಣಿಗೆಯ ಲಕ್ಷಣ. ಸಂಕಲನಕ್ಕೆ ಗೀತಾಕುಲಕರ್ಣಿ ಅವರ ಮುನ್ನುಡಿ ಇದೆ.

ನಕ್ರ ಹಾಗೂ ನಾನು : ಹಾಡ್ಲಹಳ್ಳಿ ನಾಗರಾಜ್.

ಏಳು ಕತೆಗಳ ಸಂಗ್ರಹ. ಹಾಡ್ಲಹಳ್ಳಿ ನಾಗರಾಜ್ ಆಕರ್ಷಕವಾಗಿ ಕತೆ ಹೇಳ ಬಲ್ಲರು. ಸರಳತೆ, ಪ್ರಾಮಾಣಿಕತೆ ಈ ಕತೆಯ ಗುಣವಾಗಿದೆ. ತೀಟೆಯಲ್ಲಿ ಶ್ರೀಮಂತ ದಂಪತಿಗಳು, ಗಂಡನಲ್ಲಿ ಪುರುಷತ್ವ ಇಲ್ಲದ್ದರಿಂದ ಕಾಲೇಜಿನಲ್ಲಿ ಓದುತ್ತಿದ್ದ ತರುಣ ರಂಗೇಗೌಡನ ಪರಿಚಯ ಬೆಳೆಸಿ ಅವನಿಂದ ಮಗುವೊಂದನ್ನು ಪಡೆಯುತ್ತಾರೆ. ಮಗುವಾದ ನಂತರ ಅವನ ಸ್ನೇಹವನ್ನು ತಿರಸ್ಕರಿಸುತ್ತಾರೆ. ಇಂಥ ಕತೆ ಆಕರ್ಷಕ ಆಗಬಹುದಾದರೂ, ಸಂಭಾವ್ಯತೆಯ ದೃಷ್ಟಿಯಿಂದ ನೋಡಿ ದಾಗ ಮೆಚ್ಚುವುದು ಕಷ್ಟ. ಕತ್ತಲಲ್ಲಿ ಕರಗಿಹೋದವನು ಕತೆಯಲ್ಲಿ ನಾಯಕ ರಮೇಶ ತಂದೆ ತಾಯಿಯ ಆಸೆ ತೀರಿಸಲು, ಮರ್ಯಾದೆ ಉಳಿಸಲು ತಾನು ಅಷ್ಟಾಗಿ ಇಷ್ಟ ಪಡದ, ಹೆಣ್ಣನ್ನು ಮದುವೆಯಾಗಿ ದುಃಖಿಯಾಗುತ್ತಾನೆ. ಘಟನೆಗಳ ಮಂಡನೆ ಯಲ್ಲಿ ಸೂಕ್ಷ್ಮತೆ ಕಾಣದೆ ನಿರಾಶೆಯಾಗುತ್ತದೆ. 'ಗೌಡ್ರು, ನಕ್ರ ಹಾಗೂ ನಾನು' ಸಂಕಲನದ ಮುಖ್ಯ ಕತೆ. ಇದರಲ್ಲೂ ನಕ್ರನ ಹೆಂಡತಿ ಮತ್ತು ಭೂಮಿಯನ್ನು ಅಕ್ರಮವಾಗಿ ಗೌಡರು ಭೋಗಿಸುವುದು ಸಿದ್ಧ ಮಾದರಿಯಾಗಿದೆ. ಕತೆಯ ಕೊನೆಗೆ ನಕ್ರನ ಅರಿವಿನ ಸ್ಫೋಟವಾಗುವುದು ಮಾತ್ರ ಮೆಚ್ಚತಕ್ಕ ಅಂಶ ಎನ್ನಬಹುದು.

ಜೀವನ ನಕ್ಕಿತು : ಎ. ಎಫ್. ಲಕ್ಷ್ಮೇಶ್ವರ

ಜೀವನ ನಕ್ಕಿತು ಎ. ಎಫ್. ಲಕ್ಷ್ಮೇಶ್ವರರ ಎರಡನೆಯ ಕಥಾ ಸಂಕಲನ. ಈ ಸಂಕಲನದಲ್ಲಿ ಆರು ಕತೆಗಳಿವೆ. ಬರವಣಿಗೆಯಲ್ಲಿ ತೋರಿಕೆಯ ಆಡಂಬರವಿಲ್ಲ. ಸಂಭಾಷಣೆಗಳನ್ನು ಹೆಚ್ಚಾಗಿ ಬರೆಯುತ್ತಾ ಆಕರ್ಷಕವಾಗಿ ಕತೆಯನ್ನು ಹೇಳಿಕೊಂಡು ಹೋಗುತ್ತಾರೆ. 'ಬಂಗಾರದ ಸರ' ಎಂಬ ಮೊದಲ ಕತೆ ಮೊಪಾಸಾನ ನೆಕ್ಲೇಸ್‌ನ ಪ್ರಭಾವದಿಂದ ಬಂದಿರುವುದನ್ನು ಮುನ್ನುಡಿಯಲ್ಲಿ ಕೃಷ್ಣಮೂರ್ತಿ ಪುರಾಣಿಕರು ಸರಿಯಾಗಿ ಗುರ್ತಿಸಿದ್ದಾರೆ. ಯಾರು ಯೋಗ್ಯರು ಎಂಬ ಕತೆಯಲ್ಲಿ ಲೇಖಕರು ವ್ಯಂಗ್ಯವನ್ನು ಚೆನ್ನಾಗಿ ಬಳಸಿದ್ದಾರೆ. ಎಂ. ಎಲ್. ಎ. ಇಂದ ಆಗದ ಕೆಲಸ ಕ್ಷೌರಿಕನೊಬ್ಬನಿಂದ ಆಗುತ್ತದೆ. ಕ್ಷೌರಿಕನಿಂದ ಆಗುತ್ತದೆ ಎಂಬುದು ಕತೆಗೆ

ಚೊಪಾದ ವಿಡಂಬನೆಯು ಗುಣವನ್ನು ನೀಡಿದೆ. ಸರಳವಾದ ಚುರುಕಾದ ಬರವಣಿಗೆ ಓದಬಯಸುವವರಿಗೆ ಈ ಲೇಖಕರು ಒಳ್ಳೆಯ ಸಾಮಗ್ರಿ ನೀಡಬಲ್ಲರು.

ಬೆಳೆ ಮೇದ ಬೇಲಿಗಳು : ಟಿ. ಬಸವರಾಜ

ಭಾವಾತಿರೇಕದ ಬಾಲಿಶ ಕತೆಗಳನ್ನು ಬಸವರಾಜ ತಮ್ಮ ಸಂಗ್ರಹದಲ್ಲಿ ನೀಡಿದ್ದಾರೆ. ಸಿನಿಮಾಕ್ಕೆ ಹೇಳಿಮಾಡಿಸಿದಂಥ ಕತೆಗಳು. ಉದಾಹರಣೆಗೆ ದುರ್ಭೋಗ ಎಂಬ ಕತೆಯನ್ನು ನೋಡಬಹುದು, ಮೋಹನ ಮತ್ತು ಮೋಹಿನಿ ಅಣ್ಣ ತಂಗಿ. ತಂದೆ ತಾಯಿಗಳ ಆತ್ಮಹತ್ಯೆಯಿಂದ ಅನಾಥರಾದರು. ಆಗ ಅವರ ವಯಸ್ಸು ಕ್ರಮವಾಗಿ 8–6. ಎಂಟು ವರ್ಷಗಳ ನಂತರ ಮೋಹನ ಕಾಲೇಜಿನಲ್ಲಿ ಓದುತ್ತಿದ್ದಾನೆ. ಒಬ್ಬ ಶ್ರೀಮಂತರ ಸಾಕುಮಗಳಿಗೆ ಮನೆ ಪಾಠ ಮಾಡತೊಡಗಿದಾಗ, ಅದು ಪ್ರೇಮಕ್ಕೆ ತಿರುಗಿ, ಒಂದು ದಿನ ಅವರಿಬ್ಬರೂ ಒಂದಾಗುತ್ತಾರೆ. ಆ ಹುಡುಗಿಗೆ ಮೋಹನ ತನ್ನ ಹಳೆಯ ಕತೆ ಹೇಳಿದಾಗ ಹುಡುಗಿ 'ಅಣ್ಣಾ' ಎಂದು ಕಿರುಚುತ್ತಾಳೆ ಅವಳು ಅಗಲಿದ ಅವನ ತಂಗಿಯೇ ಆಗಿರುತ್ತಾಳೆ. ಅವಳು ಮಹಡಿಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅಣ್ಣನೂ ಹಿಂದೆಯೇ ಮಹಡಿಯಿಂದ ಹಾರಿ ಮೃತನಾಗುತ್ತಾನೆ. 'ಎರಡೂ ದೇಹಗಳ ರಕ್ತ ಒಂದಾಗಿ ಹರಿಯತೊಡಗಿತು'. ಇಂಥ ಕತೆಯನ್ನು ಓದಿದ ವಿಮರ್ಶಕ ದಿಗ್ಭ್ರಮೆಗೊಳ್ಳುವುದು ತೀರ ಸಹಜ.

ನಾಲ್ಕು ತರಂಗ : [ಸಂ.] ರತ್ನಾಕರ ವೈದ್ಯ

ರತ್ನಾಕರ ವೈದ್ಯ, ಚಂದಪ್ಪ ಪಟ್ಟದಾರ, ತಾ. ಸಿ. ತಿಮ್ಮಯ್ಯ ಮತ್ತು ಗವಿಸಿದ್ಧ ವಿದ್ಯಾಸಂದ್ರ, ಈ ನಾಲ್ವರ ಮೂರು ಮೂರು ಕತೆಗಳನ್ನು ಸಂಪಾದಕ ರತ್ನಾಕರ ವೈದ್ಯರು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಜಾಳು ಜಾಳಾದ ಬಾಲಿಶ ಬರವಣಿಗೆ ಎಲ್ಲ ಕತೆಗಳಲ್ಲಿ ಸಮಾನವಾಗಿ ಕಂಡುಬರುತ್ತದೆ.

'ಡ್ರಣ್...ಡ್ರಣ್...ಎಂದು ಗಡಿಯಾರವು ಸದ್ದು ಮಾಡಿತು. ರಮೇಶನಿಗೆ ನಿದ್ರೆಯಿಂದ ದೂರವಾಗಲು ಬೇಸರವಾಗಿತ್ತು. ಮಂಚದ ಮೇಲೆ ಹೊರಳಾಡುತ್ತಾ ಯೌವನದ ಮಬ್ಬು ಮುತ್ತಿಗೆ ಹಾಕುತ್ತಾ ನಾನಾ ತರಹದ ಕನಸು ಕಾಣುತ್ತಿದ್ದ. ರಮೇಶನು ಅದೆಂತು ಹಾಸಿಗೆಯಿಂದ ಏಳುವನು ? ಗಡಿಯಾರದ ಸದ್ದು ಹಾಗೆ ನಡೆದೇ ಇತ್ತು. ಅದರ ತಲೆಯಮೇಲೊಂದು ಹೊಡೆತ ಹಾಕಿದನು. ಆಗ ಗಡಿಯಾರವು ಆ ಹೊಡೆತಕ್ಕೆ ಸಹಿಸದೆ ತನ್ನ ಸದ್ದನ್ನು ನಿಲ್ಲಿಸಿತು...

—ಇದು ಬರವಣಿಗೆಯ ಶೈಲಿ. ಯಾವುದೇ ನೆಲೆಯಲ್ಲೂ ಸಮಾಧಾನ ಕೊಡಲಾಗದ ಪುಸ್ತಕ ಇದು.

ಅನುವಾದಗಳು

ಗಂಗಾ-ಕಾವೇರಿ : ತಿಪ್ಪೇಸ್ವಾಮಿ

ಕನ್ನಡದ ಅನೇಕ ಶ್ರೇಷ್ಠ ಕೃತಿಗಳನ್ನು ಹಿಂದಿಗೆ, ಹಿಂದಿಯ ಅನೇಕ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತರುತ್ತ ಮಹತ್ವದ ಕೆಲಸ ಮಾಡುತ್ತಿರುವ ತಿಪ್ಪೇಸ್ವಾಮಿ ನಿಜಕ್ಕೂ ಅಭಿನಂದನಾರ್ಹರು. ಗಂಗಾ ಕಾವೇರಿಯಲ್ಲಿ ಆಧುನಿಕ ಹಿಂದೀ ಕಥಾ ಸಾಹಿತ್ಯವನ್ನು ಕನ್ನಡಿಗರಿಗೆ ಪರಿಚಯ ಮಾಡಿಸುವ ಒಳ್ಳೆಯ ಯೋಜನೆಯನ್ನು ಈ ಲೇಖಕರು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಗಂಗಾ-ಕಾವೇರಿಯಲ್ಲಿ 17 ಮಂದಿ ಹಿಂದಿ ಭಾಷೆಯ ಪ್ರಸಿದ್ಧ ಲೇಖಕರ 17 ಕತೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಭೀಷ್ಮ ಸಾಹನಿ, ಮೋಹನ್ ರಾಕೇಶ್, ನಿರ್ಮಲವರ್ಮ, ಮೊದಲಾದ ಖ್ಯಾತ ಲೇಖಕರ ಸಣ್ಣ ಕತೆಗಳು ಇಲ್ಲಿವೆ. ಪುಸ್ತಕದ ಕೊನೆಯಲ್ಲಿ ಆ ಎಲ್ಲ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಅನುವಾದಕರು ಕೊಟ್ಟಿರುವುದು ತುಂಬ ಉಪಯುಕ್ತವಿದೆ. ಹಿಂದೀ ಕಥಾಸಾಹಿತ್ಯದ ಬಗ್ಗೆ ಒಂದು ದೀರ್ಘ ಪ್ರಸ್ತಾವನೆಯನ್ನೂ ಅನುವಾದಕರು ಕೊಟ್ಟಿದ್ದರೆ ಓದುಗರಿಗೆ ಇನ್ನೂ ಅನುಕೂಲವಾಗುತ್ತಿತ್ತು.

ಅನುವಾದವನ್ನು ಓದುತ್ತಿದ್ದರೆ ಕನ್ನಡದ್ದೇ ಕತೆಗಳನ್ನು ಓದಿದ ಅನುಭವ ವಾಗುತ್ತದೆ. ಬರವಣಿಗೆ ಅಷ್ಟು ಸಹಜವಾಗಿದೆ. ಕತೆಗಳ ಆಯ್ಕೆ ಕೂಡ ಮೆಚ್ಚು ವಂತಿದೆ. ಒಂದು ಚೂರು ಬಿಸಿಲು, ಸಮುದ್ರ ಮತ್ತು ಸೂರ್ಯನ ನಡುವೆ, ನಿರ್ವಾಸಿತ, ಪಪಾಡ ಮೊದಲಾದವು ಯಾವುದೇ ಭಾಷೆಗೂ ಮರ್ಯಾದೆ ತರುವ ಸೊಗಸಾದ ಕತೆಗಳು.

ಕುಂಭಪುರದ ಬಹದ್ದೂರ : ಅನು. ಇಂದಿರಾಪ್ರಿಯ

ಇಂದಿರಾಪ್ರಿಯ (ಕೈ. ಜಿ. ಮೊಕಾಶಿ) ಅವರು, ಎಮ್. ಜಿ. ಶಿರಾಳಿಯವರು ಇಂಗ್ಲಿಷ್‌ನಲ್ಲಿ ಬರೆದ ಕೆಲವು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿ ಈ ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ. ಎಮ್. ಜಿ. ಶಿರಾಳಿಯವರು ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಕುಮಟಾದವರು. ಸದ್ಯ ಮುಂಬೈನಲ್ಲಿ ನೆಲೆಸಿರುವ ಇವರು ಬರೆದ ಅನೇಕ ಇಂಗ್ಲಿಷ್ ಕತೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಏಳು ಕತೆಗಳನ್ನು ಇಂದಿರಾಪ್ರಿಯ ಅನುವಾದಕ್ಕೆ ಆರಿಸಿಕೊಂಡಿದ್ದಾರೆ.

ಈ ಏಳು ಕತೆಗಳಿಗೂ ಒಂದು ಏಕಸೂತ್ರವಿದೆ. ಎಲ್ಲವೂ ಕುಂಭಾಪುರಕ್ಕೆ ಸಂಬಂಧಿಸಿರುವುದು ಸಂಗ್ರಹದ ವಿಶಿಷ್ಟ ಲಕ್ಷಣವಾಗಿದೆ. ಜೊತೆಗೆ ಎಲ್ಲ ಕತೆಗಳಲ್ಲೂ

ನವುರಾದ ಶುಭ್ರ ಹಾಸ್ಯವಿದೆ. ಸಂತೋಷವಾಗಿ ಓದಬಹುದಾದ ಕತೆಗಳಿವು. ಪುಸ್ತಕದ ಮುದ್ರಣ, ಪುಸ್ತಕಕ್ಕೆ ಬಳಸಿರುವ ಹಾಳೆ ಕಳಪೆಯಾಗಿರುವುದು ಮಾತ್ರ ಬೇಸರ ತರಿಸುತ್ತದೆ.

ಕಿವುಡು ವನದೇವತೆ : ಈಶ್ವರಚಂದ್ರ

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್‌ದವರ ನಿರಂಜನರ ಸಂಪಾದಕತ್ವದಲ್ಲಿ ವಿಶ್ವಕಥಾಕೋಶದ ಸಂಪುಟಗಳನ್ನು ಹೊರತರುತ್ತಾ ಬಹಳ ಶ್ಲಾಘ್ಯವಾದ ಕಾರ್ಯವನ್ನು ಮಾಡುತ್ತಿದ್ದಾರೆ. ಕಿವುಡು ವನದೇವತೆ ಈ ಮಾಲೆಯ 24ನೇ ಸಂಪುಟವಾಗಿದೆ. ಸಂಪುಟಕ್ಕೆ ಪ್ರಧಾನ ಸಂಪಾದಕರಾದ ನಿರಂಜನರ ವಿದ್ವತ್ಪೂರ್ಣವೂ ಉಪಯುಕ್ತವೂ ಆದ ಸವಿಸ್ತಾರ ಪ್ರಸ್ತಾವನೆಯಿದೆ.

'ಕಿವುಡು ವನದೇವತೆ'ಯಲ್ಲಿ ದಕ್ಷಿಣ ಅಮೆರಿಕಾದ ಪ್ರಸಿದ್ಧ ಕತೆಗಾರರ 14 ಕತೆಗಳಿವೆ. ಗಾಬ್ರಿಯೇಲ್ ಗಾರ್ಸಿಯಾ ಮಾರ್ಕ್ವೆಜ್, ರಿಕಾರ್ಡೋ ಪಾಲ್ಮನಂಥ ವಿಶ್ವವಿಖ್ಯಾತ ಲೇಖಕರೂ ಇಲ್ಲಿದ್ದಾರೆ. ಕನ್ನಡದಲ್ಲಿ ಸ್ವತಃ ಒಳ್ಳೆಯ ಕತೆಗಾರರಾದ ಈಶ್ವರಚಂದ್ರ ಈ ಕತೆಗಳನ್ನೆಲ್ಲಾ ಅನುವಾದಿಸಿದ್ದಾರೆ. ಯಾವುದೇ ಕೆಲಸವನ್ನೂ ತುಂಬ ಮುತುವರ್ಜಿಯಿಂದ ಶಿಸ್ತಿನಿಂದ ಮಾಡುವ ಈಶ್ವರಚಂದ್ರರ ಅನುವಾದ ಅತ್ಯುತ್ತಮ ಮಟ್ಟದ್ದಾಗಿದೆ. ಪುರಾಣದ ಕತೆಯನ್ನು ವರ್ತಮಾನದ ಅಗತ್ಯಕ್ಕೆ ಸಾಂಕೇತಿಕವಾಗಿ ಬಳಸಿಕೊಳ್ಳುವ ಕಿವುಡು ವನದೇವತೆ, ಮಾನವೀಯತೆಯ ಹಿರಿಮೆಯನ್ನು ಎತ್ತಿಹಿಡಿಯುವ ಔದಾರ್ಯ, ತಾಯಿಯ ಮನಸ್ಸನ್ನು, ಕಳ್ಳ ಮಗನ ಬಗ್ಗೆಯೂ ಅದು ತುಡಿಯುವ ಪರಿಯನ್ನು ಅನನ್ಯವಾಗಿ ಚಿತ್ರಿಸುವ 'ಮಂಗಳವಾರ ಮಧ್ಯಾಹ್ನದ ಲಘು ನಿದ್ದೆ' ಮೊದಲಾದ ಕತೆಗಳನ್ನು ಓದುವುದೇ ಒಂದು ಅಪೂರ್ವ ಅನುಭವ.

ಇಬ್ಬರು ಗೆಳೆಯರು : ಅನು. ಕೆ. ವಿ. ನಾರಾಯಣ

ಸ್ಪೇನ್ ಮತ್ತು ಪೋರ್ಚುಗಲ್‌ದ ಹತ್ತು ಕತೆಗಳು ಈ ಸಂಕಲನದಲ್ಲಿವೆ. ವಿಶ್ವಕಥಾಕೋಶದ ಈ 19ನೇ ಸಂಪುಟಕ್ಕೂ ನಿರಂಜನರ ಅಭ್ಯಾಸಪೂರ್ಣ ಪ್ರಸ್ತಾವನೆ ಇದೆ. ಈ ಕತೆಗಳ ಗುಣಮೌಲ್ಯ ದಕ್ಷಿಣ ಅಮೇರಿಕಾದ ಕತೆಗಳಷ್ಟು ಘನವಾದ್ದು ಎನಿಸುವುದಿಲ್ಲ. ಆದರೂ ಇಬ್ಬರು ಗೆಳೆಯರು, ಸಾಕ್ರಟೀಸನ ಹುಂಜ, ಒಬ್ಬ ಬುಲೆರೋಗೆ ಲಾಜರು ಸಲ್ಲಿಸಿದ ಸೇವೆ, ಕೊನೆಯ ದೇವದೂತ ಮೊದಲಾದುವು ಆಕರ್ಷಕ ಕತೆಗಳು. ಪೋಪರ ಕ್ಷಮಾಪತ್ರ ಮಾಡುವ 'ಬುಲೆರೋ' ಒಬ್ಬನ ಧೂರ್ತತನವನ್ನು ವರ್ಣಿಸುವ 'ಒಬ್ಬ ಬುಲೆರೋಗೆ' ದೇವರ ಹೆಸರಿನಲ್ಲಿ ನಡೆಸುವ ಅನಾಚಾರವನ್ನೂ ಬಿಂಬಿಸುವುದಾದ ಕಾರಣ ಮುಖ್ಯವೆನಿಸುತ್ತದೆ. ಆದರೆ ಸೂಕ್ಷ್ಮ

ಓದುಗ ಬುಲೆರೋ ಮತ್ತು ಪೋಲೀಸಿನವನ ತಂತ್ರವನ್ನು ಕತೆಯ ಮಧ್ಯೆಯೇ ಊಹಿಸಲು ಸಾಧ್ಯ.

ಈ ಸಂಕಲನದ ಕತೆಗಳನ್ನು ಕೆ. ವಿ. ನಾರಾಯಣ ಸಮರ್ಥವಾಗಿ ಅನುವಾದಿಸಿದ್ದಾರೆ.

ನಿಗೂಢ ಸೌಧ ; ಅನು. ಬಸವರಾಜ ನಾಯ್ಕರ

ಇದು ವಿಶ್ವಕಥಾಕೋಶದ 21ನೇ ಸಂಪುಟ. ನಿರಂಜನರ ಸವಿಸ್ತಾರ ಪ್ರಸ್ತಾವನೆ ಇದೆ. ಫ್ರಾನ್ಸ್‌ನ ಹನ್ನೊಂದು ಕತೆಗಳು ಈ ಸಂಕಲನದಲ್ಲಿವೆ. ಬಾಲ್ಜಾಕ್, ವಾಲ್ಟೇರ್,ಸ್ಟೆಂಡಾಲ್, ವಿಕ್ಟರ್ ಹ್ಯೂಗೋ, ಬಾದಲೇರ್, ಮೊಪಾಸಾ, ಕಾಮೂ, ಸಾರ್ತ್ರ್–ಹೀಗೆ ಇಲ್ಲಿನ ಅನೇಕ ಲೇಖಕರು ನಮಗೆ ಈಗಾಗಲೇ ಪರಿಚಿತರಾಗಿರುವ ವಿಶ್ವವಿಖ್ಯಾತ ಲೇಖಕರು ಕತೆಗಳ ಗುಣಮಟ್ಟ ಶ್ರೇಷ್ಠವಾದದ್ದು, ಅಷ್ಟೇ ವೈವಿಧ್ಯ ಪೂರ್ಣವಾದದ್ದು. ಈ ಮಾಲಿಕೆಯ ಶ್ರೇಷ್ಠ ಸಂಕಲನಗಳಲ್ಲಿ ಇದೂ ಒಂದು ಎನ್ನಬಹುದು.

ಬಸವರಾಜನಾಯ್ಕರ ಅನುವಾದ ಉತ್ತಮವಾಗಿದೆ. ಸಣ್ಣ ಕತೆಗಳಲ್ಲಿ ಗಂಭೀರ ಆಸಕ್ತಿ ಉಳ್ಳ ಓದುಗರು ಅಗತ್ಯ ಓದಬೇಕಾದ ಸಂಗ್ರಹವಿದು.

ಬಾಲ ಮೇಧಾವಿ : ಅನು. ಎಚ್. ಎಸ್. ರಾಘವೇಂದ್ರರಾವ್

ಇದು ವಿಶ್ವ ಕಥಾ ಕೋಶದ 18ನೇ ಸಂಪುಟ. ನಿರಂಜನರ ಉಪಯುಕ್ತವಾದ ಪ್ರಸ್ತಾವನೆ ಇದಕ್ಕೂ ಇದೆ. ಜರ್ಮನಿಯ ಪ್ರಸಿದ್ಧ ಕತೆಗಾರರ ಹದಿನೈದು ಕತೆಗಳು ಈ ಸಂಕಲನದಲ್ಲಿ ಇವೆ. ಟೊಮಾಸ್ ಮಾನ್, ಗೂಂಟರ್‌ಗ್ರಾಸ್, ಬೆರ್‌ಟೋಲ್ಟ್ ಬ್ರೆಕ್ಟ್ ಮೊದಲಾದ ವಿಶ್ವವಿಖ್ಯಾತ ಕತೆಗಾರರ ಕತೆಗಳೂ ಇಲ್ಲಿವೆ. ಹೆಚ್ಚಿನ ಕತೆಗಳು ಶ್ರೇಷ್ಠ ಗುಣಮೌಲ್ಯದವು.

ಎಚ್. ಎಸ್. ರಾಘವೇಂದ್ರ ರಾವ್ ಈ ಸಂಗ್ರಹದ ಅನುವಾದಕರು. ಅತ್ಯಂತ ತೃಪ್ತಿದಾಯಕ ಅನುವಾದ ಇಲ್ಲಿದೆ. ಕನ್ನಡದ ನುಡಿಗಟ್ಟುಗಳನ್ನೋ, ಪ್ರಸಿದ್ಧ ಕಾವ್ಯ ಪಂಕ್ತಿಗಳನ್ನೋ ಹದವಾಗಿ ಬಳಸುತ್ತಾ ಅನುವಾದದಲ್ಲಿ ಕನ್ನಡ ಭಾಷೆಯ ಜಾಯಮಾನವನ್ನು ಸಾಧಿಸುವ ಪ್ರಯತ್ನದಲ್ಲಿ ಅನುವಾದಕರು ಯಶಸ್ವಿ ಆಗಿದ್ದಾರೆ.

ಸಾವಿಲ್ಲದವರು : ನಿರೂಪಣೆ – ಸಿ. ಕೆ. ನಾಗರಾಜರಾವ್

ಇದು ವಿಶ್ವ ಕಥಾಕೋಶದ 25ನೇ ಸಂಪುಟ. ಪ್ರಧಾನ ಸಂಪಾದಕರಾದ ನಿರಂಜನರ ಸಂಕ್ಷಿಪ್ತ ಪ್ರಸ್ತಾವನೆ ಇದೆ. ವಿಶ್ವ ಕಥಾಕೋಶದ ಸಂಪುಟಗಳಲ್ಲಿ ಇದು ಸ್ವಲ್ಪ ಭಿನ್ನ ಸ್ವರೂಪದ್ದು. ವಿಶ್ವದ ಐದು ಪ್ರಾಚೀನ ಮಹಾ ಕಾವ್ಯಗಳಿಂದ

ಆಯ್ದು 10 ಕತೆಗಳನ್ನು ನಮ್ಮ ಹಿರಿಯ ಲೇಖಕರಾದ ಸಿ. ಕೆ. ನಾಗರಾಜರಾಯರು ಕನ್ನಡದಲ್ಲಿ ನಿರೂಪಿಸಿದ್ದಾರೆ.

ಗಿಲ್ಗಮೇಶನ ಮಹಾಕಾವ್ಯ, ಇಲಿಯಡ್, ಒಡಿಸ್ಸಿ, ರಾಮಾಯಣ, ಮಹಾಭಾರತಗಳಿಂದ ಆಯ್ದು 10 ಪ್ರಸಂಗಗಳು ಈ ಸಂಗ್ರಹದಲ್ಲಿ ಇವೆ. ಪ್ರಸಂಗಗಳಿಗೆ ಸಣ್ಣ ಕತೆಯ ರೂಪ ಕೊಡುವಲ್ಲಿ ಲೇಖಕರು ಸಾಕಷ್ಟು ಯಶಸ್ವಿಯಾಗಿದ್ದಾರೆ.

ತಾತನ ಹುಟ್ಟುಹಬ್ಬ : ಸಿ. ಎಚ್. ಪ್ರಹ್ಲಾದರಾವ್

ವಿಶ್ವ ಕಥಾಕೋಶದ ಈ ಹದಿನೇಳನೇ ಸಂಪುಟಕ್ಕೆ ಯಥಾಪ್ರಕಾರ ನಿರಂಜನರ ಉಪಯುಕ್ತ ಪ್ರಸ್ತಾವನೆ ಇದೆ. ಈ ಸಂಗ್ರಹದಲ್ಲಿ ಹಾಲೆಂಡ್, ಬೆಲ್ಜಿಯಮ್, ಸ್ವಿಟ್ಜರ್‌ಲೆಂಡ್‌ನ ಹನ್ನೆರಡು ಕತೆಗಳಿವೆ. ಹೆರ್ಮನ್ ಹೀಜರ್‌ಮಾನ್ಸ್, ಜಸ್ಟಸ್ ವಾನ್ ಎಫೆನ್, ನಿಕೊಲಸ್ ಬೀಟ್ಸ್, ಮಾರ್ಟಿನ್ ಮಾರ್ಟೆನ್ಸ್, ಜೊಹಾನ್ಸ್ ವಾಲ್ಟ್ ಮೊದಲಾದವರು ಈ ಸಂಗ್ರಹದ ಕತೆಗಾರರು. ತಾತನ ಹುಟ್ಟುಹಬ್ಬ, ಸಂಶಯ, ನೆರಳು, ಅಸೂಯೆ, ನರ್ತನದ ದಂತ ಕಥೆ ಸಂಗ್ರಹದ ಶ್ರೇಷ್ಠ ಕತೆಗಳು. ರೂಪಕ ಭಾಷೆಯಲ್ಲಿ ಸಾಗುವ ನರ್ತನದ ದಂತ ಕಥೆ ಒಂದು ಅದ್ಭುತ ಫ್ಯಾಂಟಸಿ ಆಗಿರುವಂತೆಯೇ ಭೂಮಿಯ ದುರಂತವನ್ನೂ ಸೂಚಿಸುವ ಕತೆಯಾಗಿದೆ.

ಸರಳವಾದ, ಚಿಕ್ಕ ಚಿಕ್ಕ ವಾಕ್ಯಗಳ ಅನುವಾದ ತುಂಬ ಸೊಗಸಾಗಿದೆ. ಇಂಥ ಉತ್ತಮ ಅನುವಾದಕ್ಕಾಗಿ ಪ್ರಹ್ಲಾದರಾಯರು ಅಭಿನಂದನಾರ್ಹರು.

ಮರಳುಗಾಡಿನ ಮದುವೆ : ವಾಸುದೇವ

ವಿಶ್ವ ಕಥಾಕೋಶದ 23ನೇ ಸಂಪುಟ. ನಿರಂಜನರು ಎಂದಿನಂತೆ ಉಪಯುಕ್ತ ಪ್ರಸ್ತಾವನೆ ಬರೆದಿದ್ದಾರೆ. ಪಶ್ಚಿಮ ಏಷ್ಯದ 13 ಕತೆಗಳು. ಈ ಸಂಗ್ರಹದಲ್ಲಿವೆ. ಅಲ್ ಅಸ್ಮಾಇ, ಘಾನೆಮ್ ಅಲ್ ದಬ್ಬಾಘ್, ಹೆಲೆನ್ ದವೀದಿಯನ್, ಸಮದ್ ಬೆಹ್ರೆಗನಿ, ಇಬ್ರಾಹಿಂ ಶೇಖ್, ಅರಫ್ ಅಲ್‌ಖೌರಿ ಮೊದಲಾದವರು ಇಲ್ಲಿನ ಕತೆಗಾರರು. ಬಡತನದ ದಾರುಣತೆ, ಮಾನವೀಯತೆಯ ಹಿರಿಮೆ, ತಾಯಿ ಮಕ್ಕಳ ವಾತ್ಸಲ್ಯ ಮೊದಲಾದುವನ್ನು ಚಿತ್ರಿಸುವ ಇಲ್ಲಿನ ಕತೆಗಳು ಆಕರ್ಷಕವಾಗಿವೆ. ಪ್ರಾಣಿ ಪಕ್ಷಿಗಳೂ ಇಲ್ಲಿನ ಕೆಲವು ಕತೆಗಳಲ್ಲಿ ಮುಖ್ಯ ಪಾತ್ರಗಳಾಗುತ್ತವೆ. 'ಮನೆಗೊಂದು ಜಮಖಾನ'ದಂತಹ ಸರಳ ಕತೆಯಲ್ಲಿ ಕೂಡ ಹೊಮ್ಮುವ ಪ್ರಬಂಧ ಧ್ವನಿ ಆಶ್ಚರ್ಯ ಹುಟ್ಟಿಸುವಂಥದ್ದು.

ವಾಸುದೇವರ ಅನುವಾದ ತೃಪ್ತಿಕರವಾಗಿದೆ.

ಬೆಳಗಾಗುವ ಮುನ್ನ : ಶ್ರೀಕಾಂತ

ಇದು ವಿಶ್ವಕಥಾ ಕೋಶದ ಇಪ್ಪತ್ತೆರಡನೆ ಸಂಪುಟ. ಕ್ಯೂಬಾ ಜಮೇಯಿಕಾದ ಹತ್ತು ಕತೆಗಳು ಇಲ್ಲಿವೆ. ಪ್ರಸ್ತಾವನೆಯಲ್ಲಿ ಕತೆಗಳ ಅಭ್ಯಾಸಕ್ಕೆ ಅನುಕೂಲವಾಗುವ ಹಿನ್ನೆಲೆ ಸಾಮುಗ್ರಿಯನ್ನು ನಿರಂಜನ ಒದಗಿಸಿದ್ದಾರೆ. ಲಿನೊ ನಾವಸ್ ಕಾಲ್ವೊ, ಉಂಬರ್ತೊ ಅರೆನಾಲ್, ಆನೆಲ್ಯು ರ್ಥೂರ್ಜೆ ಕಾರ್ದೋಸೋ, ಲುಯಿಜ್ ಆಗುಯಾರೊ ಮೊದಲಾದವರು ಈ ಸಂಗ್ರಹದ ಕತೆಗಾರರು. ಜೀಪ್‌ನಲ್ಲಿದ್ದ ನಾಲ್ವರು, ಬೆಳಗಾಯಿತು, ಬೆಕ್ಕಿನ ಎರಡನೇ ಮರಣ, ಅಂಗವಿಕಲ ಮೊದಲಾದವು ಆಕರ್ಷಕ ಕತೆಗಳು, ಗೋದಾಮು ಒಂದರಲ್ಲಿ ಸೇರಿಕೊಂಡ ಇಲಿ ಮತ್ತು ಅದರ ಸಂಸಾರದ ಕತೆ ಹೇಳುತ್ತಲೇ ಅಲ್ಲಿನ ಶೋಷಣೆಯ ಸ್ವರೂಪವನ್ನು ಬಿಂಬಿಸುವುದು ಬೆಳಗಾಯಿತು ಕತೆಯ ವೈಶಿಷ್ಟ್ಯ. ಅಸಂಗತವೆಂಬಂತೆ ಸಾಗುವ 'ಜೀಪ್‌ನಲ್ಲಿದ್ದ ನಾಲ್ವರು' ಕತೆಯಲ್ಲಿ ಪ್ರೀತಿ ಮತ್ತು ಹೋರಾಟದ ಚಿತ್ರ ಹೃದಯಸ್ಪರ್ಶಿಯಾಗಿ ಬಂದಿದೆ. ಎಲ್ಲವನ್ನು ಸೂಚ್ಯವಾಗಿ ಹೇಳುವ ಈ ಶೈಲಿ ಓದುಗರನ್ನು ಚಿಂತಿಸಲಿಕ್ಕೆ ಹಚ್ಚುವಂತಿದೆ.

ಈ ಸಂಗ್ರಹದ ಅನುವಾದಕರಾದ ಶ್ರೀಕಾಂತ ಸ್ವತಃ ಕನ್ನಡದ ಉತ್ತಮ ಕತೆಗಾರರಲ್ಲಿ ಒಬ್ಬರು. ಅವರ ಅನುವಾದ ಅತ್ಯಂತ ಸೃಜನಶೀಲವಾಗಿದೆ.

ಅಬಿಂದಾ–ಸಯೀದ್ : ಅನು. ಎಸ್ಸಾರ್ಕೆ.

ಇದು ವಿಶ್ವ ಕಥಾ ಕೋಶದ 20ನೇ ಸಂಪುಟ. ನಿರಂಜನರ ಸಮರ್ಥ ಪ್ರಸ್ತಾವನೆ ಹೊಂದಿರುವ ಈ ಸಂಗ್ರಹದಲ್ಲಿ ಇಂಡೋನೇಷ್ಯ, ಫಿಲಿಪ್ಪೀನ್ಸ್, ಮಲಯ, ಸಿಂಗಾಪುರ, ಥಾಯ್‌ಲೆಂಡ್‌ನ ಹತ್ತು ಕತೆಗಳು ಇವೆ. ಇಬ್ರಾಹಿಂ ಎ. ಚುಬೇಯ್‌ರಾ, ನಿಕ್ ಜೋಕಿನ್, ಕೆ.ಎಸ್. ಮಣಿಯಮ್, ಎಸ್. ರಾಜರತ್ನಂ, ಚಂದ್ರನ್ ನಾಯರ್ ಮೊದಲಾದವರ ಕತೆಗಳು ಸಂಗ್ರಹದಲ್ಲಿವೆ. ಎಸ್. ರಾಜರತ್ನಂ ಅವರ ಹುಲಿ ಕತೆಯಲ್ಲಿ ಬಸುರಿ ಫಾತಿಮಾ ಒಂಟಿಯಾಗಿ ಕಾಡಿನಲ್ಲಿ ಹುಲಿಯೊಂದನ್ನು ಎದುರಿಸುತ್ತಾಳೆ. ಹುಲಿಯ ಕಣ್ಣಲ್ಲಿ ಮೊದಲು ಉಗ್ರತೆ, ಆಮೇಲೆ ದುಮ್ಮಾನ, ಆ ಬಳಿಕ ಒಂದು ಬಗೆಯ ಬೇಸರ ಕಾಣಿಸಿಕೊಳ್ಳತೊಡಗುತ್ತದೆ. ಫಾತಿಮಾ ಮನೆಗೆ ಬಂದ ಮೇಲೆ ಹುಲಿಯ ಬೇಟೆಗೆ ಗಂಡಸರು ಹೋಗುತ್ತಾರೆ. ಹುಲಿಗೆ ಗುಂಡಿಟ್ಟ ಸದ್ದು ಕೇಳಿದಂತೆಯೇ ಫಾತಿಮಾಗೆ ಹೆರಿಗೆಯ ನೋವು ಪ್ರಾರಂಭವಾಗುತ್ತದೆ. ಆ ಹುಲಿ ಆಗ ತಾನೆ ಮೂರು ಮರಿಗಳನ್ನು ಈದಿರುತ್ತದೆ. ಆ ಹಿನ್ನೆಲೆಯಲ್ಲಿ ಫಾತಿಮಾಳು ಹುಲಿಗಾಗಿ ಅನುಕಂಪಿಸಿದ್ದು ಹೊಸ ಅರ್ಥ ಪಡೆಯುತ್ತದೆ. ಸರಳವಾದ ಈ ರೀತಿಯ ಹೃದ್ಯತೆ ಇಲ್ಲಿನ ಬಹುಪಾಲು ಕತೆಗಳ ಲಕ್ಷಣವಾಗಿದೆ. ಕತೆಗಳನ್ನು 'ಎಸ್ಸಾರ್ಕೆ' ಸಮರ್ಥವಾಗಿ ಕನ್ನಡಕ್ಕೆ ತಂದಿದ್ದಾರೆ.

ಕಾದಂಬರಿ

ಎಸ್. ಎಸ್. ರೇಣುಕಾರಾಧ್ಯ, ಎಸ್. ವಿದ್ಯಾಶಂಕರ, ಕೆ. ರವಾನಂದ,

ಎನ್. ವಿ. ವಿಮಲ

ಸಾಹಿತ್ಯ ವಾರ್ಷಿಕದ ಈ ವಿಭಾಗದ ಸಮೀಕ್ಷೆಗೆ ದೊರೆತ ಕಾದಂಬರಿಗಳು ಸುಮಾರು ಎಂಭತ್ತು. ಈ ವರ್ಷ ನಮ್ಮ ಅವಗಾಹನೆಗೆ ಬಂದ ಕಾದಂಬರಿಗಳಲ್ಲಿ ಐತಿಹಾಸಿಕ, ಪೌರಾಣಿಕ, ಪತ್ತೇದಾರಿ ಕಾದಂಬರಿಗಳು ಕ್ರಮವಾಗಿ ಎರಡು, ಒಂದು ಮತ್ತು ಏಳು. ಮಹಿಳೆಯರು ಬರೆದ ಕಾದಂಬರಿಗಳು ಇಪ್ಪತ್ತು. ಅನ್ಯಭಾಷೆಗಳಿಂದ ಕನ್ನಡಕ್ಕೆ ಅನುವಾದವಾಗಿ ಬಂದ ಕಾದಂಬರಿಗಳು ಹನ್ನೆರಡು. ಇನ್ನುಳಿದವು ಸಾಮಾಜಿಕ ಕಾದಂಬರಿಗಳು. ಈ ವಿಭಾಗದ ಸಮೀಕ್ಷೆ ಎಂದಿನಂತೆ ವರ್ಣಾಂದು ವರೆದಿದೆ.

ಈ ವರ್ಷದ ಕಾದಂಬರಿಗಳಲ್ಲಿ ಹಲವಾರು ಮೌಲಿಕವಾದ ಕೃತಿಗಳು ಕಂಡು ಬಂದಿರುವುದು ವಿಶೇಷ ಸಂಗತಿಯಾಗಿದೆ. ತರಾಸು ಅವರ ದುರ್ಗಾಸ್ತಮಾನ, ಈ ವರ್ಷದ ಮೇರು ಕೃತಿ. ರಂ. ಶ್ರೀ. ಮುಗಳಿಯವರ 'ಅಗ್ನಿವರ್ಣ' ; ಶ್ರೀ ಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ; ಚಂದ್ರಶೇಖರ ಕಂಬಾರ ಅವರ 'ಸಿಂಗಾರೆವ್ವ ಮತ್ತು ಅರಮನೆ' ; ಎಂ. ರಾಮಕೃಷ್ಣ ಅವರ 'ಅಂತರಗಂಗೆ'– ಮೊದಲಾದುವು ಈ ವರ್ಷ ಬಂದ ಗಮನಾರ್ಹವಾದ ಕೃತಿಗಳು. ಈ ವರ್ಷ ಬಂದಿರುವ ಕೆಲವು ಅನುವಾದಿತ ಕಾದಂಬರಿಗಳು ಉಲ್ಲೇಖನಾರ್ಹವಾಗಿವೆ.*

ಸಾಮಾಜಿಕ ಕಾದಂಬರಿಗಳು

ಭುಜಂಗಯ್ಯನ ದಶಾವತಾರಗಳು : ಶ್ರೀಕೃಷ್ಣ ಆಲನಹಳ್ಳಿ

ಗ್ರಾಮೀಣ ಪರಿಸರವನ್ನೆ ತಮ್ಮ ಸೃಜನಶೀಲತೆಯ ಕೇಂದ್ರವನ್ನಾಗಿಸಿಕೊಂಡಿರುವ ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಈ ವರ್ಷ

---
* ಸಂಪಾದಕರು

ಪ್ರಕಟವಾಗಿರುವ ಮಹತ್ವದ ಕಾದಂಬರಿಗಳಲ್ಲೊಂದು. 'ಕಾಡು', 'ಗೆಂಡೆತಿಮ್ಮ' ದಂತಹ ಕಾದಂಬರಿಗಳನ್ನು ಬರೆದ ಆಲನಹಳ್ಳಿಯವರ ಬರವಣಿಗೆ ಈ ಕೃತಿಯನ್ನು ಬರೆಯುವ ಹೊತ್ತಿಗೆ ಸಾಕಷ್ಟು ಪಕ್ವಗೊಂಡ ನೆಲೆಗೆ ಬಂದಿದೆಯೆಂಬುದನ್ನು ಈ ಕಾದಂಬರಿ ಮೊದಲ ನೋಟಕ್ಕೇ ಕಾಣಿಸುತ್ತದೆ.

ಇಂಥದನ್ನು ಮಾತ್ರ ಬರೆಯುತ್ತೇನೆ ಎಂದು ಘೋಷಿಸಿಕೊಂಡ ಯಾವುದೇ ಲೇಖಕ ಒಂದು ಹಂತದಲ್ಲಿ ಖಂಡಿತವಾಗಿಯೂ, ಏಕಮುಖವಾಗಿ ಓಡುವ ಕುದುರೆ ಯಂತಾಗಿಬಿಡುತ್ತಾನೆ. ತಾನು ಘೋಷಿಸಿಕೊಂಡುದನ್ನು ಹೊರತು ಬೇರಾವುದನ್ನೂ ಅವನು ಕಾಣುವುದಿಲ್ಲ; ಅಥವಾ ಕಾಣಬಯಸುವುದಿಲ್ಲ. ನಿಜವಾದ ಲೇಖಕ ಬದುಕಿನ ಎಲ್ಲ ಮುಖಗಳಿಗೆ ತೆರೆದುಕೊಂಡಿರುತ್ತಾನೆ. ಅಂಥವನಿಗೆ ಮಾತ್ರ ಬದುಕಿನ ಅನಂತ ವೈವಿಧ್ಯತೆಯ ದರ್ಶನವನ್ನು ಕಾಣುವುದು ಸಾಧ್ಯ. ಆಲನಹಳ್ಳಿಯವರಿಗೆ ಇಂಥದು ಸಾಧ್ಯವಾಗಿದೆ. ಅವರ ಬರವಣಿಗೆಯಲ್ಲಿ ಸಾಚಾತನ, ಸಮೃದ್ಧತೆ ಕಂಡು ಬಂದರೆ; ಅವರದು ಎತ್ತರದ ಬರವಣಿಗೆ ಎಂದು ಅನ್ನಿಸಿದರೆ, ಅದು ಇಂಥ ಕಾರಣಕ್ಕಾಗಿ.

ಕಾದಂಬರಿಯ ಕೇಂದ್ರ ಪಾತ್ರವಾದ ಭುಜಂಗಯ್ಯ, ಮಾದಳ್ಳಿಯ ಸಾಮಾನ್ಯ ರಲ್ಲೊಬ್ಬ ಸಾಮಾನ್ಯ. ತನ್ನ ಬದುಕನ್ನು ಹಸನಾಗಿಸಲು, ಅದಕ್ಕಿಂತ ಹೆಚ್ಚಾಗಿ ಸದಾ ಕ್ರಿಯಾಶೀಲವಾಗಿಸಲು ಬದುಕಿನ ವಿಭಿನ್ನ ಮಾರ್ಗಗಳನ್ನು, ವೃತ್ತಿಗಳನ್ನು ಅರಸುತ್ತಲೇ ಹೋಗುತ್ತಾನೆ. ಒಂದು ಬಗೆಯ ಬದುಕಿನ ಲಯ ಏಕತಾನವಾದೊಡನೆ, ಅದು ಸಾಕೆಂದು ಅನ್ನಿಸಿದೊಡನೆ ಮತ್ತೊಂದರ ಕುರಿತಾಗಿ ಯೋಚಿಸಬಲ್ಲ. ಎಂದೇ ಅವನು ಮಳೆಬೆಳೆಗಳನ್ನವಲಂಬಿಸಿದ ಬೇಸಾಯದ ಕಸುಬು ಸಾಲದೆನ್ನಿಸಿ ಹೋಟೆಲಿಡಬಲ್ಲ, ಅಂಗಡಿ ಇಡಬಲ್ಲ, 'ಕಂತ್ರಾಟು'ದಾರನಾಗಬಲ್ಲ. ಜೊತೆಗೆ, ಹಾವು ಕಡಿದುದಕ್ಕೆ ಮದ್ದು ನೀಡುತ್ತಾನೆ, 'ಪರ', ನಾಟಕದಂತಹ ಕಾರ್ಯಕ್ರಮಗಳು ಅವನಿಲ್ಲದೆ ನಡೆಯಲಾರವು, ಸದಾ ಬೇರೆಯವರೊಂದಿಗೆ ಬೆರೆಯುತ್ತಾನೆ, ಯಾವುದನ್ನೇ ಮಾಡಿದರೂ ಇತರರಿಗೆ ಮಾದರಿಯಾಗುತ್ತಾನೆ–ಇವೆಲ್ಲ ಅವನ ವ್ಯಕ್ತಿತ್ವಕ್ಕೇ ಅಂಟಿ ಬಂದ ಗುಣಗಳು. ಹೀಗಾಗಿ ಕಾದಂಬರಿಯ ಕಕ್ಷೆಯಲ್ಲಿ ಭುಜಂಗಯ್ಯ ಸಾಮಾನ್ಯನ ನೆಲೆಯಿಂದ ಪವಾಡಪುರುಷನ ಮಟ್ಟಕ್ಕೆ ಬೆಳೆಯುತ್ತಾನೆ. ಇಂಥ ಭುಜಂಗಯ್ಯನ ವಿಭಿನ್ನ ಅವತಾರಗಳನ್ನು ಚಿತ್ರಿಸುವುದು ಈ ಕಾದಂಬರಿಯ ಉದ್ದೇಶ. ಕಾದಂಬರಿಯ ಶೀರ್ಷಿಕೆ ಕೂಡ ಇದನ್ನೇ ಸೂಚಿಸುತ್ತದೆ. ಎಂದ ಮಾತ್ರಕ್ಕೆ ಭುಜಂಗಯ್ಯನ ಬದುಕಿನ ಪ್ರತಿಯೊಂದೂ ವಿವರವನ್ನೇನೂ ಕಾದಂಬರಿಯಲ್ಲಿ ಕಾಣಲಾಗದು. ಅದು ಕಾದಂಬರಿಯ ಉದ್ದೇಶವೂ ಅಲ್ಲ; ಅದಕ್ಕೆ ಅನಿವಾರ್ಯವೂ ಅಲ್ಲ. ಹಾಗೆ ನೋಡಿದರೆ ಕಾದಂಬರಿಯ ಆರಂಭಕ್ಕೆ ನಾವು ಕಾಣುವುದು ಸಾಂಸಾರಿಕನಾದ ಭುಜಂಗಯ್ಯನನ್ನು. ಆ ಮೊದಲಿನ ಕೆಲವು ಬಾಲ್ಯದ ವಿವರಗಳು

(ತಂದೆಯೊಂದಿಗಿನ ಸಣ್ಣ ಕಾರಣಕ್ಕಾಗಿ ಮನೆ ಬಿಟ್ಟು ಹೋಪದ್ದು ಇತ್ಯಾದಿ) ಅಲ್ಲಲ್ಲಿ ಭುಜಂಗಯ್ಯನ ನೆನಪುಗಳ ಮೂಲಕ ಬಂದು ಹೋಗುತ್ತವೆ. ಆ ನಂತರದಲ್ಲಿ ಭುಜಂಗಯ್ಯನಿಗೆ ಸಂಬಂಧಿಸಿದ ಎಲ್ಲ ಘಟನಾವಳಿಗಳೂ, ಅವನು ಧರಿಸುವ ವಿಭಿನ್ನ ಅವತಾರಗಳೂ ನಿರ್ದಿಷ್ಟ ಉದ್ದೇಶಕ್ಕನುಗುಣವಾಗಿ ಚಿತ್ರಿತವಾಗಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಆ ಪಾತ್ರದ ಬೆಳವಣಿಗೆಯಲ್ಲಿ ಎರಡು ಹಂತಗಳು ಸ್ಪಷ್ಟವಾಗಿ ಕಾಣ ಬರುತ್ತವೆ. ಮೊದಲ ಹಂತದಲ್ಲಿ ಒಂದು ಬಗೆಯ ಸಾಧಕ ಬದುಕಿಗೆ ಮಾತ್ರ ಸಹಜವೆನ್ನಿಸುವ ಇಕ್ಕಟ್ಟು, ತಾಕಲಾಟಗಳು, ರೂಢಮೂಲ ಬದುಕಿಗೆ ಎದುರಾಗಿ ನಿಲ್ಲುವುದು ಅಸಾಧ್ಯವೆನ್ನಿಸುವ ನಿರಾಶೆಯ ನೆಲೆಗಳು (ಕೌಟುಂಬಿಕ ಘಟನಾವಳಿಗಳು, ಸುಶೀಲಳನ್ನು ಮದುವೆಯಾದದ್ದು ಇತ್ಯಾದಿ ಸಂದರ್ಭಗಳನ್ನು ಮುಖ್ಯವಾಗಿ ಉದಾಹರಿಸಬಹುದು) ಕಾಣಬರುತ್ತವೆ. ಇಂಥದೆಲ್ಲವನ್ನೂ ಮೀರಿ ಬೆಳೆಯುತ್ತಿರು ವಾಗಲೇ ಕಣ್ಣು ಕಳೆದುಕೊಂಡುದರ ಫಲವಾಗಿ ನಂತರದ ದುರಂತದ ಎಲ್ಲೆಯನ್ನು ಆ ಪಾತ್ರ ಪ್ರವೇಶಿಸುತ್ತದೆ. ಇದು ಎರಡನೆಯ ಹಂತವೆನ್ನಬಹುದಾದದ್ದು. ಇದರೊಂದಿಗೆಯೇ ಭುಜಂಗಯ್ಯನನ್ನು ವೈರಾಗ್ಯದ ಬಗೆಗಿನ ಅದಮ್ಯ ದಾಹ ಕಾಡಲಾರಂಭಿಸುತ್ತದೆ. ಆದರೆ ಈ ಬಗೆಯ ದಾಹ ಕಣ್ಣು ಕಳೆದುಕೊಂಡ ಆಕಸ್ಮಿಕದಷ್ಟು ಧುತ್ತೆಂದು ಸಂಭವಿಸುವುದಿಲ್ಲ. ಬದಲಾಗಿ ಆ ಬಗೆಗಿನ ಒಲವನ್ನು ಉದ್ದಕ್ಕೂ ಅಲ್ಲಲ್ಲೇ ಗುರುತಿಸಬಹುದು (ಭುಜಂಗಯ್ಯ ಬಸವಣ್ಣನ ವಿಚಾರಗಳ ಮೂಲಕ ತನ್ನ ಅಂತರಂಗ ಶೋಧದಲ್ಲಿ ತೊಡಗುವ ಸಂದರ್ಭಗಳು, ಅಯ್ನೋರ ಪದಗಳನ್ನು ಅವನು ತನ್ಮಯತೆಯಿಂದ ಪರಿಭಾವಿಸಿದ ಸಂದರ್ಭಗಳು, ಇತ್ಯಾದಿ). ಆದರೆ ವೈರಾಗ್ಯದ ಬಗೆಗಿನ ಒಲವು ಇಮ್ಮಡಿಯಾಗಲು ಅವನ ಕುರುಡುತನ ಒಂದು ಬಹು ಮುಖ್ಯ ಕಾರಣವೆಂಬುದಂತೂ ಸ್ಪಷ್ಟ. ಈ ವೈರಾಗ್ಯ ಕೂಡ ಎಲ್ಲವನ್ನೂ ತೊರೆದು ಬದುಕಿನಿಂದ ದೂರನಿಲ್ಲುವ ಸನ್ಯಾಸದ ಬಗೆಯದಲ್ಲ. ಬದಲಾಗಿ, ಬದುಕಿನೊಳಗೇ ಇದ್ದು ಸಮಚಿತ್ತದ ಸ್ಥಿತಿಗೆ, ಪಕ್ವಗೊಂಡ ನೆಲೆಗೆ ಬೆಳೆಯುವ ಬಗೆಯದು. ಅದಕ್ಕಾಗಿಯೇ ತನ್ನ ಹೆಂಡತಿಯ ಶೀಲವನ್ನು ನಾರಾಯಣ ಕೆಡಿಸಿದಾಗ ಕೂಡ ತನ್ನ ತಳಮಳವನ್ನು ಹತ್ತಿಕ್ಕಿ ಸಮಚಿತ್ತವನ್ನು ಕಾಯ್ದುಕೊಳ್ಳುತ್ತಾನೆ. ("ಆಗ ತನ್ನಲ್ಲಿ ಕೆರಳಿ ನಿಂತ ವಿಕಾರಗಳ ನೆನಪಾದರೆ ಸಾಕು ಮೈ ಜುಮ್ಮೆನ್ನುತ್ತದೆ. ......ತನಗೆ ಅರಿವೇ ಇಲ್ಲದೆ ಅವು ತನ್ನ ಕಾಯದೊಳಗೇ ಬೆಳೆದು ತಲೆಮರೆಸಿ ಕೊಂಡಿದ್ದವು. ಈಗ ಹಠಾತ್ತನೆ ಬುಸುಗುಡತೊಡಗಿದವು. ತಾನು ಇಷ್ಟು ದಿನ ಸಾಧಿಸಿದ್ದನ್ನೆಲ್ಲ ಕ್ಷಣಾರ್ಧದಲ್ಲಿ ಸುಳ್ಳಾಗಿಸಿಬಿಟ್ಟವು." ಪು. 511). ಅಲ್ಲದೆ ನಾರಾಯಣನನ್ನೇ ಸಾವಿನ ದವಡೆಯಿಂದ ಪಾರುಮಾಡಿ, ತಾನೇ ಅದಕ್ಕೆ ತುತ್ತಾಗುತ್ತಾನೆ. ಇದು ಸಾತ್ವಿಕ ನೆಲೆಗೆ ಏರಿದ ವ್ಯಕ್ತಿತ್ವಕ್ಕೆ ಮಾತ್ರ ಸಾಧ್ಯ ವಾಗಬಲ್ಲ ತ್ಯಾಗ.

ಭುಜಂಗಯ್ಯನ ಬದುಕಿಗೆ ಹಿನ್ನೆಲೆಯಾಗಿರುವ ಮಾದಳ್ಳಿಯ ಸಂಬಧದಲ್ಲಿ ಬರುವ ವಿವರಗಳಿಂದಾಗಿ ಕಾದಂಬರಿ ವಿಶಿಷ್ಟ ಆಯಾಮವೊಂದನ್ನು ಪಡೆದಿದೆ. ಮಾದಳ್ಳಿಯಂಥ ಗ್ರಾಮೀಣ ಬದುಕಿನ ವಿವಿಧ ಮಗ್ಗುಲಂಗಳನ್ನು ಬಿಚ್ಚಿಡುತ್ತಾ ಹೋಗುವುದನ್ನು, ಆ ಸಂಬಂಧದ ವಿವರಗಳ ಸಮೃದ್ಧತೆಯನ್ನು ಗಮನಿಸಿದರೆ, ಇಷ್ಟೆಲ್ಲವನ್ನು ಹೇಳಲು ಭುಜಂಗಯ್ಯ ಒಂದು ನೆಪವೇನೋ ಅನ್ನಿಸಿಬಿಡುವ ಸಾಧ್ಯತೆ ಯಿದೆ. ಆದರೆ ಅಷ್ಟೆಲ್ಲ ವಿವರಗಳನ್ನೂ ಒಂದಿಲ್ಲೊಂದು ರೀತಿಯಲ್ಲಿ ಭುಜಂಗಯ್ಯ ಪಾತ್ರದ ಪೋಷಣೆಗಾಗಿಯೇ ತರಲಾಗಿದೆಯೆಂಬುದನ್ನು ಮರೆಯುವಂತಿಲ್ಲ. ಹೀಗೆ ಬಳಸಿಕೊಳ್ಳುವುದರ ಮೂಲಕ ಬದುಕಿನ ಚಲನಶೀಲತೆಯ ಎರಡು ಮುಖಗಳನ್ನು ಪರಸ್ಪರ ಮುಖಾಮುಖಿಯಾಗಿ ಮಾಡಲಾಗಿದೆ. ಮಾದಳ್ಳಿಯ ಬದುಕಿನ ಕ್ರಮ ಚಕ್ರೀಯ ಗತಿಯದು. ಆ ಬದುಕು ಚಟುವಟಿಕೆಯಿಂದ ತುಡಿಯುವುದಕ್ಕೂ ಮಳೆಗಾಲದ ಪ್ರಾರಂಭಕ್ಕೂ ಅತ್ಯಂತ ನೇರವಾದ ಸಂಬಂಧವಿದೆ. ಮಳೆಗಾಲದ ಮುಗಿವಿನೊಂದಿಗೆ ಆ ಬದುಕು ಮತ್ತದೇ ಬಿಂದುವಿಗೆ ಬಂದು ನಿಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಮಳೆಗಾಲದ ಪ್ರಾರಂಭ ಮತ್ತು ಮುಗಿವುಗಳನ್ನು ಲೇಖಕರು ಸಮರ್ಥ ವಾಗಿ ಬಳಸಿಕೊಂಡಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಭುಜಂಗಯ್ಯನದು ಸದಾ ಅನ್ವೇಷಣಶೀಲವಾದ ಬದುಕು; ಅದರದು ಮುಮ್ಮುಖವಾದ ಚಲನೆ, ಹೀಗಾಗಿ ಮಾದಳ್ಳಿಯ ಜನ ಸಮುದಾಯಕ್ಕೆ ಅವನೊಂದು ಅಪವಾದ (ಉದಾ : ಪು. 392 ರಲ್ಲಿ ಬರುವ ವಿವರಗಳು). ಇಂಥದನ್ನು ಕಾದಂಬರಿಯುದ್ದಕ್ಕೂ ನೆಲೆಗೊಳಿಸುತ್ತಲೇ ಹೋಗಲಾಗಿದೆ.

ಈ ಕಾದಂಬರಿಯಲ್ಲಿ ಪ್ರಕಟವಾಗುವ ವೈಚಾರಿಕತೆಯ ನೆಲೆಗಳ ಬಗ್ಗೆ ಒಂದು ಮಾತು : ಎಲ್ಲಿಯೂ ಲೇಖಕ ತನ್ನ ಬೌದ್ಧಿಕ ನಿಲುವುಗಳನ್ನು ಹೇರುವ ಪ್ರಯತ್ನ ವನ್ನು ಮಾಡಿಲ್ಲ. ಭುಜಂಗಯ್ಯನ ಅಂತರಂಗ ಶೋಧದ ಮೂಲಕ, ಸ್ವವಿಮರ್ಶೆಯ ಮೂಲಕ ಪ್ರಕಟವಾಗುವ ವೈಚಾರಿಕತೆಯ ನೆಲೆಗಳ ಹಿಂದೆ ಬಸವ ಮತ್ತು ಗಾಂಧಿ ಇದ್ದಾರೆ. ಬಸವ ಮತ್ತು ಗಾಂಧಿಯ ವಿಚಾರಗಳ ಮೂಲಕ ಭುಜಂಗಯ್ಯ ತನ್ನನ್ನು ಒರೆಗೆ ಹಚ್ಚಿಕೊಳ್ಳುವಲ್ಲಿ ಪದಗಳನ್ನು ಹಾಡುವ ಅಯ್ನೋರು ಮತ್ತು ವೇಷ್ಟು ನೆಪ ಮಾತ್ರ.

ಎಲ್ಲಕ್ಕಿಂತ ಮುಖ್ಯವಾದದ್ದು, ಲೇಖಕರಿಗಿರುವ ಭಾಷಾಬಳಕೆಗೆ ಸಂಬಂಧಿಸಿದ ಎಚ್ಚರ. ಕಾದಂಬರಿ ಮಧ್ಯಮ ವರ್ಗದ ಕನ್ನಡ ಭಾಷೆಯಲ್ಲೇ ಇದೆಯಾದರೂ ಸಂಭಾಷಣೆಯಲ್ಲಿ ಮತ್ತು ಇತರ ಪ್ರಾದೇಶಿಕ ವಿವರಗಳ ಸಂದರ್ಭದಲ್ಲಿ ಪ್ರಾದೇಶಿಕ ವಿಶೇಷಗಳಿಂದ ತುಂಬಿಕೊಂಡಿದೆ. ಇಲ್ಲಿ ಬಂದ ಪಾತ್ರಗಳಿಗಿರುವ ಅಡ್ಡ ಹೆಸರುಗಳನ್ನು ಲೇಖಕ ಹಾಗೆಹಾಗೆಯೇ ಬಳಸಿರುವುದನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಭಾಷೆಯಲ್ಲಿ ಕಾಣಬರುವ ಸಾಂಕೇತಿಕತೆ ಮತ್ತು ರೂಪಕ ಗುಣ ಗಮನಾರ್ಹವಾದು ದಾಗಿದೆ. "ಇನ್ನೂ ಕಚ್ಚುವ ಚಳಿಯ ಹಲ್ಲುಗಳು ಹರಿತವಾಗೇ ಇದ್ದವು" (ಪು. 159) "ಭುಜಂಗಯ್ಯನ ತಲೆಯಲ್ಲಿ ತುಂಬಿಕೊಂಡಿದ್ದ ಮಳೆಯ ಮೋಡಗಳೆಲ್ಲ ಪೂರ್ತಿ ಕರಗಿ

ಹೋಗಿದ್ದವು" (ಪು. 456) "ಗಾಜು ಮಾತ್ರ ಚೂರು ಚೂರಾಗಿದ್ದರೂ ಗಾಂಧಿಯ ನಗು ಮಾತ್ರ ಕೊಂಚವೂ ಮಾಸಿರಲಿಲ್ಲ" (ಪು. 315)—ಇಂಥ ಬಹಳಷ್ಟು ವಿವರಗಳನ್ನು ಉದಾಹರಿಸಬಹುದು.

ಇತ್ತೀಚಿನ ಕನ್ನಡ ಕಾದಂಬರಿಗಳಲ್ಲಿ, ಇದೊಂದು ಗಮನಾರ್ಹ ಕಾದಂಬರಿಯೆಂದು ಈ ಸಮೀಕ್ಷಕ ನಂಬಿರುವುದರಿಂದ, ಈ ಸಮೀಕ್ಷೆ ಈ ಕಾದಂಬರಿಯ ಸಮರ್ಥನೆ ಮಾತ್ರ ಎಂದು ಬೇರೆ ಹೇಳಬೇಕಾಗಿಲ್ಲ.

ಆರೋಪ : ಕೆ. ವಿ. ತಿರುಮಲೇಶ

ತಿರುಮಲೇಶರ ಮೊದಲ ಕಾದಂಬರಿ. ಇದೊಂದು ಭ್ರಮ ನಿರಸನದ ಕಥೆ. ಇದರಲ್ಲಿನ ನಾಯಕ ಅರವಿಂದ ಸಂಶೋಧನೆಯ ಹುಚ್ಚು ಹಚ್ಚಿಕೊಂಡ ಎಂ. ಎ. ಪದವೀಧರ. ಅನಿವಾರ್ಯವಾಗಿ ನಾಗೂರಿನಲ್ಲಿ ಮೇಷ್ಟರಾಗಿ ಸೇರಿದವನು ತನ್ನ ಸಂಶೋಧನೆಯ ಹುಚ್ಚಿಗೊಂದು ದಾರಿ ಕಂಡೊಡನೆ ಅದರ ಬೆನ್ನು ಹತ್ತುತ್ತಾನೆ. ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ಆದರೆ, ಅಕೆಡಮಿಕ್ ವಲಯದ ದೊಡ್ಡ ವ್ಯಕ್ತಿಯಾಗಿ ಬೆಳೆಯುತ್ತಿರುವಾಗಲೇ ಅನಿರೀಕ್ಷಿತವೆಂಬಂತೆ ಆ ಬಗೆಗಿನ ಎಲ್ಲ ಆಕಾಂಕ್ಷೆಗಳನ್ನೂ ತೊರೆದು ನಾಗೂರಿಗೆ ಮರಳುತ್ತಾನೆ. ಇಷ್ಟು ಮುಖ್ಯ ಕಥಾಭಿತ್ತಿಯೊಳಗೆ ಕಾದಂಬರಿಯ ಬೆಳವಣಿಗೆ ಎರಡು ಹಂತಗಳಲ್ಲಿ ನಡೆಯುತ್ತದೆ. ಒಂದು : ನಾಗೂರಿನ ಸಂದರ್ಭವನ್ನು ಕುರಿತದ್ದು ; ಮತ್ತೊಂದು ಮದ್ರಾಸಿನ ಸಂದರ್ಭವನ್ನು ಕುರಿತದ್ದು. ಮೊದಲ ಹಂತದ ಕಥಾ ಬೆಳವಣಿಗೆಯಲ್ಲಿ ಕಾಣಬರುವ ಬಿಗುವು ಅದೇಕೊ ನಂತರದಲ್ಲಿ ಇಲ್ಲವಾಗಿಬಿಡುತ್ತದೆ. ಅಲ್ಲದೆ ಈ ಹಂತದಲ್ಲಿನ ಕೆಲವು ವಿವರಗಳು ಅನಗತ್ಯವೆನ್ನಿಸುತ್ತವೆ.

ಅರವಿಂದನ ಭ್ರಮನಿರಸನಕ್ಕೆ ಅನಿವಾರ್ಯ ಕಾರಣವೆಂಬಂತೆ ಲೇಖಕರು ತಂದಿರುವ ಪ್ರಸಂಗ ಕಾದಂಬರಿಯೊಳಗೆ ಸಮರ್ಥಿತವಾಗುತ್ತದೆಯೇ ಎಂಬುದು ಸಂದೇಹಾಸ್ಪದವಾಗಿಬಿಡುತ್ತದೆ. ಎಂದೂ ಕ್ರಾಂತಿಕಾರಿಯಾಗಿರದ, ಬಂಡುಕೋರನಾಗಿರದ ಅರವಿಂದ ಬಂಡುಕೋರನೆನ್ನಲಾದ ರಾಜಶೇಖರನ ಕಾರ್ಯಾಚರಣೆಗಳ ಸಂಬಂಧದಲ್ಲಿ ಪರೋಕ್ಷವಾಗಿ ಆರೋಪಿಯಾಗುವ ಕ್ರಮ ಅಷ್ಟುಮಟ್ಟಿಗೆ ಸರಿಯೆನ್ನಬಹುದು. ಆದರೆ, ಅದು ಅರವಿಂದನ ದಾರಿಯನ್ನೇ ಬದಲಿಸುವಷ್ಟು ಮಟ್ಟಿಗೆ ಪ್ರಬಲವಾದ ಕಾರಣವಾಗದೇನೊ. ಬದಲಾಗಿ ಇಲ್ಲಿ ಬಂದ ಅಕೆಡಮಿಕ್ ವಲಯದ ವಿಕ್ಷಿಪ್ತ ಸ್ಥಿತಿಯನ್ನು ಕುರಿತ ವಿವರಗಳು ಆ ಸಾಧ್ಯತೆಯನ್ನು ಪಡೆದಿದ್ದುವಾದರೂ ಅವು ಹಿನ್ನೆಲೆಗೆ ಸರಿದು ಬಿಟ್ಟಿವೆ.

ಇನ್ನು ಈ ಕೃತಿಯನ್ನು ಬಿಡುಗಡೆಗೊಳಿಸಲು ಪ್ರೇರಣೆಯಾದ "ವಾಕ್ಯಗಳ ಕುರಿತಾದ" ತಮ್ಮ ಪ್ರೀತಿಯ ಬಗ್ಗೆ ಹೇಳಿಕೊಂಡಿದ್ದಾರೆ (ಮುನ್ನುಡಿಯಲ್ಲಿ), ಅದರ

ಸಮರ್ಥನೆಗೆ ಈ ಕಾದಂಬರಿಯಲ್ಲಿ ಸಾಕಷ್ಟು ಪುರಾವೆಗಳನ್ನು ತೋರಿಸಲು ಸಾಧ್ಯವಿದೆ.

ಅನೇಕ : ಕೆ. ವಿ. ತಿರುಮಲೇಶ

ಇದೊಂದು ಕಿರುಕಾದಂಬರಿ. ಆರೋಪದ ನಂತರ ಬಂದ ಈ ವರ್ಷದ ಎರಡನೆಯ ಕಾದಂಬರಿ. ಕೇವಲ ನಲವತ್ತೇಳು ಪುಟಗಳಲ್ಲಿ ಮುಗಿದುಹೋಗುವ ಈ ಪುಟ್ಟ ಕಥಾನಕದ ಜಗತ್ತು ನಾಗರಿಕ ಬದುಕಿಗೆ ದೂರದ್ದು. ಇದರ ಕಥೆಯೆಲ್ಲ ನಡೆಯುವುದು ದ್ವೀಪದಲ್ಲೇ. ಎಂದೋ, ಹೇಗೋ ಆ ದ್ವೀಪಕ್ಕೆ ಹೋದ ಅನೇಕ ಮತ್ತು ನಂತರ ಅನೇಕನಂತೆಯೇ ಆಕಸ್ಮಿಕವಾಗಿ ಬಂದ ವಿಶಾಲ—ಈ ಎರಡೇ ಪಾತ್ರಗಳು. ಅನೇಕ ಆ ದ್ವೀಪವಾಸಿಯಾದ ಮೇಲೆ ನಾಗರಿಕ ಬದುಕಿನ ಸಂಪರ್ಕವನ್ನು ಕಳೆದುಕೊಂಡಷ್ಟೇ ಸಹಜವಾಗಿ ಆ ಬದುಕಿನ ಬಗೆಗಿನ ಆಸೆಯನ್ನು ಕಳೆದುಕೊಳ್ಳುವ ಮುಖೇನ ಅನಿವಾರ್ಯವಾಗಿ ಆ ದ್ವೀಪದ್ದೇ ಆದ ಬದುಕಿನ ಸೂತ್ರಗಳಿಗೆ ಹೊಂದಿಕೊಳ್ಳುತ್ತಾನೆ. ಹಾಗೆ ನೋಡಿದರೆ ಅನಾಗರಿಕನಾದ ದ್ವೀಪವಾಸಿಯೇ ಆಗುತ್ತಾನೆ, ವಿಶಾಲನಿಗೆ ಹಾಗೆ ಕಾಣುತ್ತಾನೆ ಕೂಡ. ವಿಶಾಲ ಮಾತ್ರ ಆಕಸ್ಮಿಕವಾಗಿ ದ್ವೀಪಕ್ಕೆ ಬಂದವನು ತನ್ನ ನಾಗರಿಕ ಬದುಕಿಗೆ ಮತ್ತೆ ಮರಳುವ ಹಂಬಲದಲ್ಲೇ ಇದ್ದು ಆ ಪ್ರಯತ್ನದಲ್ಲೇ ಕೊನೆಯಾಗುತ್ತಾನೆ.

ತಿರುಮಲೇಶರು ಮುನ್ನುಡಿಯಲ್ಲಿ "ಈ ಕಾದಂಬರಿಯ ಘಟನೆಗಳು, ಅವು ನಡೆಯುವ ದ್ವೀಪ, ಅದರ ನಿವಾಸಿಯಾದ ಅನೇಕ, ಅಲ್ಲಿಗೆ ಬಂದು ಸೇರಿದ ಆ ಇನ್ನೊಬ್ಬ, ಆ ಕತೆಗಳು, ವಿಚಾರಗಳು—ಇವಕ್ಕೆಲ್ಲ ವಾಸ್ತವಿಕತೆ ಓದುಗರು ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಸಾಹಿತ್ಯದಲ್ಲಿ ವಾಸ್ತವಿಕತೆಯೇ ಎಲ್ಲ ಎಂದು ನಾನಂತೂ ತಿಳಿದಿಲ್ಲ" ಎನ್ನುವ ಮಾತುಗಳು ಈ ಕಾದಂಬರಿಗೆ ಸಂಬಂಧಿಸಿದಂತೆ ಅಷ್ಟೊಂದು ಮುಖ್ಯವೆಂದು ಭಾವಿಸಬೇಕಾಗಿಲ್ಲ. ಮುಖ್ಯವಾಗಬೇಕಾದದ್ದು ಕಾದಂಬರಿಯ ಚೌಕಟ್ಟಿನಲ್ಲಿ ಆ ವಿವರಗಳು ವಾಸ್ತವವೆಂಬಂತೆ ಚಿತ್ರಿತವಾಗಿರುವುದು ಮಾತ್ರ. ಜೊತೆಗೆ, ಆ ಎರಡು ಪಾತ್ರಗಳ ಮೂಲಕ ವ್ಯಕ್ತವಾಗುವ ಏಕಾಕಿತನ, ಭಯ, ಸಂವಾದರಾಹಿತ್ಯ ಸ್ಥಿತಿ–ಇವುಗಳ ಶೋಧ ಗಮನಾರ್ಹವಾದುದು. ಈ ಕಾದಂಬರಿಯಲ್ಲಿ ನಿಜಕ್ಕೂ ನಮ್ಮ ಗಮನ ಸೆಳೆಯುವುದು ಭಾಷೆಯ ಬಳಕೆಯ ಕ್ರಮ, ಮುಖ್ಯವಾಗಿ ವಾಕ್ಯರಚನೆಯಲ್ಲಿ.

ತೋಟದ ಮನೆ : ಟಿ. ಎನ್. ಮಹಾದೇವಯ್ಯ

ಟಿ. ಮಹಾದೇವಯ್ಯನವರ ಈ ಕಾದಂಬರಿ ಪ್ರಕಟವಾದದು ಈ ವರ್ಷವಾದರೂ, ಇದು ರಚಿತವಾದುದು ಸುಮಾರು ಎರಡು ದಶಕದ ಹಿಂದೆಯೇ. ಕೆಲ

ಮಧ್ಯಮವರ್ಗದ ಬದುಕಿನ ವಿವರಗಳನ್ನು ಮತ್ತು ಅದರ ಕಠೋರ ವಾಸ್ತವಗಳನ್ನು ಬಾಲ್ಯದ ಅನುಭವಗಳ ಮುಖೇನ ಇಲ್ಲಿ ನಿರೂಪಿಸಲಾಗಿದೆ.

ಪ್ರಥಮ ಪುರುಷದ ನಿರೂಪಣೆಯಿರುವ ಈ ಕಾದಂಬರಿಯಲ್ಲಿ ಎಲ್ಲವನ್ನೂ ಲೇಖಕನೇ ಹೇಳುತ್ತಾ ಹೋಗುವುದರ ಕಾರಣಕ್ಕಾಗಿಯೋ ಏನೋ ಕೆಲವೆಡೆ ವಿವರಗಳು ಬರೀ ವರದಿಯಾಗಿಬಿಡುತ್ತವೆ. ಆದರೆ ಬಾಲ್ಯದ ವಿವರಗಳನ್ನು ಕೊಡುವಾಗ, ಬಾಲ್ಯದ ಮುಗ್ಧ, ಬೆರಗಿನ ಮನೋನೆಲೆಗಳನ್ನು. ವರ್ತನೆಗಳನ್ನು ವಿವರಿಸುವಾಗ ಮಾತ್ರ ಎಲ್ಲಿಯೂ ಹೀಗಾಗದಿರುವುದು ಗಮನಿಸಬೇಕಾದ ಸಂಗತಿ. ಈ ಕಾದಂಬರಿಯಲ್ಲಿ ಬಂದ ಹಲವಷ್ಟು ಸಾಮಾಜಿಕ ವಿವರಗಳನ್ನು ಕಾದಂಬರಿ ರಚಿತವಾದ ಸಂದರ್ಭದ ಹಿನ್ನೆಲೆಯಲ್ಲೇ ನೋಡಬೇಕಾದರೂ, ಇಂದಿಗೂ ಅವು ಅಪ್ರಸ್ತುತವೇನಲ್ಲ. ತೋಟದ ಮನೆಯ ಸಂದರ್ಭದ ವಿವರಗಳ ಮೂಲಕ ವ್ಯಕ್ತವಾಗುವ ಮೂಢ ನಂಬಿಕೆಗಳ, ಅನರ್ಥ ಆಚರಣೆಗಳ ಶೋಧ ಗಮನಿಸತಕ್ಕುದಾಗಿದೆ.

ಲೇಖಕರ ಬರವಣಿಗೆ ಅತ್ಯಂತ ಸಂಯಮಶೀಲವಾದದ್ದು ಮತ್ತು ಅತ್ಯಂತ ಸಲೀಸಾಗಿ ಕತೆಯನ್ನು ನಡೆಸಿಕೊಂಡು ಹೋಗುವ ಬಗೆಯದು ಎಂಬುದನ್ನು ಈ ಕಾದಂಬರಿ ಸ್ಪಷ್ಟಪಡಿಸುತ್ತದೆ.

ನಿರ್ಧಾರ : ಪಿ. ವಿ. ನಾರಾಯಣ

ಈಗಾಗಲೇ ಇರುವ ಲೇಖಕರ ಕಾದಂಬರಿಗಳ ಸಾಲಿಗೆ ಈ ಕಾದಂಬರಿಯೊಂದು ಹೊಸ ಸೇರ್ಪಡೆ. ಮುಖ್ಯವಾಗಿ ಮಹಿಳಾ ವಿಮೋಚನೆಯ ವಿಚಾರಗಳನ್ನು ಪ್ರಕಟಪಡಿಸುವ ಈ ಕೃತಿಯಲ್ಲಿ ಮಧ್ಯಮ ವರ್ಗದ ಬದುಕಿನ ನಡುವೆಯ ವೈವಾಹಿಕ ಸಂಬಂಧಗಳ ಒಡಕುಗಳು ಮತ್ತು ಆ ಸಂಬಂಧದ ಇತರ ವಿವರಗಳು ವಿಶೇಷವಾಗಿವೆ. ಆದರೆ ಇಷ್ಟನ್ನು ಒಳಗೊಂಡ ಈ ಕೃತಿ 'ಕಾದಂಬರಿ'ಯಾಗಿ ನಮ್ಮನ್ನು ತಟ್ಟದಿರಲು ಬಹು ಮುಖ್ಯವಾದ ಕಾರಣ ಬಹುಶಃ ಅದರ ಉದ್ದಗಲಕ್ಕೆ ತಾನೇ ತಾನಾಗಿ ವ್ಯಾಪಿಸಿದ ಶುಷ್ಕ ವೈಚಾರಿಕತೆಯ ಪ್ರದರ್ಶನವೇ ಎಂದು ತೋರುತ್ತದೆ.

ಲೇಖಕರಿಗೆ ಕತೆಯನ್ನು ಹೇಳುವಲ್ಲಿರುವ ಆಸಕ್ತಿ ಪಾತ್ರ ಚಿತ್ರಣ, ಮಾನವ ವರ್ತನೆಯ ಸೂಕ್ಷ್ಮ ರಹಸ್ಯಗಳನ್ನು ಬಯಲು ಮಾಡುವ ಸಾಧ್ಯತೆಗಳ ಬಗ್ಗೆ ಇದ್ದಂತಿಲ್ಲ. ಆದುದರಿಂದಲೇ ಇಲ್ಲಿನ ಎಲ್ಲ ಪಾತ್ರಗಳೂ ಸೂತ್ರದ ಬೊಂಬೆಗಳಾಗಿಬಿಡುತ್ತವೆ. ಮಾಲತಿಯ ಪಾತ್ರವಂತೂ ಪ್ರತಿ ಸೀನಿನಲ್ಲೂ ನಮ್ಮನ್ನು ಎಡೆಬಿಡದೆ ದೋಸುವ ಜನಪ್ರಿಯ ಸಿನಿಮಾದ 'ಹೀರೋ'ನನ್ನು ನೆನಪಿಸುತ್ತದೆ.

ಕಾದಂಬರಿಯ ನಿರೂಪಣೆ ಕೆಲ ಭಾಗಗಳಲ್ಲಿ ಲೇಖಕನಿಂದಲೂ, ಕೆಲ ಭಾಗಗಳು ನಾಯಕ ಪಾತ್ರ(ಮಾಲತಿ)ದ ಪ್ರಥಮ ಪುರುಷದಲ್ಲೂ ನಡೆಯುತ್ತದೆ. ಪ್ರಥಮ ಪುರುಷದಲ್ಲಿರುವ ನಿರೂಪಣೆಯು ಬಹಳಷ್ಟು ವಿವರಗಳು ವೀಕ್ಷಕ ವಿವರಣೆಯ ಹಾಗೆ

ಕಾಣುತ್ತದೆ. ಜೊತೆಗೆ ಈ ಇಬ್ಬಗೆಯ ನಿರೂಪಣೆಯ ಅಗತ್ಯಗಳು ಕಾದಂಬರಿಯೊಳಗೆ ಸಮರ್ಥಿತವಾದಂತಿಲ್ಲ.

ಕಾದಂಬರಿಯಲ್ಲಿ ಉಳಿದಿರುವ ಮುದ್ರಣ ದೋಷಗಳು, ಅದರ ಓದನ್ನು ಒಂದು ದೊಡ್ಡ ಪ್ರಯಾಸದ ಕೆಲಸವನ್ನಾಗಿ ಮಾಡುತ್ತವೆ.

ಬಸವ ಪರಿಸರದ ಮೂರು ಕಾದಂಬರಿಗಳು : ಜಿ.ಎಚ್. ಹನ್ನೆರಡುಮಠ

ಜಿ. ಎಚ್. ಹನ್ನೆರಡುಮಠರು ಯೋಜಿಸಿಕೊಂಡ ಬಸವ ಪರಿಸರದ ಎಂಟು ಕಾದಂಬರಿಗಳಲ್ಲಿ ಮೊದಲ ಮೂರು ಪ್ರಕಟವಾಗಿ ಸಮೀಕ್ಷೆಗೆ ಬಂದಿವೆ. ಕೂಗಿತ್ತು ಕೂಡಲ ಸಂಗಮ, ಯೋಗಿ ಕಂಡ ಯವ್ವನ ಮತ್ತು ಗುರುವೆಂದರ‍್ಯಾರೊ ಹರನೆಂದರ‍್ಯಾರೊ.

ಬಸವಣ್ಣನನ್ನು ಅಥವ ಅವನ ಸಮಕಾಲೀನ ಶರಣರನ್ನು ಕುರಿತು ಪ್ರಾಮಾಣಿಕವಾಗಿ ಬರೆಯಬೇಕೆನ್ನುವವರಿಗೆ ಇರುವ ಬಹುದೊಡ್ಡ ಕೊರತೆ ನಿಖರ ಆಧಾರಗಳದ್ದು. ನಮಗೆ ಲಭ್ಯವಿರುವ ಸಾಹಿತ್ಯಕ ದಾಖಲುಗಳಲ್ಲಿ ಅನೇಕ ಕಾರಣಗಳಿಗಾಗಿ ವಾಸ್ತವಾಂಶಗಳು ಬದಲಾಗಿವೆ ಅಥವಾ ಗೌಣವಾಗಿವೆ. ಹೀಗಾಗಿ ಅಲ್ಲಿ ದೊರೆಯುವುದು ಬಹುಮಟ್ಟಿಗೆ ಪವಾಡ ಸದೃಶ ವಿವರಗಳು. ಇಷ್ಟಾಗಿಯೂ ಅವುಗಳನ್ನು ಎಚ್ಚರಿಕೆಯಿಂದ ಪರಿಗಣಿಸುವುದರ ಮೂಲಕ, ವಚನಗಳನ್ನು ಮುಖ್ಯವಾಗಿ ಗಣಿಸುವುದರ ಮೂಲಕ ಇದ್ದುದರಲ್ಲಿ ಪ್ರಾಮಾಣಿಕವಾದುದನ್ನು ಬರೆಯಲು ಸಾಧ್ಯವಿದೆ. ಶಿವಶರಣರನ್ನು ಕುರಿತು ಈಗಾಗಲೇ ಕೆಲವು ಕಾದಂಬರಿಗಳು, ಜೀವನ ಚರಿತ್ರೆಗಳು, ವ್ಯಕ್ತಿಚಿತ್ರಗಳು ಬಂದಿವೆಯಾದ್ದರಿಂದ ಅವುಗಳ ಗುಣದೋಷಗಳು ಹಾಗೂ ಮಿತಿಗಳು ಪ್ರಸ್ತುತ ಕಾದಂಬರಿಗಳನ್ನು ಗಮನಿಸುವಾಗ ನಮ್ಮೆದುರು ಸುಳಿಯುವುದು ಸಹಜ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಕಾದಂಬರಿಗಳನ್ನು ಪರಿಶೀಲಿಸಿದಾಗ ನಮಗಾಗುವುದು ನಿರಾಸೆ ಮಾತ್ರ.

'ಕೂಗಿತ್ತು ಕೂಡಲ ಸಂಗಮ' ಎಂಬ ಮೊದಲ ಭಾಗವನ್ನು ಬಸವಣ್ಣನ ಹುಟ್ಟಿನಿಂದ ಸಂಸಾರ ವಿರತಿ'ಯವರೆಗಿನ ಚಿತ್ರವನ್ನು ಕೊಡಲು ಮೀಸಲಿಡಲಾಗಿದೆ. 'ಸಂಸಾರ ವಿರತಿ' ಎಂಬ ಮಾತನ್ನು ಲೇಖಕರೇ ಬಳಸಿದ್ದಾರೆ. ಬಸವಣ್ಣನ ಮಟ್ಟಿಗೆ ಹೇಳುವುದಾದರೆ ಸಂಸಾರ ವಿರತಿಯನ್ನು ಅವನು ಬಯಸಿದಂತೆ ಕಾಣುವುದಿಲ್ಲ. ಆದರೆ ಲೇಖಕರು ಈ ಮಾತನ್ನು ಯಾವ ಅರ್ಥದಲ್ಲಿ ಬಳಸಿದ್ದಾರೆಂಬುದು ಸ್ಪಷ್ಟವಾಗುವುದಿಲ್ಲ. ಬಸವನ ಹುಟ್ಟಿಗೆ ಹಿನ್ನೆಲೆಯಾಗಿ ಹರಿಹರ ಕಲ್ಪಿಸಿದಂತೆ–ಶಿವನ ಆಣತಿಯಂತೆ ಬಸವ ಧರೆಗೆ ಬಂದ–ಕಾರಣಿಕ ಪುರುಷ ಎಂಬುದನ್ನು ತರುವುದಿಲ್ಲವಾದರೂ, ಅವನೂ ಒಬ್ಬ ಮಾನವ ಸಹಜವಾದ ವ್ಯಕ್ತಿತ್ವದವನು ಎಂಬಂತೇನೂ ಚಿತ್ರಿಸುವುದಿಲ್ಲ. ಕಾದಂಬರಿಯ ಪ್ರಾರಂಭದ ವಿವರಗಳೂ ಇದನ್ನು ಸ್ಪಷ್ಟಪಡಿಸುತ್ತವೆ. ಮುಂದಿನೆರಡು ಭಾಗಗಳು ಬಸವ ಕೂಡಲ ಸಂಗಮಕ್ಕೆ ಬರುವುದರಿಂದ ಹಿಡಿದು ಅವನೊಬ್ಬ

ಸಾಧಕನಾಗಿ ಬೆಳೆದು ಬಲದೇವ ದಂಡಾಧಿಪನ ಅಪೇಕ್ಷಾನುಸಾರ ಮಂಗಳವೇಡೆಗೆ ಹೋಗುವವರೆಗಿನ ವಿವರಗಳಿವೆ. ಇವೆರಡು ಭಾಗಗಳಲ್ಲಿ ಬರುವ ಮೋಹಿನಿಯ ಪಾತ್ರ ಉದ್ದೇಶಿತವಾಗಿಯೋ ಅನುದ್ದೇಶಿತವಾಗಿಯೋ ಇತಿಮಿತಿಯಿಲ್ಲದೆ ಬೆಳೆಯುತ್ತಾ ಹೋಗಿದೆ. ಈ ಮೋಹಿನಿ 'ಇತಿಹಾಸವಲ್ಲ; ಸಂಕೇತ' (ಮುನ್ನುಡಿ, ಭಾಗ 2) ಎಂಬ ಲೇಖಕರ ಮಾತು ಬರಿಯ ಮಾತಾಗಿ ಉಳಿದು ಬಿಡುತ್ತದೆ. ಕಾದಂಬರಿಯಲ್ಲಿ ಅದು ಸಾಂಕೇತಿಕತೆಯ ಸೆಲೆಯುಳ್ಳುಳಿಯದೆ ತಾನೂ ಒಂದು ಪಾತ್ರವೆಂಬಂತೆ ಮಾತ್ರ ಕಾಣಬರುತ್ತದೆ.

ಲೇಖಕರು ಈ ಕಾದಂಬರಿಗಳನ್ನು ಕುರಿತು "ಕೇವಲ ಇತಿಹಾಸವನ್ನು ಗುರುತು ಹಾಕುವ ಕಾದಂಬರಿಗಳಲ್ಲ; ಇವು ಇತಿಹಾಸವನ್ನು ಸ್ವೀಕರಿಸಿಯೂ ದರ್ಶನಾತ್ಮಕ ಕಾದಂಬರಿಗಳು'' ಎನ್ನುತ್ತಾರೆ (ಮುನ್ನುಡಿ, ಭಾಗ 1). ಆದರೆ ಈ ಕಾದಂಬರಿಗಳು ಯಾವುದು ಇತಿಹಾಸ, ಯಾವುದು ದರ್ಶನ ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಜೊತೆಗೆ ಬಹಳಷ್ಟು ವಿವರಗಳು ತಲೆಬುಡವಿಲ್ಲದಂತಾಗಿವೆ. ಉದಾ : ಮಾದಿರಾಜನ ಮನೆಗೆ ಸಂಬಂಧಿಸಿದ ಈ ವಿವರಗಳನ್ನು ನೋಡಿ "...ಈ ಮನೆ ಬ್ರಾಹ್ಮಣರದಾದರೂ ಇದರಲ್ಲಿ ಜಂಗಮರ ಕುರುಹುಗಳೇಕೆ? ಇಷ್ಟಲಿಂಗ ಬ್ರಾಹ್ಮಣರದ್ದೊ ಜಂಗಮರದ್ದೊ? ಒಬ್ಬೊಬ್ಬರ ಎದೆ ಮೇಲೆ ಬ್ರಾಹ್ಮಣರ ಜನ್ನಿವಾರವಿದ್ದರೆ ಸಣ್ಣವರ ಎದೆ ಮೇಲೆ ಲಿಂಗಗಳಿವೆ! ಲಿಂಗವಿದ್ದವರು ಚಿಕ್ಕವರಿದ್ದಾರೆ...ಜನ್ನಿಗೆ ಇದ್ದವರು ದೊಡ್ಡವರಿದ್ದಾರೆ! ಅವರೇನಾದರೂ ಈ ಮನೆಯ ಆಳುಗಳಿದ್ದಾರೋ ಏನೊ? ಆದರೆ ಬ್ರಾಹ್ಮಣರು ಎಂದಾದರೂ ಜಂಗಮ ಆಳುಗಳನ್ನು ಮನೆಯೊಳಗೆ ಹೊಗಿಸಿಕೊಂಡಾರೆಯೆ? ಅಂತೂ ವಿಚಿತ್ರ..."(ಪು. 34, ಕೂಗಿತ್ತು ಕೂಡಲ ಸಂಗಮ). ಇಂಥ ಪಲವು ವಿವರಗಳನ್ನು ತೋರಿಸಬಹುದು.

ಒಂದೊಂದು ಕಾದಂಬರಿಗೂ ಇತ್ತಿರುವ ಶೀರ್ಷಿಕೆಗಳಲ್ಲೇ ಇವುಗಳ ಹಿಂದೆ ಅತ್ಯಂತ ಭಾವುಕ ಮನಸ್ಸು ಕೆಲಸ ಮಾಡಿದೆ ಎಂಬುದು ವ್ಯಕ್ತವಾಗುತ್ತದೆ. ಇದು ಕಾದಂಬರಿಗಳನ್ನೇ ಪ್ರವೇಶಿಸಿದಾಗ ಮತ್ತಷ್ಟು ಖಚಿತವಾಗುತ್ತದೆ. ಲೇಖಕ ಭಾವುಕನಾಗಿ ಬಸವಣ್ಣನ ವ್ಯಕ್ತಿತ್ವವನ್ನು ಗ್ರಹಿಸುತ್ತಾ ಹೋಗುವುದರಿಂದಲೇ ಕಾದಂಬರಿಯೊಳಗೆ ಬಸವಣ್ಣ ಮಾನವ ಸಹಜವಾದ ಚಿತ್ರದಿಂದ ದೂರವೇ ಉಳಿದುಬಿಡುತ್ತಾನೆ. ಲೇಖಕರು ಭಾಷೆಯನ್ನು ಬಳಸಿದ ಕ್ರಮವನ್ನು ಸಹ ಈ ಭಾವುಕತೆಯ ಹಿನ್ನೆಲೆಯಲ್ಲೇ ನೋಡಬೇಕು. ಅನಗತ್ಯವಾದ ಉತ್ಪ್ರೇಕ್ಷೆಗಳು, ಒಂದನ್ನೇ ಪತ್ತಾರು ಮಾತುಗಳಲ್ಲಿ, ಬೇರೆ ಬೇರೆ ಪದಗಳಲ್ಲಿ ಹೇಳುವ ಪ್ರಯತ್ನವನ್ನು ಕಾದಂಬರಿಯುದ್ದಕ್ಕೂ ಕಾಣಬಹುದು. ಇಂಥದನ್ನೇ ಗಮನದಲ್ಲಿರಿಸಿಕೊಂಡು, ಲೇಖಕರು "ಇಲ್ಲಿಯ ಗದ್ಯಕ್ಕೆ "ಕಾವ್ಯ"ದ ಮಿನುಗು ಮೇಳೈಸಲು ಪ್ರಯತ್ನಿಸಿದ್ದೇನೆ" ಎಂಬ ಮಾತನ್ನು ಹೇಳಿದ್ದರೆ ಅದಕ್ಕಿಂತ ವಿಚಿತ್ರ ಸಂಗತಿ ಬೇರೊಂದಿಲ್ಲ.

ಗುದು ಮುರಿಗಿ : ಹೊಲಿ ಶೇಖರ್

ಇವತ್ತಿನ ರಾಜಕಾರಣದ ವಿಕ್ಷಿಪ್ತ ಪರಿಸ್ಥಿತಿಯನ್ನು ಕುರಿತ ಹೊಲಿ ಶೇಖರರ ಈ ಕಾದಂಬರಿ ವ್ಯಕ್ತಮಾಡುವ ಸಾಮಾಜಿಕ ಆಶಯಂಗಳು ಗಮನಾರ್ಹವಾದುವು. ಆಶ್ವಾಸನೆಗಳ ಹಂತದಲ್ಲಿ ಜನಪರವೆಂದು ಕಾಣುವ-ಉದಾ : ಗುದು ಮುರಿಗಿ ಯೋಜನೆಯನ್ನೇ ನೋಡಬಹುದು-ಸರಕಾರ ಕಾರ್ಯಶೀಲವಾಗುವ ಹಂತದಲ್ಲಿ ಗೋಮುಖವ್ಯಾಘ್ರರ ಕೈಗೊಂಬೆಯಾಗಿ ಜನವಿರೋಧಿಯಾಗುವಂಥ ಸಾಧ್ಯತೆ ಯನ್ನು ತೋರಿಸುವಲ್ಲಿ ಲೇಖಕರು ಬಹುಪಾಲು ಯಶಸ್ವಿಯಾಗಿದ್ದಾರೆ.

ರಾಜಕಾರಣದಲ್ಲಿ ಸುಳಿಯುವ ಆಮಿಷಗಳು, ಕ್ಷಣಿಕ ಲಾಲಸೆಗಳು, ಯೋಜನೆ ಗಳು ತಪ್ಪು ದಾರಿಯನ್ನು ಹಿಡಿಯುವುದು, ಕಾದಂಬರಿಯಲ್ಲಿ ಹುಟ್ಟುವ ಚಳವಳಿ ಯೊಂದು ಯಾರ ವಿರುದ್ಧವಾಗಿ ಆಗಬೇಕೋ ಅವನೇ ಅದನ್ನು ತನ್ನ ನಿಯಂತ್ರಣಕ್ಕೆ ತಂದುಕೊಂಡು ತನ್ನ ಲಾಭಕ್ಕಾಗಿ ಅಮಾಯಕರನ್ನು ಬಲಿಯಾಗಿಸುವುದು ಇಂಥದರ ಮೂಲಕ ಕಾದಂಬರಿ ವ್ಯಕ್ತಮಾಡುವ ನಿಲುವುಗಳು ಗಮನಿಸತಕ್ಕವು.

ಒಂದರ್ಥದಲ್ಲಿ ಇದೊಂದು ರಾಜಕೀಯ ವಿಡಂಬನೆಯ ಕೃತಿ. ಇಲ್ಲಿ ಬಳಸ ಲಾದ ಹೆಸರುಗಳೂ ಇದನ್ನೇ ಸೂಚಿಸುತ್ತವೆ. ಮುಖ್ಯಮಂತ್ರಿ ಬಂಡೂಕಪ್ಪ, ಎಮ್ಮೆಲ್ಲೆ ಟೊಪಿಗೆಪ್ಪ, ಸಾಹುಕಾರ ತಂಪಣ್ಣ, ವಿರೋಧ ಪಕ್ಷದ ಗುಂಡುಗಪ್ಪ ; ಹೊಲಸೂರು, ಮಂಗ್ಯಾನೂರು ; ಪಂಚಾಂಗ ಪಕ್ಷ-ಇತ್ಯಾದಿ. ಬೇರೆ ಬೇರೆ ಪಾತ್ರ ಗಳ ಮೂಲಕವೂ, ಕೆಲವೇಳೆ ಲೇಖನ ಮಾತುಗಳಲ್ಲೂ ವಿಡಂಬನೆ ಎದ್ದು ಕಾಣು ತ್ತದೆ. ಆದರೆ ಈ ವಿಡಂಬನೆ ಕಾದಂಬರಿಯ ಮೇಲು ಪಾತಳಿಯಲ್ಲೇ ಉಳಿದು ಬಿಡುತ್ತದೆಯಾಗಿ, ಕಾದಂಬರಿಯ ಒಡಲಿನಿಂದ ಮೂಡುವಲ್ಲಿ ಸೋತಿದೆ. ಇಲ್ಲಿ ಬರುವ ಮುಖ್ಯಮಂತ್ರಿ, ಮತ್ತಿತರ ಕೆಲವು ಪಾತ್ರಗಳು ನಮ್ಮ ಪರಿಸರದ ಕೆಲವು ನಿರ್ದಿಷ್ಟ ವ್ಯಕ್ತಿಗಳನ್ನು ನೆನಪಿಸುತ್ತವೆಂಬುದನ್ನು ಈಚಿನ ನಮ್ಮ ರಾಜಕಾರಣದ ಸಂದರ್ಭವನ್ನು ಬಲ್ಲವರಿಗೆ ವಿವರಿಸಬೇಕಾಗಿಲ್ಲ. ಇದು ಈ ಕಾದಂಬರಿಯ ಮಿತಿಯೂ ಹೌದು.

ಪ್ರೇಮಗಾನ : ಸು. ರುದ್ರಮೂರ್ತಿ ಶಾಸ್ತ್ರಿ

ಅಶೋಕ, ಪ್ರಶಾಂತ, ಮೋಹನ ಮುರಳಿ ಮೊದಲಾದ ಕಾದಂಬರಿಗಳನ್ನು ಬರೆದ ರುದ್ರಮೂರ್ತಿಶಾಸ್ತ್ರಿಯವರ ಮತ್ತೊಂದು ಕಾದಂಬರಿಯಿದು. ಪ್ರೇಮ ದಂತಹ ಜನಪ್ರಿಯ ವಸ್ತುವೊಂದನ್ನು ಜನಪ್ರಿಯ ರೀತಿಯಲ್ಲಿ ಹೇಳುತ್ತಾ ಹೋಗುವ ಈ ಕಾದಂಬರಿಯ ವಿಶಿಷ್ಟತೆಯಿರುವುದು ಪ್ರೇಮದ ಕತೆಯನ್ನು ಒಂದು ಸಾಮಾಜಿಕ ಸಂದರ್ಭದ ಅನಿವಾರ್ಯಗಳ ಮಧ್ಯೆ ಇಡುವುದರಲ್ಲಿ. ಹೀಗಾಗದಿದ್ದರೆ ಇದೊಂದು ಪ್ರೇಮಿಗಳ ಹಳಹಳಿಕೆಯಾಗಿ ಮಾತ್ರ ಮುಗಿಯುತ್ತಿತ್ತು. ಮಧ್ಯಮ

ವರ್ಗದ ಉದ್ಯೋಗಸ್ಥ ಕುಟುಂಬಗಳಿಂದ ಬಂದ 'ಮೋಹನ' ಮತ್ತು 'ರಮ್ಯ'ರ ನಿಷ್ಕಪಟ ಪ್ರೇಮದ ಕತೆಯು ಜೊತೆಗೇ ಹೆಣ್ಣಿನ ಬಗೆಗಿನ ತಿರಸ್ಕಾರಜನಕ ವಿವರಗಳನ್ನೂ ಉದ್ಯೋಗಸ್ಥ ಮಹಿಳೆಯರ ವಿಚಿತ್ರ ಪೇಚುಗಳನ್ನೂ ತರುವುದರ ಮೂಲಕ ಕಾದಂಬರಿಗೆ ವಿಶಿಷ್ಟ ಆಯಾಮಗಳನ್ನು ಸಾಧ್ಯವಾಗಿಸಲಾಗಿದೆ.

ಕೆಲವು ಅನಗತ್ಯ ವಿವರಗಳ ಬಗ್ಗೆ, ಪ್ರೇಮಗಾನವನ್ನು ಪ್ರೇಮಿಗಳು ಹಾಡುವ ಮತ್ತು ಕೇಳುವ ವಿವರಗಳನ್ನು ಕೊಡುವ ಬಗ್ಗೆ ಲೇಖಕರು ಜಾಗರೂಕತೆ ವಹಿಸಿದ್ದರೆ ಕಾದಂಬರಿ ಇನ್ನಷ್ಟು ಚೊಕ್ಕವಾಗಿರುತ್ತಿತ್ತು ಎಂದು ತೋರುತ್ತದೆ.

ಪ್ರತಿಫಲ : ತ. ಪು. ವೆಂಕಟರಾಮ್

ತ. ಪು. ವೆಂಕಟರಾಮುರ ಹಲವು ಕಾದಂಬರಿಗಳ ನಂತರದ ಕೃತಿಯಿದು. ಮಾಮೂಲಿಯಾದ ವಿಧಾನದಲ್ಲೇ ಕತೆಯನ್ನು ಸಲೀಸಾಗಿ ಹೇಳಿಕೊಂಡು ಹೋಗಬಲ್ಲ ಮತ್ತು ಅಷ್ಟು ಮಟ್ಟಿಗೆ ಓದುಗನನ್ನು ನಿರಾಶರನ್ನಾಗಿ ಮಾಡದ ಬರವಣಿಗೆ ವೆಂಕಟರಾಮುರದು ಎಂಬುದನ್ನು ಈ ಕಾದಂಬರಿ ಮತ್ತೊಮ್ಮೆ ಸ್ಪಷ್ಟಪಡಿಸುತ್ತದೆ.

"ವೃತ್ತಿಯಲ್ಲಿ ಕಳ್ಳನಾದರೂ ಸತ್ಯವನ್ನು ಅಪ್ಪಿದ್ದ ದರೋಡೆಕೋರನಾದರೂ ಶೀಲವಂತನಾಗಿದ್ದ, ಕೊಲೆಗಾರನಾದರೂ ಆಸ್ತಿಕನಾಗಿದ್ದ" ಉತ್ತಮ ವ್ಯಕ್ತಿ ಶಕ್ತಿ ನನ್ನ ಕಥಾನಾಯಕ ಮುಸಲಿ" ಎನ್ನುತ್ತಾರೆ ಲೇಖಕರು, ತಮ್ಮ ಕಾದಂಬರಿಯ ನಾಯಕನನ್ನು ಕುರಿತು. ಸಂದರ್ಭವಶದಿಂದ ಅತ್ಯಂತ ಸಾತ್ವಿಕ ಗುಣದ ವ್ಯಕ್ತಿಯೊಬ್ಬ, (ಮಂಜುನಾಥ) ತನ್ನ ತಂದೆಯ ವಿನಾಕಾರಣ ಗಲ್ಲಿಗಾಗಿ ಪ್ರತಿ ಸೇಡನ್ನು ಸಾಧಿಸುವ ಹಟತೊಟ್ಟು ದರೋಡೆಕೋರ ಮುಸಲಿಯಾಗಿ ಮಾರ್ಪಾಡಾಗುತ್ತಾನೆ. ಕಾದಂಬರಿ ಮುಂದುವರಿದಂತೆ ಸೇಡಿನ ವೈಯಕ್ತಿಕ ಗೌಣವಾಗುತ್ತಾ ಹೋಗಿ ಸಾಮೂಹಿಕ ಹಿತ ಮುಖ್ಯವಾಗುತ್ತದೆ. ಶ್ರೀಮಂತರನ್ನು ಮಾತ್ರ ದರೋಡೆ ಮಾಡುವ, ಬಡವರಿಗೆ ಆ ಮೂಲಕ ಆಸರೆಯಾಗುವ "ದುಷ್ಟ ಶಿಕ್ಷಣ–ಶಿಷ್ಟ ರಕ್ಷಣ" ಎಂಬಂಥ ತರ್ಕದ ಪಾಲಕರಾದ ವ್ಯಕ್ತಿಗಳು ಜನ ಸಮೂಹದಲ್ಲೇ ಕತೆಯಾಗಿ ಬೆಳೆಯುತ್ತಾರೆ. ಮುಸಲಿ ಕೂಡ ಅಂಥ ಒಬ್ಬ ವ್ಯಕ್ತಿ. ಮುಸಲಿಯ ಆ ಬಗೆಯ ಚಿತ್ರವನ್ನು ಕಟ್ಟಿ ಕೊಡುವಲ್ಲಿ ಕೃತಿ ಸಫಲವಾಗಿದೆ. ಇಂಥ ವಸ್ತುವನ್ನಾಧರಿಸಿದ ಕೃತಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಒಂದು ಕೊರತೆಯೆಂದರೆ : ನಾಯಕನ ಸಾಹಸಗಳಲ್ಲಿ, ನಂಬಿಕೆಗಳಲ್ಲಿ, ಅವನ ಬದುಕಿನಲ್ಲಿ ಆಗಿಹೋಗುವ ಘಟನೆಗಳಲ್ಲಿ ಮಾತ್ರ ತಮ್ಮ ಆಸಕ್ತಿಯನ್ನು ಕೇಂದ್ರೀಕರಿಸುತ್ತವೆ. ಮಾನಸಿಕ ತಳಮಳ, ಹೊಯ್ದಾಟಗಳ ರಣರಂಗವಾದ ಅವನ ಮನೋಲೋಕವನ್ನು ಮರೆತು ಬಿಡುತ್ತವೆ ; ಅಥವಾ ಲಘುವಾಗಿ ಪರಿಗಣಿಸುತ್ತವೆ. ಈ ಮಾತು 'ಪ್ರತಿಫಲ' ಕಾದಂಬರಿಗೂ ಅನ್ವಯಿಸುತ್ತದೆ.

ಅಟ್ಲಾಂಟಿಸ್ : ರಾಜಶೇಖರ ಭೂಸನೂರಮಠ

ವೈಜ್ಞಾನಿಕ ಕಾದಂಬರಿಗಳ ಲೇಖಕರೆಂದು ಹೆಸರಾದ ರಾಜಶೇಖರ ಭೂಸನೂರಮಠರ ಮತ್ತೊಂದು ಕಾದಂಬರಿಯಿದು. ಪತ್ತೇದಾರಿ ಕಾದಂಬರಿಗಳಾಗಲಿ ವೈಜ್ಞಾನಿಕ ಕಾದಂಬರಿಗಳಾಗಲಿ ಏನಿಲ್ಲವೆಂದರೂ ಆದ್ಯಂತಿಕವಾಗಿ ಓದುಗನ ಕುತೂಹಲವನ್ನು ಕಾಯ್ದಿಡುತ್ತವೆ. ಅದನ್ನು ಅಟ್ಲಾಂಟಿಸ್ ಕಾದಂಬರಿ ಕೂಡ ಮಾಡುತ್ತದೆ.

ಸಾಗರತಳದ ಅಗೋಚರ ಅಟ್ಲಾಂಟಿಸ್ ದ್ವೀಪದ ಶೋಧದಲ್ಲಿ ತೊಡಗಿದ ಶ್ರೀಮತಿ ಮರ್ಚೆಂಟ್ ತಂಡದ ಶೋಧನಾ ಯಾತ್ರೆಯನ್ನೂ, ಆ ತಂಡದ ಕುತೂಹಲಕರ ಅನುಭವಗಳನ್ನೂ, ಪ್ರೇಮ ಇತ್ಯಾದಿಯಾದ ವಿಚಾರಗಳನ್ನೂ ಈ ಕಾದಂಬರಿ ಒಳಗೊಂಡಿದೆ. ಅಟ್ಲಾಂಟಿಸ್ ದ್ವೀಪದ ಜೊತೆಗೆ ಆತಂಡ ಇರಿಸಿಕೊಂಡಿದ್ದ ಗುರಿ ಅನಿಲ ಮರ್ಚೆಂಟರನ್ನು ಹುಡುಕುವುದು ಕೂಡ. ಎರಡೂ ಆ ತಂಡಕ್ಕೆ ಏಕಕಾಲಕ್ಕೆ ಸಾಧ್ಯವಾಗುತ್ತದೆ. ಆದರೆ ಆ ಅಟ್ಲಾಂಟಿಸ್, ಆ ತಂಡದ ಭಾವನೆಯಂತೆ ಮಾನವ ಲೋಕದ ಬಗೆಯದಲ್ಲ; ಅದೊಂದು ಪವಾಡ ಸದೃಶವಾದ, ಇಂದ್ರಿಯಾತೀತ ಜಗತ್ತೆಂದು ಕರೆಯಬಹುದಾದದ್ದು. ಅಲ್ಲಿ ಅನಿಲ ಮರ್ಚೆಂಟ್ ತಂಡಕ್ಕೆ ಭೇಟಿಯಾಗುತ್ತಾರಾದರೂ ಮನುಷ್ಯನಾಗಿ, ಬರಿಯ ಸಾಗರ ತಜ್ಞನಾಗಿ ಅಲ್ಲ, ಅಟ್ಲಾಂಟಿಯನ್ ದೀಕ್ಷೆ ಪಡೆದ ಅಮರನಾಗಿ. ಮೆರೀನಾ-11 (ಶ್ರೀಮತಿ ಮರ್ಚೆಂಟರ) ತಂಡದ ಕೆಲವರು ಅಟ್ಲಾಂಟಿಯನ್ ಅಮರ ಬದುಕಿಗೆ ಜೋತು ಬಿದ್ದು ಅಲ್ಲೇ ಉಳಿಯುತ್ತಾರೆ. ಉಳಿದವರು ಮರಳುತ್ತಾರೆ.

ಇಂಥದನ್ನೆಲ್ಲ ಓದುವಾಗ ಖಂಡಿತವಾಗಿಯೂ ಅನ್ನಿಸುವುದಿಷ್ಟು : ಓದುವಿಕೆ ತುಂಬ ಕುತೂಹಲ ಪೂರ್ಣವಾಗಿರುತ್ತದೆ–ದೆವ್ವದ ಕತೆಗಳನ್ನು ಕೇಳುವಹಾಗೆ–, ಆದರೆ ವೈಜ್ಞಾನಿಕ ಕಥನದ ನೆಪದಲ್ಲಿ ಅವೈಜ್ಞಾನಿಕವಾದ, ತಳ ಬುಡವಿಲ್ಲದ ವಿವರಗಳು ಬಂದು ಬಿಡುತ್ತವಲ್ಲಾ ಎಂಬುದು.

ಪ್ರಕೃತಿ : ನಾ. ಮೊಗಸಾಲೆ

ಮೊಗಸಾಲೆಯವರ ಈ ಕಾದಂಬರಿಯ ವಸ್ತು ಮುಖ್ಯವಾಗಿ ಮಾನವ ಪ್ರಕೃತಿ ಮತ್ತು ಅದರ ಶೋಧ. ಕಾದಂಬರಿಯ ಮುಖ್ಯ ಪಾತ್ರವಾದ ಕಾರಂತರು ಮತ್ತು ಅವರ ಮಗಳು ಶೀಲಾ-ಮುಖ್ಯವಾಗಿ ಈ ಇಬ್ಬರ ಮೂಲಕ ನಡೆಯುವ ಶೋಧ ಮಾನವ ಪ್ರಕೃತಿಯ ಹಲವು ಮಗ್ಗುಲುಗಳನ್ನು ತೆರೆದಿಡುವುದನ್ನು ಇಲ್ಲಿ ಕಾಣಬಹುದು. ಈ ಎರಡು ಪಾತ್ರಗಳಲ್ಲದೆ ನಿರೂಪಕನ ಪಾತ್ರವೂ ಈ ಶೋಧಕ್ಕೆ ಗುರಿಯಾಗಿರುವುದನ್ನು ಅಲ್ಲಲ್ಲಿ ಗುರುತಿಸಬಹುದಾದರೂ, ಶೋಧದ ತೀವ್ರತೆ

ಮಾತ್ರ ಉಳಿದ ಪಾತ್ರಗಳಲ್ಲಿ ಆಗುವುದಕ್ಕಿಂತ ಕಾರಂತರ ಪಾತ್ರದಲ್ಲಿ ಹೆಚ್ಚಿಂಬುದು ಗಮನಿಸಬಹುದಾದ ಸಂಗತಿ. ಹೀಗಾದದ್ದನ್ನು, ಆಯಾ ಪಾತ್ರಗಳಿಗೆ ಒಂದು ಆರಕೆಯೆಂದೇನೂ ಭಾವಿಸಬೇಕಾಗಿಲ್ಲ. ಬದಲಾಗಿ, ಕಾದಂಬರಿಯ ಉದ್ದೇಶವನ್ನು ಸಾರ್ಥಕವಾಗಿಸಲು ಒದಗಿದ ಅನಿವಾರ್ಯವೆನ್ನಬಹುದು.

ಬದುಕನ್ನು ಕುರಿತಂತೆ ತನ್ನದೇ ಆದ ನಂಬಿಕೆಗಳನ್ನಿರಿಸಿಕೊಂಡ, ಮತ್ತು ಅದರಂತೆಯೇ ಬದುಕಲೆತ್ನಿಸುವ ಕಾರಂತರ ಮನೋಧರ್ಮವೇ ಅತ್ಯಂತ ಮುಕ್ತವಾದದ್ದು. ಅದು, ತನ್ನ ಎಲ್ಲವನ್ನೂ ತೆರೆದ ಪುಸ್ತಕವಾಗಿರುವ ಹಾಗೂ ಎಲ್ಲದಕ್ಕೂ ತೆರೆದುಕೊಳ್ಳುವ ಸ್ವಭಾವದ್ದು. ಅನುಭವದ ವಿಷಯಕ್ಕೆ ಬಂದರಂತೂ ಕಾರಂತರು ಒಂದು ವಿಶ್ವಕೋಶ. ಕಾರಂತರ ಪ್ರಕೃತಿಯನ್ನು ಕುರಿತು ನಮಗೆ ಇಂಥ ಅಭಿಪ್ರಾಯಗಳಿಗೆ ಬರಲು ಸಾಧ್ಯವಾಗುವುದು ನಿರೂಪಕನೆದುರು ಆ ಪಾತ್ರ ಬಿಚ್ಚಿಕೊಳ್ಳುತ್ತಾ ಹೋಗುವುದರ ಆಧಾರದ ಮೇಲೆ. ಆ ಪಾತ್ರ ಯಾವುದನ್ನೂ ಮುಚ್ಚಿಡುವುದಿಲ್ಲ ಎನ್ನುತ್ತಿರುವಾಗಲೇ, ಏನನ್ನೋ ಮುಚ್ಚಿಡುತ್ತದೆ; ಬಿಚ್ಚುತ್ತಾ ಹೋದಷ್ಟೇ ರಹಸ್ಯವೂ ಆಗುತ್ತದೆ (ಉದಾ: "ಕಾರಂತರ ಬದುಕಿನ ಪುಟಗಳು ತೆರೆಯುತ್ತಾ ಹೋದಹಾಗೆ ಅವರ ವ್ಯಕ್ತಿತ್ವದ ಆಳುರಂಗಳು ಅಸ್ಪಷ್ಟವೂ ರಹಸ್ಯವೂ ಆಗುತ್ತಾ ಹೋಯಿತು" ಪು. 93). ಇನ್ನು ಶೀಲಾ, ತಾನಾಗಿ ಕಾರಂತರ ಹಾಗೆ ಯಾವುದನ್ನೂ ತೆರೆದಿಡುವುದಿಲ್ಲ. ಅವಳ ಸ್ವಚ್ಛಂದತೆಯು ಹಿಂದೆ ಅಗಾಧವಾದ ಒಗಟಿದೆ. ಅವಳ ಗಂಡನ ಆತ್ಮಹತ್ಯೆಯ ಸಂಗತಿ ಕಾದಂಬರಿಯಲ್ಲಿ ಕೊನೆಗೂ ಒಂದು ಕುತೂಹಲವೇ ಆಗಿ ಉಳಿಯುತ್ತದೆ.

ಮಾನವ ಪ್ರಕೃತಿ, ಅದನ್ನು ತಿಳಿಯುತ್ತಾ, ಬಗೆಯುತ್ತಾ ಹೋದಂತೆಲ್ಲ ರಹಸ್ಯವಾಗಿ, ಒಗಟಾಗಿ ಉಳಿಯುತ್ತಲೇ ಹೋಗುತ್ತದೆ. ಕಾರಂತರ ಪಾತ್ರ ಇದಕ್ಕೊಂದು ನಿದರ್ಶನ. ಸಾವು ತನ್ನನ್ನು ಆಹ್ವಾನಿಸುತ್ತಿದೆ ಎಂಬುದನ್ನು ತಿಳಿದೂ "ಬದುಕನ್ನು ತೀವ್ರವಾಗಿ ಅನುಭವಿಸ" ಬಯಸುವ ಕಾರಂತರು, ತನ್ನ ವ್ಯಕ್ತಿತ್ವದ ಎಲ್ಲವನ್ನೂ ತೆರೆದಿಟ್ಟರೂ ಏನನ್ನೋ ಮುಚ್ಚಿಟ್ಟರು ಅನ್ನಿಸಿಬಿಡುತ್ತದೆ. ಹೀಗಾಗಿ ಕಾರಂತರ "ನಾನು ಹೇಳೋದಾದರೆ ಈ ಪ್ರಕೃತಿಯನ್ನು ಹೇಗೆ ನಾವು ಪೂರ್ತಿ ಅರ್ಥಮಾಡಿಕೊಳ್ಳಲು ಅಸಾಧ್ಯವೋ ಹಾಗೆ ಮನುಷ್ಯನನ್ನು ಕೂಡಾ. ಮನುಷ್ಯ ಇನ್ನೊಬ್ಬನನ್ನು ತಿಳಿಯುವುದಿರಲಿ, ತನ್ನನ್ನು ತಾನು ತಿಳಿಯುವುದು ಎಂದಿಗೂ ಸಾಧ್ಯವಿಲ್ಲ!" ಎಂಬಂಥ ಮಾತುಗಳು (ಪು. 74) ಕಾದಂಬರಿಗೆ ಬರೆವ ವ್ಯಾಖ್ಯಾನದಂತಿವೆ.

ಪ್ರಥಮ ಪುರುಷದ ನಿರೂಪಣೆಯಲ್ಲಿರುವ ಈ ಕಾದಂಬರಿಯಲ್ಲಿ ನಿರೂಪಕ ಕಥನವನ್ನು ಹೇಳುತ್ತಲೇ, ಕಾದಂಬರಿಯ ಒಂದು ಪಾತ್ರವಾಗುತ್ತಲೇ ಓದುಗನಾಗಿ

ಅನುಭವಿಸುತ್ತಿದ್ದಾರೆ ಅನ್ನಿಸುತ್ತದೆ. ಭಾಷೆಯ ವಿಷಯದಲ್ಲಿ ಮೊಗಸಾಲೆ ಗಮನ ಸೆಳೆದಿದ್ದಾರೆ. ಇನ್ನು, ಸೃಜನಶೀಲತೆಗೆ ಸಂಬಂಧಿಸಿದ ಕೆಲವು ಸಂಗತಿಗಳು ಗಮನಿಸತಕ್ಕವು.

ಪುನರುತ್ಥಾನ : ಪರಮಶಿವ ನಡುಬೆಟ್ಟ

ಲೇಖಕರ ಮೊದಲ ಕಾದಂಬರಿಯಿದು. ಇಲ್ಲಿ ಲೇಖಕರು ಜಾತೀಯತೆ, ಮೌಢ್ಯ, ಅನೈತಿಕವೆನ್ನುವಂಥ ಲೈಂಗಿಕ ಸಂಬಂಧಗಳು, ಇದೆಲ್ಲದರ ಮಧ್ಯೆ ಶಾಮ ಭಟ್ಟರು ತನ್ನ ಇಳಿಗಾಲದಲ್ಲಿ ತನ್ನ ಜಾತಿಯವಳಲ್ಲದ ಹೆಣ್ಣೊಂದನ್ನು ಕೈಹಿಡಿಯಬೇಕಾದದ್ದು, ಮತ್ತು ಅದಕ್ಕೆ ಒದಗಿ ಬಂದ ಅನಿವಾರ್ಯಗಳು, ಜೊತೆಗೆ ವಿದ್ಯೆ, ಜಾತಿ ಮತ್ತು ಪುಂಡಾಟಿಕೆಗಳ ಒಳಗೆ ಮುಳುಗಿ ಹೋಗುತ್ತಿರುವುದು–ಹೀಗೆ ಅನೇಕ ಸಂಗತಿಗಳನ್ನು ಹೇಳುವ ಪ್ರಯತ್ನವನ್ನು ಮಾಡಿದ್ದಾರೆ, ಆದರೆ ಯಾವುದನ್ನೂ ಸಮರ್ಥವಾಗಿ ಹೇಳುವಲ್ಲಿ ಸೋತಿದ್ದಾರೆ.

ಶಾಮ ಭಟ್ಟರು–ಚೆನ್ನಿಯರದು ಮುಖ್ಯ ಕತೆಯೆಂದಿಟ್ಟುಕೊಂಡರೆ, ಅದನ್ನು ಕಾದಂಬರಿಯುದ್ದಕ್ಕೆ ಪೋಷಿಸಿಕೊಂಡು ಬರುವ ಪ್ರಯತ್ನವನ್ನೇನೊ ಲೇಖಕರು ಮಾಡಿದಂತೆ ತೋರುವುದಿಲ್ಲ. ಮಾನಸ ಗಂಗೋತ್ರಿಯ ಸಂಬಂಧದ ವಿವರಗಳು (ಶಾಮಭಟ್ಟರ ಮಗ ಗುಣಶೀಲನ ನೆಪದಲ್ಲಿ ಬಂದಿವೆ ಎಂದರೂ) ತಮಷ್ಟಕ್ಕೆ ಸರಿಯೆಂದು ಕಾಣುತ್ತವೆಯಾದರೂ ಮುಖ್ಯ ಕತೆಯೊಂದಿಗೆ ಅನಿವಾರ್ಯ ಸಂಬಂಧವನ್ನೇನೂ ಪಡೆದುಕೊಳ್ಳುವುದಿಲ್ಲ. ಇನ್ನಿತರ ಕೆಲವು ವಿವರಗಳೂ ಅನಗತ್ಯವೆನಿಸುತ್ತವೆ. ಹೀಗಾಗಿ ಕಾದಂಬರಿ ಜಾಳುಜಾಳೆನ್ನುವಂತೆ ಕಾಣುತ್ತದೆ. ಇಂಥದರ ಬಗ್ಗೆ ಲೇಖಕರು ಗಮನ ಹರಿಸಿದ್ದರೆ ಕಾದಂಬರಿಗೆ ಒಂದು ಬಿಗಿ ಸಿದ್ಧಿಸುವ ಸಾಧ್ಯತೆಯಿತ್ತು.

ವೇಷ : ಸುಂದರ ನಾಡಕರ್ಣಿ

ಸುಂದರ ನಾಡಕರ್ಣಿಯವರ ಐದನೆಯ ಕಾದಂಬರಿ. ಲೇಖಕರು ಈ ಕಾದಂಬಯ ಬಗ್ಗೆ "ಈ ಹಿಂದಿನ ನಾಲ್ಕು ಕಾದಂಬರಿಗಳಲ್ಲಿ ಬೇರೆ ಬೇರೆಯ ವಿಷಯ ವಸ್ತುಗಳನ್ನು ಅಳವಡಿಸಿಕೊಂಡಂತೆ...ಇಲ್ಲಿ ಈಗ ಕೈಗೆ ಬಂದದ್ದು ಯಕ್ಷಗಾನ...... ಆ ಲೋಕನಾಟ್ಯದ ಹಿನ್ನೆಲೆ ಈ ಕಾದಂಬರಿಗೆ ಆಧಾರವಾಗಿದೆ. ಆದರೆ ಇಡಿಯ ಕಾದಂಬರಿಯ ಉದ್ದೇಶ ಮಾತ್ರ ಇದಿಷ್ಟೇ ಅಲ್ಲ–ಎಂಬುದನ್ನು ನಿರೂಪಣೆಯೇ ಸ್ಪಷ್ಟಪಡಿಸುತ್ತದೆ'' ಎಂದಿದ್ದಾರೆ.

"ಲೋಕನಾಟ್ಯದ ಹಿನ್ನೆಲೆ" ಆಧಾರವಾಗುಳ್ಳ "ಈ ಕಾದಂಬರಿಯ ಉದ್ದೇಶ ಇದಿಷ್ಟೇ ಅಲ್ಲ" ಎನ್ನುವಾಗ, ಲೇಖಕರು ಹೇಳುತ್ತಿರುವುದು ಇದನ್ನು ಮೀರಿದ

ಉದ್ದೇಶದ ಬಗ್ಗೆ ಮತ್ತು ಅರ್ಥದ ಬಗ್ಗೆ ಅನ್ನಿಸುವುದೂ ಸಹಜ. ಈ ಕಾದಂಬರಿಯ ಮುಖ್ಯ ಪಾತ್ರವಾದ ಸಾತಪ್ಪನ ವೃತ್ತಿಯೇ ಯಕ್ಷಗಾನದಲ್ಲಿ ವೇಷ ಹಾಕುವುದು. ಎಂದರೆ ಯಕ್ಷಗಾನದಲ್ಲಿ ಹಾಕುವ ವಿಭಿನ್ನ ವೇಷಗಳಿಗೂ ಬದುಕಿನಲ್ಲಿ ಧರಿಸುವ ವಿಭಿನ್ನ ವೇಷಗಳಿಗೂ ಸಮಾನಾಂತರ ಸಂಬಂಧವೊಂದನ್ನು ಕಾಣಲೆತ್ನಿಸಿದ್ದಾರೆ, ಲೇಖಕರು. ನಾನಿಲ್ಲಿ ಉದ್ಧರಿಸಿದ ಮಾತಿನಲ್ಲೂ ಅದು ಅವರ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಈ ಉದ್ದೇಶಕ್ಕೆಂದೋ ಏನೋ ಸಾತಪ್ಪನ ಬಹುಮುಖ ಬದುಕನ್ನು ತೋರಿಸಲು ಅವನಿಂದ ಹೋಟೆಲಿಡಿಸುತ್ತಾರೆ, ಬಟ್ಟೆ ಹೊಲೆಯಿಸುತ್ತಾರೆ; ಅನೇಕ ಹೆಂಗಸರ ಸಹವಾಸ ಮಾಡಿಸುತ್ತಾರೆ, ಇತ್ಯಾದಿ. ಆದರೆ ಅದಾವುದೂ ಅವನು ಧರಿಸಲೇಬೇಕಾದ ಅನಿವಾರ್ಯ ವೇಷಗಳಾಗಿ ಬರುವುದಿಲ್ಲ. ಹೀಗಾಗಿ ಯಕ್ಷಗಾನದಲ್ಲಿ ಹಾಕುವ ವೇಷಗಳು ಬದುಕಿನ ವೇಷಗಳಿಗೆ ಮುಖಾಮುಖಿಯಾಗದೆ ಪ್ರತ್ಯೇಕ ವಾಗಿಯೇ ಉಳಿದುಬಿಡುತ್ತವೆ. ಹೀಗಾಗಲು ಲೇಖಕನೇ ಆ ಬಗೆಯ ಸಂಬಂಧ ಗಳನ್ನು–ಮುಖಾಮುಖಿಗಳನ್ನು–ವಾಚ್ಯದ ನೆಲೆಯಲ್ಲೇ ಹೇಳಲು ಪ್ರಯತ್ನಿಸಿದ್ದೇ ಕಾರಣವೆಂದು ತೋರುತ್ತದೆ.

ಸಂಕೋಲೆ : ಸುಭಾಷ ಚಿಟಗುಪ್ಪಕರ್

ಈ ಕಾದಂಬರಿಯ ನಾಯಕ ಜಾತಿ ಸಂಕೋಲೆಗಳು ನಿರರ್ಥಕವೆಂಬುದನ್ನು ಸಮರ್ಥಿಸುತ್ತಾನೆ. ಮುಖ್ಯವಾಗಿ ಶ್ರೀರಾಮ ಮಂದಿರಕ್ಕೆ ಹರಿಜನ ರಾಮಿಯನ್ನು ತನ್ನೊಂದಿಗೆ ಕರೆದೊಯ್ಯುವುದರ ಮೂಲಕ, ಮತ್ತು ಹಾಗೆ ಕರೆದೊಯ್ದುದನ್ನು ಸಾರ್ವಜನಿಕವಾಗಿ ಸಮರ್ಥಿಸುವುದರ ಮೂಲಕ.

ಲಿಂಗಾಯತ ಜಾತಿಯ ರಾಮು ಹರಿಜನರ ರಾಮಿಯನ್ನು ಪ್ರೇಮಿಸುತ್ತಾನೆ. ಅವಳನ್ನು ಅವನು ಪ್ರೇಮಿಸುವುದು ಕಪಟವಲ್ಲವೆಂಬುದರ ಸಮರ್ಥನೆಗೆ ಶ್ರೀರಾಮ ಗುಡಿಗೆ ಶ್ರೀರಾಮಮೂರ್ತಿಯೆದುರು ಪ್ರಮಾಣ ಮಾಡಲು ಕರೆದೊಯ್ಯುತ್ತಾನೆ. ಊರ ದೇವಾಲಯ ಪ್ರವೇಶವನ್ನೂ, ಅವರಿಬ್ಬರ ಸಂಬಂಧವನ್ನೂ ಸಾರ್ವಜನಿಕ ವಾಗಿ ವಿರೋಧಿಸಿದ ಪಂಚಾಯಿತರು ರಾಮುನ ತಂದೆಗೆ ದಂಡ ಮತ್ತು ರಾಮಿಯ ತಂದೆಗೆ ಊರು ಬಿಡುವ ಶಿಕ್ಷೆ ವಿಧಿಸುತ್ತಾರೆ. ಆದರೆ ಕಿಡಿಗೇಡಿತನದ ಫಲವಾಗಿ ರಾಮಿ, ರಾಮು, ಚೆಲುವ ಉರಿಯುವ ಮನೆಯಲ್ಲೇ ಆಹುತಿಯಾಗುತ್ತಾರೆ.

ಸಾಮಾಜಿಕ ಬದಲಾವಣೆಯ ಆಶಯವುಳ್ಳ ಈ ಕಾದಂಬರಿಯಲ್ಲಿ ಮುಖ್ಯ ಘಟನೆಗಳ ಕಡೆಗೆ, ಅದರಲ್ಲೂ ಆ ಕತೆಯನ್ನು ದುರಂತವಾಗಿಸುವ ಕಡೆಗಿರುವ ಗಮನ, ಬೇರೆ ವಿವರಗಳಿಗೆ ಸಂಬಂಧಿಸಿದಂತೆ ಇಲ್ಲ. ಅಲ್ಲದೆ ರಾಮುವಿನ ವೈಚಾರಿಕತೆಗೆ ಶಕ್ತ ಹಿನ್ನೆಲೆ ನಿರ್ಮಿತವಾಗಿಲ್ಲ. ಒಂದು ಬಗೆಯ ಸಿದ್ಧ ವೈಚಾರಿಕನಂತೆ, ಎಲ್ಲವನ್ನೂ

ಕುರಿತು ಯೋಚಿಸಿ ತೀರ್ಮಾನಿಸಿದವನಂತೆ ಕಾಣುತ್ತಾನೆ. ಹೀಗಾಗಿ ಅವನಿಗೆ ಯಾವುದರಲ್ಲೂ ತಳಮಳವಿಲ್ಲ; ಆತಂಕವಿಲ್ಲ. ಒಂದು ರೀತಿಯಲ್ಲಿ ರಾಮು ಬಯಸಿದ ರಾಮಿಯೇ ಅವನ ವೈಚಾರಿಕತೆಯ ಸ್ಫೂರ್ತಿಕೇಂದ್ರ. ಆದರೆ ಸ್ವಾರ್ಥ ಮೂಲವಾದ ಪ್ರಯತ್ನಗಳು ಇಲ್ಲಿ ಸಮಯಸಾಧಕತನ ಅಥವಾ ಪಲಾಯನವಾದಿಯಾಗಿ ಮುಗಿಯು ವುದಿಲ್ಲವೆಂಬುದು ಸಮಾಧಾನದ ಸಂಗತಿ.

ಕಾದಂಬರಿಯಲ್ಲಿ ಅಲ್ಪ ಪ್ರಾಣಗಳನ್ನು ಮಹಾಪ್ರಾಣಗಳಾಗಿ; ದೀರ್ಘಗಳನ್ನು ಹ್ರಸ್ವಗಳಾಗಿ; ಹ್ರಸ್ವಗಳನ್ನು ದೀರ್ಘಗಳಾಗಿ ಮಾಡಿ ಲೇಖಕರು ಒಂದು ರೀತಿಯ ಮನರಂಜನೆಯನ್ನು ಒದಗಿಸಿರುತ್ತಾರೆ.

ಮೋಹಿತ : ಡಿ. ಆರ್. ಬಾಲು

ಸಣ್ಣ ಕತೆಗಳನ್ನು ಬರೆಯುತ್ತಿದ್ದ ಬಾಲು ಅವರು ಈ ಮೊದಲ ಕಾದಂಬರಿಯ ಮೂಲಕ ಕಾದಂಬರಿಕಾರರು. ಈ ಕಾದಂಬರಿಯ ವಸ್ತು ವಾಸ್ತವವಾಗಿ ಒಂದು ಸಣ್ಣ ಕತೆಗೆ ತಕ್ಕುದಾಗಿದ್ದು, ಅದು ಒಂದು ಕಾದಂಬರಿಯಾಗಿ ಬೆಳೆದಂತೆ ತೋರುತ್ತದೆ. ಇದಕ್ಕೆ ಕಾರಣ ಬಹುಶಃ ಅವರು ಸಣ್ಣ ಕತೆಗಳಲ್ಲಿ ಕೆಲಸ ಮಾಡಿದುದೇ ಇರಬೇಕು ಅನ್ನಿಸುತ್ತದೆ.

ಹರೆಯದ ಕಾಲೇಜು ಯುವಕನೊಬ್ಬನ ಗುಪ್ತಪ್ರೇಮ (ಅದೂ ಒಬ್ಬ ವಿವಾಹಿತಳೊಂದಿಗೆ), ಆ ಸಂಬಂಧದ ಕಲ್ಪನೆಗಳು, ಹುಚ್ಚುತನದ ಮನೋನೆಲೆಗಳನ್ನು ಹಿಡಿಯುವ ಪ್ರಯತ್ನ ಈ ಕಾದಂಬರಿಯದು. ಈ ಹಿನ್ನಲೆಯಲ್ಲಿ ಯುವ ಮನಸ್ಸಿನ ಮೇಲೆ ಸಿನಿಮಾ, ಸಿನಿಮಾ ಪತ್ರಿಕೆಗಳು ಒತ್ತುವ ಭ್ರಾಮಕ ಲೋಕದ ಕನಸುಗಳು, ಅದರ ದೆಸೆಯಿಂದಾಗುವ ನೇತ್ಯಾತ್ಮಕವಾದ ಪರಿಣಾಮಗಳು ಇತ್ಯಾದಿ ಯನ್ನು ಕುರಿತಂತೆ ಕಾದಂಬರಿ ನೀಡುವ ವಿವರಗಳು ಗಮನಾರ್ಹವಾಗಿವೆ. ಇಲ್ಲಿನ ಮುಖ್ಯ ಪಾತ್ರವಾದ ಚಂದ್ರುವಿನ ಕನಸುಣಿತನ, ಕಂಡಕಂಡ ಹೆಣ್ಣುಗಳನ್ನೆಲ್ಲ ತನ್ನ ಮನೋ ಲೋಕದಲ್ಲಿ ಪ್ರೇಯಸಿಯರನ್ನಾಗಿ ಮಾಡುತ್ತ ವಾಸ್ತವದಲ್ಲಿ ಹತಾಶ ನಾಗುವುದು ಇತ್ಯಾದಿಗಳು ಆರೋಗ್ಯಹೀನ ಯುವ ಮನಸ್ಸಿನ ಸ್ಥಿತಿಯೊಂದನ್ನು ನಿರ್ದೇಶಿಸುತ್ತವೆ. ಈ ಹಿನ್ನಲೆಯಲ್ಲಿ ಚಂದ್ರುವಿನ ಮನೋನೆಲೆಯ ಸೂಕ್ಷ್ಮಗಳನ್ನು ಕುಶಲತೆಯಿಂದ ಬಿಡಿಸಲಾಗಿದೆ. ಇದೆಲ್ಲದರ ಮಧ್ಯೆ ಅನಗತ್ಯವಾಗಿ ಕಥಾನಕ ವಿಸ್ತೃತವಾಯಿತೆನ್ನಿಸಿದರೆ, ಅದು ಕಾದಂಬರಿಯೊಂದಕ್ಕೆ ಕತೆಗೆ ತಕ್ಕ ವಸ್ತುವನ್ನು ಆರಿಸಿಕೊಂಡುದರ ಫಲವೆನ್ನಬಹುದು.

ಕೃಷ್ಣ ಕಾಂತ : ರಾ. ಸು. ಮಣಿ

ಒಂದು ಸಾಮಾನ್ಯದರ್ಜೆಯ ಕಾದಂಬರಿ. ಅತಿ ಎನ್ನಬಹುದಾದ ಪ್ರೀತಿಯ ವಲಯದಿಂದ ರೂಪಿತವಾಗಬಹುದಾದ ಬಾಲ್ಯ ಮತ್ತು ಅದರ ಪರಿಣಾಮವನ್ನು

ಹೇಳುವ ಪ್ರಯತ್ನವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಕಾದಂಬರಿಯ ಪ್ರಾರಂಭದಲ್ಲಿ, ನಿರೂಪಕ ಇದನ್ನೊಂದು ಆತ್ಮಕಥೆಯೆಂದು ಕರೆದುಕೊಂಡು ತನ್ನ ಬಾಲ್ಯದಿಂದ ಪ್ರೌಢಾವಸ್ಥೆಯವರೆಗಿನ ವಿವರಗಳನ್ನು ಹೇಳುತ್ತಾ ಹೋಗುತ್ತಾನೆ. ನಿರೂಪಣೆ ಅತ್ಯಂತ ಜಾಳುಜಾಳಾಗಿದ್ದು ಅನೇಕ ವಿವರಗಳು ಮತ್ತೆ ಮತ್ತೆ ಪುನರಾವರ್ತಿತವಾಗುತ್ತವೆ. [ಉದಾ : ಪು. 6 ಮತ್ತು 28] ಇದು ಲೇಖಕರ ಅವಜ್ಞತೆಯ ಫಲವೋ ಅಥವಾ ಹಿಡಿತ ಸಾಧಿಸುವುದರಲ್ಲಿ ಸೋತದ್ದರ ಪರಿಣಾಮವೋ ಆಗಿರಬೇಕು.

ಅನಗತ್ಯವಾಗಿ ಬರುವ ಶ್ಲೋಕಗಳು, ಕಾವ್ಯಭಾಗಗಳ ಉದ್ಧರಣೆಗಳು ಮತ್ತು ಅವನ್ನು ಕುರಿತ ವ್ಯಾಖ್ಯಾನಗಳು ತೀರಾ ಬಾಲಿಶವೆಂಬಂತಿವೆ.

ಗುಂಗೇರು ಕಣಿವೆ : ಬಸವಯ್ಯ ಎಸ್. ತಲ್ವಾಡಿ

ಸೋಲಿಗ ಜನಾಂಗದ ಬದುಕಿನ ವಿವರಗಳನ್ನೊಳಗೊಂಡ ಈ ಕಾದಂಬರಿ ಯಲ್ಲಿ ಕಥೆಗೆ ಅಷ್ಟೊಂದು ಪ್ರಾಧಾನ್ಯತೆಯಿದ್ದಂತಿಲ್ಲ. ಸೋಲಿಗ ಜನಾಂಗದ ನಂಬಿಕೆಗಳು, ಆಚರಣೆಗಳು ಬದುಕಿನ ರೀತಿನೀತಿಗಳು, ವೈವಾಹಿಕ ಸಂಬಂಧಗಳು– ಇಂಥ ಹಲವು ಸಂಗತಿಗಳನ್ನು ಹೇಳಲು ಇಲ್ಲಿನ ಕಥೆ ನೆಪಮಾತ್ರವಾಗಿದೆ. ಮುಖ್ಯ ವಾಗಿ ಪಾಲಿ-ಜಡೆಯರ ಕೌಟುಂಬಿಕ ವಿವರಗಳನ್ನು ಕೊಡುತ್ತಾ ಕಾದಂಬರಿ ಮುಂದು ವರಿಯುತ್ತದೆಯಾದರೂ, ಮಧ್ಯೆಮಧ್ಯೆ ಹಲವಾರು ವಿವರಗಳು ಆ ಕತೆಯ ಗಮನ ವನ್ನು ಅತ್ತಿತ್ತ ಹರಿಸಿಬಿಡುತ್ತವೆ. ಪಾಲಿಯ ಗಂಡ ಜಡೆಯ ತನ್ನ ಅತ್ತಿಗೆಯನ್ನು ಬಹುಕಾಲದಿಂದ ಬಯಸಿ, ಅದು ಸಾಧ್ಯವಾದ ಮರುಕ್ಷಣವೇ ಕೊಲೆಯಾಗಿ ಹೋಗುವ ಘಟನೆಯೊಂದಿಗೆ ಕಾದಂಬರಿ ಮುಗಿಯುತ್ತದೆ. ಈ ಘಟನೆಯನ್ನೇ ಗಮನದಲ್ಲಿರಿಸಿಕೊಂಡು ಹೇಳುವುದಾದರೂ ಕಾದಂಬರಿಗೆ ಕಥನದ ಮುಂದುವರಿಕೆ ಯೊಂದೇ ಮುಖ್ಯವಾದ ಉದ್ದೇಶವಿದ್ದಂತಿಲ್ಲ ; ಬದಲಾಗಿ ಸೋಲಿಗ ಜನಾಂಗದ ಬದುಕಿನ ವಿವರಗಳು ಎಂಬುದು ಸ್ಪಷ್ಟ. ಹೀಗಿದ್ದೂ ವಿವರಗಳಲ್ಲಿ ಸಮೃದ್ಧತೆಯನ್ನು ಇಲ್ಲಿ ಕಾಣಲಾಗದು.

ಸೋಲಿಗರ ಬದುಕಿನಷ್ಟೇ ವೈಶಿಷ್ಟ್ಯತೆಯಿಂದ ಕೂಡಿದ ಅವರ ಉಪಭಾಷೆಯ ಲಕ್ಷಣಗಳನ್ನು ಲೇಖಕರು ಸಂಭಾಷಣೆಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ.

ಬ್ಲೂಬೇಬಿ : ಎಸ್. ವಿ. ಸೋಮಣ್ಣವರ

ಒಂದು ಸಾಧಾರಣವಾದ ಕಾದಂಬರಿ. ತೋರಿಕೆಗೆ ಪ್ರೇಮಕಥೆಯಂತೆ ಕಾಣು ತ್ತದೆಯಾದರೂ ಹಳ್ಳಿಯೊಂದರ ಎರಡು ಮತೀಯ ಗುಂಪಿನ ನಡುವಣ ವೈಮನಸ್ಯದ ವಿವರಗಳಿಗೆ ಪ್ರೇಮವೇ ಮೊದಲಾದ ಇನ್ನಿತರ ವಿವರಗಳನ್ನು ಸೇರಿಸಿ ಹಾಕಿದ

ತೇಪೆಯಾಗಿದೆ. ಆ ಇಬ್ಬರು ಪ್ರೇಮಿಗಳೂ ಈ ಎರಡು ಗುಂಪುಗಳಿಗೆ ಸೇರಿದವರು, ಜೊತೆಗೆ ಬೇರೆಬೇರೆ ಜಾತಿಯವರು. ಇದರಿಂದ ಲೇಖಕರು ಈ ಕಾದಂಬರಿಯೊಳಗೆ ಜಾತಿ ಬಂಧನಗಳನ್ನು ಮೀರಿದ ಪ್ರೇಮದ ಕುರಿತೂ ಹೇಳುತ್ತಾರೆ.

ಒಂದಕ್ಕೊಂದು ಸಂಬಂಧವಿಲ್ಲದ ಘಟನೆಗಳು. ಕಥಾ ಬೆಳವಣಿಗೆಗೆ ಒಂದು ನಿರ್ದಿಷ್ಟ ಗುರಿಯಿಲ್ಲದಿರುವುದು, ಯಾವುದೇ ಪಾತ್ರಕ್ಕೆ ದಕ್ಕದ ಗಟ್ಟಿತನ-ಇಂಥೆಲ್ಲದರ ಪರಿಣಾಮವಾಗಿ ಒಂದು ಕಾದಂಬರಿಗಿರಲೇಬೇಕಾದ ಅತ್ಯಂತ ಪ್ರಾಥಮಿಕ ಗುಣ ದಿಂದಲೂ ಈ ಕೃತಿ ವಂಚಿತವಾಗಿದೆ. ಕಾದಂಬರಿಯ ಮುನ್ನುಡಿ ರೂಪದಲ್ಲಿರುವ ನಿವೇದನೆಯಲ್ಲಿ ಲೇಖಕರುಬರೆದ ಕೆಲವು ವಿವರಗಳನ್ನೇ ಒಂದು ಕಾದಂಬರಿಯಾಗಿಸುವ ವ್ಯರ್ಥ ಪ್ರಯತ್ನ ಮಾತ್ರ ಇದಾಗಿದೆ.

ತಾಂಡವ ನೃತ್ಯ : ಆರ್. ಬಿ. ಮಾಧವರಾವ್

ತನ್ನ ಅಕ್ಕನ ಸ್ಥಾನವನ್ನು ತುಂಬಲು ಎರಡನೆಯ ಹೆಂಡತಿಯಾಗಿ ಬರುವ ಮೀನ ತನ್ನ ಗಂಡ ಮೂರ್ತಿಯಿಂದ ಯಾವುದೇ ಬಗೆಯ ಕಾಮತೃಪ್ತಿ ಪಡೆಯುವಲ್ಲಿ ವಿಫಲಳಾಗುತ್ತಾಳೆ. ಅದನ್ನು ಪಡೆಯುವ ಹಂಬಲದಲ್ಲಿ ಇತರರೊಂದಿಗೆ ಸಂಪರ್ಕ ವನ್ನು ಬಯಸುತ್ತಾಳೆ. ಆದರೆ 'ಸುಗುಣ' ಳೆಂಬ ನರ್ಸ್‌ಳ ಗೆಳೆತನದಿಂದ ಅವಳು ತನ್ನ ವ್ಯಕ್ತಿತ್ವದ ಅದಃಪತನವನ್ನು ಮಾಡಿಕೊಳ್ಳುತ್ತಾಳೆ. ಜೀವನವಿಡೀ ಒಂದು ಬಗೆಯ ವೇಶ್ಯಾವೃತ್ತಿಗೆ ಬಲಿಯಾಗುತ್ತಾಳೆ. ಈ ಸುಗುಣಳದೊಂದು ಕುತರ್ಕ : ತನಗೆ ಈ ಸಮಾಜದಿಂದ ಅನ್ಯಾಯವಾಗಿದೆ ; ಅದು ಇತರರಿಗೂ ಆಗಲಿ ಎಂಬುದು.

ಇಷ್ಟು ಕತೆಯನ್ನು ಲೇಖಕರು ಪತ್ರಿಕಾವರದಿಯ (ಕೆಟ್ಟ) ಹಾಗೆ ಓದುಗರಿಗೆ ಒಪ್ಪಿಸುತ್ತಾರೆ. ಕನಿಷ್ಟ ವಾಕ್ಯಗಳನ್ನೂ ಸರಿಯಾಗಿ ಬರೆಯಲಾಗದೆ, ಒಂದು ಕಾದಂಬರಿಯನ್ನು ಬರೆಯುವುದು ಯಾರಿಗೆ ತಾನೆ ಸಾಧ್ಯ.

ನೆಲ ಕಚ್ಚಿದ ನೌಕೆ : ಅಶೋಕ ಬಾಬು

ಅಶೋಕಬಾಬು ಅವರ ಈ ಕಾದಂಬರಿಯಲ್ಲಿ ಸತೀಶಬಾಬುವೆಂಬ ನಾಯಕ ಇದ್ದಾನೆ. ಅವನೊಬ್ಬ ಲೇಖಕ. ಅನಿರೀಕ್ಷಿತವಾಗಿ ತಾರಾ ಎಂಬಾಕೆಯನ್ನು ಭೇಟಿಮಾಡವನು ಅವಳನ್ನು ಪ್ರೇಮಿಸಲು ಪ್ರಾರಂಭಿಸುತ್ತಾನೆ. ಇಷ್ಟೇ ಅನಿರೀಕ್ಷಿತ ವಾಗಿ ಭೇಟಿಯಾಗಿ ತನ್ನ ಸೋದರಿ ಎನ್ನಿಸಿದ್ದ ಚಿತ್ರನಟಿ ಶ್ರೀದೇವಿಗೆ ತನ್ನ ಪ್ರೇಮದ ವಿಷಯ ತಿಳಿಸಲು ಹೋಗುತ್ತಿದ್ದಾಗ ಅನಿರೀಕ್ಷಿತವಾಗಿ, ವಿನಾಕಾರಣ ಪೋಲೀಸರ ಕೈಗೆ ಸಿಕ್ಕು ಶಿಕ್ಷೆ–ಈ ಮಧ್ಯೆ ತಾರಾಳ ಆತ್ಮಹತ್ಯೆ, ನಾಯಕ ಹುಚ್ಚನಾಗುವುದು–ಹೀಗೆ ಹಲವು ಅನಿರೀಕ್ಷಿತಗಳ ಕಥೆಯೊಂದನ್ನು ಲೇಖಕರು ಕಾದಂಬರಿಯಾಗಿಸಿ ಬಿಟ್ಟಿದ್ದಾರೆ. ತನಗನ್ನಿಸಿದ್ದನ್ನೆಲ್ಲ ಅನ್ನಿಸಿದಹಾಗೆ ಬರೆದರೆ ಅದೊಂದು ಕಾದಂಬರಿ

ಯಾಗಿಬಿಡುತ್ತೆ ಎಂದು ನಂಬಿದಾಗ ಮಾತ್ರ ಇಂಥ ಕಾದಂಬರಿಗಳು ಹುಟ್ಟಲುಸಾಧ್ಯ. ಈ ಕಾದಂಬರಿಯನ್ನು ಒಂದು ಅಮರ ಪ್ರೇಮದ ಕತೆಯೆಂಬಂತೆ ಬಾಲಿಶವಾಗಿ ಬರೆದಿದ್ದಾರೆ. ಇಷ್ಟು ಹೊರತು ಬೇರಾವ ವಿಶೇಷಗಳೂ ಇಲ್ಲ. ಭಾಷೆಯ ವಿಷಯದಲ್ಲಿ ಹಿಂದಿನ ಕಾದಂಬರಿಗೆ ಹೇಳಿದ ಮಾತುಗಳು ಇದಕ್ಕೂ ಸಲ್ಲುತ್ತವೆ.

ಈ ವರ್ಷ ಪ್ರಕಟವಾದ ಕೆಲವು ಕಾದಂಬರಿಗಳನ್ನು-ಮುಖ್ಯವಾಗಿ ಆರೇಳು ಕೃತಿಗಳನ್ನು-ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ : ಯಾವುದೋ ಒಂದು ತೋಚಿದ ವಸ್ತುವನ್ನು ಕುರಿತು ಬರೆಯುತ್ತಾ ಹೋಗುವುದು. ಸಾಮಾನ್ಯವಾಗಿದೆ. ಆ ವಸ್ತುವಿಗೆ ಕಾದಂಬರಿಯೊಂದರ ಚೌಕಟ್ಟಿನಲ್ಲಿ ಅಗತ್ಯವಾಗಿ ಇರಬೇಕಾದ ಒಪ್ಪ ಓರಣಗಳಾಗಲಿ, ಕಾದಂಬರಿಯನ್ನೊಂದು ಕಲಾಕೃತಿಯೆಂದು ಬಗೆದ ಸೃಜನಶೀಲ ತುಡಿತಗಳಾಗಲಿ ಆ ಕಾದಂಬರಿಗಳ ಹಿನ್ನೆಲೆಗೆ ಇದ್ದಂತಿಲ್ಲ. ಅನ್ನಿಸಿದ್ದನ್ನು ಹೇಳುವುದೇ ಮುಖ್ಯವಾಗುವುದಾದರೆ ಅದು ಪತ್ರಿಕಾ ವರದಿಯಾಗುವುದೇ ಒಳಿತು ಮತ್ತೊಂದು ಮುಖ್ಯ ಸಂಗತಿ. ಈ ಕಾದಂಬರಿಗಳ ಭಾಷೆಗೆ ಸಂಬಂಧಿಸಿದ್ದು. ಸಾಹಿತ್ಯ ಕೃತಿಯೊಂದರ ಮಾಧ್ಯಮವೇ ಭಾಷೆಯಾಗಿದ್ದು ಅದನ್ನು ನಾವು ಪರಿಭಾವಿಸುವುದೇ ಅದರ ಭಾಷೆಯ ಮೂಲಕವಾದುದರಿಂದ ಭಾಷಾ ಬಳಕೆಯ ವಿಷಯದಲ್ಲಿ ಲೇಖಕ ಅತ್ಯಂತ ಎಚ್ಚರಿಕೆಯಿಂದಿರಬೇಕಾಗುತ್ತದೆ. ವಿಪರ್ಯಾಸವೆಂದರೆ ಪದಪ್ರಯೋಗದಲ್ಲಿ, ವಾಕ್ಯರಚನೆಯಲ್ಲಿ ಕೂಡ ಅಸಂಖ್ಯ ಗೊಂದಲಗಳು ಈ ಕಾದಂಬರಿಗಳಲ್ಲಿ ಉಳಿದು ಬಂದಿರುವುದು. ಮುದ್ರಣ ದೋಷಗಳ ಬಗ್ಗೆಯಂತೂ ಹೇಳುವುದೇ ಬೇಡ. ಇಂಥದೆಲ್ಲಕ್ಕೂ ಅಚ್ಚಿನ ದೋಷಗಳೆಂದು ಹೇಳಿ ರಿಯಾಯಿತಿಯ ಮೊರೆ ಹೋಗಬೇಕೆ ?

—ಎಸ್. ಎಸ್. ರೇಣುಕಾರಾಧ್ಯ

ಎಂ. ರಾಮಕೃಷ್ಣ ಅವರ ಅಂತರಗಂಗೆಯು ಇಂದಿನ ಹಲವು ಸಾಮಾಜಿಕ ಸಮಸ್ಯೆಗಳ ಬಗೆಗೆ ಬೆಳಕು ಚೆಲ್ಲುವ 772 ಪುಟಗಳ ಬೃಹತ್ ಕಾದಂಬರಿ. ವೀರಾಪುರ ಎಂಬ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿನ ಜನರ ಸಂಕೀರ್ಣಮಯ ಬದುಕಿನ ವಾಸ್ತವ ಚಿತ್ರವನ್ನು ಕಾದಂಬರಿಕಾರರು ಕೊಟ್ಟಿರುವರು. ಗ್ರಾಮೀಣ ಬದುಕಿನಲ್ಲಿ ಕಂಡುಬರುವ ಹೊಲಸು ರಾಜಕೀಯ, ಜಾತೀಯತೆ, ಅಜ್ಞಾನ, ಸಂಪ್ರದಾಯ ಪ್ರಿಯತೆ, ಸಾಮಾಜಿಕ ಜವಾಬ್ದಾರಿಯ ಬಗೆಗೆ ಸಡಿಲ ಮನೋಭಾವ, ಸಂಕುಚಿತ ಬುದ್ಧಿ, ತಿಳಿಗೇಡಿತನ, ಆದರ್ಶರಹಿತ ಬಾಳ್ವೆ—ಇವೆಲ್ಲವನ್ನೂ ಕಾದಂಬರಿಯಲ್ಲಿ ಹೇಳುವ ಪ್ರಯತ್ನ ನಡೆದಿದೆ. ವೀರಾಪುರಕ್ಕೆ ಕಸ್ತೂರಿಬಾ ಸೇವಾಕೇಂದ್ರದ ಮಹಿಳಾ ಕಾರ್ಯಕರ್ತೆಯಾಗಿ ಪದ್ಮಿನಿ ಬರುವುದರಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಊರಿನ ಸಮಸ್ತ ಚಟುವಟಿಕೆಗಳಿಗೆ ಒಂದಲ್ಲಾ ಒಂದು ವಿಧದಲ್ಲಿ ಕೇಂದ್ರವು ಸಂಬಂಧಿಸಿರುವುದರಿಂದ ಊರಿನ ಎಲ್ಲ ಸಮಸ್ಯೆಗಳ ಬೃಹತ್ ರೂಪವನ್ನು ಕೇಂದ್ರದ

ಮೂಲಕ ಕಾದಂಬರಿಕಾರರು ಕಾಣಿಸಹೊರಟಿರುವರು. ವಿದ್ಯಾವತಿಯೂ, ಸ್ವತಂತ್ರವಾಗಿ ವಿಚಾರ ಮಾಡಬಲ್ಲವಳೂ, ವೈಜ್ಞಾನಿಕ ಮನೋಭಾವದವಳೂ ಆದ ಪದ್ಮಿನಿ ಬೇರೊಬ್ಬರ ಸಹಾಯವಿಲ್ಲದೆ ಆ ಗ್ರಾಮೀಣ ಜೀವನದಲ್ಲಿ ಬದುಕಬಲ್ಲೆನೆಂಬುದನ್ನು ತೋರಿಸಿಕೊಟ್ಟಾಗ ಎಲ್ಲ ಸಮಸ್ಯೆಗಳು ತೆಗೆದುಕೊಳ್ಳತೊಡಗುತ್ತವೆ. ಕೇಂದ್ರದ ಕಾರ್ಯಕರ್ತನಾದ ರಂಗಪ್ಪನನ್ನು ಎದುರು ಹಾಕಿಕೊಳ್ಳುವುದರ ಮೂಲಕ ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಳ್ಳುವಳು. ಗ್ರಾಮೀಣ ಬದುಕಿನ ವೈರುಧ್ಯಗಳನ್ನು ಕಂಡು ತನ್ನದೇ ನೆಲೆಯಲ್ಲಿ ವಿಶ್ಲೇಷಿಸಿ ಅವುಗಳಿಗೆ ಪರಿಹಾರ ಕಾಣಿಸುವುದಕ್ಕೆ ಹೊರಟಾಗ, ಪಟ್ಟಭದ್ರರ ವಿರೋಧವನ್ನು ಅವಳು ಎದುರಿಸಬೇಕಾಯಿತು. ಪ್ರತಿಯೊಂದು ಘಟ್ಟದಲ್ಲೂ ಅವಳು ಮೂಢನಂಬಿಕೆ, ಅಜ್ಞಾನ ಹಾಗೂ ಸಂಪ್ರದಾಯಪ್ರಿಯತೆಯಿಂದ ಕೂಡಿದ ಜನರ ವಿರೋಧವನ್ನು ಎದುರಿಸಿ ನಿಲ್ಲಬೇಕಾಯಿತು. ತಾನು ನಂಬಿನಿಂತ ಆದರ್ಶದಿಂದ ಹಿಂದೆ ಸರಿಯಲು ಒಪ್ಪದ, ಪಟ್ಟಭದ್ರ ಹಿತಾಸಕ್ತರ ಜೊತೆ ಎಂದಿಗೂ ರಾಜಿ ಮಾಡಿಕೊಳ್ಳದ ಪದ್ಮಿನಿ ಉಸಿರುಗಟ್ಟಿಸುವ ಆ ಗ್ರಾಮೀಣ ಬದುಕಿನಲ್ಲೂ ಪರಿವರ್ತನೆ ಸಾಧ್ಯವೆಂಬ ಆಶಾಭಾವನೆಯಿಂದಿರುವಳು. ವೀರಾಪುರದವನೇ ಆದ ಸುರೇಂದ್ರ ತನ್ನ ಹುಟ್ಟೂರನ್ನು ಆದರ್ಶ ಗ್ರಾಮವನ್ನಾಗಿ ಮಾಡಬೇಕೆಂದು ಶಾಂತಿನಿಕೇತನಕ್ಕೆ ಹೋಗಿ ಬಂದು ತನ್ನ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ಹೊರಟಾಗ ರಾಜಕೀಯ ಎಲ್ಲೆಡೆ ಕಾಣಿಸಿಕೊಂಡು ಆದರಿಂದ ಬೇಸರಗೊಂಡ ಅವನು ಊರ ಹೊರಗಿನ ತೆಂಗಿನ ತೋಟದಲ್ಲಿ ನೆಲಸಿ ಬೇಸಾಯಗಾರನಾದನು. ಸುರೇಂದ್ರನ ಪರಿಚಯ ಪದ್ಮಿನಿಗೆ ವೀರಾಪುರಕ್ಕೆ ಬರುವ ಮೊದಲೇ ಇದ್ದುದರಿಂದ. ಅವನ ಮನೆಗೆ ಹೋಗಿಬರುವುದರಿಂದ ಅವಳು ಅಲ್ಪ ಸ್ವಲ್ಪ ನೆಮ್ಮದಿ ಪಡೆಯುತ್ತಿದ್ದಳು. ಸುರೇಂದ್ರನ ಮನೆಯಲ್ಲಿ ನಡೆಯುತ್ತಿದ್ದ ಕ್ರಾಂತಿ ಮಂಡಲದ ಚರ್ಚೆಯಲ್ಲಿ ಆದರ್ಶವಾದಿ ದೇವಯ್ಯನ ಪರಿಚಯ ಪದ್ಮಿನಿಗೆ ಆಯಿತು. ದೇವಯ್ಯ ಅವಳ ಆದರ್ಶಗಳಿಗೆ ಮಾರುಹೋಗಿ, ಅಂತರಂಗದಲ್ಲಿ ಅವಳನ್ನು ಗುಪ್ತವಾಗಿ ಪ್ರೀತಿಸತೊಡಗಿದ. ಪದ್ಮಿನಿಯನ್ನು ತಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಲು ಸುರೇಂದ್ರನ ತಾಯಿ ಸುಂದರಮ್ಮ ಆಸೆಪಟ್ಟಿದ್ದರು. ತೋಟದ ಮನೆಗೆ ಪದ್ಮಿನಿ ಹೋಗಿಬರುವುದನ್ನು ನೋಡಿ ಸಹಿಸದ ಅವಳ ವಿರೋಧಿಗಳು ಅವಳ ಕೊಲೆಯ ಸಂಚುಮಾಡಿ ಅವಳನ್ನು ಕೊಂದರು ಪದ್ಮಿನಿಯ ಸಾವನ್ನು ಸಹಜವಾಗಿ ಸ್ವೀಕರಿಸಲಾರದ ದೇವಯ್ಯ ಆ ದುಃಖ ತಡೆಯಲಾರದೆ ವಿಷ ಕುಡಿದು ಪ್ರಾಣಬಿಡುವನು. ದೇವಯ್ಯನ ಸಾವಿನೊಂದಿಗೆ ಕಾದಂಬರಿ ಮುಗಿಯುತ್ತದೆ.

ಗ್ರಾಮೀಣ ಬದುಕಿನ ವಿರಾಡ್ರೂಪ ಈ ಕಾದಂಬರಿಯ ಮೂಲಕ ನಮಗಾಗುತ್ತದೆ. ವೀರಾಪುರ ಭಾರತದ ಎಲ್ಲ ಹಳ್ಳಿಗಳ ಹೊಲಸು ರಾಜಕೀಯದ ಪ್ರತಿನಿಧಿ. ಇಲ್ಲಿ ನಡೆದದ್ದು ಎಲ್ಲಾ ಕಡೆ ನಡೆದಿದೆ, ನಡೆಯುತ್ತಿದೆ. ಆದರ್ಶಕ್ಕಾಗಿ ಹೋರಾಡಿದ

ಹೆಣ್ಣೊಬ್ಬಳ ಬದುಕು ಈ ಕಾದಂಬರಿಯಲ್ಲಿ ನೆಪಮಾತ್ರ. ಪದ್ಮಿನಿಯ ಆದರ್ಶಕ್ಕಾದ ದುರಂತ, ದೇಶದ ದುರಂತ. ಕಾದಂಬರಿ ಕರತಲ ರಂಗಭೂಮಿ ಎನ್ನುವ ಮಾತಿನಲ್ಲಿ ಸತ್ಯಾಂಶವಿದೆ. ಈ ಕಾದಂಬರಿಯಲ್ಲಿ ಬರುವ ಅಸಂಖ್ಯ ಪಾತ್ರಗಳ ವೈವಿಧ್ಯಮಯ ವ್ಯಕ್ತಿತ್ವದ ಚಿತ್ರಣ ಕಾದಂಬರಿಕಾರರಿಗೊಂದು ಸವಾಲಾಗಿದೆ. ಪದ್ಮಿನಿಗೆ ಗ್ರಾಮೀಣ ಬದುಕಿನ ಒಳಮರ್ಮಗಳ ಗ್ರಹಿಕೆಗೆ ಚಲುವಕ್ಕ ಕೊಂಡಿಯಾಗಿದ್ದಳು. ಅವಳ ಮೂಲಕವೇ ನಾವು ಜನರನ್ನು, ಅವರ ಮನಸ್ಸನ್ನು ತಿಳಿಯುವುದು. ಅವಳಷ್ಟು ಸೂಕ್ಷ್ಮವಾಗಿ ಜನಮನವನ್ನು ಅರಿತವರು ವಿರಳ. ಅವಳು ವೇದಾಂತಿ, ಸ್ಥಿತಪ್ರಜ್ಞೆ, ಮಾನವೀಯತೆಯನ್ನು ಮರೆಯದ ಒಳ್ಳೆಯ ಜೀವ. ಕಾದಂಬರಿಕಾರರು ಚಲುವಕ್ಕನ ಪಾತ್ರಚಿತ್ರಣದಲ್ಲಿ ತಮ್ಮೆಲ್ಲ ಪ್ರತಿಭೆಯನ್ನು ಮೆರೆದಿರುವರು. ಅದೊಂದು ಮರೆಯಲಾಗದ ಪಾತ್ರ. ಕಾದಂಬರಿಯ ಕಥಾವಸ್ತು ತೀರಾ ದೊಡ್ಡದಲ್ಲ. ಕಾದಂಬರಿಕಾರರ ಉದ್ದೇಶ ಕಥೆ ಹೇಳುವುದಲ್ಲ, ಗ್ರಾಮೀಣ ಬದುಕನ್ನು ಅದು ಇರುವಂತೆಯೇ ಚಿತ್ರಿಸುವುದು. ಈ ಉದ್ದೇಶದಿಂದಾಗಿಯೋ ಏನೋ ಪಾತ್ರಗಳು, ಘಟನೆಗಳು ಕಾಂದಬರಿಯ ವಸ್ತುವಿನೊಡನೆ ಸಾವಯವ ಸಂಬಂಧ ಪಡೆಯದೆ ತನಿಯಾಗಿ ಪುಟ್ಟ ಪುಟ್ಟ ಕಥೆಗಳಾಗಿ ನಿಲ್ಲುತ್ತವೆ. ಕಾದಂಬರಿಯಲ್ಲಿನ ಈ ದೋಷ ನವಿರಾದ ನಿರೂಪಣೆಯಿಂದ, ಗ್ರಾಮೀಣ ಭಾಷೆಯ ಸೊಗಡಿನಿಂದ ಮರೆಯಾಗಿ ಹೋಗುತ್ತದೆ.

ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ'ಯು ಸ್ವಾತಂತ್ರ್ಯ ನಂತರ ತಮ್ಮ ದೇಸಗತಿಯ ಮೇಲಣ ಹಕ್ಕನ್ನು ತಮ್ಮ ಪೊಳ್ಳು ಪ್ರತಿಷ್ಠೆ–ಸ್ವಾಭಿಮಾನ, ದರ್ಪ, ಅಹಂಕಾರ ಮಿಶ್ರವಾದ ಔದಾರ್ಯ, ಎಲ್ಲೆಮೀರಿದ ವಿಲಾಸೀ ಜೀವನಗಳಿಂದ ಸರ್ವಸ್ವವನ್ನೂ ಕಳೆದುಕೊಂಡು ಶ್ರೀಸಾಮಾನ್ಯನ ಬದುಕಿನೊಂದಿಗೆ ತಮ್ಮದನ್ನೂ ಹೊಂದಿಸಿಕೊಳ್ಳಲಾಗದ ವಿಕ್ಷಿಪ್ತ ಮನೋಸ್ಥಿತಿಯಲ್ಲಿ ಬಾಳ್ವೆ ನಡೆಸ ಹೊರಟ ಸಂಸ್ಥಾನವೊಂದರ ಅಧಿಪತಿ ದೇಸಾಯಿಯ ದುರಂತದ ಪರಿಣಾಮಕಾರಿ ಚಿತ್ರವನ್ನು ನೀಡುತ್ತದೆ. ಕಾದಂಬರಿಯ ಕರ್ತೃ ಇಲ್ಲಿ ಸೂತ್ರಧಾರಿಯಾಗಿ ನಿಂತು ನಡೆದ ಘಟನಾವಳಿಗಳ ನಿರೂಪಕರಾಗಿರುವರು. ಓದುಗರಿಗೂ ತಮಗೂ ನೇರವಾದ ಸಂಬಂಧವನ್ನು ಗಟ್ಟಿಗೊಳಿಸಲು ಮಧ್ಯೆ ಮಧ್ಯೆ 'ಪ್ರಿಯ ಪಾಠಕ ಮಹಾಶಯರೇ' ಎಂದು ಸಂಬೋಧಿಸುವರು. ಕಾದಂಬರಿಯಲ್ಲಿ ಪ್ರಮುಖ ಪಾತ್ರವಾದ ಶೀನಿಂಗವ್ವ ದೇಸಾಯಿಯ ಅರಮನೆಯ ಭೂತಕಾಲದ ಇತಿಹಾಸವನ್ನು ವರ್ತಮಾನಕಾಲದಲ್ಲಿ ಹೇಳುವಳು. ಅರಮನೆಯ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ಶೀನಿಂಗವ್ವ ಕಥಾನಾಯಕಿ ಸಿಂಗಾರವ್ವೆಯ ಆಪ್ತ ಗೆಳತಿಯಾಗಿ ದೇಸಾಯಿಯ ಕಳಾಹೀನ ಬದುಕಿನ ದುರಂತ ಕಥೆಯನ್ನು ತನ್ನ ನೆನಪಿನಾಳದಿಂದ ಹೆಕ್ಕಿ ತೆಗೆದು ನಿರೂಪಿಸುವಳು. ಕಾದಂಬರಿಕಾರರು ಶೀನಿಂಗವ್ವಳ ಮೂಲಕ ಕಥೆಯನ್ನು ಹೇಳಿಸುವುದರ ಮೂಲಕ ಕಾದಂಬರಿಗೆ ನೈಜತೆಯ ಸ್ವರೂಪ ಬರುವಂತೆ ಮಾಡಿರುವರು.

ಕಾದಂಬರಿಯುದ್ದಕ್ಕೂ ದೇಸಾಯಿಯ ಪೊಳ್ಳು ಪ್ರತಿಷ್ಠೆಯು ಅವನು ಮಾಡುತ್ತಿದ್ದ ಬಯಲಾಟದ ರಾಜನ ಪಾತ್ರದಷ್ಟೇ ನಾಟಕೀಯವಾದುದು ಧ್ವನಿಪೂರ್ಣ ವ್ಯಂಗ್ಯದಂತಿದೆ. ವೈಭವದಿಂದ ಮೆರೆದ ದೇಸಗತಿಯ ಒಡೆಯ ದೇಸಾಯಿಯ ದುರಂತ ಅವನ ವಿಲಾಸಮಯ ಬದುಕಿನಲ್ಲಿ ಅಡಗಿದೆ. ಸಿಂಗಾರೆವ್ವ ಅರಮನೆಯನ್ನು ಪ್ರವೇಶಿಸಿದಾಗ ಅವನು ರೋಗದ ಮೂಟೆಯಾಗಿದ್ದ, ಪುರುಷತ್ವವನ್ನು ಕಳೆದುಕೊಂಡಿದ್ದ. ಅವನ ವಿಕೃತ ಕಾಮ ನಾಯಕಸಾನಿಯರ ಬೆತ್ತಲೆ ತೊಡೆ ನೋಡ ನೋಡುತ್ತಲೇ ಬೇಹೋಷ್ ಆಗಿ ಅವನು ಕೆಳಗೆ ಬೀಳುವುದರಲ್ಲಿ ವ್ಯಕ್ತಗೊಳ್ಳುತ್ತಿತ್ತು. ಪತ್ನಿ ಸಿಂಗಾರವ್ವೆಯ ಆಶೋತ್ತರಗಳನ್ನು ಪ್ರಕೃತಿದತ್ತವಾದ ದೇಹದ ಕರೆಯನ್ನು ಪೂರೈಸುವಷ್ಟು ವಿವೇಕಿಯಲ್ಲದ ದೇಸಾಯಿ ಸಿಂಗಾರವ್ವೆಯ ಬಾಳಿನ ದುರಂತಕ್ಕೂ ಕಾರಣನಾಗುವುದು ಕಾದಂಬರಿಯ ಜೀವಾಳವಾಗಿದೆ.

ಕಂಬಾರರು ನಮ್ಮ ಶ್ರೇಷ್ಠ ನಾಟಕಕಾರರಾಗಿದ್ದು ಅವರು ಕಾದಂಬರಿಯ ಪಾತ್ರಗಳ ಗುಣಾವಗುಣಗಳನ್ನು, ಅಂತರಂಗದ ಒಳತೋಟಿಯನ್ನು ನಾಟ್ಯೀಕರಿಸುವತ್ತ ವಿಶೇಷ ಒಲವನ್ನು ಪ್ರಕಟಪಡಿಸಿರುವರು. ಈ ಮಾತಿಗೆ ಗೌಡನ ಪಾತ್ರ ಹಾಗೂ ದೇಸಾಯಿಯ ಪಾತ್ರ ಒಳ್ಳೆಯ ಉದಾಹರಣೆಗಳು. ಡಾ॥ ಕಂಬಾರರ ಮನಸ್ಸು ಆರ್ದ್ರವಾಗಿರುವುದು ಸಿಂಗಾರವ್ವೆಯ ಪಾತ್ರದಲ್ಲಿ. ಅವಳ ಎರಡೂ ಮದುವೆಗಳು ತಂದೆಯಾದವನು ತನ್ನ ಸ್ವಾರ್ಥಕ್ಕಾಗಿ ಮಾಡಿದ ಕರುಳಿರಿಯುವ ಸಂಚುಗಳು. ಮೊದಲನೆಯದು ಸತ್ತವನೊಡನೆ ಆದ ವಿವಾಹವಾದರೆ ಎರಡನೆಯದು ಬದುಕಿಯೂ ಸತ್ತವನಂತಿದ್ದವನೊಡನೆ ಆದ ವಿವಾಹ. ಅವು ತನ್ನ ಮಗಳ ಸುಂದರ ಸವಿಗನಸಿಗೆ ತಾನೇ ಗೋರಿ ಕಟ್ಟಿದ ತಂದೆಯ ಪಾಶವೀ ವೃತ್ತಿ. ಗಂಡನ ಷಂಡತನ ಹಾಗೂ ಬಾಳಸಂಗಾತಿಯ ಆಸೆ-ಆಕಾಂಕ್ಷೆಗಳ ಬಗೆಗೆ ದಿವ್ಯ ನಿರ್ಲಕ್ಷ್ಯ ಅವಳ ಒಡಲಲ್ಲಿ ದಳ್ಳುರಿಯನ್ನುಂಟುಮಾಡಿ ಗಂಡನನ್ನು ದ್ವೇಷಿಸುವಂತೆ ಮಾಡಿತು.

ಅರಮನೆಯ ಆಳುಮಗ ಮರ್ಯಾನಿಂದಾದ ಬಸಿರು ಅವಳ ಬದುಕಿನಲ್ಲಿ ನವವಸಂತವನ್ನು ತಂದರೂ, ಹುಟ್ಟಿಸಲಾಗದ ಗಂಡ ತನ್ನನ್ನು ಹಾದರಗಿತ್ತಿ ಎಂದು ಹೀನೈಸಿ ನುಡಿದಾಗ ಅವಳ ಆಕ್ರೋಶ ಬುಗಿಲೆಂದಿತು. ದೇಸಾಯಿ ಅವಳ ಗರ್ಭಕ್ಕೆ ಕಂಟಕನಾಗ ಹೊರಟಾಗ ಅವಳು ಸಿಟ್ಟಿನಿಂದ ಉರಿದುಹೋದಳು. ಗಂಡನ ಬಗೆಗೆ ಇದ್ದ ಗೌರವವೂ ಹೋಗಿ ಅವನೊಂದು ಕ್ರಿಮಿ ಎನ್ನುವಂತೆ ಅದು ಇದು ಎಂದು ಸಂಬೋಧಿಸತೊಡಗಿದಳು. ಗಂಡನ ವರ್ತನೆಯಿಂದ ಅವಳು ಚಿತ್ತ ಸ್ವಾಸ್ಥ್ಯವನ್ನೇ ಕಳೆದುಕೊಂಡಳು. ದೇಸಾಯಿ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡಾಗ ಅವನ ಸಾವಿಗೆ ತಾನೇ ಕಾರಣಳೆಂದು ಸಿಂಗಾರೆವ್ವ ಜೇಲಿಗೂ ಹೋಗುವಳು, ಅಲ್ಲೇ ಮಗನನ್ನು ಹೆತ್ತು ಪ್ರಾಣ ನೀಗುವಳು.

ವಿಲಾಸೀ ಬದುಕನ್ನು ನಡೆಯಿಸಿ ಎಲ್ಲವನ್ನೂ ಕಳೆದುಕೊಂಡ ದೇಸಾಯಿಯ ದುರಂತ ಒಂದು ಬಗೆಯದಾದರೆ, ತಂದೆಯ ದುರಾಶೆಗೆ ಬಲಿಯಾಗಿ ಷಂಡ ದೇಸಾಯಿಯನ್ನು ಕಟ್ಟಿಕೊಂಡು ಹತಾಶೆಯ ಬದುಕಿಗೆ ತಮ್ಮನ್ನು ಒಡ್ಡಿಕೊಂಡು ನರಳಿದ ಸಿಂಗಾರವ್ವೆಯ ದುರಂತ ಇನ್ನೊಂದು ಬಗೆಯದು. ಎರಡನೆಯ ದುರಂತ ಮನ ಮಿಡಿಯುವಂತಹದು. ತನ್ನ ತಾಯಿಯನ್ನು ಹಾಳುಮಾಡಿದ ಗೌಡನ ಮೇಲಿನ ವೈರವನ್ನು ಅವನ ಮಗಳ ಮೇಲೆ ತೀರಿಸಿಕೊಳ್ಳ ಹೊರಟ ಮರ್‍ಯಾ ಕಾದಂಬರಿಯಲ್ಲಿ ಖಳನಾಯಕನಂತೆ ಕಂಡುಬಂದರೂ ಆ ಕಲ್ಲು ಹೃದಯದಲ್ಲೂ ಮಾನವೀಯತೆ ಒಸರುವುದು ಕಾದಂಬರಿಯ ಉದ್ದೇಶಿತ ತಂತ್ರವಾಗಿರುವಂತಿದೆ. ಹುಚ್ಚಯ್ಯನ ಪಾತ್ರ ಅನಗತ್ಯವಾಗಿ ಕಾದಂಬರಿಯಲ್ಲಿ ಪ್ರವೇಶ ಪಡೆದಿದೆ, ಬೆಳೆದಿದೆ. ಅವನ ಅನಿರೀಕ್ಷಿತ ಸಾವು ಮುಂದಿನ ಎಲ್ಲ ಅಹಿತಕರ ಘಟನಾವಳಿಗಳಿಗೆ ಕಾರಣೀಭೂತವಾಗಿದೆ. ಹುಣಿಸೆ ಮೆಳೆಯ ವರ್ಣನೆ ಕಾದಂಬರಿಯಲ್ಲಿ ಕಾವ್ಯಮಯವಾಗಿದೆ. ಅದು ತನ್ನಲ್ಲಿ ಗರ್ಭೀಕರಿಸಿಕೊಂಡ ರುದ್ರಮಯ ದೃಶ್ಯಾವಳಿ ಒಂದು ಕ್ಷಣ ನಮ್ಮನ್ನು ಸ್ತಂಭೀಭೂತರನ್ನಾಗಿ ಮಾಡುತ್ತದೆ. ಕಂಬಾರರ ಸಂಯಮಪೂರ್ಣ ಕಲಾತ್ಮಕ ಶೈಲಿಗೆ ಇದು ಒಳ್ಳೆಯ ನಿದರ್ಶನವಾಗಿದೆ.

ಬರಗೂರು ರಾಮಚಂದ್ರಪ್ಪನವರ 'ಬೆಂಕಿ' ಕಾದಂಬರಿಯು ಓರ್ವ ಅಸಹಾಯಕ ಓದುಬರಹ ಬಾರದ ಹೆಣ್ಣು ಮಗಳು ತಾನು ಬಯಸಿ ಪ್ರೇಮಿಸಿದ ಬಾಲ್ಯದ ಗೆಳೆಯ ರಂಗಸ್ವಾಮಿಯ ಕೈಹಿಡಿಯಲಾಗದೆ ತಂದೆಯ ಬಲವಂತಕ್ಕೆ ಮಣಿದು ನಪುಂಸಕನೊಂದಿಗೆ ಮದುವೆಯಾಗಿ ಬರಡು ಜೀವನ ನಡೆಸಬೇಕಾದ ಪರಿಸ್ಥಿತಿಯಲ್ಲಿ ಸಮಾಜದ ಕಟ್ಟು ಕಟ್ಟಳೆಗೆ ಹೆದರಿ, ತನ್ನ ದೈಹಿಕ ಬಯಕೆಗಳನೆಲ್ಲಾ ದೇಹದೊಳಗೇ ಅದುಮಿಟ್ಟುಕೊಂಡು ಉರಿಯುವ ಬೆಂಕಿಯಾಗಿ ಜೀವಂತ ಬೇಯುವ ಹೃದಯ ವಿದ್ರಾವಕ ಪ್ರಸಂಗವನ್ನು ಚಿತ್ರಿಸುತ್ತದೆ. ಈ ಕಾದಂಬರಿಯ ಕೇಂದ್ರ ಪಾತ್ರವಾದ ಲಕ್ಷ್ಮಿಯ ನೆಲೆ ವೈಯಕ್ತಿಕವಾಗಿರುವಂತೆ ಸಾಮಾಜಿಕವೂ ಹೌದು ಎನ್ನುವ ಕಾದಂಬರಿಕಾರರ ಮಾತು ಅರ್ಥಪೂರ್ಣವಾಗಿದೆ. ಮೌಲ್ಯಾಧಾರಿತ ಸಮಾಜದಲ್ಲಿ ಒಂದು ಹೆಣ್ಣು ತಾನು ಪ್ರೀತಿಸಿದ ಹುಡುಗನನ್ನು ಕೈಹಿಡಿಯಲಾಗದೆ ತಂದೆಯ ಒತ್ತಾಯಕ್ಕೆ ಷಂಡನಾದ ಗಂಡನೊಡನೆ ಬಾಳುವೆ ನಡೆಸಬೇಕಾದ ಸ್ಥಿತಿಗೆ ಸಮಾಜವು ಬಾಧ್ಯವಾಗಿದೆ.

ತನ್ನ ವಯೋಮಾನಕ್ಕೆ ಸಹಜವಾದ ಆಸೆ ಆಕಾಂಕ್ಷೆಗಳನ್ನು, ದೈಹಿಕ ಬಯಕೆಯನ್ನು ಷಂಡನಾದ ಗಂಡನಲ್ಲಿ ಈಡೇರಿಸಿಕೊಳ್ಳಲಾಗದೆ ತೊಳಲಾಡುವ ಲಕ್ಷ್ಮಿಯ ಅಂತರಂಗದ ಹೋರಾಟ ಕಾದಂಬರಿಯ ಕೇಂದ್ರಬಿಂದು. ಸಮಾಜದ ಕಟ್ಟುಕಟ್ಟಳೆಯ ಲಕ್ಷ್ಮಣರೇಖೆಯನ್ನು ದಾಟಿ ಹೋಗಲಾರದೆ ಮನೋವ್ಯಾಪಾರವಾದ ದೈಹಿಕ ಬಯಕೆಯನ್ನು ಹತ್ತಿಕ್ಕಲೂ ಸಾಧ್ಯವಾಗದೆ ಒಂದು ಬಗೆಯ ದ್ವಂದ್ವ ಸ್ಥಿತಿ

ಯಲ್ಲಿ ಹೊರಳಾಡುವ ಲಕ್ಷ್ಮಿಯ ಒಳತೋಟಿಯ ಚಿತ್ರಣ ಕಾದಂಬರಿಯಲ್ಲಿ ಮೆಚ್ಚು ವಂತಿದೆ. ಕಾದಂಬರಿಯಲ್ಲಿ 'ಉರಿ' 'ಬೆಂಕಿ' ಅಂತರಂಗದ ತಪ್ತಕಾಮದ ಸಂಕೇತ ವಾಗಿ ಬಳಕೆಗೊಂಡಿದೆ. ಲಕ್ಷ್ಮಿಯದು "ಉರಿಯೊಳಗೆ ಬೆಂದೂ ಬದುಕ ಬಯಸುವ ಅದಮ್ಯ ಆಸೆ. ಬದುಕಬೇಕಾದರೆ ಉರೀನ ಆರಿಸಬೇಕು. ಆರೊ ಹಾಗೆ ಮಾಡ ಬೇಕು. ಇಲ್ದಿದ್ರೆ ಹೀಗೇ ಇರಬೇಕಾಗುತ್ತೆ. ಅಸಾಧ್ಯ ಹಿಂಸೆಯಿಂದ ಹೊರ ಬರೋದಕ್ಕೆ ಇದು ಬಿಟ್ಟರೆ ದಾರಿ ಇಲ್ಲ ಅನ್ನಿಸ್ತು. ಬರೀ ಬೇಯ್ತಾ ಹೋಗೋ ದಕ್ಕಿಂತ ಸಾಯಬೇಕು. ಇಲ್ಲವೇ ಧಗ್ಗಂದು ದಹಿಸೋ ಉರಿಯ ಹುಟ್ಟಡಗಿಸ ಬೇಕು" ಎನ್ನುವ ತುಮುಲದಲ್ಲಿ ಸಿಕ್ಕಿಕೊಂಡ ಲಕ್ಷ್ಮಿ ಒಂದು ದಿನ ಈ ಉರಿಯುವ ಬೆಂಕಿಯಿಂದ ಪಾರಾಗಲು ತೀರ್ಮಾನಿಸಿ ಸೀನಪ್ಪನ ಮನೆಯ ಹಜಾರಕ್ಕೆ ಬಂದು ಅವನಿಗೆ ತನ್ನನ್ನು ಅರ್ಪಿಸಿಕೊಳ್ಳಲು ಬಯಸಿ ಕಂಬವನ್ನು ಆಧರಿಸಿ ನಿಲ್ಲುವಳು. ರಂಗಸ್ವಾಮಿಯ ನೆನಪಾಗಿ ಮುಂದೆ ಹೆಜ್ಜೆಯಿಡಲಾಗದೆ ಅಲ್ಲಿಂದ ಓಡಿ ಮನೆಗೆ ಬರುವಳು. ಸೀನಪ್ಪನು ಹಿತೈಷಿಯಂತೆ ನಟಿಸಿ ಅವಳ ಅಂತರಂಗದ ಕಾಮಜ್ವಾಲೆ ಯನ್ನು ಉದ್ದೀಪಿಸಿದರೆ, ರಂಗಸ್ವಾಮಿಯು ತನ್ನ ಬಾಲ್ಯಕಾಲದ ಸಖಿಯ ದುರ್ದಶೆ ಗಾಗಿ ಪರಿತಪಿಸಿ ಆವಳಲ್ಲಿ ಸಾತ್ವಿಕ ಭಾವನೆ ಜಾಗೃತಗೊಳ್ಳಲು ಪ್ರಯತ್ನಿಸುವನು. ಇಲ್ಲೂ ಇಬ್ಬರು ವ್ಯಕ್ತಿಗಳಲ್ಲಿ ತನ್ನ ಅಂತರಂಗಕ್ಕೆ ಸಮೀಪದವರಾರು ಎಂಬುದನ್ನು ನಿರ್ಧರಿಸಲಾಗದೆ ಲಕ್ಷ್ಮಿ ತೊಳಲಾಡುವಳು.

ತಂಗಿಯ ನಡತೆಗೆಟ್ಟ ಬಾಳುವೆಯನ್ನು ನೋಡಲು ಹೇಸಿ ಊರಿಂದ ಓಡಿ ಹೋದ ಲಕ್ಷ್ಮಿಯ ತಂದೆ ಗಂಗಾನಂದಸ್ವಾಮಿಯಾಗಿ ಒಂದು ದಿನ ಇದ್ದಕ್ಕಿದ್ದಂತೆ ಊರಿನಲ್ಲಿ ಕಾಣಿಸಿಕೊಂಡಾಗ ಅವನನ್ನು ಕಂಡ ಲಕ್ಷ್ಮಿಯ ಮನಸ್ಸು ತಂದೆಯೆಂದು ಸ್ವೀಕರಿಸಲು ಒಪ್ಪುವುದಿಲ್ಲ. ಗಂಡಸ್ತನ ಇಲ್ಲದವನಿಗೆ ಮದುವೆ ಮಾಡಿಕೊಟ್ಟ ತನ್ನ ತಂದೆ ತನ್ನ ಪಾಲಿಗೆ ಎಂದೋ ಸತ್ತುಹೋದನು ಎಂಬುದು ಅವಳ ತೀರ್ಮಾನ. ತನ್ನ ಬದುಕಿನ ದುರಂತಕ್ಕೆ ತಂದೆಯೇ ಕಾರಣನೆಂದು ಬಗೆದ ಲಕ್ಷ್ಮಿ ಸ್ವಾಮಿಯಾಗಿ ಬಂದ ಅವನನ್ನು 'ಹೆಂಗಿದ್ರೂ ಸ್ವಾಮಿ; ನೀನು ಅವ್ನಿಗೆ ಗಂಡಸ್ತನ ಬರಿಸು ಮತ್ತೆ' ಎಂದು ಸವಾಲೊಡ್ಡುವಳು. ಅಳಿಯ ನರಸಿಂಹನಿಗೆ ತನ್ನ ತಪೋಬಲದಿಂದ ಗಂಡುಸ್ತನ ಬರಿಸುವುದಾಗಿಯೂ, ಅವನು ರಾಮದೇವರ ಉತ್ಸವದಲ್ಲಿ ಉಪವಾಸ ವಿದ್ದು ಶುಚಿರ್ಭೂತನಾಗಿ ಬಂದರೆ ಇಷ್ಟಾರ್ಥ ನೆರವೇರುವುದಾಗಿಯೂ ಹೇಳಿ ಲಕ್ಷ್ಮಿಯನ್ನು ಸಮಾಧಾನಪಡಿಸುವನು. ವೈಜ್ಞಾನಿಕ ಮನೋಭಾವದ ರಂಗಸ್ವಾಮಿ ಇವನ್ನು ಉಗ್ರವಾಗಿ ಪ್ರತಿಭಟಿಸಿದಾಗ ಸ್ವಾಮಿಯ ಶಕ್ತಿಯ ಬಗೆಗೆ ಅಪಾರ ನಂಬುಗೆಯಿಟ್ಟುಕೊಂಡಿದ್ದ ಭಕ್ತರ ಬಳಗವು ರಂಗಸ್ವಾಮಿಯ ಮೇಲೆ ತಿರುಗಿಬೀಳು ವುದು. ಈ ನೆಲೆಯಲ್ಲಿಯೇ ಲಕ್ಷ್ಮಿಯ ಪಾಲಿನ ವೈಯಕ್ತಿಕ ಸಮಸ್ಯೆ ಸಾಮಾಜಿಕ ಸಮಸ್ಯೆಯ ರೂಪ ಪಡೆದುಕೊಳ್ಳುವುದು. ರಾಮದೇವರ ಉತ್ಸವದಲ್ಲಿ ದೇವರ

ಮುಂದಿನ ಕುಣಿತವನ್ನು ನೋಡುತ್ತಿದ್ದಂತೆಯೇ ತನ್ನಲ್ಲೂ ಗಂಡುಸ್ತನ ಮೂಡಿ ಬರುತ್ತದೆಯೆಂಬ ಭಾವನೆಗೆ ಒಳಗಾದ ನರಸಿಂಹ ತನಗೆ ಅರಿವಿಲ್ಲದಂತೆಯೇ ಕುಣಿಯತೊಡಗಿದ. ಸುತ್ತಲಿದ್ದವರು ನರಸಿಂಹನ ಮೈಮೇಲೆ ದೇವರು ಬರುತ್ತಿದೆಯೆಂದು ಭಾವಿಸಿದರು. ನರಸಿಂಹ ಭಾವಾವೇಶದಿಂದ ಕುಣಿಯುತ್ತಾ ಕುಣಿಯುತ್ತಾ ಕುಸಿದು ಬಿದ್ದ, ಮತ್ತೆ ಮೇಲೇಳಲಿಲ್ಲ. ಲಕ್ಷ್ಮಿಯ ಮನದಲ್ಲಿ ಮೂಡಿದ ಆಕ್ರೋಶವನ್ನು ಅವಳ ಕೆಂಡದುಂಡೆಗಳಂತಿದ್ದ ಕಣ್ಣುಗಳು ಸಾರಿದವು. ಅವಳು ತೀವ್ರವಾದ ಕೋಪ ಹಾಗೂ ಹತಾಶ ಭಾವನೆಗಳಿಂದ ಮಾತನಾಡಲಾಗದೆ ಕೊರಳಲ್ಲಿದ್ದ ತಾಳಿಯನ್ನು ಕಿತ್ತೆಸೆದಳು. ಮನೆಗೆ ಬಂದ ಲಕ್ಷ್ಮಿ ತನ್ನ ಅಂತರಂಗದಲ್ಲಿ ಇಲ್ಲಿಯವರೆಗೂ ಸುಡುತ್ತಿದ್ದ ಬೆಂಕಿಯನ್ನು ನಂದಿಸಿ ಹೊಸ ಬಾಳನ್ನು ನಡೆಸಲು ತೀರ್ಮಾನಿಸಿದಳು. ಇಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಇಷ್ಟೆಲ್ಲಾ ಘಟನೆಗಳು ನಡೆಯುತ್ತಿರುವಾಗ ಗಂಗಾನಂದಸ್ವಾಮಿಗಳು ತಮ್ಮ ಶಿಷ್ಯರೊಂದಿಗೆ ಊರು ಬಿಟ್ಟು ಓಡಿಹೋದುದನ್ನು ಕಾದಂಬರಿಯ ಅಂತ್ಯದಲ್ಲಿ ಹೇಳುವಾಗ ವ್ಯಂಗ್ಯ ಘನೀಭೂತಗೊಂಡಂತೆ ಭಾಸವಾಗುತ್ತದೆ.

ಕೆ. ಟಿ. ಗಟ್ಟಿಯವರ 'ಶಿಲಾತಪಸ್ವಿ' ಸೋದರರೀರ್ವರ ಬದುಕಿನ ಧ್ಯೇಯವನ್ನು ವಿಶ್ಲೇಷಿಸುವ ವಸ್ತುವನ್ನೊಳಗೊಂಡಿದೆ. ನಿರ್ಲಿಪ್ತತೆಯ ಹೆಸರಿನಲ್ಲಿ ವಾಸ್ತವಿಕ ಬದುಕನ್ನು ಮರೆಯುವ ಶಾಂತಾರಾಮ ; ಸಂಸಾರದಲ್ಲಿದ್ದರೂ ಅದು ಕೊಡಮಾಡಿದ ಕಹಿಯನ್ನುಂಡರೂ ವಾಸ್ತವಿಕ ಪ್ರಜ್ಞೆ ಕಳೆದುಕೊಳ್ಳದ ರವೀಂದ್ರ - ಈ ಎರಡು ಪಾತ್ರಗಳ ಸುತ್ತ ಕಾದಂಬರಿಯನ್ನು ಹೆಣೆಯಲಾಗಿದೆ. ಕಾದಂಬರಿಯ ಶೀರ್ಷಿಕೆಯೇ ಹೇಳುವಂತೆ ಶಾಂತಾರಾಮನು ಶಿಲಾತಪಸ್ವಿ ; ಇತಿಹಾಸದ ವಿದ್ಯಾರ್ಥಿಯಾದ ಆತ ಶಿಲ್ಪಕಲೆಯ ಆರಾಧಕ ; ಕಲ್ಲುಗಳು ಹೇಳುವ ಇತಿಹಾಸದಲ್ಲಿ ಅವನಿಗೆ ಆಸಕ್ತಿ. 'ಕರ್ನಾಟಕ ಶಿಲ್ಪಕಲೆಯ ಇತಿಹಾಸ' ಅವನಿಗೆ ಡಾಕ್ಟರೇಟ್ ಪದವಿಯನ್ನೂ ಪ್ರಸಿದ್ಧಿಯನ್ನೂ ದೊರಕಿಸಿಕೊಟ್ಟ ಕೃತಿ. ಶಾಂತಾರಾಮ ಸ್ವಭಾವತಹ ಅಂತರ್ಮುಖಿ. ತಾನಾಯಿತು ತನ್ನ ಓದಾಯಿತು, ಸಂಶೋಧನೆಯಾಯಿತು. ಅವನೆಂದೂ ಕಣ್ತೆರೆದು ತನ್ನ ಸುತ್ತಣ ಕ್ರಿಯಾಶೀಲ ಪ್ರಪಂಚದ ಕಡೆಗೆ ನೋಡಿದವನಲ್ಲ. ಅವನ ಬದುಕಿನಲ್ಲಿ ಸುಖವನ್ನು ಕಾಣಿಸಿದವಳು ರಾಜಶ್ರೀ. ಅವಳ ಅನಿರೀಕ್ಷಿತ ಸಾವು ಅವನ ಬದುಕಿನಲ್ಲಿ ಶೂನ್ಯವನ್ನುಂಟುಮಾಡಿತ್ತು. ಆ ವೇಳೆಯಲ್ಲಿ ಅವನ ಬದುಕನ್ನು ತುಂಬಲು ಬಂದವಳು ನಾಗವೇಣಿ. ಅವನು ನಾಗವೇಣಿಯಿಂದ ದೈಹಿಕ ತೃಪ್ತಿಯನ್ನು ಪಡೆದನೇ ಹೊರತು ಮಾನಸಿಕ ತೃಪ್ತಿಯನ್ನಲ್ಲ. ನಾಗವೇಣಿ ಅವನನ್ನು ಅರ್ಥಮಾಡಿಕೊಳ್ಳದೆ ಅವನ ಸಂಶೋಧನಾಸಕ್ತಿಗೆ ತಣ್ಣೀರೆರಚಿದಳು. ಬಾಳು ಅಸಹನೀಯವಾಗಿ ಅದನ್ನು ಎದುರಿಸಲು ಶಕ್ತಿಯಿಲ್ಲದ ಶಾಂತಾರಾಮ ಆತ್ಮಹತ್ಯೆ ಮಾಡಿಕೊಳ್ಳುವನು.

ಶಾಂತಾರಾಮನ ತಮ್ಮ ರವೀಂದ್ರನದು ಅಣ್ಣನಿಗೆ ತದ್ವಿರುದ್ಧವಾದ ಗುಣ. ತಾನು ಬದುಕುತ್ತಿರುವ ಸುತ್ತಣ ಪ್ರಪಂಚವನ್ನು ಅರ್ಥಮಾಡಿಕೊಳ್ಳುತ್ತಾ ವಾಸ್ತವಿಕ ಪ್ರಜ್ಞೆಯನ್ನು ಕಳೆದುಕೊಳ್ಳದ ಅವನು ಮಾನವೀಯತೆಯನ್ನೂ ಹೃದಯ ವೈಶಾಲ್ಯವನ್ನೂ ಮೈಗೂಡಿಸತೊಡಗಿದನು. ಸಹೋದರನಂತೆ ಇದ್ದ ಪ್ರಾಣ ಸ್ನೇಹಿತ ಪ್ರಶಾಂತನ ಬೆನ್ನ ಹಿಂದೆ ಪತ್ನಿ ವೀಣಳು ಓಡಿಹೋದುದು ರವೀಂದ್ರನ ಪಾಲಿಗೆ ದೊಡ್ಡ ಆಘಾತ. ಗಂಡ-ಹೆಂಡಿರ ನಡುವೆ ಯಾವ ವಿರಸವೂ ಇರಲಿಲ್ಲ. ಯಾವ ಸಾಂಸಾರಿಕ ಅತೃಪ್ತಿಯೂ ಇರಲಿಲ್ಲ. ಅವಳ ಇಚ್ಛೆಗೆ ವಿರುದ್ಧವಾಗಿ ನಡೆಯುವವರು ಮನೆಯಲ್ಲಿ ಯಾರೂ ಇರಲಿಲ್ಲ. ರವೀಂದ್ರನೂ ಎಂದೂ ಹೆಂಡತಿಯ ಮನನೋಯಿಸಿದವನಲ್ಲ. ಒಂದು ಮಗುವಿನ ತಾಯಿಯಾದ ವೀಣಾ ತನ್ನ ಪುಟ್ಟ ಸಂಸಾರ, ಗಂಡ ತನಗೆ ಕೊಟ್ಟ ಸ್ವಾತಂತ್ರ್ಯ, ಒದಗಿಸಿದ ಅನುಕೂಲ ಎಲ್ಲವನ್ನೂ ಬಿಟ್ಟು ಪ್ರಶಾಂತನ ಜೊತೆ ಓಡಿಹೋದುದು ಏಕೆಂಬುದು ಅರ್ಥವಾಗುವುದಿಲ್ಲ. ತಾನು ಮಾಡಿದ್ದು ಅಕ್ಷಮ್ಯ ಅಪರಾಧ ಎಂದು ವೀಣಳು ಪಶ್ಚಾತ್ತಾಪ ಪಟ್ಟಾಗ ಅವಳನ್ನೇ ಕ್ಷಮಿಸುವ ಹೃದಯ ವೈಶಾಲ್ಯ ರವೀಂದ್ರನದು. ಅಣ್ಣನ ಸಂಸಾರದಲ್ಲಿ ಅಶಾಂತಿ ತಲೆದೋರಿದಾಗ ಬೇರೆ ಮನೆ ಕಟ್ಟಿಸಲು ಡಾ॥ ಜ್ಯೋತಿಯಿಂದ ಸಾಲ ರೂಪದಲ್ಲಿ ಹಣ ತಂದು ಸಂಶೋಧನ ಪುಸ್ತಕವನ್ನು ಅರ್ಧಬೆಲೆಗೆ ಪ್ರಕಾಶನೊಬ್ಬನಿಗೆ ಮಾರಿ ಬಂದದ್ದೆಂದು ಸುಳ್ಳು ಹೇಳಿ ಶಾಂತಾರಾಮನನ್ನು ಸಮಾಧಾನಪಡಿಸುವ ದೊಡ್ಡಗುಣ ರವೀಂದ್ರನದು.

ಅಲ್‌ಫ್ರೆಡ್, ಪ್ರಮೋದರಂತಹ ಸ್ವಾರ್ಥಿಗಳ, ಸಮಯಸಾಧಕರ ಚಿತ್ರವೂ ಕಾದಂಬರಿಯಲ್ಲಿ ಬರುತ್ತದೆ. ಯೌವನದ ಹುಚ್ಚು ಹೊಳೆಯ ಅಬ್ಬರದಲ್ಲಿ ಅಲ್‌ಫ್ರೆಡ್‌ನಂತಹ ಸಡಿಲಮನೋಭಾವದ ಯುವ ಪ್ರೇಮಿಗೆ ತನ್ನನ್ನು ಅರ್ಪಿಸಿಕೊಂಡ ನಾಗವೇಣಿ ಅವನು ಕೈಕೊಟ್ಟಾಗ ಎಚ್ಚರಗೊಳ್ಳುವಳು. ದುಡಿಯುವ ಹೆಣ್ಣಾದರೂ ಸಾಮಾಜಿಕ ಭದ್ರತೆಯಿಲ್ಲದ ನಾಗವೇಣಿ ಅದಕ್ಕಾಗಿ ಯಾರಾದರೂ ಸರಿ, ಒಂದು ಎಸ್. ಎಸ್. ಎಲ್. ಸಿ. ಯುವನಾದರೂ ಸರಿ, ಒಂದು ಸಣ್ಣ ಉದ್ಯೋಗದವನಾದರೂ ಸರಿ, ವಿದುರನಾದರೂ ತೊಂದರೆಯಿಲ್ಲ ಮಂದಕನಲ್ಲದಿದ್ದರೆ ಸರಿ ಮದುವೆಯಾಗಲು ಸಿದ್ಧ ಎಂದು ತೀರ್ಮಾನಿಸುವಳು. ರಾಜಶ್ರೀಯ ಮರಣಾನಂತರ ಜಯರಾಮನ ಕೈಹಿಡಿಯುವ ಭಾಗ್ಯ ತನಗೆ ಲಭ್ಯವಾದರೂ ಬದುಕಿನಲ್ಲಿ ತೃಪ್ತಿಯನ್ನು ಅವಳು ಕಾಣಲಿಲ್ಲ, ಕಟ್ಟಿಕೊಂಡವನಿಗೂ ನೆಮ್ಮದಿಯನ್ನು ಕೊಡಲಿಲ್ಲ. ನಾಗವೇಣಿಯ ಜೀವನದೃಷ್ಟಿ ಪ್ರತಿಯೊಂದನ್ನೂ ಭೌತಿಕ ಮೌಲ್ಯದಿಂದಲೇ ಅಳೆಯುವುದಾಗಿತ್ತು. ಆದರಿಂದಲೇ ಅವಳು ಅಸುಖಿಯಾದಳು. ಬಯಕೆಯೆಂಬ ಮರೀಚಿಕೆಯ ಬೆನ್ನುಹತ್ತಿದ ಅವಳು ಎಂದೂ ನೆಮ್ಮದಿಯನ್ನು ಕಾಣಲಿಲ್ಲ. ಶಾಂತಾರಾಮನ ಸಾವಿಗೂ ಅವಳೇ ಕಾರಣಳಾಗುವಳು. ತನ್ನ ಭಾಗ್ಯವನ್ನು ತನ್ನ ಕೈಯಾರೆ ಅಳಿಸಿಕೊಂಡ ನಾಗವೇಣಿಯ ಪಾತ್ರ ಒಂದು ವಿಧದಲ್ಲಿ ದುರಂತವೇ.

ಶಾಂತಾರಾಮು ತನ್ನನ್ನು ಮದುವೆಯಾಗಲು ಇಷ್ಟಪಡದಿದ್ದಾಗ ಜೀವನಪರ್ಯಂತ ಅವಿವಾಹಿತಳಾಗಿಯೇ ಉಳಿಯಹೊರಟ ತ್ಯಾಗಮಯಿಯ ಪಾತ್ರವಾಗಿ ಡಾ॥ ಜ್ಯೋತಿ ಕಾದಂಬರಿಯಲ್ಲಿ ಮಿಂಚಿರುವಳು.

ಕೆ. ಟಿ. ಗಟ್ಟಿಯವರ ಕಾದಂಬರಿಗಳಲ್ಲಿ ಪಾತ್ರಗಳ ಮನೋವಿಶ್ಲೇಷಣೆ ಹಾಗೂ ತಾತ್ತ್ವಿಕ ಜಿಜ್ಞಾಸೆ ಸಾಕಷ್ಟು ಬಂದಿರುತ್ತದೆ. ಅವರ ಕಾದಂಬರಿಗಳು ಹೆಚ್ಚು ಭಾವನಾತ್ಮಕವಾಗಿರುತ್ತವೆ. ಇದರಿಂದಾಗಿಯೇ ಏನೋ ಇವರ ಜನಪ್ರಿಯತೆ ಹೆಚ್ಚಿದೆ. 'ಶಿಲಾತಪಸ್ವಿ' ಈ ಹಿನ್ನೆಲೆಯಲ್ಲಿ ಜನಪ್ರಿಯ ಕಾದಂಬರಿ.

ಸಿ. ಎನ್. ಚನ್ನವೀರಯ್ಯನವರ 'ಮುಸುಕು ಮಾಂಗಲ್ಯ' ಹಾಗೂ 'ಮೂಕ ವೇದನೆ' ಅವರೇ ಹೇಳಿಕೊಂಡಿರುವಂತೆ ಕ್ರಮವಾಗಿ 21 ಮತ್ತು 24ನೇ ಕೃತಿ. ಮುಸುಕು ಮಾಂಗಲ್ಯದ ವಸ್ತು ವರದಕ್ಷಿಣೆಯ ಸಮಸ್ಯೆಯನ್ನು ಕುರಿತದ್ದು. ವರದಕ್ಷಿಣೆಯನ್ನು ತರಲಿಲ್ಲವೆಂದು ಹೆಂಡತಿಯನ್ನು ನಾನಾ ಬಗೆಯಲ್ಲಿ ಶಿಕ್ಷಿಸಿದ, ಕೊನೆಗೆ ಸೀಮೆಎಣ್ಣೆ ಸುರಿದು ಕೊಲ್ಲಹೊರಟ ಕ್ರೂರಿ ಗಂಡನೊಬ್ಬನ ಕಥೆ ಇದರ ವಸ್ತು. ಕಾದಂಬರಿಯಲ್ಲಿ ಬರುವ ಪ್ರೇಮಾ ವಿದ್ಯಾವತಿ, ಒಳ್ಳೆಯ ಉದ್ಯೋಗದಲ್ಲಿದ್ದವಳು, ಅಮಾಯಕಳು ಕಾಲೇಜಿನಲ್ಲಿ ಜನಪ್ರಿಯ ಅಧ್ಯಾಪಕಿಯಾಗಿದ್ದ ಪ್ರೇಮಾ ಗಂಡನ ಕ್ರೌರ್ಯಗಳನ್ನು ಪ್ರತಿಭಟಿಸದೆ ಒಪ್ಪಿಕೊಳ್ಳುವಳು. ಗಂಡ ಗಣೇಶನ ಮೋಸದ ಜಾಲಗಳು, ಅವನ ಅಮಾನವೀಯ ವರ್ತನೆಗಳು ಮೃದುಹೃದಯಿಗಳಾದ ಓದುಗರ ಕಣ್ಣಂಚಿನಲ್ಲಿ ನೀರು ತರಿಸಲೆಂದೇ ಸೃಷ್ಟಿಗೊಂಡಿವೆ. ತೀರಾ ಸಾಧಾರಣ ಮಟ್ಟದ ಕಾದಂಬರಿಯಿದು.

ಹೆಣ್ಣು ಮಕ್ಕಳ ವಿವಾಹ ಸಮಸ್ಯೆಯ ಇನ್ನೊಂದು ಮುಖವನ್ನು 'ಮೂಕ ವೇದನೆ'ಯಲ್ಲಿ ಕಾಣುತ್ತೇವೆ. ಕನ್ಯಾಪಿತೃಗಳು ಗಳಿಸುತ್ತಿರುವ ವಿದ್ಯಾವಂತ ಯುವಕರ ಬೇಟೆಯಾಡಿ, ಮೋಸದ ಬಲೆಬೀಸಿ ಅವರ ತಂದೆ-ತಾಯಿಯರನ್ನು ಒಪ್ಪಿಸಿ ವಿವಾಹಕ್ಕೆ ಮುನ್ನವೇ ಯುವಕರು ಹೆತ್ತು ಹೊತ್ತು ಬೆಳೆಸಿದವರನ್ನು ತೊರೆದು ಹೋಗುವಂತೆ ಮಾಡುವ ಧೂರ್ತತನದ ಚಿತ್ರಣ ಈ ಕಾದಂಬರಿಯಲ್ಲಿ ಬಂದಿದೆ. ಕಾದಂಬರಿಯಲ್ಲಿ ಬರುವ ಸಾತ್ವಿಕ ಮೂರ್ತಿಯಾದ ನಂಜುಂಡಯ್ಯನವರು ಹೆಣ್ಣು ಹೆತ್ತವರ ಮೋಸದ ಬಲೆಗೆ ಸಿಕ್ಕಿ ಇಳಿವಯಸ್ಸಿನಲ್ಲಿ ನಮಗೆ ಆಸರೆಯಾಗಬಹುದಾಗಿದ್ದ ತಮ್ಮ ಮಗನನ್ನೇ ಕಳೆದುಕೊಳ್ಳುವರು. ಇದು ಸಹ ಸಾಧಾರಣ ಮಟ್ಟಕ್ಕಿಂತ ಮೇಲೇರುವುದಿಲ್ಲ.

ಈ ಕಾದಂಬರಿಕಾರರು ತಮ್ಮ ಎರಡೂ ಕಾದಂಬರಿಗಳಲ್ಲಿ ಪ್ರಚಲಿತ ಸಾಮಾಜಿಕ ಸಮಸ್ಯೆಯನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದರೂ ಸಮಸ್ಯೆಯ ಬಗೆಗೆ ಒಳನೋಟವಿದ್ದಂತಿಲ್ಲ. ಸಮಸ್ಯೆಯ ವಿಶ್ಲೇಷಣೆಯಲ್ಲಿ ಭಾವನಾತ್ಮಕ ನಿರೂಪಣೆ

ಪ್ರಧಾನವಾಗಿಬಿಡುವುದರಿಂದ ಸಮಸ್ಯೆ ನಮ್ಮನ್ನು ಗಾಢವಾಗಿ ಚಿಂತಿಸುವಂತೆ ಮಾಡುವುದಿಲ್ಲ. ಸಲೀಸಾದ ಬರವಣಿಗೆಯಿಂದಾಗಿ ಕಾದಂಬರಿಯಲ್ಲಿನ ಘಟನೆ, ಪಾತ್ರಗಳ ಮನೋವ್ಯಾಪಾರ ನಮ್ಮ ಮನದಲ್ಲಿ ಸ್ಥಾಯಿಯಾಗಿ ನಿಲ್ಲುವುದಿಲ್ಲ. ಬರವಣಿಗೆ ನೀರು ಕುಡಿದಷ್ಟೇ ಸುಲಭವಾಗಿರುವುದರಿಂದ ಕಾದಂಬರಿಕಾರನಿಗಿರಬೇಕಾದ ತನ್ಮಯತೆ, ಸಂಯಮ ಇವರಿಗೆ ಇದ್ದಂತೆ ತೋರುವುದಿಲ್ಲ. ಕಾದಂಬರಿಗಳ ಸಂಖ್ಯೆಯಲ್ಲಿ ಹೆಚ್ಚಳವನ್ನು ನಾವು ಕಾಣುವೆವೇ ಹೊರತು ಒಂದು ಕಾದಂಬರಿಯಿಂದ ಮತ್ತೊಂದಕ್ಕೆ ಕಾದಂಬರಿಕಾರ ಬೌದ್ಧಿಕವಾಗಿ ಬೆಳೆದಿರುವುದನ್ನು ಕಾಣುವುದಿಲ್ಲ.

ಎಸ್. ವಿದ್ಯಾಶಂಕರ

ಪೌರಾಣಿಕ, ಐತಿಹಾಸಿಕ ಕಾದಂಬರಿಗಳು.

ರಂ. ಶ್ರೀ. ಮುಗಳಿಯವರ 'ಅಗ್ನಿವರ್ಣ'ವು ಅವರ ನಾಲ್ಕನೆಯ ಕಾದಂಬರಿ. ಇದರ ಕಥಾನಾಯಕ ಅಗ್ನಿವರ್ಣನು ಪುರಾಣಪುರುಷ, ಕಾಳಿದಾಸನ 'ರಘುವಂಶ'ದಲ್ಲಿ ಬರುವ ರಾಜರುಗಳಲ್ಲಿ ಕೊನೆಯವನು. ರಘುವಂಶದ ಕೊನೆಯ ಸರ್ಗದಲ್ಲಿ ಇವನ ಪಾತ್ರವು ವಿಶದವಾಗಿ ಬಂದಿದೆ. ಅದನ್ನು ಓದಿ ಪ್ರಭಾವಿತರಾದ ರಂ. ಶ್ರೀ. ಮುಗಳಿಯವರು ಈ ಪೌರಾಣಿಕ ಕಾದಂಬರಿಯ ರಚನೆ ಮಾಡಿರುವರು. ವಸ್ತು ಪೌರಾಣಿಕವಾದರೂ ಅದನ್ನು ಸಮಕಾಲೀನ ಬದುಕಿಗೆ ಭಿನ್ನವಾಗದಂತೆ, ಹೆಚ್ಚು ಸಮೀಪವಾಗಿರುವಂತೆ ಚಿತ್ರಿಸಲು ಕಾದಂಬರಿಕಾರರು ಪ್ರಯತ್ನಿಸಿರುವರು. ಅಗ್ನಿವರ್ಣ ಚಕ್ರವರ್ತಿಯು ಕರ್ತವ್ಯಭ್ರಷ್ಟನಾದ ವಿಷಯಲಂಪಟ. ಅವನು ತನ್ನ ಪೂರ್ವಿಕರಂತೆ ಆದರ್ಶ ಸಾಮ್ರಾಟನಾಗಿ ಪ್ರಜೆಗಳ ಕ್ಷೇಮಚಿಂತನೆಯನ್ನು ಮಾಡದೆ ಗಾನ ನಾಟ್ಯಗಳಿಂದಲೂ ಮದಿರೆ ಮಾನಿನಿಯರಿಂದಲೂ ತನ್ನ ಬದುಕನ್ನು ತುಂಬಿಕೊಂಡವನು. ಸುಖಭೋಗಗಳನ್ನು ಸವಿಯುತ್ತ ಅವುಗಳೇ ಬಾಳಿನ ಚಿರಂತನ ಸತ್ಯವೆಂದು ನಂಬಿ ವಿಷಯವಾಸನೆಗಳಿಗೆ ತನ್ನ ಬದುಕನ್ನು ಗುರಿಮಾಡಿದನು. ಈ ಕ್ಷಣಿಕ ಸುಖಗಳು ಬಾಳಿನುದ್ದಕ್ಕೂ ರಂಜಿಸಿದರೂ ಅವುಗಳೇ ಕೊನೆಯಲ್ಲಿ ಅವನ ಪಾಲಿಗೆ ಮೃತ್ಯುವಾದ ದಾರುಣಚಿತ್ರವನ್ನು ರಘುವಂಶದಲ್ಲಿ ಕೊಡಲಾಗಿದೆ. ಇದರ ಜಾಡಿನಲ್ಲಿಯೇ ಅಗ್ನಿವರ್ಣವನನ್ನು ಕೇಂದ್ರಪಾತ್ರವಾಗಿಸಿಕೊಂಡು ಒಂದು ಸಂಕೀರ್ಣವಾದ ಕಥಾವಸ್ತುವನ್ನು ಕಲ್ಪಿಸಿಕೊಂಡು ಈ ಕಾದಂಬರಿಯ ರಚನೆ ಮಾಡಲಾಗಿದೆ.

ರಘುವಂಶ ಈ ಕೃತಿಗೆ ಮೂಲಧನವಾಗಿದ್ದರೂ ಅದನ್ನು ಕಾದಂಬರಿಕಾರರು ತಮ್ಮದೇ ಆದ ರೀತಿಯಲ್ಲಿ ಬಳಸಿರುವರು, ಬೆಳೆಸಿರುವರು ಅವರೇ ಕಾದಂಬರಿಯ 'ಮೊದಲ ನುಡಿ'ಯಲ್ಲಿ ಹೇಳಿರುವಂತೆ "ಈ ಅಗ್ನಿವರ್ಣನ ಪಾತ್ರವು ಒಬ್ಬ ಅಪ್ರತಿಮ ಪ್ರತಿಭಾವಂತ, ರಸಿಕ, ಸಂಗೀತಪ್ರೇಮಿ, ಸ್ತ್ರೀಲೋಲ, ಸರ್ವಸುಖ ಶೋಧಕ, ಅತಿರೇಕಗಳಿಂದ ಅಳಿವು ಹೊಂದಿದರೂ ತನ್ನ ಅತಿಶಯವನ್ನು ಮೆರೆದ ಒಂದು ಉನ್ನತ ಚೇತನದ್ದಾಗಿದೆ; ಕೇವಲ ಕಾಮುಕ, ಕರ್ತವ್ಯಭ್ರಷ್ಟನಾದ ಅರಸನದಲ್ಲ. ದಿಲೀಪ

ನಿಂದ ಮೊದಲಾಗಿ ತನ್ನ ತಂದೆ ಸುದರ್ಶನನವರೆಗೆ ಬೆಳೆದುಬಂದ ಉದಾತ್ತ ಪರಂಪರೆಯನ್ನು ತಿಳಿಸಿಕೊಟ್ಟರೂ ಡೋಲಾಯಮಾನನಾಗಿ ಅದರಿಂದ ಹೆಚ್ಚು ಪ್ರಭಾವಿತನಾಗದೆ ಅವನು ಕಾಮವಶನಾಗಿ ಕರ್ತವ್ಯಚ್ಯುತನಾಗಿ ತನ್ನ ವಿನಾಶದ ದಾರಿಯನ್ನು ತಾನೇ ಕೊರೆಯುತ್ತ ಹೋದನೆಂಬುದನ್ನೂ ಕೊನೆಕೊನೆಗೆ ಅನುತಾಪಹೊಂದಿ ಕಾಲ ಮೀರಿಹೋದ ಮೇಲೆ ಸರಿಯಾದ ತಿಳಿವಳಿಕೆಯನ್ನು ಹೊಂದಿದನೆಂಬುದನ್ನೂ ಇಲ್ಲಿ ನಿರೂಪಿಸುವ ಪ್ರಯತ್ನ ನಡೆದಿದೆ." ಮೂಲದಲ್ಲಿ ಕಂಡುಬರದ ಕಾದಂಬರಿಕಾರರ ಕಲ್ಪನೆಯ ಕೂಸಾದ ಕುಶಾಗ್ರನ ಪಾತ್ರ ಗಮನಾರ್ಹವಾಗಿದೆ. ಬಹುಶಃ ಪಟ್ಟಾಧಿಕಾರವು ತನ್ನ ಹೊಟ್ಟೆಯಲ್ಲಿ ಬಂದ ಮಗನಿಗೇ ದಕ್ಕಬೇಕೆಂಬ ದೂರಾಲೋಚನೆಯಿಂದ ಪ್ರೇರಿತಳಾಗಿ ಮಹಾರಾಣಿ ಕಾಮಿನೀದೇವಿಯು ತನ್ನ ತಂದೆಯ ರಾಜ್ಯದಿಂದ ಕುಶಾಗ್ರನನ್ನು ಬರಮಾಡಿಕೊಳ್ಳುವಳು. ಕಾಮಿನಿಯು ಮಹಾರಾಣಿಯಾಗುವ ಮುನ್ನ ಅವಳನ್ನು ಪ್ರೇಮಿಸಿದ್ದ ಕುಶಾಗ್ರನು ತನ್ನ ಅಂತರಂಗದ ಪ್ರೇಮಮೂರ್ತಿಯನ್ನು ಮರಳಿ ಹೇಗಾದರೂ ಪಡೆಯಬೇಕೆಂಬ ದುರಾಶೆಯಿಂದ ಅವಳ ಆಹ್ವಾನವನ್ನು ಅಂಗೀಕರಿಸಿ ಬರುವನು. ಕಾಮಿನಿಯ ಪ್ರೇರಣೆಯಂತೆ ಕುಶಾಗ್ರನು ರಾಜ್ಯದ ಕಷ್ಟಪರಿಸ್ಥಿತಿಯಲ್ಲಿ ತನ್ನ ತೀಕ್ಷ್ಣ ಬುದ್ಧಿಶಕ್ತಿಯನ್ನು ಪ್ರಯೋಗಿಸಿ ಕವಿದು ಬಂದಿದ್ದ ಬಲವಾದ ಆಪತ್ತಿನಿಂದ ರಾಜನನ್ನು ಪಾರುಮಾಡುವನು. ಆ ಮೂಲಕ ರಾಜನ ಆಪ್ತಮಿತ್ರನಾಗುವನು. ಅವನ ದುರ್ಬಲ ಮನಸ್ಸು ಕಾಮಿನಿಯ ಮೇಲಣ ಆಸೆಯನ್ನು ಹತ್ತಿಕ್ಕಲಾರದೆ, ಅಗ್ನಿವರ್ಣನು ರೋಗಿಷ್ಟನಾಗಿ ಸಾವಿನ ಅಂಚಿನಲ್ಲಿದ್ದಾಗ ಕಾಮಿನಿಯಲ್ಲಿ ಪ್ರೇಮಯಾಚನೆ ಮಾಡುವನು. ಅವಳು ತನ್ನವಳಾದರೆ ಭವಿಷ್ಯವನ್ನು ತಿದ್ದಬಹುದೆಂಬ ಪ್ರಲೋಭನೆಯೊಡ್ಡುವನು, ಅವನ ಹುನಾರಿಗೆ ಸುಲಭವಾಗಿ ವಶಳಾಗದ ಕಾಮಿನಿ ಅವನ ಮನದಾಸೆಯನ್ನು ಖಂಡಿಸುವಳು. ಅದರಿಂದ ತೀವ್ರ ನಿರಾಶೆಗೆ ಒಳಗಾದ ಕುಶಾಗ್ರನು ವಿವೇಕವನ್ನು ಕಳೆದುಕೊಂಡು ಅವಳ ಕತ್ತುಹಿಸುಕಿ ಕೊಲ್ಲುವನು. ತನ್ನಿಂದಾದ ಅಪರಾಧಕ್ಕೆ ಭೀತನಾದ ಕುಶಾಗ್ರ ಅಲ್ಲಿಂದ ತಲೆತಪ್ಪಿಸಿಕೊಳ್ಳಲು ಓಡಿಹೋಗುವನು. ಕಾಮಿನಿಯ ಸಾವು ಹಾಗೂ ಕುಶಾಗ್ರನ ಪಲಾಯನ ಎರಡೂ ನಿಗೂಢವಾಗಿಬಿಡುತ್ತದೆ. ಕುಶಾಗ್ರನ ಪಾತ್ರ ಕಾದಂಬರಿಯಲ್ಲಿ ಭಗ್ನಪ್ರೇಮಿಯೊಬ್ಬನ ದುರಂತದಂತೆ ಚಿತ್ರಿತವಾಗಿದೆ. ಆದರೂ ಈ ದುರಂತ ಪಾತ್ರದ ಅಂತರಂಗದ ಘರ್ಷಣೆ, ಒಳತೋಟಿ ನಮ್ಮ ಮನಸ್ಸನ್ನು ಎಲ್ಲೂ ಮೀಟುವುದಿಲ್ಲ, ಪಾತ್ರದ ದುರಂತ ನಮ್ಮ ಮನಸ್ಸನ್ನು ಗಾಢವಾಗಿ ಆವರಿಸುವುದೇ ಇಲ್ಲ.

ಈ ಕಾದಂಬರಿಯಲ್ಲಿ ಬರುವ ಶೋಷಣೆಗೊಳಗಾದ ಮಹಿಳೆ ನಿರ್ಮಲೆಯ ಕಥೆ ಕಾದಂಬರಿಯ ಪ್ರಮುಖ ಭಾಗವಾಗಿ ಬಂದಿದೆ. ಮೂಲ ಕಥೆಯ ಅವಿಭಾಜ್ಯ ಅಂಗವಾಗಿ ಈ ಉಪಕಥೆ ಬರದೆ ಪ್ರತ್ಯೇಕವಾಗಿಯೇ ನಿಲ್ಲುತ್ತದೆ. ಬಹುಶಃ ಕಾದಂಬರಿಯ ಕಥಾವಸ್ತುವನ್ನು ಹಿಗ್ಗಲಿಸುವ ಉದ್ದೇಶದಿಂದ ನಿರ್ಮಲೆಯ ದಾರುಣ ಕಥೆ ಬಳಕೆಗೊಂಡಿರಬಹುದು. ಇದರಿಂದ ಮೂಲೋದ್ದೇಶಕ್ಕೆ ಚ್ಯುತಿಯೇನೂ ಆಗಿಲ್ಲ, ಹೆಚ್ಚಿನ ಅನುಕೂಲವೇ ಆಗಿದೆ. ಹೆಣ್ಣಿನ ಶೋಷಣೆ ಎಲ್ಲ ಕಾಲದ ಸಮಸ್ಯೆ.

ಕಾದಂಬರಿಯಲ್ಲಿ ಬರುವ ನಿರ್ಮಲೆ ಕುಟುಂಬ ಹಾಗೂ ಸಮಾಜದ ರಕ್ಷಣೆಯ ಜವಾಬ್ದಾರಿಯಿಂದ ವಂಚಿತಳಾದ ನಿರ್ಭಾಗ್ಯ ಹೆಣ್ಣು. ತನ್ನ ದುಶ್ಚಟಗಳಿಗಾಗಿ ಅವಳ ಗಂಡ ಅವಳನ್ನು ಬೇರೊಬ್ಬರಿಗೆ ಮಾರಿಬಿಡುವನು. ಭೋಗವಸ್ತುವೆಂದು ಹೆಣ್ಣನ್ನು ಭಾವಿಸಿದ ಸಮಾಜ ಅವಳನ್ನು ಗೌರವವಾಗಿ ಬಾಳಗೊಡಲು ಬಿಡದೆ ವೇಶ್ಯಾಗೃಹವನ್ನು ಸೇರುವಂತೆ ಮಾಡುತ್ತದೆ. ಅಂತಹ ಪರಸ್ಥಿತಿಯಲ್ಲೂ ಧೈರ್ಯ ಗೆಡದೆ ತನ್ನ ಶೀಲರಕ್ಷಣೆಗಾಗಿ ಅಲ್ಲಿಂದ ಪಾರಾಗಿ ಬರುವಳು. ಅವಳ ಕರುಣೆ ಯುಕ್ಕಿಸುವ ಕಥೆ ಕೇಳಿ ಪಟ್ಟದರಾಣಿ ಧಾರಿಣೀದೇವಿಯು ತನ್ನಲ್ಲಿ ಆಶ್ರಯವಿತ್ತರೂ ಅವಳ ದುರ್ದೈವ ಅಗ್ನಿವರ್ಣನ ರೂಪದಲ್ಲಿ ಕಾಡುತ್ತದೆ. ಅಂತಃಪುರದ ಹೆಣ್ಣಾಗಿರಲು ಇಷ್ಟಪಡದ ಅವಳು ಅರಮನೆಯಿಂದಲೂ ತಪ್ಪಿಸಿಕೊಂಡು ಬರುವಳು. ಶೀಲರಕ್ಷಣೆಗಾಗಿ ಅವಳು ನಡೆಸುವ ಒಂದೊಂದು ಹೋರಾಟವೂ ಹೆಣ್ಣಿನ ಮೇಲೆ ಪರಂಪರಾಗತವಾಗಿ ನಡೆದುಬಂದಿರುವ ಪುರುಷ ಸಮಾಜದ ಪದಾಘಾತದ ಕರುಣ ಕಥೆಯಾಗಿದೆ. ಇಷ್ಟೆಲ್ಲ ಮಾನಸಿಕ ಆಘಾತವಾದರೂ ಚೈತನ್ಯಗೆಡದ ಅವಳ ಧೀಶಕ್ತಿ ಭೂಮಿತಾಯಿಯಷ್ಟೇ ಮಹತ್ವದ್ದು. ಜಾತಿಯಲ್ಲಿ ಬ್ರಾಹ್ಮಣನಾದರೂ ಕಾದಂಬರಿಯ ಇನ್ನೊಂದು ಪ್ರಮುಖ ಪಾತ್ರವಾದ ವಾಮ ತನ್ನ ಹುಟ್ಟಿನೊಂದಿಗೆ ಸಂಬಂಧಪಡೆದ ಬ್ರಾಹ್ಮಣ ಸಮಾಜದ ಅರ್ಥವಿಹೀನ ಆಚರಣೆಗಳ ವಿರುದ್ಧ ಸೆಟೆದು ನಿಂತು ಅದರಿಂದಲೇ ಬಹಿಷ್ಕೃತನಾಗುವನು. ಈ ಬಂಡಾಯ ಪ್ರವೃತ್ತಿಯ ವಾಮ, ಪುರುಷ ದೌರ್ಜನ್ಯವನ್ನು ಎದುರಿಸಿ ಬಾಳಹೊರಟ ನಿರ್ಮಲೆ ಯೋಗಾಯೋಗದಿಂದ ಒಂದೆಡೆ ಸೇರುವರು; ಹುಟ್ಟಿ ಬೆಳೆದ ಸಮಾಜದ ಹಂಗು ತೊರೆದು ಜೊತೆಗೂಡಿ ಬಾಳುವರು. ಕಾದಂಬರಿಯಲ್ಲಿ ಬರುವ ಇವರ ಹೋರಾಟದ ಬದುಕು ಚೇತೋಹಾರಿಯಾಗಿದೆ. ಪುರಾಣ ಕಥೆಯನ್ನು ಸಮಕಾಲೀನವಾಗಿಸುವ ಕಾದಂಬರಿಕಾರರ ಧ್ಯೇಯ ಇಲ್ಲಿ ಸಾರ್ಥಕವಾಗಿದೆ. ಪ್ರಭುಶಕ್ತಿ ದುರ್ಬಲವಾದಾಗ, ನಾಡಿನ ಜನತೆಯ ಕಷ್ಟಕಾರ್ಪಣ್ಯಗಳ ಕಡೆ ಗಮನ ಹರಿಸದಿದ್ದಾಗ ದುರಾಶಾಪೀಡಿತ ಕ್ಷುದ್ರಶಕ್ತಿಗಳು ತಲೆಯೆತ್ತಿ ಮಾನವೀಯತೆಯನ್ನು ಮರೆತು ರಾಕ್ಷಸೀವೃತ್ತಿಯಲ್ಲಿ ತಮ್ಮನ್ನು ತಾವೇ ತೊಡಗಿಸಿ ವಿಜೃಂಭಿಸುತ್ತವೆ. ಇದು ಎಲ್ಲ ಕಾಲಕ್ಕೂ ಅನ್ವಯಿಸುವ ಮಾತು. ಕಾದಂಬರಿಯಲ್ಲಿ ಧ್ವನಿಪೂರ್ಣವಾಗಿ ಇದು ಚಿತ್ರಿತವಾಗಿರುವುದು ಮೆಚ್ಚುವ ಅಂಶ. ವ್ಯಕ್ತಿ ಚಿತ್ರಗಳಲ್ಲಿ ಅಗ್ನಿವರ್ಣನದು ಪ್ರಮುಖವಾಗಿದೆ. ಅಗ್ನಿವರ್ಣನ ವರ್ಣಮಯ ವ್ಯಕ್ತಿತ್ವವನ್ನು ಗ್ರಹಿಸಿ, ಅದನ್ನು ರೂಪಿಸುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿರುವರು. ರಾಜಮಾತೆ ನಂದಿನಿಯ ಪಾತ್ರ ಗಾಂಭೀರ್ಯದಿಂದ ಕೂಡಿದೆ.

ಒಟ್ಟಿನಲ್ಲಿ ರಂ. ಶ್ರೀ. ಮುಗಳಿಯವರ 'ಅಗ್ನಿವರ್ಣ' ಕಾದಂಬರಿಯು ಅವರ ಪಕ್ವವಾದ ಚಿಂತನೆಯನ್ನೂ 'ಪುರಾಣೇತಿಹಾಸ ರೂಪದಲ್ಲಿ ಸಂಕೀರ್ಣವಾದ ಭಾರತೀಯ ಜೀವನದ ಚಿತ್ರಣ' ನೀಡಬೇಕೆಂಬ ಆಶಯವನ್ನೂ ಹೊಂದಿದ್ದು ಸ್ವಾಗತಾರ್ಹ ಕೃತಿಯಾಗಿದೆ.

ವೈದ್ಯ ಸಾಹಿತಿ ರಾ. ಶಿ. ಅವರ 'ಪಂಪಾಪತಿಯ ಕೃಪೆ' ಯಲ್ಲಿ ವಿಜಯನಗರ ಸಾಮ್ರಾಜ್ಯದ ವೈಭವದ ಕೊನೆಯ ದಿನಗಳಲ್ಲಿ ಘಟಿಸಿರಬಹುದಾದ ಹಿಂದೂ-ಮುಸ್ಲಿಂ ವೈಷಮ್ಯದ ದಳ್ಳುರಿಯ ಚಿತ್ರಣವಿದೆ. ಭವ್ಯವಾಗಿ ಮೆರೆದ ಹಿಂದೂ ಸಾಮ್ರಾಜ್ಯವು ಮುಸ್ಲಿಮರ ದುರಾಕ್ರಮಣಕ್ಕೆ ಗುರಿಯಾಗಿ ಹಾಳಾಗುತ್ತಿದ್ದಾಗ ಅದನ್ನು ಉಳಿಸಲು ತಮ್ಮ ಜೀವವನ್ನು ಪಣವಿಟ್ಟು ಹೋರಾಡಿದ ಹಿಂದೂ ವೀರರ ರೋಮಾಂಚಕ ಚಿತ್ರವನ್ನು ನಾವು ಈ ಕಾದಂಬರಿಯಲ್ಲಿ ಕಾಣುವೆವು. ವಿಜಯನಗರದ ಅರಸರು ಹಿಂದೂ ಸಾಮ್ರಾಜ್ಯವು ಅನ್ಯಮತೀಯರ ಭೀಕರ ಆಕ್ರಮಣಕ್ಕೆ ಒಳಗಾಗಿ ಹಾಳಾಗದೆ ಉಳಿಯಬೇಕಾದರೆ ಆಡಳಿತ ವಿಕೇಂದ್ರೀಕರಣವಾಗುವುದೊಂದೇ ಮಾರ್ಗವೆಂದು ಮನಗಂಡರು. ಅದರ ಫಲವಾಗಿ ಕೆಳದಿಯಂತಹ ಪಾಳೇಗಾರರ ಮನೆತನಗಳು ಹುಟ್ಟಿಕೊಂಡವು. ಇದನ್ನು ನಾವು ಕಾದಂಬರಿಯ ಕೊನೆಯ ಭಾಗದಲ್ಲಿ ಕಾಣುವೆವು. ತೋರಿಕೆಗೆ ಈ ಕಾದಂಬರಿ ವಿಜಯನಗರ ಸಾಮ್ರಾಜ್ಯದ ಕೊನೆಯ ದಿನಗಳ ಹೋರಾಟದ ಕಥೆಯನ್ನು ಹೇಳುವಂತಿದ್ದರೂ ಅದರ ಒಡಲಿನಲ್ಲಿ ಸಮಕಾಲೀನ ಬದುಕು ಹಾಸುಹೊಕ್ಕಾಗಿದೆ. ಇಲ್ಲಿ ಬರುವ ಪಾತ್ರಗಳು, ಘಟನೆಗಳು, ಸನ್ನಿವೇಶಗಳು ಐತಿಹಾಸಿಕವಾದರೂ ಸಮಕಾಲೀನವಾಗಬಲ್ಲವು. ಕಾದಂಬರಿಕಾರರೇ ಹೇಳುವಂತೆ "ಅಧಿಕಾರಕ್ಕಾಗಿ, ಪ್ರೇಮ–ಕಾಮಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಮಾನವ ಪಶುವಾಗಿ ಅನೇಕರನ್ನು ಅಮಾನವೀಯವಾಗಿ ಬಲಿಪಶುಗಳನ್ನಾಗಿ ಮಾಡುವ ಕ್ರೌರ್ಯ ಕಾದಂಬರಿಯಲ್ಲಿ ಪ್ರಕಟವಾದಂತೆ ಇವತ್ತಿಗೂ ನಮ್ಮ ಕಣ್ಮುಂದೆ ನಡೆಯುವಂತಹುದೆ. ಕಾಲ ಸಂದರ್ಭ ಬೇರೆಯಾದರೂ ಘಟನೆಗಳು ಸ್ವಲ್ಪ ಭಿನ್ನವಾದರೂ ಮೂಲ ಹಾಗೂ ಪರಿಣಾಮದಲ್ಲಿ ಮಾತ್ರ ಹಿಂದಿಂದುಮುಂದುಗಳಲ್ಲಿ ವ್ಯತ್ಯಾಸವೇ ಇಲ್ಲ. ರಾಷ್ಟ್ರಯೋಧನಾಗಿ ಸೋತ ಮಾನಪ್ಪನಾಯಕ ಗುರುವಾಗಿ ಮತ್ತೊಂದು ರೀತಿಯಲ್ಲಿ ವೈರಿಗಳ ಬಗ್ಗುಬಡಿಯುವುದು; ವೇಶ್ಯಾವಾಟಿಕೆಗಳನ್ನು ಹಿಂದೂ ಮುಸ್ಲಿಂ ರಾಜ್ಯಭಾರಗಳೆರಡೂ ತಮ್ಮ ಗುಪ್ತಚಾರಿಕೆಯ ಕೇಂದ್ರಗಳನ್ನಾಗಿ ಮಾಡಿಕೊಂಡಿರುವುದು; ಜತೆಗೆ ಹಿಂದೂ - ಮುಸ್ಲಿಂ ಪ್ರೇಮ ಸಮಾಗಮ, ದ್ವೇಷ. ಮತಾಂತರ, ಏಕೀಕರಣ–ಮಂತ್ರ–ತಂತ್ರ... ಇಂಥವೆಲ್ಲ ಕೇವಲ ವಿಜಯನಗರ ಕಾಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇಪ್ಪತ್ತನೇ ಶತಮಾನದ ಈ ವಿಜ್ಞಾನಯುಗದಲ್ಲೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಡೆಯುತ್ತಿರುವ ಕೃತ್ಯಗಳೇ ಆಗಿವೆ".

ಕಾದಂಬರಿಯಲ್ಲಿನ ಘಟನಾವಳಿಗಳು ಐತಿಹಾಸಿಕವೆ? ಕಾಲ್ಪನಿಕವೆ? ಇವೆರಡರ ಸಮೇಳ ಈ ಕಾದಂಬರಿಯ ಜಾಯಮಾನವಾಗಿದೆ. ಇತಿಹಾಸದ ಘಟನಾವಳಿಗಳ ನಿರೂಪಣೆಗಿಂತ ಪರಿಸ್ಥಿತಿಯ ಉಲ್ಬಣಾವಸ್ಥೆಯಲ್ಲಿ ಹೀಗೆ ಘಟನಾವಳಿಗಳು ನಡೆದಿರಬಹುದೆಂಬ ಊಹನಾತ್ಮಕ ಚಿತ್ರ ಕೊಡುವುದು ಕಾದಂಬರಿಕಾರರ ಉದ್ದೇಶ. ಈ

ಊಹನಾತ್ಮಕ ಘಟನೆಗಳು ಎಷ್ಟರ ಮಟ್ಟಿಗೆ ವಾಸ್ತವವಾಗಿವೆ, ಸಾಹಿತ್ತಿಕ ಗುಣಗಳನ್ನು ಪಡೆದಿವೆ ಎಂಬುದು ಇಲ್ಲಿ ಮುಖ್ಯ. ಇತಿಹಾಸದ ಎಳೆಗಳನ್ನು ನಾವಿಲ್ಲಿ ಕಾಣುವೆವೇ ಹೊರತು ನೈಜ ಇತಿಹಾಸವನ್ನಲ್ಲ. ಕಾದಂಬರಿಕಾರರು ದೇಶಕ್ಕಾಗಿ ನಮ್ಮ ಹಿಂದಿನವರು ಹೇಗೆ ದುಡಿದರು, ಮಡಿದರು ಎಂಬುದನ್ನು ರೋಚಕವಾಗಿ ಇಲ್ಲಿ ತಿಳಿಸಿಕೊಡಲು ಪ್ರಯತ್ನಿಸಿರುವಂತಿದೆ. ದೇಶವನ್ನು ರಕ್ಷಿಸಲು ಗುರುಮಲ್ಲಣ್ಣನು ನಡೆಸಿದ ಗುಪ್ತಚರ್ಯೆಗಳು, ಸಾಹಸಗಳು ಇಂದಿನ ಗೂಢಚಾರರಿಗೇನೂ ಕಡಿಮೆಯಿಲ್ಲ. ಶತ್ರುಗಳ ಬಾಯಿಂದ ಸತ್ಯವನ್ನು ಹೊರತೆಗೆಯಲು ನಡೆಸುವ ಚಿತ್ರಹಿಂಸೆ ಇಂದಿನದಕ್ಕೇನೂ ಕಡಿಮೆಯಿಲ್ಲ. ಸೂಳೆ ಬೀದಿಯಲ್ಲಿನ ಹೆಸರಾಂತ ಸೂಳೆಯರ ಗೂಢಚರ್ಯೆ, ಅಹಮದ್‌ಖಾನನ ಸ್ವಮತಾಭಿಮಾನ ಹಾಗೂ ರಾಷ್ಟ್ರಪ್ರೇಮ, ಅಹಮದ್‌ಖಾನನಿಂದ ಅಪಹರಿಸಲ್ಪಟ್ಟು ಪ್ರಾಣಭೀತಿಗೆ ಒಳಗಾದ ಮುಗ್ಧೆ ಆಯೇಷಾ ಅವನ ಹಿಂದೂ ವಿರೋಧೀ ಕಾರ್ಯಾಚರಣೆಗಳಿಗೆ ಒಲ್ಲದ ಮನಸ್ಸಿನಿಂದ ಅವಕಾಶ ಮಾಡಿಕೊಡುವುದು, ಹೂವಿನ ಹನುಮಯ್ಯ ಹಾಗೂ ಅಮೀನಾ ಹುಟ್ಟಿನಲ್ಲಿ ಹಿಂದೂ – ಮುಸ್ಲಿಂ ಆಗಿದ್ದರೂ ಪರಸ್ಪರ ಗಾಢವಾಗಿ ಪ್ರೇಮಿಸಿದುದು – ಇವೇ ಮೊದಲಾದವು ಕಾದಂಬರಿಯಲ್ಲಿ ಸಹಜವಾಗಿ ಬಂದಿವೆ.

ಇತಿಹಾಸವನ್ನು ಸಮಕಾಲೀನ ಬದುಕಿನೊಂದಿಗೆ ತೂಗಿ ನೋಡುವ ಹೊಸ ದೃಷ್ಟಿ ಕಾದಂಬರಿಯಲ್ಲಿನ ಮೆಚ್ಚಬಹುದಾದ ಪ್ರಧಾನ ಗುಣ. ಪತ್ತೇದಾರಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಕ್ಷಣಕ್ಷಣಕ್ಕೂ ಮೀಟುವ ಕುತೂಹಲ, ಶತ್ರುಗಳ ಕಾರಾಸ್ಥಾನ ಹಾಗೂ ಅವುಗಳ ಅಭೇದ್ಯ ರಹಸ್ಯ ಸ್ಥಾನವನ್ನು ಭೇದಿಸುವಲ್ಲಿ ಪ್ರಕಟವಾಗುವ ವೀರರ ಧೈರ್ಯ ಸ್ಥೈರ್ಯಗಳು, ಅವರು ನಡೆಸುವ ಕೆಚ್ಚೆದೆಯ ಹೋರಾಟಗಳು ಈ ಕಾದಂಬರಿಯಲ್ಲಿಯೂ ಮೈಗೂಡಿದೆ. ಈ ಕಾರಣಕ್ಕಾಗಿಯೇ ಈ ಕಾದಂಬರಿ ಸಾಹಸಪ್ರಿಯರ ಕುತೂಹಲಾಸಕ್ತಿಯನ್ನು ಬಿಟ್ಟೂ ಬಿಡದಂತೆ ಸೆರೆ ಹಿಡಿದಿವೆ. ಸರಾಗವಾಗಿ ಓದಿಸಿಕೊಂಡು ಹೋಗುವ ವಿಶಿಷ್ಟ ಗುಣ ಈ ಕಾದಂಬರಿಯ ಹೆಚ್ಚಳದಲ್ಲಿ ಒಂದು.

—ಎಸ್. ವಿದ್ಯಾಶಂಕರ

ತರಾಸು ಅವರ ದುರ್ಗಾಸ್ತಮಾನ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಒಂದು ಮಹತ್ವಾಕಾಂಕ್ಷೆಯ ಕಾದಂಬರಿ. ಚಿತ್ರದುರ್ಗದ ಇತಿಹಾಸವನ್ನು ಕುರಿತಂತೆ ತರಾಸು ಅವರು ಬರೆದ ಕಾದಂಬರಿಗಳಲ್ಲಿ ಇದು ಹತ್ತನೆಯದು ಮಾತ್ರವಲ್ಲ ತೀರಾ ವಿಶಿಷ್ಟವಾದ ಕೃತಿ ಎಂಬುದರಲ್ಲಿ ಎರಡುಮಾತಿಲ್ಲ ಈ ಕೃತಿಯ ಹೆಸರೇ ಸೂಚಿಸುವಂತೆ ಇದು 'ದುರ್ಗದ ಅಸ್ತಮಾನ' ವನ್ನು ಕುರಿತದ್ದು. ಚಿತ್ರದುರ್ಗವನ್ನು ಆಳಿದ ಕಡೆಯ ಪಾಳಯಗಾರ ಮದಕರಿನಾಯಕನ ಕಥೆಯನ್ನು ಈ ಕೃತಿ ಚಿತ್ರಿಸುತ್ತದೆ.

ಮದಕರಿನಾಯಕ ಇಲ್ಲಿ ಉದಾತ್ತ ವೀರನಾಗಿ ಮೆರೆದಿದ್ದಾನೆ. ಆದರ್ಶ ರಾಜನಾಗಿದ್ದಾನೆ.

ತಾವು ಸಂಗ್ರಹಿಸಿದ ವಿಪುಲವಾದ ಐತಿಹಾಸಿಕ ಸಾಮಗ್ರಿಗಳನ್ನು ಔಚಿತ್ಯಪರಿತು ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ಬಳಸಿಕೊಳ್ಳುವಲ್ಲಿ, ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವಲ್ಲಿ ತರಾಸು ನಿಷ್ಣಾತರು. ಅಂದಿನ ಐತಿಹಾಸಿಕ ಪ್ರಪಂಚವನ್ನು ಆಳವಾಗಿ ಒಳಹೊಕ್ಕು ನೋಡುವ ಅವರ ಸೂಕ್ಷ್ಮದೃಷ್ಟಿ ; ಐತಿಹಾಸಿಕ ಮೌಲ್ಯಗಳ ಬಗೆಗೆ ಅವರು ನಡೆಸುವ ಚಿಂತನ-ಮಂಥನ ಇವು ಓದುಗರನ್ನು ಗಂಭೀರ ಚಿಂತನೆಗೆ ಎಳೆಯುವಂತೆ ಮಾಡುತ್ತವೆ. ಅರಮನೆಯಲ್ಲಿ ನಡೆಯುವ ಕುತಂತ್ರಗಳು, ಪಿತೂರಿಗಳು, ಕಪಟವ್ಯೂಹಗಳು–ದುರ್ಗವನ್ನು ಅವಸಾನಕ್ಕೊಯ್ಯಲು ಹೇಗೆ ಕಾರಣವಾದುವು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ ತರಾಸು. ಸತ್ಯ, ತ್ಯಾಗ, ಸ್ವಾಮಿನಿಷ್ಠೆ, ಬಲಿದಾನ, ಛಲ–ಮೊದಲಾದ ಮೌಲ್ಯಗಳು ಆ ಕಾಲಕ್ಕೆ ಅರ್ಥಪೂರ್ಣ ವಾಗಿದ್ದು ದುರ್ಗದ ನಾಶದೊಂದಿಗೆ ಅವೂ ಅರ್ಥಹೀನವಾದುವೆಂಬು ದನ್ನು ಈ ಕೃತಿಯುದ್ದಕ್ಕೂ ಸಾಬೀತು ಪಡಿಸುತ್ತದೆ.

ಕಸ್ತೂರಿ ರಂಗಪ್ಪ ಗಂಡುಸಂತಾನವಿಲ್ಲದೆ ಸಾಯುತ್ತಾನೆ. ಅವನ ಮರಣಾ ನಂತರ ಪಾಳೆಯಗಾರ ಮನೆತನದ ದೂರದ ಸಂಬಂಧಿಯಾದ ಹನ್ನೆರಡು ವರ್ಷದ ಮದಕರಿನಾಯಕ ಪಟ್ಟಕ್ಕೆ ಬರುತ್ತಾನೆ, ಅವನಿಗೆ ರಾಜೋಚಿತವಾದ ವಿದ್ಯಾಭ್ಯಾಸ ವಾಗುತ್ತದೆ. ತನ್ನ ಚಾಣಾಕ್ಷ ತನ, ಮುತ್ಸದ್ದಿ ತನದಿಂದಾಗಿ ಜನಪ್ರಿಯ ದೊರೆ ಯಾಗುತ್ತಾನೆ. ವೀರನೂ, ನಿಷ್ಠನೂ ಆದ ಅವನು ತಾಯ್ನಾಡಿಗಾಗಿ ನಿಷ್ಠೆಯಿಂದ ಹೋರಾಡುತ್ತಾನೆ. ಚಿತ್ರದುರ್ಗದ ಮೇಲೆ ದಂಡೆತ್ತಿಬಂದ ಹೈದರಾಲಿಗೆ ಮಣಿಯದೆ ಅವನನ್ನು ಎದುರಿಸಿ ನಿಲ್ಲುತ್ತಾನೆ. ಆದರೆ ಹೈದರಾಲಿಯ ತಂತ್ರ ಹಾಗೂ ಚಿತ್ರ ದುರ್ಗದ ಕೆಲವು ಸ್ವಾರ್ಥಿ ಅಧಿಕಾರಿಗಳು ತಮ್ಮ ಕುಟಿಲತೆಯಿಂದಾಗಿ, ಆಮಿಷ ದಿಂದಾಗಿ ನಾಯಕನನ್ನು ಬಿಟ್ಟು ಹೈದರಾಲಿಯನ್ನು ಸೇರಿದುದರ ಪರಿಣಾಮವಾಗಿ ದುರ್ಗ ಹೈದರಾಲಿಯ ವಶವಾಗುತ್ತದೆ. ಮದಕರಿನಾಯಕ ವೀರಾವೇಶದಿಂದ ಹೋರಾಡಿ ವೀರಮರಣವನ್ನಪ್ಪುತ್ತಾನೆ. ಈ ಐತಿಹಾಸಿಕ ಘಟನೆಯ ಸುತ್ತ ತಮ್ಮ ಕಲಾತ್ಮಕತೆ, ಕಾವ್ಯಮಯವಾದ ಭಾಷೆ, ರಾಜಕೀಯ ವ್ಯವಹಾರಗಳ ಕುಶಲತೆ_ಇವೇ ಮೊದಲಾದ ಕುಸುರಿ ಕೆಲಸವನ್ನು ನಡೆಸಿ ತರಾಸು ಅವರು ಗಾತ್ರದಲ್ಲಿ ಮಾತ್ರವಲ್ಲ ಮಹತ್ತಿನಲ್ಲಿಯೂ ವಿಶಿಷ್ಟವಾದ, ಸುಂದರವಾದ ಕೃತಿಯನ್ನು ನೀಡಿದ್ದಾರೆ. ಆರನೂರ ತೊಂಬತ್ತಾರು ಪುಟಗಳಲ್ಲಿ ಈ ಕೃತಿ ಹರಡಿಕೊಂಡಿದೆ. ಮುಖಪುಟ ಮತ್ತು ಇನ್ನಿತರ ಒಳಚಿತ್ರಗಳು ಆಕರ್ಷಣೀಯವಾಗಿವೆ. ಅಚ್ಚುಕಟ್ಟಾಗಿ ಮುದ್ರಣ ಗೊಂಡಿರುವುದು ಈ ಕೃತಿಯ ಇನ್ನೊಂದು ಪ್ಲಸ್ ಪಾಯಿಂಟ್.

ಪುಟದಿಂದ ಪುಟಕ್ಕೆ ಬೆಳೆಯುತ್ತಾ ಹೋಗುವ ಮದಕರಿನಾಯಕನ ಪಾತ್ರವನ್ನು ತರಾಸು ಕಣ್ಣೆದುರು ನಿಲ್ಲಿಸುತ್ತಾರೆ. ನಾಯಕನ ಪಾತ್ರದಂತೆಯೇ ಅಪೂರ್ವವಾಗಿ ಚಿತ್ರಿತವಾಗಿರುವ ಮತ್ತೊಂದು ಪಾತ್ರ ಹೈದರಾಲಿಯದು. ಹೈದರಾಲಿಗೆ ದುರ್ಗವು ವಾದದ್ದು, ಸವಾಲಾಗಿ ನಿಂತದ್ದು ದುರ್ಗದಕೋಟೆ. ಅವನನ್ನು ಸೆಣೆಸಿ ನಿಂತವನು ಮದಕರಿನಾಯಕ. ತನ್ನ ಹಲವಾರು ಪ್ರಯತ್ನದಲ್ಲಿ ಸೋಲನ್ನನುಭವಿಸಿದ ಹೈದರಾಲಿಗೆ, ದುರ್ಗವನ್ನು ವಶಪಡಿಸಿಕೊಳ್ಳುವುದು ಮತ್ತು ನಾಯಕನನ್ನು ಗೆಲ್ಲುವುದು ಸಮಸ್ಯೆಯಾಗಿ ಕಾಡಿತು. ಸವಾಲಾಯಿತು. ಪ್ರತಿಷ್ಠೆಯ ಕುರುಹಾಯಿತು. ರಾಜಕೀಯ ಚದುರಂಗದಾಟದಲ್ಲಿ ನಡೆಯುವ ಸೋಲು–ಗೆಲುವಿನ ಕಣ್ಣುಮುಚ್ಚಾಲೆ ರಾಜಕೀಯ ಒಳಸುಳಿಗಳು, ಪಿತೂರಿಗಳು, ಕುತಂತ್ರ, ಕಪಟತನ–ಇವೇ ಮೊದಲಾದುವುಗಳ ವಾಸ್ತವಿಕ ಚಿತ್ರಣವನ್ನು ಕಟ್ಟಿಕೊಡುವುದರಲ್ಲಿ ಈ ಕೃತಿ ಸಫಲವಾಗಿದೆ.

—ಎನ್. ಎ. ವಿಮಲ

o o o o o

ಮಹಿಳೆಯರು ಬರೆದ ಕಾದಂಬರಿಗಳು

ಕಾದಂಬರಿಯ ದೃಷ್ಟಿಯಿಂದ ನೋಡಿದಾಗ, ಮಹಿಳೆಯರು ಬರೆದ ಕಾದಂಬರಿಗಳ ಬೆಳೆ ವಿಪುಲವಾಗಿದೆ. ಈ ವರ್ಷದ ಒಟ್ಟು ಮಹಿಳೆಯರ ಕಾದಂಬರಿಗಳನ್ನು ಸಮೀಕ್ಷಿಸಿದಾಗ ಅನೇಕ ಅಂಶಗಳು ಕಂಡುಬರದೆ ಏಕತಾನತೆ ಇರುವುದು ಗೋಚರಿಸಿದೆ. ಅಂತರ್‌ಜಾತಿಯ ವಿವಾಹ, ವಿಧವಾವಿವಾಹ, ಕೌಟುಂಬಿಕ ಸಮಸ್ಯೆಗಳು, ಲೋಭಿ ಶ್ರೀಮಂತರು, ಉದಾರಿ ಬಡವರು ಅಸಹಾಯಕ ಹೆಣ್ಣು, ಠೀವಿಯ ಗಂಡು ಪಾತ್ರಗಳು ಇವುಗಳ ಸುತ್ತ ಕಥಾವಸ್ತುವನ್ನು ಹೆಣೆಯಲಾಗಿದೆ. ಅನೇಕ ಲೇಖಕಿಯರ ಬರವಣಿಗೆ ತೀರಾ ಅಪಕ್ವವಾಗಿದ್ದು ತಾವೂ ಕಾದಂಬರಿ ಬರೆದು ದಿನಬೆಳಗಾಗುವುದರಲ್ಲಿ ಪ್ರಸಿದ್ಧರಾಗಬೇಕೆಂಬ ಅವರುಗಳ ವಾಂಛೆ ಎದ್ದು ಕಾಣುತ್ತದೆ. ಲೇಖಕಿಯರ ಕಾದಂಬರಿಗಳನ್ನು ವಿಮರ್ಶಕರು ಹೀನಾಯವಾಗಿ ಕಾಣುತ್ತಾರೆ ಎಂಬ ಮಾತಿನಲ್ಲಿ ಹುರುಳಿಲ್ಲದಿಲ್ಲ. ಒಂದೇ ಮಾದರಿಯ, ಸಪ್ಪೆ ಬರವಣಿಗೆಯ, ಸಾಮಾನ್ಯ ಕಥಾವಸ್ತುವಿನ ಕೃತಿಗಳನ್ನು ಲೇಖಕಿಯರು ದಿನಕ್ಕೆ ಹತ್ತು ಕಾದಂಬರಿಯಂತೆ ಬರೆದು ರಾಶಿರಾಶಿ ಹಾಕಿದರೆ ವಿಮರ್ಶಕರೇನು ಸ್ವತಃ ಓದುಗರೇ ಅವನ್ನು ತಿರಸ್ಕರಿಸುತ್ತಾರೆ. ಮಧ್ಯಮವರ್ಗದ ಮಹಿಳೆಯರನ್ನು ತಮ್ಮ ಕಾದಂಬರಿಗಳು ಆಕರ್ಷಿಸಲೆಂದು, ನಾನಾತಂತ್ರಗಳನ್ನು ಪ್ರಯೋಗಿಸಿ ವಿಫಲರಾದ ಅನೇಕ ಲೇಖಕಿಯರಿದ್ದಾರೆ. ಮೌಲ್ಯದ ಕಡೆಗೆ ಯಾವ ಲೇಖಕಿಯೂ ಗಮನಕೊಡದೆ ಸುಮ್ಮನೆ ಬರಹದ ಸಂಖ್ಯೆಯನ್ನು ಹೆಚ್ಚಿಸುತ್ತಿರುವುದು ವಿಷಾದನೀಯವಾದ ಸಂಗತಿಯಾಗಿದೆ. ಇದರಲ್ಲಿ ಹೆಸರಾಂತ ಲೇಖಕಿಯರೂ ಸೇರಿದ್ದಾರೆ. ಬಿ. ಟಿ. ಲಲಿತಾನಾಯಕರ 'ನೆಲೆ–ಬೆಲೆ', ಸಾಯಿಸುತೆಯವರ 'ವಸಂತದ

ಚಿಗುರು, ವಾಣಿಯವರ 'ಆಲೆ ನೆಲೆ', ಎಂ. ಕೆ. ಇಂದಿರಾರವರ 'ತಾಳಿದವರು' ಮುಂತಾದ ಬೆರಳೆಣಿಕೆಯಷ್ಟು ಕಾದಂಬರಿಗಳು ವಿಮರ್ಶಾ ಮೌಲ್ಯದ ದೃಷ್ಟಿಯಿಂದ ಉತ್ತಮ ದರ್ಜೆಯ ಗಡಿಯನ್ನು ಬಹುಕಷ್ಟದಿಂದ ತಲಪುತ್ತವೆ.

ವಸಂತದ ಚಿಗುರು : ಸಾಯಿಸುತೆ.

ಐ.ಎ.ಎಸ್., ಪದವಿಗಾಗಿ ಕಷ್ಟಪಟ್ಟು ಓದಿಸಿ. ತಮ್ಮ ಮಗಳು ಉಮಾಳನ್ನು ಮದುವೆಯಾಗುತ್ತಾನೇನೋ ಮಹೇಶ ಎಂದುಕೊಂಡಿರುತ್ತಾರೆ ಕಮಲಾಕ್ಷಮ್ಮ ದಂಪತಿಗಳು. ಆದರೆ ಆದದ್ದೇ ಬೇರೆ. ಮಹೇಶ ಶ್ರೀಮಂತಳಾದ ಸುಷ್ಮಾಳನ್ನು ವಿವಾಹವಾದಾಗ ಉಮಾಳ ತಂದೆ ನೇಣು ಹಾಕಿಕೊಂಡು ಸಾಯುತ್ತಾರೆ. ಅವರಮ್ಮನೂ ಎದೆಯೊಡೆದು ಮಡಿದಾಗ ಉಮಾ ಅನಾಥೆಯಾಗುತ್ತಾಳೆ. ಬೇಸರ ಕಳೆಯಲು ಸಂಗೀತ ಕಲಿಯುತ್ತಾಳೆ. ಇವಿಷ್ಟು 'ಮಂದಾರ ಕುಸುಮ' ಕಾದಂಬರಿಯ ಕಥಾವಸ್ತು. ಮಂದಾರ ಕುಸುಮ ಕಾದಂಬರಿಯು ಮೊದಲನೇ ಭಾಗವಾಗಿದೆ, ಈಗ ಅದರ ಮುಂದಿನ ಕಥಾಭಾಗವನ್ನು 'ವಸಂತದ ಚಿಗುರು' ಎಂಬ ಕಾದಂಬರಿಯಲ್ಲಿ ಸಾಯಿಸುತೆಯವರು ನಿರೂಪಿಸಿದ್ದಾರೆ. ವಸಂತದ ಚಿಗುರಿನಂತೆ ಉಮಾ ಸುಂದರನೂ, ದೃಢಕಾಯನೂ, ಶ್ರೀಮಂತನೂ ಆದ ಸಂಜಯನ ಕೈಹಿಡಿದು ನಳನಳಿಸುತ್ತಾಳೆ. ರಾಜೇಂದ್ರಕುಮಾರರ ಪತ್ನಿ ಮಣಿ ತನ್ನ ಗಂಡ ಲೀಲಾವತಿ ಯೆಂಬುವಳ ಸುಳಿಯಲ್ಲಿ ಸಿಕ್ಕಿರುವುದನ್ನು ಕಂಡು, ಮುನಿಸಿನಿಂದ ಬ್ಲೂಫಿಲಂಗಳ ಚಟುವಟಿಕೆಯಲ್ಲಿ ತೊಡಗಿ ಕೊನೆಗೆ ಕಾರು ಅಪಘಾತದಲ್ಲಿ ಮಡಿಯುತ್ತಾಳೆ. ಸುಷ್ಮಾಳಿಗೆ ಮೂರು ಬಾರಿಯೂ ಮಗು ಹುಟ್ಟಿ ಸತ್ತಾಗ ಮಹೇಶ ಮಾವ ರಾಜೇಂದ್ರಕುಮಾರರಂತೆ ಅಧೀರನಾಗುತ್ತಾನೆ. ಮನೋಹರ್, ಕಪಿಲ, ಶೈಲ ಪಾತ್ರಗಳನ್ನು ಲೇಖಕಿ ಉಮಾಳ ಸಂಗೀತ ಸಾಧನೆಯನ್ನು ತೋರಿಸಲೋಸುಗ ಬಳಸಿಕೊಂಡಿದ್ದಾರೆ. ಬಾಳಿನುದ್ದಕ್ಕೂ ಕಹಿಯುಂಡು ಮಹೇಶನನ್ನು ಪ್ರೀತಿಸಿ ಅವನನ್ನೂ ಲಗ್ನವಾಗದೆ, ತನಗೆ ಮದುವೆಯೇ ಬೇಡ ಎಂದುಕೊಂಡ ಉಮಾಳಿಗೆ ಬಲವಂತದಿಂದ ಗೌಡರು, ರಾಜೇಂದ್ರಕುಮಾರ್, ಸಂಜಯನೊಡನೆ ಮದುವೆ ಮಾಡಿ ಸುತ್ತಾರೆ, ಸಂಜಯನಿಗೆ ಉಮಾ ಮಹೇಶರ ನಡವಳಿಕೆಯ ಬಗ್ಗೆ ಸಂಶಯ ಬಂದರೂ ಕೊನೆಗೆ ಅದು ಮಂಜಿನಂತೆ ಕರಗಿಹೋಗುತ್ತದೆ. ಕಾದಂಬರಿ ಸರಸರನೆ ಓದಿಸಿಕೊಂಡು ಹೋಗಲು ಕಾರಣವೆಂದರೆ ಶ್ರೀಮತಿ ಸಾಯಿಸುತೆಯವರ ಭಾಷಾಲಾಲಿತ್ಯ. ಅತ್ಯಂತ ಜನಪ್ರಿಯ ಕಾಂಬರಿಗಾರ್ತಿಯೆಂದು ಅವರು ಹೆಸರು ಪಡೆಯಲು ಇದೂ ಒಂದು ಕಾರಣವಾಗಿರಬಹುದು. 'ಸೀಳಾಯಿತು' ಎಂಬ ಪದವನ್ನು ಲೇಖಕಿ ಪದೇ ಪದೇ ಬಳಸುವುದು ಮೊಸರನ್ನದಲ್ಲಿ ಕಲ್ಲು ಸಿಕ್ಕಂತಾಗುತ್ತದೆ.

ಬಿಳಿಮೋಡಗಳು : ಸಾಯಿಸುತೆ

ಬಿಳಿಯ ಮೋಡಗಳು ಎಂದೂ ಮಳೆ ಸುರಿಸುವುದಿಲ್ಲ ಕಪ್ಪು ಮೋಡಗಳೇ ಮಳೆಸುರಿಸುವುದು ಎಂಬ ಮಾತಿನಂತೆ ಕಷ್ಟಪಟ್ಟು ಆದರ್ಶದ ಬೆನ್ನು ಹಿಡಿದಯುವಕನ ಪಾಡೇನೆಂಬುದನ್ನು ಲೇಖಕಿ ಸೊಗಸಾಗಿ ತೋರಿಸಿಕೊಟ್ಟಿದ್ದಾರೆ. ಜಮೀಂದಾರರ ಮಗನಾದ ರಾಜೀವ ಯಾರೆಷ್ಟು ಹೇಳಿದರೂ ಕೇಳದೆ ಮದುವೆಯಾಗುವುದು ತಾನು ಮೆಚ್ಚಿದ ರಾಗಿಣಿಯನ್ನೇ. ರಾಗಿಣಿಯ ತಾಯಿ ಪರಿಮಳಮ್ಮ ತಮ್ಮ ಅಹಂಭಾವದಿಂದ ರಾಜೀವನನ್ನು ನಿರಾಕರಿಸುತ್ತಾರೆ. ರಾಗಿಣಿ ಬಡತನದಲ್ಲೂ, ಒಲಿದವನಿದ್ದರೆ ಸುಖವಿದೆ ಎಂಬ ತತ್ವವನ್ನರಿತು ರಾಜೀವನ ಕೈಹಿಡಿದು ಸುಖಿಯಾಗುತ್ತಾಳೆ. ಅವಳಕ್ಕ ವಾಣಿ ತಾಯಿಯ ಆಸೆಯಂತೆ ಶ್ರೀಮಂತ ಯುವಕ ಕಾರ್ತೀಕನನ್ನು ಮದುವೆಯಾಗಿ ಸುಖಪಡದೆ ನರಳಿ ಕುಂದಿಹೋಗುತ್ತಾಳೆ. ಶ್ರೀದೇವಿಯಮ್ಮ, ಅನಂತರಾಂ, ರಾಮನಾಥ ಮೊದಲಾದ ಪಾತ್ರಗಳೂ ಕಾದಂಬರಿಗೆ ಪೋಷಕವಾಗಿ ಬಂದಿವೆ. ಜನರ ಮಾನಸಿಕ ತೊಳಲಾಟದ ಹೃದಯಂಗಮ ವರ್ಣನೆ ಈ ಕಾದಂಬರಿಯಲ್ಲಿ ಮೂಡಿದೆ.

ತಾಳಿದವರು : ಎಂ. ಕೆ. ಇಂದಿರಾ.

'ತಾಳಿದವರು ಬಾಳಿಯಾರು' ಇದೊಂದು ಹಳೆಯ ಗಾದೆ. ಎಂ.ಕೆ. ಇಂದಿರಾರವರ 100 ಪುಟಗಳ 'ತಾಳಿದವರು' ಕಾದಂಬರಿಯಲ್ಲಿ ಈ ತತ್ವ ಎದ್ದುತೋರಿದೆ. ಹಳೆಯ ಅವಿಭಕ್ತ ಕುಟುಂಬಗಳ ಚಿತ್ರಣ ಇಲ್ಲಿದೆ. ಆಸ್ತಿ ಹಂಚಿ ಹೋಗದಿರಲು ಅಕ್ಕ-ತಂಗಿ, ಅಣ್ಣ-ತಮ್ಮಂದಿರನ್ನು ಲಗ್ನವಾಗುತ್ತಾರೆ. ತಮ್ಮ ಸತ್ತಾಗ ಅವನ ಹೆಂಡತಿಯನ್ನೂ-ಮಕ್ಕಳನ್ನೂ ಸಾಕುವ ನೆಪದಲ್ಲಿ ಇಡೀ ಆಸ್ತಿಯನ್ನು ದೊಡ್ಡವನು ನುಂಗಿಹಾಕುತ್ತಾನೆ. ತಮ್ಮನ ಹೆಂಡತಿ ಮಕ್ಕಳನ್ನು ಬೇರೆ ಮನೆ ಮಾಡಿ ಇಡುತ್ತಾನೆ. ಬಹುಕಷ್ಟದಿಂದ ಮಗನನ್ನೂ, ಮಗಳನ್ನೂ ಸಾಕಿದ ತಾಯಿ ಎಷ್ಟೇ ಕಷ್ಟ ಬಂದರೂ ತಾಳಿಕೊಳ್ಳುತ್ತಾಳೆ. ಕಾಲಚಕ್ರ ತಿರುಗಿದಂತೆ ಅವರಿಗೆ ಸುಖ ಬರುತ್ತದೆ. ಮಗಳನ್ನು ಎರಡನೆಯ ಮದುವೆ ಮಾಡಿಕೊಳ್ಳುವ ಅಳಿಯನಿಗೆ ಕೊಡುತ್ತಾರೆ. ಆದರೂ ಮಗಳು ಸುಖವಾಗಿರುವುದಿಲ್ಲ. ಮಗನಿಗೆ ಯಾರದೋ ಬಲವಂತದ ಮೇಲೆ ಶ್ರೀಮಂತ ಕುರೂಪಿ ಹುಡುಗಿಯನ್ನು ಕಟ್ಟುತ್ತಾರೆ. ಮಗನ ಸುಖಕ್ಕೆ ಸೊನ್ನೆಯಂತೆ ಸೊಸೆ ತವರಿನಲ್ಲೇ ಹೆಚ್ಚು ದಿನ ಇರುತ್ತಾಳೆ. ತನ್ನ ಅತ್ತೆ ಸತ್ತಾಗ ಬರುತ್ತಾಳೆ. ಅವಳ ಮಕ್ಕಳ ಪಾಡೂ ಹಾಗೇ ಆಯಿತು. ಅಣ್ಣ-ತಂಗಿಯನ್ನು ಒಂದೇ ಮನೆಗೆ ವಿವಾಹ ಮಾಡಿಕೊಡುತ್ತಾರೆ. ಆ ಸೊಸೆ-ಅಳಿಯಂದಿರು ರಾಕ್ಷಸರಂತೆ ವರ್ತಿಸುತ್ತಾರೆ. ಹೀಗೆ ಜೀವನವೆಲ್ಲಾ ಕಷ್ಟಗಳನ್ನನುಭವಿಸಿ ತಾಳಿ-ತಾಳಿ ಸಹನೆಯಿಂದ ಈ ಕಾದಂಬರಿಯ ನಾಯಕ ಹಣ್ಣಾಗುತ್ತಾನೆ. ಎಂ.ಕೆ. ಇಂದಿರಾರವರ ಹಸ್ತದಿಂದ ಬಂದಿರುವ ಈ ಕಾದಂಬರಿ ಉತ್ತಮ ಮೌಲ್ಯಗಳಿಂದ ಕೂಡಿದ್ದು

ಇಂದಿನವರು ಓದಿ ತಿಳಿದು ಕೊಳ್ಳುವಂತೆ ಇದೆ. ಇಲ್ಲಿಯು ಭಾಷೆ ಅಚ್ಚುಕಟ್ಟಾಗಿ ಮೂಡಿದೆ.

ಹಸಿರು ತೀರ : ನೀರಜಾ ಬಾಪು.

ನೀರಜಾ ಬಾಪೂರವರ ಮೊದಲ ಕಾದಂಬರಿ 'ಹಸಿರುತೀರ,' ಲೇಖಕಿ ಇನ್ನೂ ಹೆಚ್ಚು ಬರೆದಾಗ ಪಕ್ವತೆ ಬರುತ್ತದೆಂದು ಹೇಳಬಹುದು. ಕುರೂಪಿ ಶ್ಯಾಮಲಾ ತಾಯಿ ಸತ್ತ ನಂತರ ಮಲತಾಯಿ ಅಜ್ಜಿಯರಿಂದ ಸಾಕಷ್ಟು ಕಷ್ಟಗಳಿಗೆ ಒಳಪಡುತ್ತಾಳೆ. ಕೊನೆಗೆ ಗಂಡಿನವರೆದುರು ಅವಳನ್ನು ಅಡಿಗೆಯವಳೆಂದೂ ತಂದೆತಾಯಿಗಳು ಜರಿಯು ತ್ತಾರೆ. ಮಂಗಳೂರಿನ ಶ್ರೀಮಂತೆ ರಮಾಬಾಯಿಯ ಮೊಮ್ಮಗ ಶ್ಯಾಮಲಾಳನ್ನು ಕೈಹಿಡಿಯುತ್ತಾನೆ. ಅಲ್ಲಿಯ ಆಯುರ್ವೇದಿ ಪಂಡಿತರಿಂದ ಅವಳ ಖಾಯಿಲೆ ದೂರವಾಗುತ್ತದೆ. ಮುದ್ದಿನಿಂದ ಸಾಕಿದ ಶ್ಯಾಮಲಾಳ ಮಲತಂಗಿ ತಾಯಿಯ ತಮ್ಮನೊಡನೆ ಓಡಿ ಹೋಗುತ್ತಾಳೆ. ಕುರೂಪಿಯಾದರೂ ಒಂದು ದಡ ಸೇರಿ ಶ್ಯಾಮಲಾ ತನ್ನ ಬಾಳನ್ನು ಹಸಿರಾಗಿಸಿಕೊಳ್ಳುವುದೇ ಕಾದಂಬರಿಯ ವಸ್ತು. ಕಾದಂಬರಿಯ ಮಧ್ಯೆ ಮಧ್ಯೆ ಬರುವ ಲೇಖಕಿಯ ಕೆಲವು ಕಲ್ಪನಾ ಪ್ರಸಂಗಗಳು ಮಿಂಚಿ ಸದಾಕಾಲ ನೆನಪಿನಲ್ಲಿ ಹಸಿರಾಗುಳಿಯುತ್ತದೆ.

ಸುಳಿಗೆ ಸಿಕ್ಕವರು ; ವಿಶಾಲಾಕ್ಷಿ ದಕ್ಷಿಣಾಮೂರ್ತಿ.

ಸಂಶಯ ಬಹಳ ಕೆಟ್ಟದ್ದು. ಗಂಡಿಗಾಗಲಿ, ಹೆಣ್ಣಿಗಾಗಲಿ ಸಂಶಯ ಬಂದರೆ ಅವರು ಏನನ್ನು ಮಾಡಲೂ ಹೇಸುವುದಿಲ್ಲ. ಈ ಅಂಶ 'ಸುಳಿಗೆ ಸಿಕ್ಕವರು' ಕಾದಂ ಬರಿಯಲ್ಲಿ ಕಂಡುಬರುತ್ತದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಕ್ಕಿರುವ ಅರವಿಂದ ಒಮ್ಮೆ ಬಸ್ಸಿನಲ್ಲಿ ಬರುವಾಗ ವಾಣಿ ಎಂಬ ಸುಂದರಿಯನ್ನು ನೋಡು ತ್ತಾನೆ. ವಿವಾಹವಾದರೆ ಅವಳನ್ನೇ ಎಂದುಕೊಳ್ಳುತ್ತಾನೆ. ವಾಣಿ ಎಂ. ಎ., ಇಂಗ್ಲೀಷ್ ಲಿಟರೇಚರ್ ಓದುವ ಹುಡುಗಿ. ವಾಣಿ ರಜಾದಲ್ಲಿ ದೊಡ್ಡಮ್ಮನ ಮನೆಗೆ ಬಂದಿರುತ್ತಾಳೆ. ಅರವಿಂದನ ತಂದೆ-ತಾಯಿ ಯಾವ ಹೆಣ್ಣನ್ನೂ ಅವನು ಒಪ್ಪ ದಿದ್ದಾಗ ಚಿಂತಿತರಾಗುತ್ತಾರೆ. ಅವನಿಗೆ ಬುದ್ಧಿ ಕಲಿಸಬೇಕೆಂದು ವಾಣಿ ಅವನ ಮನೆಯವರು ಅವಳನ್ನು ಕೇಳಲು ಬಂದಾಗ ತಮಾಷೆಗೆ, ತಾನು ಇಂತಹವನನ್ನು ವಿವಾಹವಾಗುವುದಿಲ್ಲವೆನ್ನುತ್ತಾಳೆ. ಕೊನೆಗೆ ಅರವಿಂದ ಕುರೂಪಿ ಜಯಾಳನ್ನು ವಿವಾಹವಾಗಲು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದಾಗ, ತಾಳಲಾರದೆ ತಾನೇ ಹೋಗಿ ಅವನನ್ನು ಪ್ರಿತಿಸುವುದಾಗಿ ಹೇಳುತ್ತಾಳೆ. ಈಗ ಪ್ರೇಮದ ಸುಳಿಯಲ್ಲಿ ವಾಣಿ ಸಿಕ್ಕಿಕೊಂಡು ಶ್ರೀಮಂತ ತಂದೆ-ತಾಯಿಯರ ಮಾತನ್ನೂ ತಿರಸ್ಕರಿಸುತ್ತಾಳೆ. ಶ್ರೀಮಂತ ರಾಜಾರಾಯರು ವಿಧಿಯಿಲ್ಲದೆ ಅರವಿಂದನೊಡನೆ ಅವಳ ಮದುವೆ ಮಾಡಿಕೊಡುತ್ತಾರೆ. ನಂತರ ಅರವಿಂದನನ್ನು ಅತಿಶಯವಾಗಿ ಪ್ರೀತಿಸುತ್ತಿದ್ದ

ವಾಣಿ ಅವನ ಬಗೆಗೇ ಸಂಶಯ ತಾಳುತ್ತಾಳೆ. ಆದರೆ ಅರವಿಂದ ಶಕುಂತಳೆ ಪ್ರೀತಿಸು ವುದು ತನ್ನ ಸ್ನೇಹಿತ ಶ್ರೀಧರನನ್ನು ಎಂದಾಗ ವಾಣಿ ತನ್ನ ಮನಸ್ಸಿನ ಸಂಶಯವನ್ನು ದೂರ ಮಾಡಿಕೊಂಡು ಸುಖಿಯಾಗುತ್ತಾಳೆ. ಹೀಗೆ ಎರಡು ಸಾಲಿನ ಕಥೆಯನ್ನೇ ಲೇಖಕಿ ಇನ್ನೂರು ಪುಟಗಳಷ್ಟು ಹಿಗ್ಗಿಸಿ ಕಾದಂಬರಿಯನ್ನು ಓದುಗರು ಓದಿ ಓದಿ ದಣಿದು ಹೋಗುವಂತೆ ಮಾಡಿದ್ದಾರೆ. ಕುಸುರಿ ಕೆಲಸದಂತಹ ಪಾತ್ರಗಳನ್ನು ಹೊಂದಿರುವುದೇ ಈ ಕಾದಂಬರಿಯ ವಿಶಿಷ್ಟ ಗುಣವಾಗಿದೆ.

ಪ್ರೇಮರಶ್ಮಿ : ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಪ್ರೇಮರಶ್ಮಿ ಕಾದಂಬರಿಯಲ್ಲಿ 'ಪ್ರೇಮರಶ್ಮಿ' ಹಾಗು 'ಆಸೆಯ ಅಲೆ' ಎಂಬ ಎರಡು ಮಿನಿ ಕಾದಂಬರಿಗಳಿವೆ.

ಕಾಲೇಜ್ ಲೆಕ್ಚರರೊಬ್ಬನ ಹೆಂಡತಿಯಾದರೂ ಅನೇಕ ಸಂಶಯಗಳನ್ನು ಗಂಡನ ಮೇಲೆ ತಾಳುವ, ಕೊನೆಗೆ ಕೆಲಸದವಳಿಗೂ ಗಂಡನಿಗೂ ಸಂಬಂಧವಿರಬಹುದೇ ಎಂದು ಯೋಚಿಸುವ ಅನುಮಾನ ಪ್ರವೃತ್ತಿ ಇಲ್ಲಿಯ ನಾಯಕಿಯದು. ತನ್ನ ಗಂಡ ಪ್ರಮೋದ ಹುಡುಗಿಯರೊಡನೆ ಪಾಠ ಹೇಳುವಾಗ. ಮನೆಗೆ ಬಂದು ಆಂಗ್ಲ ಕವಿಗಳ ವಿಚಾರವನ್ನು ಕುರಿತು ಚರ್ಚಿಸುವಾಗ – ಅಪಾರ್ಥ ಕಲ್ಪಿಸುವ ರಶ್ಮಿ ಕೊನೆಗೆ ಗಂಡನಿಗೆ ಜ್ವರ ಬಂದಾಗ ನಿಜದ ಅರಿವಾಗಿ ಪಶ್ಚಾತ್ತಾಪಪಡುತ್ತಾಳೆ. ಲೆಕ್ಚರರೊಬ್ಬನ ಭಾವನೆಗಳ ತಳಮಳವನ್ನು ಲೇಖಕಿ ಹೃದಯಂಗಮವಾಗಿ ಸೆರೆಹಿಡಿದಿದ್ದಾರೆ. ಈ ಕಾದಂಬರಿಯ ಘಟನೆಗಳು ಆಕರ್ಷಕವಾಗಿ ಓದಿಸಿಕೊಂಡು ಹೋಗುತ್ತವೆ. ಇಲ್ಲಿಯ ಪ್ರಮೋದ, ಪೂಜಾ, ಲಿಂಗಮ್ಮ, ಬೆಳ್ಳಿಯರ ಪಾತ್ರಗಳು ಚೆನ್ನಾಗಿ ಬಂದಿವೆ.

'ಆಸೆಯ ಅಲೆ' ಕಾದಂಬರಿಯಲ್ಲಿ ಪ್ರೇಮದ ವಿವಿಧ ಮುಖಗಳನ್ನು ಲೇಖಕಿ ಪರಿಚಯ ಮಾಡಿಕೊಟ್ಟಿದ್ದಾರೆ. ಪ್ರಕಾಶ ಕಾಲೇಜೊಂದರಲ್ಲಿ ಅಧ್ಯಾಪಕ. ಅವನು ಮೆಚ್ಚುವುದು ವಿದ್ಯಾರ್ಥಿನಿ ರೂಪಾಳನ್ನು. ಆದರೆ ರೂಪಾ ತಾನು ಇವನನ್ನು ವಿವಾಹವಾಗುವುದನ್ನು ತಿಳಿಸಲು ಇವನ ರೂಮಿಗೆ ಬಂದಾಗ ಅನಿರೀಕ್ಷಿತವಾಗಿ ಒಂದು ಕಾಗದ ಕಂಡುಬರುತ್ತದೆ. ಅದರಲ್ಲಿ ಹಳ್ಳಿಯ ಹುಡುಗಿ ಜಾನಕಿಯನ್ನು ಪ್ರಕಾಶ ಮದುವೆಯಾಗದಿದ್ದರೆ ಅವಳು ಸಾಯುತ್ತಾಳೆಂದು ಪ್ರಕಾಶನ ಅಕ್ಕ ರುಕ್ಮಿಣಿ ಬರೆದಿರುತ್ತಾಳೆ. ನೊಂದ ರೂಪಾ ತನ್ನ ವಯಸ್ಸಾದ ಬಾಸ್‌ನನ್ನೇ ಮದುವೆಯಾಗು ತ್ತಾಳೆ. ನಿರಾಶಾಹೃದಯಿಯಾದ ಪ್ರಕಾಶ ವಿಧಿಯಿಲ್ಲದೆ ಜಾನಕಿಯನ್ನು ವಿವಾಹ ವಾದರೂ ಅವಳನ್ನು ಪ್ರೀತಿಸಲಾರದವನಾಗುತ್ತಾನೆ. ಜಾನಕಿಯೊಡನೆ ಕುಂದುರ್ಪಿಗೆ ಹೋದಾಗ ಅಲ್ಲಿನವರ ಉಪಚಾರ, ಜಾನಕಿ–ಭವಾನಮ್ಮ–ಅವಳನ್ನು ಅರ್ಥಮಾಡಿ ಕೊಳ್ಳದ ಗಂಡ ವೆಂಕಟ್ಟ ವೇಶ್ಯೆ ಚಂಪಕವಲ್ಲಿ ಇವರ ಕಥೆಯನ್ನು ಹೇಳುವ ಪರಿಗಳಿಗೆ ಬೆರಗಾಗುತ್ತಾನೆ. ಜಾನಕಿ ಹೆರಿಗೆ ನೋವಿನಿಂದ ಸತ್ತಾಗಲೂ ಮುಂನಿಸಿನಿಂದ ಬರದ

ಪ್ರಕಾಶ ಕೊನೆಗೆ ಬಂದಾಗ ದಿಟ್ಟೆಯಾದ ಜಾನಕಿಯ ತಂಗಿ ಪದ್ಮಾಳನ್ನು ಕಾಣುತ್ತಾನೆ. ಪದ್ಮ ತನ್ನ ಅಕ್ಕ ಜಾನಕಿ ಸಾಯುವಾಗ ಇಟ್ಟುಕೊಂಡಿದ್ದ ಕೊನೆಯಾಸೆಯಂತೆ ಅವನನ್ನೇ ಕೈಹಿಡಿಯುತ್ತಾಳೆ. ಇಲ್ಲೆಲ್ಲಾ ಬರುವ ಸಾಂಸಾರಿಕ ಚಿತ್ರಣಗಳನ್ನು ಲೇಖಕಿ ಸೊಗಸಾಗಿ ಸೆರೆಹಿಡಿದಿದ್ದಾರೆ. ಶ್ರೀಮತಿ ವಿಶಾಲಾಕ್ಷಿಯವರ ಈ ಎರಡೂ ಕಾದಂಬರಿಗಳೂ ಸರಳ ಪ್ರೇಮದ ನಿರೂಪಣೆಯನ್ನು ಹೊಂದಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ದುಂಬಿ ಕೊರೆದ ಹೂವು : ಸಿ. ಎಸ್. ಮುಕ್ತಾ

ಸಿ. ಎಸ್. ಮುಕ್ತಾರವರ 'ದುಂಬಿ ಕೊರೆದ ಹೂವು' ಕಾದಂಬರಿ ಹೊಸತನ ವನ್ನೇನೂ ಸಾಧಿಸದೆ ಸೋತಿದೆ. ಬಲವಂತವಾಗಿ ಲೇಖಕಿ ಕಥೆಯನ್ನು ಎಳೆದಾಡಿ ಕೊಂಡು ಹೋಗಿದ್ದಾರೆ. ಲೆಕ್ಚರರ್ ಆದ ಕರುಣಾ ಮನೆಯವರಿಗೆಲ್ಲಾ ಸಹಾಯ ಮಾಡುತ್ತಾಳೆ. ವಿಧವೆಯಾದ ಎಳೆ ಪ್ರಾಯದ ಅತ್ತಿಗೆ ಶಾಂತಿ ಹಾಗೂ ತನ್ನ ಸ್ವಂತ ತಂಗಿ ಸುಗುಣಾಗೆ ತಾನೇ ಮುಂದೆ ನಿಂತು ಮದುವೆಗಳನ್ನು ಮಾಡಿಸುತ್ತಾಳೆ. ತಮ್ಮ ಶ್ರೀಧರನಿಗೆ ಡಾ॥ ಸುಧಾಕರ ರೆಡ್ಡಿಯ ಮೂಲಕ ಉತ್ತಮ ಕೆಲಸ ಕೊಡಿಸುತ್ತಾಳೆ. ಮುಂದೆ ಸುಧಾಕರ–ಕರುಣಾಳಲ್ಲಿ ಪ್ರೀತಿ ಬೆಳೆದು ಹೆಮ್ಮರವಾಗಬೇಕೆಂದಿದ್ದಾಗ ಅನಿರೀಕ್ಷಿತವಾಗಿ ಆಟೋ ಚಾಲಕನಿಂದ ಶೀಲವನ್ನು ಕಳೆದುಕೊಂಡ ಕರುಣಾ ಮದರಾಸ್ ಸೇರುತ್ತಾಳೆ. ರೈಲಿನಲ್ಲಿ ಸಿಕ್ಕ ಜೊತಿಗಾತಿಯಾದ ಪೂರ್ಣಿಮಾ ರಾವ್ ಎಂಬ ಶ್ರೀಮಂತ ವಿಧವೆ ತಾನು ಬೇರೊಬ್ಬನನ್ನು ಲಗ್ನವಾಗಿ ತನ್ನ ಮಗಳು ಸುಮಾಳನ್ನು ಕರುಣಾ ಸಾಕಬೇಕೆಂದು ಕೋರಿಕೊಳ್ಳುತ್ತಾಳೆ. ಮುಂದೆ ಅವಳ ಸರ್ಟಿಫಿಕೇಟ್‌ಗಳೊಡನೆ ಕರುಣಾ ಹೈದ್ರಾಬಾದಿನ ಕಾಲೇಜೊಂದರಲ್ಲಿ ಅಧ್ಯಾಪಕಿ ಯಾಗುತ್ತಾಳೆ. ಸುಮಾಳಿಗೆ ತಾಯಿಯಾಗಿ ನೋಡಿಕೊಳ್ಳುತ್ತಾಳೆ. ಹೀಗೆ ವಿಧವೆ ಯಲ್ಲದಿದ್ದರೂ ವಿಧವೆಯಾಗಿ, ತಾಯಿಯಲ್ಲದಿದ್ದರೂ ತಾಯಿಯಾಗಿ ಬಾಳಿದ ಕರುಣಾಳಿಗಾಗಿ ಹಗಲಿರುಳೂ ಹಂಬಲಿಸುತ್ತಾ ಕಾದು ನಿಂತ ಅವಿವಾಹಿತ ಸುಧಾಕರ ಕೊನೆಗೆ ಅವಳನ್ನು ತನ್ನೊಡನೆ ಕರೆದೊಯ್ಯುತ್ತಾನೆ. 'ದುಂಬಿ ಕೊರೆದ ಹೂವಾದ ಕರುಣಾ ಜೀವಮಾನವೆಲ್ಲಾ ಕರುಣಾ ಪ್ರಲಾಪದಲ್ಲಿ ಕಳೆದು ಕೊನೆಗೆ ರಾಮಾಯಣದ ಸೀತೆಯಂತೆ ಸುಖದ ದಡ ಮುಟ್ಟುತ್ತಾಳೆ. ಈ ರೀತಿ ಎಷ್ಟೋ ವರ್ಷ ಆದರೂ ಅವಿವಾಹಿತನಾಗೇ ಉಳಿದು ಕರುಣಾಳನ್ನು ಕೊನೆಗೂ ಛಲದಿಂದ ಪಡೆದು ಆದರ್ಶ ವ್ಯಕ್ತಿಯಾದ ಸುಧಾಕರರೆಡ್ಡಿ ಪ್ರೇಮ ಅಮರವೆಂಬುದನ್ನು ಸಾರುತ್ತಾನೆ. ಹೀಗಾಗು ವುದು ಇಂತಹ ಕಾದಂಬರಿಗಳಲ್ಲೇ ಹೊರತು ನಿಜಜೀವನದಲ್ಲಲ್ಲ. ಯಾವ ರೀತಿಯಲ್ಲೂ ಕಥಾ ಪುಷ್ಟಿಯನ್ನು ಹೊಂದದೆ ಈ ಕಾದಂಬರಿ ಸೊರಗಿದೆ.

ಆಸೆಗೊಂದು ಆಸರೆ : ಶೈಲಜಾ ಪ್ರಕಾಶ್

ತಮ್ಮ ಮೊದಲ ಕೃತಿ 'ಆಸೆಗೊಂದು ಆಸರೆ'ಯಲ್ಲಿ ಶೈಲಜಾ ಪ್ರಕಾಶ್‌ರವರು ಅಂತರ್ ಜಾತೀಯ ವಿವಾಹವನ್ನು ಕಥಾ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ಇಲ್ಲಿ ಪರಿಜನರ ಗೌರಿಯನ್ನು ಕ್ರಿಶ್ಚಿಯನ್ ಆದ ಜೊಸೆಫ್ ವಿವಾಹವಾಗುತ್ತಾನೆ. ಇದು ನಡೆಯುವುದು ಬ್ರಾಹ್ಮಣ ನರಸಿಂಹಶಾಸ್ತ್ರಿ ಹಾಗು ಲಕ್ಷ್ಮಮ್ಮರ ಮಗನಾದ ಆದರ್ಶವಾದಿ ಯುವಕ ರಾಮುವಿನಿಂದ. ಮಾರಿಗೆ ಕುರಿಬಲಿ ಕೊಡುವುದನ್ನು ವಿರೋಧಿಸಿದ ರಾಮು ಗೌರಿಯ ತಲೆಯಲ್ಲಿ ಆದರ್ಶದ ಕಲ್ಪನೆಗಳನ್ನು ತುಂಬುತ್ತಾನೆ. ಕಾಲೇಜು ವಿದ್ಯಾಭ್ಯಾಸಕ್ಕಾಗಿ ರಾಮು ಪಟ್ಟಣವನ್ನು ಸೇರಿದಾಗ ಸಾಹುಕಾರನಿಂದ ಮಾನ ಕಳೆದುಕೊಳ್ಳುತ್ತಾಳೆ ಗೌರಿ. ಬ್ರಾಹ್ಮಣ ರಾಮು ಜೋಸೆಫನ ತಂಗಿ ಮ್ಯಾಗ್ಡಲೀನಾಳನ್ನು ಮೆಚ್ಚುತ್ತಾನೆ. 'ಮನುಷ್ಯ ಹೆದರಬೇಕಾದದ್ದು ಶರೀರಕ್ಕಲ್ಲ ಆಚಾರಕ್ಕೆ, ದೇವರಿಗೆ–ಅದು ಮೀರುವುದಕ್ಕೆ ಹೇಗೆ ಸಾಧ್ಯ ಹೇಳು ಎನ್ನುವ ಶಾಸ್ತ್ರಿಗಳು, ತಮ್ಮ ಕಂದಾಚಾರ ಬಿಟ್ಟುಕೊಡದ ಊರಿನವರು, ಹಿಂದುಳಿದವರು, ಹೀಗೆ ಎಲ್ಲಾ ಆದರ್ಶಗಳನ್ನು ಒಂದೆಡೆ ಬಲವಂತವಾಗಿ ಸೇರಿಸಿ 'ಆಸೆಗೊಂದು ಆಸರೆ' ಕಾದಂಬರಿಯನ್ನು ಹೆಣೆಯಲಾಗಿದೆ. ಮುಗ್ಧೆಯರು ಹೇಗೆ ವಂಚನೆಯ ಜಾಲಕ್ಕೆ ಬಲಿಯಾಗುತ್ತಾರೆಂದೂ ಇಲ್ಲೇ ಸ್ಪಷ್ಟಪಡಿಸಲಾಗಿದೆ. ಪಟ್ಟಣದಿಂದ ಬಂದ ಶರಬಣ್ಣನ ಮಗ ಶಿವಕುಮಾರ ಸ್ಟೈಲಾಗಿ ಬಂದು ಮುಗ್ಧೆ ಮಂಗಳೆಯನ್ನು ವಂಚಿಸಿ ಅವಳು ಗರ್ಭಿಣಿಯಾದಾಗ ಉಪಾಯದಿಂದ ಕೊಂಡೊಯ್ದು ನಗರದ ವೇಶ್ಯಾಗೃಹಕ್ಕೆ ಮಾರುತ್ತಾನೆ. ಶ್ರೀ ವೆಂಕಟೇಶ್ವರನಿಗೆ ಅರ್ಪಿತವಾದ ಈ ಕಾದಂಬರಿ ಅಪಕ್ವಶೈಲಿ, ಅಸಹಜ ಕಥಾವಸ್ತು ಹಾಗು ಪೇಲವವಾದ ವರ್ಣನೆಗಳನ್ನು ಒಳಗೊಂಡಿದೆ. ಏನೋ ಒಂದು ಕಾದಂಬರಿ ಬರೆದು ಅಚ್ಚುಮಾಡಿಸಿದರಾಯಿತೆಂದುಕೊಳ್ಳುವ ಅನೇಕ ಲೇಖಕಿಯರು ತಮ್ಮ ಕಾದಂಬರಿ ಅನೇಕ ಮೌಲ್ಯಗಳನ್ನು ಒಳಗೊಂಡಿರಬೇಕು, ಕಾಲಕ್ಕೂ ಓದುಗರು ಬಯಸುವಂತಹ ಕೃತಿಯಾಗಿರಬೇಕು ಎಂಬ ಅಂಶಗಳನ್ನರಿಯದೇ ಇರುವುದು ವಿಷಾದದ ಸಂಗತಿಯಾಗಿದೆ.

ನೆಲೆ-ಬೆಲೆ : ಬಿ. ಟಿ. ಲಲಿತಾನಾಯಕ

ಬಿ. ಟಿ. ಲಲಿತಾನಾಯಕರ 'ನೆಲೆ-ಬೆಲೆ' ಕಾದಂಬರಿ ಹೆಣ್ಣಿನ ಸ್ವಾತಂತ್ರ್ಯವನ್ನು ಕುರಿತ ವಸ್ತುಗಳನ್ನೊಳಗೊಂಡಿದೆ. ತಾನು ಮೆಚ್ಚಿದವನನ್ನು ಪ್ರೀತಿಸಿ ಪಡೆಯಲಾಗದ ಜಯಾ, ಜಮೀಂದಾರನ ಮಗನ ಕೈಹಿಡಿದರೂ ಅಸುಖಿಯಾಗಿ ತನ್ನಿಂದ ಮಕ್ಕಳಾಗದಾದಾಗ ಸಾವಿತ್ರಿ ಎಂಬ ಹುಡುಗಿಯನ್ನು ಗಂಡನಿಗೆ ಮದುವೆ ಮಾಡಿಸಿ ತಾನು ನಗರಕ್ಕೆ ಬರುತ್ತಾಳೆ. ಅವಳು ತನ್ನ ಸಂಬಂಧೀಕರ ಮನೆಯಲ್ಲಿ ಇಳಿದುಕೊಂಡಾಗ ಆವಳ ಗಂಡನೇ ತಾನು ಪ್ರೀತಿಸಿದವನೆಂದು ಗೊತ್ತಾಗುತ್ತದೆ, ಅಲ್ಲಿ ಎದುರು ಮನೆಯ ರೇಖಾ ಸ್ತ್ರೀ ಸ್ವಾತಂತ್ರ್ಯ, ಸಮಾನತೆಗಳ ಬಗೆಗೆ ಇಲ್ಲ-ಸಲ್ಲದ ವಿಚಾರಗಳನ್ನು ಜಯಾಳ ತಲೆಯಲ್ಲಿ ತುಂಬುತ್ತಾಳೆ. ರೇಖಾಳಿಲ್ಲದ ಸಮಯದಲ್ಲಿ

ರೇಖಾಳ ಗಂಡ ಜಯಾಳ ಮೇಲೆ ಅತ್ಯಾಚಾರವೆಸಗಬಂದಾಗ ಅವನ ಮರ್ಮಾಂಗಕ್ಕೆ ಒದ್ದು ತಪ್ಪಿಸಿಕೊಂಡು ಬರುತ್ತಾಳೆ ಜಯಾ. ಊರಿನಲ್ಲೊಮ್ಮೆ ಸಮಾರಂಭ ವೊಂದರಲ್ಲಿ ಒಟ್ಟಿಗೆ ರಾತ್ರಿ ಮಲಗಿದ್ದಾಗ ಯಾರೋ ಬಂದು ಜಯಾಳಿಗೆ ಗೊತ್ತಾಗ ದಂತೆ ಅವಳ ಮೇಲೆ ಅತ್ಯಾಚಾರವೆಸಗಿ ಅವಳನ್ನು ಭೋಗಿಸುತ್ತಾರೆ. ಹೀಗೆ ಮಾನಸಿಕ–ದೈಹಿಕ ಸಂಬಂಧಗಳಿಂದ ಶೀಲಭ್ರಷ್ಟಳಾದ ಜಯಾಳ ಪಾತ್ರವನ್ನು ಲೇಖಕಿ ಆದಷ್ಟೂ ಸಮರ್ಥಿಸಿಕೊಂಡು, ಪೋಷಣೆ ಮಾಡುತ್ತಾ ಇಡೀ ಕಾದಂಬರಿಯಲ್ಲಿ ಅವಳ ಪಾತ್ರಕ್ಕೆ ಮಹತ್ವವನ್ನು ಕೊಟ್ಟಿದ್ದಾರೆ. ಹೀಗೆ ಮಾಡದಿದ್ದರೂ ಚೆನ್ನಾಗಿತ್ತು. ಸ್ವಾತಂತ್ರ್ಯವೆಂದು ಕೂಗಾಡುತ್ತಾ ಕೊನೆಗೆ ಗಂಡಿನ ಬಂಧನದಲ್ಲೇ ತೃಪ್ತಿಪಡುವ ಹೆಣ್ಣಿನ ಆಶಯ, ಧೋರಣೆಗಳು ವಿಫಲವಾಗಿವೆ. ಜಯಾ ತನ್ನ ಮನೆಗೆ ಬಂದಿ ದ್ದಾಗ ತನ್ನ ಗಂಡ ಹಾಗು ಜಯಾರ ನಡವಳಿಕೆಯ ಬಗೆಗೆ ಅಕ್ಕಪಕ್ಕದವರಿಂದ ಮಾತುಗಳನ್ನು ಕೇಳಿದ ಕನಕ ನೇಣುಹಾಕಿಕೊಂಡು ಸಾಯುತ್ತಾಳೆ. ಇಲ್ಲಿ ಸಂಶಯ ಮುಖ್ಯವಾಗಿ ಇವರಿಗೆ ಬುದ್ಧಿ ಕಲಿಸಲು ನಾಟಕವಾಡಿದ ಕನಕ ನಿಜಕ್ಕೂ ನೇಣಿನ ಉರುಳಿಗೆ ಬಲಿಯಾಗುತ್ತಾಳೆ. ಸಾವಿತ್ರಿ ಯಾರ ಒಡನೆಯೋ ಓಡಿಹೋದಾಗ ಮತ್ತೆ ಜಯಾಳೇ ಗಂಡ ಶಿವಮಲ್ಲನಿಗೆ ಆಸರೆಯಾಗಿ ನಿಲ್ಲುತ್ತಾಳೆ. ಸುಧಾ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಈ ಕಾದಂಬರಿ ಹೊಸ ಆಶಯಗಳನ್ನೂ, ಸ್ತ್ರೀ ಸ್ವಾತಂತ್ರ್ಯದ ಧೋರಣೆಗಳನ್ನು ಒಳಗೊಂಡು, ನವೀನ ಕಥಾವಸ್ತುವನ್ನೂ ಹೊಂದಿದೆ.

ಬಂಧಿತರು : ಈಚನೂರು ಶಾಂತಾ.

'ಬಂಧಿತರು' ಕಾದಂಬರಿ ಅಂತರ್ ಜಾತೀಯ ವಿವಾಹದ ಸೂಕ್ಷ್ಮ–ಸುಳಿವು. ಗಳನ್ನು ಎತ್ತಿ ಹಿಡಿಯುತ್ತದೆ. ಬ್ರಾಹ್ಮಣನಾದ ಕೃಷ್ಣನನ್ನು ವಿವಾಹವಾದ ಬೇರೆ ಜಾತಿಯ ಸಂಗೀತಾ ಏನೇನು ಪಾಡು ಪಡಬೇಕಾಯಿತೆಂಬುದನ್ನು ಲೇಖಕಿ ಎಳೆ ಎಳೆಯಾಗಿ ಬಿಡಿಸಿಕೊಟ್ಟಿದ್ದಾರೆ. ಇನ್ನೊಂದು ಮುಖ್ಯ ವಿಚಾರವೆಂದರೆ 'ತಂಗಿ ಯಾವ್ಪೋನ ಜೊತೆಯೋ ಓಡಿಹೋದಾಳೋ' ಎಂಬ ದಿಗಿಲಿಗೆ, ತನ್ನ ಆಫೀಸಿಗೆ ಸರದಿಯಂತೆ ರಜಾಹಾಕಿ ಕಾವಲುಕಾಯ್ದ ಸಂಗೀತಾಳ ಡಾಕ್ಟರ್ ಅಣ್ಣ ಕೊನೆಗೆ ಮುಸ್ಲಿಂ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿ ವಿಧಿಯಿಲ್ಲದೇ ಅವಳನ್ನೇ ಮದುವೆಯಾಗುತ್ತಾನೆ. ಈ ಘಟನೆ ಸಂಗೀತಾಳಿಗೆ ಅತ್ಯಾಶ್ಚರ್ಯವನ್ನುಂಟು ಮಾಡು ತ್ತದೆ. ಯಾವ ವ್ಯಕ್ತಿ ಮನೆಯವಳನ್ನು ಅಂತರ್ ಜಾತೀಯ ವಿವಾಹವಾಗಲು ಎಡೆಮಾಡಿಕೊಡುವುದಿಲ್ಲವೋ ಆದೇ ವ್ಯಕ್ತಿ ಹೇಳದೇ ಕೇಳದೇ ತಾನೇ ಹಾಗೆ ವಿವಾಹವಾಗುವುದು. ಮುದಿ ತಂದೆಯನ್ನು ನೋಡಿಕೊಳ್ಳದ ಅಣ್ಣಂದಿರ ಸ್ವಾರ್ಥ, ಮನೆಯಲ್ಲಿರುವುದನ್ನು ಸದಾಕಾಲ ಬಂದು ದೋಚಿಕೊಂಡು ಹೋಗುವ ಸಂಗೀತಾಳ ಅಕ್ಕಂದಿರು, ಆಸ್ತಿಯ ಆಸೆಗಾಗಿ ತಂದೆಯ ಶವ ದಹನಕ್ಕೆ

ಅನರ್ಹನೆಂದು ಕೃಷ್ಣನನ್ನು ನಿರಾಕರಿಸಿದ ಅವನ ಸಹೋದರರು ಎಲ್ಲರೂ ಕಾದಂಬರಿಯಲ್ಲಿ ಚಿತ್ರಿತರಾಗಿದ್ದಾರೆ. ಕೊನೆಗೆ ಕೃಷ್ಣನಿಗೆ ಆಕ್ಸಿಡೆಂಟ್ ಆದಾಗ ತನ್ನವರ್‍ಯಾರೂ ಇಲ್ಲವೆಂಬ ಅಸಹಾಯಕತೆ ಸಂಗೀತಾಳನ್ನು ಕಾಡುತ್ತದೆ. ಹೀಗೆ ಇಡೀ ಕಾದಂಬರಿಯಲ್ಲಿ ಮುಖ್ಯವಾಗಿ ಕಂಡುಬರುವುದು ಸ್ವಾರ್ಥ. ಇಂದಿನ ಸಮಾಜ ಹೀಗೆ ಅಂತರ್ ಜಾತೀಯ ವಿವಾಹವಾದವರನ್ನು ಶೋಷಣೆಗೆ ಒಳಪಡಿಸುತ್ತದೆ ಎಂಬುದೂ ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಅಲೆ–ನೆಲೆ : ವಾಣಿ.

ಪ್ರಸಿದ್ಧ ಕಾದಂಬರಿಗಾರ್ತಿ ವಾಣಿಯವರು 'ಅಲೆ–ನೆಲೆ' ಕಾದಂಬರಿಯಲ್ಲಿ ಮನುಷ್ಯತ್ವವನ್ನು ಪ್ರತಿಪಾದಿಸಿದ್ದಾರೆ. ಮಕ್ಕಳಿಲ್ಲದ ಶಿವರಾಮಯ್ಯ ತನ್ನ ಸಂಬಂಧೀಕರ ಮನೆಯಲ್ಲಿದ್ದುಕೊಂಡು ಅವರಿಗೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡುತ್ತಾನೆ. ಕೃಷ್ಣಪ್ಪನ ಮಗಳು ಶೈಲಳಿಗೆ ಉತ್ತಮ ವರನನ್ನು ತೋರಿಸಿಕೊಟ್ಟು ವಿವಾಹದ ಖರ್ಚಿಗೂ ನೆರವಾಗುತ್ತಾನೆ. ನಂತರ ತನಗೇನೋ ವೈರಾಗ್ಯ ಬಂದಂತಾಗಿ ಅರವಿಂದಾಶ್ರಮಕ್ಕೆ ಸೇರುತ್ತಾನೆ. ಕೃಷ್ಣಪ್ಪ-ಸುನಂದಮ್ಮನ ಮೂರು ಮಕ್ಕಳೂ ಒಂದೊಂದು ನೆಲೆಯನ್ನು ಕಾಣುತ್ತಾರೆ. ದೊಡ್ಡವಳು ಶೈಲಾ ಶ್ರೀಮಂತ ರಾಜೀವನ ಕೈಹಿಡಿದು ಸುಖಿಯಾಗುತ್ತಾಳೆ. ಎರಡನೆಯ ಮಗ ಪ್ರದೀಪ ದೊಡ್ಡ ಕ್ರಿಕೆಟ್ ಪ್ಲೇಯರ್ ಆಗಿ ದೇಶ–ವಿದೇಶಗಳಲ್ಲಿ ಹೆಸರು ಗಳಿಸುತ್ತಾನೆ. ಅವನು ತಾನೇ ಮೆಚ್ಚಿದ ಸಿಂಧೀ ಹುಡುಗಿಯನ್ನು ವಿವಾಹವಾಗಿ, ತಾಯಿಯ ಮನಸ್ಸಿಗೆ ದುಃಖ ನೀಡಿ ದೂರ ಉಳಿಯುತ್ತಾನೆ. ಕೊನೆಯವಳು ಆಶಾ ಪದವಿ ಪಡೆದ ನಂತರ 'ಅಜಂತಾ ಕಂಪನಿಯಲ್ಲಿ ಕೆಲಸಕ್ಕೆ ಸೇರಿ ಕೊನೆಗೆ ಅವರ ಮಾಲೀಕ ಸುಂದರನೂ, ದೃಢಕಾಯನೂ ಆದ ವಿಕ್ರಮನ ಕೈಹಿಡಿದು ಸುಖಿಯಾಗುತ್ತಾಳೆ. ಹೀಗೆ ಮಕ್ಕಳೆಲ್ಲಾ ಒಂದು ನೆಲೆ ಸೇರಿದ್ದು ಕಂಡು ತಂದೆ-ತಾಯಿಗಳಿಗೆ ಸುಖ-ಹಿತ. ಸುಖವಾದ ಸಂಸಾರದ ಎಳೆಗಳನ್ನು ಪಕ್ವ ಶೈಲಿಯಲ್ಲಿ ಲೇಖಕಿ ಬಿಡಿಸಿಕೊಟ್ಟಿದ್ದಾರೆ. ಅದರ ಮಧ್ಯೆ ಕಹಿ ಪ್ರಸಂಗಗಳೂ ಉಂಟು. ಆದರೆ ಕಾದಂಬರಿ ಓದಿಸಿಕೊಂಡು ಹೋಗುವಂತಾಗಿ ಲೇಖಕಿಯ ಶ್ರಮ ಸಾರ್ಥಕವಾಗಿದೆ.

ಸಿರಿದೇವಿ ನಕ್ಕಾಗ : ಹೆಚ್. ಜಿ. ರಾಧಾದೇವಿ

ಹೆಚ್. ಜಿ. ರಾಧಾದೇವಿಯವರು ಸಿನಿಮಾಕ್ಕೆ ತಕ್ಕಂತೆ 'ಸಿರಿದೇವಿ ನಕ್ಕಾಗ' ಕಾದಂಬರಿ ಬರೆದಿದ್ದಾರೆ. ಇಲ್ಲಿಯ ಘಟನೆಗಳು ಎಷ್ಟು ಆಕಸ್ಮಿಕವೆಂದರೆ ಈ ರೀತಿ ನಡೆದಾಗ ಇಡೀ ಬಡವರೇ ಶ್ರೀಮಂತರಾಗಿ ಹೋಗುತ್ತಾರೆ. ಅನೇಕ ಸೋದರ ಸೋದರಿಯರ ಮಧ್ಯೆ ಹುಟ್ಟಿದ ರಾಜಮ್ಮ ಕುಡುಕನೂ–ಬಡವನೂ ಆದ ಗಂಡನ ಕೈಹಿಡಿದು ಜೀವನ ನಿರ್ವಹಣೆಗೆ ಅಕ್ಕಂದಿರು ಅಣ್ಣಂದಿರ ಮನೆಯಲೆಲ್ಲಾ ಚಾಕರಿ

ಮಾಡುತ್ತಾಳೆ. ಅಡಿಗೆಯ ಕೆಲಸಮಾಡಿ ರಾಜಮ್ಮ ತನ್ನ ಒಬ್ಬನೇ ಮಗ ವಿಜಯ ನನ್ನು ಓದಿಸುತ್ತಾಳೆ. ಕಾಲ ಉರುಳಿದಂತೆ ಓದಿ ವಿದ್ಯಾವಂತನಾದ ವಿಜಯ ದೊಡ್ಡ ಹುದ್ದೆಗೆ ಸೇರಿ ಕೊನೆಗೆ ಸಿನಿಮಾ ನಿರ್ಮಾಪಕನಾಗುತ್ತಾನೆ. ನಾಲ್ಕು ಬಂಗಲೆ ಎರಡು ಕಾರು, ಹೀಗೆ ಅಪಾರವಾದ ಶ್ರೀಮಂತಿಕೆಯಿಂದ ರಾಜಮ್ಮ ಸುಖಿಯಾಗು ತ್ತಾಳೆ. ಸಿರಿ ಇವರೆಡೆಗೆ ನುಗ್ಗಿ ಬರುತ್ತದೆ. ವಿಜಯ ತಾನು ಮನಸಾರೆ ಒಲಿದವಳು ಸಿಗದಿದ್ದಾಗ ನೋಯುತ್ತಾನೆ, ತಾನೊಲಿದವಳು ಇವನಿಂದ ದೂರವಾಗಿ ವೇಶ್ಯೆ ಯಾಗಿ ಕೊಚ್ಚೆಯ ಬಾಳು ಬಾಳುತ್ತಾಳೆ. ಇವನಿಗೆ ಬೇರೊಂದು ಲಗ್ನವಾಗಿ ಮಗು ಹುಟ್ಟಿದಾಗ ಇವನ ಸಿನಿಮಾಗಳೆಲ್ಲಾ ಹೇರಳ ಹಣವನ್ನು ಗಳಿಸಿಕೊಡುತ್ತದೆ. ಆದ್ದರಿಂದ ಮೊಮ್ಮಗಳಿಗೆ ರಾಜಮ್ಮ 'ಸಿರಿದೇವಿ' ಎಂದೇ ಹೆಸರಿಟ್ಟರು. ಇಂತಹ ಕಾದಂಬರಿಗಳನ್ನು ಬರೆದು ಬರೆದು ಹಾಕುವುದರಿಂದ ರಾಧಾದೇವಿಯವರ ಕಾದಂಬರಿ ಗಳ ಸಂಖ್ಯೆ ಬೆಳೆಯುತ್ತದೆ ವಿನಃ ಕಾದಂಬರಿಯ ಮೌಲ್ಯ ಕುಗ್ಗುತ್ತಾ ಹೋಗುತ್ತದೆ.

ಅಮೃತ ಘಳಿಗೆ : ಹೆಚ್. ಜಿ. ರಾಧಾದೇವಿ

ಅಡಿಗೆಯವಳ ವಿವರಣೆ, ಅವಳು ಮಾಡುವ ಅಡಿಗೆಗಳ ವೈಖರಿ ಇವುಗಳ ವಿವರ 'ಅಮೃತ ಘಳಿಗೆ' ಕಾದಂಬರಿಯಲ್ಲಿ ದೊರೆಯುತ್ತದೆ. ಅಡಿಗೆಯವಳಾಗಿ ಶ್ರೀಮಂತರ ಮನೆಗೆ ಬಂದು ಸೇರಿದ ಚಂದ್ರಲಳ ಜನ್ಮರಹಸ್ಯ ನಿಗೂಢವಾಗಿರುತ್ತದೆ. ಅಣ್ಣತಮ್ಮಂದಿರ ಕತೆಯೊಂದು ಇಲ್ಲಿ ಸೇರಿಹೋಗಿದೆ. ಆಗರ್ಭ ಶ್ರೀಮಂತರಾದ ಅಣ್ಣತಮ್ಮಂದಿರು. ಕೈಗೆ ಸಾಕಷ್ಟು ಹಣ, ಮತ್ತು ಬರಸುವ ಯೌವನ, ಅಣ್ಣ ತಾನಾಗಿ ಜಾರುತ್ತಾನೆ. ಹೆಣ್ಣೊಬ್ಬಳನ್ನು ಪ್ರೀತಿಸುತ್ತಾನೆ; ಅವಳೊಡನೆ ಸುತ್ತಾಡಿ ಸುಖಿಸಿ ಅವಳನ್ನು ವಿವಾಹವಾಗುವ ಮೊದಲೇ ಸಾಯುತ್ತಾನೆ. ಅವನೊಡನೆ ಸುಖಿಸಿದವಳು ಶ್ಯಾಮಲ. ಅವನ ಸುಖದ ಫಲವಾಗಿ ಶ್ಯಾಮಲಳಿಗೆ, ಚಂದ್ರಲ ಮೂಡುತ್ತಾಳೆ. ಆಗ ಶ್ಯಾಮಲಾ ದಿಗಿಲ ಬಿದ್ದು ಚಂದ್ರಲಳನ್ನು ಅಡಿಗೆ ಭಟ್ಟರಿಗೆ ಸಾಕಲು ಕೊಟ್ಟು ತನ್ನ ಪ್ರಿಯಕರನ ತಮ್ಮನನ್ನೇ ವಿವಾಹವಾಗಿ ವಿದೇಶಕ್ಕೆ ಹೋಗು ತ್ತಾಳೆ. ಇದು ಕತೆಯ 'ಸಸ್ಪೆನ್ಸ್' ಆದ ಘಟನೆ, ಶ್ಯಾಮಲಳಿಗೆ ಈಗ ಪ್ರತಿಮ ಎಂಬ ಫ್ಯಾಷನ್‌ಬಲ್ ಮಗಳಿದ್ದಾಳೆ. ಕೊನೆಗೆ ಚಂದ್ರಲ ತನ್ನ ನಿಜವಾದ ವ ಗಳೆಂದು ತಿಳಿದು ಅವಳಿಗೆ ಶ್ರೀಮಂತ ಸುಂದರಕುಮಾರ ಮೋಹನನೊಡನೆ ವಿವಾಹವಾಗುತ್ತದೆ. ಹೀಗೆ ಕತೆ ಎಲ್ಲೆಲ್ಲೋ ಸಾಗಿದೆ. ಶ್ಯಾಮಲಾಳ ಗಂಡ ಪ್ರತಿಮಾ ತಮ್ಮ ಮಗಳಲ್ಲ ವೆಂದೂ. ಹೆಂಡತಿಯ ಬಾಧೆಯನ್ನು ನೋಡಲಾರದೆ ಪಕ್ಕದವರಿಂದ ಮಗುವೊಂದನ್ನು ದತ್ತುತೆಗೆದುಕೊಂಡು ಸಾಕಿದ್ದೆಂದು ಪ್ರತಿಮಾಳ ಹುಟ್ಟನ್ನು ಹೊರಗೆಡಹುತ್ತಾನೆ. ಹೀಗೆ ಸಾಕಷ್ಟು ಅಸಂಬದ್ಧ ಕಂತೆಗಳ ಆಗರವಾಗಿದೆ ಈ ಕಾದಂಬರಿ. ಈ ಕಾದಂಬರಿ ಯಲ್ಲಿರುವಂತೆ ಎಲ್ಲವೂ ನಡೆಯುವುದು ನೈಜತೆಗೆ ಬಲು ದೂರವಾದುದು.

ಭಾವುಕತೆಯ ಅಲೆಯಲ್ಲಿ ಕೊಚ್ಚಿಹೋದ ಲೇಖಕಿ ಈ ಕೃತಿಯನ್ನು ಶ್ರೀ ವೆಂಕಟೇಶ್ವರನಿಗೆ ಸಮರ್ಪಿಸಿದ್ದಾರೆ.

ಕಾದಂಬರಿಯ ಮೊದಲನೇ ಪುಟದಲ್ಲಿ ಚಂದ್ರಲ, ಮೋಹನರನ್ನು ಭೇಟಿ ಮಾಡಿಸಿದ ಲೇಖಕಿ ಕೊನೆಯ ಪುಟದಲ್ಲಿ ಅವರ ಸಂಗಮ ಮಾಡಿಸುತ್ತಾರೆ. ಭಾವಾವೇಶದ ಆ ಪ್ರಸಂಗ ಹೀಗಿದೆ.

ಶ್ಯಾಮಲಾ ಸಂತಸದಿಂದ "ನಿಜವಾಗಲು ನನ್ನ ಮಗಳನ್ನು ನೀವು ಸ್ವೀಕರಿಸುತ್ತೀರಿ ಅಂತ ನಂಬಿರಲಿಲ್ಲ" ಎಂದಳು. "ನೋಡು ಶ್ಯಾಮು...ನಿನ್ನ ಮೇಲಿನ ಪ್ರೀತಿಗೆ, ನಮ್ಮಿಬ್ಬರಿಗೆ ಸಂಬಂಧವಿಲ್ಲದ ಆ ಹುಡ್ಗೀನ್ನೆ ಮಗಳೂಂತ ಸ್ವೀಕರಿಸಿ ಎಲ್ಲ ಕೊಡ್ಲಿಕ್ಕೆ ನೋಡಿದೆ. ಈಗ ಚಂದ್ರಲ ಅಣ್ಣನಿಂದ ಜನಿಸಿದ ವಂಶದ ಕರುಳಬಳ್ಳಿ. ನ್ಯಾಯವಾಗಿ ಇವತ್ತಿನ ನನ್ನ ಅರ್ಧ ಆಸ್ತಿ ಅಣ್ಣನದಲ್ವಾ, ಆದ್ದರಿಂದ ಎಲ್ಲಾ ಆಸ್ತಿ ಚಂದ್ರಲಾಗೆ. ಚಂದ್ರಲಾನ್ನ ಮೋಹನನಿಗೇ ಕೊಡೋದು, ಏನಪ್ಪಾ ಮೋಹನ್ ಏನಂತಿ ?"

ತನ್ನ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಿತೆಂದು ಮೋಹನ ಆನಂದಿಸಿದ. ಹಾಗು ಯಾವುದೂ ಮುಚ್ಚಿಟ್ಟುಕೊಳ್ಳದೆ ಹಿಂದಿನ ದಿನವೇ ತಾನು ಮಾಡಿದ ನಿರ್ಧಾರ ತಿಳಿಸಿದ್ದ. ಪ್ರತಿಮ ಹಾಗೂ ಭಟ್ಟಾರಿಯರ ದುರ್ವ್ಯವಹಾರ ಕಂಡು ತಾನು ಮನಸ್ಸು ಬದಲಾಯಿಸಿದ್ದು ಹೇಳಿದ.

ತಂದೆ ತಾಯಿ ಸಿಕ್ಕಿದ ಅತೀವ ಆನಂದದಲ್ಲಿ ಚಂದ್ರಲ ಮೂಕಳಾಗಿದ್ದಳು. ಮೋಹನ ಅವಳ ಮುಖ ನೋಡಿ

"ನಮ್ಮ ವಿವಾಹಕ್ಕೆ ಇನ್ನೂ ಏನೇನು ಸಮಸ್ಯೆ ಇರುತ್ತೋಂತ ಭಯಪಟ್ಟಿದ್ದೆ ಚಂದ್ರಲ, ಯಾವ ಅಮೃತಗಳಿಗೆಯಲ್ಲಿ ನೀನು ನನ್ನ ಕಣ್ಣಿಗೆ ಬಿದ್ದಿಯೊ ? ನನ್ನ ಪಾಲಿನ ಸಕಲ ವಿಷಾ ಪರಿಹರಿಸಿ ನನ್ನ ಅಮೃತಲಕ್ಷ್ಮಿಯಾಗಿ ನಿಂತೆ' ಎಂದ.

ಚಂದ್ರಲ ಸಂತಸದಿಂದ 'ನಿಜಕ್ಕೂ ನಿಮ್ಮನ್ನು ಮೊದಲು ಸಲ ನಾನು ಯಾವ ಅಮೃತಘಳಿಗೆಯಲ್ಲಿ ನೋಡಿದೆನೋ ನನ್ನ ಬದುಕಿನ ಸಕಲ ಆಸೆಗಳೂ ನಿಮ್ಮಿಂದ ಸಿದ್ಧಿಸಿತು" ಎಂದಳು.

ಹಂಬಲ : ಗಾಯತ್ರಿ ಮೂರ್ತಿ

ಗಾಯತ್ರಿ ಮೂರ್ತಿಯವರು 'ಹಂಬಲ' ಕಾದಂಬರಿಯ ಕಥಾ ವಸ್ತು ವಿಧವಾ ವಿವಾಹಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿನ ನಾಯಕಿ ಮಾಲತಿ ಅನೇಕ ಭ್ರಮೆಗಳಲ್ಲಿ ಸಿಲುಕಿರುತ್ತಾಳೆ. ಅವಳಿಗೆ ವಿವಾಹವಾಗಿ ಒಂದು ಮಗುವಿನ ತಾಯಿಯಾದೊಡನೆ ಅವಳ ಗಂಡ ಅರವಿಂದ ಸ್ನೇಹಿತನ ಬೈಕ್ ಮೇಲೆ ಹೋಗುತ್ತಿದ್ದಾಗ ಆ್ಯಕ್ಸಿಡೆಂಟ್

ಆಗಿ ಮಡಿಯುತ್ತಾನೆ. ವಿಧವೆ ಮಾಲತಿಗೆ ಅವಳ ಗಂಡನ ಕೆಲಸವೇ ದೊರೆತು, ತನ್ನ ಮುದಿ ತಂದೆ ತಾಯಿಗಳನ್ನೂ ಮಗು ಗಿರಿಯನ್ನೂ ಸಾಕುತ್ತಿರುತ್ತಾಳೆ. ಆಕಸ್ಮಿಕವಾಗಿ ಅವಳ ಆಫೀಸಿಗೆ ಬಂದ ಮನೋಹರನ ವ್ಯಕ್ತಿತ್ವದಿಂದ ಆಕರ್ಷಿತಳಾಗಿ ತನ್ನ ಮನೆಯವರನ್ನು ವಿಚಾರಿಸಿ ಅವನನ್ನು ವಿವಾಹವಾಗುತ್ತಾಳೆ. ಮನೋಹರನ ಕಡೆಯವರ, ಅವನ ಮನೆಯವರ ಪರಿಚಯ ಕೊಡದಿರುವುದು ಕಾದಂಬರಿಯ ಕೊರತೆಯಾಗಿದೆ. ಜನಗಳು ಆಡಿಕೊಂಡರೂ ಮನೋಹರನನ್ನು ವಿವಾಹವಾದ ಮಾಲತಿ ಕೊನೆಗೆ ತನ್ನ ಮೊದಲ ಗಂಡನ ಮಗುವಾದ ಗಿರಿಯ ಪ್ರೀತಿ–ಪ್ರೇಮಗಳಿಂದ ವಂಚಿತಳಾಗುತ್ತಾಳೆ. ಮನೋಹರನನ್ನು 'ಡ್ಯಾಡಿ' ಎಂದು ಭಾವಿಸಬೇಕೆನ್ನುವ ಗಿರಿಯ ಹಂಬಲ ವಿಫಲವಾಗುತ್ತದೆ. ಖ್ಯಾತ ಲೇಖಕಿ ಅನುಪಮಾ ನಿರಂಜನರವರ ಮುನ್ನುಡಿ ಈ ಕಾದಂಬರಿಗಿದೆ. ಲೇಖಕಿಯ ಪ್ರಥಮ ಕಾದಂಬರಿ ಇದಾದುದರಿಂದ ಯಾವುದೇ ಮಹತ್ವದ ಅಂಶಗಳನ್ನು ಇದರಲ್ಲಿ ಗುರುತಿಸುವುದು ಕಷ್ಟವಾಗುತ್ತದೆ.

ಹೂವು–ಗಂಧ : ಛಾಯಾದೇವಿ ನಂಜಪ್ಪ

ಆಸ್ತಿಯ ಆಸೆಗಾಗಿ, ಹಣ–ಒಡವೆಗಳಿಗಾಗಿ ಸ್ವಂತ ಸಂಬಂಧವನ್ನೇ ಹೇಗೆ ತ್ಯಜಿಸಬಹುದಾಗಿದೆ. ಎಂಬುದಕ್ಕೆ ಮಾದರಿಯಾಗಿದೆ ಛಾಯಾದೇವಿ ನಂಜಪ್ಪನವರ 'ಹೂ–ಗಂಧ' ಕಾದಂಬರಿ. ಬಡತನದಲ್ಲಿ ಮಗನನ್ನು ಸಾಕಿದ ಲಲಿತಮ್ಮ ಕಾಲ ಬದಲಾದಾಗ ಮೆಲ್ಲಗೆ ಅಣ್ಣನ ಮನೆ ಸೇರುತ್ತಾಳೆ. ಅಲ್ಲಿ ಅಣ್ಣನ ಪ್ರಾಣ ಹೋಗುವಾಗ ಅವನಿಗೆ ವಚನಕೊಟ್ಟು ನಂತರ ವಚನಭ್ರಷ್ಟಳಾಗುತ್ತಾಳೆ. ಅಣ್ಣನ ಸಮಸ್ತ ಆಸ್ತಿಯನ್ನು ತನದಾಗಿಸಿಕೊಂಡು ಅಣ್ಣನ ಮಗಳಾದ ಚಿಕ್ಕ ಪದ್ಮಿನಿಯನ್ನು ಚಲುವಮ್ಮ ಎಂಬುವಳ ಬಳಿ ಸಾಕಲು ಕಳುಹಿಸುತ್ತಾಳೆ. ಐಶ್ವರ್ಯ, ವೈಭವಗಳ ಅವಳ ಆಡಂಬರವೇ ಆಡಂಬರ.ಎದುರು ಮನೆಯ ಮೋಹನ್‌ಲಾಲ್ ವೆಂಕಮ್ಮನೆಂಬ ಅಡಿಗೆಯವಳನ್ನು ಇವಳಿಗೆ ಗೊತ್ತುಮಾಡಿಕೊಟ್ಟಾಗ, ಅಡಗೆಯವಳು ಕಳ್ಳತನದಲ್ಲಿ 45,000 ರೂಪಾಯಿ ಬೆಲೆಯ ಒಡವೆ–ವಸ್ತುಗಳನ್ನು ಕದಿಯುತ್ತಾಳೆ. ಮೋಹನ ಲಾಲನಿಗೆ ಹೆಚ್ಚಿನ ಬಡ್ಡಿಯನ್ನು ಪಡೆಯುವ ಆಸೆಯಿಂದ ಕೊಟ್ಟ 15,000 ರೂಪಾಯಿಯೂ ಮಾಯವಾದಾಗ ಲಲಿತಮ್ಮ ಕಾಲು ಮುರಿದ ಹಕ್ಕಿಯಾಗುತ್ತಾಳೆ. ಇದಕ್ಕೆಲ್ಲಾ ಅವಳ ಅತಿ ದುರಾಸೆಯೆ ಕಾರಣ. ಸಮಾಜದ ಅಧ್ಯಕ್ಷಿಣಿಯಾಗಿ ಮೆರೆದ ಲಲಿತಮ್ಮ ಇಂದು ಮಗನಿದ್ದೂ ಕೈಲಾಗದವಳಾಗಿ ಕೊನೆಗೆ ಪದ್ಮಿನಿಯ ಕ್ಷಮೆ ಕೇಳಿ ಅವಳನ್ನು ಮನೆತುಂಬಿಸಿಕೊಳ್ಳುತ್ತಾಳೆ. ದುರಾಸೆ–ಸ್ವಾರ್ಥ ತ್ಯಜಿಸುತ್ತಾಳೆ.

"ಪದ್ಮಿನಿ ಎಂಬ ಸುಮಧುರ ಹೂವಿಗೆ ರಾಜು ಗಂಧದಂತೆ ಜೊತೆಗೂಡಿ ಅವಳ ಬಾಳನ್ನು ಸ್ವರ್ಗದತ್ತ ಒಯ್ದಿದ್ದ–ಪದ್ಮಿನಿಯ ಬಾಳು ಹೂವು ಗಂಧದಂತೆ

ಸೇರಿತ್ತು. ರಾಜುವಿನ ತೋಳಪ್ಪುಗೆ ಅವಳಿಗೆ ಗಂಧ ಪರಿಮಳವಾಗಿತ್ತು. ಪದ್ಮಿನಿ ರಾಜುವಿನ ಹೃದಯದ ಒಡತಿಯಾದಳು. ಆಳಾಗಿ ಆ ಮನೆಗೆ ಬಂದವಳು ಒಡತಿಯಾಗಿ ರಾಜುವಿನ ಮನ–ಮನೆ ಎರಡನ್ನೂ ಬೆಳಗಿದಳು" ಎಂದು ಕಾದಂಬರಿ ಅಂತ್ಯಗೊಳ್ಳುತ್ತದೆ. ಸ್ವಾರ್ಥ–ಅಹಂಕಾರದ ಹೆಣ್ಣಾಗಿ ಲಲಿತಮ್ಮ, ಸಾತ್ವಿಕಳಾದ ಪದ್ಮಿನಿ, ಸುಗುಣಶೀಲ ರಾಜು ಇವರ ಪಾತ್ರಗಳನ್ನು ಲೇಖಕಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಸ್ನೇಹ–ಬಿಂದು : ಛಾಯಾದೇವಿ ನಂಜಪ್ಪ

ಸಂಪ್ರದಾಯಸ್ಥಳಾದ ಮೇಲುವರ್ಣದ ಕುಟುಂಬಕ್ಕೆ ಸೇರಿದ ನಾಯಕಿ ಕುಟುಂಬದ ಅಪೇಕ್ಷೆಗಳನ್ನು ಮೀರಿ ಒಕ್ಕಲಿಗನೊಬ್ಬನನ್ನು ಮದುವೆಯಾಗಿ ಪಾಡು ಪಡುವ ಕತೆಯನ್ನು ಈ ಕಾದಂಬರಿಯಲ್ಲಿ ಲೇಖಕಿ ತಮ್ಮದೇ ಆದ ಧಾಟಿಯಲ್ಲಿ ಹೇಳಿದ್ದಾರೆ. ಡಾಕ್ಟರ್ ಪರೀಕ್ಷೆಗೆ ಓದಲು ಬಂದ ರತ್ನಾಳ ರೂಪಿಗೆ ಸೋತ ಬಿ. ಇ., ಮಾಡಿ ವೃತ್ತಿಯಲ್ಲಿದ್ದ ಮರಿಗೌಡ ಉಪಾಯದಿಂದ ಅವಳನ್ನು ಕರೆದೊಯ್ದು ಅತ್ಯಾಚಾರವೆಸಗಿ, ವಿಧಿಯಿಲ್ಲದೆ ಅವಳನ್ನೇ ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಎಲ್ಲಾ ವಿರೋಧಿಗಳೂ ಕೊನೆಗೆ ಇವರ ವಿವಾಹದ ಸಿಂಧುತೆಯನ್ನು ಒಪ್ಪಿಕೊಳ್ಳುತ್ತಾರೆ. ಇವರ ಮಕ್ಕಳೆಲ್ಲರೂ ಹಾಗೆಯೇ ಬೇರೆ ಬೇರೆ ಮತದವರನ್ನು ವಿವಾಹವಾಗುತ್ತಾರೆ. ಅಸಂಖ್ಯಾತ ಸಂಬಂಧಗಳನ್ನು ಕಲ್ಪಿಸಿ, ಪಾತ್ರಗಳನ್ನು ಸೃಷ್ಟಿಸಿ ಓದುಗರು ಎಂದಿಗೆ ಈ ಕಾದಂಬರಿ ಮುಗಿದೀತು ಎಂದು ಕೊಳ್ಳುವಂತೆ ಮಾಡುವಲ್ಲಿ ಲೇಖಕಿ ಸಫಲರಾಗಿದ್ದಾರೆ. ಹುಳಿ-ಉಪ್ಪು-ಖಾರವಿಲ್ಲದ ಈ ಕಾದಂಬರಿಯನ್ನು ಬರೆದು ತಾವು ಅಂತರ ಜಾತಿಯ ವಿವಾಹದ ಬಗೆಗೂ ಬರೆದೆ ಎಂದು ಲೇಖಕಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ ಕಾರ್ಯ ಮಾಡಿದ್ದಾರೆ.

ಗಿಣಿ–ರಾಗಿಣಿ–ವಿರಾಗಿಣಿ : ಸುನೀತಿ ಕೃಷ್ಣಸ್ವಾಮಿ

ಗಿಣಿಯಂತೆ ಬೆಳೆದು ಯೌವನದಲ್ಲಿ ರಾಗಿಣಿಯಾಗಿ ಸಿಕ್ಕವರೊಡನೆ ವಿಹರಿಸಿ ಕೊನೆಗೆ ಜೀವನದಲ್ಲಿ ವೈರಾಗ್ಯ ತಾಳುವ ನಾಯಕಿ ಈ ಕಾದಂಬಗಿಯ ವೀಣಾ. ಲವ್‌ಬರ್ಡ್ಸ್ ಆದ ಅತಿ ಶ್ರೀಮಂತ ತಂದೆತಾಯಿ ತಮ್ಮ ಸುಖ–ಕಾಮದ ಮುಂದೆ ಮುಗ್ಧ ಬಾಲಕಿ ವೀಣಾಳನ್ನು ಕಡೆಗಾಣಿಸುತ್ತಾರೆ. ಐಶ್ವರ್ಯವಿದೆ-ನಿಜ ಆದರೆ ತಂದೆತಾಯಿಯ ಪ್ರೀತಿಯಿಲ್ಲದೆ ವೀಣಾ ಆಯಾಳ ಬಳಿ ಬೆಳೆದು ಸೊರಗುತ್ತಾಳೆ. ಮೊದಲ್ನುಡಿಯಲ್ಲಿ ಲೇಖಕಿ ಹೇಳಿಕೊಂಡಿದ್ದಾರೆ. ತಾಯಿಯ ಪ್ರೀತಿ-ಒಲವು ನೈತಿಕ ಬಲದಲ್ಲಿ ಬೆಳೆಯಬೇಕಾದ ಹುಡುಗಿ ಆಯಾಳ ಜೊತೆ ಬೆಳೆದು ತನ್ನದೇ ಆದ ಒಂದು ವಿಭಿನ್ನ ವ್ಯಕ್ತಿತ್ವ ಬೆಳೆಸಿಕೊಂಡು ಸ್ವೇಚ್ಛಾಚಾರಿಯಾಗಿನಡೆದು ಕೊಂಡಾಗ ಜಾರುವುದು ಸಹಜವಷ್ಟೆ. ಈ ಜಾರುವಿಕೆಗೆ ಆಸ್ಪದ ಕೊಟ್ಟವರಾರು ? ...ಮಕ್ಕಳನ್ನು ಒಂದು

ಸುಂದರ ವ್ಯಕ್ತಿತ್ವದ ಮೂರ್ತಿಯನ್ನಾಗಿ ಮಾಡುವ ಗುರುತರ ಜವಾಬ್ದಾರಿ ತಂದೆ–ತಾಯಿಗಳದ್ದು. ಅದರಲ್ಲೂ ತಾಯಿಯ ಪಾತ್ರ ಬಹಳ ಹಿರಿದು. ಅದು ಇಲ್ಲದೆ ತಂದೆತಾಯಿಗಳು 'ಕ್ಲಬ್‌ಬರ್ಡ್ಸ್' ಆದಾಗ ಮಕ್ಕಳು ಹಾದಿಬಿಟ್ಟು ಹೋಗುವುದೂ ಅನಿವಾರ್ಯ...ಯೌವನದ ಮದದಲ್ಲಿ ಕಿರುಬೆಟ್ಟನಲ್ಲಿ ವಿಶ್ವವನ್ನೇ ತಿರುಗಿಸಬಲ್ಲ ನೆಂದು ಇಳಿಜಾರು ಬಂಡೆಯ ಮೇಲೆ ನರ್ತಿಸಿದಾಗ ಪ್ರಪಾತಕ್ಕೆ ಬೀಳುವುದೂ ಅನಿವಾರ್ಯವಾಗುತ್ತದೆ. ಇಂತಹ ತಿಳಿಗೇಡಿ ಕಿಶೋರಿ ಹಾಗು ಬೇಜವಾಬ್ದಾರಿ ತಂದೆ ತಾಯಿಗಳ ನಡವಳಿಕೆಯೇ ಕಾದಂಬರಿಯ ಕಥಾವಸ್ತು".

ಜಾನಕಿ-ರವಿಚಂದ್ರರ ಮಗಳಾದ ಬೇಬಿ (ವೀಣಾ) ಐಶ್ವರ್ಯಕ್ಕೆಕೊರತೆಯಿಲ್ಲದೆ ಸೊಂಪಾಗಿ ಬೆಳೆದಿರುತ್ತಾಳೆ. ಸುಂದರಳಾದ ಅವಳ ರೂಪಿಗೆ ಮಾರುಹೋದ ಚಂದನ್ ಅವಳೊಡನೆ ಸ್ಕೂಲಲ್ಲಿ ಓದುತ್ತಿರುವಾಗಲೇ, ಒಂದು ದಿನ ಸ್ಕೂಲ್‌ನ ಡ್ರಾಮಾದಲ್ಲಿ ಭಾಗವಹಿಸಿದಾಗ ಗ್ರೀನ್‌ರೂಮಿನಲ್ಲಿ ಅವಳೊಬ್ಬಳೇ ಬರುವಂತೆ ಮಾಡಿ ಅವಳನ್ನು ಬರಸೆಳೆದು ಅಪ್ಪಿ ಮುದ್ದಿಸುತ್ತಾನೆ. ಮೈ-ಕೈ-ತಡವುತ್ತಾನೆ, ಇದರಿಂದ ಕುಪಿತಳಾಗಿ ಬೇಬಿ ಮಿಸ್‌ತಾರಾದೇವಿಗೆ ವಿಷಯ ತಿಳಿಸಿ ಅವಳಿಂದ ಜಾನಕಿಗೆ ಉಪದೇಶವೂ ಆಗುತ್ತದೆ. ಆದರೆ ಜಾನಕಿ ಇದರ ಬಗೆಗೆ ಅಷ್ಟು ಗಮನ ಕೊಡುವುದಿಲ್ಲ. ತಂದೆ–ತಾಯಿ ಸಿಕ್ಕಸಿಕ್ಕವರೊಡನೆ ವಿಹರಿಸುವುದು ಕಂಡು ಯುವತಿಯಾದ ಬೇಬಿ ತಾನೂ ಸುಖಾನುಭವ ಪಡೆಯಲು ಕಂಡ ಹುಡುಗರ ಹಿಂದೆ ತಿರುಗುತ್ತಾಳೆ. ಅಮ್ಮಿ ಅಬ್ಬಾಸ್ ಎಂಬ ಮುಸ್ಲಿಂ ಹುಡುಗನ ದೃಢಶರೀರ ಬೇಬಿಯನ್ನು ಮರುಳು ಮಾಡಿತು. ಒಂದು ದಿನ ಶ್ರೀಮಂತ ಅಮ್ಮಿ ಅವಳನ್ನು ಭೋಗಿಸಲು ಉಪಾಯದಿಂದ ಒಂದು ಹೋಟೆಲ್ಲಿಗೆ ಕರೆದೊಯ್ದ. ಅಲ್ಲಿನ ಪ್ರಸಂಗ ಇದು "...ಅಮ್ಮಿ ಅವಳನ್ನು ತಬ್ಬಿಕೊಂಡು ಕಿವಿಯಲ್ಲಿ ಏನೇನೋ ಪಿಸುಗುಟ್ಟಿದ. ಅವನ ಮಾತುಗಳು ಕೇಳಿ ಮುಖಕ್ಕೆ ರಕ್ತ ಚೆಲ್ಲಿದಂತಾಗಿತ್ತು. ಮೈಯೆಲ್ಲಾ ಬಿಸಿ ಏರಿತ್ತು. ಕಣ್ಣಲ್ಲಿ ಬಯಕೆಯ ನೋಟ ಹೃದಯದಲ್ಲಿ ಕಾಮದ ಕಾರಂಜಿ ಪುಟಿಯತೊಡಗಿತ್ತು...ಯಾವಾಗ ಏಟುಹಾಕಿ ಹದಮಾಡಬೇಕೆಂದು ತಿಳಿದಿದ್ದನಾದ್ದರಿಂದ ಕಾಮದ ಕಿಚ್ಚು ಹತ್ತಿಸಿ ಅದು ಉರಿಯುವುದನ್ನು ಕಂಡು ಆ ಕ್ಷಣದಲ್ಲಿ ಬೇಬಿಯನ್ನು ಅನಾಮತ್ತು ಎತ್ತಿ ಹಾಸಿಗೆಯ ಮೇಲೆ ಉರುಳಿಸಿದ್ದ. ಕೋಣೆಯ ದೀಪ ಆರಿತ್ತು. ಬೆಡ್‌ಲೈಟ್ ಹತ್ತಿತು. ಅಮ್ಮಿ ಹಾಗು ಬೇಬಿಯ ದೇಹಗಳು ಕಾಮದ ಉರಿಯಲ್ಲಿ ಉರಿಯುತ್ತಿತ್ತು. ಬೇಬಿ ದಹನವಾಗಿ ಹೋಗಿದ್ದಳು..." ಮುಂದಿನದೆಲ್ಲಾ ಅರಿತ ಕತೆ. ಬೇಬಿ ಗರ್ಭಿಣಿಯಾಗುವುದು, ಅಮ್ಮಿ ಅವಳಿಗೆ ಹೇಳದೆ ಇನ್ನೊಂದು ಲಗ್ನವಾಗವುದು ಇವಳು ವಿರಾಗಿಣಿಯಾಗಿ ಆಶ್ರಮ ಸೇರಿ ಕೊನೆಗೆ ಬುದ್ಧಿ ಕಲಿಯುವುದು ಹೀಗೆ ಬೇಬಿಯನ್ನು ಲೇಖಕಿ ಅತಿರಂಜಿತ ಭಾವನಾಮಯತೆಯ ಪಾತ್ರವನ್ನಾಗಿ

ಸೃಷ್ಟಿಸಿದ್ದಾರೆ. ಶ್ರೀಮಂತರ ಕಾಮಲೀಲೆಗಳನ್ನು ಬಿಡಿಸಿಕೊಡುವ ಲೇಖಿಕಿ ಧಾರಾಳ ವಾಗಿ ಇಂಗ್ಲೀಷ್ ಸಂಭಾಷಣೆಗಳನ್ನು ಕಾದಂಬರಿಯಲ್ಲಿ ಹಾಕಿದ್ದಾರೆ. ಇನ್ನಾವುದೇ ಮೆಚ್ಚುವ ಗುಣ ಈ ಕಾದಂಬರಿಯಲ್ಲಿಲ್ಲ.

ಸಂಧ್ಯಾಕಿರಣ–ಸುನೀತಿ ಕೃಷ್ಣಸ್ವಾಮಿ

'ಸಂಧ್ಯಾಕಿರಣ' ಕಾದಂಬರಿಯಲ್ಲಿ ಸುನೀತಿಕೃಷ್ಣಸ್ವಾಮಿಯವರು ವೃದ್ಧರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡಿದ್ದಾರೆ. ಚಿಕ್ಕಂದಿನಿಂದಲೂ ಸಾಕಿಸಲುಹಿ ದೊಡ್ಡವರನ್ನಾಗಿ ಮಾಡಿದ ತಮ್ಮ ಮಕ್ಕಳೇ ತಮ್ಮ ಕೊನೆಗಾಲದಲ್ಲಿ ತಮ್ಮನ್ನು ತಿರಸ್ಕಾರದಿಂದ ಕಾಣುವುದು ಎಂತಹ ವೃದ್ಧರಿಗೂ ಅಸಹನೀಯವಾದ ವಿಚಾರವೇ ಆಗಿದೆ. 'ಸಂಧ್ಯಾಕಿರಣ' ಆಶ್ರಮ ಬಾಳಿನಲ್ಲಿ ನೊಂದ, ನೋಯುತ್ತಿರುವ ವೃದ್ಧರಿಗೆ ದಾರಿದೀಪದಂತೇ ಆಗಿದೆ. ಆಶ್ರಮದ ಪ್ರಶಾಂತ ವಾತಾವರಣದ ಚಿತ್ರಣದೊಂದಿಗೆ ಕಾದಂಬರಿ ಆರಂಭವಾಗುತ್ತದೆ. ಈ ಕಾದಂಬರಿಯಲ್ಲಿ ಹಲವಾರು ಉಪಕತೆಗಳೂ ಉಂಟು. ಇಂತಹ ಉಪಕತೆಗಳಿಂದ ಕಾದಂಬರಿಯ ಪುಟಗಳ ಸಂಖ್ಯೆ ಬೆಳೆದುಕೊಂಡು ಹೋಗಿದೆಯೇ ವಿನಃ ಮತ್ತಾವ ಉಪಯೋಗವೂ ಆಗಿಲ್ಲ. ಸುಧಾಮಣಿ, ತಂಗಮಣಿ, ವಿನುತಾ ಮುಂತಾದವರು ತಮ್ಮ ತಮ್ಮ ಅತ್ತೆಮಾವಂದಿರು–ಅವರನ್ನು ತಾವೆಷ್ಟು ಚೆನ್ನಾಗಿ ನೋಡಿಕೊಂಡರೂ ತಮಗೆ ಕೊಡುವ ನಾನಾ ತರಹದ ಕಿರುಕುಳಗಳನ್ನು ವಿವರಿಸಿದರು. ಇಂತಹ ಅತ್ತೆ-ಮಾವಂದಿರನ್ನು ಎಷ್ಟುಕಾಲ ಚೆನ್ನಾಗಿ ನೋಡಿಕೊಂಡರೂ ಕೊನೆಗೂ ತಮ್ಮನ್ನು ಬಯ್ಯುವುದು ತಾನೆ! ಇದಕ್ಕೆ ತಾವೇಕೆ ಕಷ್ಟಪಡಬೇಕು. ಇವರ ಸಮಸ್ಯೆಗಳೆಲ್ಲವನ್ನು ಶಾಂತಚಿತ್ತರಾಗಿ ಕುಳಿತು ಸಮಾಜ ಸುಧಾರಕಿಯಾದ ಶಾಲಿನಿರಾವ್ ಕೇಳಿದರು. ನಂತರ ಪರಿಹಾರಗಳನ್ನು ಸೂಚಿಸಿ ವಿನಯ, ವಿಧೇಯತೆಗಳು ಹೆಂಗಸಿಗೆ ಇರಬೇಕೆಂಬ ತತ್ವವನ್ನು ಸಾರಿದರು. ಲಕ್ಷ್ಮೀದೇವಮ್ಮ, ಅಂಬುಜಮ್ಮ, ಇಂದಿರಾಬಾಯಿ ಹೀಗೆ ನಾನಾ ಸ್ತ್ರೀಪಾತ್ರಗಳನ್ನು ಸೃಷ್ಟಿಸಿ ಲೇಖಿಕಿ ಕತೆ ಮುಂದುವರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಕಾಣುವುದು ವಿಶಾಲಮ್ಮನಪಾತ್ರ. ವಿಶಾಲಮ್ಮ ತುಂಬಾಶ್ರೀಮಂತೆ. ಆದರೆ ಆಕೆಯ ಸ್ವಭಾವ ಆಕಟವಿಕಟ. ತಾನು ಕೊಡುವ ದುಡ್ಡಿನಿಂದ ತನಗೆ ಆಶ್ರಮದಲ್ಲಿ ಊಟ ಹಾಕುವರೆಂಬ ಅಹಂಕಾರ. ಇತರ ಮಹಿಳೆಯರು ಹೇಳಿದಾಗ ತನ್ನ ಆಸ್ತಿಯೆಲ್ಲವನ್ನೂ ಆಶ್ರಮಕ್ಕೆ ಬರೆಯುತ್ತೇನೆಂದ ವಿಶಾಲಮ್ಮ ಕೊನೆಗೆ ಮೃತರಾಗುವ ಮೊದಲು ಆಸ್ತಿಯನ್ನು ಬರೆದದ್ದು ತನ್ನಮಕ್ಕಳಿಗೇ. ವಿಶಾಲಮ್ಮನ ಮಕ್ಕಳು ಒಳ್ಳೆಯವರೇ. ಆದರೆ ವಿಶಾಲಮ್ಮನೇ ಅವರೊಡನೆ ಹೊಂದಿಕೊಳ್ಳದ್ದ ರಿಂದ ಹೀಗೆ ಆಶ್ರಮಕ್ಕೆ ಬಂದು ಸೇರಿ ಅಲ್ಲೇ ಸತ್ತರು. ಅವರ ಮಕ್ಕಳು ತಾಯಿ ಯನ್ನು ಕೊನೆಗಾಲದಲ್ಲಿ ಚೆನ್ನಾಗಿ ನೋಡಿಕೊಂಡ ಆಶ್ರಮದವರಿಗೆ ವಿಶಾಲಮ್ಮನ ಮರಣದ ನಂತರ 5,000ಕ್ಕೆ ಚೆಕ್ ಕಳುಹಿಸುತ್ತಾರೆ. ಹೀಗೆ ಇಡೀ ಕಾದಂಬರಿಯಲ್ಲಿ

ಮನಸೆಳೆಯುವ ಮತ್ತೊಂದು ಪಾತ್ರವಾಗಿ ಸಂಜೀವಯ್ಯನವರಿದ್ದಾರೆ. ವೃದ್ಧರೂ ಗಮನಿಸಬೇಕಾದ ಸಮಸ್ಯೆ ಎಂಬುದನ್ನು ಈ ಕಾದಂಬರಿಯಲ್ಲಿ ಲೇಖಕಿ ಹೃದಯಂಗಮವಾಗಿ ನಿರೂಪಿಸಿ ತೋರಿಸಿದ್ದಾರೆ.

ಹೀಗೆ ಒಟ್ಟು ಮಹಿಳೆಯರ ಕಾದಂಬರಿಗಳನ್ನು, ಸಮೀಕ್ಷಿಸಿದಾಗ ಕಂಡುಬಂದ ವಿಚಾರಗಳೆಂದರೆ (1) ಹೆಚ್ಚಿನ ಲೇಖಕಿಯರು ತಮ್ಮ ಬರವಣಿಗೆಯ ವಿಧಾನದಲ್ಲಿ ಮಾರ್ಪಾಟು ಮಾಡಿಕೊಳ್ಳದಿರುವುದು. (2) ಪ್ರಬುದ್ಧ ದೃಷ್ಟಿಕೋನ–ಅನುಭವ ವಿಲ್ಲದೆ-ಯಾವ ಗುರಿಯೂ ಇಲ್ಲದೆ ಸುಮ್ಮನೆ ಪುಟಗಳನ್ನು ವೈಭವೋಪೇತ ವರ್ಣನೆ ಗಳಿಂದ, ನೀರಸ ಸಂಭಾಷಣೆಗಳಿಂದ ತುಂಬಿಸಿರುವುದು. (3) ಬರವಣಿಗೆಯ ಸಾಂದ್ರತೆಯಿಲ್ಲದೆ, ಹೇಳಿದ್ದನ್ನೇ ಹೇಳುತ್ತಾ ಹೋಗುವ ಲೇಖಕಿಯರು ಓದುಗರ ಮನಸ್ಸಿಗೆ ಹೆಚ್ಚೇನನ್ನೂ ತುಂಬದೆ, ಬೇಸರ ಹೋಗಲೆಂದು ಕಾದಂಬರಿಗಳನ್ನು ಬರೆದಿರುವುದು. ಈ ಓರೆ ಕೋರೆಗಳನ್ನು ತಿದ್ದಿಕೊಂಡಾಗ ಮಾತ್ರ ಮಹಿಳಾ ಲೇಖಕಿಯರಿಂದ ಮುಂದಿನವರ್ಷಗಳಲ್ಲಿ ಉತ್ತಮ ಮಟ್ಟದ ಕಾದಂಬರಿಗಳನ್ನು ನಿರೀಕ್ಷಿಸಬಹುದು.

—ಕೆ. ರಮಾನಂದ

o o o o o

ಬಯಸಿ ಬಂದ ಕೊಲೆ : ಚೈತನ್ಯ

ಚೈತನ್ಯರ ಈ ಕಾದಂಬರಿಯ ಮೂಲ ಕಥಾವಸ್ತು ಹಲವರಿಗಿರುವ ಆಸ್ತಿಯ ಬಗೆಗಿನ ದುರಾಸೆಯೇ ಆಗಿದೆ. ಆಗರ್ಭ ಶ್ರೀಮಂತೆಯಾದ ಸುನೀತಾಳನ್ನು ಸೊಸೆ ಯಾಗಿಸಿಕೊಳ್ಳಬಯಸುತ್ತಾನೆ ರತನ್. ಮಾವ ರತನ್‌ಚಂದ್‌ನ ಹಣದಾಸೆಯನ್ನು ಸುನೀತಾ ಕಂಡುಕೊಳ್ಳುತ್ತಾಳೆ. ಆದರಿಂದ ಬಡವಿಯಂತೆ ನಟಿಸುತ್ತಾ ರತನ್‌ಚಂದನ ಮಗ ಪ್ರದೀಪನೊಡನೆ ಸುತ್ತಾಡುತ್ತಾಳೆ. ರತನ್‌ಚಂದ್ ಹಾಗೂ ಅವನ ದಾಯಾದಿ ಹುಕುಂಚಂದ್ ಅವರಿಬ್ಬರಲ್ಲಿ ಆಸ್ತಿಯ ಹಾಗೂ ಐಶ್ವರ್ಯದ ಬಗೆಗೆ ಹೊಡೆ ದಾಟಗಳಾಗುತ್ತವೆ. ಗಂಧ–ಗಂಧದೆಣ್ಣೆಯ ಕಳ್ಳಸಾಗಣೆಕೆಯ ವಿಚಾರವೂ ಕಾದಂಬರಿ ಯಲ್ಲಿ ಧಾರಾಳವಾಗಿ ಬಂದಿವೆ. ಗುಂಡಪ್ಪ, ರೀಟಾ, ಪತ್ತೇದಾರ ಪ್ರಶಾಂತರು ಸಾಹಸದಿಂದ ಖದೀಮರನ್ನು ಹಿಡಿಯುತ್ತಾರೆ. ಈ ಮಧ್ಯೆ ಅನಿರೀಕ್ಷಿತವಾಗಿ ಸುನೀತಾಳ ಕೊಲೆಯಾಗುತ್ತದೆ. ಬಖಿಯಾ, ರಾಂಲಾಲ್, ದಾಸ್ ಮುಂತಾದ ಅನೇಕ ಪಾತ್ರಗಳು ಬರುವ ಈ ಕಾದಂಬರಿಯು ಅಂತ್ಯ ಸಿನೀಮೀಯ ಘಟನೆಗಳಿಂದ ಕೂಡಿದೆ. ಈ ಕಾದಂಬರಿಯ ಪುಟಗಳನ್ನು ಬೈಂಡ್ ಮಾಡುವಾಗ ಕೆಲವೊಂದು ಕಡೆ ಅದಲು-ಬದಲು ಮಾಡಿರುವುದರಿಂದ ಓದಿಕೊಂಡು ಹೋಗಲು ಅಡಚಣೆ ಯುಂಟಾಗುತ್ತದೆ.

ಮರಳಿದ ಮೋಹಿನಿ : ಚೈತನ್ಯ.

ಚೈತನ್ಯರ ಇತರ ಪತ್ತೆದಾರಿ ಕಾದಂಬರಿಗಳಂತೆ 'ಮರಳಿದ ಮೋಹಿನಿ' ಕಾದಂಬರಿಯೂ ಸಾಧಾರಣ ಕಥಾವಸ್ತುವನ್ನೊಳಗೊಂಡಿದೆ. ಕೃಷ್ಣಯ್ಯ-ರುಕ್ಮಿಣಮ್ಮನ ಮಗುವಿಗೆ ಮೋಹಿನಿ ಹಿಡಿದಿರುತ್ತದೆ. ಈ ಮೋಹಿನಿ ಬೇರೆ ಯಾರೂ ಆಗಿರದೆ ಕೃಷ್ಣಯ್ಯ ಮದುವೆಯಾಗುತ್ತೇನೆಂದು ನಂಬಿಸಿ ವಂಚಿಸಿ-ಕೊನೆಗೆ ಮನೆ ಕುಸಿದು ಮೃತಳಾದ ಲಕ್ಷ್ಮಿಯೇ ಆಗಿರುತ್ತಾಳೆ. ವಾಮಾಚಾರ, ತಾಂತ್ರಿಕ ಆಚಾರ್ಯರಾದ ತಾಂಡವಮೂರ್ತಿ, ಭೈರವಮೂರ್ತಿಯರಿಗೆ ಬಗ್ಗದೆ ಅವರನ್ನೇ ಬಲಿ ತೆಗೆದುಕೊಂಡ ಮೋಹಿನಿ ಕೊನೆಗೆ ಮಗುವನ್ನೂ ಕೊಲ್ಲುತ್ತಾಳೆ. ಬಾಬಾಬುಡನ್‌ಗಿರಿಯ ಅಲಿ, ಆಂಜನೇಯನ ಭಕ್ತ ಸಾಧು, ಪಿಶಾಚಿ ಕಮಲಮ್ಮರ ಪಾತ್ರಗಳು ರೋಚಕವಾಗಿವೆ. ರದ್ದಿ ಕಾಗದದ ಈ ಕಾದಂಬರಿಯ ಬಗೆಗೆ ಇನ್ನೂ ಹೇಳುವಂತಹ ಉತ್ತಮ ಅಂಶಗಳೇನೂ ಇಲ್ಲ.

ಶವದ ಸಾಕ್ಷಿ : ಗೀತಾನಂದ.

ಶ್ರೀ ಗೀತಾನಂದರ 'ಶವದ ಸಾಕ್ಷಿ' ಕಾದಂಬರಿ ಅಸಂಬದ್ಧ ಘಟನೆಗಳ. ಬಂಡಲ್ ವಿಷಯಗಳ ಹಾಗೂ ಸಿನಿಮಾಗಾಗಿಯೇ ಎಲ್ಲಾ ಮಸಾಲೆಗಳನ್ನು ಒಳಗೊಂಡು ಬರೆದ ಕಾದಂಬರಿ ಇದಾಗಿದೆ.

ಮಂತ್ರಿಯಾದ ಮಾನಪ್ಪಗೌಡನ ರತಿಲೀಲೆಗಳೇ ಇದರ ಕಥಾವಸ್ತು. ಸುಂದರ ಹುಡುಗಿಯರನ್ನು ಭೋಗಿಸಿ ತೃಪ್ತಿಹೊಂದಿದ ನಂತರ ಅವರನ್ನು ಕೊಲೆಮಾಡಿ ಅವರ ಅಸ್ಥಿಪಂಜರಗಳನ್ನು ಭಾರೀ ಬೆಲೆಗೆ ಮಾರುವ ಜಾಲದಲ್ಲಿ ಮುಖ್ಯಸ್ಥ ಮಾನಪ್ಪಗೌಡ. ತನ್ನ ಅಧಿಕಾರ, ದರ್ಪ ಹಣಗಳಿಂದ ಎಲ್ಲಾ ನ್ಯಾಯವನ್ನೂ ತನ್ನ ಕಡೆಗೇ ಮಾಡಿಕೊಳ್ಳುವ ಧೂರ್ತ. ನವಿಲೂರಿನ ಶ್ರೀಮಂತ ಶಿವಪ್ರಕಾಶನನ್ನು ಹೆಂಡತಿ-ಮಕ್ಕಳ ಸಮೇತ ಬಂಧನದಲ್ಲಿರಿಸಿ ಅವನದೇ ವೇಷವನ್ನು ತನ್ನ ಸಹಾಯಕ ರಂಗಪ್ಪನಿಗೆ ಹಾಕಿರುತ್ತಾನೆ. ಈ ಭೇದವನ್ನೆಲ್ಲಾ ಕ್ಯಾಪ್ಟನ್ ಆನಂದ, ರಘು, ಬಿಡ್ಡಪ್ಪ, ಮುನಿರಾಜು ಇವರು ಒಡೆಯುತ್ತಾರೆ. ಕತೆಯ ಕೊನೆಗೆ ಸುಂದರಿ ಚೆನ್ನಿಯು ತನ್ನ ಮೇಲಾದ ಅತ್ಯಾಚಾರ, ಕೊಲೆಗಳ ವಿವರ ಹೇಳಿ ಎಲ್ಲರನ್ನೂ ದಂಗುಬಡಿಸುತ್ತಾಳೆ. ಇದೇ ಶವದ ಸಾಕ್ಷಿ. ಕಾದಂಬರಿಯ ಒಂದು ಮೆಚ್ಚಿಗೆಯ ಅಂಶ ಕುತೂಹಲ ಕೊನೆಯವರೆಗೂ ಉಳಿಯುವಂತೆ ಮಾಡಿರುವುದು. ಹಾಗೇ ಕೆಲವೆಡೆ ಸತ್ವವಿರುವ ಸಂಭಾಷಣೆಗಳೂ ಇವೆ.

ಉದಾಹರಣೆಗೆ :– "ಈಗ ಯಾವುದು ಅಂಥ ಪರೀಕ್ಷೆ?' ನಾನು ಕೇಳಿದ್ದೆ. "ಅಯ್ಯೋ ಅದ್ಯಾವುದೋ ಹೆಂಗಸು ಕೊಲೆಯಾಗಿ ಸತ್ತುಹೋಗಿದ್ದಾಳೆ. ಈಗ ಪೆಥಾಲಜಿ ಪರೀಕ್ಷೆ ರಿಪೋರ್ಟನ್ನು ವಿಷ ತೆಗೆದುಕೊಂಡು ಸತ್ತಿದ್ದಾಳೆ. ಕರುಳಿನ ರಸದಲ್ಲಿ ವಿಷಸಿಕ್ಕಿದೆ ಅಂತ ವರದಿಕೊಡಬೇಕಂತೆ! ನೋಡಿದರೆ ಮಚ್ಚಿನಿಂದ

ಹೊಡೆದುದಕ್ಕೆ ಅಸ್ಥಿಪಂಜರದಲ್ಲಿಯ ಎದೆಯ ಮುಂಭಾಗ 'ಸ್ಟರ್ನಮ್' ಎಲ್ಲಾ ಪುಡಿ ಪುಡಿಯಾಗಿದೆ."

"ಯಾಕೆ ನಿಜವಾಗಿರೋದನ್ನ ನೀನು ಕಳಿಸಬಾರದು ?"

"ಸತ್ಯವನ್ನು ಹೇಳಿದರೆ ನಾಳೇನೆ ನೀನೊಂದು ಕಾಫೀನ್ ಸಿದ್ಧತೆ ಮಾಡಬೇಕಾಗುತ್ತೆ ನನಗಾಗಿ."

"ಯಾಕೆ ?"

"ಈ ಕೊಲೆಗೆ ಸಂಬಂಧಿಸಿದಂತೆ ಸರಕಾರಿ ವಲಯಂದ ಯಾವುದೋ ಪ್ರಭಾವಿತ ವ್ಯಕ್ತಿ ವಿವಿಧ ವಲಯಗಳಿಂದ ನನ್ನ ಮೇಲೆ ಒತ್ತಡ ಹೇರುತ್ತಿದ್ದಾನೆ. ಅದಕ್ಕೇನೆ ನಾನು ನನ್ನ ರಾಜೀನಾಮೆ ಪತ್ರವನ್ನು ಡೀನ್‌ಗೆ ಕೊಟ್ಟಾಗಿದೆ."—

ಇಂತಹ ಸಂಭಾಷಣೆಗಳೇ ಈ ಕಾದಂಬರಿಯ ಆಸ್ತಿಯಾಗಿದೆ.

ರಕ್ತಾಕಾಂಕ್ಷಿ : ನಚಿಕೇತ.

ರಕ್ತಾಕಾಂಕ್ಷಿಯ ಒಟ್ಟು ಕಥಾಸಾರಾಂಶ ಇದು. ಸುಂದರರೂ, ದೃಢಕಾಯರೂ ಆದ ಯುವಕರನ್ನು ಹುಡುಕುವುದು, ತನ್ನ ಚೆಲುವು–ಒಯ್ಯಾರಗಳಿಂದ ಅವರನ್ನು ಬುಟ್ಟಿಗೆ ಹಾಕಿಕೊಳ್ಳುವುದು. ಇವಳ ರೂಪಕ್ಕೆ ಮರುಳಾಗಿ ಯುವಕರು ಎಲ್ಲವನ್ನೂ ಇವಳಿಗೆ ಸಮರ್ಪಿಸುವುದು, ಸುಂದರ ಯುವಕರೊಡನೆ ಸಂಭೋಗ ನಡೆಸಿ ಅವರು ದಣಿವಿನಿಂದ ಸೋತು ಮಲಗಿದಾಗ, ಕ್ಲೋರೋಫಾರಂ ಅದ್ದಿದ ಕರವಸ್ತ್ರದಿಂದ ಅವರಿಗೆ ಪ್ರಜ್ಞೆ ತಪ್ಪಿಸಿ ಅವರ ಕೊಲೆ ಮಾಡುವುದು. ಅದೂ ಹೇಗೆ ?— ಅವರೆದೆಯ ಮೇಲೆ ಚೂರಿಯಿಂದ ನಾಲ್ಕು ಕಡೆಗೆ ತಿವಿದು ರಕ್ತ ಬರುವಂತೆ ಮಾಡಿ ಅದನ್ನು ನೋಡಿ ಖುಷಿಪಡುವುದು-ಇವಿಷ್ಟೂ ರಕ್ತಾಕಾಂಕ್ಷಿಯೆಂಬ ಬಿರುದು ಪಡೆದ ಚೆಲುವೆ ಸೀತಾಳ ಕೆಲಸ. ಇವಳನ್ನು ಹಿಡಿಯುವುದೇ ಪೋಲೀಸು ಇಲಾಖೆಗೆ ತಲೆನೋವು. ಕೊನೆಗೆ ಸಿ.ಐ.ಡಿ. ರಾಜು ರಕ್ತಾಕಾಂಕ್ಷಿಯ ಚೂರಿಗೆ ಬಲಿಯಾದ ರಾಘವೇಂದ್ರರಾಯರನ್ನು ಕಂಡು ಕನಿಕರಿಸುತ್ತಾನೆ. ಅವರ ಮಗಳು ಕಲಾವತಿಗೆ ಚಿತ್ರಕಲೆ ಕಲಿಸಿ ಅವಳಿಂದ ರಕ್ತಾಕಾಂಕ್ಷಿಯ ಚಿತ್ರ ಬರೆಸಿಕೊಳ್ಳುತ್ತಾನೆ. ನಂತರ ತಾನೇ ಯುವಕ ಕೃಷ್ಣನಂತೆ ಹೋಗಿ ಅವಳನ್ನು ಭೋಗಿಸಿ-ಅವಳನ್ನು ಉಪಾಯದಲ್ಲಿ ಹಿಡಿದು ನೇಣಗಂಭವೇರುವಂತೆ ಮಾಡುತ್ತಾನೆ. ತನ್ನ ತಂಗಿ ಸಾವಿತ್ರಿಗೆ ಲೆಕ್ಚರರ್ ಪ್ರೇಮ ಮಾಡಿದ ಮೋಸ-ಅವನನ್ನು ಕೊಲೆ ಮಾಡುವುದರೊಂದಿಗೆ ತನ್ನಲ್ಲಿ ರಕ್ತದ ಹಂಬಲ ಉಂಟಾಯಿತೆಂದು ಚೆಲುವೆ ಸೀತಾ ಒಪ್ಪಿಕೊಳ್ಳುತ್ತಾಳೆ. ಮೊದಲ ಕಾದಂಬರಿಯಾದುದರಿಂದ ಕೆಲವೆಡೆ ಲೇಖಕರು ಬಹು ಕಷ್ಟದಿಂದ ಕತೆಯನ್ನು ಬೆಳೆಸಿಕೊಂಡು ಹೋದಂತೆ ತೋರುತ್ತದೆ.

5 ಮ್ಯಾಸ್ ಕಿಲ್ಲರ್ಸ್ : ಜಿ. ಪ್ರಕಾಶ್.

ಜಿ. ಪ್ರಕಾಶರ '5 ಮ್ಯಾನ್ ಕಿಲ್ಲರ್ಸ್' ಕಾದಂಬರಿ ಯಾವ ಕುತೂಹಲವನ್ನೂ ಕಾದಂಬರಿ ಓದುವವರಿಗೆ ಉಳಿಸಿಕೊಂಡು ಹೋಗುವುದಿಲ್ಲ. ಆಧುನಿಕ 'ಸ್ಟಂಟ್ಸ್' ಗಳನ್ನು ಸೇರಿಸಿ ಬರೆಯಲಾದ ಈ ರದ್ದೀ ಕಾಗದದ ಕಾದಂಬರಿಯಲ್ಲಿ ಅರ್ಥಹೀನ ಶಬ್ದಗಳು, ಒರಟಾದ ಭಾಷೆ, ಪೇಲವ ಶೈಲಿಗಳನ್ನು ಕಾಣಬಹುದು. ಹಂಶು, ಮಾರ್ಟಿನ್, ಕುಲ್ಬಿ, ಚಿ. ಲೂಯಿ, ಮುಂತಾದವರ 'ವರ್ಲ್ಡ್ ಕಿಲ್ಲರ್ಸ್ ಅಸೋಸಿಯೇಷನ್ನನ್ನು ನಾಶಮಾಡುತ್ತಾನೆ. ಇಂಡಿಯಾದ ಬುದ್ಧಿವಂತ ಪತ್ತೇದಾರ ಪ್ರದೀಪ್, 'ಜಂಗಂತ', ಶಬ್ದವನ್ನು ಲೇಖಕರು ಅದೇಕೆ ಅಷ್ಟುಬಾರಿ ಬಳಸಿರುವರೋ ಗೊತ್ತಿಲ್ಲ. ವಾಕ್ಯರಚನೆ ಸರಿಯಾಗಿರುವ ಕಡೆಗಾಗಲಿ, ಕಾದಂಬರಿಯ ಒಟ್ಟು ಶಿಲ್ಪದ ಕಡೆಗಾಗಲಿ ಗಮನ ಕೊಡದೆ ಇರುವುದರಿಂದ ಇಡೀ ಕಾದಂಬರಿ ಪತ್ತೇದಾರಿ ಓದುಗರಿಂದ ದೂರ ನಿಲ್ಲುತ್ತದೆ. 'ಕಮಾಂಡರ್' ಅಂತಹ ಕಾದಂಬರಿಯನ್ನು ಬರೆದ ಲೇಖಕರೇ ಇಂತಹ ಕಾದಂಬರಿಯ ಕರ್ತೃಗಳೇ ಎಂದು ಆಶ್ಚರ್ಯ ಪಡುವಂತಾಗುತ್ತದೆ.

ಸ್ಫೋಟ : ಎಸ್. ಶ್ರೀಧರ್.

ಇದು ತಮ್ಮ ಮೊದಲ ಕಾದಂಬರಿಯಾದರೂ ಎಸ್. ಶ್ರೀಧರ್‌ರವರು ಕುತೂಹಲ ಕೆಡದಂತೆ ಕಥೆ ಹೇಳುವಲ್ಲಿ ಯಶಸ್ವಿಯಾಗಿದ್ದಾರೆ. ಹೆಣ್ಣು–ಹೊನ್ನಿಗಾಗಿ ಮಿತ್ರರಲ್ಲಿ ಜಗಳವುಂಟಾಗುವುದು ದೊಡ್ಡದಲ್ಲ. ಆದರೆ ಅಣ್ಣ–ತಮ್ಮಂದಿರಲ್ಲೇ ಅವಕ್ಕಾಗಿ ಭಾರೀ ಕಚ್ಚಾಟವುಂಟಾಗಬಲ್ಲದೆಂಬುದನ್ನು ರಾಜೀವ–ವಸಂತರ ಪಾತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ರೂಪಾಳೆಂಬ ಸುಂದರ ಹೆಣ್ಣಿಗಾಗಿ ರಾಜೀವನ ಕೊಲೆ ಮಾಡುತ್ತಾನೆ ವಸಂತ. ವಸಂತ ಕೊಲೆಗಾರನೆಂಬುದನ್ನು ನಿರೂಪಿಸಲು ರೂಪಾ ಅವನನ್ನು ಪ್ರೀತಿಸುವ ನಾಟಕವಾಡುತ್ತಾಳೆ. ಇನ್ಸ್‌ಪೆಕ್ಟರ್ ಮನೋಹರ್ ರೂಪಾಳ ಅಣ್ಣನಾಗಿದ್ದು ರಹಸ್ಯ ಸ್ಫೋಟಿಸಿ, ವಸಂತನನ್ನು ಬಂಧಿಸುತ್ತಾನೆ. ಆದರೆ ನಿಜಕ್ಕೂ ಕಥೆಯ ತಿರುಳು ಸ್ಫೋಟಗೊಳ್ಳುವುದು ಕೊನೆಗೆ ಕಳ್ಳಸಾಗಣಿಕೆ ವ್ಯವಹಾರದಲ್ಲಿ ತೊಡಗಿದ್ದ ರಾಜೀವ ತನ್ನ ತಮ್ಮನನ್ನು ಲಕ್ಷರೂಗಳ 'ಚಕ್'ಗೆ 'ಸೈನ್' ಹಾಕಲು ಕೇಳಿದಾಗ ವಸಂತ ನಿರಾಕರಿಸುತ್ತಾನೆ. ಅವನನ್ನು ಕೊಲ್ಲಲು ಹೋದಾಗ ತಪ್ಪಿಸಿಕೊಂಡು ತನ್ನ ಪ್ರಾಣ ಉಳಿಸಿಕೊಳ್ಳಲು ವಸಂತ ಅಣ್ಣ ರಾಜೀವನನ್ನೇ ಕೊಂದು ಅವನ ಹೆಣವನ್ನು ಮಂಗಳೂರಿನ ಸಮುದ್ರದಲ್ಲೆಸೆಯುತ್ತಾನೆ. ಕಾದಂಬರಿಯ ಕಥಾವಸ್ತು ಹೀಗೆ ಕೊನೆಗೆ ಸ್ಫೋಟಗೊಳ್ಳುವ ತನಕ, ಎಲ್ಲೂ ಅಂದ ಕೆಡದಂತೆ ಲೇಖಕರು ಚಿತ್ರಿಸಿದ್ದಾರೆ. ರಚನಾ ಶೈಲಿ ಹಾಗು ಚಿಕ್ಕ ಚಿಕ್ಕ ವಾಕ್ಯಗಳ ಸಂಭಾಷಣೆಗಳು ಮನಸೆಳೆಯುತ್ತವೆ.

ಸಿಡಿದೆದ್ದ ಸಿ.ಐ.ಡಿ. : ಸಿ. ಎನ್. ಚನ್ನವೀರಯ್ಯ

ಸಿಡಿದೆದ್ದ ಸಿ. ಐ. ಡಿ. ಪತ್ತೇದಾರಿಣಿ ರೂಪಾಳ ಕತೆಯನ್ನೊಳಗೊಂಡಿದೆ. ಶ್ರೀ ಸಿ. ಎನ್. ಚನ್ನವೀರಯ್ಯನವರು ಯಾವೊಬ್ಬ ಧೀರ ಪುರುಷನಲ್ಲೂ ಇಲ್ಲದ ಅತೀತವಾದ ಗುಣಗಳನ್ನು ರೂಪಾಳಿಗೆ ಅಳವಡಿಸಿ ಎಂತೆಂತಹ ಪ್ರಾಣಾಂತಿಕ ಘಟನೆಗಳಿಂದಲೂ ಅವಳು ಸಾಹಸದಿಂದ ತಪ್ಪಿಸಿಕೊಂಡು ಬರುವುದನ್ನು ಎತ್ತಿ ತೋರಿಸಿದ್ದಾರೆ. ಎಲ್ಲ ಕಡೆ ಹೆಂಗಸರನ್ನು ಕಿಡ್‌ನ್ಯಾಪ್ ಮಾಡಿದರೆ ಇಲ್ಲಿ ಧೀರ ವಿಶ್ವಂಬರನನ್ನೇ ಡಕಾಯಿತರಪಹರಿಸುತ್ತಾರೆ. ರೂಪಾ ಧೈರ್ಯದಿಂದ ಹೋಗಿ ಅವರನ್ನೆದುರಿಸಿ ತನ್ನ ಪತಿಯನ್ನು ಬಿಡಿಸಿಕೊಂಡು ಬರುತ್ತಾಳೆ, ಶ್ರೀಕಾಂತನೆಂಬ ಕೇಡಿಯ ರಹಸ್ಯವನ್ನು ಚಾಣಾಕ್ಷತನದಿಂದ ಗುರುತಿಸುತ್ತಾಳೆ. ಡಿಷುಂ, ಡಿಷುಂ, ಹಾಗೂ ಕರಾಟೆ ಯುದ್ಧ, ಹೀಗೆ ಎಲ್ಲದರಲ್ಲೂ ತರಬೇತು ಹೊಂದಿದ ರೂಪಾಳು ಅಸಾಧಾರಣ ಸಾಹಸಿ. ತಮಗೆ ಗೊತ್ತಿರುವ ಎಲ್ಲಾ ಮಸಾಲೆಗಳನ್ನೂ ತುಂಬಿಸಿ ಈ ಲೇಖಕರು ಕಾದಂಬರಿ ಹೆಣೆದಿದ್ದಾರೆ. ಆದಿಯೂ – ಅಂತ್ಯವೂ ಇಲ್ಲದ ಘಟನೆಗಳು, ಹಾಗು ಹೇಗೋ ಬರೆದು ಕಾದಂಬರಿಯನ್ನು ಪ್ರಕಟಿಸಿದರಾಯಿತು ಎಂಬುದಕ್ಕೆ ಈ ಕಾದಂಬರಿಯೇ ಸಾಕ್ಷಿಯಾಗಿದೆ. ಇಲ್ಲಿಯ ಘಟನೆಗಳ ವಿಪರೀತ ಕಲ್ಪನೆ ಕಾದಂಬರಿಯ ಶಿಲ್ಪಕ್ಕೇ ಮಾರಕವಾಗಿದೆ, ಇಂತಹ ಅನೇಕ ಕಾದಂಬರಿಗಳನ್ನು ಬರೆದ ಮಾತ್ರಕ್ಕೆ ಕಾದಂಬರಿ ಕ್ಷೇತ್ರದಲ್ಲಿ ತಮ್ಮ ಸ್ಥಾನ ಗಟ್ಟಿಯೆಂದು ಈ ಲೇಖಕರು ಭಾವಿಸಿಕೊಂಡಿದ್ದರೆ ಅದು ಬರೀ ಭ್ರಮಾತ್ಮಕವಾದ ಕಲ್ಪನೆಯಾದೀತು ಅಷ್ಟೆ!

ಕೆ. ರಮಾನಂದ

o o o o o

ಅನುವಾದಿತ

ಈ ವರ್ಷ ಈ ವಿಭಾಗದಲ್ಲಿ ಸಮೀಕ್ಷೆಗೆ ಒಳಪಟ್ಟಿರುವ ಪುಸ್ತಕಗಳನ್ನು ಕಳೆದ ವರ್ಷಗಳಿಗೆ ಹೋಲಿಸಿದರೆ, ಸಂಖ್ಯಾ ದೃಷ್ಟಿಯಿಂದ ಅಂತಹ ಏರುವಿಕೆ ಕಂಡು ಬರುವುದಿಲ್ಲ. ಆದರೆ ಮಹತ್ವದ ಹಾಗೂ ವೈವಿಧ್ಯದ ದೃಷ್ಟಿಯಿಂದ ವಿಶೇಷವಾದ ಪ್ರಗತಿ ಕಂಡುಬಂದಿರುವುದು ಮೆಚ್ಚಬೇಕಾದ ಸಂಗತಿ. ವಿಶ್ವದ ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರುವ 'ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ', 'ಮೋಬಿ ಡಿಕ್', 'ರಕ್ತ ಪರಿಶೋಧನೆ'–ಮೊದಲಾದ ಕಾದಂಬರಿಗಳು ಈ ವರ್ಷ ಕನ್ನಡಕ್ಕೆ ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಈ ಕೃತಿಗಳ ಅನುವಾದಕರು ಅಭಿನಂದನೆಗೆ ಪಾತ್ರರು.

ಎರಿಕ್ ಮರಿಯಾ ರೇಮಾರ್ಕ್‌ನ 'ಆಲ್‌ಕ್ವಯಟ್ ಆನ್‌ದ ವೆಸ್ಟರ್ನ್ ಫ್ರಂಟ್' ಎಂಬ ಜರ್ಮನ್ ಕಾದಂಬರಿಯನ್ನು ಪಡುಕೋಣೆ ರಮಾನಂದ ಅವರು

'ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. 1914–1918ರ ಅವಧಿಯಲ್ಲಿ ನಡೆದ ಮೊದಲ ಮಹಾಯುದ್ಧದಿಂದ ಪ್ರೇರಣೆ ಪಡೆದಿರುವ ಈ ಕಾದಂಬರಿ ಸಾಮಾನ್ಯ ಸೈನಿಕನೊಬ್ಬನು ಯುದ್ಧರಂಗದಿಂದ ಪಡೆದುಕೊಂಡ ಎಲ್ಲ ರೀತಿಯ ಅನುಭವದ ಕಥನವಾಗಿದೆ. ಯುದ್ಧದ ನೈಜ ಚಿತ್ರಣವನ್ನು ಚಿತ್ರಿಸುವುದರೊಂದಿಗೆ ಸೈನ್ಯದ ಹಿರಿಯ ಅಧಿಕಾರಿಗಳ ದರ್ಪ ಅಹಂಕಾರ, ಕ್ರೌರ್ಯಗಳನ್ನು ಯುರೋಪಿನ ರಾಜಕೀಯ ಚಿತ್ರಣ–ಮೊದಲಾದು ವನ್ನು ನಿರ್ಲಿಪ್ತವಾಗಿ ಚಿತ್ರಿಸುವ ಈ ಕೃತಿಯನ್ನು ಯುದ್ಧ ಕಾದಂಬರಿಗಳಲ್ಲಿಯೇ ಗಮನಾರ್ಹವಾದುದೆಂದು ವಿಮರ್ಶಕರು ಪರಿಗಣಿಸಿದ್ದಾರೆ.

18–19 ವಯಸ್ಸಿನ ಪಾವ್ಲ್ ಬೊಯ್ಮರನು ತನ್ನ ಇಪ್ಪತ್ತು ಜನ ಸಹಪಾಠಿ ಗಳೊಂದಿಗೆ ಸೈನ್ಯಕ್ಕೆ ಸೇರುತ್ತಾನೆ. ಸೈನ್ಯದ ಕಠಿಣತಮವಾದ ತರಬೇತಿಯಿಂದ ಮೊದಲುಗೊಂಡು ಘೋರ ರಣರಂಗದಲ್ಲಿ ಅವರು ಅನುಭವಿಸುವ ಅಪಾರ ಕಷ್ಟ ನಷ್ಟಗಳು, ಪ್ರಾಣಹಾನಿ, ಗಾಯಗೊಂಡವರಿಗೆ ಚಿಕಿತ್ಸೆ, ಅಧಿಕಾರಿಗಳ ದಬ್ಬಾಳಿಕೆ ಇವೇ ಮೊದಲಾದ ಹೃದಯ ವಿದ್ರಾವಕ ಸನ್ನಿವೇಶಗಳ ನಗ್ನ ಸ್ವರೂಪದ ಚಿತ್ರಣ ದಿಂದಾಗಿ ಓದುಗರಿಗೆ ಅಂದಿನ ಸಂಗ್ರಾಮದ ಭೀಕರ, ರೌದ್ರ ವಾತಾವರಣದ ಪ್ರತ್ಯಕ್ಷ ಅನುಭವ ಲಭಿಸಿದಂತಾಗುತ್ತದೆ. ಅಷ್ಟರ ಮಟ್ಟಿಗೆ ನೈಜತೆಯನ್ನು ಕಾಯ್ದು ಕೊಂಡಿದೆ ಈ ಕೃತಿ.

ಗುಂಡಿನೇಟಿನಿಂದಾಗಿ ಕಡೆಯುಸಿರೆಳೆಯುತ್ತಾ ಬಿದ್ದಿರುವ ಗೆಳೆಯನ ಬಗ್ಗೆ ಕರುಣೆ ಇದ್ದರೂ, ಅವನ ಬೂಡ್ಸ್, ಬೆಲ್ಟ್ ಮೊದಲಾದ ಸಾಮಾನುಗಳು ತನಗೆ ದೊರಕುತ್ತವೆಯೇ ಎಂಬ ಆಸೆಯನ್ನು ವ್ಯಕ್ತ ಪಡಿಸುವ ಸೈನಿಕರೂ ಇಲ್ಲದಿಲ್ಲ. ಸಾವು_ಬದುಕಿನ ಅಂಚಿನಲ್ಲಿ ನಿಂತಿರುವ ವೀರ ಯೋಧರು ಜೀವನವನ್ನು ಕಾಣುವ ರೀತಿ, ಯುದ್ಧದ ಬಗ್ಗೆ ಅವರಿಗಿದ್ದ ರಮ್ಯ ಭ್ರಮೆಗಳು ಯುದ್ಧಕ್ಕೆ ಧುಮುಕಿದಾಗ 'ಭ್ರಮನಿರಸನ' ವಾಗುವ ಬಗೆ–ಇವುಗಳನ್ನು ಈ ಕೃತಿ ಓದಿಯೇ ಅನುಭವಿಸಬೇಕು. ಹೀಗಾಗಿ ಈ ಕೃತಿಯ ಶೀರ್ಷಿಕೆಗೇ ಒಂದು ವ್ಯಂಗ್ಯದ ಲೇಪವಿದೆ. ಚಿಕ್ಕ ವಯಸ್ಸಿನಲ್ಲಿಯೇ ಜೀವನ–ಮರಣದ ಬಗ್ಗೆ ಅಪಾರ ಅನುಭವ ತುಂಬಿಕೊಳ್ಳು ವಂತಹ ಉದ್ವೇಗದ ವಾತಾವರಣದಲ್ಲಿ ಜೀವಿಸುವ ಸೈನಿಕರ ಜೀವನದ ಪ್ರಾಮಾಣಿಕ ಹಾಗೂ ಅಪೂರ್ವ ಚಿತ್ರಣವನ್ನು ದಾಖಲಿಸುವ ಸಾರ್ವಕಾಲಿಕ ಯುದ್ಧ ಕಾದಂಬರಿಯೊಂದು ಈ ವರ್ಷ ಕನ್ನಡಕ್ಕೆ ಬಂದಿರುವುದು ಒಂದು ವಿಶೇಷ ಸಂಗತಿ.

ಹೆರ್ಮನ್ ಮೆಲ್‌ವಿಲ್ ಅವರ 'ಮೋಬಿಡಿಕ್' ಕಾದಂಬರಿಯನ್ನು ಅನುವಾದಿಸಿ ದವರು ವಿ. ಸೀತಾರಾಮಯ್ಯ ಅವರು. ಒಂದು ಹಡಗಿನ ಕ್ಯಾಪ್ಟನ್ ಮತ್ತು ಒಂದು ಬಿಳಿಯ ತಿಮಿಂಗಿಲ–ಇವುಗಳ ನಡುವಿನ ಹೋರಾಟವನ್ನು ಚಿತ್ರಿಸುವ

ಸುಪ್ರಸಿದ್ಧ ಕಾದಂಬರಿ. ಜಗತ್ತಿನ ಅದ್ಭುತ ಮತ್ತು ಆಶ್ಚರ್ಯಕರ ಪುಸ್ತಕಗಳಲ್ಲಿ ಒಂದೆಂದು ಓದುಗರಿಂದ ಪ್ರಶಂಸೆಗಳಿಸಿದೆ ಈ ಪುಸ್ತಕ. ಈ ಕೃತಿಯ ವಸ್ತು ದುಷ್ಟತನ. ನಾಗರಿಕತೆಯಿಂದ ದೂರವಾದ ವಿಚಿತ್ರ, ಭಯಾನಕ ಜಗತ್ತನ್ನು ಈ ಕಾದಂಬರಿ ಸೃಷ್ಟಿಸುತ್ತದೆ. ಅದು ನೀಡುವ ವಿವರಗಳಲ್ಲಿ ಮತ್ತು ಘಟನೆಗಳಲ್ಲಿ ವಾಸ್ತವಿಕತೆಯನ್ನು ಸಾಧಿಸುತ್ತದೆ. ತಿಮಿಂಗಿಲ ಬೇಟೆಗಾಗಿ ಹೊರಟ ಹಡಗಿನ ಸಿಬ್ಬಂದಿವರ್ಗದವರಲ್ಲಿ ಒಬ್ಬನಾಗಿ ಹಲವಾರು ಬಾರಿ ಸಮುದ್ರಯಾನ ಮಾಡುತ್ತಿದ್ದ ಮೆಲ್‌ವಿಲ್ ತನ್ನ ಸ್ವಂತ ಅನುಭವವನ್ನು ಕುರಿತು ಇಲ್ಲಿ ಚಿತ್ರಿಸಿದ್ದಾನೆ. "ತಿಮಿಂಗಿಲ ಬೇಟೆಯ ರಮ್ಯ ಕಥಾನಕವಾಗಿ ಪ್ರಾರಂಭವಾದ ಈ ಕಾದಂಬರಿ ಮುಂದೆ ಸಾಗುತ್ತಾ ಹೋದಂತೆ ಕೇವಲ ತಿಮಿಂಗಿಲ ಬೇಟೆಗೆ ಮಾತ್ರ ಸೀಮಿತವಾಗದೆ ಬರವಣಿಗೆ ಆಳಕ್ಕಿಳಿದು ಪ್ರಕೃತಿ–ಮನುಷ್ಯ, ಮನುಷ್ಯ–ದೈವಸಂಬಂಧ, ಮನುಷ್ಯನ ಅಸ್ತಿತ್ವ–ಇವನ್ನು ಕುರಿತ ಹಲವು ಮಹತ್ವದ ಪ್ರಶ್ನೆಗಳಿಗೆ, ಚಿಂತನೆಗಳಿಗೆ ಎಡೆಕೊಟ್ಟು, ಒಂದು ತಾತ್ವಿಕ ನೆಲೆಗಟ್ಟಿಗೆ ಕೊಂಡೊಯ್ಯುತ್ತದೆ. ಆ ಕಾರಣದಿಂದ 'ಮೋಬಿಡಿಕ್' ಆ ಕಾಲದ–ಈಗಿಗೂ ಅತಿ ಮಹತ್ವದ ಅಮೆರಿಕನ್ ಸಾಹಿತ್ಯಕೃತಿಗಳಲ್ಲೊಂದಾಯಿತು"–ಎಂದು ಅನುವಾದಕರು ಮುನ್ನುಡಿಯಲ್ಲಿ ಹೇಳಿರುವ ಈ ಮಾತುಗಳು ಈ ಕೃತಿಯ ಸಾರ್ವಕಾಲಿಕ ಮೌಲ್ಯವನ್ನು ಎತ್ತಿ ಹಿಡಿಯುತ್ತವೆ. ಈ ಕೃತಿಯ ಉದ್ದಕ್ಕೂ ಬರುವ ಶ್ವೇತ ತಿಮಿಂಗಿಲ ಸಂಕೇತಮಾತ್ರವಾಗಿ ಬರುತ್ತದೆ. ತಿಮಿಂಗಿಲ ಬೇಟೆಯು ಮನುಷ್ಯ ಮತ್ತು ಪ್ರಕೃತಿಯ ನಡುವೆ ನಡೆಯುವ ನಿರಂತರ ಹೋರಾಟಕ್ಕೆ ಪ್ರತಿಮೆಯಾಗಿದೆ. ಮೆಲ್‌ವಿಲ್ ಅವರ 'ಟೈಪೀ' ಕಾದಂಬರಿ ಈಗಾಗಲೇ ಕನ್ನಡಕ್ಕೆ ಬಂದಿದೆ. ಈ ವರ್ಷ ಬಂದಿರುವ 'ಮೋಬಿಡಿಕ್' ಕಾದಂಬರಿ ಕನ್ನಡಕ್ಕೆ ಸ್ವಾಗತಾರ್ಹವಾದ ಕೊಡುಗೆಯಾಗಿದೆ.

ಪತ್ತೇದಾರಿ ಕಾದಂಬರಿ ಪ್ರಪಂಚದಲ್ಲಿ ಸರ್ ಆರ್ಥರ್ ಕಾನನ್ ಡಾಯ್ಲ್ ಅವರದು ಸುಪ್ರಸಿದ್ಧವಾದ ಹೆಸರು. ತನ್ನ ವೈಜ್ಞಾನಿಕ ಸಂಶೋಧನೆಗಳಿಂದ ಹಾಗೂ ವಿಶೇಷ ಬುದ್ಧಿವಂತಿಕೆಯಿಂದ ಪತ್ತೇದಾರಿಕೆಯನ್ನು ಹವ್ಯಾಸವಾಗಿ ಕೈಗೊಂಡು ಓದುಗರ ಅಪಾರ ಮೆಚ್ಚಿಗೆಗಳಿಸಿರುವ ಪತ್ತೇದಾರ ಷರ್ಲಾಕ್ ಹೋಮ್ಸ್‌ನನ್ನು ಪರಿಚಯಿಸುವ ಕಾದಂಬರಿ 'ರಕ್ತಪರಿಶೋಧನೆ.' ಇದು ಕಾನನ್ ಡಾಯ್ಲ್ ಅವರ 'A study in Scarlet' ಕಾದಂಬರಿಯ ಅನುವಾದ. ಇದರ ಅನುವಾದಕರು ವಾಸುದೇವರಾವ್.

ಈ ಕೃತಿಯಲ್ಲಿ ಎರಡು ಭಾಗಗಳಿವೆ. ಲಂಡನ್ ನಗರದ ಮನೆಯೊಂದರಲ್ಲಿ ಎನೋಕ್ ಡ್ರೆಬರ್ ಎಂಬುವನ ಕೊಲೆಯಾಗುತ್ತದೆ. ಸ್ಕಾಟ್ಲೆಂಡ್ ಯಾರ್ಡ್‌ನ ಸರ್ಕಾರದ ಪತ್ತೇದಾರಿ ಚತುರರು ಕೊಲೆಗಾರ ಯಾರು ? ಏತಕ್ಕೆ ಕೊಲೆಯಾಯಿತು? ಎಂಬುದನ್ನು ಕಂಡುಹಿಡಿಯಲು ಹೊರಟಾಗ ಹೋಮ್ಸ್ ತನ್ನ ಪ್ರತ್ಯುತ್ಪನ್ನಮತಿತನದಿಂದ

ಅವರಿಗೆ ನೆರವಾಗುತ್ತಾನೆ. ತನ್ನ ಜಾಣ್ಮೆ, ಚಾಕಚಕ್ಯತೆ, ರಕ್ತಪರೀಕ್ಷೆಯ ವಿಧಾನ ಹಾಗೂ ಕೆಲವೇ ಊಹೆಗಳಿಂದ ಮೂರು ದಿವಸಗಳಲ್ಲಿ ಕೊಲೆಗಾರನನ್ನು ಕಂಡು ಹಿಡಿಯುತ್ತಾನೆ. ಇವಿಷ್ಟು ಮೊದಲನೆಯ ಭಾಗದ ವಿವರಗಳು.

ಎರಡನೆಯ ಭಾಗವು ಈ ಕೊಲೆಗೆ ಕಾರಣವಾದ ಘಟನೆಗಳನ್ನು ವಿವರಿಸು ತ್ತದೆ. ಸಾಲ್ಟ್ ಲೇಕ್ ಸಿಟಿಯ ಜಾನ್ ಫೆರಿಯರ್ ಎಂಬುವನ ಮಗಳು ಲೂಸಿಯನ್ನು ಭಿನ್ನಮತೀಯನಾದ ಜೆಫರ್‌ಸನ್ ಹೋಪ್ಸ್ ಎಂಬ ಯುವಕನು ಪ್ರೀತಿಸಿ ಮದುವೆ ಯಾಗಬೇಕೆಂದಿರುತ್ತಾನೆ. ಇದಕ್ಕೆ ಲೂಸಿಯ ತಂದೆಯ ಒಪ್ಪಿಗೆಯೂ ದೊರಕುತ್ತದೆ. ಆದರೆ ಡ್ರೆಬರ್ ಮತ್ತು ಸ್ಟ್ಯಾಂಗರ್‌ಸನ್ ಎಂಬುವರು ಇದನ್ನು ವಿರೋಧಿಸುತ್ತಾರೆ. ಸ್ಟ್ಯಾಂಗರ್‌ಸನ್ ಫೆರಿಯರ್‌ನನ್ನು ಕೊಂದು ಹೂಳಿಬಿಡುತ್ತಾನೆ. ಹಿರಿಯ ಮತಾಧಿಕಾರರ ಆದೇಶದಂತೆ ಡ್ರೆಬರ್–ಲೂಸಿಯರ ಮದುವೆಯಾಗುತ್ತದೆ. ಇಷ್ಟ ವಿಲ್ಲದ ಬಲಾತ್ಕಾರದ ಮದುವೆಯಿಂದ ದುಃಖಿತಳಾದ ಲೂಸಿ ಕೃಶಳಾಗಿ ಸಾವನ್ನಪ್ಪುತ್ತಾಳೆ. ಭಗ್ನಪ್ರೇಮಿಯಾದ ಹೋಪ್ಸ್ ಡ್ರೆಬರ್ ಮತ್ತು ಸ್ಟ್ಯಾಂಗರ್‌ಸನ್‌ರನ್ನು ಅವರೆಲ್ಲಿ ಹೋದರೂ ಬಿಡದೆ ಭೂತದಂತೆ ಬೆನ್ನಟ್ಟಿ ಕಡೆಗೆ ಸಮಯ ನೋಡಿ ಅವರನ್ನು ಕೊಲೆಮಾಡಿ ಸೇಡು ತೀರಿಸಿಕೊಳ್ಳುತ್ತಾನೆ.

ಕುತೂಹಲದಿಂದ ಓದಿಸಿಕೊಳ್ಳುವ ಕಾನನ್‌ಡಾಯ್ಲ್‌ನ ಮೊದಲ ಪತ್ತೇದಾರಿ ಕಾದಂಬರಿ ಕನ್ನಡಕ್ಕೆ ಬಂದುದು ಸಂತಸದ ಸಂಗತಿಯಾದರೂ ಅನುವಾದದ ಭಾಷೆ ಯಲ್ಲಿ ಇನ್ನಷ್ಟು ಸಹಜತೆ ಇರಬೇಕಾಗಿತ್ತೆನಿಸುತ್ತದೆ. ಕೆಲವು ವಾಕ್ಯಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳದೆ ಕಿರಿಕಿರಿ ಉಂಟುಮಾಡುತ್ತವೆ. ಪು. 10–11 ರಲ್ಲಿ ಕಾಣಿಸಿಕೊಳ್ಳುವ ಅನಾವಶ್ಯಕ ಇಂಗ್ಲಿಷ್ ಪರ್ಯಾಯ ಪದಗಳ ಅಗತ್ಯ ವೇನೆಂದು ತಿಳಿಯುವುದಿಲ್ಲ. 'ಅನುಮಿತಿ'ಗೆ ಬದಲಾಗಿ 'ಅನುಮತಿ' ಎಂಬ ಪದದ ಬಳಕೆ ಅಪಾರ್ಥಕ್ಕೆ ಎಡೆಕೊಡುತ್ತದೆ. (ಪು. 19, 22) ಈ ಕುಂದು ಕೊರತೆಗಳನ್ನು ಬಿಟ್ಟರೆ ಉಳಿದಂತೆ ಈ ಕೃತಿ ತುಂಬಾ ಖುಷಿ ಕೊಡುತ್ತದೆ.

"ಅಪಾದಿತನನ್ನು ಹಿಡಿದವರು ಹೆಸರಾಂತ ಶ್ರೀಗಳಾದ ಲೆಸ್ಟ್ರೇಡ್ ಮತ್ತು ಗ್ರೆಗ್‌ಸನ್ ಎಂದು ಎಲ್ಲರಿಗೂ ತಿಳಿದ ವಿಷಯವಾಗಿದೆ ಮತ್ತು ಈ ಖ್ಯಾತಿ ಇವರಿಬ್ಬ ರಿಗೂ ಸೇರಿದೆ. ಕೇವಲ ಹವ್ಯಾಸಕ್ಕಾಗಿ ಪತ್ತೇದಾರಿ ವೃತ್ತಿಯನ್ನು ಅವಲಂಬಿಸಿ ರುವ ಶ್ರೀಷರ್ಲಾಕ್ ಹೋಮ್ಸ್‌ರ ಕೊಠಡಿಯಲ್ಲಿ ಕೊಲೆಗಾರನನ್ನು ಪತ್ತೇದಾರ ರಿಬ್ಬರೂ ಬಹು ಜಾಣ್ಮೆಯಿಂದ ಹಿಡಿದರು. ಮೇಧಾವಿಗಳಾದ ಲೆಸ್ಟ್ರೆಡ್ ಮತ್ತು ಗ್ರೆಗ್ಸನರೊಂದಿಗೆ ಇನ್ನೂ ಕೆಲಕಾಲ ಕೆಲಸಮಾಡಿದಲ್ಲಿ ಮಿಸ್ಟರ್ ಷರ್ಲಾಕ್ ಹೋಮ್ಸ್‌ರು ಅವರಿಬ್ಬರ ಮಟ್ಟಕ್ಕೆ ಬರದಿದ್ದರೂ ಕೂಡ ಉತ್ತಮ ಪತ್ತೇದಾರ ರಾಗುವುದರಲ್ಲಿ ಸಂದೇಹವಿಲ್ಲ. ಸರ್ಕಾರವು ಲೆಸ್ಟ್ರೇಡ್ ಮತ್ತು ಗ್ರೆಗ್ಸನ್‌ರ ಕಾರ್ಯ

ನಿರ್ವಹಣೆಯನ್ನು ಮೆಚ್ಚಿ ಇಷ್ಟರಲ್ಲೇ ಯೋಗ್ಯತಾ ಪತ್ರಗಳನ್ನು ಕೊಡುವರೆಂದು ತಿಳಿದುಬಂದಿದೆ". (ಪು. 133) ಈ ಮಾತುಗಳ ಹಿಂದಿರುವ ಸತ್ಯ ಇಂದಿನ ಪರಿಸ್ಥಿತಿಯಲ್ಲಿ ಎಷ್ಟು ಅರ್ಥಪೂರ್ಣವೆನಿಸುತ್ತದೆ! ಸತ್ಯಸಂಗತಿ ಒಂದಲ್ಲ ಒಂದು ದಿನ ಹೊರಬೀಳಲೇಬೇಕು !

ಭಾಷ್ಯಂತನುಜೆಯವರ 'ಸ್ವರ್ಗದೀಪ', ಸುಜಾತ ಅವರ 'ಸ್ವರ್ಗತೀವು' ಎಂಬ ತಮಿಳು ಕಾದಂಬರಿಯ ಅನುವಾದ. ಮೊದಲಿನಿಂದ ಕಡೆಯವರೆಗೂ ಕುತೂಹಲವನ್ನು ಉಳಿಸಿಕೊಂಡು ಆಸಕ್ತಿಯನ್ನು ಕೆರಳಿಸುತ್ತಾ ನಿರಾಯಾಸವಾಗಿ ಓದಿಸಿಕೊಳ್ಳುವ ಕೃತಿ ಇದು. ಇದು ಅನುವಾದ ಕೃತಿಯೆಂದು ಅನ್ನಿಸದೆ ಕನ್ನಡದಲ್ಲಿಯೇ ರಚಿತವಾದ ಸ್ವಂತ ಕೃತಿ ಎನ್ನುವಷ್ಟರ ಮಟ್ಟಿಗೆ ಇಲ್ಲಿಯ ಭಾಷೆಯಲ್ಲಿ ಸಹಜತೆ, ಸರಳತೆ ಇದೆ.

ಈ ಕೃತಿಯ ವಸ್ತು, ಪಾತ್ರ, ವಾತಾವರಣ-ಇವು ಕಾಲ್ಪನಿಕವಾದರೂ ಬಲಿಷ್ಠವಾದ ವ್ಯವಸ್ಥೆಯ ಪಂಜರದಲ್ಲಿ ಬಂಧಿತರಾದ ಸ್ವತಂತ್ರ ವ್ಯಕ್ತಿಗಳ ಬದುಕು ಎಷ್ಟು ಅಸಹನೀಯ, ಅಶಕ್ಯ ಎಂಬುದನ್ನು ಇದು ಚಿತ್ರಿಸುತ್ತದೆ. ಬಲಿಷ್ಠವಾದ ವ್ಯವಸ್ಥೆಯ ವಿರುದ್ಧ ನಡೆಸುವ ಯಾವ ಕ್ರಾಂತಿಯೂ ಮುರಿದು ಬೀಳುತ್ತದೆಂಬ ಸತ್ಯವನ್ನು ಈ ಕೃತಿ ಮನಗಾಣಿಸುತ್ತದೆ.

ಅಪರಿಚಿತ ದ್ವೀಪವೊಂದರ ಇಡೀ ಆಡಳಿತವನ್ನು ಕಂಪ್ಯೂಟರ್ ನಿಯಂತ್ರಿಸುತ್ತಿರುತ್ತದೆ. ಅಲ್ಲಿನ ಜನರ ಬದುಕು, ಬುದ್ಧಿ, ಮನಸ್ಸು, ಆಹಾರ, ಆರೋಗ್ಯ–ಇವೆಲ್ಲಾ ಕಂಪ್ಯೂಟರ್‌ನ ಆಜ್ಞೆಯೊಂದಿಗೆ ನಡೆಯುತ್ತಿರುತ್ತದೆ. ಕಂಪ್ಯೂಟರ್‌ನ ಸಹಾಯದಿಂದ ಜನರ ಬದುಕನ್ನು ಅತ್ಯಂತ ಕಟ್ಟುನಿಟ್ಟಿಗೆ ಒಳಪಡಿಸಿರುವವ ಇಲ್ಲಿನ ಮುಖ್ಯಸ್ಥ ಸತ್ಯ. ಈತನೇ ಈ ದ್ವೀಪದ ಸರ್ವಾಧಿಕಾರಿ. ವಶೀಕರಣಕ್ಕೆ ಒಳಗಾದವರಂತೆ ಇಲ್ಲಿನ ಜನ ಅವನ ಅಡಿಯಾಳುಗಳು. ಈ ಉಸಿರುಕಟ್ಟಿಸುವ ವಾತಾವರಣದಿಂದ ಹೊರಬಂದು ಸ್ವತಂತ್ರವಾಗಿ ಉಸಿರಾಡಬೇಕೆಂದು ಕೆಲವು ಕ್ರಾಂತಿಪ್ರೇಮಿಗಳು ಬಯಸುತ್ತಿದ್ದರು.

ಇಷ್ಟೆಲ್ಲಾ ಮಾಡುತ್ತಿದ್ದ ಆ ಕಂಪ್ಯೂಟರ್ ಒಮ್ಮೆ ಕೆಟ್ಟು ಹೋಗುತ್ತದೆ. ಕಂಪ್ಯೂಟರ್ ತಜ್ಞನೊಬ್ಬನನ್ನು ಅಪಹರಿಸಿಕೊಂಡು ಬಂದು ಕೆಟ್ಟುಹೋದ ಕಂಪ್ಯೂಟರ್ ಅನ್ನು ಸರಿಪಡಿಸಬೇಕೆಂದು ಅವನಿಗೆ ತಿಳಿಸುತ್ತಾರೆ. ಕಂಪ್ಯೂಟರನ ಒಂದು ತಪ್ಪಿನಿಂದಾಗಿ ಈ ಕಠಿಣ ನಿಯಮ ಸಡಿಲವಾದರೆ ಸ್ವಲ್ಪ ಸ್ವತಂತ್ರವಾಗಿ ಹಗುರವಾಗಿ ಉಸಿರಾಡಬಹುದೆಂದು ಕ್ರಾಂತಿ ಪ್ರೇಮಿಗಳು ಯೋಚಿಸುತ್ತಾರೆ. ಅದರಂತೆ ಅವರು ಕಂಪ್ಯೂಟರ್ ಯಂತ್ರವನ್ನೇ ನಾಶಮಾಡಲು ತಜ್ಞನೊಡನೆ ಹೂಡಿದ ಸಂಚು ಫಲಕಾರಿಯಾಗುವುದಿಲ್ಲ. ಕ್ರಾಂತಿಯ ನಾಯಕ ತನ್ನ ಪ್ರೇಯಸಿಯನ್ನು

ಕೊಲೆಮಾಡುವಷ್ಟು ಭ್ರಮಿತನಾಗುತ್ತಾನೆ. ಹೆಣ್ಣುಗಳನ್ನು ಆ ವ್ಯವಸ್ಥೆಯ ಅಧಿಕಾರಿಗಳು ಅಸಭ್ಯ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ. ಅವರ ಪಾಲಿಗೆ ಹೆಣ್ಣುಗಳೆಂದರೆ ಸುಂದರವಾದ ಯಂತ್ರದ ಬೊಂಬೆಗಳು. ಈ ದ್ವೀಪದ ಜನತೆಯ ಅಸಹಾಯಕತೆಗೆ ಕನಿಕರಿಸಿದ ಕಂಪ್ಯೂಟರ್ ತಜ್ಞ, ಸಮಯ ಸಾಧಿಸಿ ಕಂಪ್ಯೂಟರ್‌ಗೆ ನೀಡುವ ಮಾಹಿತಿಯಲ್ಲಿ ಒಂದು ಸಣ್ಣ ಅದಲು ಬದಲು ಮಾಡುತ್ತಾನೆ. ಇದರಿಂದಾಗಿ ಇನ್ನು ಮೂವತ್ತು ದಿನಗಳೊಳಗಾಗಿ ಸ್ವರ್ಗದ್ವೀಪದ ಮುಖ್ಯಸ್ಥನ ಕಠಿಣ ನಿಯಮ ತಲೆಕೆಳಗಾಗಿ ಜನ ಸಹಜ ಸ್ಥಿತಿಗೆ ಮರಳುತ್ತಾರೆಂಬ ಖುಷಿಯೊಡನೆ ಸ್ವಸ್ಥಾನ ಸೇರುತ್ತಾನೆ. ಅಡೆತಡೆಯಿಲ್ಲದೆ ಒಂದೇ ಪಟ್ಟಿಗೆ ಓದಿಸಿಕೊಂಡು ಹೋಗುವ ಈ ಕೃತಿ ಓದುಗರಿಗೆ ಹೊಸ ಅನುಭವವನ್ನು ನೀಡುವುದರಲ್ಲಿ ಹಿಂದೆ ಬೀಳುವುದಿಲ್ಲ.

ಶಕುಂತಲಾಬಾಲು ಅವರ ಇಂಗ್ಲಿಷ್ ಕಾದಂಬರಿ 'ಆರತಿ'ಯನ್ನು ಅನುವಾದಿಸಿದವರು ಅಂದನೂರು ಶೋಭ. ಮಕ್ಕಳ ಅಪಹರಣ, ವಿಗ್ರಹ ಚೌರ್ಯ—ಇವೇ ಮೊದಲಾದ ಸಾಮಾಜಿಕ ಅನಿಷ್ಟಗಳ ವಿಷಜಾಲವೊಂದರಲ್ಲಿ ಸಿಕ್ಕಿ ಹಾಕಿಕೊಂಡ ವಿದ್ಯಾವಂತ, ಶ್ರೀಮಂತ, ಪ್ರತಿಷ್ಠಿತ ಮನೆತನದ ಆಧುನಿಕ ತರುಣಿಯೊಬ್ಬಳ ಸಾಹಸಮಯ ಅನುಭವವನ್ನು ಈ ಕೃತಿ ಚಿತ್ರಿಸುತ್ತದೆ. ಜನರನ್ನು ಬೆದರಿಸಿ ಹಣ ಕೀಳುವ ಮತ್ತು ಮುಗ್ಧ ಹೆಣ್ಣು ಮಕ್ಕಳ ವ್ಯಾಪಾರವನ್ನು ನಡೆಸುತ್ತಿದ್ದ ಶೀಲಾದೇವಿಯೆಂಬ ಸಮಾಜಘಾತುಕ ವ್ಯಕ್ತಿಯು ನಿಷ್ಠಾವಂತ ಶೋಧಕರ ಜಾಣ್ಮೆಯಿಂದ ಬಂಧನಕ್ಕೊಳಗಾಗುವುದು—ಡಕಾಯಿತರ ಗುಂಪಿನಲ್ಲಿ ಸಿಕ್ಕಿಹಾಕಿಕೊಂಡ ಆರತಿ ಅಪಾಯದಿಂದ ಪಾರಾಗಿ ಜೀವ ಸಹಿತ ತನ್ನ ಮನೆ ಸೇರುವುದು—ಈ ಸನ್ನಿವೇಶಗಳಲ್ಲಿ ನಡೆಯುವ ಘಟನೆಗಳು ಒಳ್ಳೆಯ ರೋಚಕವಾದ ಚಲನಚಿತ್ರಕ್ಕೆ ಹೇಳಿಮಾಡಿಸಿದಂತಿವೆ. ಮಕ್ಕಳ ಅಪಹರಣದ ಗುಂಪು, ಹೆಣ್ಣು ಮಕ್ಕಳ ದಂಧೆ ನಡೆಸುವ ಗುಂಪು, ದುಡ್ಡಿಗಾಗಿ ಮಕ್ಕಳನ್ನು ಅಪಹರಿಸಿ 'Black Mail' ಮಾಡುವ ಗುಂಪು—ಸಮಾಜದ ಈ ದುಷ್ಟ ಶಕ್ತಿಗಳ ವಿರುದ್ಧ ನಿಂತ ಸಮಾಜದ ಹಿತಚಿಂತಕರಿಗೆ ಒದಗುವ ಗಂಡಾಂತರ, ಪ್ರಾಣಾಪಾಯ ಕಡೆಗೆ ದುಷ್ಟ ಶಕ್ತಿಗೆ ಸೋಲು—ಇವೇ ಮೊದಲಾದುವುಗಳನ್ನು ನಿರೂಪಿಸುವ ಈ ಕೃತಿ ಆಸಕ್ತಿ ಕೆರಳಿಸುತ್ತದೆ ಮಾತ್ರವಲ್ಲ ನಮ್ಮ ಸಮಾಜದ ಸುತ್ತಮುತ್ತ ನಡೆಯುತ್ತಿರುವ ಆಗುಹೋಗುಗಳ ಬಗೆಗೆ ಕಣ್ತೆರೆಸಿ ಓದುಗರನ್ನು ಗಂಭೀರ ಆಲೋಚನೆಗೆಳೆಯುತ್ತದೆ. ಆದರೆ ಬಹಳಷ್ಟು ಸಾಮಾಜಿಕ ಸಮಸ್ಯೆಗಳನ್ನು ಒಂದೇ ಕಡೆಗೆ ತುರುಕಿರುವುದರ ಔಚಿತ್ಯವೇನೋ ತಿಳಿಯುವುದಿಲ್ಲ.

ಮೂಲದ ಅಂದಕೆಡದಂತೆ ಅನುವಾದಗೊಂಡಿರುವ ಈ ಕೃತಿಯ ಭಾಷಾಶೈಲಿ ಮೋಹಕವಾಗಿದೆ. ನವಿರಾದ ಸೂಕ್ಷ್ಮ ಕೋಮಲ ಭಾವನೆಗಳನ್ನು ಹೃದ್ಯವಾಗಿ ಅಭಿವ್ಯಕ್ತಿಗೊಳಿಸುವ ಕಲೆ ಇಲ್ಲಿ ಸಾಧಿತವಾಗಿದೆ.

ಮಿಸ್. ಸಂಪತ್ ಅವರು ಅನುವಾದಿಸಿರುವ ಮಾಲತಿ ಚಂದೂರ್ ಅವರ ತೆಲುಗು ಕಾದಂಬರಿ 'ಥಿಂಕ್' ತನ್ನ ನಿರೂಪಣಾ ತಂತ್ರದಿಂದಾಗಿ ಗಮನ ಸೆಳೆಯುತ್ತದೆ. ಆತ್ಮ ವಿಶ್ವಾಸ ಕಳೆದುಕೊಂಡು ಮಾನಸಿಕ ಆಘಾತಕ್ಕೊಳಗಾದ ಸೂಕ್ಷ್ಮ ಮನಸ್ಸಿನ ಹೆಣ್ಣೊಂದು ತನ್ನ ಸಂಸಾರದ ದಾರುಣ ಕತೆಯನ್ನು ನೆನಪಿನ ಸರುಳಿಗಳ ಮೂಲಕ ಬಿಚ್ಚುತ್ತಾ ಹೋಗುವುದು ಈ ಕೃತಿಯ ವಿಶೇಷತೆ. ತನ್ನ ಸಂಸಾರ ಒಡೆಯಲು ಕಾರಣಳಾದ ಹೆಣ್ಣೊಬ್ಬಳನ್ನು ತಿರಸ್ಕಾರದಿಂದ, ದ್ವೇಷದಿಂದ ಕಾಣುತ್ತಿದ್ದ ಲಲಿತ ಎಂಬ ಯುವತಿ ತನ್ನ ಗಂಡ ತನ್ನನ್ನು ದೂರಮಾಡಿದನೆಂಬ ಭಾವನೆಯಿಂದ ಮನಶ್ಶಾಂತಿ ಕೆಡಿಸಿಕೊಳ್ಳುತ್ತಾಳೆ. ತನ್ನನ್ನು ಈ ಸ್ಥಿತಿಗೆ ತಂದ ವ್ಯಕ್ತಿಗಳ ಮೇಲೆ ಅವಳಿಗೆ ಜಿಗುಪ್ಸೆಯುಂಟಾಗುತ್ತದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿ ತೊಳಲಾಡುತ್ತಿದ್ದ ಲಲಿತಳಿಗೆ ಆಶ್ರಮದ ಸ್ವಾಮಿಜಿಯೊಬ್ಬರು ಬರೆದ 'ಥಿಂಕ್' ಎಂಬ ಪುಸ್ತಕಅಕಸ್ಮಾತ್ತಾಗಿ ಸಿಗುತ್ತದೆ. ಅದರಲ್ಲಿದ್ದ "ಆಲೋಚಿಸು, ನಿನ್ನನ್ನು ಕುರಿತು ಮಾತ್ರವಲ್ಲ – ಎದುರಿನಲ್ಲಿರುವವರನ್ನು ಕುರಿತು ಆಲೋಚಿಸು...ನಿನ್ನ ಪ್ರತ್ಯರ್ಥಿಯನ್ನು ಕುರಿತು, ನಿನ್ನನ್ನು ನೋಯಿಸಿದವರನ್ನು ಕುರಿತು, ನಿನ್ನನ್ನು ಗಾಯಪಡಿಸಿದವರನ್ನು ಕುರಿತು ಚೆನ್ನಾಗಿ ಆಲೋಚಿಸು"—ಎಂಬ ಮಾತುಗಳು ಅವಳಿಗೆ ಅತ್ಯಂತ ಆಕರ್ಷಣೀಯವಾಗಿ ಕಂಡವು. ಮೊದಲ ಬಾರಿಗೆ ಲಲಿತ ತನ್ನ ಸುಖವನ್ನು ಬದಿಗಿಟ್ಟು ತನ್ನ ಸುತ್ತಮುತ್ತಲಿನ ನೊಂದ ಜೀವಿಗಳತ್ತ ಕಣ್ಣು ತೆರೆದು ನೋಡಿದಾಗ ಅವಳ ಮನದಲ್ಲಿ ಬೇರೂರಿದ್ದ ದ್ವೇಷಾಸೂಯೆಗಳು ಕರಗುತ್ತಾ ಬಂದು ಅವಳ ಬಾಳಲ್ಲಿ ಬೆಳಕು ಮೂಡುತ್ತದೆ. ಈ ರೀತಿ ಆತ್ಮ ವಿಶ್ವಾಸ ಕಳೆದುಕೊಂಡ ವ್ಯಕ್ತಿಗಳನ್ನು ಆಲೋಚಿಸುವಂತೆ ಮಾಡುವ 'ಥಿಂಕ್' ಎಂಬ ಆಶ್ರಮದ ಸ್ವಾಮಿಜಿಯ ಸಾಂತ್ವನದ, ಸಾತ್ವಿಕದ ಹಿತವಚನಗಳಿಂದ ಹಾಗೂ ವೈಚಾರಿಕ ಆಲೋಚನೆಗಳಿಂದ ಮನಃಸ್ಥೈರ್ಯ ತಂದುಕೊಂಡು ತನ್ನನ್ನು ಜನಹಿತ ಕಾರ್ಯಕ್ಕೆ ತೊಡಗಿಸಿಕೊಳ್ಳುವುದರ ಮೂಲಕ ಬಾಳಿನಲ್ಲಿ ತೃಪ್ತಿಕಾಣುತ್ತಾಳೆ ಇಲ್ಲಿನ ನಾಯಕಿ.

ಮಾಮೂಲು ಕಥಾವಸ್ತುವಾದರೂ ನಿರೂಪಣಾ ತಂತ್ರದಿಂದಾಗಿ ಈ ಕೃತಿ ಓದುಗರ ಆಸಕ್ತಿಯನ್ನು ಉಳಿಸಿಕೊಳ್ಳುತ್ತದೆ. ಆದರೆ ಮಿಸ್. ಸಂಪತ್ ಅವರಿಗೆ ಇರುವ ಇಂಗ್ಲಿಷ್ ಪದಗಳ ಬಳಕೆಯ ಬಗೆಗಿನ ಮೋಹ ಮಾತ್ರ ಓದುಗರ ತಾಳ್ಮೆ ಕೆಡಿಸುತ್ತದೆ. ಬೇಸರತರಿಸುತ್ತದೆ.

ಉದಾ : "ಬಂದವರಲ್ಲಿ ಕೆಲವರು ಆ ಹುಡುಗಿಯನ್ನು ನೋಡಿ wink ಮಾಡಲು ಶುರುಮಾಡಿದ್ರು. ಅದು ಎಷ್ಟು vulgar ಆಗಿತ್ತೆಂದರೆ ನನಗೆ ನೋಡೋದಕ್ಕೆ ಆಗಲಿಲ್ಲ. ಬಹಳ irritate ಆಗಿತ್ತು".

"Environment Parents ಮೇಲೆ depend ಆಗುತ್ತೆ".

"ರಾತ್ರಿ dinner ನಲ್ಲಿ ನಾವೂ ಸಹ ಹೆಚ್ಚು ಕಮ್ಮಿ lost ಹಾಗೆ ಎಲ್ಲರನ್ನೂ ವಿಚಾರಿಸಬೇಕಾಗಿ ಬಂತು. ಅದು ಬಂದದ್ದರಿಂದ ನಾವೂ ಕೂಡ ಈ exhibition ನಲ್ಲಿ partners ಆದಹಾಗೆ ಎಲ್ಲರೂ ತಿಳಿದುಕೋಬಹುದು ?" (—ಪು. 28).

ಈ ಬಗೆಯ ವಾಕ್ಯಗಳು ಈ ಪುಸ್ತಕದಲ್ಲಿ ಸಾಕಷ್ಟಿವೆ. ಅಲ್ಲದೆ ತಪ್ಪು ಅರ್ಥ ಕೊಡುವ ವಾಕ್ಯ ರಚನೆಗಳು ಈ ಕೃತಿಯಲ್ಲಿವೆ.

ಉದಾ : "ಏನೂ ತಿಳಿಯದ ಹಸುಳೆಯ ಮೇಲೆ ನಮ್ಮ ತಾಯಿ ಹಗೆ ಸಾಧಿಸದಿದ್ದರೆ, ಸ್ವಲ್ಪ ಸಹಾನುಭೂತಿ ತೋರಿಸದಿದ್ದರೆ, ತನ್ನ ಮಕ್ಕಳ ವಯಸ್ಸಿನ ಆ ಹುಡುಗಿಯ ವಿಷಯದಲ್ಲಿ ಸ್ವಲ್ಪ ಕನಿಕರ ತೋರಿಸದಿದ್ದರೆ ಇಷ್ಟು ಘೋರ ನಡೆಯುತ್ತಿರಲಿಲ್ಲ" (ಪು. 100). ಇಂತಹ ದೋಷಪೂರ್ಣವಾದ ವಾಕ್ಯಗಳು, ಲೇಖಕಿಗಿರುವ ಭಾಷಾ ಜ್ಞಾನದ ಮಟ್ಟ ಎಂತಹುದೆಂಬುದನ್ನು ತೋರಿಸುತ್ತವೆ.

ರಮಾಪಾಂಡುರಂಗಂ ಅವರ ತೆಲುಗು ಕಾದಂಬರಿ 'ಸೃಜನ'ವನ್ನು ಕನ್ನಡಿಸಿದವರು ಮೊ. ವಿ. ವೆಂಕಟಸುಬ್ಬರಾವ್. ಬಾಲ್ಯದಲ್ಲಿ ನಡೆದು ಹೋದ ಗೊಂಬೆಯ ಮದುವೆ ಯನ್ನು ನೆಚ್ಚಿಕೊಂಡು ಶ್ರೀಮಂತರ ಮನೆಯನ್ನು ಸೇರಿದ ಈ ಕಾದಂಬರಿಯ ನಾಯಕಿ ಸೃಜನ ಪತಿಭಕ್ತಿ ಪರಾಯಣೆ. ಆ ಮನೆಯ ಸೊಸೆಯೆನಿಸಿಕೊಳ್ಳಲೇ ಬೇಕೆಂಬ ಹಠದಿಂದ ಈ ದಿಸೆಯಲ್ಲಿ ಎದುರಾದ ಹಲವಾರು ಸಮಸ್ಯೆ, ಸಂಕಷ್ಟಗಳನ್ನು ಎದುರಿಸಿ ಕಡೆಗೂ ಆ ಮನೆಯ ಸೊಸೆಯೆನಿಸಿಕೊಳ್ಳುತ್ತಾಳೆ ಆಶಾವಾದಿ ಸೃಜನ. ಸಂಪ್ರದಾಯಬದ್ಧ ನಂಬಿಕೆಗಳಿಗೆ ಜೋತುಬೀಳುವ ಸಿದ್ಧ ಪಾತ್ರಗಳು—ದುರ್ಬಲವಾದ ಕಥಾವಸ್ತುವನ್ನು ಅನವಶ್ಯಕವಾಗಿ ಎಳೆದಾಡಿರುವುದು—ಕಥೆಯು ತಟಕ್ಕನೆ ವಿಚಿತ್ರ ತಿರುವುಗಳನ್ನು ಪಡೆದುಕೊಳ್ಳುವುದು—ಹೆಣ್ಣನ್ನು ತಾಳ್ಮೆಯ ಪ್ರತೀಕವಾಗಿ ಚಿತ್ರಿಸಿ ಅವಳಲ್ಲಿ ಅನುಕಂಪ ಮೂಡಿಸುವುದು—ಇವೇ ಮೊದಲಾದ ಮಾಮೂಲು ಮಸಾಲೆ ಯಿಂದ ಕೂಡಿರುವ ಈ ಕೃತಿ ಓದುಗರ ಪಾಲಿಗೆ ಹೊಸತೇನನ್ನೂ ನೀಡುವುದಿಲ್ಲ.

ಈಗಾಗಲೇ ಕನ್ನಡದಲ್ಲಿ ಬಂದಿರುವ ಅಶ್ವಿನಿಯವರ 'ಬೆಸುಗೆ' ಕಾದಂಬರಿ ಯನ್ನು ಈ ಕಾದಂಬರಿಗೆ ಸ್ಥೂಲವಾಗಿ ಹೋಲಿಸಬಹುದು. ಆದರೆ 'ಬೆಸುಗೆ'ಯ ಕಥಾವಸ್ತು ಇನ್ನಷ್ಟು ಗಂಭೀರವಾಗಿದ್ದು ಅಲ್ಲಿಯ ಪಾತ್ರಗಳು ಗಟ್ಟಿ ನೆಲದ ಮೇಲೆ ನಿಂತಿವೆ. ಹೀಗಿದ್ದೂ 'ಸೃಜನ' ಕಾದಂಬರಿ ಕನ್ನಡಕ್ಕೆ ಅನುವಾದಗೊಂಡಿದ್ದರಲ್ಲಿ ಏನನ್ನೂ ಸಾಧಿಸಿದಂತೆ ಆಗಲಿಲ್ಲ.

'ವರಮಾಲ' ಪೋಲ್ಕಂಪಲ್ಲಿ ಶಾಂತಾದೇವಿಯವರ ತೆಲುಗು ಕಾದಂಬರಿ. ಇದರ ಅನುವಾದಕರು ಕೆ. ಆರ್. ಪದ್ಮಜೆ. ಪೂರ್ವಾಪರ ವಿವೇಚನೆಯಿಲ್ಲದೆ ವ್ಯಕ್ತಿಯೊಬ್ಬ ನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ವಿಚಿತ್ರವಾಗಿ ವರ್ತಿಸುವ ಹೆಣ್ಣೊಬ್ಬಳ ಸುತ್ತ ಕೇಂದ್ರೀಕೃತವಾಗಿರುವ ಈ ಕಾದಂಬರಿ ನೈಜತೆಗೆ ದೂರವಾಗಿದೆ. ನೈಜತೆ ಯಿಂದ ದೂರವಾಗಿರುವ ಕಥಾವಸ್ತುವಿನಿಂದ ಕೂಡಿರುವ ಈ ಕಾದಂಬರಿಯ

ಪಾತ್ರಗಳು ಭ್ರಮಾಲೋಕದಲ್ಲಿ ವಿಹರಿಸುತ್ತವೆ. ಹಗಲುಗನಸು ಕಾಣುವ ತರುಣ-ತರುಣಿಯರಿಗೆ ಮಾತ್ರ ಇಂತಹ ಕಾದಂಬರಿಗಳು ರಂಜಿಸಬಹುದೇನೋ!

ಯಾಮಿನಿ ಸರಸ್ವತಿಯವರ ತೆಲುಗು ಕಾದಂಬರಿ 'ಆಕಾಶ ಮಲ್ಲಿಗೆ'ಯನ್ನು ರಾಮಣ್ಣ ಆರ್ದ್ರಜ್ಜಿಯವರು ಅನುವಾದಿಸಿದ್ದಾರೆ. ಅಪರಿಚಿತ ವ್ಯಕ್ತಿಯೊಬ್ಬನು ರೈಲಿನಲ್ಲಿ ತಂದುಬಿಟ್ಟ ತನ್ನದಲ್ಲದ ಮಗುವನ್ನು ತನ್ನದೆಂಬಂತೆ ನಟಿಸಿ ವೃಥಾ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡ ಅವಿವಾಹಿತ ತರುಣಿಯೊಬ್ಬಳು ಪಡುವ ಪಾಡನ್ನು ಚಿತ್ರಿಸಲು ಹೊರಟಿರುವ ಕಾದಂಬರಿ ಇದು. ಗಂಡಿನ ಮನೆತನದ ಪ್ರತಿಷ್ಠೆ, ಗೌರವ, ಸ್ವಾರ್ಥ, ಶ್ರೀಮಂತಿಕೆ, ದರ್ಪ – ತತ್ಪರಿಣಾಮವಾಗಿ ಹೆಣ್ಣಿನ ಸೋಲು. ಅವಳನ್ನು ಅಂಗೈ ಮೇಲಿನ ಅರಗಿಣಿಯಂತಾಡಿಸಿ ಬಲಿಪಶುವನ್ನಾಗಿ ಮಾಡಿ ಕ್ರೂರ ತೃಪ್ತಿ ಪಡುವುದು ಶ್ರೀಮಂತ ಗಂಡಿನ ಹವ್ಯಾಸ. ಇಂಥ ಗಂಭೀರ ಸಮಸ್ಯೆಯೂ ಕೂಡ ಈ ಕಾದಂಬರಿಯಲ್ಲಿ ಮನಸ್ಸಿನ ಆಳವನ್ನು ತಟ್ಟದೆ, ತೀವ್ರ ಚಿಂತನೆಗೆಳೆಸದೆ, ಸಂಕೀರ್ಣಗೊಳ್ಳದೆ ಸುಲಭ ಪರಿಹಾರವನ್ನು ಕಂಡುಕೊಳ್ಳುತ್ತದೆ. ಕಡೆಯಲ್ಲಿ ನಾಟಕೀಯವಾದ ರೀತಿಯಲ್ಲಿ ಸುಖಾಂತವಾಗುತ್ತದೆ. ಶೀಲ ಅಪಹರಣವಾಗಿ ಒಂದು ಮಗುವಿನ ತಾಯಿಯಾದ ಕವಿತ ಆತ್ಮಹತ್ಯೆ ಮಾಡಿಕೊಳ್ಳದೆ ದಿಟ್ಟತನದಿಂದ ಜೀವನ ವನ್ನು ಎದುರಿಸುವ ಕೆಚ್ಚಿನ ಹೆಣ್ಣಾಗಿ ಚಿತ್ರಿತವಾಗಿರುವುದು ಇಲ್ಲಿನ ವಿಶೇಷ. ಹೂವಿನಿಂದ ಹೂವಿಗೆ ಹಾರುವ ದುಂಬಿಯ ಸ್ವಭಾವದ, ಜವಾಬ್ದಾರಿಯಿಲ್ಲದ, ಜೀವನಕ್ಕೆ ಬೆನ್ನುತಿರುಗಿಸಿ ಓಡುತ್ತಿರುವ ಸ್ವಾರ್ಥಿ ಯುವಕನನ್ನು ತಮ್ಮ ತಂತ್ರದ ಬಲೆಯೊಳಗೆ ಬೀಳಿಸಿ ಸೆರೆ ಹಿಡಿದ ಇಲ್ಲಿನ ಹೆಣ್ಣುಗಳ ಧೈರ್ಯ ಮೆಚ್ಚುವಂತಹುದು. 'ಆಕಾಶ ಮಲ್ಲಿಗೆ' ಎಂಬ ಶೀರ್ಷಿಕೆ ಈ ಕೃತಿಗೆ ಎಷ್ಟರಮಟ್ಟಿಗೆ ಔಚಿತ್ಯಪೂರ್ಣವಾಗಿದೆ ಎನ್ನುವುದು ಮಾತ್ರ ಪ್ರಶ್ನಾರ್ಹ.

ನೇರೇಳ್ಳ ರಾಮಲಕ್ಷ್ಮಿಯವರ 'ದೀಪ ಬೆಳಗಿತು' ಮತ್ತು ಜಯಂಪು ಕೃಷ್ಣರ 'ಕುಂದಣದ ಗೊಂಬೆ' ಎಂಬ ಕಾದಂಬರಿಗಳನ್ನು ವಂಶಿಯವರು ತೆಲುಗಿನಿಂದ ಅನುವಾದಿಸಿದ್ದಾರೆ. 'ದೀಪ ಬೆಳಗಿತು', ಹೆಣ್ಣಿನ ತ್ಯಾಗ, ಆದರ್ಶ, ದಿಟ್ಟತನವನ್ನು ಎತ್ತಿಹಿಡಿಯುವ ಕೃತಿ. ಸ್ನೇಹಿತನ ಹೆಂಡತಿಯ ರೂಪಕ್ಕೆ ಮರುಳಾಗಿ. ಅವರಿಗೆ ಸಹಾಯಮಾಡುವ ನೆಪದಲ್ಲಿ ಸ್ನೇಹಿತನ ಹೆಂಡತಿ ಪದ್ಮಾಳನ್ನು ಬಲೆಗೆ ಹಾಕಿಕೊಳ್ಳಲು ಹೂಡಿದ ತಂತ್ರದಲ್ಲಿ ವಿಫಲನಾಗುತ್ತಾನೆ. ಡಾ|| ಮೋಹನ್ ತನ್ನ ಮುರಿದ ಬದುಕನ್ನು ಸವಾಲಾಗಿ ತೆಗೆದುಕೊಂಡು ಅದನ್ನು ದಿಟ್ಟತನದಿಂದ ಎದುರಿಸಿದ ಪದ್ಮ ಅರ್ಥಪೂರ್ಣ ಬದುಕನ್ನು ರೂಪಿಸಿಕೊಳ್ಳುತ್ತಾಳೆ. ಸಿನಿಮೀಯಾ ಘಟನೆಗಳು, ಅತಿ ಭಾವುಕತನದ ಕಪ್ಪು-ಬಿಳುಪು ಪಾತ್ರಗಳು – ಮೊದಲಾದುವುಗಳಿಂದ ಕೂಡಿರುವ ಈ ಕೃತಿ ಸಾಮಾನ್ಯ ವರ್ಗದ ಓದುಗರನ್ನು ರಂಜಿಸುತ್ತದೆ.

ಪ್ರತಿಷ್ಠಿತ ಶ್ರೀಮಂತ ಮನೆತನದ ಸ್ವಾರ್ಥಿಯೊಬ್ಬನು ಕೆಳವರ್ಗದ ಹೆಣ್ಣಿನ ಮೇಲೆ ನಡೆಸುವ ಅತ್ಯಾಚಾರವನ್ನು ಚಿತ್ರಿಸುತ್ತದೆ 'ಕುಂದಣದ ಗೊಂಬೆ' ಕಾದಂಬರಿ.

ಪತಿತಳಾದ ಈ ಶೋಷಿತ ಹೆಣ್ಣನ್ನು, ಕ್ರಾಂತಿಕಾರಿ ಸಮಾಜ ಸುಧಾರಕನೊಬ್ಬ ತನ್ನ ಬಾಳ ಸಂಗಾತಿಯನ್ನಾಗಿ ಸ್ವೀಕರಿಸುತ್ತಾನೆ. ಹಳಸಲು ವಸ್ತು, ಸಿದ್ಧ ಪಾತ್ರಗಳು, ನಿರೀಕ್ಷಿತ ಘಟನೆಗಳು–ಇವುಗಳಿಂದಾಗಿ ಈ ಕೃತಿಯನ್ನು ಹತ್ತರ ಜೊತೆಯಲ್ಲಿ ಹನ್ನೊಂದನೆಯದಾಗಿ ಮಾತ್ರ ಪರಿಗಣಿಸಬಹುದು.

ಇಲ್ಲಿಗೆ ಈ ವಿಭಾಗದ ಸಮೀಕ್ಷೆ ಮುಗಿಯುತ್ತದೆ. ಇಂಗ್ಲೀಷೇತರ ಭಾಷಾ ಮೂಲಗಳನ್ನು ಹೊಂದಿರುವ ಕೃತಿಗಳು ಇಂಗ್ಲಿಷ್ ಮೂಲಕವೇ ಕನ್ನಡಕ್ಕೆ ಬಂದಿರುವುದು ಗಮನಿಸಬೇಕಾದ ಅಂಶ. ಅನುವಾದದ ಕ್ಷೇತ್ರದಲ್ಲಿ ಇಂಗ್ಲಿಷ್ ಪ್ರತಿ ಸಲದಂತೆ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ. (ಇದು ಉಳಿದ ಸಾಹಿತ್ಯ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಹೇಳಿದ ಮಾತು). ಮೊದಲೇ ತಿಳಿಸಿದಂತೆ ಕೆಲವೊಂದು ಮಹತ್ವದ ಹಾಗೂ ಮೌಲಿಕವಾದ ಕೃತಿಗಳನ್ನು ಬಿಟ್ಟರೆ, ಅನುವಾದದ ದೃಷ್ಟಿಯಿಂದ ಇದು ಅಂತಹ ಆಶಾದಾಯಕ ವರ್ಷವೇನೂ ಅಲ್ಲ

—ಎನ್. ವಿ. ವಿಮಲ

ವಿಮರ್ಶೆ
(ಹಳಗನ್ನಡ ಸಾಹಿತ್ಯ ವಿಮರ್ಶೆ)

ಬಸವರಾಜ ಕಲ್ಗುಡಿ

ಈ ವರ್ಷದ ಹಳಗನ್ನಡ ಕಾವ್ಯಗಳನ್ನು ಕುರಿತು ಬಂದ ವಿಮರ್ಶಾ ಸಂಕಲನಗಳು ಏಳು. ಅವುಗಳಲ್ಲಿ ಮಧ್ಯಕಾಲೀನ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ನಾಲ್ಕು ಸಂಕಲನಗಳಿವೆ. ಜೈನ ಸಾಹಿತ್ಯ ಪರಿಸರಕ್ಕೆ ಸಂಬಂಧಿಸಿದಂತೆ ಒಂದು ಕೃತಿಯೂ ಈ ವರ್ಷದ ವಿಮರ್ಶಾ ಸರಣಿಯಲ್ಲಿ, ಸೇರಿದೆ. ಬಹುಪಾಲು ಕೃತಿಗಳು, ಪರಿಚಯಾಂದ ಮಾದರಿಗಳಾಗಿವೆ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆಯ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಐದನೆಯ ಸಂಪುಟವೂ ಈ ವರ್ಷ ಹೊರಬಂದಿದೆ. ಹಿಂದಿನ ಸಂಪುಟಗಳ ಬಗ್ಗೆ 'ವಾರ್ಷಿಕ'ದಲ್ಲಿ ಬರೆದ ವಿವರಣೆಯನ್ನೇ ಈ ಸಂಪುಟದ ಬಗ್ಗೆಯೂ ಹೇಳಬಹುದು.

ವಚನ ವ್ಯಾಸಂಗ : (ಪಿ. ವಿ. ನಾರಾಯಣ)

ವಚನಗಳು ಹಾಗೂ ವಚನಕಾರರಿಗೆ ಸಂಬಂಧಿಸಿದ ಹತ್ತು ಲೇಖನಗಳು ಈ ಸಂಕಲನದಲ್ಲಿವೆ. 'ಬಸವಯುಗದ ವಚನ ಸಾಹಿತ್ಯ', 'ಬಸವಾದಿಗಳ ಕಾಲದ ಮತಾಂತರ', 'ಬಸವ ಪೂರ್ವಯುಗದ ವಚನಕಾರರು' - ಈ ಲೇಖನಗಳು ವಚನ ಚಳುವಳಿಯನ್ನು ಕುರಿತ ಹಾಗೆ ವಿವರಣೆ, ವಿಶ್ಲೇಷಣೆಯನ್ನು ಕೊಡಲು ಪ್ರಯತ್ನಿಸಿವೆ. ಉಳಿದ ಲೇಖನಗಳು ವಚನಗಳಲ್ಲಿ ಪ್ರಯೋಗಗೊಂಡಿರುವ ಪದಪ್ರಯೋಗಗಳು, ರೂಪಕಗಳು, ಗಾದೆಗಳು ಮುಂತಾದವುಗಳ ವಿವರವನ್ನು ಕೊಡಲು ಯತ್ನಿಸಿವೆ.

'ಬಸವಪೂರ್ವ ಯುಗದ ವಚನಕಾರರು' ಲೇಖನವು, ಬಸವಣ್ಣನ ಹಿರಿಯ ಸಮಕಾಲೀನ ಹಾಗೂ ಪ್ರಾಚೀನವಾದ ಶಿವಭಕ್ತರ ಬಗ್ಗೆ ಇರುವ ಸಮಸ್ಯೆಯ ಬಗ್ಗೆ ಚರ್ಚೆಯನ್ನು ಎತ್ತುತ್ತದೆ. ಜೇಡರದಾಸಿಮಯ್ಯ, ಡೋಹರ ಕಕ್ಕಯ್ಯ, ಕೊಂಡಗುಳಿ ಕೇಶಿರಾಜ ಬಸವನ ಹಿರಿ-ಕಿರಿಯ ಸಮಕಾಲೀನರಾಗಿರಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಮಾದರ ಚನ್ನಯ್ಯನೆಂಬುವವರಲ್ಲಿ ಒಬ್ಬ ಪುರಾತನ ಶಿವಭಕ್ತನೊಬ್ಬನಾಗಿದ್ದು, ಇನ್ನೊಬ್ಬ ಬಸವನ ಹಿರಿಯ ಸಮಕಾಲೀನನಿರಬೇಕು ಎಂದು ವಾದಿಸಿದ್ದಾರೆ. ಲೇಖನದ ಕೊನೆಯ ಅರ್ಧಭಾಗ ವಚನಗಳ ಮೂಲವನ್ನು ಕುರಿತ ಚರ್ಚೆಯನ್ನು ಮಾಡುತ್ತದೆ. ಈ ಚರ್ಚೆ ಇಲ್ಲಿ ಪ್ರಸ್ತುತವಾಗಿಲ್ಲ.

'ಬಸವಯುಗದ ವಚನ ಸಾಹಿತ್ಯ' ಲೇಖನದಲ್ಲಿ - ಶೀರ್ಷಿಕೆಗೆ ಸಂಬಂಧಿಸಿದಂತೆ ಚರ್ಚೆ, ವಿಚಾರಗಳಿಗಿಂತ ಬೇರೆ ವಿವರಗಳು ಕೊಂಚ ಹೆಚ್ಚಾಗಿ ಆಕ್ರಮಿಸಿಕೊಂಡಿವೆ ಯೆನ್ನುವ ಅನುಮಾನಗಳುಂಟಾಗುತ್ತವೆ. ಸಾಮಾಜಿಕ ಚರ್ಚೆಯ ಹಿನ್ನೆಲೆಯಲ್ಲಿ ಲೇಖನ ಪ್ರಾರಂಭವಾಗುತ್ತದೆ. ಅನೇಕ ಬೀಸು ಹೇಳಿಕೆಗಳು ಈ ಭಾಗವನ್ನು ತುಂಬಿವೆ. 'ಹನ್ನೆರಡನೆಯ ಶತಮಾನದ ಹೊತ್ತಿಗೆ ವರ್ಣಪದ್ಧತಿಯು ನಮ್ಮ ಸಮಾಜದಿಂದ ಸಂಪೂರ್ಣವಾಗಿ ಕಣ್ಮರೆಯಾಗಿ ಜಾತಿವ್ಯವಸ್ಥೆಗೆ ಎಡೆಮಾಡಿಕೊಟ್ಟಿತ್ತು.' ಎನ್ನುವ ಹೇಳಿಕೆ ಕೊಡುವ ಲೇಖಕರು, ಕೆಲವು ವಚನಕಾರರು ಕೊಡುವ ವರ್ಣಗಳ ಉಲ್ಲೇಖ ಕೇವಲ ಸಾಂಪ್ರದಾಯಿಕವೆನ್ನುವ ಊಹಾಪೋಹ ಮಾಡುತ್ತಾರೆ. ಈ ದಾಖಲೆ ಹೇಗೆ ಸಾಂಪ್ರದಾಯಿಕ ಎನ್ನುವ ವಿವರ ಆಳವಾದ ಸಮಾಜ ಶಾಸ್ತ್ರೀಯ ಅಧ್ಯಯನದ ನೆಲೆಯಿಂದ ಹೊರಟಾಗ ಮಾತ್ರ ಸಾಧ್ಯವೇ ಹೊರತು, ಇಂಥ ಕೇವಲ ಹೇಳಿಕೆಗಳು ಸಾಹಿತ್ಯ ಹಾಗೂ ಸಮಾಜಶಾಸ್ತ್ರದ ಅಧ್ಯಯನದ ಗಂಭೀರತೆಯನ್ನೇ ನಿರಾಕರಿಸುತ್ತವೆ ಎನ್ನಬಹುದು.

ವಾಸ್ತವವಾಗಿ ಈ ಸಂಕಲನದಲ್ಲಿ ಲೇಖಕರ ವಚನಗಳ ಅಧ್ಯಯನದ ವಿಧಾನ ವನ್ನೇ ಗಂಭೀರವಾಗಿ ಪ್ರಶ್ನಿಸಬೇಕಾಗುತ್ತದೆ. ಏಕೆಂದರೆ ವಚನಗಳು ಲೇಖಕರಿಗೆ ಬೇರೊಂದು ಮೂಲದಲ್ಲಿ (ಉದಾ: ಚರಿತ್ರೆಯ ಗ್ರಂಥಗಳು, ಧರ್ಮಶಾಸ್ತ್ರದ ಗ್ರಂಥಗಳು) ದೊರಕುವ ಚಾರಿತ್ರಿಕ, ಧಾರ್ಮಿಕ ವಿವರಗಳ ಪೂರೈಕೆಗಾಗಿ ಮಾತ್ರ ವಚನಗಳು ಬಳಕೆಯಾಗಿವೆ. 'ವಚನಗಳ ಕೊತ್ತು ವಿಚಾರ', 'ವಚನಗಳಲ್ಲಿ ಪಂಚ ಮಹಾಪಾತಕರ ಕಲ್ಪನೆ' ಮೊದಲಾದ ಲೇಖನಗಳನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಸಮಾಜಶಾಸ್ತ್ರ-ಸಾಹಿತ್ಯ ; ತಾತ್ವಿಕ ವಿಚಾರ-ಸಾಹಿತ್ಯ ; ಮುಂತಾದ ಗಂಭೀರ ಅಂತರ್‌ಶಿಸ್ತಿನ ಅಧ್ಯಯನವು ಇಂಥ ಲೇಖನಗಳ ಮೂಲ ಭಿತ್ತಿಯಾಗಬೇಕು. ಇಲ್ಲಿ ಆ ಕೆಲಸ ನಡೆಯದೆ ಲೇಖನಗಳು ಸಾಹಿತ್ಯ ಅಥವಾ ಸಮಾಜ, ಧಾರ್ಮಿಕ ನೆಲೆಗಳ ಸರಳ ಗ್ರಹಿಕೆಯನ್ನೇ ಪ್ರಧಾನವಾಗಿ ಮಾಡಿಕೊಂಡಿವೆ.

ವೀರಶೈವದರ್ಶನ ಹಾಗೂ ಸಾಹಿತ್ಯ ಸಮೀಕ್ಷೆ (ಎಂ. ಬಿ. ಕೊಟ್ರಶೆಟ್ಟಿ)

ಪುಸ್ತಕದ ಹೆಸರೇ ಸೂಚಿಸುವಂತೆ ವೀರಶೈವ ಸಾಹಿತ್ಯ, ತತ್ವವಿಚಾರಗಳು ಹಾಗೂ ವ್ಯಕ್ತಿಗಳು—ಈ ಮೂರರ ಪರಿಚಯ ಹಾಗೂ ವಿವರಣೆಯನ್ನು ಈ ಗ್ರಂಥವು ಮಾಡುತ್ತದೆ. ಕೆಲವು ಲೇಖನಗಳು ವೀರಶೈವ ಸಾಹಿತ್ಯಿಕ ಗ್ರಂಥಗಳ ವಿಮರ್ಶೆಯನ್ನು ಮಾಡಿರುವ ಟಿಪ್ಪಣಿಗಳಾಗಿವೆ. 'ಶಿವಶರಣರ ಶೂನ್ಯತತ್ವ' ಎನ್ನುವ ಲೇಖನ ಶೂನ್ಯತತ್ವದ ಕಲ್ಪನೆಯನ್ನು ವಿವಿಧ ತಾತ್ವಿಕ ಸಿದ್ಧಾಂತಗಳ ಕಲ್ಪನೆಯ ಹಿನ್ನೆಲೆಯಲ್ಲಿ ವಿವರಿಸಲು ಯತ್ನಿಸುತ್ತದೆ. ಉಪನಿಷತ್ತು, ಬೌದ್ಧರ ಶೂನ್ಯವಾದ, ಇವುಗಳ ಜೊತೆಗೆ ಶರಣರ ಶೂನ್ಯ ಪರಿಕಲ್ಪನೆಯನ್ನು ವಿವರಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಬೌದ್ಧರ ಪ್ರಾಪಂಚಿಕ ನಿವೃತ್ತಿಮಾರ್ಗ ಕ್ಕಿಂತ ವಚನಕಾರರ ಪ್ರವೃತ್ತಿಮಾರ್ಗ ಹೇಗೆ ಭಿನ್ನ ಹಾಗೂ ವಿಶಿಷ್ಟ ಎಂಬ ಅಂಶವು

ಈ ಲೇಖನದಲ್ಲಿ ಪ್ರತಿಪಾದಿತವಾಗಿದೆ. ಲೇಖನದ ಕೊನೆಯ ಭಾಗದಲ್ಲಿ 'ಶಂಕರನು ವೇದಗಳ ಕರ್ಮಮಾರ್ಗಕ್ಕೆ ಪ್ರತಿಯಾಗಿ ಜ್ಞಾನಮಾರ್ಗವನ್ನು ಅವಲಂಬಿಸಬೇಕೆಂದು ಕಡ್ಡಾಯಗೊಳಿಸಿದ್ದರಿಂದ ಜನಸಾಮಾನ್ಯರು ಧರ್ಮದ ಸೃಷ್ಟಿಶೀಲ ಚಿಂತನೆಯಲ್ಲಿ ಭಾಗವಹಿಸುವುದು ಸಾಧ್ಯವಾಗದೇ ಹೋಯಿತು' ಎಂಬ ಮಾತಿದೆ. ವಾಸ್ತವವಾಗಿ ಜ್ಞಾನಮಾರ್ಗ ಬೋಧನೆಯ ಬಗ್ಗೆ ಈ ಟೀಕೆ ಅಷ್ಟು ಸರಿಯಲ್ಲ. ಲೇಖಕರೇ ಹಿಂದೆ ಗುರುತಿಸಿದ ಶಂಕರನ ಜಗತ್ತು ಮಾಯೆ, ಭ್ರಮೆ ಎನ್ನುವ ತತ್ವ ನಿವೃತ್ತಿಪರ ಆಲೋಚನೆಯನ್ನು ಬಿಂಬಿಸುವಂಥದ್ದು. ವಾಸ್ತವವಾಗಿ ಅಲ್ಲಮನ ಅನುಭಾವದ ನೆಲೆಯು ಜ್ಞಾನಯೋಗದ್ದೇ ಆಗಿರುವುದರಿಂದ ವಚನಕಾರರು ಜ್ಞಾನಮಾರ್ಗ ವನ್ನೇನೂ ತಿರಸ್ಕರಿಸಿಲ್ಲವೆನ್ನುವುದು ಸ್ಪಷ್ಟ.

ಈ ಸಂಕಲನದ ಇನ್ನೊಂದು ಲೇಖನ 'ಸಿದ್ಧರಾಮ ಶಿವಯೋಗಿಯ ಸಾಹಿತ್ಯ ಸಮೀಕ್ಷೆ', ಸಿದ್ಧರಾಮನ ಸಾಹಿತ್ಯ ರಚನೆಯನ್ನು ಕುರಿತು ಪರಿಚಯ ಮಾಡಿಕೊಡು ತ್ತದೆ. ಈ ಚಿಕ್ಕಲೇಖನದ ವ್ಯಾಪ್ತಿಯಲ್ಲಿ ಸ್ಥೂಲವಾದ ವಿವರಣೆಯು ಮಾತ್ರ ಸಾಧ್ಯವಾಗಿದೆ. ಆದರೆ ಪರಸ್ಪರ ವಚನಕಾರರ ಸ್ಥಾನವನ್ನು ಗುರುತಿಸುವ, ಸಿದ್ಧ ರಾಮನ ಸ್ಥಾನವನ್ನು ನಿರ್ದೇಶಿಸುವ ವಿವರಣೆಯ ಭಾಗ ಮಾತ್ರ (ಪು. 27-28) ತರ್ಕಹೀನವಾದ ಮತ್ತು ಅನವಶ್ಯಕವಾದ ಚರ್ಚೆಯಾಗಿದೆ. ಯಾವ ಮೌಲ್ಯ ನಿರ್ದೇಶನದಿಂದ ಪರಸ್ಪರ ಈ ವಚನಕಾರರು ಮೇಲು-ಕಡಿಮೆ ಎಂದು ಗುರುತಿಸು ವುದು ? ಅನುಭಾವಿಯ ಪ್ರಯೋಗದ ಸ್ಥಿತಿಗಳಲ್ಲಿ ಯಾರು ಹೆಚ್ಚು ಯಾರು ಕಡಿಮೆ ? ಸ್ವತಃ ವಚನಕಾರರೇ ಪರಸ್ಪರ ಇಂಥ ತರತಮ ನೆಲೆಯನ್ನು ಪರಸ್ಪರ ನಿರಾಕರಿಸಿದ್ದಾರೆ. ಪುಟ 25ರಲ್ಲಿ 'ಪಂಪ ವೈದಿಕಧರ್ಮದಿಂದ ಜೈನಧರ್ಮಕ್ಕೆ ಪರಿವರ್ತನೆ ಹೊಂದಿದೆ' ಎನ್ನುವ ಅಭಿಪ್ರಾಯವಿದೆ. ಇದು ತಪ್ಪು, ಪಂಪನ ವಂಶಸ್ಥರು ಆಗಲೇ ಜೈನಧರ್ಮಕ್ಕೆ ಮತಾಂತರ ಹೊಂದಿದರು ಎನ್ನುವ ವಿಷಯ ಜಿನವಲ್ಲಭನ ಶಾಸನದಿಂದಲೇ ತಿಳಿಯುತ್ತದೆ.

ಈ ಸಂಕಲನದ 'ನಿಜಗುಣ ಶಿವಯೋಗಿ', 'ಹರ್ಡೇಕರ್ ಮಂಜಪ್ಪ', 'ವಚನ ಪಿತಾಮಹನ ಜೀವನ-ಸಾಧನೆ'—ಈ ಲೇಖನಗಳು ಆ ವ್ಯಕ್ತಿಗಳ ಸಾಧನೆ ಹಾಗೂ ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಡುತ್ತವೆ. ಎಡೆಯೂರು ಸಿದ್ಧಲಿಂಗೇಶ್ವರ, ತೋಂಟದ ಸಿದ್ದೇಶ್ವರ ಈ ಅನುಭಾವಿಗಳ ಬಗ್ಗೆಯೂ ಎರಡು ಲೇಖನಗಳು ಈ ಸಂಕಲನದಲ್ಲಿವೆ.

ಸಾಹಿತ್ಯದೀಪಿಕಾ : (ಕೆ. ವೆಂಕಟರಾಯಾಚಾರ್ಯ)

ಮೂವತ್ತು ಲೇಖನಗಳು ಈ ಸಂಕಲನದಲ್ಲಿವೆ. ಪಂಪನ ಕಾವ್ಯ, ರನ್ನನ ಸಾಹಿತ್ಯರಚನಾ ಶೈಲಿ, ಹರಿಹರ ರಾಘವಾಂಕರ ಕೃತಿಗಳ ವೈಶಿಷ್ಟ್ಯ—ಮುಂತಾಗಿ

ಹಳಗನ್ನಡ ಕಾವ್ಯದ ಬಗ್ಗೆ ಪರಿಚಯಾತ್ಮಕ ಟಿಪ್ಪಣಿಗಳಷ್ಟೇ ಅಲ್ಲದೆ, ಶಾಸನಗಳು ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳು ಇಲ್ಲಿ ಸೇರ್ಪಡೆಯಾಗಿವೆ. ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೂಡ ಕೆಲವು ಲೇಖನಗಳು ಇಲ್ಲಿ ಇವೆ. ಶ್ರೀನಿವಾಸರ ಚೆನ್ನಬಸವನಾಯಕ, ಶ್ರೀರಂಗರ ನಾಟಕಗಳು—ಈ ಕೃತಿಗಳ ಬಗ್ಗೆಯೂ ಪರಿಚಯಾತ್ಮಕ ಟಿಪ್ಪಣಿಗಳಿವೆ. ತುಳು ಯಕ್ಷಗಾನ ಪ್ರಸಂಗ, ಕನ್ಯೋಪದೇಶದ ಸಾಂಪ್ರದಾಯಿಕ ವಿವರಗಳು—ಮುಂತಾದವುಗಳ ಬಗ್ಗೆಯೂ ಎರಡು ಟಿಪ್ಪಣಿಗಳು ಇಲ್ಲಿ ಸೇರಿವೆ. ಹೀಗಾಗಿ ಲೇಖಕರ ಆಸಕ್ತಿ ವಲಯವು ಅನೇಕ ದಿಕ್ಕುಗಳಲ್ಲಿ ಹರಿದಿರುವುದು ಕಂಡುಬರುತ್ತದೆ. ಬಹುಶಃ ಇದೊಂದೇ ಈ ಸಂಕಲನದಲ್ಲಿ ಎದ್ದು ಕಾಣುವ ಅಂಶ. ಇದು ಲೇಖಕರ ಆಸಕ್ತಿಯ ನೆಲೆಗಳನ್ನು ತೋರುತ್ತಿದ್ದರೂ, ಈ ಕಾರಣದಿಂದಲೇ ಸಂಕಲನಕ್ಕೆ ಖಚಿತವಾದ ಬಂಧವು ಇಲ್ಲವಾಗಿದೆ. ಸಂಕಲನಗಳು ವಾಸ್ತವವಾಗಿ ಒಬ್ಬ ಬರಹಗಾರನು ಸಾಹಿತ್ಯವನ್ನಾಗಲೀ, ಸಂಸ್ಕೃತಿಯನ್ನಾಗಲೀ, ನೋಡುವ ದೃಷ್ಟಿಕೋನವನ್ನು, ರೀತಿಯನ್ನು ಮುಖ್ಯವಾಗಿ ಹಿಡಿಯಬೇಕು. ಸಂಕಲನಗಳ ಮುಖ್ಯ ಉದ್ದೇಶವೂ ಅದೇ ಆಗಿರುತ್ತದೆ. 'ಸಾಹಿತ್ಯದೀಪಿಕಾ' ಈ ದೃಷ್ಟಿಯಲ್ಲಿ ದೊಡ್ಡ ಕೊರತೆಯನ್ನು ಉಳಿಸಿಕೊಂಡಿದೆ. ಅನೇಕ ಲೇಖನಗಳು ಮುನ್ನುಡಿಯನ್ನು ಹೋಲುವ ಪರಿಚಯ, ಕಥಾಸಾರಾಂಶ ಕಾಲ ಪರಿಚಯ—ಮುಂತಾದ ವಿಷಯಗಳಿಗೇ ಸೀಮಿತವಾಗಿವೆ. ಕಾವ್ಯವನ್ನು ಅರ್ಥೈಸುವ ಹಂತದಲ್ಲೇ ಕೆಲವು ಕಡೆ ಕೆ. ವೆಂಕಟರಾಯಾಚಾರ್ಯ ಅವರು ಎಡವಿದ್ದಾರೆ. ಉದಾಹರಣೆಗೆ: 'ರಾಘವಾಂಕನ ಕೃತಿರತ್ನದಲ್ಲಿ' ಎನ್ನುವ ಲೇಖನದಲ್ಲಿ ಹರಿಶ್ಚಂದ್ರ ಕಾವ್ಯದ ಹೊಲತಿಯರ ಪ್ರಸಂಗದ ಬಗ್ಗೆ ಬರೆಯುತ್ತ ರಾಜನು ಹೊಲತಿಯರನ್ನು ಮುಟ್ಟಿಸಿಕೊಳ್ಳುವ ವಿಷಯವನ್ನು ಕುರಿತು ಹೇಳುತ್ತ—ಹರಿಹರ ರಾಘವಾಂಕರು — ಬಸವಣ್ಣನವರಂತೆ ಸಿದ್ಧಪುರುಷರಲ್ಲದ್ದರಿಂದ, ಆಚರಣೆಗೆ ಮರ್ಯಾದೆಗೊಟ್ಟು ನಡೆಯುವ ಶೈವಾಗಮಸಾರದ ಕರ್ಮಾಚರಣೆಯವರು' ಎಂದು ತೀರ್ಮಾನಿಸುತ್ತಾರೆ. ಕಾವ್ಯದ ಘಟನೆಯನ್ನು ಲೇಖಕನ ನಂಬಿಕೆಯೆಂದು ನೋಡುವ ಸರಳತಪ್ಪುಗಳು ಇಲ್ಲಿವೆ.

ಕುಮಾರವ್ಯಾಸ (ಎಲ್. ಆರ್. ಹೆಗಡೆ)

ಕುಮಾರವ್ಯಾಸನ ಭಾರತದ ಬಗ್ಗೆ ಪರಿಚಯವನ್ನೂ, ಪ್ರವೇಶವನ್ನು ಮಾಡಿ ಕೊಡಲು ಯತ್ನಿಸುವ ಚಿಕ್ಕ ಪುಸ್ತಕ ಇದು. ಕುಮಾರವ್ಯಾಸನ ಕಾಲ, ವ್ಯಾಸಭಾರತದ ಪ್ರಭಾವ–ಕುಮಾರವ್ಯಾಸನ ಸ್ವಂತಿಕೆಯ ವಿಶಿಷ್ಟತೆ, ಸನ್ನಿವೇಶ ರಚನೆ, ಹಾಸ್ಯ ಸಂದರ್ಭಗಳು, ಶೈಲಿ, ಜೀವನ ಚಿತ್ರಣ—ಮುಂತಾದ ವಿಭಾಗಗಳಲ್ಲಿ ಕುಮಾರವ್ಯಾಸ ಭಾರತದ ಪರಿಚಯವನ್ನು ಲೇಖಕರು ಮಾಡಿದ್ದಾರೆ. ಭಾರತದ ಕಥಾನಕದ ಆಯ್ದ ಕೆಲವು ಘಟನೆ, ಪಾತ್ರಗಳ ವಿಶಿಷ್ಟತೆ ಮುಂತಾದವುಗಳನ್ನು ಸರಳವಾದ ರೀತಿಯಲ್ಲಿ ಹೇಳಲು ಲೇಖಕರು ಪ್ರಯತ್ನಿಸಿದ್ದಾರೆ. ಸಾಮಾನ್ಯ ಓದುಗನೊಬ್ಬನನ್ನು ಗಮನ

ವಲ್ಲಿಟ್ಟುಕೊಂಡು ಈ ಕೃತಿ ರಚಿತವಾಗಿರಬೇಕು. ಏಕೆಂದರೆ ಕೃತಿಯ ಬರವಣಿಗೆಯ ಧಾಟಿ ಆ ಉದ್ದೇಶವನ್ನೇ ಗಮನದಲ್ಲಿಟ್ಟಂತಿದೆ.

ಕನಕ ಕಿರಣ (ಸಂ: ಕಾ. ತ. ಚಿಕ್ಕಣ್ಣ)

ನಾಲ್ಕು ಭಾಗಗಳಲ್ಲಿ ಕನಕದಾಸರನ್ನು ಕುರಿತ ಚರ್ಚೆ ಈ ಸಂಕಲನ ಗ್ರಂಥದಲ್ಲಿದೆ. ಭಾಗ ಒಂದು, ಕನಕದಾಸರ ಕಾಲ, ರಾಜಕೀಯ, ಸಾಮಾಜಿಕ ಹಿನ್ನೆಲೆ, ಮತ ಮುಂತಾದ ವಿಷಯಗಳನ್ನು ಚರ್ಚಿಸುವ ಉದ್ದೇಶವುಳ್ಳದ್ದು. ವರದರಾಜರಾವ್, ಈ ಬಗ್ಗೆ ಈಗಾಗಲೇ ನಡೆದ ಚರ್ಚೆಯ ವಿವರಗಳನ್ನು ಹಿನ್ನೆಲೆಯಲ್ಲಿ ಕೊಡುವುದರ ಜೊತೆಗೆ, ಸೂಕ್ತವಾದ ಪರಿಶೀಲನೆಯನ್ನು ನಡೆಸಿದ್ದಾರೆ. ಕನಕದಾಸರು ಕುರುಬ ಮತದವರು ಎನ್ನುವುದನ್ನು ಇದೇ ಭಾಗದಲ್ಲಿರುವ ಇನ್ನೊಂದು ಲೇಖನ 'ಕನಕದಾಸರ ಜೀವನ ವಿಚಾರ' ಪ್ರತಿಪಾದಿಸಲು ಪ್ರಯತ್ನಿಸಿದೆ.

ಭಾಗ ಎರಡು, ಕನಕದಾಸರ ಕೃತಿಗಳನ್ನು ಕುರಿತ ವಿವೇಚನೆಯನ್ನು ಒಳಗೊಂಡಿದೆ. 'ಹರಿಭಕ್ತಸಾರ'ದ ಬಗ್ಗೆ ಟಿ. ವಿ. ವೆಂಕಟಾಚಲಶಾಸ್ತ್ರಿಯವರ ಲೇಖನ, 'ಕನಕದಾಸರ ಅನುಭಾವ ಗೀತೆಗಳು' ಎಂಬ ತಿಪ್ಪೇರುದ್ರಸ್ವಾಮಿಯವರ ಲೇಖನ– ಇವೆರಡೂ ಲೇಖನಗಳು ಕನಕದಾಸರ ಭಕ್ತಿತತ್ವದ ವೈಶಿಷ್ಟ್ಯತೆಯನ್ನು ವಿವರಿಸುತ್ತ ಕೆಲವು ಒಳನೋಟಗಳನ್ನು ಕೊಡುತ್ತವೆ. ಭಕ್ತಿಪಂಥದ ಕೆಲವು ವಿಶಿಷ್ಟ ಆಶಯಗಳನ್ನು 'ಹರಿಭಕ್ತಸಾರ' ಹಿಡಿದಿಟ್ಟುಕೊಂಡಿರುವ ರೀತಿಯನ್ನು ವೆಂಕಟಾಚಲಶಾಸ್ತ್ರಿಯವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಅನುಭಾವ ಗೀತೆಗಳನ್ನು ಕುರಿತ ಲೇಖನದಲ್ಲಿ ತಿಪ್ಪೇರುದ್ರಸ್ವಾಮಿಯವರು, ಕನಕದಾಸರ ಅನುಭಾವದ ಸ್ವರೂಪವು ಉಳಿದ ದಾಸಪರಂಪರೆಯಿಂದ ಹೇಗೆ ವಿಶಿಷ್ಟ ಮತ್ತು ಭಿನ್ನ ಎಂದು ವಿವರಿಸಿದ್ದಾರೆ. ಕನಕದಾಸರ ಭಕ್ತಿಸ್ವರೂಪವು ಜ್ಞಾನಮಾರ್ಗವನ್ನು ಹಿಡಿದು ವಿಶಿಷ್ಟವೆನಿಸುತ್ತದೆ ಎನ್ನುವ ವಿಚಾರವನ್ನು ಲೇಖನದಲ್ಲಿ ಮಂಡಿಸಿದ್ದಾರೆ. "ಕನಕದಾಸರಲ್ಲಿ ಜ್ಞಾನಮಾರ್ಗದ ಕಡೆಗೆ ಮತ್ತು ಅದರಿಂದ ಲಭಿಸುವ ತಲ್ಲೀನತೆಯ ಸಾಮರಸ್ಯದ ಕಡೆಗೆ ಒಲವು ಹೆಚ್ಚು. ಈ ದೃಷ್ಟಿಯಿಂದ ದಾಸ ಸಮುದಾಯದಲ್ಲಿ ಅವರು ವಿಶಿಷ್ಟವಾಗಿ ನಿಲ್ಲುತ್ತಾರೆ" (ಪುಟ 181) ಎನ್ನುವ ಅಭಿಪ್ರಾಯ ಹಾಗೂ ನಿಲುವನ್ನು ಲೇಖಕರು ಕನಕದಾಸರ ಅನುಭಾವ ಗೀತೆಗಳನ್ನು ಕುರಿತು ತಳೆದಿದ್ದಾರೆ.

ಕನಕದಾಸರ ರಚನೆಗಳನ್ನು ನೋಡುವ ಎರಡು ದೃಷ್ಟಿಕೋನಗಳೂ ಇದೇ ಭಾಗದ ಇನ್ನೆರಡು ಲೇಖನಗಳಲ್ಲಿ ಕಂಡುಬರುತ್ತವೆ. 'ರಾಮಧಾನ್ಯ ಚರಿತೆಯ ಸಾಮಾಜಿಕ ಧ್ವನಿ' ಎಂಬ ಲೇಖನವನ್ನು ಎಂ. ಚಿದಾನಂದಮೂರ್ತಿಯವರೂ, 'ಕನಕದಾಸರ ಕೀರ್ತನೆಗಳು ಮತ್ತು ಆಧುನಿಕ ಮೌಲ್ಯಗಳು: ಒಂದು ಟಿಪ್ಪಣಿ' ಎಂಬ ಲೇಖನವನ್ನು ಕೆ. ವಿ. ನಾರಾಯಣ ಅವರೂ ಬರೆದಿದ್ದು, ಎರಡೂ ಲೇಖನಗಳು

ಕನಕದಾಸರ ರಚನೆಯನ್ನು ನೋಡುವ ಧಾಟಿಯು ಪರಸ್ಪರ ವಿಭಿನ್ನ ದೃಷ್ಟಿಕೋನವುಳ್ಳವು.

ಚಿದಾನಂದಮೂರ್ತಿಯವರ ಲೇಖನವು ಕನಕದಾಸರ 'ರಾಮಧಾನ್ಯ ಚರಿತೆ'ಯಲ್ಲಿ 'ವರ್ಗ ಹೋರಾಟ'ದ ಚಿತ್ರಣವು ಇದೆಯೆಂಬ ವಾದವನ್ನು ಮಂಡಿಸುತ್ತದೆ. ಬಹುಶಃ ಈ ವಾದವನ್ನು ದೇ. ಜವರೇಗೌಡರು ತಾವು ಸಂಪಾದಿಸಿದ 'ರಾಮಧಾನ್ಯ ಚರಿತೆ'ಯ ಮುನ್ನುಡಿಯಲ್ಲಿ ಮೊದಲ ಬಾರಿಗೆ ಹೇಳುತ್ತಾರೆ. ಆ ಲೇಖನವೂ ಈ ಸಂಕಲನದಲ್ಲಿ ಸೇರ್ಪಡೆಯಾಗಿದೆ. ಹಳೆಯ ಸಾಹಿತ್ಯಿಕ ಅಭಿವ್ಯಕ್ತಿಯು ಸಾಮಾಜಿಕ, ಸಾಂಸ್ಕೃತಿಕ ವಿಶಿಷ್ಟತೆಗಳನ್ನು ಗುರುತಿಸುವುದು ಹೇಗೆ ಎನ್ನುವ ತಾತ್ವಿಕ ಚರ್ಚೆಯ ಸಮಸ್ಯೆಗಳು ಇಂಥ ಲೇಖನಗಳನ್ನು ಗಮನಿಸುವಾಗ ಎದುರಾಗುವುದು ಸಹಜ. ಕಾವ್ಯಗಳ ಆಕೃತಿ ಮತ್ತು ಸಂದರ್ಭಗಳೆರಡೂ ಇಂಥ ಉದ್ದೇಶವನ್ನು ಕಟ್ಟಿಕೊಂಡಿವೆಯೇ ? ಎನ್ನುವುದರಿಂದ ಇಲ್ಲಿನ ಪರಿಶೀಲನೆಯು ಪ್ರಾರಂಭವಾಗಬೇಕಾಗುತ್ತದೆ. ಕಾವ್ಯದ ಬಂಧವೇ ಇಂಥ ಸಮಸ್ಯೆಯನ್ನು ಕಟ್ಟಿ ಬೆಳೆಸುವ ಉದ್ದೇಶ್ಯ ಹೊಂದಿದೆಯೇ ಎನ್ನುವುದು ಕಾವ್ಯದ ಒಟ್ಟು ಆಕೃತಿಯ ಸ್ವರೂಪವನ್ನು ಗ್ರಹಿಸುವುದರಿಂದ ಮಾತ್ರ ಸಾಧ್ಯ. ಇಲ್ಲದಿದ್ದರೆ ಈ ಕಾಲದ ಆಶಯಗಳನ್ನು ಕಾವ್ಯದಲ್ಲಿ ಹೇರುವ, ನೋಡುವ ಸರಳ ಪ್ರಯತ್ನ ಮಾತ್ರ ಸಾಧ್ಯವಾಗುವ ಅಪಾಯವಿದೆ.

ಈ ಸಂಕಲನದಲ್ಲಿರುವ ಇನ್ನೊಂದು ಲೇಖನ 'ಕನಕದಾಸರ ವಿಶಿಷ್ಟತೆ' (ಲೇಖಕರು: ಜಿ. ಎಸ್. ಶಿವರುದ್ರಪ್ಪ) 'ರಾಮಧಾನ್ಯ ಚರಿತೆ'ಯ ಬಗ್ಗೆ ವಿವರಿಸುತ್ತ "ರಾಗಿ ಎಂಬ ಶಬ್ದಕ್ಕೆ ರಾಘವ ಎಂಬುದು ಮೂಲವಿರಬಹುದೆಂಬಂತೆ ಭಾವಿಸಿದ ಅಪನಿಷ್ಪತ್ತಿಯ ನೆಲೆಗಟ್ಟಿದ ಮೇಲೆ ಕಟ್ಟಿದ ಸ್ವಚ್ಛಂದ ಕಲ್ಪನೆ ಇದರ ವಸ್ತು. ರಾಗಿಯ ಮಹಾತ್ಮೆಯನ್ನು ಎತ್ತಿಹಿಡಿಯಲು ಉದ್ದೇಶಪೂರ್ವಕವಾಗಿ ಹೆಣೆದ ಕತೆ ಇದು" ಎಂದು ವಿವರಿಸುತ್ತದೆ. ಪೌರಾಣಿಕ ನೆಲೆಗಟ್ಟಿನ ಮೇಲೆ ತತ್ತರಿಸುತ್ತ ಇರುವ ಈ ಕಾರ್ಯಕ್ಕೆ ಖಚಿತವಾದ ಸಾಮಾಜಿಕ ಉದ್ದೇಶಗಳಿಲ್ಲವೆನ್ನುವ ಅಭಿಪ್ರಾಯವನ್ನೂ ಈ ಲೇಖನದಿಂದ ಗ್ರಹಿಸಬಹುದಾಗಿದೆ.

ಮೇಲೆ ಉದಾಹರಿಸಿದ ಕೆ. ವಿ. ನಾರಾಯಣ ಅವರ ಲೇಖನವು, ಸಮಕಾಲೀನ ಮೌಲ್ಯ ಗ್ರಹಿಕೆಯನ್ನು ಹಿಂದಿನ ಭಾಷಿಕ ದಾಖಲೆಗಳ ಬಳಕೆಯ ಮೂಲಕ ಹೇಗೆ ಗ್ರಹಿಸುತ್ತೇವೆ ಎನ್ನುವ ವಿಚಾರವನ್ನು ಕನಕದಾಸರ ರಚನೆಗಳ ಹಿನ್ನೆಲೆಯಲ್ಲಿ ಮಾಡುತ್ತದೆ. ಕೃತಿ ಮತ್ತು ಕೃತಿಕಾರನ ಸಂಬಂಧದಲ್ಲಿ ಇಂಥ ಅಧ್ಯಯನದ ವ್ಯಾಪ್ತಿ ಮತ್ತು ತಿಳುವಳಿಕೆಗಳೇನು ಎನ್ನುವ ವಿಚಾರವನ್ನು ಕುರಿತ ಹಾಗೆ ವಿವರಗಳು ಇಲ್ಲಿ ಚರ್ಚಿಸಲ್ಪಡಬಹುದಾಗಿತ್ತು. ಆದರೂ ಈ ಚಿಕ್ಕ ಟಿಪ್ಪಣಿ ಹೊಸ ರೀತಿಯ ಯೋಚನೆಯೊಂದರ ಕಡೆಗೆ ಮುಖ ಮಾಡುತ್ತದೆ. ಆ ದೃಷ್ಟಿಯಲ್ಲಿ ಗಮನಾರ್ಹವಾದ ಲೇಖನವಾಗಿದೆ.

ಭಾಗ ಮೂರು, ಕನಕದಾಸರ ರಚನೆಗಳ ಹಿನ್ನೆಲೆಯಲ್ಲಿ ಕೆಲವು ಮೌಲ್ಯಗಳ ಹುಡುಕುವಿಕೆಯ ಚರ್ಚೆಗಾಗಿ ಮೀಸಲಾಗಿದೆ. 'ಕನಕದಾಸರ ಜೀವನ ಸಂದೇಶ, 'ಕನಕದಾಸರ ಆನನ್ಯತೆ', 'ಮಾನವೀಯ ಮಿಡಿತಗಳು' ಮೊದಲಾದ ಲೇಖನಗಳನ್ನು ಇಲ್ಲಿ ಹೆಸರಿಸಬಹುದು.

ಭಾಗ ನಾಲ್ಕು, ಕನಕದಾಸರ ಕೀರ್ತನೆಗಳು, ಸಂಗೀತಕ್ಕೆ ಕೊಟ್ಟ ಕೊಡುಗೆಯನ್ನು ಚರ್ಚಿಸಿದೆ. ಆರ್. ಸತ್ಯನಾರಾಯಣ ಅವರ ದೀರ್ಘವಾದ ಮತ್ತು ಒಳ ನೋಟ ಗಳಿರುವ ಸಂಶೋಧನಾ ಕ್ರಮವನ್ನು ಇಲ್ಲಿ ಗುರುತಿಸಬಹುದು.

ಈ ಕೃತಿಯ ಸಂಪಾದಕರಾಗಿ ಕಾ. ತ. ಚಿಕ್ಕಣ್ಣ ಅವರು ಪ್ರಾತಿನಿಧಿಕವಾದ ಭಿನ್ನ ಭಿನ್ನ ಚರ್ಚೆಗೆ ಅವಕಾಶ ಮಾಡಿ ಕೊಡುವ ಲೇಖನಗಳನ್ನು ಇಲ್ಲಿ ಸೇರ್ಪಡೆ ಮಾಡಿದ್ದಾರೆ. ಈ ಮೂಲಕ ಕನಕದಾಸರ ಕೃತಿಗಳ ಬಗ್ಗೆ ಹೊಸ ಯೋಚನೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆ.

ಜೈನ ಸಾಹಿತ್ಯ ಪರಿಸರ (ಕಮಲಾ ಹಂಪನಾ)

ಜೈನ ಸಾಹಿತ್ಯವನ್ನು ಕುರಿತಂತೆ ಪರಿಚಯಾತ್ಮಕ, ವಿಮರ್ಶಾತ್ಮಕ ಲೇಖನಗಳು ಈ ಸಂಕಲನದಲ್ಲಿ ಸೇರಿವೆ. ಹಳಗನ್ನಡದ ಪ್ರಮುಖ ಜೈನ ಕವಿಗಳ ಕಾವ್ಯಗಳನ್ನು ಕುರಿತಂತೆ ಸ್ಥೂಲವಾದ ಪರಿಚಯವು ಇಲ್ಲಿನ ಕೆಲವಾರು ಲೇಖನಗಳ ಮುಖ್ಯ ಆಶಯ ವಾಗಿದೆ. 'ವಡ್ಡಾರಾಧನೆ-ಒಂದು ಸ್ಥೂಲಪರಿಚಯ', 'ರತ್ನಾಕರನ ಸ್ತ್ರೀ ಪಾತ್ರಗಳು', 'ನಯಸೇನ-ಒಂದು ಪರಿಚಯ', 'ನೇಮಿಚಂದ್ರ'-ಮೊದಲಾದ ಲೇಖನಗಳು ಕೃತಿಕಾರರ ಹಾಗೂ ಕೃತಿಗಳ ಪರಿಚಯವನ್ನು, ಸರಳವಾಗಿ, ಕಾವ್ಯ ಗಳಿಂದಲೇ ಆಯ್ದ ಭಾಗಗಳ ನಿರೂಪಣೆಯೊಂದಿಗೆ ಮಾಡಿ ಕೊಡುತ್ತವೆ. 'ಪಂಪನ ದೃಷ್ಟಿಯಲ್ಲಿ ಕರ್ಣ' ಎನ್ನುವ ಲೇಖನ-ಕೃಷ್ಣನಿಗೆ ಪಂಪ ಭಾರತದಲ್ಲಿ ಕೊಡಲಾದ ಗೌರವಯುತ ಸ್ಥಾನವನ್ನು ವಿಶದವಾಗಿ ಪ್ರಸ್ತಾಪಿಸುತ್ತದೆ. 'ಪಂಪ ಕವಿಯ ಪ್ರಭಾವ'ಎನ್ನುವ ಲೇಖನ ಪಂಪನ ಕಾವ್ಯ ಮುಂದಿನ ಬರಹಗಾರರ ಮೇಲೆ ಮಾಡಿದ ಪ್ರಭಾವವನ್ನು ವಿವರಿಸುತ್ತದೆ. ಶಾಸನ ಕವಿಗಳ ಮೇಲೆ ಪಂಪನ ಕಾವ್ಯದ ಕಂದ, ವೃತ್ತಗಳು ಮಾಡಿದ ಪ್ರಭಾವವನ್ನು ಸೋದಾಹರಣವಾಗಿ ಲೇಖಕಿಯರು ವಿವರಿ ಸಿದ್ದಾರೆ. ಆದರೆ ಛಂದಸ್ಸಿನ ಬಳಕೆಗೆ ಸಂಬಂಧಿಸಿದ ಹಾಗೆ, ಪಂಪನಿಂದ ಪ್ರಭಾವ ಪಡೆದಿರಬಹುದು ಎಂದು ಹೇಳಿ ಉದಾಹರಣೆ ಕೊಟ್ಟು ವಿವರಿಸುವ ಭಾಗಗಳು ಅಷ್ಟು ಸಮ್ಮತವಾಗುವಂತಿಲ್ಲ. ಏಕೆಂದರೆ ಛಂದಸ್ಸಿನ ಪ್ರಯೋಗಶೀಲತೆಗೆ ಸಂಬಂಧಿಸಿ ದಂತೆ ನಿಖರವಾಗಿ ಪ್ರಭಾವವನ್ನು ಒಬ್ಬ ಕವಿಯಿಂದ ಇನ್ನೊಬ್ಬ ಕವಿಯಲ್ಲಿ ಗುರುತಿಸುವುದು ಸ್ವಲ್ಪ ಕಷ್ಟ. 'ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಕಲ್ಪನೆ' ನಾನಾ ಮೂಲಗಳಿಂದ ಸಂಗ್ರಹ ಮಾಡಿದ ವಿಷಯಗಳನ್ನೊಳಗೊಂಡ ಒಂದು ವಿಸ್ತೃತ ಲೇಖನ. ಜೈನ ತಾತ್ವಿಕ ಸೂತ್ರಗಳ ಉಲ್ಲೇಖ ಹಾಗೂ ಅವುಗಳಿಗೆ ಸಂಬಂಧಿಸಿದ ಕರ್ತೃಗಳ ಪರಿಚಯದ ಲೇಖನಗಳೂ ಸಂಕಲನದಲ್ಲಿ ಇವೆ. 'ಜೈನ ಸಾಹಿತ್ಯ ಪರಿಸರ'ವನ್ನು ಒಟ್ಟಾರೆ ಇಲ್ಲಿಯ ಲೇಖನಗಳು ಪರಿಚಯ-ಮಾಡಿ ಕೊಡುತ್ತವೆ.

ಸಾಹಿತ್ಯ ತತ್ತ್ವ ಹಾಗೂ ಆಧುನಿಕ ಸಾಹಿತ್ಯ ವಿಮರ್ಶೆ

ಕೆ. ವಿ. ನಾರಾಯಣ

1982ರಲ್ಲಿ ಪ್ರಕಟವಾದ ವಿಮರ್ಶೆಯ ಪುಸ್ತಕಗಳಲ್ಲಿ ಸಾಹಿತ್ಯ ತತ್ತ್ವ ಹಾಗೂ ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದ ಹತ್ತೊಂಬತ್ತನ್ನು ಈ ಲೇಖನದಲ್ಲಿ ಸಮೀಕ್ಷಿಸಲಾಗಿದೆ. ಈ ವಲಯದಲ್ಲಿ ಈ ವರ್ಷ ಹೊಸ ಪ್ರವೃತ್ತಿಗಳೇನೂ ಕಂಡು ಬರುತ್ತಿಲ್ಲ. ಎಂದಿನಂತೆ ಕಂಡುಬರುವ ಲಕ್ಷಣಗಳೇ ಈಗಲೂ ಮುಂದುವರೆದಿವೆ. ವಿವಿಧ ವಿಷಯಗಳನ್ನು ಕುರಿತ ಲೇಖನಗಳ ಸಂಗ್ರಹಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಮುಂದುವರೆದಿದೆ. ಇಲ್ಲಿನ ವಿವಿಧ ಲೇಖಕರ ಅಧ್ಯಯನದಿಂದ ಕನ್ನಡ ವಿಮರ್ಶೆಯ ಸಧ್ಯದ ವೈವಿಧ್ಯದ ಬಗೆಗೆ ಸಾಕಷ್ಟು ಮಾಹಿತಿ ದೊರಕುವುದು. ಕನ್ನಡ ವಿಮರ್ಶೆಯ ಸಾಧನೆಯ ಜೊತೆಗೆ ಇಲ್ಲಿ ಬೇರುಬಿಟ್ಟ ಮಿತಿಗಳ ಪರಿಚಯವೂ ಆಗುವುದು. ಅಂತಹ ಒಂದು ಮಿತಿಯ ಬಗೆಗೆ ಮತ್ತೆ ಮತ್ತೆ ಸಾಹಿತ್ಯ ವಾರ್ಷಿಕಗಳಲ್ಲಿ ಗಮನ ಸೆಳೆಯಲಾಗುತ್ತಿದೆ. ಅದೆಂದರೆ ಯಾವುದೇ ಒಂದು ವಿಷಯವನ್ನು ಕುರಿತು ವಿಮರ್ಶೆ ಬರೆಯುವವರು ಇಲ್ಲಿಯವರೆಗೆ ಆ ವಿಷಯದಲ್ಲಿ ಮಂಡಿತವಾಗಿರುವ ವಿಮರ್ಶೆಯ ಪರಿಚಯವನ್ನು ಮಾಡಿಕೊಳ್ಳದೇ ಮತ್ತೆ ಹೇಳಿದ್ದನ್ನೇ ಹೇಳುತ್ತಿರುವುದು. ಅಥವಾ ಹಾಗೆ ಪರಿಚಯ ಮಾಡಿಕೊಳ್ಳಲು ನೆರವಾಗುವ ಒಂದು ಸೂಕ್ತ ವ್ಯವಸ್ಥೆ ಇನ್ನೂ ನಮ್ಮ ಅಧ್ಯಯನ ವಲಯದಲ್ಲಿ ರೂಪುಗೊಂಡಿಲ್ಲ.

ಸಾಹಿತ್ಯ ಮತ್ತು ಸತ್ಯ : (ಎ. ಎನ್. ಮೂರ್ತಿರಾವ್)

ನಾಲ್ಕು ದಶಕಗಳ ಅವಧಿಯಲ್ಲಿ ರೂಪುಗೊಂಡ ಆರು ಲೇಖನಗಳನ್ನು ಇಲ್ಲಿ ಸಂಕಲಿಸಲಾಗಿದೆ. ಒಂದೊಂದು ಲೇಖನವೂ ಲೇಖಕರ ಪ್ರಬುದ್ಧ ದೃಷ್ಟಿಕೋನದ ದಾಖಲೆಯಾಗಿದೆ. ತಾವು ಆಯ್ದುಕೊಂಡ ಸಮಸ್ಯೆಯ ಹರವನ್ನು ಪರಿಚಯಿಸಿ, ಅಲ್ಲಿ ತಮ್ಮ ನಿಲುವನ್ನು ವಿಸ್ತಾರವಾದ ಅಧ್ಯಯನದ ನೆರವಿನಿಂದ ಸಾದರಪಡಿಸುವ ಇಲ್ಲಿನ ಮಾದರಿ ಅನುಕರಣೀಯ. ಚರ್ಚೆಗೆ ಬೇಕಾದ ವಿಷಯಗಳ ಪೂರ್ವಾಪರ ಸಂಗತಿಗಳನ್ನು ಮಂಡಿಸುವಾಗ ಲೇಖಕರು ತಮ್ಮ ನಿಟ್ಟಿಗೆ ಒಗ್ಗದ ಸಂಗತಿಗಳನ್ನು ತೇಲಿಸಿ ಹೇಳಿಬಿಡುವ ಮಾರ್ಗವನ್ನು ಅನುಸರಿಸಿಲ್ಲದಿರುವುದು ಗಮನಿಸಬೇಕಾದ ಸಂಗತಿ.

'ಸಾಹಿತ್ಯ ಮತ್ತು ಸತ್ಯ' ಲೇಖನದಲ್ಲಿ ಸತ್ಯವನ್ನು ತಥ್ಯ (ಫ್ಯಾಕ್ಟ್)ದ ಎದುರಿಗಿಸಿ ವ್ಯಾಖ್ಯಾನ ಮಾಡುತ್ತಾರೆ. ಇಲ್ಲಿನ ವಿಚಾರಗಳು ಹೊಸವು ಎನ್ನಿಸದಿದ್ದರೂ ಮಂಡನೆಯ ಕ್ರಮ ಹಾಗೂ ಹೊಸ ಪರಿಭಾಷೆ ಗಮನ ಸೆಳೆಯುತ್ತವೆ. ಹಾಗೆನೋಡಿದರೆ ಇಲ್ಲಿನ ಸಮಸ್ಯೆ ಜ್ಞಾನಕ್ಕೆ ಸಂಬಂಧಿಸಿದುದು. ಅದನ್ನು ಮರೆಸುವಂತೆ ಸಾಹಿತ್ಯದೊಡನೆ ಅದರ ಸಂಪರ್ಕವನ್ನು ರೂಪಿಸಲಾಗಿದೆ. ಇಂಥದೇ ಇನ್ನೊಂದು ಲೇಖನ 'ನಮ್ಮ ಸಾಹಿತ್ಯದಲ್ಲಿ ಭಾರತೀಯತೆ'. ಇಂದಿನ ವಿಮರ್ಶೆಯ ಮುಖ್ಯ

ಚರ್ಚಾಬಿಂದುವೊಂದನ್ನು ಎತ್ತಿಕೊಳ್ಳುವ ಈ ಲೇಖನ ಸಡಿಲವಾದ ಹೇಳಿಕೆಗಳಲ್ಲಿ ನಿಲ್ಲುವುದಿಲ್ಲ. ಭಾರತೀಯ ಎನ್ನಬಹುದಾದ ಮೂರು ಅಂಶಗಳು ನಮ್ಮ ಸಾಹಿತ್ಯದಲ್ಲಿ ಅಂತರ್ಗತವಾಗಿರುವುದನ್ನು ಲೇಖಕರು ಸಮರ್ಥವಾಗಿ ಗ್ರಹಿಸಿ ಮಂಡಿಸಿದ್ದಾರೆ. ಇಲ್ಲಿ ಅವರು ಭಾರತೀಯತೆಯನ್ನು ವ್ಯಾಖ್ಯಾನಿಸಿರುವುದು ಹಾಗೂ ಸಾಹಿತ್ಯದಲ್ಲಿ ಅದನ್ನು ಗುರುತಿಸಿರುವುದು ಕೊನೆಯ ಮಾತೇನೂ ಅಲ್ಲ. ಉದಾಹರಣೆಗೆ ದೇವರ ಬಗೆಗೆ ಸಂಬಂಧವನ್ನು ಕಲ್ಪಿಸಿಕೊಳ್ಳುವ ವೈಶಿಷ್ಟ್ಯದಲ್ಲಿ ನಮ್ಮ ಸಾಹಿತ್ಯ ಭಾರತೀಯ ಎನ್ನಬಹುದಾದ ಒಂದು ಲಕ್ಷಣವನ್ನು ಪ್ರಕಟಿಸಿದೆ ಎನ್ನುತ್ತಾರೆ. ಹಾಗೆ ನೋಡಿದರೆ ಈ ಬಗೆಯ ದೇವ-ಮಾನವ ಸಂಬಂಧ ಪ್ರಾದೇಶಿಕ ಅಥವಾ ದೇಶೀಯ ಸಾಹಿತ್ಯಗಳ ಒಂದು ವಿಶೇಷ ಲಕ್ಷಣ. ಮಾರ್ಗ ಕಾವ್ಯ ಸಂಪ್ರದಾಯಕ್ಕೆ ವಿರುದ್ಧವಾಗಿ ಮೂಡಿದ ಪ್ರತಿಕ್ರಿಯೆ. ಈ ದೃಷ್ಟಿಯಿಂದ ಈ ಅಂಶವನ್ನು ಭಾರತೀಯ ಎನ್ನುವುದು ಯಾವ ಅರ್ಥದಲ್ಲಿ ? ಇದು ಮುಂದಿನ ಚರ್ಚೆಗಳಿಗೆ ಅನುವು ಮಾಡಿಕೊಡುವಂತಿದೆ.

ದಶವಾರ್ಷಿಕ ಸಾಹಿತ್ಯ ಸಮೀಕ್ಷೆ (ಸಂ : ಜಿ. ಎಸ್. ಶಿವರುದ್ರಪ್ಪ)

ಏಳನೆಯ ದಶಕದ ಕನ್ನಡ ಸಾಹಿತ್ಯದ ಮುಖ್ಯ ಸಾಧನೆ ಹಾಗೂ ಪ್ರವೃತ್ತಿಗಳನ್ನು ಗುರುತಿಸಲೆಂದು ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನ. ಸೃಜನಶೀಲತೆ ಹಾಗೂ ವಿಮರ್ಶೆ ಈ ಎರಡೂ ನೆಲೆಗಳಲ್ಲಿ ಏಳನೆಯ ದಶಕಕ್ಕೆ ಅದರದ್ದೇ ಆದ ವೈಶಿಷ್ಟ್ಯಗಳಿವೆ. ಹಾಗಾಗಿ ಈ ದಶಕದ ಸಾಧನೆಗಳನ್ನು ಗುರುತಿಸುವ ಯತ್ನ ಸಾಧುವಾದುದು.

ಈ ಸಂಕಲನದಲ್ಲಿ ಕಾವ್ಯ, ಕಾದಂಬರಿ, ಸಣ್ಣಕತೆ, ನಾಟಕ, ಸಂಶೋಧನೆ ಈ ಕ್ಷೇತ್ರಗಳ ಸಾಧನೆಯನ್ನು ಪರಿಶೀಲಿಸುವ ಲೇಖನಗಳಿವೆ. ಸಾಹಿತ್ಯ ಮತ್ತು ಚಲನ ಚಿತ್ರ, ಸಾಹಿತ್ಯಕ ಕಿರುಪತ್ರಿಕೆಗಳು ಹಾಗೂ ಸಾಹಿತ್ಯದ ಅಧ್ಯಯನದಲ್ಲಿ ಅನ ಶಿಸ್ತುಗಳ ಪ್ರಭಾವ ಈ ಮೂರೂ ವಲಯಗಳನ್ನು ಪ್ರತಿನಿಧಿಸುವ ಅಧ್ಯಯನಗಳಿವೆ. ಏಳನೆಯ ದಶಕದಲ್ಲಿ ವಿಶಿಷ್ಟವಾದುದೇನೆಂಬುದನ್ನು ಈ ಪ್ರಬಂಧಗಳ ವಸ್ತುಗಳು ಸೂಚಿಸುತ್ತವೆ. ಇದರ ಜೊತೆಗೆ ಸಾಹಿತ್ಯ ಹಾಗೂ ರಾಜಕಾರಣ ಮತ್ತು ಸಾಹಿತ್ಯಕ ವಾಗ್ವಾದಗಳು ಎಂಬ ಎರಡು ವಿಷಯಗಳನ್ನು ಕುರಿತು ವಿಚಾರಮಂಡನೆಯೂ ಸೇರಿದೆ. ಹೀಗೆ ಒಂದು ಅವಧಿಯ ಸಾಹಿತ್ಯದ ಅಧ್ಯಯನ ಹೇಗೆ ನಡೆಯಬಹುದೆಂಬುದಕ್ಕೆ ಮಾದರಿಯೊಂದನ್ನು ರೂಪಿಸುವಯತ್ನ ಇಲ್ಲಿ ಕಂಡುಬರುತ್ತದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿನ ಸಾಧನೆಗಳನ್ನು ಗುರುತಿಸುವ ಜೊತೆಗೆ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಭಾವ ಬೀರಿರುವ ಇತರ ಸಾಹಿತ್ಯೇತರ ಸಂಗತಿಗಳನ್ನು ಕುರಿತೂ ಅಧ್ಯಯನ ನಡೆದಿರುವುದು, ಹಾಗಾಗಿ, ಗಮನಾರ್ಹ.

ಇಲ್ಲಿ ಪ್ರಬಂಧಗಳನ್ನು ಮಂಡಿಸಿರುವವರು ಒಂದೇ ಬಗೆಯ ವಿಮರ್ಶಾ ವಿಧಾನಗಳನ್ನು ಬಳಸಿಲ್ಲ. ಹಾಗೆ ಬಳಸುವುದು ಸಾಧ್ಯವೂ ಇಲ್ಲ. ಪ್ರಕಾರಗಳನ್ನು

ಕುರಿತ ಅಧ್ಯಯನಗಳಲ್ಲಿ ಪ್ರಾತಿನಿಧಿಕ ಕೃತಿಗಳ ನೆರವಿನಿಂದ ಮುಖ್ಯ ಪ್ರವೃತ್ತಿಗಳನ್ನು ಗುರುತಿಸುವ ಯತ್ನ ಕೆಲವರದಾದರೆ, ಪ್ರತ್ಯೇಕ ಕೃತಿಗಳ ಸಮೀಕ್ಷೆಯ ದಾರಿಯನ್ನು ಹಿಡಿದು ವೈವಿಧ್ಯಗಳನ್ನು ಸೂಚಿಸುವ ದಾರಿ ಮತ್ತೆ ಕೆಲವರದು.

ಏಳನೆಯ ದಶಕ ಸಾಹಿತ್ಯಕ ವಾಗ್ವಾದಗಳನ್ನು ಎದುರಿಸಿದ ಬಗೆಯೂ ಇಲ್ಲಿ ಮುಖ್ಯ ದಾಖಲೆಯಾಗಿ ಕಂಡುಬರುತ್ತದೆ. ಅಂಥ ವಾಗ್ವಾದಗಳ ಪರಿಚಯವನ್ನು ನೀಡುವ ಪ್ರಬಂಧವೊಂದು ಇಲ್ಲಿದೆ ಎಂಬುದಷ್ಟು ಮಾತ್ರವಲ್ಲ; ಪ್ರತಿಯೊಂದು ಸಾಹಿತ್ಯ ಪ್ರಕಾರದ ಸಮೀಕ್ಷೆಯೂ ಈ ಅಂಶವನ್ನು ತನ್ನೊಳಗೆ ಅಳವಡಿಸಿಕೊಂಡಿದೆ.

ವಿವಿಧ : (ಸಂ ; ಜಿ. ಎಸ್. ಶಿವರುದ್ರಪ್ಪ)

'ಸಾಧನೆ' ಪತ್ರಿಕೆಯು ತನ್ನ ದಶವಾರ್ಷಿಕ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನಗಳು ಈ ಗ್ರಂಥವಾಗಿ ಪ್ರತ್ಯೇಕವಾಗಿ ಪ್ರಕಟಗೊಂಡಿವೆ. ಕನ್ನಡ ಸಾಹಿತ್ಯ ವಿಮರ್ಶೆಯು ಪಡೆಯುತ್ತಿರುವ ಹೊಸ ಆಯಾಮಗಳನ್ನು ಗುರುತಿಸಿ ದಾಖಲು ಮಾಡುವುದು ಈ ಲೇಖನಗಳ ಮುಖ್ಯ ಉದ್ದೇಶ. ಅನ್ಯ ಜ್ಞಾನ ಶಿಸ್ತುಗಳ ನೆರವು ಪಡೆದು ಸಾಹಿತ್ಯ ವಿಮರ್ಶೆಯು ತಾತ್ತ್ವಿಕವಾಗಿ ಹೊಂದುವ ವಿಸ್ತಾರವನ್ನು ಈ ಲೇಖನಗಳು ಪರಿಚಯಿಸುತ್ತವೆ. ತತ್ತ್ವಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ರಾಜಕಾರಣ-ಇವೇ ಮುಂತಾದ ವಲಯಗಳ ಅರಿವು ಸಾಹಿತ್ಯದ ವ್ಯಾಖ್ಯಾನದಲ್ಲಿ, ಗ್ರಹಿಕೆಯಲ್ಲಿ ಹಾಗೂ ಸೃಷ್ಟಿಯಲ್ಲಿ ಪರಿಣಾಮ ಬೀರುವ ಕ್ರಮವನ್ನು ಅಭ್ಯಸಿಸಲಾಗಿದೆ.

ಜನ ಕಾವ್ಯದೃಷ್ಟಿ : (ಬಿ. ಎ. ಸನದಿ)

ಸನದಿಯವರ ಈ ಬರೆಹಗಳ ಸಂಕಲನದಲ್ಲಿ ಹತ್ತು ಲೇಖನಗಳಿದ್ದು ಅವುಗಳನ್ನು 'ಸಮಯ' ಮತ್ತು 'ಸಂದರ್ಭ' ಎಂಬ ಎರಡು ಭಾಗಗಳಲ್ಲಿ ಅಳವಡಿಸಲಾಗಿದೆ. 'ಸಮಯ'ದಲ್ಲಿ ಸಾಹಿತ್ಯ ಸಂದರ್ಭವನ್ನು ಕುರಿತ ಸಾಮಾನ್ಯ ನೆಲೆಯ ಚಿಂತನೆಗಳಿದ್ದು, 'ಸಂದರ್ಭ'ದಲ್ಲಿ ದಿನಕರ ದೇಸಾಯಿ, ಕಾವ್ಯಾನಂದ, ಕಣವಿ ಹಾಗೂ ಶಾ. ಬಾಲೂರಾವ್ ಇವರ ಕಾವ್ಯವನ್ನು ಕುರಿತ ಅಧ್ಯಯನಗಳಿವೆ. ಕನ್ನಡ ಕಾವ್ಯ ಎದುರಿಸುತ್ತಿರುವ ಸಮಸ್ಯೆ ಹಾಗೂ ಕಂಡುಕೊಳ್ಳುತ್ತಿರುವ, ಕಂಡುಕೊಳ್ಳಬೇಕಾದ ಮಾರ್ಗಗಳ ಬಗೆಗೆ ಸನದಿಯವರಿಗೆ ಅವರದೇ ಆದ ವಿಚಾರಗಳಿವೆ. ತಮ್ಮ ಲೇಖನಗಳಲ್ಲಿ ಈ ವಿಚಾರಗಳನ್ನು ಅಭಿಪ್ರಾಯಗಳ ರೂಪದಲ್ಲಿ ಸಾದರಪಡಿಸಿದ್ದಾರೆ. ವಿಮರ್ಶೆಯ ಕನಿಷ್ಠ ಶಿಸ್ತನ್ನು ಪಡೆದ ಈ ಲೇಖನಗಳು ಈವರೆಗಿನ ಕಾವ್ಯ ಚರ್ಚೆಗೆ ಹೊಸ ಸೇರಿಕೆಗಳು ಮಾತ್ರ. ಹೊಸ ಚಿಂತನೆಗಳು ಕಡಿಮೆ. ಕಾವ್ಯದ ಗ್ರಹಿಕೆಯ ನೆಲೆಯಿಂದ ಹಿಡಿದು ಅದನ್ನು ತಮ್ಮ ಚರ್ಚೆಗೆ ಸೂಕ್ತವಾಗಿ ಬಳಸುವವರೆಗೆ ಸನದಿಯವರು ತೇಲು

ನೆಲೆಯನ್ನು ಆಧರಿಸುತ್ತಾರೆ. ಈ ಅಂಶ ಅವರ 'ಸಂದರ್ಭ'ದ ಲೇಖನಗಳಲ್ಲೂ, ಇನ್ನೂ ಗಾಢವಾಗಿ, ಕಂಡುಬರುತ್ತದೆ. ಉಲ್ಲೇಖ, ವಿವರಣೆಗಳ ಮಾದರಿಯ ಈ ಲೇಖನಗಳು ಪರಿಚಯ ಹಾಗೂ ಮೆಚ್ಚುಗೆಯ ನೆಲೆಯಿಂದ ದಾಟುವ ತವಕವನ್ನೇ ತೋರುವುದಿಲ್ಲ. 'ಕಣವಿಯವರ ಕಾವ್ಯದಲ್ಲಿ ಮಳೆಯ ಜಾಲರಿ' ಒಂದು ಅಚ್ಚುಕಟ್ಟಾದ ಲೇಖನ.

ಇಲ್ಲಿನ ಲೇಖನಗಳಲ್ಲಿ 'ಜನಕಾವ್ಯ'ವೆಂಬ ಮಾತು ಬಂದಿದೆ. ಇದರ ಅರ್ಥ ವ್ಯಾಪ್ತಿಯನ್ನು ತಿಳಿಸಲು ಸನದಿಯವರು ಪ್ರಯತ್ನಿಸಿದ್ದಾರೆ. ಆದರೆ ಅವರ ವ್ಯಾಖ್ಯೆಯಲ್ಲಿ ಅಪೇಕ್ಷೆಗಳಿವೆ. ಆ ಅಪೇಕ್ಷೆಗಳೇ ಕಾಲದೇಶ ಮುಕ್ತ. ಹಾಗಾಗಿ ಅವರಿಗೆ ಕವಿಗೂ ಸಾಮಾಜಿಕ ಸಂಚಲನೆಗೆ ಕಾರಣವಾಗುವ ಚಿಂತನೆಗಳಿಗೂ ನೇರ ಸಂಬಂಧ ಅವಶ್ಯವಿಲ್ಲವೆಂದೇ ತೋರುತ್ತದೆ. ಇದು ನವೋದಯದ ಒಂದು ಘೋಷಿತ ಮನೋಧರ್ಮದ ಇನ್ನೊಂದು ರೂಪ. ಒಟ್ಟಾರೆ ಈ ಸಂಕಲನ ಕಾವ್ಯ ಕುತೂಹಲಿಯೊಬ್ಬರ ಸರಳ ಗ್ರಹಿಕೆಗಳ ದಾಖಲೆಯಾಗಿದೆ.

ಅನುಶೀಲನ (ಸಿದ್ಧಲಿಂಗ ಪಟ್ಟಣ ಶೆಟ್ಟಿ)

ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಕಾವ್ಯವನ್ನು ಕುರಿತು ಬರೆದ ಟಿಪ್ಪಣಿಗಳ ಸಂಕಲನವಿದು. 'ಕಣವಿಯವರ ಏಳು ಬಲಪದ್ಯಗಳು, ಲೇಖನದಲ್ಲಿ ಕಣವಿಯವರು ರಚಿಸಿರುವ ಏಳು ಹಾಡುಗಳ ಗುಣ ಹಾಗೂ ಮಿತಿಗಳನ್ನು ಗುರುತಿಸುತ್ತಾರೆ. 'ನಾನು ಮತ್ತು ನನ್ನ ಕಾವ್ಯ' ತಮ್ಮ ಕಾವ್ಯ ಜೀವನದ ಬಗೆಗೆ ಪರಿಚಯ ನೀಡುವ ಲೇಖನ. ಮುಂದಿನ ಎರಡು ಲೇಖನಗಳು ಅನುವಾದಗಳು. ರಿಚರ್ಡ್ಸ್ ಹಾಗೂ ಭಾರತೀಯ ರಸಸಿದ್ಧಾಂತಗಳ ವಿವೇಚನೆ ನಡೆಸುವ ಲೇಖನಗಳಿವು.

ಇಲ್ಲಿಂದ ಮುಂದೆ ಎಂಟು ಮುನ್ನುಡಿಗಳು, ಹನ್ನೆರಡು ರಿವ್ಯೂಗಳು ಹಾಗೂ ಆರು ಟಿಪ್ಪಣಿಗಳಿವೆ. ಇವೆಲ್ಲವೂ ಕವನ ಸಂಕಲನಗಳನ್ನು ಕುರಿತು ಬರೆದಂಥವು. ಇವುಗಳಲ್ಲಿ ಪಟ್ಟಣಶೆಟ್ಟರ ವಿಮರ್ಶನ ಪ್ರಜ್ಞೆಯ ಹೊಳಹುಗಳು ಕಾಣಸಿಗುತ್ತವೆ. ಕವಿತೆಯಲ್ಲಿ ಒಳ್ಳೆಯದನ್ನು, ಒಳ್ಳೆಯ ಕವಿತೆಗಳಲ್ಲಿ ಉತ್ತಮವಾದುದನ್ನು ಕಾಣಲು ಶಕ್ತರಿರುವಂತೆ, ಇವರು ಕವಿತೆಗಳ ಮಿತಿಗಳನ್ನೂ ಗುರುತಿಸಬಲ್ಲರು. ಕೇವಲ ಹೊಗಳುವ ಇಲ್ಲವೇ ತೇಲಿಸುವ ಮಾತುಗಳಿಗೆ ಜಾರದಂತೆ ಬರೆಯಬಲ್ಲರು. ಕಾವ್ಯ ವಿಮರ್ಶೆಯು ಹಾಕುವ ಇನ್ನೂ ಗಾಢವಾದ ಸವಾಲುಗಳನ್ನು ಲೇಖಕರು ಇಲ್ಲಿ ಎದುರಿಸಿಲ್ಲವಾದರೂ ಸೀಮಿತ ವಲಯದಲ್ಲಿ ತಮ್ಮ ಸಾಮರ್ಥ್ಯದ ಪರಿಚಯ ನೀಡಿದ್ದಾರೆ.

ಬದಲಾವಣೆ (ಕೆ. ಎಸ್. ಭಗವಾನ್)

ಭಗವಾನ್ ಅವರ ಈ ಸಂಕಲನದಲ್ಲಿ ಒಂಬತ್ತು ಲೇಖನಗಳಿವೆ. ಇವುಗಳಲ್ಲಿ ಕುವೆಂಪು ಸಾಹಿತ್ಯವನ್ನು ಕುರಿತ ಲೇಖನಗಳು ಮೂರು. ಕುವೆಂಪು ಅವರ ಗದ್ಯ, ಅವರ ಕಾದಂಬರಿಗಳಲ್ಲಿ ಕಂಡುಬರುವ ದಲಿತ ಜೀವನ, ಕಾನೂರು ಹೆಗ್ಗಡಿತಿಯಲ್ಲಿನ ಬಂಡಾಯ ಇವುಗಳನ್ನು ಕುರಿತ ಲೇಖನಗಳಿವು. ಅಭ್ಯಾಸಪೂರ್ಣ ಲೇಖನಗಳನ್ನು ಬರೆಯಬಲ್ಲ ಲೇಖಕರು ತಮ್ಮ ವಿಚಾರಗಳನ್ನು ಮಂಡಿಸಲು ಕೃತಿಯ ವಿವರಗಳ ಜೊತೆಗೆ ಸಾಹಿತ್ಯೇತರ ಸಂಗತಿಗಳನ್ನೂ ಬಳಸುತ್ತಾರೆ. ಅಲ್ಲದೆ ಕುವೆಂಪು ಅವರನ್ನು ಕುರಿತು ಅನ್ಯ ಧಾಟಿಯ ವಿಮರ್ಶೆಯೂ ಅವರ ಎದುರಿಗಿರುತ್ತದೆ. ಹಾಗಾಗಿ ಸಮರ್ಥನೆಯ ಧಾಟಿ ಸುಳಿದು ಹೋಗುವುದನ್ನು ಗಮನಿಸಬಹುದು.

ಈ ಸಂಕಲನದ ಇನ್ನೆರಡು ಲೇಖನಗಳು ನೇರವಾಗಿ ಸಾಹಿತ್ಯ ವಿಮರ್ಶೆಗೆ ಸಂಬಂಧ ಪಟ್ಟವಲ್ಲ. ಸಾಮಾಜಿಕ ಚಿಂತನೆಗಳ ಹೊರ ಅಂಚಿನಲ್ಲಿ ನಿಂತ ಬರೆಹಗಳಿವು. ಶಂಕರಾಚಾರ್ಯರ ಸಿದ್ಧಾಂತಗಳ ಸಾಧುತ್ವವನ್ನು ಪ್ರಶ್ನಿಸುತ್ತವೆ. ಇಲ್ಲಿನ ವಿಚಾರ ಗಳಿಂದ ಸಾಹಿತ್ಯಕ್ಕೆ ದಾಟುವ ಸಾಧ್ಯತೆ ಇದ್ದರೂ ಇಲ್ಲಿ ಲೇಖಕರು ಅಂಥ ಆಶಯ ವನ್ನು ಹೊಂದಿದಂತಿಲ್ಲ.

ಸಾಹಿತ್ಯ ಮತ್ತು ಸಮಾಜ (ರಮಜಾನ ದರ್ಗಾ)

ಸಾಮಾಜಿಕ ವಿಶ್ಲೇಷಣೆ, ಸಾಮಾಜಿಕ ಪರಿವರ್ತನೆ ಮುಂತಾದ ವಲಯ ಗಳೊಡನೆ ಸಾಹಿತ್ಯ ಪಡೆದುಕೊಳ್ಳುವ, ಪಡೆದುಕೊಳ್ಳಬೇಕಾದ ಸಂಬಂಧಗಳನ್ನು ಮುಖ್ಯವಾಗಿ ಗಮನಿಸುವ ತಮ್ಮ ಕೆಲವು ಲೇಖನಗಳನ್ನು ಇಲ್ಲಿ ಲೇಖಕರು ಸಂಗ್ರಹಿಸಿದ್ದಾರೆ. ಈ ಕ್ಷೇತ್ರಗಳ ವ್ಯಾಪ್ತಿ ತುಂಬಾ ದೊಡ್ಡದು. ಸಾಹಿತ್ಯದ ಬಗೆಗೆ ಮಾತಾಡುತ್ತಾ ನಾವು ಹೊರಟರೆ ಕೊನೆಗೆ ಸಾಮಾಜಿಕ ಸಮಸ್ಯೆಗಳ ತುಯ್ತಕ್ಕೆ ಒಳಗಾಗಿ ಸಾಮಾಜಿಕ ಚಿಂತನೆಗಳ ವಿಶ್ಲೇಷಣೆ ಬಳಿ ತೊಡಗುತ್ತೇವೆ. ಇಲ್ಲಿನ ಹಲವು ಲೇಖನಗಳಲ್ಲಿ ಲೇಖಕರ ದೃಷ್ಟಿಕೋನ ಸಮಾಜದ ಕಡೆಯಿಂದ ಸಾಹಿತ್ಯ ವನ್ನು ನೋಡುವ ಬಗೆಯದು. ಇಂಥಲ್ಲಿ ತೀರಾ ಗಹನವಾದ ಸಂಗತಿಯೂ ಕೇವಲ ಹೇಳಿಕೆಯ ಮಟ್ಟದಲ್ಲೇ ನಿಂತು ಬಿಡಬಹುದು. ಲೇಖಕರೂ ಕೂಡ ವಿಸ್ತರಿಸಿ ಚರ್ಚಿಸಬಹುದಾದ ಕಡೆಗಳಲ್ಲಿ ಸುಮ್ಮನೆ ನಿಂತುಬಿಡುತ್ತಾರೆ. ಹಲವಾರು ಗೊಂದಲ ಗಳನ್ನು ಅಲ್ಲಲ್ಲಿ ಗುರುತಿಸಬಹುದಾದರೂ ಸಾಹಿತ್ಯವನ್ನು ನೋಡಲು ಹೊಸದಾದ ಮಾರ್ಗಗಳನ್ನು ಹುಡುಕುತ್ತಿರುವ ಪ್ರಯತ್ನದ ಹಿಂದಿನ ಪ್ರಾಮಾಣಿಕತೆಯನ್ನು ಮಾತ್ರ ಮೆಚ್ಚಬೇಕಾಗುತ್ತದೆ. ಅಲ್ಲದೆ ಇಂಥ ಪ್ರಯತ್ನಗಳಲ್ಲಿ ಆಗಾಗ ತಲೆಹಾಕ ಬಹುದಾದ ವಿಧಿನಿಷೇದಗಳ, ನಿಯತಿವಾದದ (ಡಿಟರ್ಮಿನಿಸಂ) ಅಪಾಯಗಳಿಂದ ದೂರ ಉಳಿದಿರುವುದೂ ಕೂಡ ಗಮನಿಸಬೇಕಾದ ಸಂಗತಿ.

ಇಲ್ಲಿನ ಲೇಖನಗಳನ್ನು ಓದುತ್ತಾ ಹೋದಂತೆ ನನ್ನನ್ನು ಕಾಡುತ್ತಿದ್ದ ಪ್ರಶ್ನೆಯೊಂದು ಮತ್ತೆ ಎದುರುನಿಂತಿತು. ಅದನ್ನಿಲ್ಲಿ ಹೇಳುತ್ತೇನೆ. ಅನುಭವದ ತೀವ್ರತೆ ಹಾಗೂ ಅಭಿವ್ಯಕ್ತಿಯ ಪ್ರಾಮಾಣಿಕತೆ, ಅಧಿಕೃತಗಳನ್ನು ಕುರಿತ ಪ್ರಶ್ನೆಯಿದು. ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಅಧಿಕೃತ ಅಭಿವ್ಯಕ್ತಿಗೂ ಅನುಭವದ ತೀವ್ರತೆಗೂ ಸಂಬಂಧ ಕಲ್ಪಿಸಲಾಗುತ್ತಿದೆ. ಇದರ ಸಾಧ್ಯತೆಯನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಅಭಿವ್ಯಕ್ತಿ ಸಾಧ್ಯವಾಗುವುದು ಅನುಭವದ ತೀವ್ರತೆಯಿಂದ ಎಂದು ಹೇಳುವುದು ಹೇಗೆ ಎನ್ನುವ ಪ್ರಶ್ನೆ ಮಾತ್ರ ಹಾಗೆ ಉಳಿಯುತ್ತದೆ. ಬಡತನದ ತಮ್ಮ ಅನುಭವಗಳನ್ನು ಇಲ್ಲಿ ತಮ್ಮ ಕಾವ್ಯ ಜೀವನದೊಂದಿಗೆ ಸಂಪರ್ಕಿಸಿ ವಿವರಿಸುವ ಒಂದು ಲೇಖನವನ್ನು ಬರೆಯಲಾಗಿದೆ. ಆದರೆ ಬಡತನವೇ, ಅದರ ತೀವ್ರ ಅನುಭವವೇ ಕಾವ್ಯಕ್ಕೆ ಅದರ ಅಧಿಕೃತತೆಗೆ ಕಾರಣವಾಯಿತೋ ? ಹಾಗಾದರೆ ನಡುವಣ ಹಂತವೊಂದು ಇದೆಯೆಂದು ತಿಳಿಯುವುದು ಸರಿಯಲ್ಲವೇ ? ಸಾಹಿತ್ಯ ವಿಮರ್ಶೆ ತಾತ್ತ್ವಿಕವಾಗಿ ಎದುರಿಸಬೇಕಾದ ಸಮಸ್ಯೆಯೊಂದು ಇಲ್ಲಿದೆ ಎಂದು ನಾನು ತಿಳಿದಿದ್ದೇನೆ.

ಮಾಲಾರ್ಪಣೆ (ಸಂ : ಕೆ. ಶಾಂತಾ)

ಎ. ಆರ್. ಕೃಷ್ಣಶಾಸ್ತ್ರೀಯವರ ಕೃತಿಗಳನ್ನು ಪರಿಚಯ ಮಾಡಿಕೊಡುವ ಲೇಖನ ಹಾಗೂ ಉಪನ್ಯಾಸ ಬರೆಹಗಳ ಸಂಕಲನವಿದು. ಬಹುಪಾಲು ಲೇಖನಗಳು ಈ ಗ್ರಂಥಕ್ಕಾಗಿಯೇ ರಚನೆಯಾಗಿವೆ. ಸಂಪಾದಕಿಯಾಗಿ, ಎ ಆರ್.ಕೃ. ಅವರ ಜೀವನದ ಕೆಲವು ವಿವರಗಳನ್ನು ಅವರ ಮಗಳು ಇಲ್ಲಿ ನೀಡಿದ್ದಾರೆ. ಇಲ್ಲಿನ ಲೇಖನಗಳು ಕೃತಿ ಪರಿಚಯದ ತಮ್ಮ ಮೂಲೋದ್ದೇಶವನ್ನು ಸಮರ್ಥವಾಗಿ ನಿರ್ವಹಿಸಿವೆ. ಎ.ಆರ್.ಕೃ. ಅವರ ಕಾರ್ಯ ಪಟುತ್ವ ಹಲವು ಕ್ಷೇತ್ರಗಳಲ್ಲಿ ಪ್ರವೃತ್ತವಾಗಿದ್ದಂಥದು. ಅವರ ಪ್ರಕಟಿತ ಪುಸ್ತಕಗಳ ವಿಷಯ ವೈವಿಧ್ಯವನ್ನು ನೋಡಿದರೆ ಇದು ತಿಳಿಯುವುದು. ಇಲ್ಲಿನ ಲೇಖನಗಳು ಸ್ವಯಂಪೂರ್ಣವಾಗಿವೆಯಾದರೂ ಎ.ಆರ್.ಕೃ. ಅವರ ಸಾಧನೆಯ ಮಹತ್ವ ಹಾಗೂ ಸ್ವರೂಪ ಮಾತ್ರ ಓದುಗರಿಗೆ ಅಪರಿಚಿತವಾಗಿಯೇ ಉಳಿಯುವುದು.

ಶಿವರಾಮ ಕಾರಂತ : ಹತ್ತು ಅಧ್ಯಯನಗಳು (ಸಂ : ಶಿವರಾಮ ಕಾಡನಕುಪ್ಪೆ)

ಇಲ್ಲಿನ ಹತ್ತು ಲೇಖನಗಳಲ್ಲಿ ನಾಲ್ಕು ಕಾರಂತರ ಕಾದಂಬರಿಗಳನ್ನು ಕುರಿತಿವೆ. (ಇವುಗಳಲ್ಲಿ ಎರಡು ಮಾತ್ರ ಹೊಸವು) ಉಳಿದ ಆರು ಕಾರಂತರು ವಿವಿಧ ಕ್ಷೇತ್ರಗಳಲ್ಲಿ ಬರೆದ ಕೃತಿಗಳ ಪರಿಶೀಲನೆಯನ್ನು ಉದ್ದೇಶಿಸಿವೆ. ಈ ಆರೂ ಲೇಖನಗಳು ತಮ್ಮ ಸೀಮಿತ ಆಸಕ್ತಿಯನ್ನು ನಿರ್ವಹಿಸಿವೆ. ಕೃತಿಗಳ ಸಾರವನ್ನು, ವೈಶಿಷ್ಟ್ಯವನ್ನು ವಿವರಿಸುತ್ತವೆ ; ಸಂಗ್ರಹಿಸುತ್ತವೆ.

ಕಾದಂಬರಿಗಳನ್ನು ಕುರಿತ ಲೇಖನಗಳೇ ನೇರವಾಗಿ ಸಾಹಿತ್ಯ ವಿಮರ್ಶೆಗೆ ಸಂಬಂಧ ಪಟ್ಟಂಥವು. ಜಿ. ಎಸ್. ನಾಯಕರ 'ಅಳಿದ ಮೇಲೆ' ಲೇಖನ ಈಗಾಗಲೇ ಕಾರಂತರ ಅಭ್ಯಾಸಿಗಳಿಗೆ ಪರಿಚಯವಾಗಿರುವಂಥದು. ಆ ಕೃತಿಯ ಒಂದು ಸಮರ್ಥ ವಿಶ್ಲೇಷಣೆ ಅಲ್ಲಿದೆ. ಪೋಲಂಕಿ ರಾಮಮೂರ್ತಿಯವರ 'ಮರಳಿಮಣ್ಣಿಗೆ'ಯ 'ಓದು'ಕೊಂಚ ದಿಕ್ಕುಗೆಡಿಸುವಂತಿದೆ. ಅವರು ಸರಿಯಾದ ನಿರ್ಣಯವನ್ನು ತಪ್ಪು ತರ್ಕದ ಸಹಾಯದಿಂದ ತಲುಪಿದ್ದಾರೆ. ಇಡೀ ಲೇಖನದ ವಿಶ್ಲೇಷಣೆಯ ಭಾಗ ಒಂದು ಕಡೆಯಾದರೆ ಕೊನೆಗೆ ತಲುಪುವ ನಿರ್ಣಯಗಳು ಇನ್ನೊಂದು ಕಡೆಯಾಗುತ್ತವೆ. 'ಮಣ್ಣು' ಕುರಿತ ಅವರ ವ್ಯಾಖ್ಯೆಗೆ ಕಾದಂಬರಿಯಲ್ಲಿ ಇರುವುದು ದೂರಾನ್ವಯ ಮಾತ್ರ. ಇಲ್ಲಿ ಅದನ್ನು ವಿಸ್ತರಿಸುವ ಅವಕಾಶವಿಲ್ಲ. ಉಳಿದ ಎರಡು ಕಾದಂಬರಿ ವಿಮರ್ಶೆಗಳು (ಬೆಟ್ಟದಜೀವ ಹಾಗೂ ಮೂಕಜ್ಜಿಯ ಕನಸುಗಳು) ಯುಕ್ತವಾಗಿವೆ.

ಕಾರಂತರ ಕಾದಂಬರಿಗಳಲ್ಲಿ ಗಂಡು ಹೆಣ್ಣು (ಟಿ. ಪಿ. ಅಶೋಕ)

ಲೇಖಕರು ಹೇಳುವ ಈ ಮಾತನ್ನು ಮೊದಲು ಗಮನಿಸಿ. ''ಈ ಟಿಪ್ಪಣಿಗಳನ್ನು ಶಾಸ್ತ್ರೀಯವಾದ, ಪ್ರಾಯೋಗಿಕ ಕಾದಂಬರಿ ವಿಶ್ಲೇಷಣೆಗಳಾಗಿ ನೋಡದೆ, ಮುಖ್ಯವಾಗಿ ಹೊರಗಿನಿಂದ ಹಾಗೂ ಸಾಮಾಜಿಕ ನೆಲೆಗಳಿಂದ, ಕಾದಂಬರಿಗಳಲ್ಲಿ ಕಂಡುಬರುವ ಗಂಡುಹೆಣ್ಣಿನ ಸಂಬಂಧಗಳನ್ನು ಅರ್ಥೈಸಿಕೊಳ್ಳುವ ಒಂದು ಪ್ರಯತ್ನವೆಂದು ತಿಳಿಯಬೇಕು'' (ಪು 7) ಇಲ್ಲಿನ ಇಪ್ಪತ್ತು ಟಿಪ್ಪಣಿಗಳನ್ನು ಓದಿದಾಗ ಅವುಗಳು ಒಂದೊಂದೂ ಬೇರೆ ಬೇರೆ ವಿಚಾರಗಳನ್ನು ಹೇಳುತ್ತಿರುವಂತೆ ಅನ್ನಿಸದು. ಮತ್ತೆಮತ್ತೆ ಸಾಧಿತ ಸಂಗತಿಗಳೇ ಆವೃತ್ತವಾಗುತ್ತ ಹೋಗುತ್ತವೆ. ಅನವಶ್ಯಕವಾಗಿ ಲಂಬಿಸಿದ ಬರೆಹವನ್ನು ಓದಿದ ಭಾವಮೂಡುತ್ತದೆ.

ಇನ್ನು ಇಲ್ಲಿನ ಬರೆಹವನ್ನು ಖಚಿತ ಅರ್ಥದಲ್ಲಿ ಸಾಹಿತ್ಯವಿಮರ್ಶೆ ಎನ್ನಲು ಬರುವಂತಿಲ್ಲ. ಸಾಮಾಜಿಕ ಚಿಂತನೆಗಳ ಸಮರ್ಥನೆಗೆ, ಸಾಬೀತಿಗೆ ಕಾದಂಬರಿಗಳನ್ನು ಬಳಸುವ ವಿಧಾನವೊಂದು ಇಲ್ಲಿ ಬಳಕೆಯಾಗಿದೆ. ಗಂಡು ಹೆಣ್ಣಿನ ಸಂಬಂಧದ ಬಗೆಗೆ ಕಾರಂತರ ನಿಲುವುಗಳನ್ನು, ಅಥವಾ ಕಾರಂತರ ಕಾದಂಬರಿಗಳ ನಿಲುವುಗಳನ್ನು – ಗ್ರಹಿಸುವ ಯತ್ನದ ಈ ಬರೆಹ ಉದ್ದಕ್ಕೂ ಸಮರ್ಥನೆಯ ಧಾಟಿಯಲ್ಲಿದೆ. ಸಾಹಿತ್ಯ ಕೃತಿಗಳನ್ನು ಸಾಧನಗಳನ್ನಾಗಿ ಮಾಡಿಕೊಳ್ಳುವ ಬರೆಹಗಳ ಸಮಸ್ಯೆಯೇ ಇದು.

ಗಂಡು ಹೆಣ್ಣುಗಳ ಅರ್ಥಪೂರ್ಣ ಸಂಬಂಧದ ಬಗೆಗೆ ಕಾರಂತರು ತಳೆಯುವ (ಅಥವಾ ಹಾಗೆಂದು ಲೇಖಕರು ಹೇಳುವ) ನಿಲುವುಗಳನ್ನು ಸಾಧಿತ ವಿಚಾರವೆಂದು ಭಾವಿಸುವುದೇ ಇಲ್ಲಿನ ಮೂಲಗ್ರಹಿಕೆಯ ದೋಷವಾಗಿದೆ. ಕೃತಿಯಲ್ಲಿ 'ಆಗುವಿಕೆ'

ಮುಖ್ಯವೋ ಅಥವಾ 'ಇರುವಿಕೆ' ಮುಖ್ಯವೋ ? ಈ ವಿಮರ್ಶೆಯು ಎರಡನೆಯ ಪ್ರಶ್ನೆಗೆ ಹೌದೆಂದು ಉತ್ತರಿಸುತ್ತದೆ. ಇದು ಸಾಹಿತ್ಯವಿಮರ್ಶೆಯಲ್ಲಿ ಈ ಲೇಖಕರು ಅನುಸರಿಸುವ ಮಾರ್ಗದ ಲಕ್ಷಣ. ಈ ಸಮೀಕ್ಷಕನಿಗೆ ಇದು ದೂರದ ದಾರಿ.

ಕುವೆಂಪು : ಕೆಲವು ಅಧ್ಯಯನಗಳು (ದೇ. ಜವರೇಗೌಡ)

ಕುವೆಂಪು ಅವರ ಸಾಹಿತ್ಯವನ್ನು ಕುರಿತಂತೆ ದೇಜಗೌ ಅವರು ಈಚೆಗೆ ('ಇತ್ತೀಚಿನ ಐದಾರು ವರ್ಷಗಳಲ್ಲಿ') ಬರೆದ ಲೇಖನಗಳ ಸಂಪುಟವಿದು. ನಿರ್ದಿಷ್ಟ ಕೃತಿ ವಿಶ್ಲೇಷಣೆಯ ಲೇಖನಗಳ ಜೊತೆಗೆ ಸಾಮಾನ್ಯ ಸಮೀಕ್ಷೆಯ ಲೇಖನಗಳೂ ಇಲ್ಲಿವೆ.

'ನೆನಪಿನ ದೋಣಿಯಲ್ಲಿ' ಕೃತಿಯನ್ನು ಕುರಿತ ಮೂರು ಲೇಖನಗಳು ಇಲ್ಲಿವೆ. ಆ ಕೃತಿಯ ಪರಿಚಯ ಹಾಗೂ ಮಹತ್ವವನ್ನು ಗುರುತಿಸುತ್ತಲೇ ಅದನ್ನು ಕುರಿತು ಮೂಡಿಬಂದಿರುವ ಟೀಕೆಗಳಿಗೂ ಉತ್ತರವನ್ನು ಕೊಡುತ್ತವೆ. ಹಾಗೆ ನೋಡಿದರೆ ಇಲ್ಲಿನ ಲೇಖನಗಳ ಮುಖ್ಯ ಧಾಟಿಯೇ ಇದು. ಕೊನೆಯ ದಾಖಲೆಯಂತೂ ಈ ಅಂಶವನ್ನು ಖಚಿತ ಪಡಿಸುತ್ತದೆ. ಒಕ್ಕೂಟದ ಉದ್ಘಾಟನೆಯಲ್ಲಿ ಕುವೆಂಪು ಮಾಡಿದ ಭಾಷಣಕ್ಕೆ ಮೂಡಿದ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಈ ವಿವರಗಳಿಂದ ತುಂಬಿದ ಬರೆಹ ಸಿದ್ಧವಾಗಿದೆ. ಆಸಕ್ತಿ ಮೂಡಿಸುವ ದಾಖಲೆಯಿದು.

ಕುವೆಂಪು ಸಾಹಿತ್ಯ : ಕೆಲವು ಮುಖಗಳು (ಸಿ ಪಿ ಕೆ)

ಲೇಖಕರ 'ಬೇರೆಬೇರೆ ಗ್ರಂಥಗಳಲ್ಲಿ ಹರಡಿಹೋಗಿದ್ದ ಕುವೆಂಪು ಸಂಬಂಧವಾದ (ಕೆಲವು) ಲೇಖನಗಳ 'ಏಕತ್ರ ಸಮಾವೇಶ'ವೇ ಈ ಗ್ರಂಥ. ಇಲ್ಲಿನ ಎಂಟು ಲೇಖನಗಳಲ್ಲಿ ಹಲವು ಸಾಮಾನ್ಯ ರೂಪದ, ವಿಶಾಲವ್ಯಾಪ್ತಿಯ ಲಕ್ಷಣಗಳನ್ನು ಅನುಸರಿಸುವುದರಿಂದ ಹೊಳಹುಗಳು ಕಡಿಮೆ. ಕುವೆಂಪು ಅವರ ಸಾಹಿತ್ಯಕ ಹಾಗೂ ಸಾಹಿತ್ಯೇತರವಾದ ಚಿಂತನೆಗಳನ್ನು ಆಧರಿಸಿ ತಮ್ಮ ವಿಚಾರಗಳನ್ನು ಬೆಳೆಸುತ್ತಾರೆ. ವಿಸ್ತರಿಸುತ್ತಾರೆ ; ಸಮರ್ಥಿಸುತ್ತಾರೆ. ಹಲವುವೇಳೆ ಹಲವು ಕಡೆ ಹಲವರಿಂದ ಮಂಡಿತವಾದ ವಿಚಾರಗಳೇ ಇಲ್ಲಿಯೂ ನಮಗೆ ಕಾಣಸಿಗುತ್ತವೆ. 'ನೆನಪಿನ ದೋಣಿಯಲ್ಲಿ ಸರ್ವೋದಯ' ಎಂಬ ಲೇಖನ ಆಸಕ್ತಿದಾಯಕವಾದ ಕ್ಷೇತ್ರವನ್ನು ಹೊಂದಿದೆಯಾದರೂ ಕೇವಲ ಕೆಲವೇ ಉಲ್ಲೇಖಗಳನ್ನಷ್ಟೇ ನೀಡುವಷ್ಟಕ್ಕೆ ತೃಪ್ತವಾಗಿ ಬಿಡುತ್ತದೆ.

ಕುವೆಂಪು ಸಾಹಿತ್ಯ ಪರಿಚಯ (ಅರ್ಜುನಪುರಿ ಅಪ್ಪಾಜಿಗೌಡ)

ಕುವೆಂಪು ಸಾಹಿತ್ಯ ಕುರಿತ ನಾಲ್ಕು ಲೇಖನಗಳು ಕುವೆಂಪು ಭೇಟಿ ಕುರಿತ ಒಂದು ಲೇಖನ ಇಲ್ಲಿವೆ. ಇಲ್ಲಿನ ಬರೆಹಗಳು ಉತ್ಸಾಹಿ ಅಭ್ಯಾಸಿಯೊಬ್ಬನ ಟಿಪ್ಪಣಿಗಳು, ಹೆಚ್ಚಿನದೇನನ್ನೂ ಇಲ್ಲಿ ನಿರೀಕ್ಷಿಸಬಾರದು.

ಕಾದಂಬರಿ (ವಿದ್ಯಾರ್ಥಿ ಲೇಖಕರು)

ಸೆಂಟ್ ಜೋಸೆಫ್ ಕಾಮರ್ಸ್ ಕಾಲೆಜಿನ (ಬೆಂಗಳೂರು) ವಿದ್ಯಾರ್ಥಿಗಳು ಕನ್ನಡದ ಹನ್ನೊಂದು ಖ್ಯಾತ ಕಾದಂಬರಿಗಳನ್ನು ಕುರಿತು ಬರೆದ ಲೇಖನಗಳ ಸಂಕಲನವಿದು. ಸಾಹಿತ್ಯಕ್ಕೆ ತೆರೆದುಕೊಳ್ಳುತ್ತಿರುವ ಮನಸುಗಳು ಸಾಹಿತ್ಯದಲ್ಲಿ ಉತ್ತಮವಾದದ್ದನ್ನು ಗುರುತಿಸಲು ತಮ್ಮದೇ ಆದ ಬಗೆಯಲ್ಲಿ ಯತ್ನಿಸುತ್ತಿರುವುದು ಇಲ್ಲಿಯ ಲೇಖನಗಳ ಗಮನಾರ್ಹ ಸಂಗತಿಯಾಗಿದೆ. ಇಂಥ ಪ್ರಯತ್ನದಲ್ಲಿ ಅವರನ್ನು ತೊಡಗಿಸಿ ಅವರ ಬರೆಹಗಳನ್ನು ಹೀಗೆ ಪ್ರಕಟಿಸಿದ ಎಚ್.ಎಸ್. ವೆಂಕಟೇಶ ಮೂರ್ತಿಯವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಇಲ್ಲಿನ ಲೇಖನಗಳು ವಿಮರ್ಶೆಯ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸುತ್ತವೆ ಎನ್ನುವಂತಿಲ್ಲ. ಹಾಗೆಂದು ವಿದ್ಯಾರ್ಥಿ ಬರೆಹಗಳೆಂಬ ವಿನಾಯತಿಯನ್ನು ಬಯಸುವುದಿಲ್ಲ. ರೂಪುಗೊಳ್ಳುತ್ತಿರುವ ಖಾಚಿತ್ಯದ ಹಿಂದಿನ ತಾಕಲಾಟಗಳು ಗೋಚರವಾಗುತ್ತವೆ. ಇಲ್ಲಿನ ಲೇಖನಗಳ ಸಾಧನೆ ಹಾಗೂ ಸಮಸ್ಯೆಗಳನ್ನು ಕುರಿತು ರಾಮಚಂದ್ರದೇವ ಅವರು ಒಂದು ಅಭ್ಯಾಸಪೂರ್ಣ ಮುನ್ನುಡಿಯನ್ನು ಬರೆದಿದ್ದಾರೆ. ಈ ಪ್ರಯತ್ನಕ್ಕೆ ಹಿನ್ನೆಲೆಯಾಗಿ ನಡೆದ ವಿಚಾರ ಸಂಕಿರಣವೊಂದರ ವರದಿಕೂಡ ಇಲ್ಲಿ ಪ್ರಕಟವಾಗಿದೆ.

ಪಾಶ್ಚಾತ್ಯ ಕಾವ್ಯ ಮೀಮಾಂಸೆ (ವಿ. ಎಂ. ಇನಾಂದಾರ್)

ಲೇಖಕರೇ ಹೇಳುವಂತೆ ಈ ಗ್ರಂಥ ಅವರ ಐವತ್ತು ವರ್ಷಗಳ ಅಧ್ಯಯನ ಹಾಗೂ ಅಧ್ಯಾಪನಗಳ ಫಲ. ಅಲ್ಲದೆ ಇಲ್ಲಿನ ಅಧ್ಯಾಯಗಳ ಬಹುಪಾಲು ಬೇರೆ ಬೇರೆ ಗ್ರಂಥಗಳಾಗಿಯೂ ಪ್ರಕಟಗೊಂಡಿವೆ. ಈ ಐವತ್ತು ವರ್ಷಗಳ ಅವಧಿಯಲ್ಲಿ ವಿವಿಧ ಗ್ರಂಥ ರಚನೆಯ ಮೂಲಕ ಬೆಳೆಸಿಕೊಂಡ ವಿವರಣಾ ಪ್ರಧಾನವಾದ, ಕ್ಲೇಶ ರಹಿತವಾದ ನಿರೂಪಣಾವಿಧಾನವೊಂದನ್ನು ಇಲ್ಲಿ ಬಳಸಿದ್ದಾರೆ. ಪಾಶ್ಚಾತ್ಯ ಸಾಹಿತ್ಯ ಚಿಂತನೆಗಳ ಪರಿಚಯ ಪಡೆಯಲು ತೊಡಗುವವರಿಗೆ ಈಗ ಇದೊಂದು ಕೈಪಿಡಿಯಾಗಲಿದೆ. ಇಂಥ ಪ್ರಯತ್ನಗಳ ಹಿಂದಿನ ಶ್ರಮ, ಪಾಂಡಿತ್ಯ ಹಾಗೂ ವಿಚಕ್ಷಣೆಗಳು ಅಭಿನಂದನೆಗಳಿಗೆ ತಕ್ಕಂಥವು.

''ಇದು ಪಾಶ್ಚಾತ್ಯ ವಿಮರ್ಶೆಯ ಚರಿತ್ರೆಯಲ್ಲ. ಒಂದು ಪಕ್ಷಿನೋಟವೂ ಅಲ್ಲ',' ''ಸುಮಾರು ಎರಡೂವರೆ ಸಾವಿರ ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಸೀಮಾಪುರುಷರೆನ್ನಬಹುದಾದ ಹದಿನಾರು ಜನ ಹಿರಿಯರ ಕಾರ್ಯವಿಶೇಷದ ಸುತ್ತು ಮಧ್ಯಾವಧಿಯ ಬೆಳವಣಿಗೆಗಳನ್ನು ಹಿನ್ನೆಲೆಯೆಂದೋ, ಮುನ್ಸೂಚನೆಗಳೆಂದೋ ಹೊಂದಿಸಿಕೊಂಡ'' ವಿಚಾರ ಮಂಡನೆಗೆ ತೊಡಗುವ ಕೃತಿ ಇದು. ಈ ಉದ್ದೇಶದ ಸಾಫಲ್ಯ ಹಾಗೂ ಅದರ ಸಾಧುತ್ವವನ್ನು ಈ ಸಮೀಕ್ಷೆಯಲ್ಲಿ ಪರಿಶೀಲಿಸಲು ಬಯಸಲಾಗಿದೆ.

ತಾವು ಆಯ್ದ ಹದಿನಾರು ಜನರಲ್ಲಿ ಹತ್ತು ಜನ ಇಂಗ್ಲಿಷ್ ಸಾಹಿತ್ಯ ಚಿಂತಕರಾಗಿರುವುದನ್ನು ಗುರುತಿಸುತ್ತಾ ಅದಕ್ಕೆ ತಾವು ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿರುವುದು ಕಾರಣವಲ್ಲವೆಂದೂ "ರೆನೆಸಾನ್ಸ್ ಕಾಲದಿಂದ ಈಚೆಗೆ ಪಾಶ್ಚಾತ್ಯ ವಿಮರ್ಶೆಯ ದಿಕ್ಕುದಾರಿಗಳನ್ನೆ ಬದಲಾಯಿಸಿ ಒಂದೊಂದು ಹಂತದಲ್ಲಿಯೂ ಅದನ್ನು ಹೊಸದಾರಿಗಳಲ್ಲಿ ಮುನ್ನಡೆಯುವಂತೆ ಮಾಡಿದವರು ಇಂಗ್ಲಿಷ್ ವಿಮರ್ಶಕರೇ ಹೊರತು ಬೇರೆಯವರಲ್ಲ" ಎಂದು ಹೇಳಿದ್ದಾರೆ. ಕೆಲವು ಫ್ರೆಂಚ್ ವಿಮರ್ಶಕರನ್ನು ಹೆಸರಿಸಿ "ಅವರು ತೋರಿದ ದಾರಿ ವಿಮರ್ಶೆಯ ವಿಚಾರ ಮುಂದುವರಿಯುವ ದಾರಿಯಾಗಿರಲಿಲ್ಲ" ಎಂದಿದ್ದಾರೆ. ಇಂಗ್ಲಿಷ್ ವಿಮರ್ಶಕರ ಬಗೆಗೆ ಈ ಮಟ್ಟದ ಸಮರ್ಥನೆ ಸ್ವತಃ ಬ್ರಿಟಿಷ್ ಅಥವಾ ಅಮೆರಿಕನ್ ಸಾಹಿತ್ಯಚಿಂತನೆಗಳ ಚರಿತ್ರಕಾರರಲ್ಲೂ ಕಾಣಸಿಗದು. ಇವರು ಆಯ್ದ ಹದಿನಾರು ಜನರಲ್ಲಿ ಇರುವ ಹತ್ತುಜನ ಇಂಗ್ಲಿಷ್ ವಿಮರ್ಶಕರು (ಅನಿವಾರ್ಯವಾಗಿ) ರೆನೆಸಾನ್ಸ್ ಕಾಲದಿಂದ ಇತ್ತೀಚಿನವರು. ಬೆನೆಡಿಟ್ಟೋ ಕ್ರೋಚೆಯೊಬ್ಬನೆ ಈ ಗಡಣದೊಳಗೆ ಸೇರಿಕೊಂಡಿರುವ ಅನ್ಯ. ಪಾಶ್ಚಾತ್ಯ ಸಾಹಿತ್ಯ ಚಿಂತನೆಯ ಬೆಳವಣಿಗೆಯನ್ನು ಹೀಗೆ ಇಂಗ್ಲಿಷ್ ಮನಸ್ಸುಗಳ ಮೂಲಕವೇ ಗ್ರಹಿಸುವ ಮಾರ್ಗ ಎಷ್ಟು ಸೂಕ್ತ ? ಇಂಗ್ಲಿಷ್‌ನಲ್ಲಿ ಈ ಬಗೆಯ ಸಾಹಿತ್ಯ ಚಿಂತನೆಗಳ ಚರಿತ್ರೆ ಬರೆದ ವಿಮ್‌ಸಾಟ್ ಮತ್ತು ಬ್ರೂಕ್ಸ್ ಹಾಗೂ ರೆನೆ ವೆಲೆಕ್ ಇಂಥವರು ಕೂಡ ಇಂಗ್ಲಿಷ್ ಸಾಹಿತ್ಯ ಚಿಂತನೆಗಳಿಗೆ ಮೂಲಗಳನ್ನು ಅನ್ಯ ಐರೋಪ್ಯ ಚಿಂತಕರಲ್ಲಿ ಗುರುತಿಸುತ್ತಾರೆ. ಇಂಗ್ಲಿಷ್ ರೊಮ್ಯಾಂಟಿಕ್ ಸಾಹಿತ್ಯ ಚಿಂತನೆಗಳಲ್ಲಿ ಪ್ರಧಾನ ಪಾಲುಪಡೆದ ಕೋಲ್‌ರಿಜ್‌ನ ಖ್ಯಾತ ಗ್ರಂಥ 'ಬಯೋಗ್ರಾಫಿಯ ಲಿಟರೆರಿಯ'ದ ಚಿಂತನೆಗಳಿಗೆ ಮೂಲ ಆತನ ಜರ್ಮನ್ ಚಿಂತನಕಾರರ ಅಧ್ಯಯನದ ನೆರವಿನಿಂದ ಮಾಡಿಕೊಂಡಿರುವ ಟಿಪ್ಪಣಿಗಳಲ್ಲಿರುವುದನ್ನು ರೆನೆವೆಲೆಕ್ ಗುರುತಿಸುತ್ತಾರೆ (ಅಫೀಮು ಸೇವನೆಯಿಂದ ಮರೆಗುಳಿಯಾಗಿದ್ದ ಈ ಇಂಗ್ಲಿಷ್ ಚಿಂತಕ ಆತನ್ನ ಮೂಲಗಳನ್ನು ಸೂಚಿಸುವುದನ್ನು ಮರೆತನೆನ್ನಲಾಗಿದೆ). ಜಗತ್ತಿನ ಎಲ್ಲರ ಸುಸಂಬದ್ಧ ಚಿಂತನೆಗಳಿಗೂ ಮೂಲ ಇಂಗ್ಲಿಷ್ ಪ್ರತಿಭೆ ಎಂದು ನಾವು ಗಣಿಸುತ್ತಿರುವುದನ್ನು ಇನ್ನೂ ಮುಂದುವರಿಸಬೇಕೆ ಎಂಬ ಪ್ರಶ್ನೆಯೊಂದರ ಕಾರಣವಾಗಿ ಈ ಮೇಲಿನ ವಿವರಣೆಯನ್ನು ನೀಡಬೇಕಾಗಿಬಂತು.

19 ಹಾಗೂ 20ನೆಯ ಶತಮಾನದ ಐರೋಪ್ಯ ಸಾಹಿತ್ಯ ಚಿಂತನೆಗಳನ್ನು ಬೆಳೆಸುವಲ್ಲಿ, ಅದರಲ್ಲೂ ಅನ್ಯ ಜ್ಞಾನಶಿಸ್ತುಗಳಿಂದ ಸಾಹಿತ್ಯ ತತ್ತ್ವಗಳನ್ನು ಬಲಪಡಿಸುವಲ್ಲಿ ಯುರೋಪಿನ ಇತರ ಭಾಷೆಗಳಾದ ರಷಿಯನ್, ಫ್ರೆಂಚ್, ಇಟಾಲಿಯನ್, ಜರ್ಮನ್ ಪ್ರತಿಭೆಗಳ ಕೊಡುಗೆಯನ್ನು ಮರೆಯುವುದು ಸಾಧ್ಯವೇ ? ಹಾಗೆ ನೋಡಿದರೆ ಆಧುನಿಕ ಸಾಹಿತ್ಯ ತತ್ತ್ವಗಳನ್ನು, ಅವುಗಳ ವೈವಿಧ್ಯವನ್ನು ಗಮನಿಸಿದರೆ ಅವುಗಳಿಗೆ ಇಂಗ್ಲೆಂಡ್ ಅಥವಾ ಅಮೇರಿಕದ ಕೊಡುಗೆ ತೀರಾ ಕಡಿಮೆ. ಆದ್ದರಿಂದ ಈ ಪ್ರಸ್ತುತ ಗ್ರಂಥವನ್ನು ಹೀಗೆ ಇಂಗ್ಲಿಷ್ ಕಣ್ಣುಗಳಿಂದ ರಚಿಸಲು ಲೇಖಕರು ನಿರ್ಧರಿಸಿರುವುದು ಅಷ್ಟೇನೂ ಸಮರ್ಥನೀಯ ನೆಲೆಯಲ್ಲ.

ಇನ್ನು ಇಲ್ಲಿನ ಉದ್ದೇಶ ಸಫಲಗೊಂಡಿದೆಯೋ ಇಲ್ಲವೋ ಎಂಬ ವಿಚಾರ : ಆಯಾ ಸಾಹಿತ್ಯ ಚಿಂತನಕಾರರ ಮುಖ್ಯ ವಿಚಾರಗಳನ್ನು ಸಂಗ್ರಹಿಸಿ, ತರ್ಕಬದ್ಧವಾಗಿ ನಿರೂಪಿಸುವಲ್ಲಿ ಗ್ರಂಥಕರ್ತರು ಯಶಸ್ವಿಯಾಗಿದ್ದಾರೆ. ಇದೊಂದು ಚರಿತ್ರೆಯಲ್ಲ ವಾದ್ದರಿಂದ ಆಯಾ ಚಿಂತಕರು ತಮ್ಮ ಚಿಂತಕ ಜೀವನದ ದೀರ್ಘಾವಧಿಯಲ್ಲಿ ಮಂಡಿಸಿದ ವಿಚಾರಗಳಲ್ಲಿ ಇದ್ದಿರಬಹುದಾದ (ಏಕೆ ಬಹುದಾದ, ಇರುವ) ಒಳ ವಿರೋಧಗಳ ಬಗೆಗೆ ಇಲ್ಲಿ ಗಮನ ಹರಿದಿಲ್ಲ. ಇಲ್ಲಿನ ಪ್ರತಿಯೊಬ್ಬ ಚಿಂತಕನೂ ನಿರ್ದಿಷ್ಟ ಸಾಂಸ್ಕೃತಿಕ ಒತ್ತಡಕ್ಕೆ ಒಳಗಾಗಿ ತನ್ನ ವಿಚಾರಗಳನ್ನು ರೂಪಿಸಿಕೊಳ್ಳು ತ್ತಿದ್ದನಾದ್ದರಿಂದ ಅವನ ಚಿಂತನೆಗಳು ಕೇವಲ ಸಾಹಿತ್ಯ ಮೀಮಾಂಸೆಯ ವಾಗ್ವಾದ ಗಳ ಸರಣಿ ಮಾತ್ರವಾಗದೆ ಸಮಕಾಲೀನ ವೈಚಾರಿಕತೆಯ ಸೆಳಕುಗಳೂ ಕೂಡ ಆಗಿ ರುತ್ತವೆ. ಈ ಗ್ರಂಥದಲ್ಲಿ ಚಿಂತನೆಗಳನ್ನು ಮುಖ್ಯವಾಗಿ ಸಾಹಿತ್ಯ ಮೀಮಾಂಸೆಯ ನೆಲೆಗಳಲ್ಲಿ ಗಮನಿಸಲಾಗಿದೆ. ಇನ್ನೊಂದು ನೆಲೆಯ ಪರಿಚಯವಿದ್ದರೂ ಅದು ಗೌಣವಾಗಿದೆ.

ಇಲ್ಲಿ ಸೇರಿರುವ ಎಲ್ಲ ಚಿಂತಕರಲ್ಲೂ ಮೇಲಿಂದ ಮೇಲೆ ಚರ್ಚೆಗೆ ಒಳಗಾದ ಸಾಹಿತ್ಯ ಮೀಮಾಂಸೆಯ ಮೂಲಭೂತ ಪ್ರಶ್ನೆಗಳನ್ನು ಪರಿಚಯಿಸುವ ಒಂದು ಅಧ್ಯಾಯ ಈ ಗ್ರಂಥದಲ್ಲಿ ಇರಬೇಕಿತ್ತು. ಅದಕ್ಕೆ ಬೇಕಾಗುವ ಸಾಮಗ್ರಿ ಈಗಾಗಲೇ ಇಲ್ಲಿದೆ· ಅದರ ಸಮಗ್ರೀಕರಣವಷ್ಟೇ ಉಳಿದಿರುವ ಕೆಲಸ.

ಇಂಥ ಗ್ರಂಥಗಳು ಎದುರಿಸುವ ಇನ್ನೊಂದು ಸಮಸ್ಯೆ ಪಾರಿಭಾಷಿಕ ಪದಗಳದ್ದು ಲೇಖಕರು ಕನ್ನಡ ವಿಮರ್ಶೆಯಲ್ಲೂ ಹೆಸರಾದವರು. ಹಾಗಾಗಿ ಇಲ್ಲಿ ಆ ಸಮಸ್ಯೆಯನ್ನು ಬಿಡಿಸಿಕೊಳ್ಳುವುದು ಸುಲಭವಾಗಿದೆ. ಹಾಗಿದ್ದರೂ ಎಷ್ಟೋ ಕಡೆಗಳಲ್ಲಿ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯನ್ನು ಕುರಿತ, ಕನ್ನಡದ ಈ ಮೊದಲಿನ ಇತರ ಬರೆಹಗಳಲ್ಲಿ ಬಳಕೆಗೆ ಬಂದು ಪರಿಚಯವಾಗಿರುವ ಹಲವು ಪದಗಳನ್ನು ಇವರು ಬಳಸಿಲ್ಲ. ಉದಾಹರಣೆಗೆ, ಇಮ್ಯಾಜಿನೇಶನ್ ಎಂಬುದಕ್ಕೆ ಪ್ರತಿಭೆ ಎಂಬುದು ಬಳಕೆಯ ಪದ. ಇಲ್ಲಿ ಕಲ್ಪನಾಶಕ್ತಿ, ಕಲ್ಪನಾ ಸಾಮರ್ಥ್ಯ ಎಂಬ ಮಾತುಗಳನ್ನು ಬಳಸಲಾಗಿದೆ. ಹಾಗೆ ಸಂಪ್ರದಾಯ ಎಂಬ ಪದದ ಬಳಕೆಯೂ ಕೂಡ ಗೊಂದಲ ದಿಂದ ಕೂಡಿದೆ. ಈಗ ಪ್ರಚಲಿತವಿರುವಂತೆ ಕನ್ನಡ ವಿಮರ್ಶೆಯಲ್ಲಿ ಪರಂಪರೆ ಹಾಗೂ ಸಂಪ್ರದಾಯಗಳನ್ನು ಅರ್ಥವ್ಯತ್ಯಾಸದೊಡನೆ ಗುರುತಿಸಲಾಗಿದೆ. ಇಲ್ಲಿ ಸಂಪ್ರದಾಯವನ್ನು ಪರಂಪರೆ ಎಂಬ ನೆಲೆಯಲ್ಲಿ ಒಮ್ಮೆ ಕ್ಲಾಸಿಸಿಸಂ ಎಂಬ ಅರ್ಥ ದಲ್ಲಿ ಮತ್ತೊಮ್ಮೆ ಬಳಸಲಾಗಿದೆ. ಈ ಪದಗಳ ಬಳಕೆಯನ್ನು ನೋಡಿ : ಸಂಪ್ರ ದಾಯವಾದ, ನವ ಸಂಪ್ರದಾಯವಾದ, ನವ ಮಾರ್ಗಸಂಪ್ರದಾಯ ಯುಗ ಇತ್ಯಾದಿ.

ಟಾಲ್‌ಸ್ಟಾಯ್ (ಸಂ : ಹಾ ಮಾ ನಾಯಕ)

ಈ ಜಗದ್ವಿಖ್ಯಾತ ಸಾಹಿತಿಯ 150ನೇ ಜನ್ಮದಿನದಂದು ಮೈಸೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ

ಮಂಡಿಸಲಾದ ಲೇಖನಗಳ ಸಂಕಲನವಿದು. ಟಾಲ್‌ಸ್ಟಾಯ್ ಅವರ ಜೀವನ, ಅವರ ಸಾಹಿತ್ಯ ಸಾಧನೆ, ಅವರ ಸಾಮಾಜಿಕ, ರಾಜಕೀಯ ಕಲಾಮೀಮಾಂಸೆ ಮುಂತಾದ ವಲಯಗಳ ವಿಚಾರಗಳು ಇಲ್ಲಿ ಪರಿಶೀಲನೆಗೆ ಒಳಗಾಗಿವೆ. ಆಯಾ ಕ್ಷೇತ್ರಗಳಲ್ಲಿ ಪ್ರಸಿದ್ಧರು ಈ ಕೆಲಸವನ್ನು ಯುಕ್ತವಾಗಿ ನಿರ್ವಹಿಸಿದ್ದಾರೆ. ಕನ್ನಡದಲ್ಲಿ ಟಾಲ್‌ಸ್ಟಾಯ್ ಕೃತಿಗಳು ಎಂಬೊಂದು ಲೇಖನವೂ ಇಲ್ಲಿ ಸೇರಿದೆ. ಇದು ಕನ್ನಡಕ್ಕೆ ಅನುವಾದಗೊಂಡ ಟಾಲ್‌ಸ್ಟಾಯ್ ಅವರ ಕೃತಿಗಳ ಬಗೆಗೆ ಸಾಮಗ್ರಿಯನ್ನು ಸಂಗ್ರಹಿಸಿ (ಈ ಸಾಮಾಗ್ರಿಯೇ ಅನುಬಂಧವಾಗಿ ಪ್ರಕಟವಾಗಿದೆ) ವಿಶ್ಲೇಷಣೆಗೆ ಗುರಿಪಡಿಸುವ ಲೇಖನ. ಕನ್ನಡ ಸಾಹಿತ್ಯದ ಮೇಲೆ ಟಾಲ್‌ಸ್ಟಾಯ್ ಕೃತಿಗಳ ಪ್ರಭಾವವನ್ನು ಪರಿಶೀಲಿಸುವ ಒಂದು ಪ್ರತ್ಯೇಕ ಲೇಖನದ ಅವಶ್ಯಕತೆ ಮಾತ್ರ ಕೊರತೆಯಾಗಿ ಉಳಿದಿದೆ.

ಫ್ರಾನ್ಜ್ ಕಾಫ್ಕಾ (ಎಲ್. ಎಸ್. ಶೇಷಗಿರಿರಾವ್)

1983 ಕ್ಕೆ ನೂರು ತುಂಬಿದ ಲೇಖಕ ಫ್ರಾನ್ಜ್ ಕಾಫ್ಕಾನ ಜೀವನ, ಸಾಹಿತ್ಯವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಈ ಕೃತಿ ರಚನೆಯಾಗಿದೆ. ಹಾಗೂ ತನ್ನ ಗುರಿಯಲ್ಲಿ ಸಫಲವಾಗಿದೆ. ಪಾಶ್ಚಾತ್ಯ ಸಾಹಿತ್ಯ ಜಗತ್ತಿನ ಮೇಲೆ ಈ ಶತಮಾನದಲ್ಲಿ ಅಳಿಸಲಾಗದ ಪರಿಣಾಮವನ್ನು ಬೀರಿದ ಈ ಸಾಹಿತಿ ಕನ್ನಡಿಗರಿಗೆ ಈಗ ಕೆಲವು ಕತೆ ಹಾಗೂ ಒಂದು ಕಾದಂಬರಿಯ ಅನುವಾದ ಮೂಲಕ ಪರಿಚಿತನಾಗಿದ್ದಾನೆ.

ಈ ಚಿಕ್ಕ ಪುಸ್ತಕದಲ್ಲಿ ಅವನ ಕತೆ-ಕಾದಂಬರಿಗಳಿಗೆ ಹಿನ್ನೆಲೆಯಾಗಿದ್ದ ಅವನ ಜೀವನದ ವಿವರಗಳು, ಮನಸ್ಸಿನ ಸ್ವರೂಪ, ಸಾಂಸ್ಕೃತಿಕ ಸಂದರ್ಭ ಇತ್ಯಾದಿಗಳನ್ನು ಸೂಕ್ತವೆನಿಸುವಷ್ಟು ಪ್ರಮಾಣದಲ್ಲಿ ನಿರೂಪಿಸಲಾಗಿದೆ. ಕೃತಿ ಪರಿಚಯದ ಭಾಗದಲ್ಲಿ ಕಥಾಂಶವನ್ನು ಹೇಳುತ್ತಲೇ ಕಥನದ ಹಾಗೂ ಕೃತಿಯ ಮಹತ್ವವನ್ನು ಗುರುತಿಸುವ ಯತ್ನವನ್ನು ಮಾಡಲಾಗಿದೆ. ಕಾಫ್ಕಾ ಸೃಷ್ಟಿಸಿದ ಪ್ರಪಂಚದ ವೈಕಲ್ಯಗಳು, ವೈಶಿಷ್ಟ್ಯಗಳು ಓದುಗರ ಗಮನಕ್ಕೆ ಬರುವುದು ಮಾತ್ರವಲ್ಲದೆ ಅಂಥ ಲೋಕವನ್ನು ರೂಪಿಸಿದ ಈ ಕೃತಿಗಳ ಸಾಹಿತ್ಯಕ ಸಾಧನೆಗಳನ್ನು ಕೂಡ ಪರಿಚಯಿಸಲಾಗಿದೆ.

ದಾಸ್ತೊಯೆವಸ್ಕಿ (ವಿಮಲಾ ರಾಮರಾವ್)

ಕಳೆದ ಶತಮಾನದ ಈ ರಷಿಯನ್ ಲೇಖಕ, ಫೆಡರ್ ಮೈಖೆಲೋವಿಜ್ ದಾಸ್ತೊಯೆವಸ್ಕಿಯ ಜೀವನ ಹಾಗೂ ಕೃತಿಗಳ ಪರಿಚಯ ಈ ಕೃತಿಯ ಗುರಿ. ಇಲ್ಲಿ ವಿವರಗಳನ್ನು ಯುಕ್ತವಾಗಿ ಬಳಸಿಕೊಂಡು ಎಡರುಗಳಿಲ್ಲದ ನಿರೂಪಣೆಯಿಂದ ಅಧ್ಯಾಯಗಳನ್ನು ರೂಪಿಸಲಾಗಿದೆ. ಜೀವನ ವಿವರಗಳ ಜೊತೆಗೆ ಅವನ ನಾಲ್ಕು ಕಾದಂಬರಿಗಳ ಕಥಾವಸ್ತು, ಜೀವನ ದೃಷ್ಟಿಗಳ ಪರಿಚಯ ಮಾಡಿಕೊಡಲಾಗಿದೆ. ಅವನ ಜೀವನದ ಇನ್ನಿತರ ವಲಯಗಳು ಇಲ್ಲಿ ಹೆಚ್ಚು ಚರ್ಚೆಗೆ, ವಿವರಣೆಗೆ

ಒಳಗಾಗಿಲ್ಲ. ಅಲ್ಲದೆ ಅವರ ಸಾಹಿತ್ಯೇತರ ಬರೆಹಗಳಲ್ಲಿ ಕಂಡುಬರುವ ಚಿಂತನೆಗಳು ಇಲ್ಲಿ ಪರಿಚಯವಾಗುವುದಿಲ್ಲ.

ತೆಲುಗು ಭಾಷೆ ಮತ್ತು ಸಾಹಿತ್ಯ (ಆರ್. ವಿ. ಎಸ್. ಸುಂದರಂ)

ತೆಲುಗು ಭಾಷೆ ಮತ್ತು ಸಾಹಿತ್ಯಗಳಿಗೆ ಪ್ರವೇಶವನ್ನು ಒದಗಿಸುವ ಪುಸ್ತಕ. ಹೆಚ್ಚು ವಿವಾದಗಳಿಗೆ ಹೋಗದೆ ಬಹುಜನ ಸ್ವೀಕೃತವಾದ ನಿಲುವುಗಳನ್ನು ಬಳಸಿ ಕೃತಿ ರಚನೆ ಮಾಡಲಾಗಿದೆ. ಹೀಗೆ ಪರಿಚಯ ನೀಡುವ ಕೃತಿಗೆ ಅನುವಾಗಿರುವ ಶೈಲಿ ಕೂಡ ಲೇಖಕರಿಗೆ ಲಭ್ಯವಾಗಿದೆ. ಕೃತಿಗಳ ಮೌಲ್ಯಮಾಪನದ ಮಾತುಗಳನ್ನಾಡುವ ಸವಾಲುಗಳು ಎದುರಾದಾಗ ಅಲ್ಲಿ ಹಿಂಜರಿಯದೆ ತಮ್ಮ ನಿಲುವನ್ನು ಮಂಡಿಸುತ್ತಾರೆ. ತೆಲುಗು ಸಾಹಿತ್ಯದ ಸಾಧನೆ ಹಾಗೂ ವೈಶಿಷ್ಟ್ಯಗಳನ್ನು ಒಟ್ಟಾರೆ ಪರಿಚಯಿಸುವ ಒಂದು ಅಧ್ಯಾಯ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಜೀವನ ಚರಿತ್ರೆಗಳು–ಆತ್ಮಕಥೆಗಳು

ಕೃಷ್ಣ ಪರಮೇಶ್ವರ ಭಟ್ಟ

ಸಮಾಜ ತಂದೊಡ್ಡುವ ಅನುಭವಗಳ ಹಿನ್ನೆಲೆಯಲ್ಲಿ ವ್ಯಕ್ತಿ ನಡೆಸುವ ಚಿಂತನೆಯ ಧಾಟಿ ಹಾಗೂ ಈ ಚಿಂತನೆಗಳು ಕ್ರಿಯೆಯಾಗಿ ಮೈತಳೆಯುವ ರೂಪ–ರೇಗೆ ವ್ಯಕ್ತಿತ್ವ ನಿರ್ಮಾಣಗೊಳ್ಳುವ ಪ್ರಕ್ರಿಯೆಯನ್ನು ಜೀವನಚರಿತ್ರೆ, ಆತ್ಮಕಥೆಗಳು ತಿಳಿಸಿಕೊಡುತ್ತವೆ ಅಥವಾ ತಿಳಿಸಿಕೊಡುವುದು ತೀರ ಅಪೇಕ್ಷಣೀಯ. ಇಂತಹ ಸಂದರ್ಭಗಳಲ್ಲಿ ಚಿತ್ರಿತನಾದ ವ್ಯಕ್ತಿಯು ಕಾಲದ ಘಟನೆಗಳ ಸ್ವರೂಪದೊಟ್ಟಿಗೆ ಸಾಮಾಜಿಕ ಅನುಭವಗಳ ಪರಿಚಯವೂ, ವ್ಯಕ್ತಿ ಆತ್ಮಕಥೆ ಹೇಳುವಲ್ಲಿ ಆಯಾ ಅನುಭವಗಳಿಗೆ ಅದೇ ಕಾಲದಲ್ಲಿ ಹೇಗೆ ಪ್ರತಿಸ್ಪಂದಿಸಿದ ಎಂಬುದನ್ನು ತಿಳಿಸಿಕೊಡುವ ಪ್ರಾಮಾಣಿಕತೆಯೂ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ನಮ್ಮ ಪರಿಸರದಲ್ಲಿ ಒಡಮೂಡುವ ಬಹುತೇಕ ಕೃತಿಗಳಿಗೆ ಈ ಸಂಗತಿಗಳು ದೂರದ ಆದರ್ಶವೆಂದೇ ತೋರುತ್ತವೆ. ಘಟನಾವಳಿಗಳ ಪಟ್ಟಿಯನ್ನೇ ಪ್ರಧಾನವಾಗಿಟ್ಟುಕೊಂಡು ಬರೆಯಲು ಹೊರಟ ವ್ಯಕ್ತಿಚಿತ್ರಗಳು ಹಲವಾದರೆ ಭಾಷೆ, ಘಟನೆಗಳ ವಿವರಣೆಗೆ ಒತ್ತುಕೊಟ್ಟು ವ್ಯಕ್ತಿಯನ್ನು ವೈಭವೀಕರಿಸಿ, ಸಮಕಾಲೀನ ಸಮಾಜದ ಅಸ್ತಿತ್ವವನ್ನು ಕಡೆಗಣಿಸಿ ವ್ಯಕ್ತಿಯನ್ನು ಅದರಿಂದ ಪ್ರತ್ಯೇಕಿಸಿ ತೋರಿಸುವುದೇ ಹೆಚ್ಚಿನದು ಎಂದು ಭ್ರಮಿಸಿದ್ದರಿಂದಾಗಿ ಮೂಡಿದ ವ್ಯಕ್ತಿಚಿತ್ರಗಳೂ ಹಲವಿವೆ. ಈ ಮಧ್ಯೆ ಸ್ವತಂತ್ರ ಕೃತಿಯಾಗಿ ಬರದೇ ಪತ್ರಿಕೆಯ ಅಂಕಣಗಳಲ್ಲಿ ಬೆಳಕುಕಂಡು ಅನಂತರ ಸಂಕಲಿತವಾಗಿರುವ, ಸಹಜವಾಗಿಯೇ ಮಿತಿಯುಳ್ಳ ವ್ಯಕ್ತಿಚಿತ್ರಗಳೂ ಕೆಲವಿವೆ. ಈ ವರ್ಷ ಪ್ರಕಟವಾದ ಕೃತಿಗಳು ಮೇಲಿನ ಮಾತುಗಳಿಗೆ ಅಪವಾದವಾಗಿಲ್ಲ. ವ್ಯಕ್ತಿಯನ್ನು ಉದಾತ್ತೀಕರಿಸಿ ನೋಡುವ ಈ ಪ್ರವೃತ್ತಿಗೆ ನಮ್ಮ ದೇಶದ ಧಾರ್ಮಿಕ–ರಾಜಕೀಯ ಪರಂಪರೆಗಳ ಹಿನ್ನೆಲೆಯೂ ಅಂಶಿಕವಾಗಿ ಕಾರಣವಾಗಿರಬಹುದೇ ಎಂದು ಅನುಮಾನಿಸುವಂತಾಗುತ್ತದೆ.

ಗದಗದಲ್ಲಿರುವ ವೀರಶೈವ ಅಧ್ಯಯನ ಸಂಸ್ಥೆಯಿಂದ ಈ ವರ್ಷ ನಾಲ್ಕು ಪ್ರಕಟಣೆಗಳು ಹೊರಬಂದಿವೆ. ಗಿರಿರಾಜ ಹೊಸಮನಿಯವರ 'ಸಜ್ಜಲಗುಡ್ಡದ ಶರಣಮ್ಮನವರು', ವಿ.ಸಿ. ಮಾಲಗತ್ತಿ ಅವರ 'ಜಿ.ಎಸ್.ದಂಡಾವತಿಮಠ' ಮಾಗಿ ಅವರ 'ನಾಗರಾಳ ದೊಡ್ಡಪ್ಪನವರು' ಹಾಗೂ ಪಾಟೀಲ ಪುಟ್ಟಪ್ಪನವರ 'ಸರ್ ಸಾಹೇಬರು' ಇವೇ ಆ ನಾಲ್ಕು. ಈ ಹಿಂದೆಯೇ ಈ ಮಾಲಿಕೆಯಲ್ಲಿ ಬಂದ ಕೃತಿಗಳಂತೆಯೆ ಒಂದು ನಿರ್ದಿಷ್ಟ ಮಾದರಿಯಲ್ಲಿ ರಚಿತವಾದವುಗಳು. ಕುರುಬರಲ್ಲಿ ಹುಟ್ಟಿ ಶೈವದೀಕ್ಷೆ

ಪಡೆದು, ಪವಾಡಮೆರೆದು ಸಜ್ಜಲಗುಡ್ಡದಲ್ಲಿ ಮಠ, ಹೈಸ್ಕೂಲು, ಪ್ರಸಾದನಿಲಯಗಳನ್ನು ಸ್ಥಾಪಿಸಿ ದಿವಂಗತರಾದ ಶರಣಮ್ಮನವರ ಕಥೆ ಮೊದಲ ಕೃತಿಯ ವಸ್ತು (ಓದುವಾಗ ಈ ಲೌಕಿಕವಿದ್ಯೆ ನಿಷ್ಪ್ರಯೋಜಕವೆಂದು ತಿಳಿದವರು ಆ ನಂತರದಲ್ಲಿ ಹೈಸ್ಕೂಲುಗಳನ್ನು ಸ್ಥಾಪಿಸಿದುದಕ್ಕೆ ಹಿನ್ನೆಲೆಯಾದ ಚಿಂತನೆಗಳೇನೂ ಕೃತಿಯಲ್ಲಿಲ್ಲ.) ಪ್ರಸಿದ್ಧ ಕಲಾವಿದರಾಗಿ ಬಾಳಿ ಪ್ರಶಸ್ತಿಗಳನ್ನು ಪಡೆದ ದಂಡಾವತಿಮಠ ಅವರ ಜೀವನದ ವಿವರಗಳು ಎರಡನೆಯದರ ವಸ್ತು. ಹೈಸ್ಕೂಲು, ಗಿರಣಿ, ರೈತಸಂಘಗಳಿಗೆ ಜನ್ಮವಿತ್ತ, ಕಾಶೀರಾಜನ ಮಗಳನ್ನು ಮದುವೆಯಾದ ದೊಡ್ಡಪ್ಪನವರ ಜೀವನದ ಘಟನೆಗಳು ಮೂರನೆಯದರ ವಸ್ತು, ಗಾಂಧೀತತ್ವವನ್ನು ಕೆಲಮಟ್ಟಿಗೆ ವಿರೋಧಿಸಿ ಅಂಬೇಡ್ಕರ್ ವಿಚಾರಧಾರೆಯನ್ನು ಒಪ್ಪಿದ, ಆಧುನಿಕ ವೀರಶೈವ ಸಮಾಜದ ಏಳ್ಗೆಗಾಗಿ ಶ್ರಮಿಸಿದ ಕಂಬಳಿ ಸಿದ್ದಪ್ಪನವರ ಜೀವನವನ್ನು 'ಸರ್ ಸಾಹೇಬರು' ಕೃತಿಯಲ್ಲಿ ಚಿತ್ರಿಸಲಾಗಿದೆ. "ಚಪ್ಪರದ ಮನೆಯಿಂದ ಬಕಿಂಗ್‌ಹ್ಯಾಮ್ ಅರಮನೆಯವರೆಗೆ ತಮ್ಮ ಖ್ಯಾತಿಯನ್ನು ಹಬ್ಬಿಸಿಕೊಂಡಿದ್ದ ಕಂಬಳಿಯವರ ಬಗೆಗೆ ನನ್ನಲ್ಲಿ ಪ್ರಶಂಸೆಯಲ್ಲದೆ ಬೇರೆ ಇನ್ನೇನೂ ಇಲ್ಲ." ಎಂಬ ಪುಟ್ಟಪ್ಪನವರ ಹೇಳಿಕೆಯ ಧಾಟಿಯೇ ಉಳಿದ ಮೂರು ಕೃತಿಗಳ ಹಿಂದೆ ಇದೆ.

ಹರಿಹರಪ್ರಿಯ ಅವರ 'ಕನ್ನಡದ ಹೇಮಾಹೇಮಿಗಳು' ಎಂಬುದು ಕನ್ನಡದ ಕೆಲವು ಪ್ರಸಿದ್ಧ ವ್ಯಕ್ತಿಗಳನ್ನು–ಕವಿ, ಗಮಕಿ, ಕಲೆಗಾರರನ್ನು ಕುರಿತು ಕೆಲವು ಪತ್ರಿಕೆಗಳಿಗೆ ಬರೆದ ಅಂಕಣದ ಚುಟುಕುಗಳ ಸಂಕಲನ. ಲೇಖಕರು ಆಯಾ ವ್ಯಕ್ತಿಗಳನ್ನು ಕುರಿತು ಓದಿದ ಪ್ರತ್ಯಕ್ಷ ಭೇಟಿಯ ಅನುಭವವನ್ನು ಪತ್ರಿಕೆಯ ಬರೆಹಗಳಿಗೆ ಅನುಗುಣವಾಗಿ ಪ್ರಶಂಸಾತ್ಮಕ ಶೈಲಿಯಲ್ಲಿ ಅಡಕಿಸಿದ್ದಾರೆ. ಬರವಣಿಗೆ ಆಕರ್ಷಕವಾಗಿದೆ. ಎನ್.ಎಸ್.ಗವಗಕರ ಅವರ 'ಪ್ರತಿಭಾನ್ವಿತ ಕನ್ನಡಿಗರು' ಎಂಬುದೂ ಇದೇ ಜಾತಿಗೆ ಸೇರಿದ ಕೃತಿ. ಕವಿ, ಸಾಹಿತಿ, ಪತ್ರಕರ್ತ, ನಾಟಕಕಾರರಾಗಿ (ಬೇಂದ್ರೆ, ಕುವೆಂಪು, ಕಾರಂತ, ಪಾಟೀಲ ಪುಟ್ಟಪ್ಪ, ಗರುಡ ಸದಾಶಿವ) ಖ್ಯಾತನಾಮರಾದ ಹಾಗೂ ಲೇಖಕರ ಮೇಲೆ ಅವರ ಪ್ರಭಾವಗಳನ್ನು ಕುರಿತ ಚುಟುಕು ಬರೆಹಗಳ ಸಂಕಲನವಿದು ತೀರ ಸ್ಥೂಲವಾದ ಮಾಹಿತಿಯುಳ್ಳ ಲಘುಬರವಣಿಗೆ ಇಲ್ಲಿಯದು. ವರ್ಣಿಸಲಾದ ವ್ಯಕ್ತಿಗಳ ಆಯ್ಕೆಗೆ ಸೂತ್ರವೇನೆಂಬುದು ತಿಳಿಯದು. ಪ್ರಭಾವ ಪರಿಚಯಗಳೇ ಈ ಆಯ್ಕೆಗೆ ಕಾರಣವಾದಂತಿವೆ.

ಶಾಂತಾದೇವಿ ಮಾಳವಾಡ ಅವರ 'ಭಾರತದ ಮಾನಸಪುತ್ರಿಯರು' ಎಂಬುದು ಐವರು ಮಹಿಳೆಯರ ಜೀವನಚಿತ್ರಣವನ್ನೊಳಗೊಂಡ ಕೃತಿ. ಸ್ವಾತಂತ್ರ್ಯಪೂರ್ವದಲ್ಲಿ ಭಾರತಕ್ಕೆ ಬಂದು ಸೇವೆ ಸಲ್ಲಿಸಿದ ಇನ್ನೂ ಸಲ್ಲಿಸುತ್ತಿರುವ ಐವರು ಪಾಶ್ಚಾತ್ಯ ಮಹಿಳೆಯರ ತ್ಯಾಗಮಯ ಜೀವನವನ್ನು ಇಲ್ಲಿ ಚಿತ್ರಿಸಲಾಗಿದೆ. ಬ್ರಹ್ಮವಿದ್ಯೆಯ ಪ್ರಚಾರಕ್ಕಾಗಿ ಬಂದ, ಭಾರತದ ಸ್ವಾತಂತ್ರ್ಯಸಂಗ್ರಾಮಕ್ಕಾಗಿ ಹೋರಾಡಿದ ಆನಿಬೆಸೆಂಟ್ ಇವರಲ್ಲಿ ಒಬ್ಬರು. ವಿವೇಕಾನಂದರ ಕರೆಗೆ ಓಗೊಟ್ಟು ಬಂದ

ಐರ್ಲ್ಯಾಂಡಿನ ಸೋದರಿ ನಿವೇದಿತಾ, ಫ್ರಾನ್ಸ್‌ದೇಶ ಸಂಜಾತೆಯಾದ ಅರವಿಂದಾಶ್ರಮದ 'ಮಾತೆ' ಮೀರಾ, ಗಾಂಧೀಜಿಯಿಂದ ಪ್ರಭಾವಿತರಾಗಿ ಭಾರತಕ್ಕೆ ಬಂದು ಅವರ ದಾರಿಯಲ್ಲಿ ಮುನ್ನಡೆದ ಇಂಗ್ಲೆಂಡಿನ ಮೀರಾಬೆನ್ ಹಾಗೂ ಯುಗೋಸ್ಲಾವಿಯಾ ದಿಂದ ಬಂದು ಸಮಾಜಸೇವೆಯಲ್ಲಿ ನಿರತರಾಗಿರುವ (ನೋಬೆಲ್ ವಿಜೇತೆ) ಮದರ್ ಥೆರೇಸಾ ಇವರು ಇತರ ನಾಲ್ವರು, ತಮಗಿದ್ದ ಸುಖಜೀವನವನ್ನು ತ್ಯಜಿಸಿ ಭಾರತ ದಲ್ಲಿಯ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ದುಡಿದ ಈ ಮಹಿಳೆಯರ ಜೀವನವನ್ನು ಮುಕ್ತ ಮನಸ್ಸಿನಿಂದ ಸರಳವಾದ ಭಾಷೆಯಲ್ಲಿ ವಿವರಿಸಲಾಗಿದೆ. ಅನಂತಕುಲಕರ್ಣಿಯವರ 'ವಿಠ್ಠಲಭಾಯಿ ಪಟೇಲ್' ಎಂಬುದು ಸರದಾರ್ ವಲ್ಲಭಾಯಿ ಯವರ ಹಿರಿಯ ಸಹೋದರ ವಿಠ್ಠಲಭಾಯಿ ಯವರ ಚರಿತ್ರೆಯನ್ನು-ವಿಶೇಷವಾಗಿ ಸ್ವಾತಂತ್ರ್ಯಸಂಗ್ರಾಮ ಕಾಲದಲ್ಲಿ ಅವರ ಪಾತ್ರವನ್ನು-ವರ್ಣಿಸುವ ಕೃತಿ. ಆಡಳಿತದಲ್ಲಿ ವಿಭಿನ್ನ ಹಂತದ ಸ್ಥಾನಮಾನಗಳನ್ನು ಪಡೆದ ಅವರು ಅನೇಕ ವಿಷಯಗಳಲ್ಲಿ ಗಾಂಧೀಜಿ ಗಿಂತ ಭಿನ್ನವಾದ ಧೋರಣೆ ತಳೆದು ಉಗ್ರಗಾಮಿ ನಿಲುವಿಗೆ ಸೇರಿದವರು. ರಾಜಕೀಯ ದಲ್ಲಿ ಗೋಪಾಲನ್ ನಾಯರ್ ಅವರದು ಒಂದು ರೀತಿಯ ಬೆಳವಣಿಗೆಯಾದರೆ ಇವರದು ಮತ್ತೊಂದು ವಿಧದ ಬೆಳವಣಿಗೆ. ಭಾಯಿಯವರ ಜೀವನದ ಘಟನೆಗಳನ್ನು ಈ ಕೃತಿ ಪರಿಚಯಿಸುತ್ತದೆ. ಹೆಚ್. ಸಿ. ವಿಷ್ಣುಮೂರ್ತಿಯವರ ಗೋಪಾಲಗೌಡ ಶಾಂತವೇರಿ ಯಲ್ಲಿ ಲೇಖಕರ ಹಾಗೂ ಗೌಡರ ಒಡನಾಟ ಹಾಗೂ ಇದರಿಂದಾದ ಲೇಖಕರ ವೈಯಕ್ತಿಕ ಅನುಭವಗಳನ್ನು ಪ್ರಧಾನವಾಗಿ ಆಧರಿಸಿ ಬರೆದ ಗೋಪಾಲ ಗೌಡರನ್ನು ಕುರಿತ ಸಂಕ್ಷೇಪರೂಪದ ಚರಿತ್ರೆ ಇದೆ. ಈ ಹಿಂದೆ ಬಂದ, ಗೌಡರನ್ನು ಕುರಿತ ವಿವರಗಳು ಸಂಪೂರ್ಣವಾಗಿ ಸತ್ಯವಾದವುಗಳಲ್ಲವೆಂಬ ಧೋರಣೆಯೊಂದಿಗೆ ಹುಟ್ಟಿಕೊಂಡ ಪ್ರತಿಕ್ರಿಯಾತ್ಮಕ ಕೃತಿಯಾಗಿ ಇದು ಹೊರಬಂದಿದೆ. ಗೌಡರ ಜೀವನದಲ್ಲಿ ಹಾಸುಹೊಕ್ಕಾಗಿದ್ದ ಅನೇಕ ಎಳೆಗಳನ್ನು ಬಿಡಿಸಿ ತೋರಿಸಲು ಈ ಪುಟ್ಟ ಕೃತಿ ಪ್ರಯತ್ನಿಸಿದೆ. ಲೇಖಕರೇ ಹೇಳಿದಂತೆ, ಇಲ್ಲಿಯ ಘಟನೆ-ವಿವರಗಳನ್ನು ದಿನಾಂಕ-ವರ್ಷಗಳಾಗಿ ವ್ಯವಸ್ಥಿತವಾಗಿ ಜೋಡಿಸಿಕೊಳ್ಳದೆ ಒಟ್ಟಾರೆಯಾಗಿ ನೆನಪಿನ ಶಕ್ತಿಯನ್ನಾಧರಿಸಿ ಹೇಳಲಾಗಿದೆ. ಇದರಿಂದಾಗಿ ನಿರೂಪಣೆಯಲ್ಲಿ ಕೆಲವೊಮ್ಮೆ ಏರು-ಪೇರಾಗಿದೆ. ಅಲ್ಲಲ್ಲಿ ಇತರರನ್ನು ಕುರಿತ ವೈಯಕ್ತಿಕ ಪ್ರತಿಕ್ರಿಯೆಗಳಿಗೂ ಇಲ್ಲಿ ಅವಕಾಶವುಂಟಾಗಿದೆ.

ಅರಳುಮಲ್ಲಿಗೆ ಪಾರ್ಥಸಾರಥಿಯವರಿಂದ 'ಕಲಾತಪಸ್ವಿ' ಹಾಗೂ 'ಶ್ರೀಪಾದ ರಾಜರು', ಎಂಬ ಎರಡು ಕೃತಿಗಳು ರಚಿತವಾಗಿವೆ. ಇವುಗಳಲ್ಲಿ ಮೊದಲನೆಯದರಲ್ಲಿ ಬೆಂಗಳೂರಿನಲ್ಲಿ 'ಪ್ರಭಾತ್ ಕಲಾವಿದರ ಸಂಸ್ಥೆ' ಎಂಬ ಸಂಗೀತ-ನೃತ್ಯ-ನಾಟಕ ಸಂಸ್ಥೆಯನ್ನು ಹುಟ್ಟುಹಾಕಿ ದೇಶವಿದೇಶಗಳಲ್ಲಿ ಪ್ರದರ್ಶನ ನೀಡಿ ಪ್ರಸಿದ್ಧವಾಗು ವಂತೆ ಬೆಳೆಸಿದ ಶ್ರೀ ಟಿ. ವಿ. ಗೋಪಿನಾಥದಾಸರ ಜೀವನದ ಪೂರ್ವಾಪರಗಳನ್ನೂ ಅವರ ಕಲಾಭಿಜ್ಞತೆ, ಹೃದಯವಂತಿಕೆ ಮುಂತಾದ ಗುಣಗಳನ್ನೂ ಅವರಿಗೆ ಸಂದಿರುವ ಗೌರವಗಳನ್ನೂ ವಿವರವಾಗಿ ವರ್ಣಿಸಿದೆ. ಎರಡನೆಯದರಲ್ಲಿ ಮುಳ

ಬಾಗಿಲಿನಲ್ಲಿ ಐದು ಶತಕಗಳ ಹಿಂದೆ ಮಠಾಧೀಶರಾಗಿ ಮೆರೆದ ದ್ವೈತತತ್ವ ಪ್ರತಿಪಾದಕರಾದ ಶ್ರೀಪಾದರಾಜರನ್ನು ಕುರಿತ ಪೂರ್ವೋತ್ತರಗಳ ವರ್ಣನೆಯಿದೆ. ಎರಡೂ ಕೃತಿಗಳಲ್ಲೂ ಎದ್ದು ತೋರುವ ಸಮಾನಗುಣವೆಂದರೆ, ಸಂಸ್ಕೃತಭೂಯಿಷ್ಠವಾದ ಶೈಲಿ, ರಂಜಕವಾದ ಬರವಣಿಗೆ, ವ್ಯಕ್ತಿ-ಸನ್ನಿವೇಶಗಳ ವೈಭವೀಕರಣ, ದಾಸರ ಮನೆತನದ ಹಿನ್ನೆಲೆಯನ್ನು ಚಿತ್ರಿಸುವ, 'ಕಲಾತಪಸ್ವಿ'ಯಲ್ಲಿಯ ಮೊದಲ ನಾಲ್ಕಾರು ಪುಟಗಳೇ ಈ ಮಾತಿಗೆ ಉತ್ತಮ ನಿದರ್ಶನ. ಶ್ರೀಪಾದರಾಜರ ಜೀವನದಲ್ಲಿ ನಡೆದಿವೆಯೆಂದು ಹೇಳಲಾದ ಪವಾಡಗಳನ್ನೂ ಲೇಖಕರು ಆಸಕ್ತಿಯಿಂದ ವರ್ಣಿಸಿದ್ದಾರೆ. (ಆದರೆ ಇಲ್ಲಿಯ ಕೆಲವು ಪವಾಡಗಳು ಇತರ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದಂತೆಯೂ ಜನರಲ್ಲಿ ಪ್ರಚಲಿತವಾಗಿವೆ ಎಂಬುದನ್ನು ಮರೆಯುವಂತಿಲ್ಲ.)

ಸರೋಜಮೋಹನ್ ಮಿತ್ರ ಅವರ ಬಂಗಾಲೀ ಮೂಲದ 'ಮಾಣಿಕ ಬಂದ್ಯೋಪಾಧ್ಯಾಯ' ಎಂಬ ಕೃತಿ ಸಾಹಿತ್ಯ ಅಕಾಡೆಮಿಯ ಪ್ರಕಟಣೆಯಾಗಿ ಕನ್ನಡಕ್ಕೆ ಇಳಿದಿದೆ. (ಅನು : ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ) ತಮ್ಮ ವೈಜ್ಞಾನಿಕ ದೃಷ್ಟಿ ಹಾಗೂ ವಾಸ್ತವ ಪ್ರಜ್ಞೆಗಳಿಂದಾಗಿ ಮಾಣಿಕರು ಬಂಗಾಲೀ ಸಾಹಿತ್ಯದಲ್ಲಿ ಪ್ರಸಿದ್ಧರು. ಸಮತಾವಾದಕ್ಕೆ ಹೊರಳಿದ ಮಾಣಿಕರು ತಮ್ಮ ನಾಡಿನ ಸಾಹಿತ್ಯದಲ್ಲಿ ಹೊಸ ಹಾದಿ ತೆರೆದವರು. ಅಲ್ಲಿ ಆಧುನಿಕ ಯುಗ ಪ್ರಾರಂಭವಾಗುವುದು ಅವರಿಂದಲೇ. ಈ ಸಾಹಿತಿಯ ಜೀವನ ಕಥೆಯನ್ನು ಅಂದಿನ ಸಾಮಾಜಿಕ-ರಾಜಕೀಯ ಹಿನ್ನೆಲೆಯೊಂದಿಗೆ ಇಲ್ಲಿ ಕಟ್ಟಿಕೊಡಲಾಗಿದೆ. ಮಾಣಿಕರ ಕೃತಿಗಳ ಸಂಕ್ಷೇಪವಾದ ವಿಮರ್ಶೆಯೂ ಇಲ್ಲಿದೆ. ಇದು ಮಾಣಿಕರನ್ನು ಕುರಿತ ಒಂದು ಉತ್ತಮ ಪ್ರವೇಶಿಕೆ. ಕನ್ನಡಾನುವಾದ ಹೃದ್ಯವಾಗಿದೆ.

ಈ ವರ್ಷದ ಇತರ ಕೃತಿಗಳಿಗೆ ಹೋಲಿಸಿದಲ್ಲಿ ಪ್ರಭುಶಂಕರ ಅವರ 'ಬೆರಗು' ಹಾಗೂ ದೇ. ಜವರೇಗೌಡ ಅವರ 'ಅಮೇರಿಕಾ ಗಾಂಧಿ' ಎಂಬ ಕೃತಿಗಳು ತುಸು ಭಿನ್ನವಾದವುಗಳು ಹಾಗೂ ಉತ್ತಮವಾದ ಕೃತಿಗಳು ಕೂಡ. ಬೆರಗು ಬಸವಣ್ಣನವರನ್ನು ಕುರಿತ ಜೀವನ ವಿಮರ್ಶೆಯ ಕೃತಿ. ಬಸವಣ್ಣ ಹಾಗೂ ಇತರರ ವಚನಗಳನ್ನು ಮುಖ್ಯವಾಗಿ ಆಧರಿಸಿ, ಕೆಲವು ಮಟ್ಟಿಗೆ ತಮ್ಮ ಕಲ್ಪನೆ-ಚಿಂತನೆಗಳನ್ನೂ ಜತೆಗೂಡಿಸಿ ಬಸವಣ್ಣನ ಜೀವನದಲ್ಲಿ ಇದಿರಾದ ಅನೇಕ ಪಾತ್ರಗಳ ಮೂಲಕ ಬಸವಣ್ಣನ ದರ್ಶನವನ್ನು ಹೊಸ ರೀತಿಯಲ್ಲಿ ಪರಿಣಾಮಕರವಾದ ರೀತಿಯಲ್ಲಿ ಮಾಡಿಸಿದ್ದಾರೆ. (ಇಲ್ಲಿಯ ಚೆನ್ನಪ್ಪ ಹಾಗೂ ಬೈರಾಗಿಯರ ಮುಖದಿಂದ ಬರುವ ಅಭಿಪ್ರಾಯಗಳು ಲೇಖಕರವು). ಬಸವಣ್ಣನ ವ್ಯಕ್ತಿತ್ವದ ಬೇರೆ ಬೇರೆ ಮುಖಗಳು – ಭಕ್ತ, ಸಮಾಜ ಸುಧಾರಕ, ರಾಜಕಾರಣಿ, ಗೃಹಸ್ಥ–ಇವು ಘನವಾಗಿ ತೋರಿದರೂ ಅವುಗಳಲ್ಲಿ ಪರಸ್ಪರ ಸಾಂಗತ್ಯವಿಲ್ಲದೇ ಇರುವುದು ದೊಡ್ಡ ಕೊರತೆಯಾಗಿ ತೋರುತ್ತದೆ. ಈ ಕೃತಿಯೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ. ತನ್ನ ವಿಶಿಷ್ಟ ಶೈಲಿಯಿಂದಾಗಿ ಇದು ಸಲೀಸಾಗಿ ಓದಿಸಿಕೊಂಡು ಹೋಗುವ ಒಂದು ಅಪರೂಪದ ಕೃತಿ.

ಗಾಂಧೀತತ್ವವನ್ನು ಅನುಸರಿಸಿ ಅಮೆರಿಕೆಯ ಕಪ್ಪುವರ್ಣೀಯರಿಗೆ ಸಮಾಜದಲ್ಲಿ, ರಾಜಕೀಯದಲ್ಲಿ ಸ್ಥಾನಮಾನಗಳನ್ನು ದೊರಕಿಸಿಕೊಡಲು ಪ್ರಯತ್ನಿಸಿದ, ಗಾಂಧಿಯಂತೆಯೇ ಗುಂಡೇಟಿಗೆ ತುತ್ತಾಗಿ ಹುತಾತ್ಮನಾದ ಮಾರ್ಟಿನ್ ಲೂಥರ್ ಕಿಂಗ್ ಅವರ ಜೀವನ ಚರಿತ್ರೆಯೇ ಅಮೇರಿಕಾ ಗಾಂಧಿಯಾಗಿ ಹೊರಬಂದಿದೆ. ಲೂಥರ್‌ನ ಹಿನ್ನೆಲೆ, ಹಂತಹಂತವಾಗಿ ತನ್ನ ನಿಷ್ಠೆ-ಪ್ರಾಮಾಣಿಕತೆಗಳಿಂದಾಗಿ ಯಶಸ್ಸಿನ ಮೆಟ್ಟಿಲನ್ನೇರುತ್ತಾ ಕಪ್ಪುಜನಾಂಗದ ನಾಯಕನಾಗಿ ಹೋರಾಡಿದ ಕತೆಯನ್ನು ಸರಳವಾಗಿ ಆದರೆ ಹೃದಯಸ್ಪರ್ಶಿಯಾಗಿ ಹೇಳಲಾಗಿದೆ. ಕೃತಿಯ ಪ್ರಾರಂಭದ ಅಧ್ಯಾಯದಲ್ಲಿ ಜೀವನಚರಿತ್ರೆಯ ಬಗೆಗಿನ ಪರಿಚಯ, ಅದರ ಇತಿಹಾಸ, ಅದಕ್ಕೂ ಇತಿಹಾಸಕ್ಕೂ, ಉಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ಸಂಬಂಧ ಮೊದಲಾದವುಗಳ ವಿವರಣೆಯಿದ್ದು ಇದು ಕೃತಿಯ ಆಕಾರಕ್ಕೆ ಪರಕೀಯವಾಗಿದೆ ಹಾಗೂ ಪಠ್ಯಪುಸ್ತಕದ ಮಾದರಿಗೆ ಹೊಂದಿಸುವ ಪ್ರಯತ್ನವಾಗಿ ತೋರುತ್ತದೆ.

'ಕಲಾಸಾಧಕ' ಜೀ. ಶಂ. ಪರಮಶಿವಯ್ಯ

ಅವರ ಕೃತಿ. ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು, ಕರ್ನಾಟಕದ ಹೆಸರಾಂತ ಕಲಾವಿದರು. ಅವರು ಕರ್ನಾಟಕದ ಹಲವಾರು ಸಾಂಸ್ಕೃತಿಕ ಮಹತ್ವ ಉಳ್ಳ ಸ್ಥಳಗಳನ್ನು ತಮ್ಮ ಕುಂಚದಿಂದ ಸೆರೆಗೈದು ನಿಲ್ಲಿಸಿದ ಚಿತ್ರಕಲಾವಿದರು ; ಅನೇಕ ಹಿರಿಯ-ಕಿರಿಯ ಕಲಾವಿದರನ್ನು ತಮ್ಮ ಸಾಹಿತ್ಯಕ ದಾಖಲೆಗಳ ಮೂಲಕ ಪರಿಚಯಮಾಡಿಕೊಟ್ಟವರು ; ಎಷ್ಟೋ ಕಲಾಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ ಕಲಾಕೃತಿಗಳ ಕಡೆಗೆ ಜನರ ಗಮನವನ್ನು ಸೆಳೆದವರು ; ಮೈಸೂರಿನ ಜನಪದ ಅಕಾಡೆಮಿಯೊಡನೆ ತಮ್ಮನ್ನು ಸಂಬಂಧಿಸಿಕೊಂಡು ಅಪೂರ್ವವಾದ ವಸ್ತುಗಳನ್ನು ಸಂಗ್ರಹಿಸಿ ತಂದುದಲ್ಲದೆ, ಜಾನಪದ ಸಂಸ್ಕೃತಿಗೆ ಸಂಬಂಧಪಟ್ಟ ವಸ್ತುಗಳನ್ನು ರಚಿಸಿದವರು. ಇಂಥ "ಸ್ವತಂತ್ರ ಪ್ರವೃತ್ತಿಯ, ಸಾಹಸ ಮನೋಭಾವದ, ಸೇವಾ ದೃಷ್ಟಿಯ ಈ ಚತುರ ಕಲಾವಿದ" ತಿಪ್ಪೇಸ್ವಾಮಿಯವರನ್ನು ಕುರಿತು, ಡಾ. ಜೀ. ಶಂ. ಪರಮಶಿವಯ್ಯನವರು ಬರೆದಿರುವ 'ಕಲಾಸಾಧಕ' ಎಂಬ ಕೇವಲ ಐವತ್ತು ಪುಟಗಳ ಈ ಕೃತಿ ಅತ್ಯಂತ ಸ್ವಾರಸ್ಯವಾಗಿ ಶ್ರೀ ತಿಪ್ಪೇಸ್ವಾಮಿಯವರ ವ್ಯಕ್ತಿಚಿತ್ರವನ್ನು ಸುಸಮರ್ಥವಾಗಿ ಬಿಡಿಸಿ ತೋರಿಸುತ್ತದೆ. ತಿಪ್ಪೇಸ್ವಾಮಿಯವರ ಚಿತ್ರಗಳು ಮುಖ್ಯವಾಗಿ ನಿಸರ್ಗವನ್ನು ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದ ಸ್ಥಳಗಳನ್ನು ಕುರಿತವುಗಳು. ಕುವೆಂಪು ಅವರ ಮಲೆನಾಡನ್ನು ತುಂಬ ಸೊಗಸಾದ ವರ್ಣಚಿತ್ರಗಳ ಮೂಲಕ ಸೆರೆಹಿಡಿದಿದ್ದಾರೆ. ತಿಪ್ಪೇಸ್ವಾಮಿಯವರು ಕಲಾವಿದನಾಗಿ ಕೆಲಸ ಮಾಡುವ ವಿಧಾನಗಳನ್ನೂ, ಅವರು ಕೆಲವು ನಿಸರ್ಗಚಿತ್ರಗಳನ್ನು ರಚಿಸುವಾಗ ಅವರಿಗೆ ಒದಗಿದ ಕೆಲವು ಸ್ವಾರಸ್ಯವಾದ ಅನುಭವಗಳನ್ನೂ ಲೇಖಕರು ದಾಖಲಿಸಿರುವ ಸಂದರ್ಭಗಳು ವಿಶೇಷ ರೀತಿಯವಾಗಿವೆ. ಒಟ್ಟಾರೆಯಾಗಿ ತಿಪ್ಪೇಸ್ವಾಮಿಯವರ

ವ್ಯಕ್ತಿತ್ವ ಹಾಗೂ ಕಲಾಸಾಧನೆಯನ್ನು, ಶ್ರೀ ಜೀಶಂಪ ಅವರು ತುಂಬ ಪ್ರೀತಿ-ವಿಶ್ವಾಸಗಳಿಂದ ಈ ಕೃತಿಯಲ್ಲಿ ಮಾಡಿಕೊಟ್ಟಿದ್ದಾರೆ.

ಆತ್ಮಚರಿತ್ರೆಯ ಮೂರು ಕೃತಿಗಳು ಇಲ್ಲಿ ನಮ್ಮ ಅವಗಾಹನೆಗೆ ಒಳಗಾಗಿವೆ : ಒಂದು, ರಂ. ಶ್ರೀ. ಮುಗಳಿ ಅವರ 'ಜೀವನರಸಿಕ' ಎಂಬುದು ; ಇನ್ನೊಂದು ಎ ಕೆ. ಗೋಪಾಲನ್ ಅವರ 'ನನ್ನ ಜೀವನದ ಕಥೆ' (ಮಲೆಯಾಳಂ ಮೂಲ. ಅನು : ಬಿ. ಮಾಧವ) ; ಮತ್ತೊಂದು, ಹಿರೇಮಲ್ಲೂರು ಈಶ್ವರನ್ ಅವರ 'ವಲಸೆ ಹೋದ ಕನ್ನಡಿಗನ ಕತೆ.' ಮುಗಳಿಯವರ ಕೃತಿಯಲ್ಲಿ ಲೇಖಕರ ಕಾಲೇಜು ಜೀವನದಿಂದ ಈಚಿನ ದಿನಗಳವರೆಗಿನ ಅನುಭವ-ಘಟನೆ-ಆನಿಸಿಕೆಗಳು ಮೈತಳೆದಿವೆ. ಲೇಖಕರು ತಮ್ಮ ಚರಿತ್ರೆಯನ್ನು ನೇರವಾಗಿ ಉತ್ತಮಪುರುಷದಲ್ಲಿ ಹೇಳದೆ ಪ್ರಥಮ ಪುರುಷದ 'ರಸಿಕ'ನ ಬಾಯಲ್ಲಿ ಹೇಳಿಸಿದ್ದಾರೆ. ವಿವರಣೆ ಹೆಚ್ಚು ವಸ್ತುನಿಷ್ಠವಾಗಲೆಂಬುದೇ ಇಲ್ಲಿಯ ಗ್ರಹಿಕೆ. ಈ ನಿರೂಪಣೆಯ ಕ್ರಮದಿಂದ ಅನುಕೂಲತೆಗಳಿವೆಯಾದರೂ ಓದುಗ-ಲೇಖಕರ ನಡುವೆ ಉಂಟಾಗಬಹುದಾಗಿದ್ದ ಆತ್ಮೀಯ ವಾತಾವರಣಕ್ಕೆ ಇಲ್ಲಿ ಧಕ್ಕೆಯುಂಟಾಗಿದೆ. ಕನ್ನಡಿಗರಾದ ಲೇಖಕರು ಕನ್ನಡನಾಡಿನ ಹೊರಗೆ (ಮಹಾರಾಷ್ಟ್ರದಲ್ಲಿ) ಅನ್ಯಸಂಸ್ಕೃತಿಯ ವಾತಾವರಣದಲ್ಲಿ ಬಾಳಿದಾಗ ಪಡೆದ ಅನುಭವಗಳಿಗೆ ಇಲ್ಲಿ ವಿಶೇಷ ಒತ್ತುಕೊಡಲಾಗಿದೆ. ಜೊತೆಗೆ ಕೃತಿಗೆ ಅಷ್ಟಾಗಿ ಹೊಂದಿಕೊಳ್ಳದ ಒಂದೆರಡು ವಿವರಣೆಗಳೂ ಇವೆ. ಮಹಾರಾಷ್ಟ್ರದ ಒಂದು ರಾಜಕುಟುಂಬದ ವಿಸ್ತಾರವಾದ ಕಥೆ ಇದಕ್ಕೊಂದು ಉದಾಹರಣೆ. ಲೇಖಕರು ಸಮಕಾಲೀನ ವಿದ್ಯಾಭ್ಯಾಸ ಪದ್ಧತಿಯನ್ನು ಕುರಿತಂತೆ ನಾಡುನುಡಿಗಳನ್ನು ಕುರಿತಂತೆ ತಮ್ಮ ಚಿಂತನೆಗಳನ್ನೂ ಇಲ್ಲಿ ದಾಖಲಿಸಿದ್ದಾರೆ. ದೈವಭಕ್ತಿಯೊಂದನ್ನು ಕುರಿತಂತೆ ಶ್ರೀಯುತರ ವಿವರಣೆ ಪ್ರತಿಪಕ್ಷವೊಂದನ್ನು ಗಮನದಲ್ಲಿರಿಸಿ ಬರೆದಂತಿದೆ. ಲೇಖಕರು ಸಮರ್ಥಿಸಿಕೊಳ್ಳಬಯಸುವ ದೈವನಂಬಿಕೆಯನ್ನು ತಿರಸ್ಕರಿಸಲೇಬೇಕಾದ್ದಿಲ್ಲವಾದರೂ ಲೌಕಿಕವಾದ ನಿರಾಶೆಗಳನ್ನು ಮರೆಯಲು ದೈವಕ್ಕೆ ಶರಣಾಗುವ ಸ್ಥಿತಿಗೂ ನಾಡುನುಡಿ ಮುಂತಾದ ಲೌಕಿಕ ಸಂಗತಿಗಳಿಗಾಗಿ ಅಭಿಮಾನದಿಂದ ಹೋರಾಡಬೇಕು ಎಂಬ ಹೋರಾಟದ ಮನಸ್ಥಿತಿಗೂ ಹೇಗೆ ಸಾಂಗತ್ಯವುಂಟಾಗುತ್ತದೆಂಬುದು ತಿಳಿಯುವುದಿಲ್ಲ. ಕೃತಿಯನ್ನೋದಿದಾಗ ಜೀವಾನುಕಂಪವನ್ನು ಹುಟ್ಟಿಸುವುದೇ ಮುಖ್ಯೋದ್ದೇಶವೆಂಬಂತೆ ತೋರುತ್ತದೆ.

ಶಾಲೆಯಲ್ಲಿ ಪೋಲಿಹುಡುಗರ ಮುಖಂಡನಾಗಿ ಮುಂದೆ ಅಧ್ಯಾಪಕನಾಗಿ, ತಂದೆ-ತಾಯಿಯರ ಇಷ್ಟಕ್ಕೆ ವಿರೋಧವಾಗಿ ಚಳುವಳಿಗಳಿಗೆ ಸೇರಿ, ಜೈಲುವಾಸ ಅನುಭವಿಸಿ, ಕ್ರಮೇಣ ರಾಷ್ಟ್ರದ ರಾಜಕೀಯ ಮುಂಚೂಣಿಗೆ ಬಂದ ಗೋಪಾಲನ್ ನಾಯರ್ ಅವರ ವಿವರವಾದ ಜೀವನ ಕಥೆ 'ನನ್ನ ಜೀವನದ ಕಥೆ'ಯಾಗಿದೆ. ಸ್ವಾತಂತ್ರ್ಯ ಚಳುವಳಿಯ ಮೊದಲ ಹಂತಗಳಲ್ಲಿ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತ

ರಾಗಿದ್ದ ನಾಯರ್ ಕ್ರಮೇಣ ನಮ್ಮ ಕಾಂಗ್ರೆಸ್ ನಾಯಕರೇ ನಮಗೆ ಮೊದಲ ಶತ್ರುಗಳು ಎಂಬುದನ್ನು ತಿಳಿದು ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಗೆ ಸೇರಿದರು. ಅಲ್ಲಿಯೂ ಬಹುಕಾಲ ಅಂಟಿರದೆ, ಅದರ ನಾಯಕರೂ ಕಾಂಗ್ರೆಸ್ ನಾಯಕರಿಗಿಂತ ಭಿನ್ನರಲ್ಲವೆಂದು ತಿಳಿದು ಕಮ್ಯೂನಿಸ್ಟ್ ಪಕ್ಷ ಉದಯವಾದಾಗ ಅದಕ್ಕೆ ಸೇರಿದರು. ಸಂಸತ್ತಿನ ಪ್ರಮುಖ ನಾಯಕರಲ್ಲೊಬ್ಬರಾದ ನಾಯರ್ ದೇಶದ ಚರಿತ್ರೆಯ ಹಿನ್ನೆಲೆಯಲ್ಲಿ ತಮ್ಮ ಅನುಭವ-ಸಾಧನೆಗಳನ್ನು ವಿವರಿಸಿದ್ದಾರೆ. ಭಾರತದ ರಾಜಕೀಯ ಇತಿಹಾಸದ ಸ್ಥಿತ್ಯಂತರಗಳಿಗೆ ಅವರ ಜೀವನಕಥನ ಕನ್ನಡಿ ಹಿಡಿಯುತ್ತದೆ. ಕಾಂಗ್ರೆಸ್ಸಿನ ಬೆಳವಣಿಗೆ, ಅದರ ಆಂತರಿಕ ಒಳಸುಳಿಗಳನ್ನು ತಿಳಿದುಕೊಳ್ಳಲು ಇಂತಹ ಚರಿತ್ರೆಗಳು ಹೆಚ್ಚು ವಿಶ್ವಾಸಾರ್ಹವಾಗುತ್ತದೆ. ಇಲ್ಲಿಯ ಹೋರಾಟದ ಕತೆಗಳು ಕನಸಿನಿಂದ ವಾಸ್ತವಕ್ಕೆ ಮರಳುವಾಗಿನ ಭೀಕರತೆಯನ್ನೂ ಸ್ಥೈರ್ಯವನ್ನೂ ತೆರೆದು ತೋರಿಸುತ್ತವೆ. ಈ ದೃಷ್ಟಿಗಳಿಂದ ಈ ಕೃತಿಗೆ ಮಹತ್ವವಿದೆ. ಆದರೆ ಕೃತಿಯ ಅನೇಕ ಕಡೆಗಳಲ್ಲಿ ನಾಯರ್ ಅವರ ವಿವರಣೆಗಳ ಹಿಂದೆ 'ಅಹಂ' ಗುಣ ಸೂಕ್ಷ್ಮವಾಗಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಮರೆಯುವಂತಿಲ್ಲ.

*ಹಿರೇಮಲ್ಲೂರು ಈಶ್ವರನ್‌ರವರ 'ವಲಸೆ ಹೋದ ಕನ್ನಡಿಗನ ಕತೆ' ಅವರ ಆತ್ಮಕಥೆಯೇ ಆಗಿದೆ. ಅವರು ಕರ್ನಾಟಕದ ಹಿರೇಮಲ್ಲೂರೆಂಬ ಸಣ್ಣ ಗ್ರಾಮದ ಬಡ ಮಾಸ್ತರರೊಬ್ಬರ ಮಗನಾಗಿ ಹುಟ್ಟಿ, ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವಲ್ಲಿಯೇ ತಮಗೆ ದೊರೆತ ಅವಕಾಶವನ್ನು ಬಳಸಿಕೊಂಡು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಬಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಸರ್ವಾಧಿಕಾರಿ ಮನೋಭಾವಕ್ಕೆ ಒಗ್ಗಿಕೊಳ್ಳದೆ ಬೇಸತ್ತು ಪ್ರಾಧ್ಯಾಪಕ ಹುದ್ದೆಗೆ ರಾಜಿನಾಮೆಯಿತ್ತು ಈ ನೆಲದ ಋಣವನ್ನು ಕಳೆದುಕೊಂಡು ಬೇರೆ ದೇಶಕ್ಕೆ ವಲಸೆ ಹೋದರು. ಕನ್ನಡಿಗನೊಬ್ಬ ಬೇರೆ ದೇಶವೊಂದರ ಪ್ರಜೆಯಾಗಿ ವಲಸೆ ಹೋಗಬೇಕಾಗಿ ಬಂದದ್ದರ ಹಿನ್ನೆಲೆಯ ದಾರುಣ ವ್ಯಥೆಯ ಕಥೆ ಈ ಕೃತಿಯ ಒಡಲಾಳದಲ್ಲಿದೆ. ಬಲಿಷ್ಠವಾದ ವ್ಯವಸ್ಥೆಯೊಂದರ ವಿರುದ್ಧ ಹೋರಾಡಲಾಗದೆ ಪರಿಸ್ಥಿತಿಯ ಪ್ರಕೋಪಕ್ಕೆ ಒಳಗಾಗಿ ನಮ್ಮಲ್ಲಿನ ಎಷ್ಟೋ ಪ್ರತಿಭಾವಂತರು ಬೇರೆ ದೇಶಗಳಲ್ಲಿ ಹೋಗಿ ನೆಲೆಸಬೇಕಾಗಿ ಬಂದದ್ದಕ್ಕೆ ಕಾರಣವನ್ನು ನಾವಿಲ್ಲಿ ಅರಸಬಹುದು. ರಾಷ್ಟ್ರೀಯ ಸಮಸ್ಯೆಯಾದ 'ಪ್ರತಿಭಾ ಪಲಾಯನ'ಕ್ಕೆ ಸನ್ನಿವೇಶ, ಸಂದರ್ಭ, ಪರಿಸ್ಥಿತಿಗಳು ಹೇಗೆ ಪ್ರೇರಣೆ ನೀಡಬಲ್ಲವೆಂಬುದಕ್ಕೆ ಈ ಆತ್ಮಕಥೆ ಪುರಾವೆಯೊದಗಿಸುತ್ತದೆ.

ಈಶ್ವರನ್‌ರವರು ಬಡ ಶಾಲಾಮಾಸ್ತರನ ಮಗನಾಗಿ ಕಡು ಬಡತನದ ವಾತಾವರಣದಲ್ಲಿ ಬೆಳೆದರೂ ಆತ್ಮಗೌರವಕ್ಕೆ ಚ್ಯುತಿ ಬರದಂತೆ ಕಷ್ಟಪಟ್ಟು ಓದಿ

ಸ್ವಸಾಮರ್ಥ್ಯದಿಂದ ಮುಂದೆ ಬಂದವರು. ಈ ಮಗ ಹುಟ್ಟಿದಾಗ ಅವನ ಜಾತಕದಲ್ಲಿ 'ರಾಜಮಾನ್ಯನಾಗುತ್ತಾನೆ' ಎಂಬುದನ್ನು ಕೇಳಿ ತಂದೆ ದೊಡ್ಡ ಕನಸನ್ನು ಮಗನ ಭವಿಷ್ಯದಲ್ಲಿ ಕಂಡರು. ತಮ್ಮ ಕನಸು ನೆನಸಾಗಲು ಶಾಲೆಯಲ್ಲೂ, ಮನೆಯಲ್ಲೂ, ಅಂಗಳದಲ್ಲೂ ಮಾಸ್ತರರಾಗಿ ಮಗನನ್ನು ತಿದ್ದಿ ಬೆಳೆಯಿಸಿದ ತಂದೆ ತಮ್ಮ ಮಗನ ಭವಿಷ್ಯ ಉಜ್ವಲವಾಗಿ ರೂಪುಗೊಂಡುದನ್ನು ಕಣ್ಣಾರೆ ಕಂಡರೂ ತಮ್ಮ ಕೊನೆಗಾಲದಲ್ಲಿ ಮಗನ ಮುಖ ನೋಡಲಾಗದೆ ಕೊನೆಯುಸಿರೆಳೆದ ದುರಂತ ನಮ್ಮ ಕರುಳು ಮಿಡಿಯುತ್ತದೆ.

ಈಶ್ವರನ್ ಸುಪ್ರಸಿದ್ಧ ಸಮಾಜ ಶಾಸ್ತ್ರಜ್ಞರು. ಈ ದೇಶದ ಸಾಮಾಜಿಕ ಸಮಸ್ಯೆಯ ಮೂಲ ಬೇರುಗಳು ಎಲ್ಲಿವೆ ಎಂಬುದು ಅವರಿಗೆ ತಿಳಿದಿದೆ. ಸಮಾಜ ಶಾಸ್ತ್ರಜ್ಞರಾಗಿ ತಮ್ಮ ಬಾಲ್ಯದ ದಿನಗಳನ್ನು, ಹಿರೇಮಲ್ಲೂರಿನ ಆವೃತ ಜಗತ್ತಿನಿಂದ ಧಾರವಾಡದ ವಿಶಾಲ ಜಗತ್ತಿಗೆ ಬಂದಾಗಿನ ಅವರ ಮನೋಸ್ಥಿತಿಯನ್ನು, ಓದಿ ಅಧ್ಯಾಪಕರಾಗಿ ಸಮಾಜದ ಅಂಗವಾಗಿ ಅಲ್ಲಿನ ವಿಕ್ಷಿಪ್ತ ಬದುಕಿನ ಜೊತೆಗೆ ಹೋರಾಡಿದ ಆ ದಿನಗಳನ್ನು, ಧಾರವಾಡದಿಂದ ಇನ್ನೂ ವಿಶಾಲವಾದ ಆಕ್ಸ್‌ಫರ್ಡ್‌ನ ಅಧ್ಯಯನ ಕಾಲದಲ್ಲಿನ ಅನುಭವಗಳನ್ನು ಕ್ರಮಕ್ರಮವಾಗಿ ವಿಶ್ಲೇಷಿಸುತ್ತಾ ಸಾಗುವ ಅವರ ಆತ್ಮಕಥೆಯ ಧಾಟಿ ವಿಶ್ಲೇಷಣಾತ್ಮಕವಾಗಿದೆ. ಈಶ್ವರನ್ ಒಳ್ಳೆಯ ಬರಹಗಾರರೂ ಆಗಿರುವುದರಿಂದ ಬಾಳಿನಲ್ಲಿ ಬಂದ ಸಂಕಷ್ಟಗಳನ್ನು ಸಾವು-ನೋವುಗಳನ್ನು, ಸಿಹಿ-ಕಹಿಗಳನ್ನು ಕಥೆ-ಕಾದಂಬರಿಗಳ ಮೂಲಕ ತೋಡಿಕೊಂಡು ತಮ್ಮ ಅಂತರಂಗದ ತುಮುಲಗಳಿಗೆ ಹೊರಬರಲು ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡರು. ಅವರ ಆತ್ಮಕಥೆಯಲ್ಲಿ ನೋವುಂಡ ಜೀವದ ಕಹಿ-ಒಗರು ಒಂದಲ್ಲಾ ಒಂದು ಬಗೆಯಲ್ಲಿ ವ್ಯಕ್ತಗೊಂಡಿದೆ. ಇದಕ್ಕೆ ನಿದರ್ಶನವಾಗಿ ಕನ್ಯಾವೀಕ್ಷಣೆಗೆ ಹೊರಟಾಗಿನ ಅನುಭವಗಳನ್ನೂ ಉನ್ನತ ಶಿಕ್ಷಣಕ್ಕೆ ಚಂದಾ ಎತ್ತಲು ಹೋದಾಗ ಎದುರಿಸಿದ ಕಹಿ ಅನುಭವಗಳನ್ನೂ ಕೊಡಬಹುದು.

ಈಶ್ವರನ್ ಈ ಆತ್ಮಕಥೆಯಿಂದ ತಿಳಿದುಬರುವಂತೆ ಸೂಕ್ಷ್ಮ ಮನೋಭಾವದ ಭಾವಜೀವಿ. ತಮ್ಮ ಸ್ವಾಭಿಮಾನಕ್ಕೆ ಚ್ಯುತಿ ಬಂದಾಗಲೆಲ್ಲಾ ಸಟೆದು ನಿಲ್ಲುವ ಛಲವಾದಿ. ಒಬ್ಬ ಕನ್ನಡ ಅಧ್ಯಾಪಕನ ಸ್ವಪ್ರಯತ್ನಶೀಲ ಸಾಹಸ ಆದರ್ಶಪೂರ್ಣವಾದುದು; ಅತ್ಯಂತ ಶ್ಲಾಘನೀಯವಾದುದು. ಅವರ ಸೇವೆ ಕನ್ನಡ ನಾಡಿಗೆ ಲಭ್ಯವಾಗದಿರುವುದು ಸಂತೋಷದ ಸಂಗತಿಯಲ್ಲ. ನಮ್ಮ ನಾಡಿನ ಶಿಕ್ಷಣ ರಂಗದಲ್ಲಿನ ಉಸಿರುಗಟ್ಟಿಸುವ ವಾತಾವರಣದ ಬಗೆಗೆ ಭಯವೂ ಹೇಸಿಗೆಯೂ ಆಗುತ್ತದೆ.

ಇಷ್ಟೆಲ್ಲ ಹೇಳುವಾಗ, ಈ ಆತ್ಮಕಥೆಯಲ್ಲಿನ ಕೊರತೆಯ ಬಗೆಗೂ ಒಂದೆರಡು ಮಾತು ಹೇಳುವುದು ಅನಿವಾರ್ಯ. ಈಶ್ವರನ್ ಮೊದಲೇ ಹೇಳಿರುವಂತೆ

ನಮ್ಮ ಒಳ್ಳೆಯ ಬರಹಗಾರರಲ್ಲಿ ಒಬ್ಬರು. ಭಾವುಕರೂ ತುಂಬ ಸಂವೇದನಾ ಶೀಲರೂ ಆದ ಅವರ ಈ ಮನೋಭಾವ ಕೃತಿಯುದ್ದಕ್ಕೂ ತಮಗೆ ಆದಂತಹ ಅನ್ಯಾಯ, ಅವಮಾನಗಳನ್ನು ನಿರೂಪಿಸುವಾಗ ಅಸಹನೆ ವ್ಯಂಗ್ಯದ ಪೋಷಾಕಿನಲ್ಲಿ ರಾರಾಜಿಸುತ್ತದೆ, ತಮಗೆ ಆಗದವರ ಬಗೆಗಿನ ತೀಕ್ಷ್ಣ ವಿಡಂಬನೆ ಕ್ರೂರವಾಗಿಬಿಡುತ್ತದೆ. ತಮಗೆ ಪ್ರಿಯವಾದ ಆಕ್ಸ್‌ಫರ್ಡ್‌ನ ವಾತಾವರಣ, ಅಲ್ಲಿಯ ಶಿಕ್ಷಣ ವಿಧಾನ, ಅಲ್ಲಿಯ ಬೋಧಕರು, ಅಲ್ಲಿನ ಸ್ನಾತಕರ ಜ್ಞಾನದಾಹ ಮತ್ತು ಅಧ್ಯಾಪಕ-ಶಿಕ್ಷಕರ ಸಂಬಂಧಗಳನ್ನು ನಿರೂಪಿಸುವಾಗ ಅವರ ಲೇಖನಿಗೆ ಹುರುಪು ಬರುತ್ತದೆ. ಬರಹದಲ್ಲಿ ಸಾತ್ವಿಕವಾದ ಮೆಚ್ಚುಗೆ ತನಗೆ ತಾನೇ ಹಾಸುಹೊಕ್ಕಾಗಿಬಿಡುತ್ತದೆ, ಆತ್ಮಕಥೆ ಬರೆಯುವ ಲೇಖಕನಿಗೆ ಈ ದ್ವಂದ್ವ ಮನೋಸ್ಥಿತಿಯನ್ನು ಮೆಟ್ಟಿ ನಿಲ್ಲುವುದು ಅಥವಾ ಅದರಿಂದ ಬಿಡಿಸಿಕೊಂಡು ನಿರ್ಲಿಪ್ತನಾಗಿ ಬರೆಯುವುದು ಬಹಳ ಕಷ್ಟದಕೆಲಸ. ಈಶ್ವರನ್‌ರವರಿಗೆ ಈ ಮನೋಸ್ಥಿಯನ್ನು ಮೀರಿ ನಿಲ್ಲಲು ಆಗಿಲ್ಲ. ಒಂದು ವೇಳೆ ಮೀರಿದ್ದರೆ ಈ ಆತ್ಮಕತೆ ಇಷ್ಟು ಆಕರ್ಷಕವಾಗಿ ಉಳಿಯುತ್ತಿರಲಿಲ್ಲ. ಬಾಲ್ಯಕಾಲದ ಅನುಭವಗಳು ಹಾಗೂ ನಾವು ಹುಟ್ಟಿ ಬೆಳೆದ ವಾತಾವರಣ ನಮ್ಮ ವ್ಯಕ್ತಿತ್ವದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದರ ಸಾಮಾಜಿಕ ಹಾಗೂ ಮನೋವಿಶ್ಲೇಷಣಾತ್ಮಕ ನಿರೂಪಣೆ ಈ ಆತ್ಮಕತೆಯ ಮೆಚ್ಚುಗೆಯ ಭಾಗವಾಗಿದೆ.

—*ವಿದ್ಯಾಶಂಕರ ಎಸ್.

ಅಭಿನಂದನ ಗ್ರಂಥಗಳು

—ಕೃಷ್ಣ ಪರಮೇಶ್ವರ ಭಟ್ಟ

ಈ ವರ್ಷ ಪ್ರಕಟವಾದ ಆರು ಅಭಿನಂದನ ಗ್ರಂಥಗಳನ್ನು ಇಲ್ಲಿ ಗಮನಿಸಲಾಗಿದೆ. ಅವು : ಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟವಾಗಿ ಬಿ ಎಂ ಶ್ರೀ. ಸ್ಮಾರಕ ಪ್ರತಿಷ್ಠಾನದಿಂದ ಪ್ರಕಟವಾದ 'ಮಣಿಹ' (ಸಂ : ಎಂ. ಎ. ಸೀತಾರಾಮಯ್ಯ ಹಾಗೂ ಡಾ. ಆರ್ ಶೇಷಶಾಸ್ತ್ರಿ) ; ಬೆಟಗೇರಿ ಕೃಷ್ಣಶರ್ಮರ ನೆನಪಿಗಾಗಿ ಹೊರಬಂದ 'ಬಳುವಲ' (ಸಂ : ಜ್ಯೋತಿ ಹೊಸೂರ, ಬಸವರಾಜ ಮಾಲಿಶೆಟ್ಟಿ ಹಾಗೂ ನಿಂಗಣ್ಣ ಸಣ್ಣಕ್ಕಿ). ತರಾಸು ಅಭಿನಂಡನ ಗ್ರಂಥ 'ತರಾಸು' (ಸಂ : ಶಾ ಮಂ. ಕೃಷ್ಣರಾಯ), ಶ್ರೀಮತಿ ಶಾಂತಾದೇವಿ ಮಾಳವಾಡ ಅವರಿಗೆ ಅರ್ಪಿಸಿದ ಅಭಿನಂದನಗ್ರಂಥ 'ಪ್ರಶಾಂತ' (ಸಂ : ಶಾಂತಾದೇವಿ ಕಣವಿ, ಚೆನ್ನಕ್ಕ ಎಲಿಗಾರ ಹಾಗೂ ಮಾಲತಿ ಪಟ್ಟಣಶೆಟ್ಟಿ), 'ವಿಜಯನಂದನ' (ಸಂ : ಕವಿತಾಕೃಷ್ಣ) ಹಾಗೂ 'ನಾಡಭೂಷಣ' (ಸಂ : ವಸಂತಪಾಟೀಲ ಹಾಗೂ ಎಸ್. ಎಸ್. ಭೂಸರೆಡ್ಡಿ) ಇವುಗಳಲ್ಲಿ ಮೊದಲ ಎರಡು ಗ್ರಂಥಗಳು ಅಭಿನಂದಿತ ವ್ಯಕ್ತಿಯನ್ನು ಕುರಿತ ಲೇಖನಗಳಲ್ಲದೇ ಇತರ ಅನೇಕ ವಿಷಯಗಳನ್ನು ಕುರಿತ ಸಂಶೋಧನ ಲೇಖನಗಳನ್ನೂ ಒಳಗೊಂಡಿವೆ. ಇತರ

ನಾಲ್ಕು ಗ್ರಂಥಗಳಲ್ಲಿ ಪುರಸ್ಕೃತ ವ್ಯಕ್ತಿ ಹಾಗೂ ಅವರ ಕೃತಿಗಳನ್ನು ಕುರಿತಂತೆ ಮಾತ್ರ ಲೇಖನಗಳಿವೆ.

ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ-ಸಂಪಾದನೆ-ಪ್ರಕಟಣೆಗಳ ವಿಷಯದಲ್ಲಿ ವಿಶೇಷ ಆಸಕ್ತಿ ತಳೆದು, ನಿಷ್ಠೆಯಿಂದ ದುಡಿದು ಪ್ರಸಿದ್ಧರಾದ ಫ. ಗು. ಹಳಕಟ್ಟಿಯವರ ನೆನಪಿಗಾಗಿ ತುದ 'ಮಣಿಹ'ದಲ್ಲಿ ಹಸ್ತಪ್ರತಿಗಳ ಸಂಗ್ರಹ–ಸಂಪಾದನೆಯ ಬಗೆಗೇ ಹೆಚ್ಚಿನ ಲೇಖನಗಳನ್ನು ಪ್ರಕಟಿಸಿರುವುದು ಹೆಚ್ಚು ಉಚಿತವಾಗಿದೆ. ಇವಲ್ಲದೇ ಈ ವಿಷಯಕ್ಕೆ ಸಂಬಂಧಿಸಿದಂತೆ ಲಿಪಿಯನ್ನು ಕುರಿತು ಹಾಗೂ ಹಳಕಟ್ಟಿಯವರ ಜೀವನ-ಸಾಧನೆಗಳನ್ನು ಕುರಿತು, ಕನ್ನಡದ ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ವಿವಿಧ ಮಹನೀಯರ ಕೊಡುಗೆಯನ್ನು ಕುರಿತು ಲೇಖನಗಳಿವೆ. 'ಗ್ರಂಥಸಂಪಾದನೆ–ಕೆಲವು ಮುಖಗಳು' ಎಂಬ ಭಾಗದಲ್ಲಿ ನಾಲ್ಕೈದು ಲೇಖನಗಳನ್ನುಳಿದರೆ ಉಳಿದವು ಪರಿಚಯಾತ್ಮಕವಾದವುಗಳು. ಈ ಭಾಗದಲ್ಲಿಯ ಲಕ್ಷ್ಮೀನಾರಾಯಣಭಟ್ಟರ 'ಪ್ರಾಚೀನ ಪದ್ಯಕೃತಿಗಳ ಸಂಪಾದನೆಯಲ್ಲಿ ಛಂದೋಜ್ಞಾನದ ಅಗತ್ಯ' ಎಂಬುದು ಹಾಗೂ ಬಾ. ರಾ. ಗೋಪಾಲ್ ಅವರ 'ಶಾಸನ ಸಂಪಾದನೆ' ಎಂಬ ಲೇಖನಗಳು ಹೆಸರಿಸಬೇಕಾದವುಗಳು. ಇವುಗಳಲ್ಲಿ ಮೊದಲನೆಯದು ಸಂಪಾದನೆಯ ಕಾರ್ಯದಲ್ಲಿ ಲಯಜ್ಞಾನದ ಅಗತ್ಯವನ್ನು ದೃಷ್ಟಾಂತಸಹಿತ ವಿವರಿಸುತ್ತದೆ. ಎರಡನೆಯದು (ಎಂ. ಎಂ. ಕಲಬುರ್ಗಿ ಅವರ ಲೇಖನವೊಂದಕ್ಕೆ ಪ್ರತಿಕ್ರಿಯೆಯಾಗಿ) ಶಾಸನ ಸಂಪಾದನೆಯಲ್ಲಿ ಅಗತ್ಯವಾದ ತಾಳ್ಮೆಯನ್ನು ಕುರಿತು ಹಾಗೂ ಅವಸರದಿಂದಾಗಿ ಉಂಟಾಗಬಹುದಾದ ಪ್ರಮಾದವನ್ನು (ವಿಶೇಷವಾಗಿ ಕಲಬುರ್ಗಿಯವರು ಪುನಾರಚಿಸಿದ ಪಾಠವನ್ನು ಗಮನಿಸಿ) ಕುರಿತು ಎಚ್ಚರ ಹೇಳಿದ್ದಾರೆ. 'ಮೆಕೆಂಜಿ ಸಂಗ್ರಹ' ಜಿ.ಎಂ. ಹೆಗ್ಡೆ, ಹಾಗೂ 'ಕನ್ನಡ ಕೈಫಿಯತ್ತುಗಳು' (ಜಿ. ವರದರಾಜರಾವ್) ಎಂಬ ಲೇಖನಗಳು ಮಾಹಿತಿಗಳನ್ನು ನೀಡುವಲ್ಲಿ ತುಂಬ ಉಪಯುಕ್ತವಾಗಿವೆ. ಗ್ರಂಥ ಸಂಪಾದನೆಗೆ ವಿವಿಧ ವಿದ್ವಾಂಸರ ಕೊಡುಗೆಯನ್ನು ಕುರಿತ ಲೇಖನಗಳು ಈ ಶಾಸ್ತ್ರದ ಇತಿಹಾಸವನ್ನು ತಿಳಿಯಬಯಸುವವರಿಗೆ ಉಪಯುಕ್ತವಾಗಿವೆ. ಒಟ್ಟಿನಲ್ಲಿ ಗ್ರಂಥ ಸಂಪಾದನೆಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗೆಗೆ ಲೇಖನಗಳನ್ನು ಕಲೆಹಾಕಿ ಒಟ್ಟಿಗೆ ತಂದಿರುವುದು ಸ್ತುತ್ಯರ್ಹವಾಗಿದೆ. ಈ ದಿಸೆಯಲ್ಲಿ ಇದೊಂದು ಆಧಾರಗ್ರಂಥವಾಗಿದೆ ಎನ್ನಬಹುದು.

'ಬೆಳುವೊಲ' ದಲ್ಲಿಯ ಲೇಖನಗಳು ಮೂರು ವಿಭಾಗಗಳಲ್ಲಿ ಹಂಚಿ ಹೋಗಿವೆ: 'ವ್ಯಕ್ತಿತ್ವದರ್ಶನ', 'ಅನಂದಕಂದರ ಸಾಹಿತ್ಯಸಮೀಕ್ಷೆ' ಹಾಗೂ 'ಲೇಖನ ಗೌರವ'. ಮೊದಲ ಭಾಗದಲ್ಲಿ ಕಾರಂತ, ಶಂಬಾ, ಹಾಮಾನಾ, ಗೊರೂರು ಮುಂತಾದ ಹಿರಿಯರು ಹಾಗೂ ಮಿತ್ರರು ಭೆಟಿಗೇರಿಯವರೊಂದಿಗಿನ ತಮ್ಮ ಅನುಭವಗಳನ್ನು ನೆನಪಿಸಿಕೊಂಡು ಬರೆದ ಲೇಖನಗಳಿವೆ. ಸಾಹಿತ್ಯ ಸಮೀಕ್ಷೆಯ ವಿಭಾಗದಲ್ಲಿ ಶ್ರೀಯುತ

ಬೆಟಗೇರಿಯವರ ಕಾವ್ಯ, ಕತೆ, ಕಾದಂಬರಿ, ನಾಟಕ, ಸಂಶೋಧನೆ, ಪತ್ರಿಕಾಸೇವೆ, ಜಾನಪದ ಅಧ್ಯಯನ ಮುಂತಾದವುಗಳನ್ನು ಕುರಿತಾದ ವಿಮರ್ಶೆಯ ಲೇಖನಗಳಿವೆ. ಆನಂದಕಂದರ ಕವನಗಳಿಗೆ 'ಕಣ್ಣೋದಿಗಿಂತ ಕೊರಳೋದು ಹೆಚ್ಚು ಪರಿಣಾಮಕಾರಿ' ಸರಳತೆ ಆಶಾವಾದಿತ್ವಗಳು ಇವರ ಕಾವ್ಯದ ಪ್ರಧಾನಗುಣ (ಕೆಲವೊಮ್ಮೆ ದೋಷ ಕೂಡ) ಎಂಬುದು ಕಣವಿಯವರ ಹೇಳಿಕೆ. ಉಳಿದ ಲೇಖನಗಳು ಪರಿಚಯಾತ್ಮಕ/ ವಿವರಣಾತ್ಮಕವಾದವುಗಳು. 'ಲೇಖನಗೌರವ' ಭಾಗದಲ್ಲಿ ವಿವಿಧ ವಿಷಯಗಳನ್ನು ಕುರಿತ ಸಂಶೋಧನಾತ್ಮಕ ಬರೆಹಗಳಿವೆ. 'ಕನ್ನಡ ಕಾವ್ಯಗಳಲ್ಲಿ ವೀರ–ವೀರಮರಣ–ವೀರ ಸ್ವರ್ಗಾರೋಹಣ' (ಎಂ. ಎಂ. ಕಲ್ಬುರ್ಗಿ), 'ಕೃಷ್ಣಾ ಮೇಲ್ದಂಡೆ ಪ್ರದೇಶದ ಶಿಲಾ–ತಾಮ್ರಯುಗ ಸಂಸ್ಕೃತಿಗಳ ವೈಶಿಷ್ಟ್ಯ' (ಅ. ಸುಂದರ), 'ಕುಮಾರವ್ಯಾಸ ಕವಿಯ ಹೆಸರು' (ಸೀತಾರಾಮ ಜಾಗೀರದಾರ), 'ಪಾರಿಜಾತ ಆಟಗಳ ಪ್ರಾಕ್ಕಥನ' (ಭೀಮರಾವ್ ಚಿಟಗುಪ್ಪಿ) – ಈ ಲೇಖನಗಳು ಇಲ್ಲಿ ಹೆಸರಿಸಬೇಕಾದವುಗಳು.

ತರಾಸು ಅವರಿಗೆ ಅರ್ಪಿತವಾದ ಅಭಿನಂದನಗ್ರಂಥದಲ್ಲಿ ತರಾಸು ಬದುಕು, ಸಾಹಿತ್ಯಗಳನ್ನು ಕುರಿತಂತೆ ಎಪ್ಪತ್ತಾರು ಚಿಕ್ಕ–ದೊಡ್ಡ ಲೇಖನಗಳಿವೆ. ಇಲ್ಲಿಯ ಅನೇಕ ಲೇಖನಗಳು ಈ ಗ್ರಂಥಕ್ಕಾಗಿಯೇ ಬರೆದದ್ದಾಗಿರದೇ ಬೇರೆ ಬೇರೆ ಪತ್ರಿಕೆ, ವಿಚಾರಸಂಕಿರಣಗಳಿಗಾಗಿ ಅಥವಾ ಕೃತಿಗಳ ಭಾಗವಾಗಿ ಬರೆದು ಪ್ರಕಟವಾದವುಗಳು. 'ಬದುಕು' ಎಂಬ ಮೊದಲ ಭಾಗದಲ್ಲಿ ಶ್ರೀಯುತರ ಹುಟ್ಟು, ವಿದ್ಯಾಭ್ಯಾಸ. ಅವರ ಸ್ವಭಾವ, ಅನಕೃ ಮುಂತಾದವರ ಪ್ರಭಾವ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡದ್ದು ಹಾಗೂ ತರಾಸು ಅವರೊಂದಿಗಿನ ಆಯಾ ಲೇಖಕರ ಅನುಭವ–ಇವುಗಳನ್ನು ಕುರಿತ ಲೇಖನಗಳಿವೆ. ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಅನ್ಯಮೂಲಗಳಿಂದ ಎತ್ತಿಕೊಂಡದ್ದರಿಂದ ಕೆಲವಾದರೂ ವಸ್ತುನಿಷ್ಠ ಬರೆಹಗಳು ಇಲ್ಲಿ ಸೇರುವುದು ಸಾಧ್ಯವಾಗಿದೆಯೆಂದು ಭಾವಿಸಬಹುದೇನೋ. ಎಪ್ಪತ್ತು ಕಾದಂಬರಿಗಳನ್ನು ರಚಿಸಿದ ತರಾಸು ಅವರನ್ನು ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿಟ್ಟು ನೋಡುವುದು ರೂಢಿಯಾಗಿದೆ. ಆದರೆ ಆನಂತರದ ನವೋದಯ. ನವ್ಯ ಮಾರ್ಗಗಳ ಹಲವಾರು ಲಕ್ಷಣಗಳು ಅವರಲ್ಲಿ ಇವೆ ಎಂಬುದನ್ನು ಕೆಲವು ವಿಮರ್ಶಕರು ಗುರುತಿಸಿದ್ದಾರೆ. ಪ್ರಜ್ಞಾಪ್ರವಾಹ ತಂತ್ರವನ್ನು ಮೊದಲಬಾರಿಗೆ ಕನ್ನಡದಲ್ಲಿ ಬಳಸಿದವರು ತರಾಸು ಎಂದು ಎಲ್. ಎಸ್. ಶೇಷಗಿರಿರಾವ್ ಅವರು ಹೇಳಿದ್ದಾರೆ. ಆವೇಶ, ಉತ್ಕಟತೆ ಅವರ ಸಾಹಿತ್ಯದ ಪ್ರಧಾನಗುಣ ಹಾಗೂ ಇದೇ ಅವರ ಕೆಲವು ಕೃತಿಗಳ ದೋಷಕೂಡ ಎಂಬುದು ಇಲ್ಲಿಯ ಕೆಲವರ ಅಭಿಪ್ರಾಯ. ತರಾಸು ಅವರ ಕೃತಿಗಳನ್ನು ಪ್ರತ್ಯೇಕವಾಗಿ ಕುರಿತ ಬಿಡಿವಿಮರ್ಶೆಯ ಹಲವಾರು ಲೇಖನಗಳು ಇಲ್ಲಿ ಸೇರಿದ್ದು ಅವು ಕೃತಿಯ ಕಥೆಯನ್ನು ಪುನರ್ನಿರೂಪಿಸುತ್ತವೆ ಹಾಗೂ/ ಇಲ್ಲವೆ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತವೆ. ಶಾಂತಾದೇವಿ ಮಾಳವಾಡ ಅವರ

ಗೌರವಾರ್ಥವಾಗಿ ಪ್ರಕಟವಾದ 'ಪ್ರಶಾಂತ'ದಲ್ಲಿ ವ್ಯಕ್ತಿತ್ವದರ್ಶನ, ಸಾಹಿತ್ಯಾವಲೋಕನ ಹಾಗೂ ಅನುಬಂಧ ಎಂಬ ಮೂರು ಮುಖ್ಯ ವಿಭಾಗಗಳಿವೆ. ಇವಕ್ಕೆ ಮೊದಲು 'ಪರಿವಿಡಿ'ಯಾಗಿ ಶಾಂತಾದೇವಿಯವರೇ ತಮ್ಮ ಜೀವನದ ಘಟನೆಗಳನ್ನು ಮೆಲುಕು ಹಾಕಿದ್ದಾರೆ. 'ವ್ಯಕ್ತಿತ್ವದರ್ಶನ'ದ ಲೇಖನಗಳೇ ಈ ಕೃತಿಯ ಬಹುಭಾಗವನ್ನು ತುಂಬಿಕೊಂಡಿವೆ. 'ಮಹಿಳೆಯರ ಕಣ್ಮಣಿ', 'ನಡೆಶುದ್ಧ-ನುಡಿಶುದ್ಧ' ಮುಂತಾದ ಶೀರ್ಷಿಕೆಗಳೇ ಸೂಚಿಸುವಂತೆ ಇಲ್ಲಿಯ ಲೇಖನಗಳೆಲ್ಲ ಪ್ರಶಂಸಾತ್ಮಕವಾದವುಗಳು. ಸಾಹಿತ್ಯಾವಲೋಕನ ವಿಭಾಗದಲ್ಲಿಯ ಶ್ರೀಮತಿಯವರ ಕೃತಿಗಳ ವಿಮರ್ಶೆಯ ಲೇಖನಗಳ ಧಾಟಿಯೂ ಅದೇ. ಅನುಬಂಧದಲ್ಲಿ ಶ್ರೀಮತಿ ಮಾಳವಾಡರ ಜೀವನದ ಘಟನೆಗಳನ್ನು ಇಸವಿಸಹಿತ ಉಲ್ಲೇಖಿಸಲಾಗಿದೆ. 'ನಾಡಭೂಷಣ' ಎಂಬುದು ಪಂಡಿತ ನಾಗಭೂಷಣಶಾಸ್ತ್ರಿಗಳವರ ಅಮೃತ ವರ್ಷದ ನೆನಪಿಗಾಗಿ ಹೊರಬಂದಿರುವ ಗ್ರಂಥ. ವೀರಶೈವ ಆಚರಣೆ ತತ್ವಗಳು, ವಚನಕಾರರು-ಇವುಗಳನ್ನು ಕುರಿತು ಹಲವಾರು ಕೃತಿಗಳನ್ನು ಬರೆದ, ಇತರ ಕೆಲವಾರು ಕೃತಿಗಳನ್ನು ಸಂಪಾದಿಸಿದ ನಾಗರಾಜಶಾಸ್ತ್ರಿಗಳ ಗೌರವಾರ್ಥವಾಗಿ ಈ ಗ್ರಂಥ. ಇದರಲ್ಲಿ ಐದು ಒಳಭಾಗಗಳಿವೆ. ಮೊದಲಭಾಗದಲ್ಲಿ ವಿವಿಧ ಮಠಗಳ ಸ್ವಾಮಿಗಳಿಂದ ಆಶೀರ್ವಚನ ರೂಪದ ಬರೆಹಗಳು; ಎರಡನೆಯದರಲ್ಲಿ ಶಾಸ್ತ್ರಿಯವರ ಹಿತೈಷಿಗಳಿಂದ ಪರಿಚಯಾತ್ಮಕವಾದ ಜೀವನಕಥನ-ಘಟನಾವಳಿಗಳ ಸ್ಮರಣೆ; ಮೂರನೇ ಭಾಗದಲ್ಲಿ ಅನ್ಯ ವಿಷಯಗಳನ್ನು ಕುರಿತಾದ ಲೇಖನಗಳು, ನಾಲ್ಕನೆಯದರಲ್ಲಿ ಶಾಸ್ತ್ರಿಯವರು ಬರೆದ ಹಾಗೂ ಸಂಪಾದಿಸಿದ ಕೃತಿಗಳ ವಿಮರ್ಶೆ_ಪರಿಚಯ, ಹಾಗೂ ಕೊನೆಯ ಭಾಗದಲ್ಲಿ ವಿವಿಧ ಸಮಿತಿಗಳು ಶಾಸ್ತ್ರಿಯವರಿಗೆ ಅರ್ಪಿಸಿದ ಬಿನ್ನವತ್ತಳೆಗಳು ಇದು ಗ್ರಂಥದ ಒಳವಿವರ. ತುಮಕೂರಿನಿಂದ ಪ್ರಕಟವಾಗುವ, ವಾರಪತ್ರಿಕೆಯಾಗಿ ಹುಟ್ಟಿ ದಿನಪತ್ರಿಕೆಯಾಗಿ ಬೆಳೆದ 'ವಿಜಯವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀಯುತ ಹೆಚ್. ಆರ್. ಗುಂಡೂರಾವ್ ಅವರ ನೆನಪಿಗಾಗಿ ತಂದಿರುವ (ಸಂ : ಕವಿತಾಕೃಷ್ಣ) 'ವಿಜಯವಂದನ' ಎಂಬ ಪುಟ್ಟ ಗ್ರಂಥದಲ್ಲಿ ಶ್ರೀಯುತ ಗುಂಡೂರಾವ್ ಅವರ ಸ್ನೇಹ ಸಜ್ಜನಿಕೆಗಳನ್ನು ನೆನಪಿಸಿಕೊಡುವ ಮೆಚ್ಚುಗೆಯ ಧಾಟಿಯ ಚಿಕ್ಕ-ಪುಟ್ಟ ಲೇಖನಗಳು ಸೇರಿವೆ.

ಪ್ರಬಂಧ–ಪ್ರವಾಸ ಸಾಹಿತ್ಯ

ಎಸ್. ವಿದ್ಯಾಶಂಕರ

ದೇ. ಜವರೇಗೌಡ ಅವರ 'ಯಾತ್ರಿಕರು' ಹದಿಮೂರು ವ್ಯಕ್ತಿ ಚಿತ್ರ ಮತ್ತು ಮಿನಿ ಜೀವನ ಚರಿತ್ರೆಗಳ ಸಂಕಲನ. ಲೇಖಕರು ತಮಗೆ ಪೂಜ್ಯರೂ ಆದರ್ಶ ಪ್ರಾಯರೂ ಆಗಿದ್ದ ಗುರುಗಳನ್ನು, ತಮ್ಮ ಪ್ರೀತಿಗೆ ಪಾತ್ರರಾಗಿದ್ದ ಸಾಹಿತಿ ಮಿತ್ರರನ್ನು ಕುರಿತು ಆತ್ಮೀಯ ಶೈಲಿಯಲ್ಲಿ ಬರೆದಿರುವರು. ಮೊದಲನೆಯ ಲೇಖನದಲ್ಲಿ ಸ್ವರ್ಗಲೋಕದಲ್ಲಿ ನೃಪತುಂಗನ ಒಡ್ಡೋಲಗದಲ್ಲಿ ನಡೆದ ಕನ್ನಡದ ಹುತಾತ್ಮರ ಒಂದು ಸಭೆಯ ನಡಾವಳಿಯ ಚಿತ್ರವನ್ನು ಕೊಟ್ಟಿರುವರು. ಆ ಸಭೆಯಲ್ಲಿ ನಡೆದ ಸಂವಾದ ಕೇವಲ ಕಲ್ಪನೆಯಲ್ಲ ; ಅದೊಂದು ಸ್ವಪ್ನದರ್ಶನ ಎಂದು ಲೇಖಕರು ಹೇಳುವರು. ಅವರ ಭಾವನಾತ್ಮಕ ಬರವಣಿಗೆಗೆ ಈ ಸ್ವಪ್ನದರ್ಶನ ಸಾಕ್ಷಿ. ಕನ್ನಡದ ಶ್ರೀಮಂತಿಕೆಯನ್ನು ಸಮೃದ್ಧಗೊಳಿಸುವಲ್ಲಿ, ಅದರ ಕೀರ್ತಿಯನ್ನು ಬಾನೆತ್ತರಕ್ಕೆ ಕೊಂಡೊಯ್ಯುವಲ್ಲಿ ದುಡಿದ ಮಹನೀಯರನ್ನು ಪ್ರಾಂಜಲ ಮನಸ್ಸಿನಿಂದ ನೆನೆದಿರುವ ಲೇಖಕರ ಧ್ಯೇಯ ಮೆಚ್ಚುವಂತಹದು. ಇಲ್ಲಿನ ಆಚಾರ್ಯಶ್ರೇಷ್ಠರೆಲ್ಲ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅತ್ಯಂತ ಪ್ರಸಿದ್ಧರು ಅವರುಗಳ ಸದ್ಗುಣಾವಳಿಗಳನ್ನು, ಪಾಂಡಿತ್ಯವನ್ನು, ಸಾಹಿತ್ಯಸೇವೆಯನ್ನು, ಧೀಮಂತ ಮನೋಭಾವವನ್ನು ಈ ಲೇಖಕರಿಗೆ ಎಷ್ಟುಕೊಂಡಾಡಿದರೂ ಸಾಲದು. ಇದು ಕೇವಲ ಸ್ತುತಿಯಲ್ಲ, ಆರಾಧನೆ. ಇಲ್ಲಿನ ಹದಿಮೂರು ಲೇಖನಗಳಲ್ಲಿ ನಿಸ್ಸಂಶಯವಾಗಿ ಯದುಗಿರಿಯ ಸಂತಕವಿ ಹಾಗೂ ಸಾರಸ್ವತ ತಪಸ್ವಿ ಶ್ರೇಷ್ಠ ಬರಹಗಳು. ಎರಡು ಕವಿಚೇತನಗಳನ್ನು ಹತ್ತಿರದಿಂದ ಕಂಡು ಅವರ ಶ್ರೀಮಂತ ಬದುಕು–ಸಾಹಿತ್ಯಗಳನ್ನು ಪರಿಚಯಿಸಿರುವ ರೀತಿ ತೀರಾ ಆತ್ಮೀಯವಾದುದು. ಇಲ್ಲಿನ ಬಹಳಷ್ಟು ವ್ಯಕ್ತಿಚಿತ್ರಗಳು ಅವರವರ ಸಾಹಿತ್ಯ ದಿಂದ ಪರಿಪುಷ್ಟಗೊಂಡಿವೆ ; ಸಹೃದಯಿಯ ಕೆಲಸವನ್ನು ಇಲ್ಲಿ ಲೇಖಕರು ನಿರ್ವಹಿಸಿರುವರು.

ವೇಣುಗೋಪಾಲ ಸೊರಬರ 'ಸಮುದಾಯ ಮತ್ತು ರಾಜಕಾರಣ'ವು 1977 ರಿಂದ 1980 ರ ನಡುವಣ ಅವಧಿಯಲ್ಲಿ ನಡೆವ ರಾಷ್ಟ್ರದ ವಿದ್ಯಮಾನಗಳನ್ನು ಕುರಿತು ಪತ್ರಿಕೆಯೊಂದಕ್ಕೆ ಬರೆದ ಹನ್ನೊಂದು ಪುಟ್ಟ ಲೇಖನಗಳ ಸಂಕಲನವಾಗಿದೆ. ಇಲ್ಲಿಯ ಬಹುತೇಕ ಲೇಖನಗಳು ದೇಶದ ರಾಜಕೀಯವನ್ನು ಕುರಿತೇ ಆಗಿದೆ. ಅದರಲ್ಲೂ 1977 ರ ನಂತರದ ದೇಶದ ರಾಜಕೀಯದಲ್ಲಾದ ಮಹತ್ವದ ಘಟನಾ

ವಳಿಗಳನ್ನು ಗಮನದಲ್ಲಿಟ್ಟುಕೊಂಡು ಲೇಖನವನ್ನು ಬರೆಯಲಾಗಿದೆ. ಆರೋಗ್ಯವಂತ ಮನಸ್ಸಿನ ದೇಶದ ಬಗೆಗಿನ ಭವಿಷ್ಯದ ಚಿಂತನೆಯನ್ನು ಇಲ್ಲಿನ ಬಹಳಷ್ಟು ಲೇಖನಗಳು ನಡೆಸಿವೆ. ಸಾಧ್ಯವಾದ ಮಟ್ಟಿಗೂ ಪಕ್ಷವೊಂದರ ತುತೂರಿಯಾಗದೆ ಇಲ್ಲಿ ಲೇಖಕರು ಉಳಿಯಲು, ನಿಷ್ಪಕ್ಷಪಾತ ವಿಚಾರಧಾರೆಯನ್ನು ಪ್ರಕಟಪಡಿಸಲು ಯತ್ನಿಸಲಾಗಿದೆ. 1977 : ಚುನಾವಣೆಯ ಮುನ್ನೋಟ, ಸೆಕ್ಯುಲರ್ ಯಜ್ಞ : ಅರ್ಥ – ಅನರ್ಥ, ಹೊಸ ಬಣ್ಣ ತೊಟ್ಟ ಹಳೆಯ ವ್ಯವಸ್ಥೆ – ಈ ಲೇಖನಗಳು ಲೇಖಕರ ಸಮತೋಲನದಿಂದ ಕೂಡಿದ ರಾಜಕೀಯ ವಿವೇಚನೆಗೆ ಸಾಕ್ಷಿಯಾಗಿವೆ.

ಬಿ. ಪಿ. ಶಿವಾನಂದರಾವ್‌ರವರ 'ಸಾಹಿತ್ಯ ಮತ್ತು ಸಾಮಾಜಿಕ ಬದಲಾವಣೆ' ಸಂಕೀರ್ಣ ವಿಷಯುಕವಾದ ಹಾಗೂ ಅತ್ಯಂತ ವ್ಯಾಪಕವಾದ ವಿಷಯ ಪ್ರತಿಪಾದನೆಯ ಕಿರುಕೃತಿ,. ಪ್ರಬಂಧದ ವ್ಯಾಪ್ತಿ ತುಂಬಾ ಹಿರಿದಾಗಿರುವುದರಿಂದ ವಿಷಯದ ಹಿಡಿತ ತಪ್ಪಿ ಲೇಖಕರು ತೀರಾ ಜಾಳುಜಾಳಾಗಿ ವಿಷಯ ನಿರೂಪಣೆ ಮಾಡಿರುವರು. ಸಾಹಿತ್ಯ ನಡೆದು ಬಂದದಾರಿ, ಮಾನವ ಜನಾಂಗದ ಗತಕಾಲದ ಇತಿಹಾಸ, ನಾಗರೀಕತೆ ಹಾಗೂ ಸಂಸ್ಕೃತಿ, ಪಾಶ್ಚಾತ್ಯ ಸಾಹಿತ್ಯ ವಿವೇಚನೆ, ಭಾರತೀಯ ತತ್ತ್ವಸಿದ್ಧಾಂತ ಭಾರತೀಯ ಸಾಹಿತ್ಯ, ಭಾರತೀಯ ಕಲಾಜಗತ್ತಿನ ಸಿದ್ಧಿ ಸಾಧನೆಗಳು – ಹೀಗೆ ಸಂಕೀರ್ಣ ವಿಷಯಗಳು ವಿವೇಚಿತವಾಗಿದ್ದು ಇಲ್ಲಿ ಯಾವುದಕ್ಕೂ ವಿವರ ನೀಡಲು ಅವಕಾಶವಾಗಿಯೇ ಇಲ್ಲ. ಲೇಖಕರ ಉದ್ದೇಶಿತ ಗುರಿ ದೊಡ್ಡದು, ಆದರೆ ಅದಕ್ಕೆ ತಕ್ಕುದಾದ ಪೂರ್ವಸಿದ್ಧತೆ ಸಾಲದು.

'ತೂರಿದ ಚಿಂತನಗಳು' ರಾ.ಯ. ಧಾರವಾಡಕರ ಅವರು ಆಗಾಗ್ಗೆ ಪತ್ರಿಕೆಗಳಿಗೆ ಹಾಗೂ ಆಕಾಶವಾಣಿಗೆ ಬರೆದ ಪ್ರಬಂಧಗಳ ಸಂಕಲನ. ಲಲಿತ ಶೈಲಿಯ ಇಲ್ಲಿನ ಪ್ರಬಂಧಗಳು 'ಅನುಭವಜನ್ಯವಾದ ಹಲವು ವಿಷಯಗಳನ್ನು ಜೀವನ ಮಾರ್ಗದರ್ಶಿಯಾಗುವ ದೃಷ್ಟಿಯಲ್ಲಿ ಹೇಳಲಾಗಿದೆ'. ಇಲ್ಲಿನ ಎಷ್ಟೋ ವಿಷಯಗಳು ಜಗತ್ತಿನ ಶ್ರೇಷ್ಠ ಕವಿ-ದಾರ್ಶನಿಕರ ಜನಪ್ರಿಯ ಉಕ್ತಿಗಳಿಂದ, ಜೀವಿತ ಕಥೆಗಳಿಂದ ವಿವರಣೆಗೊಂಡಿವೆ. ಹೀಗಾಗಿ ಇಲ್ಲಿನ ಪ್ರಬಂಧಗಳು ಕೇವಲ ಹರಟೆಗಳಾಗದೆ ಮನರಂಜನೆಯೊಂದಿಗೆ ತಿಳುವಳಿಕೆಯನ್ನೂ ನೀಡುವ ಗುರಿ ಹೊಂದಿವೆ. ನಮ್ಮ ಜ್ಞಾನದ ದಿಗಂತವನ್ನು ವಿಸ್ತರಿಸಲು ಬುದ್ಧ, ಬಸವ, ಪುರಂದರ, ಟಿಳಕ, ಗಾಂಧೀಜಿ - ಈ ಮಹಾಪುರುಷರ ಬೋಧೆ ಹಾಗೂ ಜೀವಿತ ಸಂಗತಿಗಳನ್ನು ಪ್ರಬಂಧ ರೂಪದಲ್ಲಿ ಹೇಳಲಾಗಿದೆ.

ರಾ. ಯ. ಧಾರವಾಡಕರರ ಪ್ರಬಂಧ ಸಂಕಲನದ ಹರವು ದೊಡ್ಡದು. ಪ್ರಣಯ, ಚಿಂತೆ, ಸಾಲ, ಭ್ರಷ್ಟಾಚಾರ, ಯಶಸ್ಸು, ಸೌಜನ್ಯ, ದಾಂಪತ್ಯ, ಸಂತಾನ– ಹೀಗೆ ಅದರ ವ್ಯಾಪ್ತಿ ದೊಡ್ಡದು. ಯಾವುದೇ ವಿಷಯವನ್ನು ನೀರಸವಾಗದಂತೆ ಸರಳವಾಗಿ, ಉಪದೇಶಾತ್ಮಕವಾಗಿ ಹಲವು ಹತ್ತು ನಿದರ್ಶನಗಳೊಡನೆ ಸುಲಲಿತವಾಗಿ ಹೇಳುವ ಶೈಲಿ ಅವರಿಗೆ ಕರಗತವಾಗಿದೆ.

ಪ್ರವಾಸ ಸಾಹಿತ್ಯ

ಶಿವರಾಮಕಾರಂತರ 'ಪೂರ್ವದಿಂದ ಅತ್ಯಪೂರ್ವಕ್ಕೆ' ಪ್ರವಾಸ ಸಾಹಿತ್ಯ ಅವರ ನಾಲ್ಕನೆಯ ಪ್ರವಾಸ ಕಥನ. ಶ್ರೀಲಂಕಾ, ನೇಪಾಳ, ಬೀರುತ್, ಇರಾನ್, ಅಫ್ಘಾನಿಸ್ಥಾನ್, ಹಾಂಕಾಂಗ್ ಹಾಗೂ ಜಪಾನು ಈ ದೇಶಗಳಲ್ಲಿ ಕಾರಂತರು ಆಗಾಗ್ಗೆ ನಡೆಸಿದ ಪ್ರವಾಸಾನುಭವಗಳ ಕಥನ. ನಿಶ್ಚಿತ ಅವಧಿಯ ಈ ಪ್ರವಾಸಗಳೆಲ್ಲವೂ ಸುದೀರ್ಘದಲ್ಲ. ಇಲ್ಲಿನ ಪ್ರವಾಸಗಳಲ್ಲಿ ಜಪಾನಿನ ಸಂದರ್ಶನ-ಹದಿನೇಳು ದಿವಸಗಳದ್ದು-ದೊಡ್ಡದು. ಉಳಿದುವೆಲ್ಲಾ ಚುಟುಕಿನದು. ಕಾರಂತರು ಓರ್ವ ಸಾಮಾನ್ಯ ಟೂರಿಸ್ಟ್ ಆಗಿ ದೇಶವನ್ನು ಸುತ್ತಲು ಹೊರಡುವುದಿಲ್ಲ. ಸಂಚಾರ ಅವರ ಬದುಕಿನ ಒಂದು ಅಂಗ. ಸಂಚಾರ ಅವರ ಸಾಹಿತ್ಯಕ್ಕೆ ಜೀವಕಳೆಯನ್ನು ಒದಗಿಸಿದೆ. ಸಂಚಾರ ಅವರೇ ಹೇಳಿರುವಂತೆ, ಅವರ ಪಾಲಿನ ನಿತ್ಯದ ವಿದ್ಯಾಭ್ಯಾಸ ಹೀಗಾಗಿ ಅವರು ನಡೆಸುವ ಒಂದೊಂದು ಪ್ರವಾಸವೂ ಒಂದು ವಿಶಿಷ್ಟ ಅನುಭವಗಳ ದಾಖಲೆಯಾಗಿದೆ. ಸಂಸ್ಕಾರಗೊಂಡ ಅವರ ಕಣ್ಣು-ಮನಗಳು ತಾವು ನೋಡಿದ ಜನರನ್ನು, ಪರಿಸರವನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಥೈಸಲು ಪ್ರಯತ್ನಿಸಿವೆ. ಕಾಲದ ಪರಿಮಿತಿಯಲ್ಲಿ ಜನರನ್ನು ಹಾಗೂ ಅವರ ಒಲವು-ನಿಲವುಗಳನ್ನು ಗ್ರಹಿಸಲು ಸಾಧ್ಯವಾಗದಾದಾಗ, ತನ್ನ ಪರಿಮಿತಿಯಲ್ಲೇ ಆಯಾ ದೇಶದ ಸಾಂಸ್ಕೃತಿಕ ಸಂಪತ್ತನ್ನು ಅರ್ಥೈಸಲು ಪ್ರಯತ್ನಿಸಿದೆ. ಕಾರಂತರು ತಾವು ನೋಡಿದ ದೇಶಗಳ ಪ್ರಾಚೀನ ಇತಿಹಾಸ, ವೀಕ್ಷಣಾರ್ಹ ಪ್ರಮುಖ ಸಂಗತಿಗಳು, ಕಲೆ, ಸಂಗೀತ–ನೃತ್ಯ-ನಾಟಕಗಳು ಹೀಗೆ ಇವೆಲ್ಲವುಗಳ ಪರಿಚಯುವನ್ನು ಮಾಡಿಕೊಡುವುದರ ಮೂಲಕ ಓದುಗನ ಜ್ಞಾನದ ಪರಿಧಿಯನ್ನು ವಿಸ್ತರಿಸಿರುವರು. ಅಫ್ಘಾನೀಸ್ಥಾನದ ಬಾಮಿಯಾದಲ್ಲಿರುವ ಎರಡು ಬೃಹತ್ ಗೊಮ್ಮಟಗಳನ್ನು ನೋಡಲು ಹೊರಟ ಅವರ ಯುವಕರನ್ನೂ ನಾಚಿಸುವ ಕುತೂಹಲಾಸಕ್ತಿ ಮೆಚ್ಚುವಂತಹದು. ನಮ್ಮಲ್ಲಿ ಉದ್ಯಮಿಗಳು ವಿವಿಧ ರೀತಿಗಳಿಂದ ಲಾಭಗಳನ್ನು ಗಳಿಸುವ ಅಡ್ಡದಾರಿಗಳಲ್ಲಿ ಸಾಗಿರುವುದನ್ನೂ ಜಪಾನು ಈ ದಾರಿಯಲ್ಲಿ ತುಳಿಯದೆ-ದುಡಿಮೆ, ಸಂಶೋಧನೆ, ಗಿರಾಕಿಗಳ ಒಲುಮೆ, ಆಧುನಿಕತೆಯ ಪ್ರತಿಯೊಂದು ಲಾಭವನ್ನು ಬೆಳೆಯಿಸಿಕೊಂಡು ಜಗತ್ತನ್ನು ಸ್ಪರ್ಧಿಸುವ ದೇಶವಾಗಿ ಸಾಗುತ್ತಿರುವುದನ್ನೂ ಕಾರಂತರು ತುಲನೆ ಮಾಡಿನೋಡಿರುವರು. ನಾವು ಕಂಡಿರದ ದೇಶಗಳನ್ನು ತಿಳಿಯುವಲ್ಲಿ ಕಾರಂತರ ಈ ಪ್ರವಾಸ ಕಥನ ಸಹಾಯಕಾರಿಯಾಗಿದೆ.

ದೇ. ನಾ. ಶ್ರೀ. ಯವರ 'ಗಿರಿಕಂದರ ಮೋಹಿತರು' ಬಿಸಿನೆತ್ತರಿನ ಸಾಹಸಿಗಳು ಜೊತೆಗೂಡಿ ನಡೆಸಿದ ಸಾಹಸಯಾತ್ರೆಗಳ ಕಥನ. ಇದರಲ್ಲಿ ಕುದುರೆಮುಖ ಸಾಹಸ ಯಾತ್ರೆ, ಮುಳ್ಳಯ್ಯನ ಗಿರಿಯಾರೋಹಣ, ಸೈಲೆಂಟ್ ವ್ಯಾಲಿಯಲ್ಲಿ 'ಸ್ಪಾರ್ಕ್' ಕಿಡಿಗಳು ಎಂಬ ಮೂರು ಪ್ರಬಂಧಗಳಿವೆ. ಪ್ರಕೃತಿಯನ್ನು ಪ್ರೇಮಿಸುವ, ಸಾಹಸ ಪ್ರವೃತ್ತಿಯ ಒಂದೆರಡು ಹಿಡಿ ಯುವಕರ ಸಂಸ್ಥೆ 'ಸ್ಪಾರ್ಕ್' (ಸೊಸೈಟಿ ಫಾರ್

ಪ್ರಾಪಗೇಷನ್ ಅಂಡ್ ಆಕ್ಟಿವೇಶನ್ ಆಫ್ ರಾಕ್ ಕ್ಲೈಂಬಿಂಗ್). ಯುವಕರನ್ನು ಉತ್ತೇಜಿಸುವಲ್ಲಿ ದೇ. ನಾ. ಶ್ರೀ. ಅವರ ಸಾಹಸಯಾತ್ರೆ ಪರಿಣಾಮಕಾರಿಯಾಗಿದೆ. ಲೇಖಕರಿಗೆ ತಮ್ಮ ಅನುಭವಗಳ ನಿರೂಪಣೆಗೆ ಬೇಕಾದ ಆಕರ್ಷಕ ಶೈಲಿಯಿದೆ. ಹೀಗಾಗಿ ಅವರ ಬರವಣಿಗೆ ಜೀವಂತವಾಗಿದೆ.

ಎಂ. ಕೆ. ಲಿಂಗಯ್ಯನವರ 'ಮೈಸೂರು ಒಂದು ಅಧ್ಯಯನ' ಪ್ರವಾಸ ಸಾಹಿತ್ಯಕ್ಕೆ ಸೇರುವ ಕೃತಿಯಲ್ಲ. ಮೈಸೂರು ಜಗತ್ತಿನ ಸುಂದರ ನಗರಗಳಲ್ಲಿ ಒಂದು. ಅದಕ್ಕೆ ಅದರದೇ ಆದ ರಾಜಕೀಯ ಇತಿಹಾಸವಿದೆ. ಸಾಂಸ್ಕೃತಿಕವಾಗಿ ಮೈಸೂರು ಗಮನಾರ್ಹ ಕೊಡುಗೆಯನ್ನು ಕೊಟ್ಟಿದ್ದರೂ ಇತ್ತೀಚಿನ ದಿನಗಳಲ್ಲಿ ಅದು ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಮೈಸೂರನ್ನು ಒಂದು ಮಾದರಿ ನಗರವನ್ನಾಗಿ ಮಾಡಬೇಕೆಂಬ ತಮ್ಮ ಕನಸನ್ನು ನನಸನ್ನಾಗಿ ಮಾಡಲು ದುಡಿಯುತ್ತಿರುವ ಲೇಖಕರು ಮೈಸೂರು ನಗರವನ್ನು ಕುರಿತ ತಮ್ಮ ವ್ಯಾಪಕವಾದ ಅಧ್ಯಯನವನ್ನು ಈ ಕೃತಿಯಲ್ಲಿ ಕೊಟ್ಟಿರುವರು. ಐತಿಹಾಸಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ವಾಣಿಜ್ಯ ಹಾಗೂ ಕೈಗಾರಿಕೆಯಿಂದಾಗಿ, ಕಲೆ-ಸಾಹಿತ್ಯಗಳಿಂದಾಗಿ ಮೈಸೂರು ತನ್ನದೇ ಆದ ಕೊಡುಗೆಯನ್ನು ವಿಶಿಷ್ಟರೂಪದಲ್ಲಿ ಕೊಟ್ಟಿರುವುದನ್ನು ಲೇಖಕರು ವಿಷದವಾಗಿ ಈ ಕೃತಿಯಲ್ಲಿ ನಿರೂಪಿಸಿರುವರು. ಸಾಂಸ್ಕೃತಿಕ ಇತಿಹಾಸದ ವಿದ್ಯಾರ್ಥಿಗೆ ಈ ಕೃತಿ ಬಹಳ ಉಪಯುಕ್ತ ಮಾಹಿತಿ ಒದಗಿಸುತ್ತದೆ.

ರಂಜನ ಭಟ್ಟರ 'ಕುಬೇರ ರಾಜ್ಯದ ಚಿತ್ರ-ವಿಚಿತ್ರ'ದಲ್ಲಿ ಅಮೆರಿಕೆಯ ವಾಸ-ಪ್ರವಾಸದ ಅನುಭವ ನಿರೂಪಣೆಯ ಸಾಹಸ ಚಿತ್ರಣವಿದೆ. ಲೇಖಕರು ಅಮೆರಿಕವನ್ನು ಕುಬೇರನ ರಾಜ್ಯವೆಂದು ಭಾವಿಸಿದ್ದು, ಪುರಾತನ–ಸನಾತನವಾದ ನಮ್ಮ ದೇಶದಿಂದ ಹೋದ ಅವರಿಗೆ ಅಲ್ಲಿಯ ಜನಜೀವನ ರೀತಿ--ರಿವಾಜು ಎಲ್ಲವು ಚಿತ್ರವಿಚಿತ್ರವಾಗಿ ಕಂಡಿವೆ. ಎರಡು ಬಾರಿ ಅಮೆರಿಕೆಯ ಪ್ರವಾಸ ಕೈಗೊಂಡ ಲೇಖಕರು ಅಲ್ಲಿಯ ವಾಸ ಪ್ರವಾಸಗಳಲ್ಲಿ ತಮ್ಮನ್ನು ತಟ್ಟಿದ ತಡವಿದ ಅನುಭವಗಳ ನಿರೂಪಣೆಯನ್ನು ಇಲ್ಲಿ ಮಾಡಿರುವರು. ಲೇಖಕರೇ ಹೇಳುವಂತೆ "ಅಮೆರಿಕೆಯದ್ದಾಗಲೀ ಬೇರೆ ಯಾವ ದೇಶದ್ದಾಗಲೀ ಇತಿಹಾಸ ಭೂಗೋಲ ಇಲ್ಲಿಲ್ಲ. ಆ ದೇಶದ ಅಥವಾ ಬೇರಾವ ದೇಶದ ಅಂಕೆ ಸಂಖ್ಯೆಗಳ ಕೋಷ್ಟಕವೂ ಇಲ್ಲಿಲ್ಲ. ಹೊಸ ಜಗತ್ತಿನ ಹೂಬಿಸಿಲಲ್ಲಿ ಹಳೆಯ ಜಗತ್ತಿನಿಂದ ಹೋದ ತೆರೆದೆದೆಯ ಆಗಂತುಕನಿಗೆ ಅನಿಸಿದ ಭಾವನೆಗಳ, ಮೂಡಿದ ಅನುಭವಗಳ ಸಂಕಲನ ಇಲ್ಲಿದೆ, ತೋರಿದ ಅನುಭವಗಳಿಗೆ, ಮೂಡಿದ ಭಾವನೆಗಳಿಗೆ ಮಾತಿನ ವೇಷ ತೊಡಿಸುವ ಸಾಹಸ ಇಲ್ಲಿದೆ!" ಎರಡು ಭಾಗಗಳಲ್ಲಿ ಪ್ರವಾಸಾನುಭವ ತನ್ನ ಹೆಜ್ಜೆ ಮೂಡಿಸಿದೆ.

ಕುಬೇರನ ರಾಜ್ಯದಲ್ಲಿ ಎಲ್ಲವೂ ಎಲ್ಲರೂ ಸರಿಯಾಗಿಲ್ಲ, ನೆಮ್ಮದಿಯಿಂದಿಲ್ಲ, ಶ್ರೀಮಂತ ದೇಶದ ಜನರ ವಿಲಾಸೀ ಬದುಕು, ಮಿ. ಗೋಲ್ಡ್ ವಿಕ್‌ರಂತಹ ವೃದ್ಧರ

ಹತಾಶೆಯ ಬದುಕು, ಮೈಮುರಿಯುವಂತೆ ದುಡಿದರೂ ಪಾವೆಲ್ಲರಂತಹ ಶ್ರೀಮಂತ ರೈತರ ನೆಮ್ಮದಿಯಿಲ್ಲದ ಬದುಕು–ಅವರ ನೋವಿನ ಎಳೆಯನ್ನು ಸೂಚಿಸುತ್ತದೆ. ಕುಬೇರ ರಾಜ್ಯದ ಜಾಹಿರಾತು ಪ್ರಪಂಚದ ಚಿತ್ರ ವಿಚಿತ್ರ ಆಕರ್ಷಣೆಗಳು ನಮ್ಮನ್ನು ಗಾಬರಿಗೊಳಿಸುತ್ತವೆ. ಈ ಶ್ರೀಮಂತ ರಾಜ್ಯದಲ್ಲಿ ಒಬ್ಬರು ಸಾಯುವುದೂ ಬದುಕಿರುವವರ ಪಾಲಿಗೆ ಎಷ್ಟು ದುಬಾರಿ ಎಂಬ ಕಟುಸತ್ಯ ಮೃತ್ಯುವಿನ ಸಮ್ಮುಖದಲ್ಲಿ ಎಂಬ ಅಧ್ಯಾಯದಲ್ಲಿ ವ್ಯಕ್ತಗೊಂಡಿದೆ. ಶ್ರೀಮಂತ ಮನೆತನದಲ್ಲಿ ಹುಟ್ಟಿಬಂದೂ ತಮ್ಮನ್ನು ತಾವೇ ಅರ್ಪಿಸಿಕೊಂಡು ಸಂತರಂತೆ ಜೀವನ ನಡೆಸುವ ಬರ್ಟ್ ದಂಪತಿಗಳು ; ಗಾರ್ಡನ್ನರ ಅಜ್ಞಾನದ ದುರುಪಯೋಗ ಮಾಡುವ ಡಾಂಟೆ ಯಂತಹ ಅಪ್ರಮಾಣಿಕರು ; ಡಾನ್ ನೀಲೆಯಂತಹ ನಡುವಯಸ್ಸಿನ ಯುವಕರ ಹತಾಶೆಯ ಪ್ರೇಮ ಪ್ರಕರಣಗಳು–ಹೀಗೆ ಈ ಕುಬೇರ ರಾಜ್ಯದ ಚಿತ್ರ ವಿಚಿತ್ರ ಪ್ರಜೆಗಳು ನಮ್ಮ ಮನಸ್ಸನ್ನು ಸೆಳೆಯುವರು.

ಕೃತಿಯ ಎರಡನೆಯ ಭಾಗದಲ್ಲಿ 'ಮನೆ ಆತಿಥ್ಯ ಸಂಸ್ಥೆ ' Home Hospitality Association) ನೆರವಿನಿಂದ ಅಮೆರಿಕದ ಸುತ್ತಮುತ್ತ ಪ್ರವಾಸ ಕೈಗೊಂಡ ಲೇಖಕರ ಅನುಭವ ವಿವರಣೆಗೊಂಡಿದೆ. ಮೊದಲ ಭಾಗದಲ್ಲಿ ಜನ–ಮನವನ್ನು ಲೇಖಕರು ಅರಿಯಲು ಪ್ರಯತ್ನಿಸಿದಂತೆ ಎರಡನೆಯ ಭಾಗದಲ್ಲೂ ಮಾಡಲಾಗಿದೆ. ಅಮೆರಿಕದ ಜನರ ಮೋಜಿನ ಜೀವನದ ಜೊತೆಗೆ ಅವರ ಶಿಸ್ತಿನ ಜೀವನವನ್ನೂ, ಪರದೇಶಿಗಳಿಗೆ ಅವರು ನೀಡುವ ಆತಿಥ್ಯವನ್ನೂ ತೋರು ಸ್ನೇಹ–ಸೌಹಾರ್ದ ಭಾವಗಳನ್ನೂ ಚೆನ್ನಾಗಿ ಲೇಖಕರು ಪರಿಚಯಿಸಿರುವರು. ಕನ್ನಡ ಕವಿಗಳ ಭಾವ ಪೂರ್ಣ ಕವಿತೆಯ ಸಾಲುಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವ ಲೇಖಕರು ತಮ್ಮ ಅನುಭವಗಳನ್ನು ಒಮ್ಮೊಮ್ಮೆ ಕಾವ್ಯಾತ್ಮಕವಾಗಿ ಬಣ್ಣಿಸಿರುವುದೂ ಉಂಟು. ಅಮೆರಿಕದ ಜನರ ಜೊತೆ ಅವರ ಕುಟುಂಬದ ಜೊತೆ ಬೆರೆಯುವುದರ ಮೂಲಕ ಲೇಖಕರು ಅಲ್ಲಿನ ಸಾಮಾಜಿಕ ಹಾಗೂ ಕೌಟುಂಬಿಕ ಜೀವನದ ಚಿತ್ರವನ್ನೂ ಅದರಲ್ಲಿನ ನೋವು ನಲಿವುಗಳನ್ನೂ ಕೊಟ್ಟಿರುವರು. ಬೇರೆಯವರಲ್ಲಿ ದೊರೆಯದ ಈ ಚಿತ್ರ ಈ ಪ್ರವಾಸಕಥನದಲ್ಲಿ ಕಂಡುಬರುವುದು ಇದರ ವಿಶೇಷವೆನ್ನಬಹುದು.

ಕೆ. ಅನಂತರಾಮು ಅವರ 'ಸಕ್ಕರೆಯ ಸೀಮೆ' ಪ್ರವಾಸ ಕಥನವೆಂದು ಹೇಳ ಬಹುದಾದರೂ ಅಷ್ಟಕ್ಕೇ ಅದರ ವ್ಯಾಪ್ತಿ ಸೀಮಿತವಾಗಿಲ್ಲ. ಮಂಡ್ಯ ಜಿಲ್ಲೆ ಸಕ್ಕರೆಯ ಸೀಮೆ. ಈ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲ ಪ್ರವಾಸೀ ತಾಣಗಳನ್ನು ಮೂರು ವರುಷದ ಅವಧಿಯಲ್ಲಿ ಸುತ್ತಾಡಿ ತಮ್ಮ ಆ ಪ್ರವಾಸಾನುಭವವನ್ನು ಸ್ವಾರಸ್ಯಕರವಾಗಿ ಲೇಖಕರು ನಿರೂಪಿಸಿರುವರು. ಇಲ್ಲಿ ಪ್ರವಾಸಿಯೊಬ್ಬನ ಅನುಭವ ಪರಿಚಯಾತ್ಮಕ ನೆಲೆಯ ಅನುಭವವಷ್ಟೇ ನಿರೂಪಣೆಗೊಳ್ಳುವುದಿಲ್ಲ. ಅದರ ಜೊತೆಗೆ ಇತಿಹಾಸ, ಸ್ಥಳಪುರಾಣ, ಜಾನಪದ ನಂಬಿಕೆಗಳು, ಗಾದೆಗಳು–ಹೀಗೆ

ವೈವಿಧ್ಯಮಯವಾಗಿ ವಿಷಯ ತನ್ನ ತೆಕ್ಕೆ ಬಿಚ್ಚುತ್ತದೆ. ಸ್ಥಳನಾಮಗಳು, ಗ್ರಾಮ ದೇವತೆಗಳು, ಹಬ್ಬಗಳಲ್ಲಿನ ವೈಶಿಷ್ಟ್ಯಗಳು–ಹೀಗೆ ಗ್ರಾಮೀಣ ಬದುಕಿನ ಎಲ್ಲ ಸಾಂಸ್ಕೃತಿಕ ವಿವರಗಳು ಇಲ್ಲಿ ಸೇರ್ಪಡೆಯಾಗಿವೆ. ಈ ದೃಷ್ಟಿಯಿಂದ ಇದೊಂದು ವಿಶಿಷ್ಟ ಜಾನಪದ ವಿಶ್ವಕೋಶ. ಪ್ರವಾಸ ಕಥನದ ಹೆಸರಿನಲ್ಲಿ ಇಂತಹ ಮಹತ್ವದ ಕೊಡುಗೆಯನ್ನು ಕೊಟ್ಟ ಲೇಖಕರು ಅಭಿನಂದನಾರ್ಹರು.

ಸಂಪಾದಿತ ಕೃತಿಗಳು

ಎಸ್. ಶಿವಣ್ಣ

1982 ರಲ್ಲಿ ಪ್ರಕಟವಾದ ಸಂಪಾದಿತ ಕೃತಿಗಳ ಸಂಖ್ಯೆ ನನ್ನ ಗಮನಕ್ಕೆ ಬಂದಂತೆ ಒಟ್ಟು 31 (+3). [ಇದರಲ್ಲಿ ನೇರವಾಗಿ ಪರಿಶೀಲನೆಗೆ ಒಳಪಟ್ಟ ಕೃತಿಗಳು 17 ಮಾತ್ರ] ಇಲ್ಲಿನ ಸಂಖ್ಯೆಯಲ್ಲಿ ಮೂಲ ಹಾಗೂ ಗದ್ಯಾನುವಾದ ಗಳನ್ನು ಒಳಗೊಂಡ ಕೃತಿಗಳೂ ಸೇರಿವೆ. ಧರ್ಮದ ರೀತಿಯಲ್ಲಿ ವಿಭಾಗಿಸುವು ದಾದರೆ

ವೀರಶೈವ ಕೃತಿಗಳು 20 (+3).

ಜೈನ	—,,—	6
ವೈದಿಕ	—,,—	5

ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ವಿವರ.

	ಪ್ರಕಾರ	ಜೈನ	ವೀರಶೈವ	ವೈದಿಕ
1.	ಕೀರ್ತನೆ	—	—	1
2.	ಗದ್ಯ	1	1	—
3.	ಚಂಪು	2	1	—
4.	ತಾರಾವಳಿ	—	1 (+ 3)	—
5.	ತ್ರಿಪದಿ	—	2	—
6.	ಯಕ್ಷಗಾನ	—	1	I
7.	ರಗಳೆ	—	3	—
8.	ವಚನ	—	4	—
9.	ವೃತ್ತ	—	1	—
10.	ಷಟ್ಪದಿ	1 (ಭಾ)	1 (ವಾ)	3 (ಭಾ)
11.	ಸ್ವರ ವಚನ	—	3	—
12.	ಸಾಂಗತ್ಯ	2	2	—

ಪ್ರಕಟಣಾ ವಿವರ

1) ಸಂಸ್ಥೆಗಳು–

ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು)	4
ಕರ್ನಾಟಕ ವಿಶ್ವವಿದ್ಯಾಲಯ (ಧಾರವಾಡ)	1
ಕನ್ನಡ ಸಾಹಿತ್ಯ ಪರಿಷತ್ತು (ಬೆಂಗಳೂರು)	3
ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ (ಬೆಂಗಳೂರು)	1

2) ಮಠಗಳು—

ಬೃಹನ್ಮಠ, ಚಿತ್ರದುರ್ಗ	1
ಮೂರು ಸಾವಿರಮಠ, ಹುಬ್ಬಳ್ಳಿ	2
ಹಂಪೆ – ಕೊಟ್ಟೂರಿನ ಮಠ, ಹಂಪೆ-ಬಳ್ಳಾರಿ	2
ಸರ್ಪಭೂಷಣಮಠ, ಬೆಂಗಳೂರು	1
ತೋಂಟದಾರ್ಯ ಮಠ, ಗದಗ	5

ಉಳಿದ ಕೃತಿಗಳನ್ನು ವೈಯಕ್ತಿಕ ವ್ಯಕ್ತಿಗಳು ಪ್ರಕಟಿಸಿದ್ದಾರೆ.

ಈ ವರ್ಷ ತಾರಾವಳಿ, ಸ್ವರವಚನ (= ತತ್ತ್ವಪದ, ಡಂಗುರಪದ ಇ), ಯಕ್ಷಗಾನ ಹಾಗೂ ವಚನ ಸಂಕಲನ ಪ್ರಕಾರದ ಕೃತಿಗಳ ಪ್ರಕಟಣೆ ಗಮನಾರ್ಹ. 'ವಚನ ಶಾಸ್ತ್ರಸಾರ' (ಗದಗದ ತೋಂಟದಾರ್ಯ ಮಠ) ಈ ವರ್ಷದ ಪ್ರಕಟಣೆಗಳಲ್ಲಿ ಎದ್ದು ಕಾಣುವ ಕೃತಿ. ಸಂಪಾದನಾರಂಗಕ್ಕೆ ಹಲವರು ಧೈರ್ಯವಹಿಸಿ ಪ್ರವೇಶಿಸಿದ್ದಾರೆ. ರಗಳೆ ಪ್ರಕಾರಕ್ಕೆ ಸೇರಿದ ಕೃತಿಯೊಂದು ಮಾತ್ರ ಶ್ರೀಮತಿ ಪಾರ್ವತಮ್ಮ ಚಂದ್ರಣ್ಣನವರಿಂದ ಸಂಪಾದಿತವಾಗಿದೆ.

ಹರಿಹರ ದೇವನ ಶಿವಶರಣೆಯರ ನಾಲ್ಕು ರಗಳೆಗಳು (ಸಂ) ಪಾರ್ವತಮ್ಮ ಚಂದ್ರಣ್ಣ.

ಪುರಾತನ/ನೂತನ ಶಿವಶರಣ/ಶರಣೆಯರ ಜೀವನವನ್ನು ಕೃತಿಯ ವಸ್ತುವನ್ನಾಗಿ ಸ್ವೀಕರಿಸಿ, ರಗಳೆಯ ಛಂದೋವಾಹಿನಿಯಲ್ಲಿ ನಿರರ್ಗಳವಾಗಿ ಕಥಿಸಿ, 'ರಗಳೆ'ಗೆ ಕನ್ನಡ ಕಾವ್ಯ ಮಾರ್ಗದಲ್ಲಿ ವಿಶೇಷ ಸ್ಥಾನವನ್ನು ಗಳಿಸಿಕೊಟ್ಟ ಕವಿ ಹಂಪೆಯ ಹರಿಹರ. ತತ್ಕಾಲದಲ್ಲಿ ರಗಳೆಗಳಲ್ಲಿ ಬರೆದು 'ರಗಳೆಯ ಕವಿ' ಎಂಬ ಅಪಪ್ರಥೆಗೆ ಈಡಾದರೂ ಅವನ ಕೀರ್ತಿ ಇಂದಿನವರೆಗೂ ಉಳಿದಿರುವುದು ರಗಳೆಯ ರಚನೆಗಳಿಂದಲೇ. ಡಾ॥ ಡಿ. ಎಲ್. ನರಸಿಂಹಾಚಾರ್ಯರಂತೆ ಹರಿಹರನ 'ಚಿತ್ತವೃತ್ತಿಯ ವರ್ಣಚಿತ್ರ ಈ ರಗಳೆಗಳು'.

ಪ್ರಸ್ತುತ ಸಂಪಾದಿತ ಕೃತಿಯಲ್ಲಿ ಹರಿಹರನ 4 ರಗಳೆಗಳಿವೆ.

1) ಕೋಳೂರ ಕೊಡಗೂಸಿನ ರಗಳೆ

2) ಹೇರೂರ ಹೆಣ್ಣಿನ ರಗಳೆ

3) ನಿಂಬಿಯಕ್ಕನ ರಗಳೆ
4) ಮಹಾದೇವಿಯಕ್ಕನ ರಗಳೆ

ಇವುಗಳಲ್ಲಿ ಮೊದಲ ಮೂರು ರಗಳೆಗಳಲ್ಲಿ ಸ್ಥಲವಿಭಾಗವಿಲ್ಲ. ನಾಲ್ಕನೆಯ ರಗಳೆಯಲ್ಲಿ 7 ಸ್ಥಲಗಳಿದ್ದು 2, 4, 6 ನೆಯ ಸ್ಥಲಗಳು ಗದ್ಯದಲ್ಲಿವೆ.

ಪ್ರಸ್ತಾವನೆಯಲ್ಲಿ ಹರಿಹರನ ಬಗೆಗೆ ಸಂಕ್ಷಿಪ್ತವಾದ ವಿವರಣೆ ಇದೆ, ಆನಂತರ 4 ರಗಳೆಗಳ ಕಥಾಸಾರವನ್ನು ವಿವರವಾಗಿ ಕೊಟ್ಟಿದೆ. ಕೊನೆಯಲ್ಲಿ ಕಠಿಣ ಶಬ್ದಗಳ ಅರ್ಥವಿದೆ.

ಪ್ರಸ್ತುತ ಸಂಪಾದಕಿಯವರು ಕೃತಿ ಸಂಪಾದನೆಗೆ ಡಾ॥ ಫ. ಗು. ಹಳಕಟ್ಟಿ, ಡಾ॥ ಎಂ. ಎಸ್. ಸುಂಕಾಪುರ ಅವರಿಂದ ಸಂಪಾದಿತವಾದ ಕೃತಿಗಳನ್ನು ಆಧರಿಸಿರುವುದಾಗಿ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಫ. ಗು. ಹಳಕಟ್ಟಿಯವರು ಪ್ರಸ್ತುತ ಸಂಕಲನದಲ್ಲಿನ ಯಾವುದೇ ರಗಳೆಯನ್ನಾಗಲಿ ಪ್ರಕಟಿಸಿಲ್ಲ. ಕೋಳೂರು ಕೊಡಗೂಸು (1931) ಮತ್ತು ಮಹಾದೇವಿಯಕ್ಕನ ರಗಳೆ (1933) ಗಳನ್ನು ಮೊದಲು ಬೆಳಕಿಗೆ ತಂದವರು ಚನ್ನಮಲ್ಲಿಕಾರ್ಜುನ ಮಾಸ್ತರ, ಶಿರಾಳಕೊಪ್ಪ ಅವರು. ಹೇರೂರ ಹೆಂಗೂಸು ಹಾಗು ನಿಂಬಿಯಕ್ಕನ ರಗಳೆ (1952) ಗಳನ್ನು ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ಮೊದಲು ಪ್ರಕಟಿಸಿದರು. ಈ ಎಲ್ಲ ಹಾಗು ಇತರ ರಗಳೆಗಳನ್ನು ಕೂಡಿಸಿ ಒಂದೇ ಸಂಪುಟದಲ್ಲಿ ಸಮಗ್ರವಾಗಿ ತಂದವರು ಎಂ. ಎಸ್. ಸುಂಕಾಪುರ ಅವರು. ಹೀಗಾಗಿ ಸಂಪಾದಕಿಯವರು ತಮ್ಮ ಪರಿಷ್ಕರಣಕ್ಕೆ ಬಳಸಿಕೊಂಡ ಪ್ರತಿ ಒಂದೇ ಎಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ ಸಂಪಾದಿತ ಕೃತಿಯಲ್ಲಿ ಎಲ್ಲಿಯೂ ಪಾಠಾಂತರಗಳನ್ನು ಸೂಚಿಸದಿರುವುದು ಮೇಲಿನ ಅಂಶಕ್ಕೆ ಮೌನಪುರಾವೆಯಂತಿದೆ.

ಈ ರೀತಿ ಒಂದೇ ಪ್ರತಿ ಆಧರಿಸಿ ಪ್ರಕಟಿಸುವಲ್ಲಿ ಅಲ್ಲಿಲ್ಲದ ಹಲವಾರು ಮುದ್ರಣ ದೋಷಗಳನ್ನು ಕೃತಿ ಒಳಗೊಳ್ಳುವಂತೆ ಮಾಡಿ ಪ್ರಕಟಗೊಳಿಸಿರುವ ಸಂಗತಿ ಸಂಪಾದಕಿಯವರ ಕೊಡುಗೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ರೀತಿಯ ಸಂಪಾದಿತ ಕೃತಿಗಳ ಮುದ್ರಣದಿಂದ ಓದುಗರ ಮೇಲೆ ಯಾವ ರೀತಿಯ ಪರಿಣಾಮವಾಗುವುದೆಂಬುನ್ನು ಪ್ರಕಾಶಕರು ತೀವ್ರವಾಗಿ ಯೋಚಿಸಬೇಕಾದ ಕಾಲ ಬಂದಿದೆ.

ಮಹಾದೇವಿಯಕ್ಕನ ರಗಳೆಯಿಂದ ಕೆಲವು ಛಂದೋ ದೋಷ ಹಾಗು ಮುದ್ರಣ ದೋಷಗಳನ್ನು ಈ ಮುಂದೆ ಸೂಚಿಸಿದೆ.

ಪುಟ 29ರಲ್ಲಿ ಪಂಕ್ತಿ 33–40ರ ಪ್ರತಿ ಪಂಕ್ತಿಯಲ್ಲೂ ಒಂದೊಂದು ಮಾತ್ರೆ ಕಡಿಮೆ ಇದೆ. (ಪ್ರತಿ ಸಾಲಿನ ಅಂತ್ಯದಲ್ಲೂ ಒಂದೊಂದು ದೀರ್ಘ ಚಿನ್ಹೆ ಬೇಕು.)

ಪುಟ	ಪಂಕ್ತಿ	ತಪ್ಪು	ಸರಿ
29	47	ನೊಪ್ಪಿರಲುಂ	ದೊಪ್ಪಿರಲು
30	59	ಪೋಗಿ	ಪೊಗಿ
30	78	ಮಂಗಕ್ಕರಸಿ ನಾಚಿ	ಮಂಗಕ್ಕರಸಿನಾಚಿ
31	87	ಸೊರೆ	ಸೊರೆ
31	89	ಪುಣ್ಯಾ	ಪುಣ್ಯಾ
52	13	ತಳಿ	ತಳ
52	20	ಬೆಳೆದು ರೋಜ	ಬೆಳೆದುರೋಜ
58	(ವೃತ್ತ)	ವಿದವೊ	ವಿಸರವೋ
60	4	ಬಿನ್ನೈಸೆ	ಬಿನ್ನೈಸೆ
61	27	ಪೋದದಕ್ಕೆ	ಪೋದವದಕ್ಕೆ
63	(ವೃತ್ತ)	ಸಂಸ್ಕೃತಿ	ಸಂಸ್ಕೃತಿ
65	63	ಸಂಗಮು	ಸಂಗವ
65	66	ಸರ್ವಭೂಷಣನಲ್ಲಿ	ಸರ್ವಭೂಷಣನ
65	66	ಗಿಳಿದು	ಗಿದು
65	67	ಪಿತರೆ	ಪಿತರಲ್ಲಿ
66	94	ಜೋಹ	ಚೋಹ
66	101–02	ಮಹದೇವ	ಮಹಾದೇವ
67	125	ದಿನವಿಲ್ಲ	ದಿನವೆಲ್ಲ
67	143	ಳತ್ತ	ಳಿತ್ತ
67	146	ನಿರುತೆ	ನಿರತೆ
67	150	ಪ್ರತಿಷ್ಟೆ	ಪ್ರತಿಷ್ಠೆ
67	156	ಶಂಭುವುಂ	ಶಂಭುವಂ
67	170	ಗಿರವಿಟ್ಟು	ಗಿರದಿಟ್ಟು
67	172	ದಿರವುಂ	ದಿರವಂ
71	24	ಎರಿಗೆ	ಎರಗೆ

ಮೊದಲ ಮೂರು ರಗಳೆಗಳಲ್ಲಿ ಸ್ಥಲವಿಭಾಗವಿರದಿದ್ದರೂ ಸ್ಥಲ ೧ ಎಂದು ಮುದ್ರಿತವಾಗಿದೆ. ಪರಿವಿಡಿಯಲ್ಲಿ ೨ ನೆಯ ರಗಳೆ ಹೇರೂರ ಹೆಂಗೂಸಿನ ರಗಳೆ ಎಂದಿದ್ದು ಕೃತಿಯಲ್ಲಿ ಅಚ್ಚಾಗಿರುವ ಶಿರೋನಾಮೆ ಪೇರೂರ ಹೆಣ್ಣಿನ ರಗಳೆ ಎಂದಾಗಿದೆ.

ಹರಿಹರದೇವನ ರಕ್ಷಾಶತಕ ಮತ್ತು ಪಂಪಾ ಶತಕ (ಸಂ) ಬಿ. ಸಿ. ಜವಳಿ

ಪಂಪಾಪುರದರಸ ವಿರೂಪಾಕ್ಷನ ಸಾಕ್ಷಾತ್ ಸಂಪುತ್ರ ಹಂಪೆಯ ಹರಿಹರ, ಮಾದರಸರ ಶಿಷ್ಯ. ಹಂಪೆಯಲ್ಲಿದ್ದು ಜೀವನದ ಬಹುಭಾಗವನ್ನು ವಿರೂಪಾಕ್ಷನ ದರ್ಶನ-ಪೂಜೆ-ಪ್ರಾರ್ಥನೆ ಕೃತಿರಚನೆಗಳಿಗಾಗಿ ಮೀಸಲಿಟ್ಟು ಕೃತಕೃತ್ಯನಾದವ. 'ಉಭಯಕವಿ ಕಮಲರವಿ' ಎನಿಸಿದ ರಾಘವಾಂಕ ಹರಿಹರನ ಸೋದರಳಿಯ.

ಹರಿಹರ ಹನ್ನೆರಡು/ಹದಿಮೂರನೆಯ ಶತಮಾನಗಳ ಸಂಧಿಕಾಲದವ. ಈತನ ಸಮಕಾಲೀನರು ದೋರಸಮುದ್ರದ ವೀರ ಬಲ್ಲಾಳ, ಕೆರೆಯ ಪದ್ಮರಸ, ಕುಮಾರ ಪದ್ಮರಸ ಇ. ರಗಳೆ, ವೃತ್ತ, ಕಂದ, ಚಂಪುಗಳನ್ನು ಬಳಸಿ ಕೃತಿರಚನೆ ಮಾಡಿದ್ದಾನೆ.

ಹರಿಹರನ ಪಂಪಾಶತಕ ಮತ್ತು ರಕ್ಷಾಶತಕಗಳು ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೊಂಡಗುಳಿ ಕೇಶಿರಾಜ (1107) ನ ಅನಂತರದ ಶತಕ ಪ್ರಕಾರಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ಈ ಎರಡು ಶತಕಗಳು ವೃತ್ತದಲ್ಲಿವೆ. ರಕ್ಷಾಶತಕದಲ್ಲಿ 101 ವೃತ್ತಗಳಿದ್ದರೆ ಪಂಪಾಶತಕದಲ್ಲಿ 103 ವೃತ್ತಗಳಿವೆ.

ಸಂಪಾದಕರು 2 ಶತಕಗಳನ್ನು ಸರಳಾನುವಾದ, ಕಾವ್ಯ ವಿಮರ್ಶೆ ಮತ್ತು ಟಿಪ್ಪಣಿ ಸಹಿತ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಶತಕಗಳ ವಸ್ತು ವಿವೇಚನೆ ಇದೆ.

ಕೃತಿ ಸಂಪಾದನೆಗೆ ಅಚ್ಚಿನ ಮೂರು ಪ್ರತಿಗಳನ್ನು ಆಧರಿಸಲಾಗಿದೆ. ಸಂಪಾದನೆಯಲ್ಲಿ ಱಕಾರವನ್ನು ಕೈ ಬಿಡಲಾಗಿದೆ.

ಕೃತಿಯಲ್ಲಿ ಹಲವಾರು ಅಚ್ಚಿನ ದೋಷ ಹಾಗೂ ಛಂದೋದೋಷಗಳಿದ್ದು ಕೆಲವನ್ನು ಸೂಚಿಸಿದೆ.

ಪುಟ	ವೃತ್ತ	ತಪ್ಪು	ಸರಿ
24	73	ಸುಖಿ	ಸಖಿ
27	82 (ಗ)	ಹಾಸ್ಯಾಸ್ವದ	ಹಾಸ್ಯಾಸ್ಪದ
28	ಅಡಿ ಟಿಪ್ಪಣಿ	ಹರಹರ	ಹರಿಹರ
29	87	ಪಾಲಾಕ್ಷ	ಫಾಲಾಕ್ಷ
29	88 (ಗ)	ವೋಮ	ವ್ಯೋಮ
30	89	ಭೀಮ ತ್ರ್ಯಕ್ಷ	ಭೀಮತ್ರ್ಯಕ್ಷ
30	89	ತ್ರಿಕಾಲಾ...ಮೂಲಿ	ಈ ಭಾಗದ ಅನುವಾದವಿಲ್ಲ
33	99	ರಕ್ಷಿ...	ವಿರೂಪಾಕ್ಷ ರಕ್ಷಿ...

ಪುಟ	ವೃತ್ತ	ತಪ್ಪು	ಸರಿ
45	38	ಸಾದರ	ಸಾವರ
47	45	ದುಖ	ದುಃಖ
47	45 (ಗ)	ಲೋಭ ಮೋಹ	ಲೋಭ, ಭಯ ಮೋಹ
48	47	ದೆಮೆ	ದೆವೆ
49	50	ಬಾಳ್ವಾರ್	ಬಾಳ್ವವರ್
49	51	ಶಿಪಾ	ಶಿವಾ
49	52	ಭೂೕಗಿ	ಭೋಗಿ
50	56	ಮದು	ಮಂದ
50	56	ನೊಲ್ಡು	ನೊಲ್ದು
50	56	ಷಂಪಾ	ಪಂಪಾ
51	57	ದಾಡಚಲಂ	ದಾಡನಚಲಂ
51	57 (ಗ)	ವ್ರಪಂಚ	ಪ್ರಪಂಚ
54	66	ಸೀರಿ	ಸಿರಿ
55	70	ಸಾಲ್ವದು	ಸಾಲ್ವುದು
64	99	ದ್ವಜ	ಧ್ವಜ
65	101–02	ಪಂಪಾಪುರ	ಪಂಪಾಪುರಾ
65	102	ಟ್ಟೊಗ	ಟ್ಟೊಡ

ಹಸ್ತಿಮಲ್ಲ ವಿರಚಿತ ಪೂರ್ವ ಪುರಾಣಂ (ಸಂ.) ಎಸ್. ಪಿ. ಪಾಟೀಲ

ಹಸ್ತಿಮಲ್ಲನ ಪೂರ್ವ ಪುರಾಣ ಗದ್ಯದಲ್ಲಿದೆ. ಇದು ಈಗ ಲಭಿಸಿರುವ 'ವಡ್ಡಾರಾಧನೆ' ಹಾಗೂ 'ಚಾವುಂಡರಾಯ ಪುರಾಣ'ಗಳ ಸಾಲಿಗೆ ಸೇರುವ ವಿರಳ ಕೃತಿ. ಕೃತಿ 10 ಪರ್ವಗಳಲ್ಲಿದೆ. ಪ್ರತಿಪರ್ವದ ಆರಂಭದಲ್ಲಿನ 'ಶ್ರೀಮತೆ ಸಕಲ ಜ್ಞಾನ...' ಎಂಬ ಶ್ಲೋಕ ಜಿನಸೇನರ ಪೂರ್ವಪುರಾಣದಲ್ಲಿದೆ. ಪ್ರಥಮ ಪರ್ವದಲ್ಲಿನ 'ಶ್ರೀವೃಷಭಜಿನೇಂದ್ರಾದಿ...' ಎಂಬ ಕಂದ (ಪುಟ 1) 'ಚಾವುಂಡ ರಾಯ ಪುರಾಣ'ದ ಆದಿಯಲ್ಲಿದೆ. ಮೊದಲನೆಯ ತೀರ್ಥಂಕರನಾದ ಆದಿದೇವ ಹಾಗು ಆತನ ಮಕ್ಕಳಾದ ಭರತ–ಬಾಹುಬಲಿಯರ ಕಥೆ ಕೃತಿಯ ವಸ್ತು.

ಪ್ರೊ. ಕೆ. ಜಿ. ಕುಂದಣಗಾರರು ಏಕೈಕ ಹಸ್ತಪ್ರತಿಯ ಆಧಾರದಿಂದ 1943ರಲ್ಲಿ ಪೂರ್ವಪುರಾಣವನ್ನು ಪ್ರಕಟಿಸಿದ್ದರು. ಈಗ ಪ್ರಸ್ತುತ ಸಂಪಾದಕರು

ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನಭಟ್ಟಾರಕರಮಠದಲ್ಲಿ ಲಭಿಸಿದ ಪ್ರತಿಯ ಸಹಾಯದಿಂದ ಪರಿಷ್ಕೃತ ಮುದ್ರಣವನ್ನು ಕೈಕೊಂಡಿದ್ದಾರೆ.

ಸಂಪಾದಕರು 'ಪೀಠಿಕೆ'ಯಲ್ಲಿ ಕರ್ತೃ ಹಸ್ತಿಮಲ್ಲನ ಬಗೆಗೆ ಸಂಸ್ಕೃತ ಹಾಗೂ ಕನ್ನಡ ಕೃತಿಗಳ ಉಲ್ಲೇಖಗಳನ್ನು ಆಧರಿಸಿ ಅವನ ಚರಿತ್ರೆ, ಮತ್ತು ಕೃತಿಗಳ ಬಗೆಗೆ ತಿಳಿಸಿದ್ದಾರೆ. ಕಾಲದ ಬಗೆಗೆ 'ಹಸ್ತಿಮಲ್ಲ ಸೂರಿಯು 1300 ರಿಂದ 1319ರ ಮಧ್ಯೆ ಇರಬಹುದೆಂದಾಗುತ್ತದೆ' ಎಂಬ ಪ್ರೊ. ಕೆ. ಜಿ. ಕೆ. ಅವರ 'ಅಭಿಪ್ರಾಯವನ್ನೇ ಇಟ್ಟುಕೊಳ್ಳಬಹುದು' ಎಂದಿದ್ದಾರೆ.

ಹಸ್ತಿಮಲ್ಲ ಕನ್ನಡದಲ್ಲಿನ ಪೂರ್ವಪುರಾಣದ ಪ್ರತಿಸರ್ಗಾಂತ್ಯದಲ್ಲಿ ತನಗಿದ್ದ ಉಭಯ ಭಾಷಾ ಚಕ್ರವರ್ತಿ ಎಂಬ ಬಿರುದನ್ನು ತಿಳಿಸಿದ್ದಾನೆ. ಸಂಸ್ಕೃತದಲ್ಲಿ ಹಸ್ತಿಮಲ್ಲನ 'ವಿಕ್ರಾಂತ ಕೌರವ', 'ಮೈಥಿಲಿ ಪರಿಣಯ', 'ಅಂಜನಾಪವನಂಜಯ' ಹಾಗು 'ಸುಭದ್ರಾಹರಣ'ಗಳೆಂಬ 4 ನಾಟಕ ಕೃತಿಗಳು ಉಪಲಬ್ಧವಿವೆ. 'ಶ್ರೀ ಪುರಾಣ'ವೆಂಬ ಕೃತಿಯೊಂದು ಹಸ್ತಿಮಲ್ಲನ ಹೆಸರಿನಲ್ಲಿ ಲಭಿಸುತ್ತದೆ. ಕೃತಿಯಲ್ಲಿನ ಗದ್ಯ ನಿರೂಪಣೆ ಸರಳವಾಗಿದೆ. ಪಂಪನ ಆದಿಪುರಾಣದ ಪ್ರಭಾವವನ್ನು ಹಸ್ತಿಮಲ್ಲನ ಕೃತಿಯಲ್ಲಿ ಕಾಣಬಹುದಾಗಿದೆ. ಈ ಕೃತಿಯಿಂದ 14ನೆಯ ಶತಮಾನದ ಆದಿಭಾಗದ ಗದ್ಯದ ಸ್ವರೂಪವನ್ನು ತಿಳಿಯಬಹುದಾಗಿದೆ.

ವೃತ್ತವಿಲಾಸ ವಿರಚಿತ ಧರ್ಮ ಪರೀಕ್ಷೆ (ಸಂ) ಕೆ. ರಾಘವೇಂದ್ರರಾವ್

ವೃತ್ತವಿಲಾಸ ವಿರಚಿತ 'ಧರ್ಮಪರೀಕ್ಷೆ' ಚಂಪು ಪ್ರಕಾರದ ಕೃತಿ. ಗುರು ಶ್ರೀಮದಮರಕೀರ್ತಿ ರಾವುಳವೃತಿ. ಗುರು-ಶಿಷ್ಯರಾದ ಧರ್ಮಭೂಷಣ ಮತ್ತು ಅಮರಕೀರ್ತಿಗಳನ್ನು ಶ್ರವಣಬೆಳಗೊಳದ 274 (ಕ್ರಿ. ಶ. 1373) ನೆಯ ಶಾಸನ ಹೆಸರಿಸಿದೆ. ಅಲ್ಲದೆ ಕ್ರಿ. ಶ. 1395 ನೆಯ ಹಂಪೆಯ ಮ್ಯೂಸಿಯಂ ಶಾಸನ ಮತ್ತು ನಗರದ 46ನೆಯ (ಸು. 1580) ಶಾಸನಗಳಲ್ಲೂ ಉಲ್ಲೇಖವಿದೆ. ಈ ಶಾಸನೋಲ್ಲೇಖಗಳನ್ನು ಆಧರಿಸಿ ಡಾ॥ ಎ. ವೆಂಕಟಸುಬ್ಬಯ್ಯ ನವರು ವೃತ್ತವಿಲಾಸನ ಕಾಲವನ್ನು ಕ್ರಿ. ಶ. 1360 ಎಂದು ನಿರ್ಧರಿಸಿದರು. ಇದನ್ನು ಕವಿಚರಿತೆಕಾರರೇ ಆದಿಯಾಗಿ ವಿದ್ವಾಂಸರೆಲ್ಲರು ಒಪ್ಪಿಕೊಂಡಿದ್ದು ಭಿನ್ನಾಭಿಪ್ರಾಯಗಳಿಲ್ಲ. ಈತನ ಕೃತಿಯನ್ನು ಚಂದ್ರಸಾಗರವರ್ಣಿ (?– 1835) ಗದ್ಯರೂಪದಲ್ಲಿ ಪರಿವರ್ತಿಸಿದ್ದಾನೆ.

ವೃತ್ತವಿಲಾಸನ 'ಧರ್ಮಪರೀಕ್ಷೆ' ಹಲವಾರು ಸಣ್ಣ-ಸಣ್ಣ ಕಥೆಗಳ ಸಂಗ್ರಹ ರೂಪದಕೃತಿ. ಇಲ್ಲಿ ಜೈನ ಮತ ವೈದಿಕಮತಕ್ಕಿಂತ ಶ್ರೇಷ್ಠವಾದುದು ಎಂಬುದನ್ನು ವೈದಿಕಕತೆಗಳ ವಿಡಂಬನೆಯ ಮೂಲಕ ಪ್ರತಿಪಾದಿಸಲಾಗಿದೆ, ಕೃತಿಯಲ್ಲಿ 10 ಆಶ್ವಾಸಗಳಿವೆ.

ವೃತ್ತವಿಲಾಸನ ಮತ್ತೊಂದು ಕೃತಿಯೆಂದು ಭಾವಿಸಲಾಗಿದ್ದ 'ಶಾಸ್ತ್ರಸಾರ' ಇತ್ತೀಚಿನ ಸಂಶೋಧನೆಗಳಿಂದ ಈತನದಲ್ಲವೆಂಬ ಅಂಶ ಖಚಿತಗೊಂಡಿದೆ.

ವೃತ್ತವಿಲಾಸ ತನ್ನ ಕೃತಿಯನ್ನು ರಚಿಸುವಲ್ಲಿ ಪ್ರಾಕೃತದ ಜಿನದಾಸಗಣಿ (677) ಮತ್ತು ಹರಿಭದ್ರರ (779) 'ಧೂರ್ತಾಖ್ಯಾನ' ಗಳನ್ನೂ ಹಾಗೂ ಸಂಸ್ಕೃತ ದಲ್ಲಿನ ಅಮಿತಗತಿಯ (ಕ್ರಿ.ಶ. 1014) 'ಧರ್ಮಪರೀಕ್ಷೆ'ಯನ್ನು ಬಳಸಿಕೊಂಡಿ ದ್ದಾನೆ. ಇವುಗಳಲ್ಲಿ ಅಮಿತಗತಿಯ ಪ್ರಭಾವ ಅಧಿಕ.

ಸಂಪಾದಕರು ಪೀಠಿಕೆಯಲ್ಲಿ ಕವಿಕಾಲ ವಿಚಾರ, ಕಥಾವಸ್ತುವಿನ ವಿಕಾಸ, ಕಥಾ ಸಾರ, ಕಾವ್ಯದ ಗುರಿ, ಪಾತ್ರರಚನೆ, ಸನ್ನಿವೇಶ ಕಲ್ಪನೆ, ಕಥನರೀತಿ, ಶೈಲಿ, ವ್ಯಾಕರಣ ವೈಶಿಷ್ಟ್ಯಗಳು, ಕಥೆಗಳ ಆಕರಗಳು, ಗ್ರಂಥ ಸಂಪಾದನಾ ವಿಧಾನಗಳ ಬಗೆಗೆ ನಿರೂಪಿಸಿದ್ದಾರೆ. ಕೃತಿಯ ಕೊನೆಯಲ್ಲಿ 4 ಅನುಬಂಧಗಳಿವೆ.

1) ಪಾರಿಭಾಷಿಕ ಶಬ್ದಗಳ ಸೂಚಿ
2) ಕಠಿಣ ಶಬ್ದಗಳ ಅರ್ಥ
3) ಪದ್ಯಗಳ ಅಕಾರಾದಿ
4) ಆಧಾರ ಗ್ರಂಥ.

ಪ್ರಸ್ತುತ ಕೃತಿಯನ್ನು 5 ಓಲೆ ಪ್ರತಿ ಹಾಗು 2 ಕಾಗದದ ಪ್ರತಿ ಮತ್ತೆ 1868 ರಲ್ಲಿ W.G. ವರ್ಥ್‌ರಿಂದ ಪ್ರಕಟವಾದ 'ಪ್ರಾಕ್ಕಾವ್ಯಮಾಲಿಕೆ'ಯಲ್ಲಿನ 'ಧರ್ಮಪರೀಕ್ಷೆ'ಯ ಭಾಗವನ್ನು ಬಳಸಿಕೊಂಡು ಪರಿಷ್ಕರಿಸಿದ್ದಾರೆ. ಪಾಠಾಂತರ ಗಳನ್ನು ಪ್ರತ್ಯೇಕ ಸಂಕೇತಾಕ್ಷರಗಳಿಂದ ಗುರುತಿಸಿದೆ.

7.20 ರಲ್ಲಿನ ಅಚ್ಚಿನಪಾಠ 'ತರುಣಿಯುನೊಂದು ದಿನಂ' ಎಂದಿದ್ದು ಅದು 'ತರುಣಿಯುದೊಂದು ದಿನಂ' ಎಂದಾಗಬೇಕೆನಿಸುತ್ತದೆ.

3.13 ರಲ್ಲಿನ 'ಪರಿಯಿಸಿ ಧನಮಂ' ಎಂಬುದು 'ಪರಿಯಿಸಿದನವಂ' ಎಂದಾಗ ಬೇಕು. 3.11 ರಲ್ಲಿನ 'ದನವನಗಲೆ', 'ದನವನಾಗಲೆ' ಎಂದಾಗಬೇಕು. ಇಲ್ಲದಿದ್ದರೆ ಛಂದೋದೋಷ ಉಂಟಾಗುವುದು. **10–1** ರಲ್ಲಿನ 'ಜೈವಾಕೃತ' ತಪ್ಪಾಗಿದ್ದು ಅದು 'ಜೈವಾತೃಕ' ವೆಂದಿರಬೇಕು.

ತಾರಾವಳೀ ಸಂಪುಟ **1** (ಸಂ) ಎಂ. ಎಸ್. ಬಸವರಾಜಯ್ಯ

ಕನ್ನಡ ಸಾಹಿತ್ಯದಲ್ಲಿನ ವಿವಿಧ ಪ್ರಕಾರಗಳಲ್ಲಿ ತಾರಾವಳೀ ಪ್ರಕಾರವೂ ಒಂದು. ಇದಕ್ಕೆ ನಕ್ಷತ್ರ ಮಾಲಿಕೆ ಎಂಬ ಸಮಾನಾರ್ಥವುಳ್ಳ ಪದ ಸಮುಚ್ಚಯ ಕೆಲವೆಡೆ ಬಳಕೆಯಾಗಿದೆ. ಇದರಲ್ಲಿ ಪ್ರಾಯಿಕವಾಗಿ 27 ಪದಗಳಿದ್ದು ಅವು ನಕ್ಷತ್ರ ಮಾಲಿಕೆ ಯನ್ನು ಪ್ರತಿನಿಧಿಸುತ್ತವೆ.

ಈಗ ನಮಗೆ ಉಪಲಬ್ಧವಿರುವ ಕೃತಿಗಳಲ್ಲಿ ಬೊಪ್ಪಣ ಪಂಡಿತ (ಸು. 1180)ನ 27 ವೃತ್ತಗಳಲ್ಲಿ ರಚಿತವಾಗಿರುವ 'ನಿರ್ವಾಣ ಲಕ್ಷ್ಮೀಪತಿ ನಕ್ಷತ್ರ ಮಾಲಿಕೆ'ಯೆ ಅತ್ಯಂತ ಪ್ರಾಚೀನ ಪ್ರಕಟಿತ ಕೃತಿ. ಆದರೆ ತಾರಾವಳಿ ಎಂಬ ನುಡಿ ಗಟ್ಟನ್ನು ಕೃತಿ ಹೆಸರಿಗೆ ಸಂಬಂಧಿಸಿದಂತೆ ಬಳಸಿ ಆ ಸಂಪ್ರದಾಯಕ್ಕೆ ಪ್ರವರ್ತಕನಾದ ಭಾಗ್ಯಶಾಲಿ ಕರಸ್ಥಲದ ನಾಗಲಿಂಗ.

ಸಂಪುಟ 1 ರಲ್ಲಿ ಈ ಕೆಳಗಿನ 4 ತಾರಾವಳಿಗಳಿವೆ.

1) ಕರಸ್ಥಲದ ನಾಗಲಿಂಗನ ವೀರ ಮಡಿವಳ ಮಾಚಯ್ಯಗಳ ತಾರಾವಳಿ. ಈತ ವಿಜಯನಗರದ ಇಮ್ಮಡಿ ಪ್ರೌಢದೇವರಾಯ (1419–47)ನ ಸಮಕಾಲೀನ. ಕರಸ್ಥಲದ ವೀರಣ್ಣೊಡೆಯರ ಕರ ಸಂಜಾತ. 'ಕಲ್ಯಾಣಮಂಡಲದ ಶಿವಭಕ್ತ ಸಂತಾನವೆನಿಸಿದ' ನೂರೊಂದು ವಿರಕ್ತರಲ್ಲೊಬ್ಬ. ಈತ ಹಲವಾರು ಲಘು ರೂಪದ ಕೃತಿಗಳನ್ನು ರಚಿಸಿದ್ದಾನೆ.

ಪ್ರಸ್ತುತದ ತಾರಾವಳಿಯಲ್ಲಿ ದಕ್ಷಾಧ್ವರ ಧ್ವಂಸನ ಮತ್ತು ಶರಭಾವತಾರವೂ ಅಭಿನ್ನವಾಗಿ ಮಡಿವಾಳ ಮಾಚಿದೇವನ ಚರಿತೆಯೊಡನೆ ನಿರೂಪಿತವಾಗಿದೆ. ಕೃತಿ ಯಲ್ಲಿ ಪಲ್ಲವಿ ಸಹಿತವಾದ 27 ನುಡಿಗಳಿವೆ. ಅಂತ್ಯದಲ್ಲಿ ಕಂದವೊಂದಿದೆ.

2) ವೀರಭದ್ರಾವತಾರ ಮಡಿವಾಳ ಮಾಚಯ್ಯಗಳ ತಾರಾವಳಿ–ಕರ್ತೃ ಅಜ್ಞಾತ. 'ವರದ ಇಷ್ಟ ಗುರುಲಿಂಗ ವೀರೇಶ' ಎಂಬ ಅಂಕಿತವಿದೆ. ಪಲ್ಲವಿ ಹಾಗೂ 5 ನುಡಿಗಳಿರುವ ಈ ತಾರಾವಳಿಯಲ್ಲಿ ಮಡಿವಾಳ ಮಾಚಯ್ಯನ ಚರಿತೆ ಆನುಷಂಗಿಕವಾಗಿದ್ದು ದಕ್ಷಾಧ್ವರ ಹಾಗೂ ಶರಭಾವತಾರಗಳ ಕಥನವೇ ಮಿಗಿಲಾಗಿದೆ.

3) ಸಿದ್ಧಲಿಂಗ ಕೃತ ವೀರಭದ್ರನ ತಾರಾವಳಿಯಲ್ಲಿ ಪಲ್ಲವ ಸಹಿತವಾದ 7 ನುಡಿಗಳಿವೆ. ವೀರೇಶ ಶರಭಾವತಾರವನ್ನು ತಾಳಿ ನೃಸಿಂಹನನ್ನು ಹತಿಸಿದ ವಿವರ ನಿರೂಪಣೆ ಕೃತಿಯ ವಸ್ತು. ಇದರ ರಚನೆಗೆ ಕವಿ ಸಿದ್ಧಲಿಂಗ ಈಗ ಅಲಭ್ಯ ವಾಗಿರುವ ರಾಘವಾಂಕನ 'ಶರಭ ಚಾರಿತ್ರ'ದಿಂದ ಪ್ರೇರಣೆ ಪಡೆದಿರಬಹುದು.

4) ಮುರಿಗೆ ತಾರಾವಳಿ : ಕೃತಿಕಾರ ಇಮ್ಮಡಿ ಗುರುಸಿದ್ಧ ಶಿವಯೋಗಿ (?-1829). ಈತ ಚಿನ್ಮೂಲಾದ್ರಿಯ ಬೃಹನ್ಮಠದ ಮೂಲಕರ್ತೃ ಮುರಿಗಾ ಶಾಂತವೀರನ ಶಿಷ್ಯ. ಮುರಿಗೆ ತಾರಾವಳಿ ಮುರಿಗಾ ಶಾಂತವೀರನ ಜೀವನದ ಘಟನೆಗಳನ್ನು ಎಳೆ–ಎಳೆಯಾಗಿ ದಾಖಲಿಸಿರುವ ಅಪೂರ್ವವಾದ ಐತಿಹಾಸಿಕ ಕೃತಿ. ತಾರಾವಳಿಯ ಆದಿಯಲ್ಲಿ ವೃತ್ತವೊಂದಿದೆ. ಅನಂತರ ಪಲ್ಲವವಿದ್ದು 27 ನುಡಿಗಳಿವೆ. ಕೊನೆಯಲ್ಲಿ ವೃತ್ತ ವೊಂದಿದೆ. ಈ ಕೃತಿ ಶಾಂತವೀರರ ಸಮಕಾಲೀನರಾಗಿದ್ದ ಭಾಗಾನಗರದ ಬಾದಷಹ, ಗದುಗಿನ ಡಾಕಿನ ದೇಸಾಯಿ, ಹರಪನಹಳ್ಳಿಯ ಬಸವ ಭೂಪ, ಸುಧಾಪುರ (=ಸ್ವಾದಿ) ಸದಾಶಿವನೃಪ, ಗುತ್ತೊಳಲಪುರದ ಹನುಮ

ರಾಯ, ಘಣಿಪುರದ ಪ್ರವೀರಭೂಪ ಲಕ್ಷ್ಮೇಶ್ವರದ ಕೆಂಚಣಗೌಡ, ಚಿತ್ರದುರ್ಗದ ಮೆದಕೇರಿ ಕಸ್ತೂರಿ ಬರಮಭೂಪ, ಕಳ್ಳ ಹುಣಸೆಯ ದೇವಣಗೌಡರನ್ನು ಹೆಸರಿಸಿದೆ. ಮುರಿಗಾ ಸ್ವಾವಿ.ಗಳ ಲಿಂಗೈಕ್ಯ ದಿನದ ಬಗೆಗೆ ಖಚಿತವಾದ ದಾಖಲೆಯನ್ನು ತಾರಾವಳಿ ಒಳಗೊಂಡಿದೆ.

ಸಂಪಾದಕರು ಪ್ರಸ್ತುತ ಕೃತಿ ಸಂಪುಟದ ಸಂಪಾದನೆಗೆ 4 ಓಲೆ ಪ್ರತಿಗಳನ್ನು ಆಧರಿಸಿದ್ದಾರೆ. 2, 3,ನೆಯ ತಾರಾವಳಿಗಳು ಏಕೈಕ ಓಲೆಯನ್ನು ಅವಲಂಬಿಸಿವೆ. ಮೊದಲ ಕೃತಿಗೆ 2 ಓಲೆ ಪ್ರತಿಗಳನ್ನು ಬಳಸಿದೆ. 4 ನೆಯ ಕೃತಿಗೆ 4 ಓಲೆ ಪ್ರತಿಗಳನ್ನು ಉಪಯೋಗಿಸಲಾಗಿದೆ. ಪ್ರತಿ ಕೃತಿಗಳ ಅಂತ್ಯದಲ್ಲಿ ಆ ಆ ಕೃತಿಗಳ ಗದ್ಯಾನುವಾದದೊಡನೆ ಅಲ್ಲಿ ಬರುವ ವಿಶಿಷ್ಟ ಪದಸೂಚಿಗಳನ್ನು ಅಕಾರಾದಿಯಾಗಿ ಸಂಪಾದಕರು ಒದಗಿಸಿಕೊಟ್ಟಿದ್ದಾರೆ. ಕೃತಿಯಲ್ಲಿನ ಪ್ರಸ್ತಾವನೆ ವಿಚಾರಪೂರ್ಣವಾಗಿದ್ದು ಹಲವಾರು ನೂತನ ಅಂಶಗಳಿಂದ ಕೂಡಿದೆ. ಮುಂದಿನ ತಾರಾವಳಿ ಸಂಪುಟಗಳನ್ನು ಆದಷ್ಟು ಬೇಗ ಹೊರತರುತ್ತಾರೆಂದು ಆಶಿಸಲಾಗಿದೆ.

ವೀರಶೈವ ತತ್ತ್ವ ಮತ್ತು ಆಚರಣೆ (ಸಂ) ಎಲ್. ಬಸವರಾಜು

ವೀರಶೈವ ಸಿದ್ಧಾಂತ ನಿರೂಪಣೆಗೆ ಸಂಬಂಧಿಸಿದ ಈ ಕೃತಿಯ ಕರ್ತೃ ಅಜ್ಞಾತ. ಕೃತಿಕಾರ ಕೃತಿಯನ್ನು 'ವೀರಶೈವ ತತ್ತ್ವಪ್ರಕಾಶ' ವೆಂದು ಕರೆದಿದ್ದಾನೆ. ಸಂಪಾದಕರು ಕೃತಿಯ ಹೆಸರನ್ನು ಮಾರ್ಪಡಿಸಿ ಪ್ರಕಟಿಸಿದ್ದಾರೆ. ಅದರೂ ಕೃತಿಯ ಒಳಗಡೆಯಲ್ಲಿ ಕೃತಿಯನ್ನು ಹೆಸರಿಸುವಲ್ಲಿ 'ವೀರಶೈವ ತತ್ತ್ವಪ್ರಕಾಶ'ವೆಂದೇ ಕರೆದಿದೆ.

ಸಂಪಾದಕರು ಕೃತಿಗೆ ಬರೆದ 'ಅರಿಕೆ'ಯಲ್ಲಿ ಕೃತಿಯ ಕಾಲದ ಬಗೆಗೆ ಏನನ್ನೂ ತಿಳಿಸಿಲ್ಲ. ಆದರೆ ಕೃತಿಯ ಹಿಂಭಾಗದ ರಟ್ಟಿನ ಮೇಲೆ 'there is reason to believe he Lived in the Latterhalf of the fifteen century'ಎಂಬ ಉಲ್ಲೇಖವಿದೆ.

ಕೃತಿ ಗದ್ಯದಲ್ಲಿದ್ದು ಗುರು-ಶಿಷ್ಯರ ಸಂವಾದ ರೀತಿಯಲ್ಲಿದೆ. ಕೃತಿಮೂಲ ಗೀರ್ವಾಣಭಾಷೆಯ ಹನ್ನೆರಡು ಮಹಾಕೋಟಿ ಶ್ಲೋಕರೂಪದ ಪರಮರಹಸ್ಯ. ಇದನ್ನೇ ಊರ್ಧ್ವಸೃಷ್ಟಿ, ಅಧೋಸೃಷ್ಟಿಗಳೆಂಬ 2 ಭಾಗಗಳಲ್ಲಿ 8 ಪ್ರಕರಣಗಳಲ್ಲಿ ಸಂಕ್ಷೇಪಿಸಿ ಹೇಳಿದಂತೆ ಕವಿ ತಿಳಿಸಿದ್ದಾನೆ. ಇಲ್ಲಿನ 8 ಪ್ರಕರಣಗಳು ಇಂತಿವೆ.

೧ ಶಾಸ್ತ್ರ ಪಾರಂಪರ್ಯ ಪ್ರಕರಣ
೨ ಶಿವತತ್ತ್ವೋದಯ ,,
೩ ಚಿತ್ಪಿಂಡೋದಯ ,,
೪ ಭಕ್ತಿ ಪಿಂಡೋದಯ ,,

೫ ಜೀವೋದಯ ಪ್ರಕರಣ
೬ ಆದಿ ಪಿಂಡೋದಯ ,,
೭ ನಿಜೋಪದೇಶ ,,
೮ ಲಿಂಗಾಂಗ ಸಂಬಂಧ ,,

ಕವಿ ಕೃತಿಯ ಆರಂಭದಲ್ಲಿ ಸಪ್ತಕಾವ್ಯದ ಗುರುಬಸವ (1430) ಕೃತ 'ಶಿವ ಯೋಗಾಂಗಭೂಷಣ'ದ 'ಶ್ರೀ ಗುರುಲಿಂಗ......' ಎಂಬ ಷಟ್ಪದಿಯನ್ನು ಉದಾಹರಿಸಿದ್ದಾನೆ. ಕೃತಿಯ ಒಡಲಲ್ಲಿ ಸಂಸ್ಕೃತ ಭಾಷೆಯ ವೇದಾಗಮ ಪುರಾಣೋಪನಿಷತ್ತುಗಳಿಂದ ಹಾಗು ಮಗ್ಗೆ ಮಾಯಿದೇವ (1430)ನ 'ಶಿವಾನುಭವ ಸೂತ್ರ' ಮತ್ತು 'ಶೈವರತ್ನಾಕರ', 'ಸೋಮಶಂಭು', 'ಮಹಾಭಾರತ' ಮೊದಲಾದ ಕೃತಿಗಳಿಂದ ವಿಪುಲವಾಗಿ ಉದ್ಧರಿಸಿದ್ದಾನೆ

ಕೃತಿ ಒಂದು ಓಲೆ ಹಾಗು ಎರಡು ಕಾಗದ ಪ್ರತಿಗಳ ಆಧಾರದಿಂದ ಅಚ್ಚಾಗಿದೆ. ಸಂಪಾದಕರು ಕೃತಿಯ ಅಂತ್ಯದಲ್ಲಿ 9 ಅನುಬಂಧಗಳನ್ನು ಕೊಟ್ಟಿದ್ದಾರೆ. 9ನೆಯ ಅನುಬಂಧವಾದ 'ದಶವಿಧ ಪಾದೋದಕ ಏಕಾದಶ ಪ್ರಸಾದ' ಸಂಪಾದಕರು ಭಾವಿಸಿರುವಂತೆ ಅಪ್ರಕಟಿತವೇನಲ್ಲ. ಅದನ್ನು ಈ ಮೊದಲೇ ಫ. ಗು. ಹಳಕಟ್ಟಿಯವರು 1953ರಲ್ಲಿ 'ವಚನಶಾಸ್ತ್ರಸಾರ' (ಭಾಗ-3, ಉತ್ತರಾರ್ಧ, ಪುಟ 29-39)ದಲ್ಲಿ ಪ್ರಕಟಿಸಿದ್ದಾರೆ ಅಲ್ಲಿನ ಪಾಠಕ್ಕೂ ಪ್ರಸ್ತುತ ಪಾಠಕ್ಕೂ ಅಲ್ಲಲ್ಲಿ ಭೇದಗಳಿವೆ.

ಪ್ರಾಚೀನ ಕನ್ನಡದ ಸಾಹಿತ್ಯದಲ್ಲಿ ಗದ್ಯ ಕೃತಿಗಳೇ ವಿರಳವಾಗಿರುವಾಗ ಪ್ರಸಕ್ತ ಗದ್ಯಕೃತಿಯ ಸೇರ್ಪಡೆ ಗಮನಾರ್ಹವಾದ ಕೊಡುಗೆಯಾಗಿದೆ.

ಪಾಯಣ್ಣವ್ರತಿ ವಿರಚಿತ ಸಮ್ಯಕ್ತ್ವಕೌಮುದಿ (ಸಂ) ಎಂ. ಪಿ. ಮಂಜಪ್ಪಶೆಟ್ಟಿ

ಪಾಯಣ್ಣ ವ್ರತಿ 'ಸಮ್ಯಕ್ತ್ವಕೌಮುದಿ'ಯ ಕರ್ತೃ. ಸಂದಿಪುರ ಈತನ ಸ್ಥಳ. ಚಿಗಬೊಮ್ಮಶೆಟ್ಟಿ ತಂದೆ. ತಾಯಿ ಕೆಂಚಮ್ಮ. 55 ವರ್ಷಗಳವರೆಗೆ ಬ್ರಹ್ಮಚಾರಿಯಾಗಿದ್ದು ಅನಂತರ ಸೇನಗಣದ ಲಕ್ಷ್ಮೀಸೇನಮುನಿಗಳಿಂದ ಪೆನಗೊಂಡೆಯ ಪಾರ್ಶ್ವನಾಥ ಬಸದಿಯಲ್ಲಿ ದೀಕ್ಷೆ ಹೊಂದಿದನು. ಅಂದಿನಿಂದ ಈತ ಪಾರ್ಶ್ವವರ್ಣಿ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದನು.

ಕವಿಚರಿತೆಕಾರರು ಈತನ ಕಾಲವನ್ನು ಸು. 1600 ಎಂದಿದ್ದಾರೆ. ಸಂಪಾದಕರು ಇದನ್ನು ಒಪ್ಪದೆ, ನಾಗಮಂಗಲ ತಾಲ್ಲೂಕ್ ಬೆಳ್ಳೂರಿನ ಬ್ರಹ್ಮಸೂರಪ್ಪನವರಲ್ಲಿದ್ದ ಒಂದು ತಾಮ್ರ ಶಾಸನ, ಅದೇ ಊರಿನ ವಿಮಲನಾಥ ಬಸದಿಯಲ್ಲಿನ ವಿಮಲನಾಥ ತೀರ್ಥಂಕರರ ಮೂಲ ವಿಗ್ರಹದ ಪೀಠದ ಸಂಸ್ಕೃತ ಶಾಸನ, ಅದೇ ಬಸದಿಯ

ಪಡಸಾಲೆಯ ಮೇಲಿನ ಶಾಸನಗಳನ್ನು ಆಧರಿಸಿ ಪಾಯಣ್ಣವ್ರತಿ ಕ್ರಿ.ಶ. 1680ರ ಹಿಂದೆ ಮುಂದೆ ಎಂಬ ನಿಲುವಿಗೆ ಬಂದಿದ್ದಾರೆ. ಆದರೆ ಪಾಯಣ್ಣವ್ರತಿಯೇ ಸ್ವತಃ ಪ್ರತಿಮಾಡಿರುವ ನಾಗವರ್ಮನ (1042) 'ವೀರ ವರ್ಧಮಾನ ಪುರಾಣ' ಆಚಣ್ಣನ (ಸು. 1195) 'ವರ್ಧಮಾನಪುರಾಣ' ಮತ್ತು ಅಗ್ಗಳನ (1189) 'ಚಂದ್ರಪ್ರಭ ಪುರಾಣ'ದ ಕೃತಿಗಳು ಉಪಲಬ್ಧವಿದ್ದು ಅವು ಕ್ರಮವಾಗಿ ಶಾ.ಶ. 1489, 1491 ಮತ್ತು 1494ರಲ್ಲಿ ಪ್ರತಿಯಾಗಿವೆ. ಹೀಗಾಗಿ ಇವನ ಕಾಲ ಸು. 1550 ಆಗುತ್ತದೆ. (ನೋಡಿ : ಎಸ್. ಶಿವಣ್ಣ 'ಪಾಯಣ್ಣವ್ರತಿ–ಕಾಲವಿಚಾರ', ಕನ್ನಡ ಸಾಹಿತ್ಯಪರಿಷತ್ಪತ್ರಿಕೆ, 67–2, 1982, 140.)

'ಸಮಕ್ತ್ವ ಕೌಮುದಿ' ಜೈನಧರ್ಮದಲ್ಲಿ ಭಕ್ತಿ ಶ್ರದ್ಧೆ, ನಂಬಿಕೆಗಳನ್ನಿಟ್ಟು ಆದರಂತೆ ನಡೆದವರ ಕಥೆಗಳನ್ನು ವಿವರಿಸುವ ಕೃತಿ. ಉದಿತೋದಯ ರಾಜನಿಗೆ ಸಮ್ಯಕ್ತ್ವ ಕಾರಣರಾದ ವ್ಯಕ್ತಿಗಳ ಚರಿತೆ ಕೃತಿಯ ವಸ್ತು. ಕೃತಿ ಸಾಂಗತ್ಯದಲ್ಲಿದ್ದು 18 ಸಂಧಿ 1989 ಪದ್ಯಗಳಿವೆ.

ಕನ್ನಡದಲ್ಲಿ ಪಾಯಣವರ್ಣಿಗೆ ಮೊದಲೇ 'ಸಮ್ಯಕ್ತ್ವಕೌಮುದಿ' ಚಿಕ್ಕಮಲ್ಲಣ್ಣ (1492) ನಿಂದ ಸಾಂಗತ್ಯದಲ್ಲೂ, ಮಂಗರಸ III (1509) ನಿಂದ ಷಟ್ಪದಿಯಲ್ಲೂ ರಚಿತವಾಗಿದೆ. ಅಲ್ಲಿದೆ ಕಾಲ ತಿಳಿಯದ ನೀಲಕಂಠ ಕೃತ 'ಕೌಮುದಿ' ಕೃತಿಯೊಂದು ಸಾಂಗತ್ಯದಲ್ಲಿದೆ.

ಈ ಕೃತಿಯನ್ನು ಸಂಪಾದಕರು 3 ಓಲೆ ಪ್ರತಿಗಳನ್ನಾಧರಿಸಿ ಪರಿಷ್ಕರಿಸಿದ್ದಾರೆ. ಇವುಗಳಲ್ಲಿ 'ಗ', 'ಚ' ಪ್ರತಿಗಳು 19 ನೆಯ ಶತಮಾನದಲ್ಲಿ ಲಿಖಿತವಾಗಿವೆ.

ಸಂಪಾದಿತ ಕೃತಿಯಲ್ಲಿನ ಕೆಲವು ಅಚ್ಚಿನ ಹಾಗೂ ಶಕಟರೇಫಗಳ ತಪ್ಪುಗಳನ್ನು ಈ ಕೆಳಗೆ ಸೂಚಿಸಿದೆ.

ಸಂಧಿ	ಪದ್ಯ	ತಪ್ಪು	ಸರಿ
1	22	ರಾಜಾದಿರಾಜ	ರಾಜಾಧಿರಾಜ
1	52		
1	94	ಬಿತ್ತಿಗಗೊಳು	ಭಿತ್ತಿಗಳೊಳು
1	105	ಪಣಿ	ಫಣಿ
2	9	ದಿಂಢೆ	ದಿಂಡೆ
2	11	ದ್ಧಾನವ	ಧ್ಯಾನವ
2	49	ಶಂಕಿನಿ	ಶಂಖಿನಿ
2	54	ಕುರಗ	ತುರಗ

ಸಂಧಿ	ಪದ್ಯ	ತಪ್ಪು	ಸರಿ
2	66	ಸೂರ್ಯ್ಯಪುರ	ಸೂರ್ಯ್ಯಪುರ?
3	35	ಶರಬ	ಶಬರ
3	47	ರೋರಾಗ್ನಿ	ರೋಗಾಗ್ನಿ
4	57	ಭಯಂಸು	ಬಯಸು
4	60	ಸ	ಸು
5	10	ಪೋಗು	ಪೊಗು
5	31	ಮಱುಳಾಗಿ	ಮರುಳಾಗಿ
5	3	ಕೊಱತೆ	ಕೊರತೆ
5	74	ಹೋಗೆ	ಹೊಗೆ
6	17	ಸೊಭಗಿ	ಸೊಬಗಿ
7	24	ಬಂಧು	ಬಂಧ
7	25	ಜೇಷ್ಟೆ	ಜೇಷ್ಠೆ
7	25	ದಳ	ದಳು
7	43	ಮುನಿ ಸುವ್ರತ	ಮುನಿಸುವ್ರತ
7	60	ಮೆಟ್ಟಕ್ತಿ	ಮೆಂಟಿಕೆ
8	11–3	ಬಾವುರಿ	ಬಾವರಿ
8	26	ಹರಷ	ಹರುಷ
೮	61	ತಿಱಿ	ತಿಱಿ
8	75	ಸೂರಾಡಿ	ಸೂಱಾಡಿ
10	81	ಅಹಿಂಶಾ	ಅಹಿಂಸಾ
10	88	ನೃಪನದನು	ನೃಪಗದನು
10 13	91 52	ನೇಸರ	ನೇಸಱ
12	15	ಶಾಂತನ	[ಶ] ಶಾಂಕನ
12	15	ಆನೆಮಲೆಯು	ಆನೆ ಮಲೆಯೂ
12	44	ಕುರಿ	ಕುಱಿ
12 14	71 2.4	ಚೈತ್ರ	ಭೈತ್ರ
12	99	ಕಿರಿ	ಕಿಱಿ
13	38	ಸಳಿ	ಸುಳಿ
13	65	ಕಾಲ್ಗ ತಿಗೆ	ಕಾಲ್ಗ[ಲ]ತಿಗೆ

ಸಂಧಿ	ಪದ್ಯ	ತಪ್ಪು	ಸರಿ
14	78	ಸೆರೆ	ಸೆಱೆ
15	9	ವಾಂತಿ	ವಾಂಥೆ
15	72	ದುರ	ಧುರ
16	38	ದನ	ಧನ
18	83	ಅಭಿದಾನ	ಅಭಿಧಾನ

ನೇಮಿವ್ರತಿ ವಿರಚಿತ ಸುವಿಚಾರ ಚರಿತೆ (ಸಂ) ಬಿ. ಬಿ. ಮಹೀಶವಾಡಿ

ನೇಮಿವ್ರತಿ ಅಥವಾ ನೇಮಣ್ಣ 'ಸುವಿಚಾರ ಚರಿತೆ' ಮತ್ತು 'ಜ್ಞಾನಭಾಸ್ಕರ ಚರಿತೆ'ಗಳ ಕರ್ತೃ. ಕವಿ ಕೃತಿಗಳ ಅಂತ್ಯದಲ್ಲಿ ರಚಿತವಾದ ಕಾಲವನ್ನು ನಮೂದಿಸಿರುವನು. ಅದರಂತೆ 2 ಕೃತಿಗಳೂ ಶಕವರುಷ 1482 ನೆಯ ಸಿದ್ಧಾರ್ಥಿನಾಮ ಸಂವತ್ಸರದಲ್ಲಿ ರಚಿತವಾಗಿವೆ. ಮೊದಲ ಕೃತಿ 'ಸುವಿಚಾರ ಚರಿತೆ' ಭಾದ್ರಪದ ಶುದ್ಧ ದಶಮಿಯಲ್ಲಿ ಪೂರ್ಣವಾದರೆ ಮತ್ತೊಂದು ಕೃತಿಯಾದ 'ಜ್ಞಾನ ಭಾಸ್ಕರ ಚರಿತೆ' ಆಶ್ವೀಜದ ಪೌರ್ಣಮಿಯಲ್ಲಿ ರಚಿತವಾಗಿದೆ.

ಈ ಕೃತಿಗಳಿಂದ ಕವಿಯ ಇತಿ ವೃತ್ತಕ್ಕೆ ಸಂಬಂಧಿಸಿದಂತೆ ತಿಳಿದು ಬರುವ ಸಂಗತಿಗಳು ಅಲ್ಪವೇ. ಈತ ಸಮಡೊಳ್ಳಿಪುರದಲ್ಲಿನ (ಸಾಂಗಲಿ ಜಿಲ್ಲೆ, ಮಹಾರಾಷ್ಟ್ರದಲ್ಲಿದೆ) ಜಿನಾಲಯದ ಜಿನಸೇನರ ಪ್ರಶಿಷ್ಯ ಹಾಗೂ ಶೀಲಾಬ್ಧಿಯ ಶಿಷ್ಯ. ಬಿದುರೆಯ ಬಾಗಿಸೆಟ್ಟಿಯ ಬಳಿಯಲ್ಲಿ ಉದಿಸಿ ಜಿನದೀಕ್ಷೆ ಹೊಂದಿದನು. ತುಳುರಾಜ್ಯದ ಬಿದರೆ ಅಂದರೆ ಈಗಿನ ಮೂಡಬಿದರೆಯಲ್ಲಿ ಇದ್ದಂತೆ ಹೇಳಿಕೊಂಡಿದ್ದಾನೆ. ಕಾಲ ಕೃತಿಗಳಲ್ಲಿ ಉಕ್ತವಾಗಿರುವಂತೆ ಕ್ರಿ. ಶ. 1560.

ನೇಮಿವ್ರತಿ ತನ್ನ ಕೃತಿಗಳೆರಡರ ವಸ್ತುವಿಗೆ ತನ್ನ 'ವರ್ಣಿ'ತನದ ಮನೋವೃತ್ತಿಗನುಗುಣವಾಗಿ ಜೈನಧರ್ಮಕ್ಕೆ ಸಂಬಂಧಿಸಿದಂತೆ, ಅದರ ತತ್ವಾಚರಣೆಗಳನ್ನು ನಿರೂಪಿಸುವ ಸ್ವತಂತ್ರ ರೂಪದ ಧಾರ್ಮಿಕ ಕೃತಿಗಳನ್ನು ರಚಿಸಿದ್ದಾನೆ ಸುವಿಚಾರ ಚರಿತ್ರೆಯ ರಚನೆಗೆ ಕವಿ ಸಂಸ್ಕೃತ ಪ್ರಾಕೃತ ಕೃತಿಗಳಿಗೆ ಋಣಿಯಾಗಿದ್ದಾನೆ(12-179).

'ಸುವಿಚಾರ ಚರಿತೆ 'ಯ ಹಸ್ತ ಪ್ರತಿಗಳು ಸಂಧಿಗಳ ವಿಭಾಗದ ದೃಷ್ಟಿಯಿಂದ ಎರಡು ಪರಸ್ಪರ ಭಿನ್ನ ಭಿನ್ನ ಪರಂಪರೆಗಳಲ್ಲಿ ಉಪಲಬ್ಧವಿವೆ. ಕೆಲವು ಪ್ರತಿಗಳಲ್ಲಿ 10 ಸಂಧಿಗಳಿದ್ದರೆ ಮತ್ತೆ ಕೆಲವು ಪ್ರತಿಗಳಲ್ಲಿ 12 ಸಂಧಿಗಳಿವೆ. ಪದ್ಯ ಸಂಖ್ಯೆಯಲ್ಲೂ ವ್ಯತ್ಯಾಸವಿದೆ. ಪ್ರಸ್ತುತ ಕೃತಿಯಲ್ಲಿ 12 ಸಂಧಿ 1447 ಸಾಂಗತ್ಯಗಳಿವೆ. ಸಂಪಾದಕರು ಪ್ರಸ್ತಾವನೆಯ ಪು. 38ರಲ್ಲಿ ಕೊಟ್ಟಿರುವ ವಿವರಣೆಯಂತೆ 1127 ಪದ್ಯಗಳ ಕೃತಿ ಕನಿಷ್ಠ ಮಿತಿಯದಾಗಿದ್ದು 1511 ಪದ್ಯಗಳ ಕೃತಿ ಗರಿಷ್ಠತಮವಾಗಿದೆ.

ಸಂಪಾದಕರು ಪ್ರಸ್ತಾವನೆಯಲ್ಲಿ ಕೃತಿಯ ವಸ್ತು, ಕವಿ ಕಾವ್ಯ ವಿಚಾರ, ಕೃತಿ ವಿಮರ್ಶೆಗಳ ಬಗೆಗೆ ತಿಳಿಸಿದ್ದಾರೆ. ಕೃತಿಯ ಅಂತ್ಯದಲ್ಲಿ ಅನುಬಂಧ 1 ರಲ್ಲಿ ಕವಿಯ ಮತ್ತೊಂದು ಲಘುಕೃತಿ 'ಜ್ಞಾನಭಾಸ್ಕರ ಚರಿತೆ'ಯನ್ನು ಕೊಟ್ಟಿದ್ದಾರೆ. ಅನಂತರ ಸುವಿಚಾರ ಚರಿತೆಯ ಪದ್ಯಗಳ ಅಕಾರಾದಿ ಸುವಿಚಾರ ಚರಿತೆಯ ಪಾಠಾಂತರ, ಒಪ್ಪೋಲೆಗಳಿವೆ.

ಕೃತಿಯನ್ನು ಸಂಪಾದಕರು ತಮ್ಮಲ್ಲಿದ್ದ ಏಕೈಕ ಹಸ್ತಪ್ರತಿಯನ್ನು ಆಧರಿಸಿ ಪ್ರಕಟಣೆಗೆ ಸಿದ್ಧಪಡಿಸಿದ್ದಾರೆ. ಕೃತಿಯ ಮತ್ತೆರಡು ಪ್ರತಿಗಳು ಕಾಲಾನುಕ್ರಮದಲ್ಲಿ ಲಭಿಸಿದ್ದು ಅವುಗಳ ಪಾಠ ಭೇದಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಒಪ್ಪೋಲೆಯಲ್ಲಿರದ ಕೆಲವು ಅಚ್ಚಿನ ತಪ್ಪುಗಳನ್ನು ಈ ಮುಂದೆ ಸೂಚಿಸಿದೆ.

9	103	ನಂಬುರು	ನಂಬರು
9	103	ನಾರುಱು	ವಾಱು
9	100, 107, 109	ತೊರೆ	ತೊಱೆ
12	151	ಬಲ್ಲದ	ಬಲ್ಲವ
10	90	ಸಂಥಿ	ಸಂಧಿ
7	68	ತೆಳ್ಪುಸಿರಿ	ತೆಳ್ವಸಱಿ
9	119	ಮೊದಲು ಸುರಿದ	ಮೊದಲುಸುರಿದ
9	99	ತೋರಿದ	ತೊಱೆ
5	118	ತೋರಿ	ತೊಱೆ
1	109	ನಂಳ್ಳವೆನೆ	ನಂಳ್ಳವನೆ
ಪು.	275	ಶೂರಱಿ	ಶೂರರಿ

ಕೆಸ್ತೂರದೇವರ ಸ್ವರ ವಚನಗಳು (ಸಂ.) ಎಂ. ಎಸ್. ಸುಂಕಾಪೂರ

ಕನ್ನಡ ಸಾಹಿತ್ಯದ ಒಂದು ಪ್ರಮುಖ ವಿಭಾಗವಾದ ವೀರಶೈವ ವಾಙ್ಮಯದಲ್ಲಿ ವಚನಗಳಂತೆಯೆ ಸ್ವರವಚನಗಳ ರಚನೆಯು ಸಮಾನಾಂತರ ಸ್ತರದಲ್ಲಿ ಬೆಳೆದು ಬಂದಿದೆ. ಆದರೆ ಸ್ವರವಚನಗಳು ವಿದ್ವಾಂಸರು ಹಾಗು ಅಭ್ಯಾಸಿಗಳಲ್ಲಿ ವಚನಗಳಷ್ಟು ಪರಿಚಿತವಾಗಿಲ್ಲ. ಈಗ ಖಚಿತವಾಗಿ ತಿಳಿದಿರುವಂತೆ ಬಸವಣ್ಣನವರ (ಕ್ರಿ. ಶ. 1160) ಹಿರಿಯ ಸಮಕಾಲೀನರಾದ ಸಕಲೇಶ ಮಾದರಸರ (ಕ್ರಿ. ಶ. 1140) 'ಸಕಲೇಶ' ಅಂಕಿತವನ್ನುಳ್ಳ 'ತಂಗಾಳಿಗಲಿರು ಮರನೆ...' ಎಂಬ ಸ್ವರ ವಚನ ಅತ್ಯಂತ ಪ್ರಾಚೀನವಾದ ರಚನೆಯಾಗಿದೆ. ಬಸವಾದಿ ಶಿವಶರಣರ ಸ್ವರ ವಚನಗಳು ಮಹಾಲಿಂಗದೇವ, ಜಕ್ಕಣ. ಸಿದ್ಧಲಿಂಗರ 'ಏಕೋತ್ತರ ಶತಸ್ಥಲ'

ಗಳಲ್ಲೂ 'ಶೂನ್ಯಸಂಪಾದನೆ'ಗಳ ವಿವಿಧ ಪರಿಷ್ಕರಣಗಳಲ್ಲೂ ಹಾಗೂ ಇತರ ಸಂಕಲನಗಳಲ್ಲೂ ಲಭಿಸಿವೆ.

ಕ್ರಿ. ಶ. 16ನೆಯ ಶತಮಾನದ ಉತ್ತರಾರ್ಧದಲ್ಲಿ 'ಅಭಿನವ ಅಲ್ಲಮ'ರೆಂಬ ಅಭಿಧಾನಕ್ಕೆ ಪಾತ್ರರಾದ ಎಡೆಯೂರ ಸಿದ್ಧಲಿಂಗಸ್ವಾಮಿಗಳ ಪರಿಸರದಲ್ಲಿ ನಡೆದ ಧಾರ್ಮಿಕ-ಸಾಹಿತ್ಯಕ-ಸಾಮಾಜಿಕ ಚಟುವಟಿಕೆಗಳ ವೇಳೆಯಲ್ಲಿ ಸ್ವರವಚನ ಪ್ರಕಾರವೂ ತನ್ನ ವ್ಯಾಪ್ತಿಯನ್ನು ವಿಸ್ತರಿಸತೊಡಗಿತು.

ಗುರುಸಿದ್ಧಲಿಂಗವೆಂಬ ಅಂಕಿತವನ್ನು ಬಳಸಿ ಕೆಸ್ತೂರದೇವ ಸ್ವರವಚನಗಳನ್ನು ರಚಿಸಿದ್ದಾನೆ. ಈತನ ಸ್ವರವಚನಗಳು ಕೆಸ್ತೂರದೇವರ ಸ್ವರವಚನಗಳೆಂದೆ ಪ್ರಸಿದ್ಧವಾಗಿವೆ. ಈತನ ಹಾಡುಗಳಲ್ಲಿನ ಅಂಕಿತವನ್ನು ಗಮನಿಸಿ ಈತ ತೋಂಟದ ಸಿದ್ಧಲಿಂಗನ ಪರಂಪರೆಯವನೆಂದು ನಿರ್ಧರಿಸಲಾಗಿದೆ. ಈತನ ಸ್ಥಳ ಕೆಸ್ತೂರಾಗಿದ್ದು ಇದು ತೋಂಟದ ಸಿದ್ಧಲಿಂಗ ಯತಿಗಳ ಕಾರ್ಯಕ್ಷೇತ್ರವಾದ ಎಡೆಯೂರಿಗೆ ಸಮೀಪ ದಲ್ಲಿನ ಕೆಸ್ತೂರೆ ಎಂದು ಕಾಣುತ್ತದೆ.

ಪ್ರಸ್ತುತ ಕೃತಿಯಲ್ಲಿ ಕೆಸ್ತೂರ ದೇವನ 100 ರಾಗ ನಿರ್ದೇಶ ಸಹಿತವಾದ ಸ್ವರವಚನಗಳಿವೆ. ಈತನ ಬಹುಪಾಲು ಕೃತಿಗಳು ಗುರು ಸಿದ್ಧಲಿಂಗ ಅಂಕಿತದವೆ ಆಗಿದ್ದರೂ ಕೆಲವು ಸ್ವರವಚನಗಳಲ್ಲಿ ಈ ಮುಂದಿನ ಅಂಕಿತಗಳಿವೆ. ಗುರು ಶಿವ ಸಿದ್ಧದೇಶಿಕ (41), ಗುರುಸಿದ್ಧ (58, 90), ಗುರುಸಿದ್ಧದೇವ (66, 99), ಗುರುಸಿದ್ಧಲಿಂಗೇಶ (36, 43, 75, 87, 89, 95), ಗುರುಸಿದ್ಧೇಶ್ವರ (51, 55, 71) ಮತ್ತು ಸಿದ್ಧಲಿಂಗ (38, 44, 67, 69 73, 81, 83, 84, 85.) ಈತನ ಸ್ವರವಚನಗಳ ನುಡಿ ಸಂಖ್ಯೆ 3 ರಿಂದ 17ರವರೆಗೂ ವ್ಯಾಪಿಸಿದೆ. 3, 5ರ ನುಡಿಗಳ ಸ್ವರವಚನಗಳೆ ಅಧಿಕ.

ಪ್ರಸ್ತುತ ಕೃತಿಯನ್ನು ಸಂಪಾದಕರು 2 ಓಲೆ ಪ್ರತಿಗಳನ್ನು ಬಳಸಿಕೊಂಡು ಅಚ್ಚಿಗೆ ಸಿದ್ಧಪಡಿಸಿದ್ದಾರೆ. ಅಲ್ಲದೆ ವಿವಿಧ ಆಕರಗಳಲ್ಲಿ ಲಭಿಸಿದ 13 ಗುರುಸಿದ್ಧ ಲಿಂಗಾಂಕಿತ ಸ್ವರವಚನಗಳನ್ನು 'ಅನುಬಂಧ'ದಲ್ಲಿ ಕೊಟ್ಟಿದ್ದಾರೆ. ಇವುಗಳ ಕರ್ತೃತ್ವ ನಿರ್ಧಾರ ಮುಂದಿನ ಸಂಶೋಧನೆಗೆ ಆಹಾರ.

ಇಂಥಹ ಕೃತಿಗೆ ಅಕಾರಾದಿ ಇಲ್ಲದಿರುವುದು ವಿಷಾದನೀಯ.

ಆಚರಣೆಯು ಸಂಬಂಧದ ವಚನಗಳು (ಸಂ.) ಪಿ. ಎಂ. ಗಿರಿರಾಜು

ಹರತಾಳದ ಸಂಪಾದನೆ ಚನ್ನನಂಜಯುದೇವನ ಸಂಕಲಿತ ಕೃತಿ ಆಚರಣೆಯು ಸಂಬಂಧದ ವಚನಗಳು ವಚನಸಂಕಲನ ಪ್ರಕಾರಕ್ಕೆ ಸಂಬಂಧಿಸಿದ ಕೃತಿ. ಹಸ್ತಪ್ರತಿಗಳಲ್ಲಿ ಈತನನ್ನು ಷಟ್ಸ್ಥಲ ಚಕ್ರವರ್ತಿ ಎಂದು ವಿಶೇಷಿಸಿದೆ. ಈ ವಚನಗಳು ಲಿಂಗವಂತರಿಗೆ ಆಚರಣೆಯ ಸಂಬಂಧದ ಮಹತ್ತ್ವಪೂರ್ಣ ಪ್ರಾಚೀನ ಧಾರ್ಮಿಕ ಪ್ರಾಮಾಣಿಕ ಮೂಲ ಗ್ರಂಥಗಳಾಗಿವೆ. ಇವುಗಳಿಗೆ ಮೂಲಭೂತವಾದ ಸಾಮಗ್ರಿ ಬಸವಾದಿ ಪ್ರಮಥರ ಪ್ರಣೀತವಾದ ಅನುಭಾವ ವಚನಗಳಾಗಿವೆ. ನಾನಾ ವಚನಕಾರರ ಶ್ರೇಷ್ಠ ಅನುಭಾವ ವಚನಗಳು ಶಾಸ್ತ್ರರೂಪದಲ್ಲಿ ಸಂಕಲಿತವಾಗಿವೆ.

ಈ ಕೃತಿಗಳೆರಡೂ ಸ್ಥಲವಿಭಾಗವನ್ನುಳ್ಳವಾಗಿದ್ದು ಆಚರಣೆಯು ವಚನಗಳಲ್ಲಿ 28 ಸ್ಥಲ 140 ವಚನಗಳಿವೆ. ಸಂಬಂಧದ ವಚನಗಳಲ್ಲಿ 24 ಸ್ಥಲ 121 ವಚನಗಳಿವೆ. ಒಟ್ಟಿನಲ್ಲಿ ಎರಡೂ ಕೂಡಿ 52 ಸ್ಥಲ 261 ವಚನಗಳಿವೆ. ಈ ಸಂಕಲನ ಕೃತಿಗೆ 'ಎಲ್ಲ ಪುರಾತನರ ವಚನಾಮೃತಸಾರ'ವೆಂದೂ 'ಆಚರಣೆಯು ಅಮೃತವಚನ' ವೆಂದೂ ಹಸ್ತಪ್ರತಿಗಳಲ್ಲಿ ಹೆಸರಿಸಿದೆ.

ಸಂಪಾದಕರು ಸಂಕಲನಕಾರ ಚನ್ನನಂಜಯುದೇವನ ಕಾಲವನ್ನು ಗುರುಸಿದ್ಧದೇವರು ಸೇರಿಸಿದ. 'ನಿಜಾಚರಣೆಯು ಸಂಬಂಧದ ವಚನ'ಗಳು ಕೃತಿಯ ಅಂತ್ಯದಲ್ಲಿ ನಿರೂಪಿತವಾಗಿರುವ ಗುರುಪರಂಪರೆ ಹಾಗೂ ಬಸವಲಿಂಗ (1678)ನ 'ಕೊಟ್ಟೂರು ಬಸವೇಶ್ವರನ ಪುರಾಣ'ದ ಉಲ್ಲೇಖಗಳನ್ನು ಆಧರಿಸಿ 'ತಾತ್ಕಾಲಿಕವಾಗಿ ಸಂಪಾದನೆ ಚನ್ನನಂಜಯುದೇವನ ಕಾಲವನ್ನು ಸು. 1598 ಎಂದು ಇಟ್ಟುಕೊಳ್ಳಬಹುದು' ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಬಿಜ್ಜಾವರದ ಪರಂಪರೆಗೆ ಸಂಬಂಧಿಸಿದಂತೆ ಚನ್ನನಂಜಯುದೇವನನ್ನು ಕುರಿತು ಸಂಪಾದಕರು ಮಾಡಿರುವ ತೀರ್ಮಾನದ ಬಗೆಗೆ ಮತ್ತಷ್ಟು ಆಳವಾಗಿ ಪರಿಶೀಲಿಸಬೇಕಾಗಿದೆ. ಈ ಬಗೆಗೆ ಹೊಸಹಾದಿ ತೋರಿರುವ ಸಂಪಾದಕರ ಪ್ರಯತ್ನ ಶ್ಲಾಘನೀಯ.

'ಅರಿಕೆ'ಯಲ್ಲಿ ಸಂಪಾದಕರು ಕನ್ನಡದಲ್ಲಿನ ಆಚರಣೆ ಸಂಬಂಧದ ಪ್ರಕಾರಕ್ಕೆ ಸಂಬಂಧಿಸಿದ 8 ಕೃತಿಗಳ ಬಗೆಗೆ ಪ್ರಸ್ತಾಪಿಸಿದ್ದಾರೆ. ಇವುಗಳಲ್ಲಿ ಹಲವರ ಕೃತಿಗಳನ್ನು ಸಂಪ್ರದಾಯಶುದ್ಧವಾಗಿ ಪ್ರಕಟಿಸಿದ ಕೀರ್ತಿ ಪ್ರಕೃತದ ಸಂಪಾದಕರದಾಗಿದೆ.

ಈ ಕೃತಿ 6 ಓಲೆ ಹಾಗೂ 1 ಕಾಗದದ ಪ್ರತಿಯಿಂದ ಸಂಪಾದಿತವಾಗಿದೆ. ಕೃತಿಯ ಕೊನೆಯಲ್ಲಿ ವಚನಕಾರ–ವಚನಾಂಕಿತ–ವಚನಾಂಕ–ವಚನ ಸಂಖ್ಯೆಗಳ ಸೂಚಿ, ಆಚರಣೆಯು ವಚನಗಳ ಅಕಾರಾದಿ, ಸಂಬಂಧದ ವಚನಗಳ ಅಕಾರಾದಿ, ಗ್ರಂಥಸ್ಥ ಕಠಿಣ ಶಬ್ದಾರ್ಥಕೋಶ, ಗ್ರಂಥಸ್ಥ ಆಡುಪದ ಛಾಯಾಕೋಶ, ಸ್ಥಲ ಕಟ್ಟುಗಳ ಪಾಠಾಂತರಗಳಿವೆ.

ಸಾಲೊಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು (ಸಂ.) ಎಂ. ಎನ್. ವಾಲಿ.

ಗಂಗಾಧರ ಕವಿ ಡಂಗುರ ಪದಗಳ ಕರ್ತೃ. ಈತ ಸಾಲೊಟಗಿ ಶಿವಯೋಗೀಶ್ವರರ ಸಮಕಾಲೀನ. ಶಿವಯೋಗಿಗಳು ಕ್ರಿ.ಶ. 1600ರಲ್ಲಿ ಇದ್ದರೆಂದು ಭಾವಿಸಲಾಗಿದೆ. ಕ್ರಿ.ಶ. 1860ರಲ್ಲಿ ರಚಿತವಾದ 'ಸಾಲೊಟಗಿ ಶಿವಯೋಗೀಶ್ವರ ಪುರಾಣ'ದ ಕರ್ತೃ ತೊರವಿ ಸಿದ್ಧಲಿಂಗ ಶಿವಯೋಗಿಗಳ ಹಾಗು ಗಂಗಾಧರ ಕವಿಗೆ ಸಂಬಂಧಿಸಿದ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಕವಿ ಗಂಗಾಧರನ ಕಾಲ ಸು. ಕ್ರಿ.ಶ. 1600. ಈತ 770 ಪದ್ಯಗಳನ್ನು ರಚಿಸಿದನೆಂದು ವದಂತಿ ಇದ್ದು ಸಂಪಾದಕರು ತಮಗೆ ಲಭಿಸಿದ 72 ಪದ್ಯಗಳನ್ನು ಸಂಕಲಿಸಿದ್ದಾರೆ.

ಈ ಸಂಕಲನದ ಹಾಡುಗಳಲ್ಲಿ 'ನೀತಿ ಜ್ಞಾನಬೋಧಜ್ಞಾನ, ಕಾಲಜ್ಞಾನ, ಖಂಡಜ್ಞಾನದ ಹಾಡುಗಳು ಸಮಾವೇಶವಾಗಿವೆ. ಇಲ್ಲಿಯ ಹಾಡುಗಳು ದ್ವಿಪದಿ, ತ್ರಿಪದಿ, ಚೌಪದಿ, ಅಷ್ಟಪದಿಗಳಲ್ಲಿವೆ. ಇಲ್ಲನ ಹಾಡುಗಳಲ್ಲಿ ನಿಯತವಾದ ಅಂಕಿತವಿಲ್ಲ. ಹೆಚ್ಚಿನ ಹಾಡುಗಳಲ್ಲಿ 'ಸನ್ನತಿಪುರಹರ ಹೊನ್ನಸೋಮನ ಕಂದ' ಎಂಬ ಅಂಕಿತವಿದೆ. ಉಳಿದ ಕೆಲವು ಅಂಕಿತಗಳು ಹೀಗಿವೆ. ಸನ್ನತಿರಾಯ (3), ಸಾಲವುಟ್ಟಿಗೆ ಚನ್ನಬಸವ ಶಿವಯೋಗಿ (5), ಅಮರ ಕಲ್ಯಾಣ (14, 18), ಅಮರ ಕಲ್ಯಾಣದ ನಂದೀಶ್ವರ (67), ಸನ್ನತಿ ಸೋಮಯ್ಯ (21), ಭೀಮಾತೀರ ನಿವಾಸಿ (34). ಕೆಲವು ಹಾಡುಗಳಲ್ಲಿ ಅಂಕಿತವಿಲ್ಲ. (3, 10, 11, 12, 13, 17, 20, 23, 24, 25, 26 ರಿಂದ 33, 35 ಇ.) ಇಲ್ಲಿನ ಪದಗಳಲ್ಲಿ ಬೇರೆ ಬೇರೆಯವರ ರಚನೆಗಳೇನಾದರೂ ಸೇರಿವೆಯೇ ಎಂಬ ಅಂಶ ಪರಿಶೀಲನಾರ್ಹ.

ಸಂಪಾದಕರು ಪ್ರಸ್ತಾವನೆಯಲ್ಲಿ ಸಾಲೊಟಗಿಯ ಪ್ರಾಚೀನತೆ, ಊರಿನಲ್ಲಿನ ದೇವಾಲಯಗಳ ವಿವರ, ಶಿವಯೋಗೀಶ್ವರರ ಜಾತ್ರೆಯಲ್ಲಿನ ಸಂಪ್ರದಾಯಗಳು, ಡಂಗುರಪದಗಳ ಕರ್ತೃವಿಚಾರ, ಹಸ್ತಪ್ರತಿಗಳ ಬಗೆಗೆ ಪ್ರಸ್ತಾಪಿಸಿದ್ದಾರೆ. ಪ್ರಸ್ತುತ ಕೃತಿ 2 ಕಾಗದದ ಕೃತಿಗಳಿಂದ ಸಿದ್ಧವಾಗಿದೆ. ಕೃತಿಯ ಕೊನೆಯಲ್ಲಿ ಪದಗಳ ಮೊದಲ ಚರಣಗಳ ಅಕಾರಾದಿ ಇದೆ.

ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರನ ಕಾವ್ಯ (ಸಂ) ಹ. ಕ. ರಾಜೇಗೌಡ

ಗರಣಿ ಬಸವಲಿಂಗ 'ಬಸವೇಶ್ವರನ ಕಾವ್ಯ'ದ ಕರ್ತೃ. 'ಬಸವರಾಜ ದೇವರ ತಾರಾವಳಿ' ಮತ್ತು 'ಸಿದ್ಧೇಶ್ವರನ ಪವಾಡದ ತಾರಾವಳಿ' ಆತನ ಇತರ ಕೃತಿಗಳು.

ಬಸವೇಶ್ವರನ ಕಾವ್ಯದ ಮೊದಲ ಸಂಧಿಯಲ್ಲಿ ತಾನು ಉಜ್ಜನೋದುವಿನ ಪರುವತದೇಶಿಕರ ಕರಸಂಜಾತನಾದ ಗರಣಿಯ ವಿರೂಪಾಕ್ಷನ ಹಸ್ತಾಂಬುಜೋದ್ಭವ ನೆಂದು ಹೇಳಿದ್ದಾನೆ. ಅಲ್ಲದೆ ಗುರುನೀಲಕಂಠ ದೇವರ ಶಿಷ್ಯ ಗುಂಡನಾ

[ಸಾ ?] ಗರದ ಬಸವಲಿಂಗೇಶ್ವರನು ಬಸವೇಶ್ವರನ ಕಾವ್ಯವನ್ನು ವಿಸ್ತರಿಸೆನ್ನಲು ತಾನು ಅಸಮ ಶರಣರ ಕಥೆಗಳನ್ನು ವೃಷಭನ ಕಾವ್ಯದಲ್ಲಿ ಹೇಳಿದುದಾಗಿ ತಿಳಿಸಿದ್ದಾನೆ. ಕೃತಿ ಸಮಾಪ್ತಿಯ ಕಾಲದ ಬಗೆಗೆ ಏನನ್ನೂ ತಿಳಿಸಿಲ್ಲ. 'ಕೊಟ್ಟೂರು ಬಸವೇಶ್ವರ ಪುರಾಣ'ದ ಕರ್ತೃ ಬಸವ ಲಿಂಗ ಕವಿ (1678) ಗರಣೆಯ ಮಹೇಶ ಬಸವರಾಜನನ್ನು ಸ್ತುತಿಸಿದ್ದಾನೆ. ಅಲ್ಲದೆ ಮರಿರಾಚವಟ್ಟೇಶ (ಸು. 1620) ತಾನು ಪ್ರಭುನಟನ ತಾರಾವಳಿ ಮತ್ತು ಪ್ರಭು ದೇವರ ಸ್ತೋತ್ರದ ತ್ರಿವಿಧಿಗಳನ್ನು ರಚಿಸಲು ಗರಣೆಯ ಬಸವೇಶ ಪ್ರಭು ಪ್ರೇರಕನಾದ ಅಂಶವನ್ನು ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾನೆ. (ಆರ್. ನರಸಿಂಹಾಚಾರ್ : ಕರ್ಣಾಟಕ ಕವಿ ಚರಿತೆ, ದ್ವಿತೀಯ ಸಂಪುಟ, 1919, ಪುಟ. 399 ; ಎಸ್. ಶಿವಣ್ಣ ; ಮರಿರಾಚವಟ್ಟೇಶ, ಪ್ರಬುದ್ಧ ಕರ್ಣಾಟಕ, 56.1, 1974, ಪುಟ. 91–3).

ಶ್ರೀ ಎಂ. ಎಸ್. ಬಸವಲಿಂಗಯ್ಯನವರು ಗರಣೆ ಬಸವಲಿಂಗನ ಕಾಲವನ್ನು ಗುರುಪರಂಪರೆ ಹಾಗೂ ಉಪಲಬ್ಧ ಕಾಗದ ಪ್ರತಿಯಲ್ಲಿನ ಅಂತ್ಯದ ಲಿಪಿಕಾರ ಪ್ರಶಸ್ತಿಯನ್ನು ಆಧರಿಸಿ ಕ್ರಿ.ಶ. ಸು. 1600 ಎಂದು ನಿರ್ಧರಿಸಿದ್ದಾರೆ. (ನೋಡಿ : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, 24.4, 1939, ಪುಟ. 281–82). ಪ್ರಸ್ತುತ ಸಂಪಾದಕರು ಈ ಕಾಲವನ್ನು ಮತ್ತಷ್ಟು ಹಿಂದಕ್ಕೆ ಸರಿಸಿ ಈತ '1470 ರಲ್ಲಿದ್ದನೆಂದು ಖಚಿತವಾಗುತ್ತದೆ' ಎಂದಿದ್ದಾರೆ. ಹೀಗೆ ನಿರ್ಧರಿಸುವಲ್ಲಿ ತೋಂಟದ ಸಿದ್ಧಲಿಂಗನ ಕಾಲ 1470 ಎಂಬ ಕವಿ ಚರಿತೆಯ ಕಾಲವನ್ನು ಅವಲಂಬಿಸಿದ್ದಾರೆ. ಈಚಿನ ಸಂಶೋಧನೆಗಳು ಸಿದ್ಧಲಿಂಗರು ಕ್ರಿ.ಶ. 1561 ರಲ್ಲಿ ಜೀವಿಸಿದ್ದರೆಂಬ ಅಂಶವನ್ನು ಬಯಲಿಗೆ ತಂದಿವೆ. (ನೋಡಿ : ಎಸ್. ಶಿವಣ್ಣ : ತೋಂಟದ ಸಿದ್ಧಲಿಂಗರ ಕಾಲವನ್ನು ಕುರಿತು ಕೆಲವು ಟಿಪ್ಪಣಿಗಳು, ಪ್ರಬುದ್ಧ ಕರ್ಣಾಟಕ, 57.4, 1976, ಪುಟ. 15–23). ಹೀಗಾಗಿ ಲಭ್ಯವಾಗಿರುವ ಬಸವೇಶ್ವರನ ಕಾವ್ಯದ ಪುಷ್ಪಿಕೆಯ ಕಾಲ 1–2–1475ಕ್ಕೆ ಅನ್ವಯಿಸುವುದಿಲ್ಲ. ಅದು ಎಂ. ಎಸ್. ಬಸವಲಿಂಗಯ್ಯನವರು ಹೇಳಿರುವಂತೆ 2–2–1715ಕ್ಕೆ ಸಂಬಂಧಿಸಿದೆ. ಹೀಗಾಗಿ ಗರಣೆಯ ಬಸವಲಿಂಗ ಕ್ರಿ.ಶ. 1600 ರಲ್ಲಿದ್ದನೆಂಬ ಅಭಿಪ್ರಾಯವೇ ಸರಿಯಾಗಿದೆ.

ಬಸವೇಶ್ವರನ ಕಾವ್ಯ ಸಾಂಗತ್ಯದಲ್ಲಿದ್ದು 19ಸಂಧಿಗಳಿವೆ. ಒಂದನೆಯ ಸಂಧಿಯ ಆದಿಯಲ್ಲಿ ವೃತ್ತವೊಂದಿದ್ದು ಅನಂತರ ಮೂರು ಕಂದಗಳಿವೆ. 2 ರಿಂದ 19 ನೆಯ ಸಂಧಿಗಳವರೆಗೆ ಪ್ರತಿ ಸಂಧಿಯ ಆರಂಭದಲ್ಲಿ ಒಂದೊಂದು ಕಂದವಿದೆ. ಬಸವಾದಿ ಶಿವಶರಣರ ಕಥೆ ಕೃತಿಯ ವಸ್ತು. ಭೀಮಕವಿ (1369)ಯ 'ಬಸವ ಪುರಾಣ'ವನ್ನು ಕವಿ ಅನುಸರಿಸಿದ್ದಾನೆ. ಕೃತಿ ಏಕೈಕ ಪ್ರತಿಯನ್ನು ಆಧರಿಸಿ ಪ್ರಕಟವಾಗಿದೆ.

ಸಂಪಾದಕರು ಕೃತಿಯ ಪೀಠಿಕೆಯಲ್ಲಿ ಕವಿಯ ಗುರುಪರಂಪರೆ, ಅವಶೇಷಗಳ ಹಿನ್ನೆಲೆಯಲ್ಲಿ ಕವಿಯ ವಾಸಸ್ಥಳವಾದ ಗರಣಿಯ ಹಿನ್ನೆಲೆ, ಕಾಲ ವಿಚಾರ, ಕೃತಿ ಸಾರ, ವಿಮರ್ಶೆ, ಸಮಕಾಲೀನ ಜನಜೀವನ ಚಿತ್ರಣ ಹಾಗು ಹಸ್ತಪ್ರತಿಯ ಬಗೆಗೆ ವಿವೇಚಿಸಿದ್ದಾರೆ. ಕೃತಿಯ ಅಂತ್ಯದಲ್ಲಿ ವ್ಯಕ್ತಿ ನಾಮಸೂಚಿ ಮತ್ತು ಅರ್ಥ ಕೋಶಗಳಿವೆ.

ಕೃತಿಯಲ್ಲಿನ ಹಲವಾರು ಮುದ್ರಣ ದೋಷಗಳನ್ನು ತಿಳಿಸಿದೆ. (ಸಂಧಿ 9ರ ವರೆಗೆ ಮಾತ್ರ)

ಸಂಧಿ	ಪದ್ಯ	ತಪ್ಪು	ಸರಿ
1	25	ಗರುಣಿಯ	ಗರಣಿಯ
1	30	ನುತಿಪೋದನು	ನುತಿಪುದನು
1	61	ಕೇಳಿ	ಕೇರಿ
1	61	ಮುರ	ಮಠ
1	108	ಯಾರವ	ಯಾ ರವ
2	27	ನುದಿ	ನಂದಿ
2	27	ದೆಂದು	ನೆಂದು
2	30	ಪ್ರವದೆ	ಪ್ರಮುದೆ
2	30	ನಿಮಿರ್ದುಂಗ	ನಿಮಿರ್ದಂಗ
2	46	ರ್ಭಕನ ಬಲೆ	ರ್ಭಕನಬಲೆ
2	48	ನದೀಶ್ವರ	ನಂದೀಶ್ವರ
2	51	ದುಖದೆ	ದುಃಖದೆ
2	55	ರೂಪಿಂದೆ	ರೂಪಿಂದ
2	64	ಪುತ್ರನು	ಪುತ್ರನ
2	70	ಕೇಲ್ಕಾಜಲ	ಕೇಳ್ಕೂಡಲ ?
2	72	ವಿದಳ	ವಿಮಳ
2	72	ನಲ್ಲಿ ದನ್ಯವ	ನಲ್ಲದನ್ಯವ
2	72	ನೋಡ	ನೂಡ
2	77	ಮನುಜರ ಜ್ಞಾನಂ	ಮನುಜರಜ್ಞಾನ
2 3	80 4	ಅಭಿದಾನ	ಅಭಿಧಾನ
2	81	ಪೇಳ್ದೊಡೆ	ಪೇಳ್ವೊಡೆ

ಸಂಧಿ	ಪದ್ಯ	ತಪ್ಪು	ಸರಿ
2	106	ನೂತಿನ	ಮಾತಿನ
2	130	ಕರಣ	ಕರುಣ
3	ಕಂದ	4ನೆಯ ಪಂಕ್ತಿಯಲ್ಲಿ 2 ಮಾತ್ರೆ ಕಡಮೆಯಿದೆ.	
3	31	ಪಂಚ ಪಾವಡ	ಪಂಚತಾವಡ
3	51	ಬಂದಿಕ್ಕಿ	ಬಂದಕ್ಕಿ
3	89	ಬರೆ	ಒರೆ
3	142	ಉಲಪೆ	ಉಲುಪೆ
3	156	ತುಂಬಿಟ್ಟು	ಕುಂಬಿಟ್ಟು
3	167	ದೊನು	ದೊಳಂ
3	168	ಕಂಚುಕಿ ಕೊ	ಕುಂಚುಕತೊ
3	200	ನೋಸರಿ	ನೋಸರಿಸೆ
4	11	ಬಾಷೆ	ಭಾಷೆ
4	22	ದಾಡಿದರು	ದಾಡಿದಳಂ
4	28	ಪಾರಿಯಾತಕ	ಪಾರಿಯಾತ್ರಕ
4	38	ನಿಕರ ಕಪ್ಪಾಂಗ	ನಿಕರಕಪ್ಪಾಂಗ
4	41	ಥವಳ	ಧವಳ
4	57	ಕಳುಪಿ	ಕಳುಪೆ
4	73	ಅಪರಾಥ	ಅಪರಾಧ
4	74	ಧರ ಹಾಸ್ಯ	ದರಹಾಸ್ಯ
4	88	ಪನ್ನಳಿನ ಕೇ	ಪನ್ನಳಿನಕೆ
4	92	ಕರುಣ	ಕರಣ
4	113	ನಾಗಭೂಣ	ನಾಗಭೂಷಣ
4	119	ಚುದುರಿಂ	ಚದುರಿಂ
4	121	ನಿನ್ನುವೊಡ	ನಿನ್ನುವೂಡ
4	130	ಕರಣಾ	ಕರಣ
4	153	ಡಯು	ದಯಂ
4	161	ನೋಡತಂಗಜೆ	ನೋಡಲಗಜೆ
4	162	ವಿೂಟಿ	ವಿೂಋ
4	164	ಭಿನ್ನ	ಬಿನ್ನ
4	166	ಶತಮುಖ	ಶತಮಖ

ಸಂಧಿ	ಪದ್ಯ	ತಪ್ಪು	ಸರಿ
4	173	ತಿರಿಕಲ್ಲ	ತಿಱಿಕಲ್ಲ
5	53	ಸೊಪ್ಪಿ	ಸೊಪ್ಪ ?
5	57	ಪ್ರಭವೆ	ಪ್ರಭುವೆ
5	67	ಚರ ಕಣಿಸಿ	ಚರಕುಣಿಸಿ
5	87	ಮರುಗದಂರುಂಗೆ	ಮರಗಂದುರೆಗೆ
5	96	ಬಿಂದು	ಬರಿದು
5	96	ಅರಿಕೊಂಕೊಟಿ	ಅರಿಕೊಂಡೊಲಿ
5	102	ಬಂದಿಂಗಿ	ಬಂದಿಂಗಿ[ತ]
5	114	ಕಂಕರಣ	ಕಂಕಣ
5	119	ಪೂಜೆಗೊದವಿ	ಪೂಜೆಗೊದವಿ
		ಸೋಲಿಸಿದ	ನೊಲಿಸಿದ
5	134	ತಿರುಬೆಟ್ಟ	ತಿರುಚಿಟ್ಟ
5	147	ತೋಟುದ	ತೋಱಿದ
5	148	ಪುರಷ	ಪುರುಷ
5	151	ವ್ಯಾಧಿಯಂ	ವ್ಯಾಧಿಯೆ ?
5	171	ನೀಶ್ವಲೆ	ನಿಶ್ಚಲೆ
5	174	ಪಾಸವ	ಪಾನ[ಕ] ವ
5	176	ವೆಭ್ರಪು	ಪ್ರಭುವೆ
5	178	ಗಂಥ	ಗಂಧ
5	184	ಎಳೆದೇಱ	ಎಳೆದೇರ
5	195	ಪೊಸೆ	ಪೊಸೆ
6	(ಕಂದ)	ಬಂದಿಕಾರಂ	ಬಂದಿಕಾ[ಱ]ರಂ
6	(ಕಂದ)	ಉಱಿ	ಉರಿ
6	3	ಭಜಕರವಾ	ಭಜಕರನಾ
6	3	ಬಂದಿಕಾರ	ಬಂದಿಕಾಱ
6	12	ಮಲ್ಲಯ್ಯನ	ಮಲ್ಲಯ್ಯಗೆ
6	16	ಪೋಗೆವೆಂ	ಪೋಗೆನೆಂ ?
6	24	ಚೋಱ	ಚೋರ
6	24	ಮೋಱೆ	ಮೋರೆ
6	29,49	ಕರುಣ	ಕರಣ

ಸಂಧಿ	ಪದ್ಯ	ತಪ್ಪು	ಸರಿ
6	37	ನಿಮ್ಮಂತ	ನಿಮ್ಮಂಕ
6	42	ಕಂಬಿಕಾರ	ಕಂಬಿಕಾಱ
6	42	ನಡೆಸುವ	ನಡೆಸುವನ
		ನಡುಗಬ್ಬ	ಡುಂಗಬ್ಬ
6	49	ಯರು ಹರುಹ	ಯುರು ಅರುಹ
6	49	ಸಮುದ್ರೆ	ಸು ಮುದ್ರೆ
7	15	ನಜಿಪೆ	ನಱುಪೆ
7	24	ಪುಟ್ಟೆ	ಪುಟ್ಟಿ
7	25	ಉಂಗುಷ್ಟ	ಉಗುಷ್ಠ
7	30	ತಿರಿಗಲ್ಲ	ತಿಱಿಗಲ್ಲ
7	71	ನುತಿಸಿ	ನುತಿಸೆ
9	39	ತಲೆ	ಕಲೆ
9	63	ನರಹರಿಯು	ನರಹರಿಯ
9	63	ತಿಱಿಜನೆ	ತಿಱ್ಱನೆ
9	76	ಧರಣೇಶನ	ಧರಣೀಶನ
9	80	ಜಲಂದರ	ಜಲಂಧರ
9	85	ನೆಜಿಗೆ	ನೆಱಗೆ
9	117	ಭಕ್ತನ	ಭಕ್ತಳ
9	117	ಲೊಪ್ಪೆತುಂ	ಲೊಪ್ಪಿಕುಂ
9	200	ಪೂದಾಳ	ಪೊಂದಾಳ

ನಾಗವ *ವಿರಚಿತ ಮಾಣಿಕಸ್ವಾಮಿ ಚರಿತ್ರೆ (ಸಂ.) ಜಿ. ಜಿ. ಮಂಜುನಾಥನ್

ನಾಗವ ಮಾಣಿಕಸ್ವಾಮಿ ಚರಿತೆ ಕರ್ತೃ. ಈತ ಕೋಟಿಲಾಭಾನ್ವಯದ ಸ್ಥಿರಗುಣಿ ಸೊಡ್ಡೆಸೆಟ್ಟಿ ಚೌಡಾಂಬಿಕೆಯರ ಮಗ. ಆರ್, ನರಸಿಂಹಾಚಾರ್ಯರು ಈತನ ಕಾಲ ಸು. 1700 ಎಂದಿರುವುದನ್ನು ಸಂಪಾದಕರು ಸಮ್ಮತಿಸಿದ್ದಾರೆ. ಕೊಲ್ಲಿಪಾಕ ಮಾಣಿಕ್ಯಜಿನನ ಕಥೆಯನ್ನು ಬರೆದಿರುವ ಕಾರಣ ಕವಿ ಕೊಲ್ಲಿಪಾಕದ ಸುತ್ತಮುತ್ತಲಿನ ಪ್ರದೇಶದವನೆಂದೆನಿಸುತ್ತದೆ.

---

* ಈತನ ಹೆಸರಿನ ಸರಿಯಾದ ರೂಪ ಕೃತಿಯ ಪಾಠಾಂತರದಲ್ಲಿನ 'ನಾಗನ' ಎಂದು ಡಾ॥ ಎಂ. ಚಿದಾನಂದಮೂರ್ತಿಯವರು ನಿರ್ಧರಿಸಿದ್ದಾರೆ. (ನೋಡಿ ಸಾಧನೆ, 11-4-1982, ಪುಟ 156.)

ಇಂದಿನ ಆಂಧ್ರಪ್ರದೇಶದಲ್ಲಿನ ಕೊಲ್ಲಿಪಾಕದಲ್ಲಿ ಶಂಕರಗಂಡ ಆದಿಜಿನನ ಮಾಣಿಕ್ಯ ಪ್ರತಿಮೆಯುನ್ನು ಪ್ರತಿಷ್ಠಿಸಿದುದನ್ನು ಪ್ರಕೃತ ಕೃತಿ ನಿರೂಪಿಸಿದೆ. ಇದಕ್ಕೆ ಹಿನ್ನೆಲೆಯಾಗಿ ಜೈನರಾಮಾಯಣದ ಕಥೆ ಬಂದಿದೆ. ಇಲ್ಲಿನ ರಾಮಾಯಣದ ಕಥೆ ವಿಮಲಸೂರಿಯ ಪಉಮಚರಿಯಂ, ನಾಗಚಂದ್ರನ ರಾಮಚಂದ್ರ ಚರಿತಪುರಾಣ, ಕುಮುದೇಂದುವಿನ ರಾಮಾಯಣಗಳ ಪರಂಪರೆಗೆ ಅನುವರ್ತಿಯಾಗಿದೆ. ಕೃತಿ ಭಾಮಿನೀ ಷಟ್ಪದಿಯಲ್ಲಿದ್ದು ಸಂಧಿ ವಿಭಾಗವಿಲ್ಲದೆ ಅಖಂಡವಾಗಿ 298 ಷಟ್ಪದಿಗಳಿವೆ,

ಸಂಪಾದಕರು ಪೀಠಿಕೆಯಲ್ಲಿ ಕವಿಪರಿಚಯ, ಕಥಾಸಾರ, ಆಂಧ್ರಪ್ರದೇಶದಲ್ಲಿ ಜೈನಧರ್ಮ, ಶಂಕರಗಂಡನ ಐತಿಹಾಸಿಕತೆ, ಗುಣವತಿ – ಅತ್ತಿಮಬ್ಬೆಯರಲ್ಲಿನ ಸಾದೃಶ್ಯ ಅಂಶಗಳು, ಜೈನರಾಮಾಯಣಗಳ ಸ್ವರೂಪ, ಕೃತಿಯಲ್ಲಿನ ಜಾನಪದೀಯ ಅಂಶಗಳು, ಕೃತಿ ಸಮೀಕ್ಷೆ, ಹಸ್ತಪ್ರತಿಗಳ ವಿವರಗಳ ಬಗೆಗೆ ವಿವೇಚಿಸಿದ್ದಾರೆ.

ಪ್ರಸ್ತುತ ಕೃತಿ 2 ಓಲೆ, 1 ಕಾಗದ ಹಾಗೂ ಕಲ್ಲಚ್ಚಿನ ಕಾಗದದ ಮುದ್ರಣ ಪ್ರತಿಗಳ ಆಧಾರದಿಂದ ಪರಿಷ್ಕೃತವಾಗಿದೆ. ಸಮಾನಸ್ಖಾಲಿತ್ಯವನ್ನು ಗಮನಿಸಿ ಈ ನಾಲ್ಕೂ ಕೃತಿಗಳು ಒಂದೇ ಪರಂಪರೆಗೆ ಸಂಬಂಧಿಸಿದವೆಂಬ ಅಂಶವನ್ನು ದೃಢಪಡಿಸಿದ್ದಾರೆ. ಅನುಬಂಧವಾಗಿ ಗುಣಭದ್ರರ ರಾಮಾಯಣ, ಅರ್ಥಕೋಶಗಳಿವೆ. ಕೆಲವು ಅಚ್ಚಿನ ತಪ್ಪುಗಳು ಇಂತಿವೆ.

ಪದ್ಯ	ತಪ್ಪು	ಸರಿ
26	ಪೇರ್ಮೆ	ಪೆರ್ಮೆ
26	ಮೊಪ್ಪಿ	ಮೊಪ್ಪೆ?
35	ಸೋದರ	ಸೋದರಿ ?
50	ಹೊನ್ನ ಹೂ	ಹೊನ್ನಹೂ
55	ಸೇರಿದ ನಾಗಸತಿ	ಸೇರಿದನಾಗ ಸತಿ
101	ಕೊಪದಿ	ಕೋಪದಿ
170	ಸರಿ	ಸಜಿ
182	ಪೊಡಸಿ	ಪೊಡಸೆ ?
183	ತೆಗೆವ	ತೆಗೆವೆ ?
186	ತಮ ತೀವೆ	ತಮತೀವೆ
200	ಮಾಳ	ಮೊಳ
224	ಅನುಜಗಿಂದೆ	ಅನುಜಗಿಂದ ?
249	ಸುತ್ತಿಸಿ	ಸ್ತುತಿಸಿ

ಜಕ್ಕಣಯ್ಯನ ನಿರಾಳ ಮಂತ್ರಗೋಪ್ಯ (ಸಂ.) ಬಿ. ವ್ಹಿ. ಶಿರೂರ

ಜಕ್ಕಣ್ಣಯ್ಯ ನಿರಾಳ ಮಂತ್ರಗೋಪ್ಯದ ಕೃತಿಕಾರ. ಕೃತಿ ವಚನ ಪ್ರಕಾರಕ್ಕೆ ಸಂಬಂಧಿಸಿದ್ದು 778 ವಚನಗಳಿವೆ. ಇವು 18 ಸ್ಥಲಗಳಲ್ಲಿವೆ. ನಿಷ್ಕಲ ಲಿಂಗಸ್ಥಲ, ಮಹಾಮಹಿಮ ಲಿಂಗಸ್ಥಲಗಳಿಂದ ಆರಂಭವಾಗಿ ಕೃತಿ ನಿರವಯ ಲಿಂಗಸ್ಥಲದೊಡನೆ ಮುಗಿದಿದೆ. ಪ್ರತಿವಚನವೂ 'ಝೇಂಕಾರ ನಿಜಲಿಂಗ ಪ್ರಭುವೇ' ಎಂಬ ಅಂಕಿತದೊಡನೆ ಮುಗಿಯುತ್ತದೆ.

ಜಕ್ಕಣ್ಣಯ್ಯನ ಗುರು ಝೇಂಕಾರ ಪ್ರಭುದೇವ. ಕವಿ ಕೃತಿಯಲ್ಲಿ ತನ್ನ ಬಗೆಗೆಯಾಗಲಿ, ಕಾಲದ ಬಗೆಗೆಯಾಗಲಿ ನೇರವಾಗಿ ಏನನ್ನೂ ತಿಳಿಸಿಲ್ಲ. ಹೀಗಾಗಿ ಕವಿಯ ಕಾಲನಿರ್ಣಯಕ್ಕೆ ಕೃತಿಯಲ್ಲಿನ ಆಂತರಿಕ ಸಾಕ್ಷ್ಯ ಹಾಗೂ ಇನ್ನಿತರ ಬಾಹ್ಯಾಧಾರ ಸಂಗತಿಗಳನ್ನು ಲಕ್ಷಿಸಿ ನಿರ್ಧರಿಸಬೇಕಾಗಿದೆ.

ಶ್ರೀ. ವೀ. ರು. ಕೊಪ್ಪಳ ಮಾಸ್ತರ ಅವರು ಈತನ ಕೃತಿಯ ಕಾಗದ ಪ್ರತಿಯೊಂದರಲ್ಲಿನ ಅಂತ್ಯದ ಲಿಪಿಕಾರ ಪುಷ್ಪಿಕೆ ಹಾಗೂ ವಚನಗಳಲ್ಲಿ ಪ್ರಯೋಗವಾಗಿರುವ ಮಜುಮದಾರ, ಹುದ್ದೇದಾರ, ಮಹಲದಾರ, ಗೌಡ, ವಜೀರ, ಸರದಾರ, ರಾವುತ, ತಳವಾರ, ಚಾವಡಿ, ಠಾಣೆ ಮೊದಲಾದ ಪದ ಪ್ರಯೋಗಗಳನ್ನು ಪರಿಶೀಲಿಸಿ 'ಇವನು ಧಾರವಾಡ ಬೆಳಗಾವಿ ನಾಡಿನಲ್ಲಿ ಕ್ರಿ. ಶ. 1800 ನೆಯ ವರ್ಷದ ಸುಮಾರಿಗೆ ಇದ್ದಿರಬಹುದೆಂಬ' ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಸಂಪಾದಕರು ಮಾಸ್ತರರ ಅಭಿಪ್ರಾಯಕ್ಕೆ ಸಮ್ಮತಿಸಿದ್ದಾರೆ.

ಜಕ್ಕಣ್ಣಯ್ಯ ತನ್ನ ಗುರು ಝೇಂಕಾರ ಪ್ರಭುದೇವನ ಹೆಸರಿನ ಮಧ್ಯದಲ್ಲಿ ನಿಜಲಿಂಗ ಎಂಬ ವಿಶೇಷಣವನ್ನು ಸೇರಿಸಿ 'ಝೇಂಕಾರ ನಿಜಲಿಂಗ ಪ್ರಭುವೇ' ಎಂಬ ಅಂಕಿತವನ್ನು ಕಲ್ಪಿಸಿಕೊಂಡಿದ್ದಾನೆ. ಈತನ ವಚನಗಳಲ್ಲಿ ಬಹುಪಾಲು ಬೆಡಗಿನ ರೂಪದಲ್ಲಿದ್ದು ಷಟ್ಸ್ಥಲದ ಮೂಲಕ ಲಿಂಗಾಂಗಸಾಮರಸ್ಯವನ್ನು ಬೋಧಿಸುತ್ತವೆ. ಶಿವಯೋಗದ ಪ್ರಭಾವ ವಚನಗಳಲ್ಲಿ ಸಾಂದ್ರವಾಗಿ ಹಬ್ಬಿದೆ.

ಪ್ರಸ್ತಾವನೆಯಲ್ಲಿ ಸಂಪಾದಕರು ಜಕ್ಕಣ್ಣಯ್ಯನ ಕಾಲ, ಅಂಕಿತ, ನಿರಾಳ ಪದದ ಅರ್ಥವ್ಯಾಪ್ತಿ, ಶಿವಯೋಗ ಸ್ವರೂಪ, ಗೋಪ್ಯದ ವಿಶೇಷಾರ್ಥ, ಸ್ಥಲ ವಿಭಜನೆಯ ಔಚಿತ್ಯ, ಹಸ್ತಪ್ರತಿಗಳ ಬಗೆಗೆ ವಿವೇಚಿಸಿದ್ದಾರೆ.

ಪ್ರಸ್ತುತ ಕೃತಿಯನ್ನು ಒಂದು ಓಲೆ ಹಾಗು 2 ಕಾಗದದ ಪ್ರತಿಗಳನ್ನು ಅವಲಂಬಿಸಿ ಪರಿಷ್ಕರಿಸಿದ್ದಾರೆ ಅನುಬಂಧದಲ್ಲಿ ವಚನಗಳ ಅಕಾರಾದಿ ಹಾಗು ಮಹತ್ತ್ವ ಪದಗಳ ಅಕಾರಾದಿಗಳಿವೆ. ಒಪ್ಪೋಲೆಯಲ್ಲಿಲ್ಲದ ಕೆಲವು ಮುದ್ರಣ ದೋಷಗಳು ಇಂತಿವೆ.

48 ನೆಯ ವಚನದಲ್ಲಿ 'ನೋಡುವಣ್ಣಗಳು' ಎಂದು ಬಂದಿರುವ ಕಡೆಗಳಲ್ಲೆಲ್ಲ 'ನೋಡುವಣ್ಣಗಳ' ಎಂದಿರಬೇಕು.

ವ. 39, 103, 608	ನೈಷ್ಟಿಕ ಭಕ್ತಿ	ನೈಷ್ಠಿಕ ಭಕ್ತಿ
ವ. 97, 105 ಇ	ಶಿಸು	ಸಿಸು

ವ. 159	ಮೇಲುಪ್ಪರಿಯುಂ	ಮೇಲುಪ್ಪರಿಗೆಯುಂ
ವ. 202	ನಿಜಲಿಂಗ	ನಿಜಲಿಂಗ
ವ. 218	ಶೋಡಷ	ಷೋಡಶ
ವ. 242	ಭಾವ ತಲೆದೊರಲು	ಭಾವ ತಲೆದೋರಲು
ವ. 277	ಸಾದಾಕ್ಯ	ಸಾದಾಖ್ಯ
ವ. 308	ಅಂಕಿತಕ್ಕೆ ಝೇಂಕಾರ ಸೇರಬೇಕು.	
ವ. 322, 421	ಸ್ವಾಧಿಷ್ಟ	ಸ್ವಾಧಿಷ್ಠ
ವ. 329	ಶಿಲ್ಕದೆ	ಸಿಲ್ಕದೆ
ವ. 374	ನಿಜಲಿಂಗಭುವೆ	ನಿಜಲಿಂಗ ಪ್ರಭುವೆ
ವ. 412	ಶೃತಿ	ಶ್ರುತಿ
ವ. 488	ಜೀಂಹ್ವೆ	ಜಿಹ್ವೆ
ವ. 534	ಖಿನ್ನ	ಭಿನ್ನ
ವ. 642	ಕೆತ್ತಿಸಿ	ತೆತ್ತಿಸಿ ?

ಪ್ರಭುದೇವರ ಯಕ್ಷಗಾನ (ಸಂ) ಮಲ್ಲಿಕಾರ್ಜುನ ಶಿ. ಲಠೆ. ಮತ್ತು ಸಂಗಮೇಶ ಸವದತ್ತಿಮಠ

'ಪ್ರಭುದೇವರ ಯಕ್ಷಗಾನ'ದ ಕರ್ತೃ ದುರದುಂಡೀಶ. ಇದು ಕವಿಯ ಕಾವ್ಯ ನಾಮವಾಗಿದ್ದು ದುಂಡಪ್ಪ ಎಂಬುದು ಈತನ ಹೆಸರೆಂದೆನಿಸುತ್ತದೆ. ಇವನ ಮೊಮ್ಮಗನಿಂದ ಇವನಿಗೆ ಪಡದಯ್ಯ ನೆಂದು ಕರೆಯುತ್ತಿದ್ದ ಅಂಶ ತಿಳಿದುಬಂದಿದೆ.

ಕವಿಯ ಕೃತಿಗಳಲ್ಲಿ 'ಇತಿವೃತ್ತ'ಕ್ಕೆ ಸಂಬಂಧಿಸಿದ ಕೆಲವು ಅಂಶಗಳಿದ್ದು ಅವನ್ನು ಈ ಮುಂದೆ ಸಂಗ್ರಹಿಸಿದೆ. ಈತ ಹೊಂಗಲ (ಇಂದಿನ ಬೈಲಹೊಂಗಲ) ನಿವಾಸಿ. ತಂದೆ ಪುರಾಣಿಕ ಶಿವಬಸವ ಶಿವಯೋಗಿ. ಕವಿ ಅರಭಾವಿ ದುರದುಂಡೀಶ್ವರ ಮಠದ ಭಕ್ತನಾಗಿದ್ದು 'ದುರದುಂಡೀಶ' ಎಂಬ ಕಾವ್ಯನಾಮವನ್ನು ಇಟ್ಟುಕೊಂಡಿರ ಬಹುದಾದ ಸಾಧ್ಯತೆ ಇದೆ.

ಸಂಪಾದಕರಂತೆ ದುರದುಂಡೀಶ 'ಹತ್ತೊಂಬತ್ತನೆಯ ಶತಮಾನದ ಆರಂಭದ ಕಾಲದಲ್ಲಿ ಅಥವಾ ಹದಿನೆಂಟನೆಯ ಶತಮಾನದ ಕೊನೆಕೊನೆಗೆ ... ಜನಿಸಿ ಸುಮಾರು 70ವರ್ಷಗಳ ತುಂಬುಜೀವನ ನಡೆಸಿರಬಹುದು'.

ದುರದುಂಡೀಶನ 18 ಕೃತಿಗಳನ್ನು ಸಂಪಾದಕರು ಹೆಸರಿಸಿದ್ದಾರೆ. ಇದರಲ್ಲಿನ ಅಧಿಕ ಸಂಖ್ಯೆಯ ಕೃತಿಗಳು ಯಕ್ಷಗಾನದಲ್ಲಿವೆ. ಹಲವಾರು ಕೃತಿಗಳು ಅಪೂರ್ಣ. ಸಂಪಾದಕರ ಗಮನಕ್ಕೆ ಬಾರದ 3 ಹೆಚ್ಚಿನ ಕೃತಿಗಳು ಲಭ್ಯವಾಗಿದ್ದು ಇಂತಿವೆ. ೧) ತಿರುನೀಲಕಂಠರ ಯಕ್ಷಗಾನ (933/1) ೨) ನಿರ್ಲಜ್ಜ ಶಾಂತಯ್ಯನವರ ಯಕ್ಷ ಗಾನ (988/1) ೩) ಬಸವೇಶ್ವರ ಯಕ್ಷಗಾನ (980/3) ಇವೆಲ್ಲ ಪ್ರತಿಗಳು ವಚನ ವಾಙ್ಮಯ ಭಂಡಾರ, ಧಾರವಾಡದಲ್ಲಿವೆ.

ಪ್ರಭುದೇವರ ಯಕ್ಷಗಾನದ ರಚನೆಯಲ್ಲಿ ಭೋಗ, ಭಾಮಿನಿ, ವಾರ್ಧಕ ಷಟ್ಪದಿಗಳಂ, ಚೂಲಿಕಾ, ಆರ್ಯೆ, ಪದ, ಗದ್ಯ, ಕಂದ, ಲಾವಣಿಗಳನ್ನು ಬಳಸಿದ್ದಾನೆ. ಅಲ್ಲದೆ ಕೃತಿಯಲ್ಲಿ 'ಪ್ರಭುಲಿಂಗ ಲೀಲೆ', 'ಸರ್ವಜ್ಞನವಚನ', 'ಸೋಮೇಶ್ವರ ಶತಕ'ದ ವೃತ್ತ, ಶಾಂತಮಲ್ಲನ 'ಅನುಭವ ಮುದ್ರೆ'ಗಳಿಂದ ಪದ್ಯಗಳನ್ನು ಉದಾಹರಿಸಿದೆ. ಹಲವಾರು ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸಿದೆ. ಕೃತಿಯನ್ನು 2 ಹಸ್ತಪ್ರತಿಗಳಿಂದ ಸಂಪಾದಿಸಿದ್ದರೂ ಪಾಠಭೇದಗಳನ್ನು ಸೂಚಿಸಿಲ್ಲ.

ಸಂಪಾದಕರು ಪ್ರಸ್ತಾವನೆಯಲ್ಲಿ ಯಕ್ಷಗಾನದ ಹಿನ್ನೆಲೆ, ದೊಡ್ಡಾಟ, ಸಣ್ಣಾಟ, ತಾಳಮದ್ದಲೆ, ತೆಂಕತಿಟ್ಟು-ಬಡಗತಿಟ್ಟು, ಬಯಲಾಟದ ಮೂಲ, ಕವಿ–ಕೃತಿವಿಚಾರಗಳ ಬಗೆಗೆ ನಿರೂಪಿಸಿದ್ದಾರೆ. ಅನುಬಂಧದಲ್ಲಿ ಸಂಸ್ಕೃತ ಶ್ಲೋಕಗಳ ಅರ್ಥ, ಶಬ್ದಾರ್ಥ ಹಾಗೂ ಒಪ್ಪೋಲೆಗಳಿವೆ. ಅಲ್ಲಿರವ ಕೆಲವು ಇಂತಿವೆ.

ಪುಟ	ತಪ್ಪು	ಸರಿ
10	ಗುಂರು	ಗುರು
13	ಪಾಲಿಸೈವ ಸುಂದರಾ	ಪಾಲಿಸೈ ವಸುಂಧರಾ
23	ದಯು ಮಾಗೆ	ದಯುಮಾಗೆ
26	ಗುರುವರ್ಯ ನೊರಿಯಲ್ಕೆ	ಗುರುವರ್ಯನೊರೆಯಲ್ಕೆ
27	ಕಾಂತಿ	ಕಾಂತೆ
28	ತೆನು ತಲಾ	ತೆನುತಲಾ
36	ಹೋಮುಗಳ	ಹೇಮುಗಳ
37	ವಾರ್ಥಿಕ	ವಾರ್ಧಿಕ
42	ಚಿರಗಂ	ಚೆರಗಂ

ಕಡಕೋಳೆ ಮಡಿವಾಳೇಶ್ವರ ವಿರಚಿತ ಸ್ವರವಚನಗಳು (ಸಂ.) ಮಲ್ಲಿಕಾರ್ಜುನ ಶಿ. ಲಠ್ಠೆ

ಕಡಕೋಳ ಮಡಿವಾಳಪ್ಪ ಪದಗಳ ರೂಪದಲ್ಲಿನ 'ಕೈವಲ್ಯವಾಕ್ಯಾಮೃತ' ಮತ್ತು ವಚನ ರೂಪದ 'ನಿಜಲೀಲಾನುಭವ ವಚನ'ಗಳ ಕರ್ತೃ. ಈತನ ಪೂರ್ವಜರು ಬಿಜಾಪುರಜಿಲ್ಲೆಯ ಇಂಡಿ ತಾಲ್ಲೂಕಿನ ನಾಗಠಾಣ ಗ್ರಾಮದಾವರು. ಅಲ್ಲಿ ಉಂಟಾದ ಭೀಕರ ಬರಗಾಲದಿಂದಾಗಿ ಗಂಗಮ್ಮನೆಂಬ ವಿಧವೆ ತನ್ನ ವೃದ್ಧ ತಂದೆಯೊಡನೆ ಅಲ್ಲಿಂದ ಹೊರಟು ಕಲಬುರ್ಗಿ ಜಿಲ್ಲೆಯ ಬಿದನೂರಿಗೆ ಬಂದರು. ಅಲ್ಲಿ ಇವರಿಗೆ ಅಧ್ಯಾತ್ಮಿಗಳಾಗಿದ್ದ ಬಿದನೂರಿನ ಮಲ್ಲಿ ಕಾರ್ಜುನಪ್ಪಗೌಡರ ಆಶ್ರಯಲಭಿಸಿತು. ಬಿದನೂರ ಹಿರೇಮಠದ ಒಡೆಯ ವಿರೂಪಾಕ್ಷಸ್ವಾಮಿ. ಈತನಿಗೆ ಶಿಷ್ಯಳಾಗಿ ಅವರ

ಸೇವೆ ಮಾಡುತ್ತಿದ್ದ ಗಂಗಮ್ಮನಿಗೆ ಮಡಿವಾಳಪ್ಪ ಸುಮಾರು 1780 ರಲ್ಲಿ ಜನಿಸಿದ. ಚಿಣಮಗೇರಿ ಗುಡ್ಡದ 'ಗುರುಬಸವದೇವರ ಕನ್ನೆ ಶಿಷ್ಯ ಬಿದನೂರ ಮಡಿವಾಳಾಖ್ಯ' ಎಂದು ತನ್ನ ವಚನವೊಂದರಲ್ಲಿ ಉಲ್ಲೇಖಿಸಿದ್ದಾನೆ. ಕೆಲಕಾಲ ಅರಳಗುಂಡಿಗೆ ಶರಣಬಸವೇಶ್ವರರ ಬಳಿ ಇದ್ದು 'ಅನ್ನದಾಸೋಹದ ಜೊತೆ ಜ್ಞಾನ ದಾಸೋಹವನ್ನು ನಡೆಸಿ ಅನುಭಾವ, ಕಾಯಕ ನಿಷ್ಠೆ, ದಾಸೋಹ, ಪ್ರಸಾದಗಳ ಮಹತಿಯನ್ನು ಅರಿತುಕೊಂಡು' ಊರಿಗೆ ಹಿಂದಿರುಗಿದರು. ಕಾಯಕಯೋಗಿಗಳಾಗಿ ಕಡಕೋಳವನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಅಲ್ಲೇ ನೆಲಸಿದರು. ಇವರು ಎಲ್ಲ ಜಾತೀಯ ಜನಾಂಗಗಳಿಗೆ ಸೇರಿದ ಅಪಾರವಾದ ಶಿಷ್ಯ ಸಂಪತ್ತನ್ನು ಹೊಂದಿದ್ದರು. ಖೈನೂರ ಕೃಷ್ಣಪ್ಪ, ಕಡ್ಲೆವಾಡ ಸಿದ್ಧಪ್ಪ, ಜೆನ್ನೂರ ಜಲಾಬ ಸಾಹೇಬ, ಕೊಡ್ಲೂರ ಬಸವಲಿಂಗಪ್ಪ, ಬಂಟನೂರ ಬಸಪ್ಪ, ದೇವರನಾವದಗಿ ಮಹಾಂತ ದೇಶಿಕ ಮೊದಲಾದವರು ಇವರಲ್ಲಿ ಕೆಲವರು. ಸುರಪುರದ ದೊರೆ ಇವರನ್ನು ಸನ್ಮಾನಿಸಿ ಭೂಮಿಯನ್ನು ಇನಾಮವಾಗಿ ಕೊಟ್ಟನು. ಇವರ ಶಿಷ್ಯ ಖೈನೂರ ಕೃಷ್ಣಪ್ಪ ಲಿಂಗದೀಕ್ಷೆಹೊಂದಿ ತತ್ವಪದಗಳನ್ನು ರಚಿಸಿ, ಮಡಿವಾಳಪ್ಪನವರ ಕೈವಲ್ಯಾಮೃತವನ್ನು ಬೋಧಿಸಲು ಹಲವಾರು ಮಠಗಳನ್ನು ಕಟ್ಟಿಸಿದನು. ಕಡಕೋಳ, ದಿಗ್ಗಿ, ಸೈದಾಪುರ, ಬೀಳವಾರ, ಮಾಡಬೂಳ, ತೆಲುಗಬಾಳ, ಜಂಬೇರಾಳ, ಬಿದನೂರ, ಕೋರವಾರಗಳಲ್ಲಿ ಮಡಿವಾಳಪ್ಪನ ಮಠಗಳಿವೆ. ಇವರು ಸು. 1855 ರಲ್ಲಿ ಜೀವಂತ ಸಮಾಧಿಗಿಳಿದು ಬಯಲಾದರು. ಇವರ ಜಾತ್ರೆ ಕಡಕೋಳದಲ್ಲಿ ಪ್ರತಿ ವರ್ಷ ಡಿಸೆಂಬರ್‌ನಲ್ಲಿ ನಡೆಯುತ್ತದೆ. ಆಗ ಅಲ್ಲಿಗೆ ಬರುವ ಭಜನೆ ತಂಡಗಳು ಮಡಿವಾಳಪ್ಪನವರ ತತ್ತ್ವಗಳನ್ನು ಹೇಳುವುದನ್ನು ಇಂದಿಗೂ ಕೇಳಬಹುದಾಗಿದೆ.

ಕಡಕೋಳ ಮಡಿವಾಳಪ್ಪ ಸಾವಿರಾರು ಪದಗಳನ್ನು ರಚಿಸಿದಂತೆ ತಿಳಿದು ಬರುತ್ತದೆ. ಒಂದು ವಚನದಲ್ಲಿ 'ಹಾಡುವದಾಯ್ತು ಹದಿನೇಳ್ನೂರೈವತ್ತು ಸರ್ವಕ್ಕೆ' ಎಂದಿದ್ದಾರೆ. ಹೀಗಿದ್ದರೂ ಇಂದು ಉಪಲಬ್ಧವಿರುವ ಹಾಡುಗಳ ಸಂಖ್ಯೆ 500ನ್ನೂ ಮುಟ್ಟಿಲ್ಲ.

ಇವರ ಹಾಡುಗಳಲ್ಲಿ ಗುರು ಮಹಾಂತ ಅಂಕಿತ ಪ್ರಧಾನವಾಗಿ ಬಳಕೆಯಾಗಿದೆ. ಅಲ್ಲದೆ ಚಿಣಮಗೇರಿವಾಸ, ಚಿನ್ನಗುಡ್ಡದ ಯೋಗಿ, ಕಡಕೋಳಗುಡ್ಡದ ಮಹಾಂತ, ಮಹಾಂತೇಶ, ಮುತ್ತ್ಯಾನ ಬೊಮ್ಮಗಸಪ್ಪ, ಸೈದಾಪುರ ಮಹಾಂತೇಶ್ವರ, ಪೊಡವಿಯೊಳಗೆ ಸುರಪುರಧೀಶ, ಮಡಿವಾಳಾಖ್ಯ, ಬಿದನೂರ ಮಡಿವಾಳಯ್ಯ, ಬಿದನೂರ ವಿರೂಪಾಕ್ಷ ಮೊದಲಾದ ಅಂಕಿತಗಳು ದೊರೆಯುತ್ತವೆ. ಇವರ ವಚನ ಕೃತಿಯಾದ 'ನಿಜಲೀಲಾನುಭವ ವಚನ'ಗಳಲ್ಲಿ ನಿರುಪಮ ನಿರಾಳ ಮಹತ್ಪ್ರಭು ಮಹಾಂತ ಯೋಗಿ ಎಂಬ ಅಂಕಿತವಿದೆ. 'ಗಾಳಿಪೂಜೆ' ವಚನದಲ್ಲಿ 'ಶಂಕರಪ್ರಿಯ ಚೆನ್ನಕದಂಬ ಲಿಂಗ ಮಹಾಂತಯೋಗಿ' ಎಂಬ ಅಂಕಿತವಿದೆ.

ಪ್ರಸ್ತುತ ಸಂಪಾದಕರು ಪದಗಳ ವಸ್ತು ಸ್ವರೂಪವನ್ನು ಗಮನಿಸಿ 1) ಪ್ರಾರ್ಥನೆ 2) ವಿಡಂಬನೆ 3) ತತ್ತ್ವ ಸಿದ್ಧಾಂತ ಮತ್ತು 4) ಮಂಗಳಾರತಿಗಳೆಂಬ 4 ಭಾಗಗಳಾಗಿ ವಿಂಗಡಿಸಿದ್ದಾರೆ. ಒಟ್ಟು 310 ಪದಗಳಿವೆ.

ಪ್ರಸ್ತಾವನೆಯಲ್ಲಿ ಪದಗಳ (=ಹಾಡು ಅಥವಾ ಸ್ವರವಚನ) ಸ್ವರೂಪ, 18-19 ನೆಯ ಶತಮಾನದ ಹಾಡುಗಳ ರಚಕರು, ಮಡಿವಾಳಪ್ಪನವರ ಪದ ಸಂಖ್ಯೆ, ಅಂಕಿತ ವೈವಿಧ್ಯ, ಜೀವನ ಚರಿತ್ರೆ, ಸಮಕಾಲೀನ ವ್ಯಕ್ತಿಗಳ ಲಘುಪರಿಚಯ, ಕಡಕೋಳದ ಅನುಭವ ಮಂಟಪ, ಪದಗಳ ವಿಮರ್ಶೆ, ಪದಗಳಲ್ಲಿನ ಜಾನಪದ ರೊಂಕಾರಗಳ ಬಗೆಗೆ ವಿವೇಚಿಸಿದ್ದಾರೆ.

ಕೃತಿಯನ್ನು ಮುದ್ರಿತ ಪ್ರತಿಗಳ ಹಾಗು ಕೆಲವು ಹಸ್ತಪ್ರತಿಗಳನ್ನು ಆಧರಿಸಿ ಸಂಪಾದಿಸಿದೆ. ಸಂಪಾದಕರು ತಾವು ಪದಗಳಿಗೆ ಕೊಟ್ಟ ಶೀರ್ಷಿಕೆಯನ್ನೇ ಪರಿವಿಡಿಯಲ್ಲಿ ಕೊಟ್ಟಿದ್ದಾರೆ. ಅನುಬಂಧದಲ್ಲಿ ಸಂಪಾದಕರು ಸ್ವಲ್ಪ ಶ್ರಮವಹಿಸಿ ಪಲ್ಲವಿಗಳ ಅಕಾರಾದಿಯನ್ನು ಕೊಟ್ಟಿದ್ದರೆ ಈ ಕೃತಿಯ ಉಪಯೋಗ ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಆಗುತ್ತಿತ್ತು.

ವಚನಶಾಸ್ತ್ರಸಾರ [ಭಾಗ :1 ಪೂರ್ವಾರ್ಧ ಮತ್ತು ಉತ್ತರಾರ್ಧ] (ಸಂ) ಫ. ಗು. ಹಳಕಟ್ಟಿ, ಪರಿಷ್ಕರಣ ಎಂ. ಎಂ. ಕಲಬುರ್ಗಿ, ವ್ಹಿ. ಬಿ. ರಾಜೂರ.

ವಚನ ಸಂಕಲನ ಪ್ರಕಾರಕ್ಕೆ ಸಂಬಂಧಿಸಿದ ಕೃತಿ ವಚನಶಾಸ್ತ್ರಸಾರ. ಮುಕ್ತಕವಾಗಿದ್ದ ವಚನಗಳನ್ನು ವೀರಶೈವ ತಾತ್ತ್ವಿಕ ಚೌಕಟ್ಟಿಗೆ ಒಳಪಡಿಸಿ ಅದಕ್ಕೆ ಸಾಮಾಜಿಕ, ನೈತಿಕ ಇತ್ಯಾದಿ ಆಯಾಮುಗಳನ್ನು ಸಂಗತಗೊಳಿಸಿ ರೂಪಿಸಿದ ಪ್ರಸ್ತುತ ಸಂಕಲನಗಳು ಡಾ ॥ ಹಳಕಟ್ಟಿಯವರ ಸಂಯೋಜನಾ ಪ್ರತಿಭೆಗೆ ಅಪೂರ್ವ ದಾಖಲೆಯಾಗಿವೆ. ಭಾಗ-1 ರ ಪೂರ್ವಾರ್ಧವನ್ನು 1923ರಲ್ಲಿ ಪ್ರಕಟಿಸಿ ಅದರ ಪರಿಷ್ಕೃತ ಆವೃತ್ತಿಯನ್ನು ತಾವೇ 1931ರಲ್ಲಿ ಪುನಃ ಪ್ರಕಟಿಸಿದರು. ಅಲ್ಲದೆ ಭಾಗ 1ರ ಉತ್ತರಾರ್ಧವನ್ನು 1933ರಲ್ಲಿ ಪ್ರಕಟಿಸಿದ್ದಾರೆ. ಹೀಗೆ ಭಾಗ-1 ರಲ್ಲಿನ ಪೂರ್ವಾರ್ಧ, ಉತ್ತರಾರ್ಧಗಳನ್ನು ಇಲ್ಲಿ ಸಂಯುಕ್ತ ಸಂಪುಟವಾಗಿ ಏಕೀಕರಿಸಿ ಪ್ರಕಟಿಸಿದೆ. ಹೀಗೆ ಮಾಡುವಲ್ಲಿ ಹಳಕಟ್ಟಿಯವರು ರೂಪಿಸಿದ ವಚನಗಳ ಚೌಕಟ್ಟನ್ನು ರಕ್ಷಿಸಿ, 'ಅರ್ಥಕ್ಕೆ ಬಾಧೆ ಬರುವಲ್ಲಿ ಮಾತ್ರ ಪಾಠಾಂತರ ಪರಿಷ್ಕರಣ'ಗೊಳಿಸಿ ಪ್ರಸ್ತುತ ಕೃತಿ ಸಂಪುಟ ಸಿದ್ಧವಾಗಿದೆ. ಪ್ರಸ್ತುತ ಪರಿಷ್ಕರಣದಲ್ಲಿ ಸಂಪಾದಕರು ಅನುಸರಿಸಿದ 14 ವಿಧಾನಗಳನ್ನು ಪ್ರಸ್ತಾವನೆ ಪು. 24-26 ರಲ್ಲಿ ಸೂಚಿಸಿದೆ.

ಇಲ್ಲಿ 135 ವಚನಕಾರ/ಕಾರ್ತಿಯರ 2666 ವಚನಗಳಿವೆ (ಕ್ರಮಾಂಕ 1468 ರಲ್ಲಿ 2 ವಚನಗಳಿವೆ). ಇಲ್ಲಿನ ವಚನಗಳ ಕಾಲಾವಧಿ ಹನ್ನೆರಡನೆಯ ಶತಮಾನದ ಮಾದಾರ ಚೆನ್ನಯ್ಯ, ಜೇಡರ ದಾಸಿಮಯ್ಯರಿಂದ ಹಿಡಿದು ಹದಿನೇಳನೆಯ ಹಾಗೂ

ಮುಂದಿನ ಶತಮಾನದ ಷಣ್ಮುಖಸ್ವಾಮಿ, ಕಾಡ ಸಿದ್ಧೇಶ್ವರರವರೆಗೂ ಚಾಚಿದೆ. ಬಸವಾದಿ ವಚನಕಾರರ ನೂರಾರು ವಚನಗಳು ಇಲ್ಲಿವೆ. ಕರ್ತೃಗಳು ತಿಳಿಯದ ಹಲವು ವಚನಗಳಿವೆ. ಕೆಲವಾರು ವಚನಗಳಿಗೆ ಟೀಕೆಗಳನ್ನು ಕೊಟ್ಟಿದೆ. ಇವುಗಳಲ್ಲಿ ಮಹಾಲಿಂಗದೇವನ 'ಪ್ರಭುದೇವರ ವಚನ ಟೀಕೆ', ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸಚಾರಿತ್ರ ಟೀಕೆ', ಸಿಂಗಳದ ಸಿದ್ಧಬಸವರಾಜನ 'ಬೆಡಗಿನ ವಚನಗಳ ಟೀಕೆ'ಗಳನ್ನು ಹೆಸರಿಸಬಹುದು. ಇದಲ್ಲದೆ ಹಲವಾರು ವಚನಗಳಲ್ಲಿನ ಟೀಕಾಕಾರರು ಯಾರೆಂಬುದು ಇನ್ನೂ ಬಯಲಿಗೆ ಬರಬೇಕಾಗಿದೆ.

ಪ್ರಸ್ತುತ ಸಂಪುಟದ ಆದಿಯಲ್ಲಿ ಹಳಕಟ್ಟಿಯವರ 1ನೇ ಆವೃತ್ತಿ (1923) ಹಾಗೂ 2ನೇ ಆವೃತ್ತಿಯ ಪೂರ್ವಾರ್ಧ (1931) ಮತ್ತು ಉತ್ತರಾರ್ಧ (1933) ಗಳ ಪ್ರಸ್ತಾವನೆಯನ್ನು ಇದ್ದಂತೆ ಕೊಟ್ಟಿದ್ದಾರೆ. ಅಲ್ಲದೆ ಹಳಕಟ್ಟಿಯವರು ಕೊಟ್ಟಿದ್ದ 'ಗ್ರಂಥಗಳ ಪಟ್ಟಿಯು'ವನ್ನು ಯಥಾವತ್ತಾಗಿ ಉಲ್ಲೇಖಿಸಿದೆ. ಅನುಬಂಧ ದಲ್ಲಿ 3 ಸೂಚಿಗಳಿವೆ.

1) ವಚನಕಾರರ ಮುದ್ರಿಕೆಗಳು ಮತ್ತು ಅವರ ಹೆಸರುಗಳು.

2) ವಚನಕಾರರು-ವಚನಗಳ ಸಂಖ್ಯೆ

3) ವಚನಗಳ ಅಕಾರಾದಿ.

ಇವುಗಳಲ್ಲಿ ಮೊದಲನೆಯದನ್ನು ಹಳಕಟ್ಟಿಯವರೇ ಸಂಯೋಜಿಸಿ ಪ್ರಕಟಿಸಿದ್ದರು. (ಈಚಿನ ಸಂಶೋಧನೆಗಳಿಂದ ತಿಳಿದು ಬಂದಿರುವ ಹೊಸ ಅಂಶಗಳನ್ನು ಪರಿಷ್ಕರಣಕಾರರು ಅಡಿಟಿಪ್ಪಣಿಯಲ್ಲಿ ದಾಖಲಿಸಿದ್ದಾರೆ). ಉಳಿದೆರಡು ಅನುಬಂಧಗಳು ಮೊದಲ ಬಾರಿಗೆ ಮುದ್ರಣಗೊಂಡಿವೆ.

ಈ ಕೃತಿಗೆ ಸಂಬಂಧಿಸಿದ ಕೆಲವು ತಿದ್ದುಪಡಿ, ಮುದ್ರಣ ದೋಷ, ಶಕಟರೇಫ ಪ್ರಯೋಗ ಬಳಕೆ ಇತ್ಯಾದಿಗಳನ್ನು ಸೂಚಿಸಿದೆ.

(ಪುಟ-717) ಉಳಿಯುಮೇಶ್ವರದ ಚಿಕ್ಕಯ್ಯನ ವಚನ ಕ್ರಮಾಂಕ 1073, 1168ರಲ್ಲಿ ಭಿನ್ನ ಪಾಠಗಳೊಡನೆ ಬಂದಿದೆ.

(ಪುಟ-720) ಚೆನ್ನಬಸವಣ್ಣನ ವಚನಗಳ ಒಟ್ಟು ಮೊತ್ತ 278. ಇದರಲ್ಲಿ 1431, 1432 2516ನೆಯ ವಚನಗಳು ಅವನವಲ್ಲ. ಹೀಗಾಗಿ ಆತನ ವಚನಗಳ ಸಂಖ್ಯೆ (278-3) 275 ಆಗುತ್ತದೆ.

(ಪುಟ-724) ಇಲ್ಲಿನ ಬಸವಣ್ಣನ ವಚನ ಸಂಖ್ಯೆ 508ಕ್ಕೆ 1468ರ ವಚನವನ್ನು ಸೇರಿಸಿಕೊಳ್ಳಬೇಕು. ಆಗ 509 ವಚನಗಳಾಗುತ್ತವೆ.

(ಪುಟ–734) ಇಲ್ಲಿನ ಹಡಪದ ಅಪ್ಪಣ್ಣನ 12 ವಚನಗಳೊಡನೆ 543 ಹಾಗೂ 1431ರಲ್ಲಿನ 2 ವಚನಗಳನ್ನೂ ಕೂಡಿಸಬೇಕು. ಹೀಗಾಗಿ (12+2) 14 ವಚನಗಳಾಗುತ್ತವೆ.

ವಚನಕಾರರು–ವಚನಗಳ ಸಂಖ್ಯೆ (ಪುಟ–713–736)ಯಲ್ಲಿ ಸೂಚಿಸದ 2 ಅಂಕಿತಗಳು ಹೀಗಿವೆ.

ಕ್ರಮಾಂಕ 1295 : ಹುಲಿಗೆರೆಯ ವರದ ಸೋಮನಾಥ
ಕ್ರಮಾಂಕ 2516 : ಕದಂಬ ಕಳಾಸ ಕೂಡಲ ಚೆನ್ನಸಂಗ
ಕೆಲವು ವಚನಾಂಕಿತಗಳು ತಪ್ಪಾಗಿ ಉಲ್ಲೇಖವಾಗಿವೆ.

(ಪುಟ–728) ಇಲ್ಲಿರುವ ಮರುಳಶಂಕರದೇವನ ಅಂಕಿತದ ಕ್ರಮಬದ್ಧ ರೂಪ–

ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ
ಶಾಂತ ಚೆನ್ನಮಲ್ಲಿಕಾರ್ಜುನಾ

(ಪುಟ–735) ಕ್ರಮಾಂಕ 123ರ ವಚನಾಂಕಿತ 'ನಿಸ್ಸಂಗ ನಿರಾಳ ನಿಜಲಿಂಗ ಪ್ರಭುವೇ' ಎಂದು ಸಿಗುತ್ತದೆ. (KRI, VI No. 59 ನೋಡಿ).

(ಪುಟ–736) 'ವರದ ಸೋಮನಾಥ' ಅಂಕಿತದ ಸರಿಯಾದ ರೂಪ–
'ಬಸವ ವರದ ಸೋಮನಾಥ'

(ಪುಟ–736) 'ಶ್ರೀಗುರುಸಿದ್ಧ ಲಿಂಗೇಶ್ವರ'–ಅಂಕಿತದ ಪೂರ್ಣ ರೂಪ 'ಶ್ರೀ ಗುರುಲಿಂಗ ಜಂಗಮವೆ ಹರಹರಾ ಶಿವಶಿವಾ ಜಯ ಜಯ ಕರುಣಾಕರ ಮತ್ಪ್ರಾಣನಾಥ ಶ್ರೀ ಗುರುಸಿದ್ಧಲಿಂಗೇಶ್ವರಾ'.

ಕೆಲವು ವಚನಾಂಕಿತ ಕರ್ತೃಗಳು—
123 (ಪು. 735) ನಿರಾಲಂಬ ಪ್ರಭುದೇವ
124 (ಪು. 735) ಜಗಳಗಂಟಿ ಕಾಮಯ್ಯ
127 (ಪು. 735) ಕೊಠಾರದ ಸೋಮಣ್ಣ

132 (ಪು. 736) ಹರದನಹಳ್ಳಿ (ಸ್ಥಾಪನಾಚಾರ್ಯ ಶಿವಲಿಂಗ ಶಕ್ತಿವಲ್ಲಭ) ಬಸಲಿಂಗದೇವನೆಂದೆನಿಸುತ್ತದೆ.

ವಚನಗಳ ಅಕಾರಾದಿ ಪು. 766ರಲ್ಲಿ 'ಭವಿಪಾಕವ ಮುಟ್ಟದೆ...' ಎಂಬ ವಚನ (1468ಎ, ಪುಟ 351) ಅಕಾರಾದಿ ಕ್ರಮದಲ್ಲಿ ಸೇರ್ಪಡೆಯಾಗಬೇಕಾಗಿದೆ.

443ನೆಯ ವಚನಾಂಕಿತ 'ಶಾಂತಮಲ್ಲಿಕಾರ್ಜುನಯ್ಯ' ಎಂದಿರುವುದು 'ಶಾಂತ ಚೆನ್ನಮಲ್ಲಿಕಾರ್ಜುನಯ್ಯ' ಎಂದಿರಬೇಕು.

1789ರಲ್ಲಿನ 'ಪ್ರಸಿದ್ಧ ಪ್ರಭುವೇ' ಎಂಬ ಭಾಗ 'ಪ್ರಸಿದ್ಧ ಪ್ರಸನ್ನ ಪ್ರಭುವೇ' ಎಂದಾಗಬೇಕು.

ಕೆಲವು ಅಚ್ಚಿನ ತಪ್ಪುಗಳು—

ವ. 196	ವಾಳುಸಕವಮಾ	ವಾಳುಕ ಸವಮಾ
ವ. 557	ಒಂದಾಶೆ	ಒಂದಾಸೆ
ವ. 1153	ಮರ	ಮನ
ವ. 1458	ಅಂಬಿಲವ ನೆರೆ	ಅಂಬಿಲವನೆರೆ
ವ. 1512	ಮಾತಿನ ಜ್ಞಾನಿ	ಮಾತಿನಜ್ಞಾನಿ
ವ. 1698	ಅವಲೇಶ್ವರ	ಅಮಲೇಶ್ವರ
ವ. 2171	ಭಿಕ್ಷೆ	ಭಿಕ್ಷೆ
ಪು. 771	ವೃತಗೇಡಿ...	ವ್ರತಗೇಡಿ...

ಈ ಮುಂದಿನ ವಚನಗಳಲ್ಲಿ ಶಕಟರೇಫ ಪ್ರಯೋಗ ತಪ್ಪಾಗಿದೆ. (ಕೆಲವು ಮಾತ್ರ).

ವ. 27	ಬಚ್ಚಬರಿ	ಬಚ್ಚಬಱಿ
ವ. 39, 238ಇ.	ತೋರು	ತೋಱು
ವ. 47	ಕುರುಹು	ಕುಱುಹು
ವ. 102, 1311ಇ.	ಎರೆ	ಎಱೆ
ವ. 153	ಹೇರಿನ	ಹೇಱಿನ
ವ. 157, 191ಇ.	ಮರೆ	ಮಱೆ
ವ. 172	ಕುರಿದಲೆ	ಕುಱಿದಲೆ
ವ. 190	ಸೈವೆರಗು	ಸೈವೆಱಗು
ವ. 238	ಮೀರಿ	ಮೀಱಿ
ವ. 262	ಆರುಹು	ಅಱುಹು
ವ. 310, 1413ಇ.	ಕೆರೆ	ಕೆಱೆ
ವ. 390	ಅರಸು	ಅಱಸು
ವ. 407, 503ಇ.	ಇರಿದು	ಇಱಿದು
ವ. 506	ಕಿರಿಯ	ಕಿಱಿಯ
ವ. 559	ಬಿರುದೊರೆ	ಬಿಱುದೊಱೆ
ವ. 636, 1298ಇ.	ಎರಗು	ಎಱಗು
ವ. 636	ವೇರಿ	ವೇಱಿ
ವ. 643	ಸೆರಗು	ಸೆಱಗು
ವ. 1076	ಜಾರಿ	ಜಾಱಿ

ವ. 1404	ಮುರಿ	ಮುಱಿ
ವ. 1410	ಕಾರಿದ	ಕಾಱಿದ
ವ. 1460	ಮಾರು	ಮಾಱು
ವ. 1515	ಸೂನೆಗಾರರ	ಸೂನೆಗಾಱಱ

ಪ್ರಸ್ತುತ ಸಂಪುಟದ ಪರಿಷ್ಕರಣ ಕರ್ತರು ಹಾಗೂ ಪ್ರಕಾಶಕರಾದ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ–ಗದಗದವರು ಅಲಭ್ಯವಾಗಿದ್ದ ಈ ಸಂಪುಟವನ್ನು ಪ್ರಕಟಿಸಿ ವಚನ ವಾಙ್ಮಯ ಅಭ್ಯಾಸಿಗಳಿಗೆ ಒಂದು ಅಪೂರ್ವವಾದ 'ತವನಿಧಿ'ಯನ್ನೇ ಒದಗಿಸಿಕೊಟ್ಟಿದ್ದಾರೆ. ಈ ಕೃತಿ ವಚನ ವಾಙ್ಮಯದ ಪ್ರಕಟಣೆಗಳಲ್ಲಿ ಒಂದು ಮೈಲಿಗಲ್ಲಾಗಿದೆ. ಎಂಬುದರಲ್ಲಿ ಎರಡನೇ ಮಾತಿಲ್ಲ.

ಸಂಶೋಧನೆ

ಎಂ. ಚಿದಾನಂದಮೂರ್ತಿ

'ಕರ್ನಾಟಕದ ವೀರಗಲ್ಲುಗಳು' ಆರ್. ಶೇಷಶಾಸ್ತ್ರಿಯವರ ಪಿಎಚ್.ಡಿ. ನಿಬಂಧ. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಸ್ಮಾರಕಗಳು, ವೀರಗಲ್ಲುಗಳನ್ನು ಹಾಕಿಸುತ್ತಿದ್ದ ಉದ್ದೇಶ, ವೀರಗಲ್ಲುಗಳ ವಿಂಗಡಣೆ, ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು, ವೀರಗಲ್ಲುಗಳ ಪಾಠ, ವೀರಗಲ್ಲುಗಳ ಶಿಲ್ಪ, ಸಮಾರೋಪ-ಈ ಅಧ್ಯಾಯಗಳನ್ನು ಈ ನಿಬಂಧದಲ್ಲಿ ಕಾಣುತ್ತೇವೆ. ವೀರಗಲ್ಲುಗಳ ಪ್ರಕಟಿತ ಪಾಠಗಳನ್ನು ಮಾತ್ರವಲ್ಲದೆ, ಕ್ಷೇತ್ರಕಾರ್ಯವನ್ನೂ ಕೈಗೊಂಡು ಪಾಠವಿಲ್ಲದ, ಕೇವಲ ಶಿಲ್ಪವಿರುವ ವೀರಗಲ್ಲುಗಳನ್ನು ಗಮನಿಸಿರುವುದನ್ನು ಆರಂಭದಲ್ಲೇ ಸ್ಪಷ್ಟಪಡಿಸಿದ್ದಾರೆ. 'ಸ್ಮಾರಕ' ಎಂದರೇನು? ಎಂಬುದರ ಹಿನ್ನೆಲೆಯಲ್ಲಿ ವೀರರ ಸ್ಮಾರಕಗಳಾದ ವೀರಗಲ್ಲುಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಇಲ್ಲಿ ಶಾಸನಗಳನ್ನೂ, ಪ್ರಾಸಂಗಿಕವಾಗಿ ಕೋಡೀರ್ಲಪ್ಪನಂತಹ ಜಾನಪದ ದೈವವನ್ನೂ ಆಧಾರವಾಗಿಟ್ಟುಕೊಂಡು ವೀರತನ, ವೀರನ ಬಗ್ಗೆ ಸಮಾಜದ ಗೌರವ, ವೀರರ ಆರಾಧನೆ, ಸತ್ತ ವೀರರ ದೈವತ್ವವನ್ನು (ಉದಾ: ಕುಮಾರ ರಾಮನ 'ಲಿಂಗ') ವಿವೇಚಿಸಿದ್ದಾರೆ. ವೀರಗಲ್ಲುಗಳನ್ನು ನೆಡುತ್ತಿದ್ದ ಉದ್ದೇಶ, ರಿಚುಯಲ್, 'ಬೀರಗೂಳ್', ವೀರಗಲ್ಲುಗಳನ್ನು ನಿಲ್ಲಿಸುವಲ್ಲಿನ ಕ್ರಮ, ಶಾಸನಗಳನ್ನು ಕೆತ್ತಿಸುತ್ತಿದ್ದುದು ಇವನ್ನು ಪ್ರಸ್ತಾಪಿಸಿದ್ದಾರೆ. ವೀರಗಲ್ಲುಗಳ ಬಗೆಬಗೆಯ ವಿಂಗಡಣೆ ಒಂದು ಅಧ್ಯಾಯವಾಗಿ ಮೂಡಿಬಂದಿದೆ. ವೀರಗಲ್ಲುಗಳ ಶಿಲ್ಪ, ಪಾಠಗಳು ಪ್ರತ್ಯೇಕವಾಗಿ ಚರ್ಚೆಗೊಂಡಿವೆ. ಹಲವು ಉಪಯುಕ್ತ ಅನುಬಂಧಗಳೂ ಇಲ್ಲಿ ಸೇರಿವೆ.

ಈ ಹಿಂದೆ ವೀರಗಲ್ಲುಗಳನ್ನು ಕುರಿತಂತೆ ಹಲವಾರು ಲೇಖನಗಳೂ, ಚಿಕ್ಕ ಪುಸ್ತಕಗಳೂ ಬಂದಿದ್ದರೂ, ಸಾವಿರಾರು ಸಂಖ್ಯೆಯಲ್ಲಿ ದೊರಕುವ ವೀರಗಲ್ಲುಗಳನ್ನು ಅತ್ಯಂತ ಶಾಸ್ತ್ರೀಯವಾಗಿ ಅಭ್ಯಸಿಸಿರುವ ಇಂತಹ ಪ್ರಯತ್ನ, ಈ ಪ್ರಮಾಣದ ಪ್ರಯತ್ನ, ಕರ್ನಾಟಕದಲ್ಲಂತೂ ನಡೆದಿರಲಿಲ್ಲ ; ಭಾರತದಲ್ಲೂ ಬಹುಶಃ ನಡೆದಿಲ್ಲ. ಶೇಷಶಾಸ್ತ್ರಿ ಕರ್ನಾಟಕದ ಮೂಲೆ ಮೂಲೆಗಳಿಗೆ ಹೋಗಿ ಇಲ್ಲಿಯವರೆಗೆ ಇತಿಹಾಸಜ್ಞರಿಂದ ಅಲಕ್ಷ್ಯಕ್ಕೆ ಒಳಗಾಗಿದ್ದ ಶಾಸನವಿಲ್ಲದ, ಕೇವಲ ಶಿಲ್ಪವಿರುವ ವೀರಗಲ್ಲುಗಳೂ ಸೇರಿದಂತೆ ಸಾವಿರಾರು ವೀರಗಲ್ಲುಗಳನ್ನು ಪರಾಮರ್ಶಿಸಿ,

ಪ್ರಕಟವಾಗಿರುವ ಸಾವಿರಾರು ಶಾಸನಗಳ ಪಾಠಗಳನ್ನು ಎಚ್ಚರಿಕೆಯಿಂದ ಓದಿ, ಕರ್ನಾಟಕ ಸಂಸ್ಕೃತಿಯ ಮುಖ್ಯ ಭಾಗವಾದ ವೀರಜೀವನದ ಅಧ್ಯಯನಕ್ಕೆ ಒಂದು ಶ್ರೇಷ್ಠ ಕೊಡುಗೆಯನ್ನು ಸಲ್ಲಿಸಿದ್ದಾರೆ. ಬೀರಗೂಳ್, ರಣವೀಳ್ಯ, ವೀರಗಲ್ಲಿನ ಶಿಲ್ಪದಲ್ಲಿ ಇಬ್ಬರು ಮುಖಾಮುಖಿಯಾಗಿ ಹೋರಾಡುತ್ತಿದ್ದರೆ ಅವರಲ್ಲಿ ವೀರನನ್ನು ಗುರುತಿಸುವ ಬಗೆ ಹೀಗೆ ಎಷ್ಟೋ ಹೊಸ ವಿಷಯಗಳು ಇಲ್ಲಿವೆ. ವೀರಗಲ್ಲಿನ ಶಿಲ್ಪಗಳ ವಿಶ್ಲೇಷಣೆಯಂತೂ ಅತ್ಯಂತ ಮೌಲಿಕವಾದುದು. ಬೇರೆ ಬೇರೆ ಕಾಲದ ವೀರಗಲ್ಲುಗಳ ವೈಶಿಷ್ಟ್ಯಗಳನ್ನು ಗುರುತಿಸಿರುವುದೂ ಅಷ್ಟೇ ಮುಖ್ಯವಾದುದು. ಪುಸ್ತಕದ ಕೊನೆಯಲ್ಲಿರುವ ಮುನ್ನೂರು ಚಿತ್ರಗಳು–ಕೆಲವು ಭಾವಚಿತ್ರಗಳು, ಇನ್ನು ಕೆಲವು ರೇಖಾಚಿತ್ರಗಳು–ವೀರಗಲ್ಲುಗಳ ಬಗೆಬಗೆಯ ಮಾದರಿಗಳು, ಯುದ್ಧದ ಪ್ರಭೇದಗಳು, ಆಯುಧಗಳು, ಬತ್ತಳಿಕೆಗಳು, ಗುರಾಣಿಗಳು, ಯುದ್ಧವಾದ್ಯಗಳು, ವೀರರ ಮುಂಡಿಗಳು, ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುವ ಪುಷ್ಪಕಗಳ ಮಾದರಿಗಳು, ರಾಜಛತ್ರಿಗಳು ಇವುಗಳನ್ನು ಒಳಗೊಂಡಿದ್ದು ಪ್ರಾಚೀನ ಕರ್ನಾಟಕದ ಬೇರೆ ಬೇರೆ ಅಧ್ಯಯನಗಳಿಗೆ ಎಡೆಮಾಡಿಕೊಡುವಂತಿದೆ. ಈ ಕೆಲಸದ ಹಿಂದೆ ಅಪಾರವಾದ ಶ್ರಮವಿದೆ.

ಇದು ನಿಶ್ಚಿತವಾಗಿಯೂ ಕನ್ನಡದಲ್ಲಿ ಇಲ್ಲಿಯವರೆಗೆ ಪ್ರಕಟವಾಗಿರುವ ಶ್ರೇಷ್ಠ ನಿಬಂಧಗಳಲ್ಲಿ ಒಂದು. ಇಲ್ಲಿಯ ಕೆಲವು ಕೊರತೆಗಳನ್ನು ಎತ್ತಿ ತೋರಿಸಬೇಕಾಗಿದೆ. ಒಂದು–ಕರಡನ್ನು ತಿದ್ದುವುದರಲ್ಲಿ ಹೆಚ್ಚಿನ ಎಚ್ಚರ ಬೇಕಿತ್ತು; ಪು. 24ರ ಅಡಿ ಟಿಪ್ಪಣಿಯಲ್ಲಿ ಬರುವ ರನ್ನನ ಎರಡು ಪದ್ಯಗಳಲ್ಲಿ ಐದು ಅಚ್ಚಿನ ತಪ್ಪುಗಳಿವೆ; ಪದಗಳನ್ನು ಬಿಡಿಸುವಲ್ಲಿ ಸೇರಿಸುವಲ್ಲಿ ಆಗಿರುವ ತಪ್ಪುಗಳು ಹತ್ತು. ಚಿತ್ರಗಳಿಗೆ ಹೆಸರು ಕೊಡುವಾಗ, ಕೆಲವೊಮ್ಮೆ ಕಾವ್ಯಮಯವಾಗಿ ಕೊಡುವ ಪ್ರಯತ್ನದಲ್ಲಿ ಕೆಲವು ಗಂಭೀರ ಅಚಾತುರ್ಯಗಳಾಗಿವೆ. ಚಿತ್ರ 37, 38ಕ್ಕೆ 'ಸೀರ ವೀರರು' ಎಂಬ ಹೆಸರುಗಳಿವೆ. ಮೇಲ್ನೋಟಕ್ಕೆ 'ಮನೋಹರ ವೀರರು' ಎಂದರ್ಥವಾದರೂ ಅವು ಅಂಜಿಗ ವೀರರನ್ನು ಹೇಳುತ್ತವೆ. ಹುಲಿಯನ್ನು ವೀರ ಕೊಲ್ಲುವ ವೀರಗಲ್ಲಿಗೆ "ಸವಿದು ಮೆದ್ದರು ಯಾರು ಪೂರ್ವದಿ ಹುಲಿಯ ಹಾಲಿನ ಮೇವನು" ಎಂಬ ಶೀರ್ಷಿಕೆ ಸುತರಾಂ ಹೊಂದದು.

ಇವು ಆ ನಿಬಂಧದ ಕೆಲವು ಕೊರತೆಗಳೇ ಹೊರತು ಬಹು ದೊಡ್ಡ ದೋಷಗಳೆಂದು ಹೇಳಲಾಗುವುದಿಲ್ಲ. ಕರ್ನಾಟಕ ಸಂಸ್ಕೃತಿ, ಯುದ್ಧದ ಚರಿತ್ರೆ, ಪ್ರಾಚೀನ ಕರ್ನಾಟಕದ ವಸ್ತ್ರ ಒಡವೆ ಆಯುಧಗಳು ಇತ್ಯಾದಿಗಳನ್ನರಿಯುವವರಿಗೆ, ಕನ್ನಡ ಸಾಹಿತ್ಯದ ಕ್ಷಾತ್ರದ ಹಿನ್ನೆಲೆಯನ್ನು ತಿಳಿಯಬಯಸುವವರಿಗೆ ಇದೊಂದು ಅವಶ್ಯ ಪರಾಮರ್ಶನ ಗ್ರಂಥವಾಗಿದೆ.

'ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ'ವು ಸಂ. ತಪಸ್ವೀ ಕುಮಾರ್ ಅವರಿಗೆ ಪಿಎಚ್.ಡಿ. ಪ್ರಶಸ್ತಿಯನ್ನು ತಂದುಕೊಟ್ಟ ನಿಬಂಧ. ಒಂದು ನಾಡಿನ ಕೆಳವರ್ಗದ ಅಥವಾ ಅವಿದ್ಯಾವಂತರ, ಅನಕ್ಷರಸ್ಥರ ಬದುಕು ಅವರ ಜಾನಪದ ಸಾಮಗ್ರಿಯಲ್ಲಿ ಸ್ಪಷ್ಟವಾಗಿ ದಟ್ಟವಾಗಿ ರೂಪಿತವಾಗಿರುತ್ತದೆ. ಅವರ ಒಟ್ಟು ಸಾಮೂಹಿಕ ಮೌಲ್ಯ ಪ್ರಜ್ಞೆಯನ್ನು ತಿಳಿಯುವುದಕ್ಕೂ ಆ ಸಾಮಗ್ರಿ ಅಮೂಲ್ಯವಾದ ಆಕರ. ಆ ಸಾಮಗ್ರಿಯು ಅವರ ಬದುಕಿನ ಅವಿಭಾಜ್ಯ ಅಂಗ ವಾಗಿರುವುದರಿಂದ ಅದರಲ್ಲಿನ ಮೌಲ್ಯ ವ್ಯವಸ್ಥೆ ಅವರ ಬದುಕನ್ನು ರೂಪಿಸುವುದಕ್ಕೆ ನೇರವಾಗಿ ಕಾರಣವಾಗಿರುತ್ತದೆ. ಈ ದೃಷ್ಟಿಯಿಂದ ಜಾನಪದ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸುವ ಅಗತ್ಯವಿದೆ. ತಪಸ್ವೀಕುಮಾರರ ಅಧ್ಯಯನ ಅಂತಹ ದೃಷ್ಟಿಯನ್ನಿಟ್ಟುಕೊಂಡಿದೆಯೆಂಬುದನ್ನು ಅವರ ಕೆಳಗಿನ ಮಾತುಗಳು ಧ್ವನಿಸುತ್ತವೆ–

"ನಮ್ಮ ಈ ಅಧ್ಯಯನದಲ್ಲಿ ಇಂಥ ಅನೇಕ ಇತಿಮಿತಿಗಳನ್ನು ಒಪ್ಪಿಕೊಂಡು, ಇದೇನಿದ್ದರೂ ಕನ್ನಡಿಗರ ಅಪಾರ ಜನಪದ ಸಂಸ್ಕೃತಿ ಕ್ಷೇತ್ರದತ್ತ ನೀಡಿದ ತೋರ್ಬೆರಳು ಮಾತ್ರ, ಎಂಬುದನ್ನು ನಮ್ರತೆಯಿಂದ ಸೂಚಿಸಲಿಚ್ಛಿಸುತ್ತೇನೆ. ವಾಸ್ತವವಾಗಿ ಇಲ್ಲಿ ಪ್ರಸ್ತಾಪಿಸಲಾಗಿರುವ ಒಂದೊಂದು ಮುಖ್ಯ ವಿಷಯವನ್ನು – ಉದಾಹರಣೆಗೆ, ಜಾನಪದರ ಉಡುಗೆ ತೊಡುಗೆ, ಆಟ ಪಾಟ, ಕೌಟುಂಬಿಕ ಜೀವನ ಚಿತ್ರಣ, ವೀರಜೀವನ, ದೈನಂದಿನ ಜೀವನ ಕ್ರಮ, ಹಬ್ಬ ಹರಿದಿನಗಳ ಮಹತ್ವ, ಇತ್ಯಾದಿ–ಎತ್ತಿಕೊಂಡು, ತಲಸ್ಪರ್ಶಿಯಾದ ಅಧ್ಯಯನಕ್ಕೆ ಒಳಪಡಿಸಿದಾಗ ಹತ್ತಾರು ಉತ್ಕೃಷ್ಟ ನಿಬಂಧಗಳಿಗಾಗುವಷ್ಟು ಗಹನ ಸಂಗತಿಗಳಿರುವುದು ಸ್ಪಷ್ಟವಾಗು ತ್ತದೆ...."

ಈ ಅಧ್ಯಯನಕ್ಕೆ ನನ್ನ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ವು ಮೂಲ ಪ್ರೇರಣೆ ಒದಗಿಸಿದೆಯೆಂದು ಹೇಳಿಕೊಂಡಿದ್ದಾರೆ.

ಪ್ರಸ್ತಾವನೆಯಲ್ಲಿ ಜಾನಪದವೆಂದರೇನು, ಅದರ ಅಧ್ಯಯನದ ಇತಿಹಾಸ, ತಮ್ಮ ನಿಬಂಧದ ಉದ್ದೇಶ, ಜನಪದ ಗೀತೆಯ ಕಲಿಕೆ, ಹಾಡುಗಾರಿಕೆ, ಸಂಗೀತ ಇವುಗಳನ್ನು ಪ್ರಸ್ತಾಪಿಸಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಜನಪದ ಸಾಹಿತ್ಯ ಸ್ವರೂಪ, ಜನಪದ ನಿತ್ಯಜೀವನ ಕ್ರಮ, ಜಾನಪದರ ಕುಟುಂಬ ಜೀವನ, ಜಾನಪದರ ರಸಿಕತೆ, ಜಾನಪದರ ವೀರಜೀವನ, ಹಬ್ಬ ಹರಿದಿನಗಳು, ಜನಪದ ಸಂಸ್ಕೃತಿಯ ಗೊತ್ತು ಗುರಿಗಳು, ಕನ್ನಡ ಜನಪದ ಕಲೆಗಳು ಈ ಶೀರ್ಷಿಕೆಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಿಕೊಡಲಾಗಿದೆ.

ಶೀರ್ಷಿಕೆಯನ್ನು ನೋಡಿದರೆ, ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಗಳಾಗಿರುವುದು ಜಾನಪದ ಗೀತೆಗಳು. ವಚನಗಳನ್ನು ಆಕರವಾಗಿಟ್ಟುಕೊಂಡು

ಪಿ. ವಿ. ನಾರಾಯಣ, ಶಾಸನಗಳನ್ನು (ಕ್ರಿ. ಶ. 450-1150) ಆಕರವಾಗಿಟ್ಟು ಕೊಂಡು ನಾನು ಅಧ್ಯಯನ ನಡಸಿದ್ದೇವೆ. ಆಯಾ ಆಕರಗಳಲ್ಲಿ ಒಂದು ನಿರ್ದಿಷ್ಟ ಕಾಲದ ಬದುಕು ಹೇಗೆ ಚಿತ್ರಿತವಾಗಿದೆಯೆಂಬುದನ್ನು ಹೆಕ್ಕಿ ತೆಗೆದು ಪುನಾರಚಿಸಿ ವ್ಯಾಖ್ಯಾನಿಸುವುದು ಸಾಂಸ್ಕೃತಿಕ ಅಧ್ಯಯನಗಳ ಉದ್ದೇಶ. ಪ್ರಾಸಂಗಿಕವಾಗಿ ಬೇರೆ ಆಕರಗಳನ್ನೂ ಬಳಸಿಕೊಳ್ಳಬಹುದು. ತಪಸ್ವೀಕುಮಾರ್ ಕೂಡ ಅದೇ ಮಾರ್ಗವನ್ನು ಅನುಸರಿಸಿದ್ದರೆ ಚನ್ನಾಗಿತ್ತು. ಅದು ಬಿಟ್ಟು, ಅವರು ತಮಗೆ ತಿಳಿದಿರುವ ಹಳ್ಳಿಗರ ಬದುಕಿನ ವಿವರಗಳನ್ನು ಕೊಡುತ್ತ ಅಲ್ಲಲ್ಲಿ ಅಡಿಟಿಪ್ಪಣಿಯಲ್ಲಿ ಮತ್ತು ಬರಹದ ಮಧ್ಯೆ ಜಾನಪದ ಗೀತಗಳ ತುಣುಕುಗಳನ್ನು ಉದಾಹರಿಸುತ್ತಾರೆ. ಅವರ ಬರವಣಿಗೆಯ ಬಹು ಭಾಗಕ್ಕೆ ಜಾನಪದ ಗೀತಗಳೇ ಆಧಾರವಾಗಬೇಕಾಗಿಲ್ಲ; ಹಾಗೆ ಆಧಾರವಾಗಿಯೂ ಬಳಸಿಕೊಂಡಿಲ್ಲ. ಹಳ್ಳಿಗರ ಬದುಕನ್ನು ಸಾರಾಸಗಟಾಗಿ ಚಿತ್ರಿಸುವುದರ ಬದಲು, ಜಾನಪದ ಗೀತಗಳಲ್ಲಿ ಕಂಡುಬರುವ ಹಳ್ಳಿಗರ ವೇಷ ಭೂಷಣ, ವಾಸ, ತಿಂಡಿ ತೀರ್ಥಗಳು, ಹಬ್ಬಗಳು, ಆಯುಧಗಳು, ಬಾಂಧವ್ಯ ಸೂಚಕಗಳು, ಕಲೆಗಳು, ಜಾತಿಗಳು, ನಂಬಿಕೆಗಳು, ಆಚರಣೆಗಳು, ಬೇಟೆ, ವೃತ್ತಿ ಗಳು ಇವೇ ಮೊದಲಾದ ವಿಷಯಗಳನ್ನು ಆಕರ ಸಮೇತ ಉಲ್ಲೇಖಿಸಿ ವ್ಯಾಖ್ಯಾನಿಸ ಬೇಕಿತ್ತು. ಜಾನಪದ ಗೀತಗಳು ತಾವು ತಿಳಿಸಿಕೊಡುವ ಬದುಕಿನ ವಿವರಗಳು ನಮಗೆ ದೊರಕುವಂತೆ ಮಾಡಬೇಕಾದ್ದು ತಪಸ್ವೀಕುಮಾರರ ಕಾರ್ಯವಾಗಿತ್ತು. ಸಂಶೋಧನ ಕಾರ್ಯವನ್ನು ಒಂದು ಶಿಸ್ತಿಗೆ ಒಳಪಡಿಸದೆ ಇದ್ದರೆ ತಮ್ಮ ಸಂಶೋ ಧನೆಯ ಉದ್ದೇಶವನ್ನು ಸ್ಪಷ್ಟಪಡಿಸಿಕೊಳ್ಳದಿದ್ದರೆ ಏನು ಅನಾಹುತವಾಗಬಹು ದೆಂಬುದಕ್ಕೆ ಈ ನಿಬಂಧ ಒಳ್ಳೆಯ ಉದಾಹರಣೆ. ಇಂದಿನ ಜಾನಪದ ಸಾಹಿತ್ಯವು ಬಳಕೆಯ ದೃಷ್ಟಿಯಿಂದ ಸಮಕಾಲೀನವಾದುದಾದರೂ, ಅದು ಪರಂಪರಾಗತವಾಗಿ ಹರಿದು ಬಂದಿರುವುದಾಗಿರುವುದರಿಂದ ಗತಕಾಲದ ಬದುಕಿನ ಎಷ್ಟೋ ಮುಖಗಳು ಅಲ್ಲಿ ಹುದುಗಿರುತ್ತವೆ. ಈ ದೃಷ್ಟಿಯಿಂದ ಜಾನಪದ ಗೀತಗಳನ್ನು ನೋಡದೇ ಇರುವುದರಿಂದ ತಪಸ್ವಿಕುಮಾರ್ ತಮಗೆ ತಾವು ಬಹಳ ನಷ್ಟವನ್ನು ಮಾಡಿ ಕೊಂಡಿದ್ದಾರೆಂದು ಅನ್ನಿಸುತ್ತದೆ. ಇದಕ್ಕೆ ಮಾದರಿಯಾಗಿ ಒಂದು ಪ್ಯಾರಾ ಕೊಡು ತ್ತೇನೆ–

"ಪ್ರಕೃತ ಜನಪದ ಗರತಿಯರು ಸೀರೆ ಉಡುವ ರೀತಿಯ ಬಗೆಗೆ ಕೊಂಚ ವಿವೇಚಿಸುವ ಅಗತ್ಯವಿದೆ. ನಾನು ಬಲ್ಲಂತೆ, ಉತ್ತರ ಕರ್ಣಾಟಕದ ವಯಸ್ಕ ಜನಪದ ಸ್ತ್ರೀಯರು ಇವೊತ್ತಿಗೂ ಕಚ್ಚೆ ಹಾಕಿ ಸೀರೆ ಉಡುತ್ತಾರೆ; ಮಣ್ಣು ಕಲ್ಲು ಸಿಮೆಂಟು ಇತ್ಯಾದಿಗಳನ್ನು ಹೊರುವ ಹೆಂಗಸರಂತೂ ಕಚ್ಚೆ ಹಾಕಿಯೇ ಸೀರೆ ಉಡುವುದು. ತರುಣಿಯರು ಕಚ್ಚೆ ಹಾಕದೆ ಕಾಗಿನಸೀರೆ, ಇಳಕಲ್ ಸೀರೆ, ಗುಳೇದಗುಡ್ಡದ ಕುಪ್ಪುಸ ಗಳನ್ನು ಬಳಸುತ್ತಾರೆ. ಜಾನಪದರೇ ಅಲ್ಲದೆ ಅನೇಕ ಕನ್ನಡಿಗ ನಾಗರಿಕರಲ್ಲಿಯೂ ಮರಾಠಿ ಬ್ರಾಹ್ಮಣಿಯರಲ್ಲಿಯೂ ಕಚ್ಚೆ ಹಾಕಿಯೇ ಸೀರೆ ಉಡುವ ಸಂಪ್ರದಾಯವಿದೆ.

ಹೀಗೆ ಉಡುವ ರೀತಿಗೆ ಪ್ರಾಚೀನವಾದ ಒಂದು ಇತಿಹಾಸ, ಸಾಂಸ್ಕೃತಿಕ ಪರಂಪರೆ ಇದೆ. ಈ ಸಂಪ್ರದಾಯ ದಕ್ಷಿಣ ಭಾರತದ ಅನೇಕ ಮಹಿಳೆಯರಲ್ಲಿ ರೂಢಿಯಲ್ಲಿದ್ದು, ಉತ್ತರ ಪ್ರದೇಶದ ಬಂಗಾಳ, ಗುಜರಾತು ಇತ್ಯಾದಿ ಪ್ರಾಂತಗಳಲ್ಲಿ ಇದು ರೂಢಿಯಲ್ಲಿಲ್ಲ ಎಂಬುದಾಗಿ ಶ್ರೀ ಅಳ್ತೇಕರ್ ಹೇಳಿದ್ದಾರೆ''.

ಬಹುಪಾಲು ಬರವಣಿಗೆ ಹೀಗಿದೆ. ಕನ್ನಡ ಜಾನಪದ ಗೀತಗಳ ಸಾಂಸ್ಕೃತಿಕ ಅಧ್ಯಯನ ಈ ನಿಬಂಧದಲ್ಲಿ ನಡೆದಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಕೆ. ಆರ್. ಸಂಧ್ಯಾ ರೆಡ್ಡಿ ಅವರ ಪಿಎಚ್.ಡಿ. ನಿಬಂಧವಾದ 'ಕನ್ನಡ ಜನಪದ ಕಥೆಗಳು' ಕನ್ನಡ ಜಾನಪದ ಶಾಸ್ತ್ರೀಯ ಅಧ್ಯಯನಗಳಿಗೆ ಒಂದು ಬೆಲೆಯುಳ್ಳ ಕಾಣಿಕೆ. 'ಧವಳಶ್ರೀ' ಅವರ 'ಜಾನಪದ ಕಥಾಮೃತ' (ಸಂಪುಟ1. 1967) ಪ್ರಕಟವಾದಂದಿನಿಂದ ಜಾನಪದ ಶಾಸ್ತ್ರದ ದೊಡ್ಡ ಮತ್ತು ಮುಖ್ಯ ಭಾಗವಾದ ಜಾನಪದ ಕಥೆಗಳನ್ನು ಕುರಿತಂತೆ ಸಂಗ್ರಹಗಳೂ ವ್ಯಾಖ್ಯಾನಗಳೂ ಕನ್ನಡದಲ್ಲಿ ಬರುತ್ತಿವೆ. ಇದೊಂದು ಹೆಮ್ಮೆಯ ಸಂಗತಿ. ಜಾನಪದ ಕಥೆಗಳ ಅಧ್ಯಯನದಲ್ಲಿ ಸಂಧ್ಯಾರೆಡ್ಡಿಯವರ ಕೃತಿ ಒಂದು ಖಚಿತ ಮೈಲಿಗಲ್ಲು.

ಈ ನಿಬಂಧದಲ್ಲಿ ಒಂಬತ್ತು ಅಧ್ಯಾಯಗಳೂ ಕೆಲವು ಅನುಬಂಧಗಳೂ ಇವೆ. ನಿಬಂಧದ ಉದ್ದೇಶ ಮತ್ತು ವ್ಯಾಪ್ತಿಗಳಿಗೆ ಮೊದಲ ಅಧ್ಯಾಯ ಮೀಸಲು. ಎರಡನೆಯ ಅಧ್ಯಾಯದಲ್ಲಿ ಜನಪದ ಕಥೆಯಸ್ವರೂಪವನ್ನೂ, ಉಳಿದ ಅಧ್ಯಯನಗಳಲ್ಲಿ ಕನ್ನಡ ಜನಪದ ಕಥೆಗಳ ಭೌಗೋಳಿಕ ಮತ್ತು ಸಾಂಸ್ಕೃತಿಕವ್ಯಾಪ್ತಿ, ಕನ್ನಡ ಜನಪದ ಕಥೆಗಳ ಪರಿಚಯ, ಅವುಗಳ ಪಾಠಾಂತರ ಪರಿಷ್ಕರಣ, ಸಾಹಿತ್ಯಕ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ, ಅಧ್ಯಯನದ ಇತಿಹಾಸ ಈ ಅಂಶಗಳು ಚರ್ಚಿತವಾಗಿವೆ. ಅನುಬಂಧಗಳಲ್ಲಿ ಜಾನಪದ ಕತೆಗಳ ಹೆಚ್ಚಿನ ಅಧ್ಯಯನಗಳನ್ನು ಕೈಗೊಳ್ಳುವವರಿಗಾಗಿ ಜಾನಪದ ಕಥೆಗಳ ವರ್ಗಸೂಚಿ, ಆಶಯಸೂಚಿಗಳನ್ನು ಕೊಟ್ಟಿದೆ.

ಜಾನಪದ ಕಥೆಯ ಸಾಮಾನ್ಯಸ್ವರೂಪವನ್ನು ಕುರಿತು ವಿವರಿಸುವಾಗ ಅವುಗಳ ಲಕ್ಷಣವನ್ನೂ ಅವುಗಳ ಭಿನ್ನ ಪ್ರಕಾರಗಳನ್ನೂ ವಿವರಿಸಿರುವುದಲ್ಲದೆ, ಅಸಂಖ್ಯಾತವಾದ ಜಾನಪದ ಕಥೆಗಳನ್ನು ವರ್ಗೀಕರಿಸಲು ಬಳಕೆಯಾಗುವ ಆಶಯ ಮತ್ತು ವರ್ಗ ಪರಿಕಲ್ಪನೆಗಳನ್ನು ಪರಿಚಯಿಸಿದ್ದಾರೆ. ಜಾನಪದ ಕಥೆಗಳ ಹುಟ್ಟನ್ನು ಕುರಿತಾದ ಭಿನ್ನ ಭಿನ್ನ ಸಿದ್ಧಾಂತಗಳ ಸಾರಾಂಶವನ್ನು ಕೊಟ್ಟಿದ್ದಾರೆ.

"ಕನ್ನಡ ಜನಪದ ಕಥೆಗಳ ಭೌಗೋಳಿಕ ಮತ್ತು ಸಾಂಸ್ಕೃತಿಕವ್ಯಾಪ್ತಿ'' ಎಂಬ ಅಧ್ಯಾಯದ ಔಚಿತ್ಯ ನನಗಿನ್ನೂ ಅರ್ಥವಾಗಿಲ್ಲ. ಕರ್ನಾಟಕಕ್ಕೆ ಖಚಿತವಾದ ರಾಜಕೀಯ ಭೌಗೋಳಿಕ ವ್ಯಾಪ್ತಿಯಿದೆ; ಕನ್ನಡಕ್ಕೂ ಒಂದು ಸ್ಥೂಲವಾದ ವ್ಯಾಪ್ತಿಯುಂಟು. ಇವುಗಳನ್ನನುಸರಿಸಿ ಕನ್ನಡ ಜಾನಪದ ಕಥೆಗಳ ವ್ಯಾಪ್ತಿಯೂ ಇರುತ್ತದೆ. ಒಂದೇ ಕತೆ ಆಯಾ ಉಪಭಾಷೆಯಲ್ಲಿ ಕಾಣಿಸಿಕೊಂಡು ಮೇಲ್ಮೈಲ

ಪದರವಲ್ಲಿ–ಅಭಿವ್ಯಕ್ತಿಯಲ್ಲಿ ಸ್ವಲ್ಪ ಭಿನ್ನವಾಗಬಹುದೇ ಹೊರತು, ತನ್ನ ಮೂಲ ಸ್ವರೂಪದಲ್ಲಿ ಅಲ್ಲ.

ಕನ್ನಡ ಜಾನಪದ ಕತೆಗಳನ್ನು ಥಾಂಸನ್ ಮೊದಲಾದವರನ್ನನುಸರಿಸಿ ಸ್ಥೂಲವಾಗಿ ಎರಡು ಭಾಗಗಳನ್ನಾಗಿ ಮಾಡಿದ್ದಾರೆ: ಸಂಕೀರ್ಣ ಕಥೆಗಳು ಮತ್ತು ಸರಳ ಕಥೆಗಳು. ಇವುಗಳಲ್ಲಿ ಮತ್ತೆ ಒಳಭೇದಗಳುಂಟು. ಯಾವುದೇ ಜ್ಞಾನಸಾಮಗ್ರಿಯನ್ನೂ ಗೆರೆ ಎಳೆದು ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲವೆಂಬ ಅರಿವು ಸಂಧ್ಯಾ ಅವರಿಗೆ ಉಂಟು. ಸಂಕೀರ್ಣ ಕತೆಗಳಲ್ಲಿ ಅತಿಮಾನುಷತೆ ಮೇಲಕ್ಕೇ ಕಾಣುವ ವಿಶಿಷ್ಟಾಂಶವಾಗಿದ್ದರೆ ಸರಳ ಕಥೆಗಳಲ್ಲಿ ವಾಸ್ತವತೆ ಅಂತಹ ವಿಶಿಷ್ಟಾಂಶವಾಗಿರುತ್ತದೆ ಎಂಬ ವಿವರಣೆ ಸರಿಯಾಗಿದೆ. ಇಲ್ಲೆಲ್ಲ ಕನ್ನಡದಲ್ಲಿ ಪ್ರಕಟವಾಗಿರುವ ಜಾನಪದ ಕತೆಗಳನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿದ್ದಾರೆ.

ಪಾಠಾಂತರ ಪರಿಷ್ಕರಣವು ಈ ಕೃತಿಯ ಅಮೂಲ್ಯ ಭಾಗಗಳಲ್ಲಿ ಒಂದು. ಒಂದು ಕತೆ ಎಲ್ಲೋ ಯಾವಾಗಲೋ ಯಾರ ಬಾಯಲ್ಲೋ ಹುಟ್ಟಿ ಬಾಯಿಂದ ಬಾಯಿಗೆ, ಊರಿನಿಂದ ಊರಿಗೆ, ಭಾಷೆಯಿಂದ ಭಾಷೆಗೆ ಹಬ್ಬುತ್ತ ಹೋಗುವಾಗ ಸಹಜವಾಗಿಯೇ ಹಲವು ಪಾಠಗಳನ್ನು ಪಡೆಯುತ್ತದೆ. ಬೇರೆಯವರ ಬಾಯಿಂದ ಇರಲಿ, ಒಬ್ಬನ ಬಾಯಿಂದಲೇ ಒಂದು ಕತೆಯನ್ನು ಒಂದೇ ರೀತಿಯಾಗಿ ಪಡೆಯುವುದು ಕಷ್ಟ. ಒಂದು ಕತೆಯ ಭಿನ್ನ ಪಾಠಗಳನ್ನು ಸಂಗ್ರಹಿಸಿ "ಅವುಗಳ ಮೂಲರೂಪ ಉಪವರ್ಗಗಳನ್ನು ರಚಿಸುವುದೇ ಅಲ್ಲದೆ ಆ ಕಥೆ ಉಗಮಿಸಿರಬಹುದಾದ ಪ್ರಾದೇಶಿಕ ನೆಲೆಯನ್ನೂ ಗುರುತಿಸುವುದು ಕಷ್ಟದ ಕಾರ್ಯ" ಈ ಕಾರ್ಯಕ್ಕೆ ಮೂಲ ಪ್ರಚೋದನೆ ಗ್ರಂಥಸಂಪಾದನೆಯ ಮೂಲ ತತ್ವಗಳು ಮತ್ತು ತೌಲನಿಕ ಭಾಷಾವಿಜ್ಞಾನ (ಸಂಧ್ಯಾರೆಡ್ಡಿಯವರು ಡಿ. ಎಲ್. ನರಸಿಂಹಾಚಾರ್ಯರ "ಕನ್ನಡ ಗ್ರಂಥ ಸಂಪಾದನ" ಯನ್ನು ಬಳಸಿಕೊಂಡಿರಬಹುದು- ಆ ಕೃತಿ ಗ್ರಂಥಸೂಚಿಯಲ್ಲಿ ಸೇರ್ಪಡೆಯಾಗುವುದು ಅಗತ್ಯ) ಈ ಕೆಲಸಕ್ಕೆ ಕೆಲವು ಮಾದರಿ ಕತೆಗಳನ್ನು ಆರಿಸಿಕೊಂಡು ಪಾಠ ಪರಿಷ್ಕರಣವನ್ನು ಅತ್ಯಂತ ಸಮರ್ಪಕವಾಗಿ ನೆರವೇರಿಸಿದ್ದಾರೆ.

ಜಾನಪದ ಕತೆಗಳ 'ಸಾಂಸ್ಕೃತಿಕ ಅಧ್ಯಯನ' ವನ್ನು ಎಚ್ಚರಿಕೆಯಿಂದ ಕೈಗೊಂಡರೆ "ಆದಿಮಾನವನ ಸಮಾಜದ ಎಷ್ಟೋ ವಿಷಯಗಳು ಕಾಣುತ್ತವೆ". ಆತ್ಮದಲ್ಲಿನ ನಂಬಿಕೆ, ಹೆಸರಿನಲ್ಲಿ ಆತ್ಮವಿದೆ ಎಂಬ ನಂಬಿಕೆ, ಅಷ್ಟೇ ಅಲ್ಲ ವ್ಯಕ್ತಿಯ ಬೆವರು ಉಗುರು, ಕೂದಲು ಇವೂ ಕೂಡ ಆತ್ಮವನ್ನು ಹೊಂದಿರುವುದರಿಂದ ಅವು ಇನ್ನೊಬ್ಬರ ಕೈಗೆ ಸಿಗದಂತೆ ಎಚ್ಚರ ವಹಿಸುತ್ತಿದ್ದ ಆದಿಮಾನವನ ಪದ್ಧತಿಗಳಿಗೆ ಜಾನಪದ ಕತೆಗಳು ಒಳ್ಳೆಯ ಆಗರವೆಂಬುದನ್ನು ತೋರಿಸಿದ್ದಾನೆ.

ಸಂಧ್ಯಾ ಅನುಬಂಧಗಳಲ್ಲಿ ಕನ್ನಡ ಜಾನಪದ ಕತೆಗಳನ್ನು ವರ್ಗ ಆಶಯಗಳಡಿ ಹೇಗೆ ವಿಂಗಡಿಸಬಹುದೆಂಬುದಕ್ಕೆ ಉದಾಹರಣೆಗಳನ್ನು ಕೊಟ್ಟಿದ್ದಾರೆ.

ಈ ನಿಬಂಧದ ರಚನೆಯಲ್ಲಿ ಸಂಧ್ಯಾ ಅಪಾರ ಶ್ರಮ ವಹಿಸಿ ಮಾಹಿತಿ ಸಂಗ್ರಹ ವಿಶ್ಲೇಷಣೆಗಳನ್ನು ಕೈಗೊಂಡಿದ್ದಾರೆ ಎಂಬಲ್ಲಿ ಅನುಮಾನವಿಲ್ಲ. ತಮ್ಮ ಉದ್ದೇಶದ ಅರಿವು ಅವರಿಗೆ ಸ್ಪಷ್ಟವಾಗಿರುವುದರಿಂದ ಎಲ್ಲೂ ಹೆಜ್ಜೆ ತಪ್ಪುವುದಿಲ್ಲ. ಇಂಗ್ಲಿಷಿನಲ್ಲಿರುವ ಹಲವಾರು ಗ್ರಂಥಗಳನ್ನು ಓದಿ ಅರಗಿಸಿಕೊಂಡು ಅಲ್ಲಿಯ ಚೌಕಟ್ಟನ್ನು ಅರ್ಥಮಾಡಿಕೊಂಡು ಅದನ್ನು ಕನ್ನಡ ಜಾನಪದ ಕತೆಗಳಿಗೆ ಅನ್ವಯಿಸಿ ನೋಡಿದ್ದಾರೆ. ಇಂತಹ ಅಧ್ಯಯನಗಳು ಜಾನಪದ ಶಾಸ್ತ್ರವನ್ನು ಒಂದು ಶಿಸ್ತಿನ ಮಟ್ಟಕ್ಕೆ ಏರಿಸುವಲ್ಲಿ ಮತ್ತು ಪಿಎಚ್.ಡಿ. ಪದವಿಯ ಮೌಲ್ಯವನ್ನು ಉಳಿಸುವಲ್ಲಿ ಸಹಾಯಕವಾಗಿರುತ್ತವೆ. ಕರಡುಗಳನ್ನು ತಿದ್ದುವಲ್ಲಿ ಕಾಣಿಸುವ ಎಚ್ಚರ, ಶಬ್ದಸೂಚಿ ಗ್ರಂಥಸೂಚಿಗಳಲ್ಲೂ ಕಾಣಿಸಿದೆ. ಈ ಅಮೂಲ್ಯ ನಿಬಂಧಕ್ಕಾಗಿ ಸಂಧ್ಯಾ ರೆಡ್ಡಿ ಅವರು ಅಭಿನಂದನಾರ್ಹರು. ಅವರು ಈ ನಿಬಂಧವನ್ನು ಬರೆದಮೇಲೆ ಹೆಚ್ಚು ಬರೆದು ಪ್ರಕಟಿಸಿದಂತೆ ನನಗೆ ತೋರುವುದಿಲ್ಲ. ಅದು ನಿಜವಾಗಿದ್ದರೆ ಅದೊಂದು ದುರದೃಷ್ಟವೇ ಸರಿ.

ರುಕ್ಮಿಣಿ ಪರ್ವತಿಯವರ 'ಅಂಬಿಕಾತನಯದತ್ತರ ಭಾವಗೀತೆಗಳು' ಅವರು ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ನಿಬಂಧ. ಬೇಂದ್ರೆಯವರ ಭಾವಗೀತೆಗಳಿಗೆ ಮನಸೋತ ಅವರು ಅದನ್ನೇ ತಮ್ಮ ಸಂಶೋಧನೆಯ ವಸ್ತುವಾಗಿ ಆರಿಸಿಕೊಂಡುದಾಗಿ ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ಪ್ರಸ್ತಾವನೆ, ಅಂಬಿಕಾತನಯದತ್ತರ ಜೀವನ ಮತ್ತು ವ್ಯಕ್ತಿತ್ವ, ಅಂಬಿಕಾತನಯದತ್ತರ ಕಾವ್ಯ ಸೌಂದರ್ಯ, ಅಂಬಿಕಾತನಯದತ್ತರ ಭಾವಗೀತೆಗಳಲ್ಲಿ ವಿಷಯ, ವೈವಿಧ್ಯ ಮತ್ತು ವೈಶಿಷ್ಟ್ಯ, ಅಂಬಿಕಾತನಯದತ್ತರ ಕೆಲವು ಭಾವಗೀತೆಗಳ ರಸಗ್ರಹಣ, ಅಂಬಿಕಾತನಯದತ್ತರ ಚಿಂತನ ಮಂಥನ, ಸಮಾರೋಪ ಈ ಹೆಸರಿನ ಶೀರ್ಷಿಕೆಗಳಲ್ಲಿ ತಮ್ಮ ವಿಚಾರಗಳನ್ನು ರುಕ್ಮಿಣಿಯವರು ಮಂಡಿಸಿದ್ದಾರೆ. ಬೇಂದ್ರೆಯವರ ಜೊತೆ ಸಂಪರ್ಕವಿಟ್ಟುಕೊಂಡು, ಅವರಿಂದ ಹಲವು ಕವನಗಳ ಅರ್ಥವನ್ನು ಗ್ರಹಿಸಿ ಅವರ ಅಭಿಮಾನಿಯಾಗಿ ಈ ನಿಬಂಧವನ್ನು ರಚಿಸಿರುವ ರುಕ್ಮಿಣಿ ಅವರ ಕವನಗಳ ಮೆಚ್ಚುಗೆಗೆ ಹೆಚ್ಚೆಂದರೆ ಒಂದು ಪ್ರವೇಶವನ್ನು ಒದಗಿಸಿದ್ದಾರೆ. "ಅಂಬಿಕಾತನಯದತ್ತರ ಜೀವನ ಮತ್ತು ವ್ಯಕ್ತಿತ್ವ" ಎಂಬಲ್ಲಿ ಕೆಲವು ಹೊಸ ಸಂಗತಿಗಳು ಹೊರಬಂದಿರಬಹುದು. ಉಳಿದಂತೆ ಎಲ್ಲ ಕಡೆಗೂ ಇದೊಂದು ಮುಖ್ಯವಾಗಿ ಪ್ರಶಂಸಾತ್ಮಕವಾದ ಕೃತಿಯಾಗಿ ಉಳಿದಿದೆ. ಅವರ ಭಾವಗೀತೆಗಳ ವಿವರಣೆಯನ್ನು ಸ್ವಲ್ಪ ಮಟ್ಟಿಗೆ, ಅಷ್ಟೊಂದು ಆಳವಲ್ಲದ ವಿಶ್ಲೇಷಣೆಯನ್ನು ಉದ್ದಕ್ಕೂ ಕಾಣಬಹುದೇ ಹೊರತು, ಬೇಂದ್ರೆಯವರ ಭಾಷೆಯನ್ನಾಗಲಿ ಪ್ರತಿಮೆಗಳನ್ನಾಗಲಿ ಛಂದೋವೈವಿಧ್ಯವನ್ನಾಗಲಿ ಅವರು ಜಾನಪದದಿಂದ ಮತ್ತು ಇತರೆಡೆಗಳಿಂದ ಪಡೆದ ಪ್ರೇರಣೆಗಳನ್ನಾಗಲಿ ಆಳವಾಗಿ ವಿಚಾರ ಮಾಡುವ ಗೋಜಿಗೆ ಹೋಗಿಲ್ಲ. ಬೇಂದ್ರೆಯವರಂತಹ ಮಹತ್ವದ ಮತ್ತು ಸಾಕಷ್ಟು ಚರ್ಚಿತವಾಗಿರುವ ಕವಿಗಳ

ಬಗ್ಗೆ ಬರೆಯುವುದು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಂತೆಯೇ. ಇದರ ಜೊತೆಗೆ ಅಲ್ಲಲ್ಲಿ ಇಂಗ್ಲಿಷಿನ ತಪ್ಪು ತಪ್ಪು ಬಳಕೆ ("ಈ ಸತ್ಯದ ಅರಿವೇ ಆನಂದ. ಅಂತೆ–Truth, Beauty and Joy forever ಎನ್ನುವ ಮಾತನ್ನು ಕೀಟ್ಸ್ ಎಂಬ ಆಂಗ್ಲ ಕವಿ ಹೇಳಿದ್ದು ಯಥಾರ್ಥವಾಗಿದೆ" ಎಂಬಂತಹ ವಾಕ್ಯಗಳನ್ನು ಗಮನಿಸಿ). ಅಸಂಗತವಾದ ಮಾತುಗಳು, ಉದ್ದಕ್ಕೂ ಪ್ರಶಂಸೆಗಳ ಸರಮಾಲಿಕೆ ಇವುಗಳಿಂದಾಗಿ ಈ ನಿಬಂಧ ನಮ್ಮನ್ನು ಬಹಳ ನಿರಾಸೆಗೊಳಿಸುತ್ತದೆ. ಯಾವ ಇಂಗ್ಲಿಷ್ ಅವತರಣಿಕೆಯೂ Quotation) ಸರಿಯಾಗಿಲ್ಲ. ಬೇಂದ್ರೆಯವರ ಭಾಷೆಯ ಹಿಂದಿನ ಸೂಕ್ಷ್ಮ ಧ್ವನಿಗಳನ್ನು ಗ್ರಹಿಸಿರುವುದು ಎಲ್ಲೂ ಕಂಡುಬಂದಿಲ್ಲ. ಉದಾಹರಣೆಗೆ, ಅವರ 'ಭಾವಗೀತ' ಕವನವು ಭಾವಗೀತೆ (lyric) ಎಂಬುದರ ಅತ್ಯಂತ ಸುಂದರವಾದ ಕಾವ್ಯಾತ್ಮಕ ಭಾಷ್ಯವಾಗಿದೆಯೆಂಬುದನ್ನು ಗಮನಿಸದೆ ಹೋಗಿದ್ದಾರೆ. ಈ ನಿಬಂಧದಲ್ಲಿ ಒಂದು ಬಗೆಯ ಮೇಲ್ಪದರದ ಮಾತುಗಳೇ ಉದ್ದಕ್ಕೂ ತುಂಬಿವೆ.

ಎಚ್. ಎಂ. ಶಂಕರನಾರಾಯಣರಾಯರ 'ಶ್ರೀ ಹರಿಹರ ದೇವಾಲಯ' ಎಂಬ ದೊಡ್ಡ ಕೃತಿಯು ಹರಿಹರದ ಸುಪ್ರಸಿದ್ಧ ದೇವಾಲಯದ ಸಮಗ್ರ ಇತಿಹಾಸ ವನ್ನು ಹಿಡಿದಿಡಲು ಮಾಡಿರುವ ಒಂದು ಒಳ್ಳೆಯ ಪ್ರಶಂಸನೀಯ ಯತ್ನ. ಆ ದೇವಾಲಯದ ಚರಿತ್ರೆ, ಸ್ಥಳ ಪುರಾಣ, ಸಂಸ್ಕೃತಿಯ ಕೇಂದ್ರವಾಗಿ ಆ ದೇವಾಲಯ, ಅಲ್ಲಿ ನಡೆಯುವ ಉತ್ಸವಗಳು, ಶಿಲ್ಪಕಲೆ ಇವುಗಳ ನೂರೈವತ್ತು ಪುಟಗಳ ನಿರೂಪಣೆಯಲ್ಲದೆ, ಸುಮಾರು ಮುನ್ನೂರು ಪುಟಗಳ ಅನುಬಂಧಗಳೂ ಇಲ್ಲಿವೆ. ಅನುಬಂಧಗಳಲ್ಲಿ ಹರಿಹರದ ಎಲ್ಲ ಶಾಸನಗಳನ್ನೂ ಕೊಟ್ಟಿದೆಯಲ್ಲದೆ ಇನ್ನೂ ಹಲವಾರು ಉಪಯುಕ್ತ ವಿಷಯಗಳು ಸೇರ್ಪಡೆಯಾಗಿವೆ.

'ಪ್ರವೇಶ' ಭಾಗದಲ್ಲಿ ಈ ಕೃತಿಯ ಉದ್ದೇಶವನ್ನು ಹೀಗೆ ಹೇಳಿದೆ—

"ಇಲ್ಲಿ ಹೇಳಿರುವ ವಿಷಯ ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಕ್ಕೆ ಪ್ರವೇಶವಲ್ಲ. ಯಾತ್ರಾರ್ಥಿಯಾದವರು ಹರಿಹರ ಕ್ಷೇತ್ರಕ್ಕೆ ಬಂದಿಳಿದಾಗ ದೇವಾಲಯಕ್ಕೆ ಹೋಗುವ ಮಾರ್ಗ, ಅಲ್ಲಿ ತಿಳಿಯಬೇಕಾಗಿರುವ ವಿಷಯಗಳಿಗೆ ದಿಕ್ಸೂಚಿ ಮಾತ್ರ."

ಈ ಪುಸ್ತಕ ಯಾತ್ರಾರ್ಥಿಗಳಿಗೆ ಸಹಾಯಕವಾಗಕೂಡದು ಎಂದು ಯಾರೂ ಹೇಳುವುದಿಲ್ಲ; ಆದರೆ ಹರಿಹರ ಕ್ಷೇತ್ರದ ವಿಷಯದಲ್ಲಿ ಲೇಖಕರಿಗಿರುವ ಭಕ್ತಿಭಾವನೆ ಅವರಲ್ಲಿರಬೇಕಾದ ವಾಸ್ತವ ಪ್ರಜ್ಞೆಯನ್ನು ಸ್ವಲ್ಪ ಮಸುಳಿಸಿಬಿಟ್ಟು ಊಹವನ್ನು ಅದು ಮಾರ್ಪಡಿಸಿದೆ. ತುಂಗಭದ್ರೆಯ ನೀರು ವಿಶ್ವದಲ್ಲೇ ಅದು ರುಚಿಯಾದ್ದೆಂದು ಹೇಳಿದರೂ ತಡೆದೀತು "ಬೇಸಗೆಯಲ್ಲಿ ನದಿಯಿಂದ ತಂದಿಡುತ್ತಿದ್ದ ನೀರಿಗೆ ಇರುವ

ಮುತ್ತುತ್ತಿದ್ದುದನ್ನು ನೋಡಿದ್ದೇನೆ" ಎಂದು ಹೇಳಿದರೆ ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

‘ಹರಿಹರ ದೇವಾಲಯದ ಚರಿತ್ರೆ’ಯನ್ನು ಶಾಸನ ಮತ್ತು ಇತರ ಆಧಾರಗಳಿಂದ ಸಮರ್ಪಕವಾಗಿ ರಚಿಸಿದ್ದಾರೆ. ಹರಿಹರ ಊರು ಮತ್ತು ಅಲ್ಲಿನ ದೇವಾಲಯ ಬೇರೆ ಬೇರೆ ಶತಮಾನಗಳಲ್ಲಿ ಪ್ರಾಮುಖ್ಯವನ್ನು ಪಡೆಯುತ್ತ ಬಂದುದರ ವಿವರಣೆ ಸರಿಯಾಗಿದೆ. ಈ ಸಂದರ್ಭದಲ್ಲಿ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಕೂಡಲೂರಿನ (ಈಗಿನ ಹರಿಹರದ) ಹರಿಹರದೇವರಿಗೆ ಕಾಲುಗಳು ಇಲ್ಲ ಎಂಬ ಉಲ್ಲೇಖವಿರುವುದನ್ನು ಶ್ರೀ ರಾಯರು ಗಮನಿಸಬಹುದಿತ್ತು. ಹರಿಹರ ದೇವಾಲಯವು 1180ರ ಸುಮಾರಿನಲ್ಲಿ ಹಾಳಾಗಿ 1224ರಲ್ಲಿ ಪೋಲಾಳ್ವ ದಂಡನಾಥನಿಂದ ಹೊಸದಾಗಿ, ಹಿಂದಿಗಿಂತ ಸುಂದರವಾಗಿ ಪುನರ್ನಿರ್ಮಾಣಗೊಂಡಿತು ಎಂದು ನಾನು ಶಾಸನಗಳ ಮತ್ತು ರಾಘವಾಂಕ ಚಾರಿತ್ರ್ಯದಲ್ಲಿ ಬರುವ ದಂತಕತೆಯೊಂದರ ಆಧಾರದಮೇಲೆ ಪ್ರತಿಪಾದಿಸಿರುವುದನ್ನು ಶ್ರೀ ರಾಯರು ಒಪ್ಪಿಕೊಂಡಿಲ್ಲ. ಹರಿಹರ ಕ್ಷೇತ್ರದ ಶಾಸನಗಳ ಕಾಲಾನುಕ್ರಮವನ್ನು ಗಮನಿಸಬೇಕು. ಕ್ರಿ.ಶ. 1140 ; 1143 ; 1148; 1160; 1162 ; 1164 ; 1168 ; 1168 ; 1171 ; 1173 ; 1180 ; 1180 ; 1224 ; 1254 ; 1255 ; 1259 ; 1262 ; 1263 ; 1267 ; 1268 ; 1272 ; 1277 ; 1277 ; 1280 ; 1298 ; 1300 ; 1300 ; 1356 ; 1379 ; 1382 ; 1382 ; 1410 ; 1424 ; 1479 ; 1530 ; 1531 ; 1533 ; 1538 ; 1539 ; 1554 ; 1561 ; 1562 ; 1562 ; 1978.

ಕೊನೆಯ ಶಾಸನ ಶ್ರೀ ಶಂಕರನಾರಾಯಣರು ಹರಿಹರ ದೇವಾಲಯಕ್ಕೆ ಒಪ್ಪಿಸಿದ ಕಂಚಿನ ಗಂಟೆಯ ಮೇಲಿದೆ. ಇದನ್ನು ಬಿಟ್ಟರೆ ಉಳಿದ ತೇದಿಗಳನ್ನು ಗಮನಿಸಬೇಕು. ಪ್ರತಿ ಶಾಸನದ ಮಧ್ಯದ ಕಾಲದ ಅಂತರವನ್ನು ಗಮನಿಸಿದರೆ, ಅತಿ ಹೆಚ್ಚಿನ ಅಂತರವಿರುವುದು 1180 ಮತ್ತು 1224 ; 1300 ಮತ್ತು 1356; 1479 ಮತ್ತು 1530 ; 1562 ಮತ್ತು 1978 ಇವುಗಳಲ್ಲಿ ಕಂಡುಬರುತ್ತದೆ. 1300-56 ಈ ಅವಧಿಯಲ್ಲಿ ಮುಸ್ಲಿಮರ ಧಾಳಿಯಿಂದಾಗಿ ದೇವಾಲಯದ ಧಾರ್ಮಿಕ ಚಟುವಟಿಕೆಗಳು ಸ್ತಬ್ಧಗೊಂಡಿದ್ದಂತೆ ಕಾಣುತ್ತದೆ; 1562ರಿಂದ ಮುಂದೆ ಅದೇ ರೀತಿ ಸ್ತಬ್ಧಗೊಳ್ಳಲು ಕಾರಣ ವಿಜಯನಗರ ಸಾಮ್ರಾಜ್ಯವು ನಾಶಗೊಂಡುದು ಕಾರಣವಾಗಿರಬೇಕು; 1479-1530 ಇಲ್ಲೂ ಯಾವುದೋ ಕಾರಣದಿಂದ ಧಾರ್ಮಿಕ ಚಟುವಟಿಕೆಗಳು ನಿಲ್ಲಲು ಕಾರಣವಿರಬೇಕು. 1180ರಲ್ಲಿ ದತ್ತಿಗಳು ದಾಖಲಾಗುವುದು ನಿಂತುಹೋಗಿ, 1224ರಲ್ಲಿ ಹಾಳಾಗಿದ್ದ ದೇವಾಲಯವನ್ನು ಪೋಲಾಳ್ವನು ನಿರ್ಮಿಸಿದನೆಂದು ಹೇಳಿರುವುದು ಆ ಅವಧಿಯಲ್ಲಿ ದೇವಾಲಯ ಬಿದ್ದುಹೋಗಿತ್ತೆಂದೂ,

ಹರಿಹರಕವಿ ಆ ಅವಧಿಯಲ್ಲಿ ಹರಿಹರ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದನೆಂದೂ ದಂತಕತೆಯೊಂದರ ಸಹಾಯದಿಂದ ನಾನು ಅನುಮಾನಿಸಿರುವುದು ಸರಿಯಾಗಿದೆ.

ಹರಿಹರದ ಸ್ಥಳಪುರಾಣವನ್ನು ಸಂಗ್ರಹಿಸಿ ಕೊಟ್ಟಿರುವುದು ಜಾನಪದಶಾಸ್ತ್ರದ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.

'ಸಂಸ್ಕೃತಿಯ ಕೇಂದ್ರ' ಎಂಬ ಅಧ್ಯಾಯದಲ್ಲಿ ಅಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸದ ಸ್ವರೂಪ, ಸಮಾರಾಧನೆ, ವಿವಾಹಕಾರ್ಯ, ಜಾನಪದ ಕಲಾಪ್ರದರ್ಶನಗಳು ಇವುಗಳ ಪರಿಚಯವಿದೆ.

ದೇವಾಲಯದಲ್ಲಿ ನಡೆಯುವ ಉತ್ಸವಗಳನ್ನೇ ಕುರಿತಾಗಿ ಒಂದು ಪ್ರತ್ಯೇಕ ಅಧ್ಯಾಯವಿದೆ. ಒಂದು ಅಧ್ಯಾಯದಲ್ಲಿ ಶಿಲ್ಪಕಲೆಯ ಪರಿಚಯವಿದೆ. ಹರಿಹರದಲ್ಲಿ ದೊರಕುವ ಎಲ್ಲ ಶಾಸನಗಳನ್ನು ಇಲ್ಲಿ ಕಾಲಾನುಕ್ರಮವಾಗಿ ಅನುಬಂಧದಲ್ಲಿ ಕೊಟ್ಟು ಅವುಗಳಿಗೆ ಟಿಪ್ಪಣಿ ಬರೆದಿದೆ. ಮೂರನೆಯ ಅನುಬಂಧದಲ್ಲಿ ಹರಿಹರಕ್ಷೇತ್ರಕ್ಕೆ ಸಂಬಂಧಿಸಿದಂತೆ ಸ್ವಲ್ಪ ಉಪಯುಕ್ತ ಮಾಹಿತಿಯಿದೆ.

ಒಂದು ಸುಪ್ರಸಿದ್ಧ ದೇವಾಲಯವನ್ನು ಕುರಿತಂತೆ ಅದರ ಐತಿಹಾಸಿಕ, ಸಮಕಾಲೀನ, ಸಾಮಾಜಿಕ ಅಧ್ಯಯನವನ್ನು ನಡೆಸಿರುವುದು ಕನ್ನಡದಲ್ಲಿ ಇದು ಮೊತ್ತಮೊದಲು. ಈ ತೆರನಾದ ಕೆಲಸಗಳು ಆಗಬೇಕಾದ್ದು ಸಾಕಷ್ಟಿದೆ. ಶ್ರೀ ಶಂಕರನಾರಾಯಣರು ಈ ಕೃತಿಯ ರಚನೆಗೆ ಸಾಕಷ್ಟು ಶ್ರಮವಹಿಸಿದ್ದಾರೆ. ಸುಂದರವಾಗಿ, ಅಚ್ಚಿನ ತಪ್ಪುಗಳಿಲ್ಲದಂತೆ ಅಚ್ಚಾಗಿರುವುದು, ಒಳ್ಳೆಯ ಚಿತ್ರಗಳನ್ನು ಪ್ರಕಟಿಸಿರುವುದು ಪುಸ್ತಕವನ್ನು ಹೆಚ್ಚು ಆಕರ್ಷಕವಾಗಿ ಮಾಡಿವೆ.

ಎಸ್. ಆರ್. ಗುಂಜಾಳರ 'ಉತ್ತಂಗಿ ಚನ್ನಪ್ಪನವರು' ಅವರಿಗೆ ಪಿಎಚ್.ಡಿ. ಪದವಿ ದೊರಕಿಸಿಕೊಟ್ಟ ನಿಬಂಧ. ಮತದಿಂದ ಕ್ರೈಸ್ತರಾಗಿದ್ದರೂ ಕನ್ನಡವನ್ನೂ ಕನ್ನಡ ಸಾಹಿತ್ಯವನ್ನೂ ವಿಶೇಷವಾಗಿ ಸರ್ವಜ್ಞನನ್ನು ಆಳವಾಗಿ ಅಧ್ಯಯನಮಾಡಿ ತಮ್ಮ ಸಂಶೋಧನೆಗಳಿಂದ ಅವರು ನಮ್ಮ ಸಾಹಿತ್ಯಕ ಜ್ಞಾನವನ್ನು ಶ್ರೀಮಂತಗೊಳಿಸಿದರು. ಅವರ "ಪಕ್ವಜೀವನದ ಕೊನೆಯ ಹನ್ನೆರಡು ವರುಷ ಅತ್ಯಂತ ನಿಕಟ ಒಡನಾಟದಲ್ಲಿದ್ದು ಅವರ ವೈವಿಧ್ಯಮಯವಾದ ಅನೇಕ ಮುಖಗಳನ್ನು ಕಂಡ" ಗುಂಜಾಳರು ಚನ್ನಪ್ಪನವರ ಜೀವನ ಮತ್ತು ಕೃತಿಗಳನ್ನು ಅಧ್ಯಯನಕ್ಕೆ ಆರಿಸಿಕೊಂಡು ಹಲವಾರು ಹೊಸ ಸಂಗತಿಗಳನ್ನು ಶೋಧಿಸಿಕೊಟ್ಟಿದ್ದಾರೆ.

ಭಾಗ 1 ಅವರ ಜೀವನ ಚರಿತ್ರೆಗೆ ಮೀಸಲಾಗಿದೆ. ಭಾಗ 2 ಅವರ ಕೃತಿಗಳ ಸಮೀಕ್ಷೆಗೆ ಮೀಸಲಾಗಿದ್ದರೆ ಭಾಗ 3 ಅವರ ವ್ಯಕ್ತಿತ್ವದರ್ಶನವನ್ನು ಒಳಗೊಂಡಿದೆ. ಅನುಬಂಧವಾಗಿ ಬಂದಿರುವ ಭಾಗ 4ರಲ್ಲಿ ಅವರ ಜನ್ಮಕುಂಡಲಿಯನ್ನೂ ವಂಶಾವಳಿ

ಯನ್ನೂ ಕೊಟ್ಟಿದ್ದರೆ ಭಾಗ 5ರಲ್ಲಿ ಉತ್ತಂಗಿಯವರ ಕೃತಿಗಳು ಮತ್ತು ಅವರನ್ನು ಕುರಿತಂತೆ ಬಂದಿರುವ ಬರಹಗಳನ್ನು ಕೊಟ್ಟಿದೆ. ಗುಂಜಾಳರಿಗೆ ಉತ್ತಂಗಿಯವರು ಮಹಾರಾಷ್ಟ್ರದ ನಾರಾಯಣ ವಾಮನ ತಿಲಕರಂತೆ ಪಂಜಾಬದ ಸಾಧು ಸುಂದರಸಿಂಗ ರಂತೆ ಕಂಡಿದ್ದಾರೆ; ಇದು ಅವರು ಈ ನಿಬಂಧರಚನೆಯನ್ನು ಅತ್ಯಂತ ಶ್ರದ್ಧೆಯಿಂದ ಕೈಗೊಳ್ಳಲು ಪ್ರಚೋದನೆಯನ್ನು ನೀಡಿದೆ.

ಉತ್ತಂಗಿಯವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಈ ಹಿಂದೆ ಬರೆದಿದ್ದರೂ ಇದೇ ಮೊತ್ತಮೊದಲು ಗುಂಜಾಳರು ಅದನ್ನು ಅಧಿಕೃತ ಅಸ್ತಿಭಾರದ ಮೇಲೆ ನಿಲ್ಲಿಸಲು ಸಮರ್ಥರಾಗಿದ್ದಾರೆ. ಅವರ ಬದುಕು ವಿಕಾಸ ವಾಗುತ್ತ ಬಂದುದನ್ನು, ಕ್ರಿಸ್ತನ ಅಧ್ಯಯನ ಮತ್ತು ವಚನಗಳ ಅಧ್ಯಯನ ಪರಸ್ಪರ ವರ್ಧಿಸುವ ರೀತಿಯಲ್ಲಿ ಸಾಗಿದುದನ್ನು ಗುಂಜಾಳರು ಸರಿಯಾಗಿ ಗುರುತಿಸಿದ್ದಾರೆ.

ಅವರ ಕೃತಿಗಳ ಸಮೀಕ್ಷೆಯಲ್ಲಿ ಸರ್ವಜ್ಞನನ್ನು ಕುರಿತಾದ ಅವರ ಕಾರ್ಯಕ್ಕೆ ಎರಡು ಅಧ್ಯಾಯಗಳು ಮೀಸಲಾಗಿವೆ. ಸರ್ವಜ್ಞನ ವಚನಗಳ ಉತ್ತಂಗಿಯವರ ಅಧಿಕೃತ ಆವೃತ್ತಿಯನ್ನು ಈಚೆಗೆ ಪ್ರಕಟವಾಗಿರುವ ಎಲ್. ಬಸವರಾಜು ಅವರ 'ಪರಮಾರ್ಥ'ದೊಂದಿಗೆ ಹೋಲಿಸಿ ಉತ್ತಂಗಿಯವರ ಗ್ರಂಥ ಸಂಪಾದನೆಯ ಬಗ್ಗೆ ಹೆಚ್ಚಿನ ಚರ್ಚೆ ನಡೆಸಿದ್ದರೆ ಉಚಿತವಾಗಿರುತ್ತಿತ್ತು. ಉತ್ತಂಗಿಯವರು ವಚನಕಾರ ಕಾಲದ ಅನುಭವಮಂಟಪವನ್ನು ಕುರಿತಂತೆ ಶೋಧವನ್ನು ನಡೆಸಿ ಇಂಗ್ಲಿಷಿನಲ್ಲಿ ಕೃತಿಯನ್ನು ರಚಿಸಿದರು. ಅನುಭವಮಂಟಪದ ಐತಿಹಾಸಿಕತೆಯ ಬಗ್ಗೆ ಸಂದೇಹಗಳು ಬಂದಾಗ "ಅನುಭವ ಮಂಟಪದ ಐತಿಹಾಸಿಕತೆ" ಎಂಬ ಕೃತಿಯನ್ನು ಕನ್ನಡದಲ್ಲಿ ರಚಿಸಿದರು. ಈ ವಿಷಯಕವಾಗಿ ಇಲ್ಲಿಯವರೆಗೆ ನಡೆದಿರುವ ಎಲ್ಲ ಚರ್ಚೆಗಳನ್ನೂ ಗುಂಜಾಳರು ಗಮನಿಸಿದ್ದಾರೆ ಎಂದು ಹೇಳಲು ಬರುವಂತಿಲ್ಲ. ಸಿದ್ಧರಾಮನ ಲಿಂಗಧಾರಣೆಯ ವಿಷಯಕ ಚರ್ಚೆ, ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳನ್ನು ಸಂಪಾದಿಸಲು ಉತ್ತಂಗಿಯವರಿಗೆ ಒದಗಿ ಬಂದ ಸಂದರ್ಭ, ಇವುಗಳ ಜೊತೆಗೆ ಉತ್ತಂಗಿಯವರ ಇತರ ಕೃತಿಗಳ ಸಮಗ್ರ ಸಮೀಕ್ಷೆ ಯನ್ನು ಮಾಡಿದ್ದಾರೆ.

ವ್ಯಕ್ತಿತ್ವದರ್ಶನದಲ್ಲಿ ಕನ್ನಡನಾಡಿನ ಹಲವರು ವಿದ್ವಾಂಸರು ಉತ್ತಂಗಿ ಯವರನ್ನು ಕಂಡಿರುವ ರೀತಿಯನ್ನು ವಿಶ್ಲೇಷಿಸಿದ್ದಾರೆ ಉತ್ತಂಗಿಯವರು ತಮ್ಮ ವಿದ್ವತ್ತಿನಂತೆಯೇ ಸಜ್ಜನಿಕೆಯಿಂದಲೂ ಪ್ರಖ್ಯಾತರಾದವರಾದ ಕಾರಣ ಅವರ ವ್ಯಕ್ತಿತ್ವವನ್ನು ಸಮುಚಿತವಾದ ರೀತಿಯಲ್ಲಿ ಚಿತ್ರಿಸಬೇಕಾದುದು ಸಾಧುವಾದು ದಾಗಿದೆ.

ವ್ಯಾಪಕವಾಗಿ ಅಧ್ಯಯನ ಮಾಡಿ, ಎಚ್ಚರದಿಂದ ವಿವರಗಳನ್ನು ಕಲೆಹಾಕಿ, ಶಾಸ್ತ್ರೀಯವಾಗಿ ವಿಶ್ಲೇಷಣೆಯನ್ನು ನಡೆಸಿ ಉತ್ತಂಗಿ ಚನ್ನಪ್ಪನವರ ಬದುಕು

ಬರಹಗಳನ್ನು ದಾಖಲುಗೊಳಿಸಿರುವ ಈ ಕೃತಿ ಕನ್ನಡಕ್ಕೆ ಒಂದು ಬೆಲೆಯುಳ್ಳ ಕಾಣಿಕೆಯಾಗಿದೆ.

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಶೀ. ನಂ. ಶಂಕರನಾರಾಯಣರಿಗೆ ಪಿಎಚ್.ಡಿ. ಪ್ರಶಸ್ತಿಯನ್ನು ದೊರಕಿಸಿಕೊಟ್ಟ ನಿಬಂಧ. ಕನ್ನಡದಲ್ಲಿ ಜಾನಪದ ಶಾಸ್ತ್ರೀಯ ಅಧ್ಯಯನಗಳು ಹೆಚ್ಚು ಹೆಚ್ಚು ಖಚಿತವಾಗುತ್ತಿವೆ. ತರುಣರು ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ವಿದ್ವಾಂಸರಾಗಿ ವಿಕಾಸ ಹೊಂದುತ್ತಿದ್ದಾರೆಂಬುದಕ್ಕೆ ಈ ನಿಬಂಧ ಒಳ್ಳೆಯ ಸಾಕ್ಷಿಯಾಗಿದೆ.

ಜಾನಪದ ಶಾಸ್ತ್ರವು ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾ ವಿಜ್ಞಾನ, ಪುರಾಣ ಶಾಸ್ತ್ರಗಳೊಡನೆ ತೀರ ನಿಕಟ ಸಂಪರ್ಕವನ್ನು ಪಡೆದಿರುವ ಒಂದು ಶೈಕ್ಷಣಿಕ ಶಿಸ್ತು. ಕಾಡು ಗೊಲ್ಲರಂತಹ ತೀರ ಹಿಂದುಳಿದ ಜನಾಂಗದ ಬದುಕಿನ ಇತಿಹಾಸ, ಸಮಾಜ ರಚನೆ, ನಂಬಿಕೆಗಳು, ಆಧುನಿಕತೆ ಅವರ ಮೇಲೆ ಮಾಡಿರುವ ಪರಿಣಾಮ, ಇತರ ಜನಾಂಗಗಳ ಜೊತೆ ಅದು ಏರ್ಪಡಿಸಿಕೊಂಡಿರುವ ಸಂಬಂಧ ಇವೇ ಮೊದಲಾದವು ಇಲ್ಲಿಯ ವಸ್ತು. ಪೀಠಿಕೆ ಭಾಗದಲ್ಲಿ ಗೊಲ್ಲ ಬುಡಕಟ್ಟಿನ ಲಕ್ಷಣ, ಸ್ವರೂಪಗಳನ್ನು ಕೊಟ್ಟು ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನದ ಹಿನ್ನೆಲೆಯಲ್ಲಿ ತಮ್ಮ ಅಧ್ಯಯನದ ಕ್ರಮವನ್ನು ಶಂಕರನಾರಾಯಣ ಖಚಿತಪಡಿಸಿಕೊಂಡು, ತಮ್ಮ ಅಧ್ಯಯನದ ಉದ್ದೇಶ, ವಿಧಾನಗಳನ್ನು ಸ್ಪಷ್ಟಪಡಿಸಿದ್ದಾರೆ. 'ಬುಡಕಟ್ಟು' (Tribe) ಎಂದರೇನೆಂಬುದನ್ನು ವಿವರಿಸಿ ಆ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಜಾತಿಗಿಂತ ಒಂದು ಬುಡಕಟ್ಟು ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಆ ಬುಡಕಟ್ಟಿನ ಅಧ್ಯಯನಕ್ಕೆ ತಾವು ನಡಸಿದ ಕ್ಷೇತ್ರ ಕಾರ್ಯದ ವಿಧಾನವನ್ನು ವರ್ಣಿಸಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಕಾಡುಗೊಲ್ಲ ಪದದ ನಿಷ್ಪತ್ತಿ, ಅವರು ಇತರ ಗೊಲ್ಲರೊಡನೆ ಇತರ ಜಾತಿಯ ಜನಗಳೊಡನೆ ಪಡೆದಿರುವ ಸಂಬಂಧ, ಅವರ ಸಮಾಜದ ಒಳವಿಭಾಗಗಳು, ಅವರ ಧಾರ್ಮಿಕ ಕೇಂದ್ರಗಳು, ಉದ್ಯೋಗ, ಅವರ ವೇಷಭೂಷಣಗಳು, ಹೆಸರುಗಳು, ಸಾಹಿತ್ಯ, ವೈದ್ಯ, ಕಲೆ ಇವುಗಳ ಸಮೀಕ್ಷೆಯಿದೆ. 'ಗೊಲ್ಲ' ಪದವನ್ನು ಸಂಸ್ಕೃತದ 'ಗೋಪಾಲ'ದಿಂದ ನಿಷ್ಪನ್ನ ಮಾಡಬಹುದು—ಅನನ್ನು ಶಂಕರನಾರಾಯಣ ಗಮನಿಸಬೇಕು. ಅವರನ್ನು 'ಕಳ್ಳಿಗೊಲ್ಲ'ರೆಂದು ಕರೆಯಲು ಅವರು ಹಿಡಿಯುವ ಕಲ್ಲಿಚೀಲ ಕಾರಣವಲ್ಲ; ಅವರ ಹಟ್ಟಿಯ ಸುತ್ತ ಹಾಕುವ ಕಳ್ಳಿ ಬೇಲಿಯೇ ಕಾರಣ ಎಂಬ ವಿವರಣೆ ಸರಿಯಾಗಿರುವಂತಿದೆ. ಗೊಲ್ಲರ ಬೇರೆ ಬೇರೆ 'ಕುಲ'ಗಳ ಪಟ್ಟಿ ಗಮನಾರ್ಹವಾಗಿದೆ.

ಕಾಡುಗೊಲ್ಲರ ಪುರಾಣಗಳನ್ನೂ ಐತಿಹ್ಯಗಳನ್ನೂ ಎಲ್ಲ ವಿವರಗಳೊಂದಿಗೆ ಸಂಗ್ರಹಿಸಿಕೊಟ್ಟಿರುವುದು ಮೆಚ್ಚಬೇಕಾದ ಸಂಗತಿ. ಇವುಗಳಲ್ಲಿ ಜುಂಜಪ್ಪ, ಎತ್ತಯ್ಯ, ಚಿತ್ರದೇವರು, ಕಾಟಮ ದೇವರು, ಪಾತೇದೇವರು, ಕೇತೇದೇವರ ಕತೆಗಳು ಮುಖ್ಯವಾದುವು. ಪುರಾಣಗಳ ವಿಶ್ಲೇಷಣೆಯಿಂದ ಆಯಾ ಜನಾಂಗದ ಅಥವಾ

ಬುಡಕಟ್ಟಿನ ಪ್ರಾಚೀನ ಇತಿಹಾಸವನ್ನು ಅನುಮಾನಿಸಲು ಸಾಧ್ಯವೆಂಬ ಸಂಗತಿ ಶಂಕರನಾರಾಯಣ ಅವರಿಗೆ ತಿಳಿದಿದೆ. ಆ ವಿಶ್ಲೇಷಣೆಯ ಕಾರ್ಯವನ್ನು ಈ ಮೇಲಿನ ಕತೆಗಳಿಗೆ ಅನ್ವಯಿಸಿ ಉಪಸಂಹಾರ ಭಾಗದಲ್ಲಿ ತೋರಿಸಿದ್ದಾರೆ.

ಸಂಪ್ರದಾಯಗಳು ಮತ್ತು ನಂಬಿಕೆಗಳನ್ನು ಎರಡು ಅಧ್ಯಾಯಗಳಲ್ಲಿ ಸಂಗ್ರಹಿಸಿಕೊಡಲಾಗಿದೆ. ಹಬ್ಬಗಳು, ಜಾತ್ರೆಗಳು, ಬಲಿ, ಹರಕೆಗಳು, ವ್ರತಗಳು, ಜೆನ್ನಿಗೆ ಕುರಿ, ಪಟ್ಟದ ಬಸವ ಇವುಗಳನ್ನು ಕುರಿತಂತೆ ಒಳ್ಳೆಯ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಹಾಗೆಯೇ, ಜನನ, ಋತು ಶಾಂತಿ, ಮದುವೆ, ಸಾವು ಇವೇ ಮೊದಲಾದ ಸಂಸ್ಕಾರಗಳನ್ನು ಸಂಗ್ರಹಿಸಿದ್ದಾರೆ. ಕಾಡುಗೊಲ್ಲರಲ್ಲಿನ ಗಡ್ಡ ಮಂಡೆಯ ಶಾಸ್ತ್ರವನ್ನು ಸಕಲೇಶಪುರ ತಾಲೂಕಿನಲ್ಲಿರುವ ಹರಿಜನರ ಅದೇ ಹೆಸರಿನ ಶಾಸ್ತ್ರದ ಜೊತೆಗೆ ಹೋಲಿಸಿ ನೋಡಬಹುದು.

ಉಪಸಂಹಾರ ಭಾಗ ಈ ನಿಬಂಧದಲ್ಲಿ ಅತ್ಯಂತ ಮಹತ್ವದ್ದು. ಕಾಡುಗೊಲ್ಲರು ಅಚ್ಚ ಕನ್ನಡಿಗರಾಗಿದ್ದು ಯಾವುದೋ ಘಟ್ಟದಲ್ಲಿ–ಬಹುಶಃ ಮುಸಲ್ಮಾನರ ಕಾಟವನ್ನು ತಡೆಯಲಾರದೆ ವಿಜಯನಗರ ಕಾಲದಲ್ಲಿ ತುಂಗಭದ್ರೆಯನ್ನು ದಾಟಿ ದಕ್ಷಿಣಕ್ಕೆ ಬಂದಿರಬಹುದೆಂದು ಶಂಕರನಾರಾಯಣ ಊಹಿಸಿದ್ದಾರೆ. ಇಂತಹ ಕತೆಗಳನ್ನು ಹಲವು ಜಾತಿ ಅಥವಾ ಬುಡಕಟ್ಟುಗಳಿಗೂ ಹೇಳುತ್ತಾರೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. "ತಾಳಿ ಕಟ್ಟುವ ಪದ್ಧತಿ ಮೊದಲಿಗೆ ಕಾಡುಗೊಲ್ಲರಲ್ಲಿ ಇಲ್ಲದೆ ಇತರ ಜಾತಿಗಳ ಸಂಪರ್ಕದಿಂದ ಆ ಪದ್ಧತಿ ಬಳಕೆಗೆ ಬಂದಿರುವ ಸಾಧ್ಯತೆ ಉಂಟೆಂಬುದು ಹೆಚ್ಚು ಸಮಂಜಸ" ಎಂಬ ಮಾತು ಬಹು ಗಮನಾರ್ಹ. ತಾಳಿ ಕಟ್ಟುವ ಪದ್ಧತಿಯನ್ನೇ ಗಮನದಲ್ಲಿಟ್ಟುಕೊಂಡು ಯಾರಾದರೂ ಪಿಎಚ್.ಡಿ. ಪದವಿಗೆ ಸಂಶೋಧನೆಗಳನ್ನು ಕೈಗೊಳ್ಳಬಹುದು. ಕಾಡುಗೊಲ್ಲರು ಮೂಲತಃ ಶೈವರೆಂದೂ ಊರು ಗೊಲ್ಲರು ಮೂಲತಃ ವೈಷ್ಣವರೆಂದೂ ಇನ್ನೊಂದು ತೀರ್ಮಾನಕ್ಕೆ ಬಂದಿದ್ದಾರೆ. ಆ ಬುಡಕಟ್ಟಿನ ಪುರಾಣ ಗಳಲ್ಲೆಲ್ಲ ವಿಸ್ತಾರವಾದುದು ಮತ್ತು ಬಹು ಗಮನಾರ್ಹವಾದುದು ಜುಂಜಪ್ಪನದೆಂದು ಗುರುತಿಸಿರುವುದು ಸರಿಯಾಗಿದೆ. ಜುಂಜಪ್ಪ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಮತ್ತು ಅವನ ಪುರಾಣದಲ್ಲಿ "ಕಾಡುಗೊಲ್ಲರ ಮೂಲ ಸಂಸ್ಕೃತಿಯ ಸಮಗ್ರ ನೋಟ ಸಿಗುತ್ತದೆ." ಎತ್ತಪ್ಪನೂ (ಹೆಸರು ಗಮನಾರ್ಹ–ಗೋಪಾಲರಾದ ಜನಕ್ಕೆ ಎತ್ತು ಆರಾಧ್ಯ ದೈವ) ಇನ್ನೊಬ್ಬ ಅಂತಹ ಸಾಂಸ್ಕೃತಿಕ ವೀರ. ಹಾಗಿಳಿ, ನವಣೆ 'ವ್ರತ'ಗಳಿಗೆ ಕಾರಣವನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ. ಕಾಡು ಗೊಲ್ಲರಲ್ಲಿ ವಿಶೇಷವಾಗಿ ಸಾಹಿತ್ಯ ಲಭ್ಯವಾಗಿದ್ದು ಕಲೆಗಳು ಲಭ್ಯವಾಗದಿರಲು ಕಾರಣ ಅವರ ಅಲೆಮಾರಿತನವೆಂಬ ಊಹೆ ಸರಿಯಾಗಿದೆ.

ಅಪಾರವಾದ ಶ್ರಮ ಶ್ರದ್ಧೆಗಳಿಂದ ಆ ಜನಾಂಗವನ್ನು ಅಭ್ಯಸಿಸಿ ನಿಬಂಧವನ್ನು ಸಿದ್ಧಪಡಿಸಿರುವ ಶಂಕರನಾರಾಯಣರು ಅಭಿನಂದನಾರ್ಹರಾಗಿದ್ದಾರೆ. ಸಾಮಗ್ರಿ

ಯನ್ನು ಎಲ್ಲಿಯೂ ಭಾವೋದ್ರೇಕಕ್ಕೆ ಒಳಗಾಗದೆ ಸತ್ಯನಿಷ್ಠ ಸಂಶೋಧಕನ ದೃಷ್ಟಿಯಿಂದ ಕಂಡು ವಿಶ್ಲೇಷಿಸಿದ್ದಾರೆ. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಚಿತ್ರಗಳಾಗಲಿ ಶಬ್ದಸೂಚಿಯಾಗಲಿ ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿವೆ.

'ಕನ್ನಡ ಸಾಂಗತ್ಯ ಪ್ರಕಾರ–ಒಂದು ಸಂಕ್ಷಿಪ್ತ ಸಮೀಕ್ಷೆ'ಯು ಆರ್. ಎಸ್. ವಿಜಯಲಕ್ಷ್ಮಿಯವರ ಪಿಎಚ್.ಡಿ. ನಿಬಂಧ. ಮೊದಲು ಪದವಿಗಾಗಿ ಒಪ್ಪಿಸಿದ್ದ ನಿಬಂಧವು ಸಂಗ್ರಹಗೊಂಡಿರುವುದರಿಂದ ಅದರ ಸಾರಾಂಶವು ಮಾತ್ರ ಇಲ್ಲಿ ದೊರಕುತ್ತದೆ. 1975ರವರೆಗೆ ಸಾಂಗತ್ಯ ಪ್ರಕಾರವನ್ನು ಕುರಿತಂತೆ ನಡೆದಿರುವ ಚರ್ಚೆ ಮತ್ತು ಅಲ್ಲಿಯವರೆಗೆ ಪ್ರಕಟವಾಗಿರುವ ಸಾಂಗತ್ಯ ಕೃತಿಗಳನ್ನು ಮಾತ್ರ ಗಮನಿಸಿರುವುದಾಗಿ ಲೇಖಕಿ ತಮ್ಮ ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಪೀಠಿಕೆಯಲ್ಲಿ ತಮ್ಮ ಅಧ್ಯಯನ ಕ್ರಮವನ್ನೂ ಸಾಂಗತ್ಯ ಕವಿಗಳ ಸಾಹಿತ್ಯದ ಪರಿಚಯವನ್ನೂ ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ. ಸಾಂಗತ್ಯದ ಪ್ರಾಚೀನತೆ, ಹೆಸರು, ಲಕ್ಷಣಗಳನ್ನು ಕುರಿತಾಗಿ ಬರೆಯುವಾಗ ಈಗಾಗಲೇ ನಡೆದಿರುವ ಚರ್ಚೆಗಳ ಸಾರಾಂಶವನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಇದರಲ್ಲಿ ಹೊಸದೇನನ್ನೂ ವಿಜಯಲಕ್ಷ್ಮಿ ಹೇಳಲಾಗಿಲ್ಲ. ಸಾಂಗತ್ಯ ಕವಿಗಳ ಪ್ರಾದೇಶಿಕ ನೆಲೆಗಳ ಚರ್ಚೆ ಸ್ವಾರಸ್ಯವಾಗಿವೆ. 'ಸಾಂಗತ್ಯ ಸಾಹಿತ್ಯ ಪ್ರವೇಶ' ನಿಬಂಧದ ಬಹುಮುಖ್ಯ ಭಾಗ. ಬೇರೆ ಬೇರೆ ಮತದ ಕವಿಗಳ ಸಾಂಗತ್ಯ ಪ್ರಕಾರದ ಕೃಷಿ, ಅವರ ಧೋರಣೆಗಳು, ಸಾಹಿತ್ಯಕ ಸಿದ್ಧಿಯನ್ನು ವಿವರಿಸಿದ್ದಾರೆ. ಕೆಲವು ಪ್ರಮುಖ ಸಾಂಗತ್ಯ ಕೃತಿಗಳ ವಸ್ತು ವಿಶ್ಲೇಷಣೆ ಒಂದು ಅಧ್ಯಾಯದಲ್ಲಿ ಬಂದಿದೆ. ಈ ಸಂದರ್ಭದಲ್ಲಿ ಎಲ್ಲ ಪ್ರಕಟಿತ ಸಾಂಗತ್ಯ ಕೃತಿಗಳನ್ನಲ್ಲದೆ ಹಸ್ತಪ್ರತಿಗಳಲ್ಲಿನ ಹಲವಾರು ಸಾಂಗತ್ಯ ಕೃತಿಗಳನ್ನೂ ಅವರು ನೋಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಸಾಂಗತ್ಯ ಪ್ರಕಾರದ ಕೊಡುಗೆಯ ಸ್ವರೂಪವೇನು ಎಂಬುದನ್ನು ತಿಳಿಯಲು ಇದೊಂದು ಸಂಕ್ಷಿಪ್ತ ಮಾರ್ಗದರ್ಶಿ. ಈಗಿರುವಂತೆ ಪಿಎಚ್.ಡಿ. ನಿಬಂಧವಾಗಿ ಓದುಗರನ್ನು ಅಷ್ಟಾಗಿ ನಿರಾಶೆಗೊಳಿಸಿಕೊಳ್ಳುವುದಿಲ್ಲವೆಂದು ಹೇಳಬಹುದೇ ಹೊರತು, ಅದಕ್ಕಿಂತ ಹೆಚ್ಚು ಏನನ್ನು ಹೇಳಲಾಗುವುದಿಲ್ಲ. ಅವರ ನಿಬಂಧವನ್ನು ನಾನು ಹಸ್ತಪ್ರತಿಯಲ್ಲಿ ನೋಡಿದ್ದಾಗ ಅದರಲ್ಲಿದ್ದ ಎಷ್ಟೋ ವಿವರಗಳು ನಿಬಂಧದ ಸಂಕ್ಷೇಪೀಕರಣದಲ್ಲಿ ಮರೆಯಾಗಿವೆಯೆಂದು ಇಲ್ಲಿ ಹೇಳಬೇಕಾಗಿದೆ.

'ವೀರಶೈವ ಪುರಾಣಗಳು–ಒಂದು ಅಧ್ಯಯನ' ಎಸ್. ವಿದ್ಯಾಶಂಕರರ ಪಿಎಚ್.ಡಿ. ನಿಬಂದ. ಕನ್ನಡವಲ್ಲಿ ಜೈನಪುರಾಣಗಳಿಗಿರುವಂತೆ ವೀರಶೈವ ಪುರಾಣಗಳಿಗೂ ಒಂದು ವಿಶಿಷ್ಟ ಸ್ಥಾನವಿದೆ, ಮತ್ತು ಪುರಾಣ ರಚನೆಯ ಪದ್ಧತಿ ಇಂದಿಗೂ ವೀರಶೈವರಲ್ಲಿ ಮುಂದುವರಿದಿರುವುದು ಗಮನಾರ್ಹ ಸಂಗತಿ. 'ಪುರಾಣ'ಗಳ ಅಧ್ಯಯನಕ್ಕೆ ಇಂದಿನ ಜಾನಪದಶಾಸ್ತ್ರದಲ್ಲಿ ಹೆಚ್ಚಿನ ಮಹತ್ವ ಸಲ್ಲುತ್ತದೆ, ಮತ್ತು ಪುರಾಣಗಳನ್ನು ನೋಡುವ ದೃಷ್ಟಿಯೂ ಬೇರೆಯಾಗುತ್ತಿದೆ. ಈ ಹಿನ್ನೆಲೆ

ಯಲ್ಲಿ ಎಸ್. ವಿದ್ಯಾಶಂಕರರು ವೀರಶೈವಪುರಾಣಗಳನ್ನು ಅಧ್ಯಯನದ ವಸ್ತುವಾಗಿ ಆರಿಸಿಕೊಂಡಿರುವುದು ಪ್ರಶಂಸನೀಯವಾಗಿದೆ.

ಇದರಲ್ಲಿ ಎರಡು ಭಾಗಗಳಿವೆ. ಭಾಗ ಒಂದರಲ್ಲಿ ವೀರಶೈವ ಪುರಾಣಗಳ ಹಿನ್ನೆಲೆಯನ್ನು ಚಿತ್ರಿಸಲಾಗಿದೆ. ಅದರಲ್ಲಿ ವೈದಿಕಪುರಾಣಗಳು ಮತ್ತು ಜೈನ ಪುರಾಣಗಳು ಎಂಬ ಉಪವಿಭಾಗಗಳಲ್ಲದೆ, 'ಪೆರಿಯಪುರಾಣ'ಕ್ಕೆ ಸಾಕಷ್ಟು ಪುಟಗಳನ್ನು ಮೀಸಲಾಗಿಟ್ಟಿದೆ. ಎರಡನೆಯ ಭಾಗ ವೀರಶೈವ ಪುರಾಣಗಳ ಅಧ್ಯಯನಕ್ಕೆ ಮೀಸಲಾಗಿದೆ. ಇದರಲ್ಲಿ ಒಂಬತ್ತು ಉಪವಿಭಾಗಗಳಿವೆ. ಮೊದಲ ಉಪವಿಭಾಗದಲ್ಲಿ ವೀರಶೈವಪುರಾಣಗಳ ಅರ್ಥ, ಉದ್ದೇಶ, ಲಕ್ಷಣ, ಹುಟ್ಟು, ಬೆಳವಣಿಗೆ, ವರ್ಗೀಕರಣಗಳು ಬಂದಿವೆ. ಎರಡನೆಯ ಉಪವಿಭಾಗದಲ್ಲಿ ವೀರಶೈವಪುರಾಣಕಾರರ 'ಪ್ರತಿಜ್ಞೆ'ಯನ್ನು ಪ್ರಸ್ತಾಪಿಸಲಾಗಿದೆ. 'ಪ್ರತಿಜ್ಞೆ'ಯೆಂಬುದು ಅವರ ಸಂಕಲ್ಪ, ಉದ್ದೇಶಗಳಿಂದ ಭಿನ್ನವಾಗಿಲ್ಲವಾದ್ದರಿಂದ ಅದನ್ನು ಮೊದಲ ಉಪವಿಭಾಗದಲ್ಲೇ ಸಮಾವೇಶಗೊಳಿಸಬಹುದಿತ್ತು. ಅವುಗಳನ್ನು ಪ್ರಚಾರಮಾಡಿದ ರೀತಿಯನ್ನು ಕುರಿತೇ ಒಂದು ಉಪವಿಭಾಗವಿರುವುದು ಸರಿಯಾಗಿದೆ. ಇದರಲ್ಲಿ ಹಲವಾರು ಪ್ರಾಚೀನ ಪೌರಾಣಿಕರ ಹೆಸರುಗಳು ಬಂದಿವೆ. ವಾಸ್ತವವಾಗಿ ವೀರಶೈವ ಮತದ ತತ್ವಗಳೂ ನೀತಿಯೂ ನಾಯಕರ ಜೀವನ ಚರಿತ್ರೆಗಳೂ ಜನಸಾಮಾನ್ಯರಿಗೆ ತಿಳಿದುದು ಪುರಾಣವಾಚನದ ಮೂಲಕವಾಗಿಯೇ. ಶ್ರಾವಣಮಾಸ, 'ಗಣಾರಾಧನೆ', ಬೇರೆ ಬೇರೆ ಉತ್ಸವಗಳ ಸಂದರ್ಭಗಳಲ್ಲಿ ಪುರಾಣವಾಚನ ಮಾಡಿಸುವುದು ರೂಢಿ–ಹಿಂದೆ ಇದ್ದ, ಈಗಲೂ ಜೀವಂತವಿರುವ ಈ ಪದ್ಧತಿಯನ್ನು ಇಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ನಾಲ್ಕನೆಯ ಉಪ ಅಧ್ಯಾಯ ಪುರಾಣಗಳ ಕಾವ್ಯಸೌಂದರ್ಯಕ್ಕೆ ಮೀಸಲಾಗಿದೆ. ಈ ವಿಭಾಗದಲ್ಲಿ ವೀರಶೈವ ಪುರಾಣಗಳು ರಚನೆಗೊಂಡ ಛಂದಸ್ಸುಗಳ ಅಥವಾ ಪ್ರಕಾರಗಳ ನಿರೂಪಣೆಯಿದೆ. ಪುರಾಣಗಳ 'ಕಾವ್ಯಸೌಂದರ್ಯ'ವನ್ನು ವಿಶದಪಡಿಸಲು ಅಂತಹ ಗಂಭೀರ ಪ್ರಯತ್ನವನ್ನೇನೂ ಇಲ್ಲಿ ಮಾಡಿದಂತೆ ಕಾಣುವುದಿಲ್ಲ. ಮುಂದಿನ 'ವರ್ಣನೆ'ಗಳಲ್ಲಿ ವೀರಶೈವಪುರಾಣಗಳಲ್ಲಿ ಬರುವ ವೇಶ್ಯಾವಾಟಿ, ವನವಿಹಾರ, ಸಮುದ್ರ, ಸೂರ್ಯಾಸ್ತ ಇವೇ ಮೊದಲಾದ ವರ್ಣನೆಗಳ ನಿರೂಪಣೆಯಿದೆ. ವೀರಶೈವ ಪುರಾಣಗಳಲ್ಲಿ ಬಂದಿರುವ ಅಲಂಕಾರಗಳ ಪಟ್ಟಿ ಅನಗತ್ಯವಾಗಿದ್ದು ಈಗಿನ ಕಾಲದ ಬರವಣಿಗೆಗೆ ಹೊಂದದ ರೀತಿ ಅದು. ವೀರಶೈವಪುರಾಣಗಳಲ್ಲಿ ಬರುವ ಕಥನಕಲೆಯ ಭಾಗ ಅಮೂಲ್ಯವಾದುದು: ಅವುಗಳಲ್ಲಿ ಬೇರೆ ಬೇರೆ ಕತೆಗಳನ್ನು ತಂದು ಸೇರಿಸುವ ರೀತಿಯನ್ನು ಅದರ ತಂತ್ರವನ್ನು ಬಹು ಕ್ರಮಬದ್ಧವಾಗಿ ವಿದ್ಯಾಶಂಕರ್ ನಿರೂಪಿಸಿದ್ದಾರೆ. ಪುರಾಣಗಳಲ್ಲಿ ಬರುವ ಕತೆಗಳನ್ನು ಸಾದೃಶ್ಯಪರ ಕಥೆಗಳು, ದೃಷ್ಟಾಂತ ಕಥೆಗಳು, ತತ್ವಪ್ರಧಾನ ಕಥೆಗಳು, ಪವಾಡ ಕಥೆಗಳೆಂದು ವಿಂಗಡಿಸಿರುವುದು ಸರಿಯಾಗಿದೆ. ವಾಸ್ತವವಾಗಿ ಯಾವುದೇ ಪುರಾಣದಲ್ಲಿ ಕಥಾನಾಯಕನ ಜೀವನಚರಿತ್ರೆ ಒಂದು ನಿಮಿತ್ತ ಮಾತ್ರ: ಆ ನಿಮಿತ್ತದಲ್ಲಿ

ಪ್ರಾಚೀನರ ಸಮಕಾಲೀನರ ದೇವಾನುದೇವತೆಗಳ ಕತೆಗಳನ್ನು ಹೇಳುವುದು, ತನ್ಮೂಲಕ ಪುರಾಣ ಕರ್ತೃವಿಗೆ ತಿಳಿದಿರುವ ಸಮಸ್ತ ಜ್ಞಾನವನ್ನೂ ನಿರೂಪಿಸುವುದು ಪುರಾಣಗಳ ಉದ್ದೇಶ. ಕೊನೆಯ ಉಪವಿಭಾಗದಲ್ಲಿ ವೀರಶೈವ ಪುರಾಣಗಳು ಪ್ರತಿಪಾದಿಸುವ ಧರ್ಮದ ಸ್ವರೂಪ, ನೀತಿಗಳ ನಿರೂಪಣೆಯಿದೆ.

ವಿದ್ಯಾಶಂಕರರ ಈ ಕೃತಿ ವೀರಶೈವ ಪುರಾಣಗಳ ಸ್ವರೂಪವನ್ನು ಕುರಿತು ಸಮಗ್ರವಾಗಿ ವಿವೇಚಿಸಿ ಅವುಗಳ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸಿದೆಯೆಂಬಲ್ಲಿ ಅನುಮಾನವಿಲ್ಲ. ಆದರೆ, ಬರವಣಿಗೆಯಲ್ಲಿ ಅಲ್ಲಲ್ಲಿ ಅನಗತ್ಯವಾಗಿ ಹಿನ್ನೆಲೆಯ ವಿಷಯಗಳನ್ನು ತಂದಿರುವುದು ಬರಹವನ್ನು ಜಾಳುಮಾಡುತ್ತದೆ. ಹಲವು ಗ್ರಂಥ ಗಳನ್ನು ಅಭ್ಯಾಸಮಾಡಿ, ವೀರಶೈವ ಪುರಾಣಗಳನ್ನು ಎಚ್ಚರಿಕೆಯಿಂದ ಸಿದ್ಧ ಪಡಿಸಿರುವ ಈ ಕೃತಿ ವೀರಶೈವ ಹಿತಾಸಕ್ತರಿಗೆ ಮಾತ್ರವಲ್ಲದೆ, ಜಾನಪದಶಾಸ್ತ್ರಜ್ಞ ರಿಗೂ ಒಂದು ಒಳ್ಳೆಯ ಪರಾಮರ್ಶನ ಗ್ರಂಥ. ಅಚ್ಚಿನ ತಪ್ಪುಗಳು ಕಿಕ್ಕಿರಿದು ತುಂಬಿರುವುದು ಈ ಕೃತಿಯ ಬೆಲೆಯನ್ನು ತಗ್ಗಿಸಿದೆಯೆಂದು ಹೇಳದೆ ವಿಧಿಯಿಲ್ಲ.

ಜಾನಪದ

ಕಾಳೇಗೌಡ ನಾಗವಾರ

1982 ರಲ್ಲಿ ನಮ್ಮ ಗಮನಕ್ಕೆ ಬಂದ ಜಾನಪದ ಕೃತಿಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ಜನಪದ ಗೀತೆಗಳು, ಜನಪದ ಕತೆಗಳು, ಒಗಟು ಮತ್ತು ವಿಮರ್ಶಾ ಲೇಖನಗಳ ಪ್ರಕಾರಗಳಲ್ಲಿ ಈವರ್ಷ ಸಾಕಷ್ಟು ಗಮನಾರ್ಹವಾದ ಕೆಲಸ ನಡೆದಿದೆ. 'ಪೂರ್ಣ ಸೂರ್ಯ ಗ್ರಹಣ'ವನ್ನು ಕುರಿತ ಅಧ್ಯಯನದ ಕೃತಿಯು ಈ ಸಾಲಿನ ಒಂದು ಮಹತ್ವದ ಜಾನಪದ ಪ್ರಕಟಣೆಯಾಗಿದ್ದು, ಈ ಬಗೆಯ ಬರೆವಣಿಗೆಯು ಒಳಗೊಳ್ಳಬೇಕಾದ ನಾನಾ ಮೂಲಗಳ ವಿಷಯ ಸಂಗ್ರಹ ಮತ್ತು ನಿರ್ಲಿಪ್ತ ಭಾವದ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಈ ನಡುವೆಯೂ ಕರ್ನಾಟಕದ ಅನೇಕ ಒಳಭಾಗಗಳಲ್ಲಿನ ವೈವಿಧ್ಯಪೂರ್ಣ ಜಾನಪದ ಸಾಮಗ್ರಿಯು ಬೆಳಕಿಗೆ ಬಾರದ ರೀತಿಯಲ್ಲಿ ಹಾಗೆಯೇ ಉಳಿದಿರುವುದು ನಮಗೆಲ್ಲ ಮನವರಿಕೆ ಯಾಗಿದೆ. ಕನ್ನಡ ನಾಡಿನ ಎಲ್ಲ ವಲಯಗಳ ವಿಪುಲವಾದ ಜಾನಪದ ವಿವರಗಳನ್ನು ಮೊದಲು ಬರೆವಣಿಗೆಯಲ್ಲಿ ದಾಖಲುಗೊಳಿಸಿದಲ್ಲಿ ಮಾತ್ರ ನಮ್ಮ ಅಧ್ಯಯನದ ವಿವಿಧ ಮಾದರಿಗಳನ್ನು ನಾವು ಅದರ ಎಲ್ಲ ಮಗ್ಗುಲುಗಳೊಡನೆ ಒಳಗೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಮನಗಾಣಬೇಕಾಗಿದೆ.

ಗೃಹಿಣೀಗೀತೆಗಳು (ಸಂ : ಮತಿಘಟ್ಟ ಕೃಷ್ಣಮೂರ್ತಿ)

1982 ರಲ್ಲಿ ಪ್ರಕಟವಾಗಿರುವ ಜಾನಪದ ಕೃತಿಗಳಲ್ಲಿ 'ಗೃಹಿಣೀ ಗೀತೆಗಳು' ಗಾತ್ರದ ದೃಷ್ಟಿಯಿಂದ ಅತ್ಯಂತ ದೊಡ್ಡದಾಗಿದೆ. 1180 ಪುಟಗಳ ಈ ಬೃಹತ್ ಹೊತ್ತಿಗೆಯಲ್ಲಿ ನಮ್ಮ ಹಿರಿಯ ಜಾನಪದ ಸಂಗ್ರಾಹಕರಾದ ಮತಿಘಟ್ಟ ಕೃಷ್ಣಮೂರ್ತಿ ಯವರು ಅಪಾರ ಶ್ರಮದೊಡನೆ, ಪ್ರಧಾನವಾಗಿ ಹಳೇಮೈಸೂರಿನ ಜಿಲ್ಲೆಗಳನ್ನು ಒಳಗೊಂಡು ಧಾರವಾಡ, ಬೆಳಗಾವಿ ಹಾಗು ಉತ್ತರ ಕನ್ನಡ ಜಿಲ್ಲೆಗಳಿಂದ— ಬ್ರಾಹ್ಮಣ ಜನವರ್ಗದ ಮಹಿಳೆಯರಲ್ಲಿ ಬಳಕೆಯಲ್ಲಿರುವ ಸಂಪ್ರದಾಯದ ಹಾಡು ಗಳನ್ನು ಕಲೆಹಾಕಿದ್ದಾರೆ. ಉದಯರಾಗ, ಸ್ತೋತ್ರ, ಮಾಹಾತ್ಮೆ, ಪೂಜೆ, ವ್ರತ ಕಥೆಗಳು, ಪೌರಾಣಿಕ ಕಥೆಗಳು; ಹಸೆ, ಚೌಲ, ಮುಂಜಿ, ಮದುವೆ, ಒಸಗೆ, ಜೋಗುಳ, ಆಧ್ಯಾತ್ಮ, ಆರತಿ, ಮಂಗಳ—ಮುಂತಾದ ವಿಭಾಗಗಳಿಗೆ ಸೇರುವ ಹಾಡುಗಳು ಈ ಕೃತಿಯಲ್ಲಿ ಕಿಕ್ಕಿರಿದು ತುಂಬಿವೆ. ಸಂಪ್ರದಾಯದ ಹಾಡುಗಳನ್ನು

ಕುರಿತು ಅಧ್ಯಯನ ಮಾಡುವವರಿಗೆ ಮತ್ತು ಸಾಹಿತ್ಯಕ್ಷೇತ್ರದ ಇತರ ಕುತೂಹಲಿಗಳಿಗೆ ಇದು ಉತ್ತಮ ಆಕರಗ್ರಂಥವಾಗಿ ಪರಿಣಮಿಸಿದೆ. ಈ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ದುಡಿದಿರುವ ಕೃಷ್ಣಮೂರ್ತಿಯವರ ಸಾಧನೆಯು ಶ್ಲಾಘನೀಯ ವಾದುದಾಗಿದೆ.

ಈ ಗ್ರಂಥದಲ್ಲಿ ಕಂಡುಬರುವ ಹಾಡುಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಮತಿಘಟ್ಟ ಅವರು ಸಾಕಷ್ಟು ಪೂರಕ ಸಾಮಗ್ರಿಯನ್ನು ನೀಡಿದ್ದಾರೆ. ಹೊಸಕಾಲದ ನಾಗರಿಕತೆಯ ಹೊಡೆತಕ್ಕೆ ಸಿಕ್ಕಿ ನುಗ್ಗಾಗುತ್ತಿರುವ ಸಂಪ್ರದಾಯವಾದಿ ಸಮಾಜವು ಕಾಲಕಾಲಕ್ಕೆ ಪಡೆದುಕೊಳ್ಳುತ್ತಿರುವ ಮುಖ್ಯ ತಿರುವುಗಳನ್ನು ಗಮನಿಸಿದ್ದಾರೆ. "...ಹೀಗೆ ಹಾಡು ಕೇಳಿದವರಲ್ಲಿ ಎರಡು ತಲೆಮಾರಿನವರು ಸೇರಿದ್ದಾರೆ. 1875 ರಿಂದ 1925 ರ ವರೆಗಿನ ಐವತ್ತು ವರ್ಷಗಳ ಅವಧಿಯಲ್ಲಿ ಜನ್ಮವೆತ್ತಿದ ಇವರಲ್ಲಿ ಕಳೆದ ಶತಮಾನಕ್ಕೆ ಸೇರಿದವರದು ಒಂದು ಗುಂಪು; ಈ ಶತಮಾನಕ್ಕೆ ಸೇರಿದವರದು ಮತ್ತೊಂದು ಗುಂಪು. ಮೊದಲ ಗುಂಪಿನ ಮಹಿಳೆಯರಿಗೆ ಸಾಮಾನ್ಯವಾಗಿ ಓದುಬರಹ ಬರುತ್ತಿರಲಿಲ್ಲ ಮತ್ತು ತಮ್ಮ ಹಿರಿಯರಿಂದ ಅತ್ಯಂತ ಹಳೆಯ ಧಾಟಿಯ ಹಾಡುಗಳನ್ನು ಕಲಿತು ಹಾಡುತ್ತಿದ್ದರು. ಜನರು ಸಂಪ್ರದಾಯಗಳನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಕಾಲವದು. ಹಳ್ಳಿಗಳು ಇನ್ನೂ ಸ್ವಾವಲಂಬನೆಯ ನೆಲೆಗಟ್ಟಿನ ಮೇಲೇ ಬದುಕಿ ಬಾಳುತ್ತಿದ್ದವು. ಹಿಪ್ಪೆ ಎಣ್ಣೆ, ಬೇವಿನ ಎಣ್ಣೆ, ಹೊಂಗೆ ಎಣ್ಣೆ ಹಾಗು ಹರಳೆಣ್ಣೆ ಹಾಕಿದ ಹಣತೆ ದೀಪಗಳ ಬೆಳಕಿನಲ್ಲಿ ರಾತ್ರಿಗಳನ್ನು ಕಳೆಯುತ್ತಿದ್ದ ಮತ್ತು ಸಬರ ಹಾಕಿದ ಎತ್ತಿನ ಮೇಲೆ ಕುಳಿತು ತೌರುಮನೆಯಿಂದ ನಾಲ್ಕಾರು ಮೈಲಿ ದೂರದ ಗಂಡಿನ ಮನೆಗೆ ಪ್ರಯಾಣ ಮಾಡುತ್ತಿದ್ದ ಅನುಭವ ಹೊಂದಿದ್ದರು..." (ಪು. 43) ಈ ಸಮಾಜವು ಕ್ರಮೇಣ ಕಣ್ಮರೆಯಾಗಿ "ಎರಡನೇ ಗುಂಪಿನ ಜನರು ಕಣ್ಣುಬಿಟ್ಟು ಸುತ್ತಣ ಪ್ರಪಂಚ ವನ್ನು ನೋಡುವಷ್ಟರಲ್ಲೇ ಹಳ್ಳಿಯ ಬದುಕಿನಲ್ಲಿ ತೀವ್ರ ಬದಲಾವಣೆಗಳಾಗಿದ್ದವು. ದೊಡ್ಡದೊಡ್ಡ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳು ಏರ್ಪಟ್ಟು, ಎಲ್ಲ ವರ್ಣದ ಮಕ್ಕಳೂ ಒಟ್ಟಿಗೇ ಕುಳಿತು ವಿದ್ಯೆ ಕಲಿಯಬೇಕಾದ ಪರಿಸ್ಥಿತಿ ಏರ್ಪಟ್ಟಿತ್ತು. ಬ್ರಾಹ್ಮಣ ಯುವಕರು ಇಂಗ್ಲಿಷ್ ವಿದ್ಯೆಯ ಕಲಿತು, ಸರ್ಕಾರಿ ನೌಕರಿಗೆ ಸೇರಿ, ಬ್ರಾಹ್ಮಣರಲ್ಲಿ ಲೌಕಿಕರು, ವೈದಿಕರು ಎಂಬ ಗುಂಪುಗಳಾಗಿದ್ದವು. ವೈದಿಕರು ಲೌಕಿಕರನ್ನು ಮೊದಮೊದಲು ಕೀಳಾಗಿ ಭಾವಿಸಿದರೂ ಕಾಲ ಕಳೆದಂತೆ ಲೌಕಿಕರು ತಮ್ಮ ಹಣದ ಬಲದಿಂದ ವೈದಿಕರನ್ನು ತಮ್ಮ ಆಶ್ರಿತರಾಗಿ ಮಾಡಿಕೊಂಡರು... ದೇಶದಲ್ಲಿ ಬ್ರಾಹ್ಮಣ ವಿರೋಧೀ ಭಾವನೆ ತೀವ್ರವಾಗಿ, ಹಳ್ಳಿಗಳಲ್ಲಿ ಬ್ರಾಹ್ಮಣರ ಬದುಕು ಕಠಿಣವೆನಿಸತೊಡಗಿತು. ಹಳೆಯ ನಂಬಿಕೆಗಳು ಮರೆಯಾಗಿ, ಹಳೆಯ ಜೀವನ ಮೌಲ್ಯಗಳು ಭರದಿಂದ ಕಣ್ಮರೆಯಾಗತೊಡಗಿದವು". (ಪು. 44) ಇಂಥ

ಸ್ಥಿತಿಯಲ್ಲಿ ಪರಂಪರಾಗತ ಹಾಡುಗಳ ಸಂರಕ್ಷಣೆ ಕೂಡ ಕಷ್ಟವಾಗುತ್ತಿರುವುದನ್ನು ಈ ಲೇಖಕರು ಗಮನಿಸಿದ್ದಾರೆ. ಇಷ್ಟಲ್ಲದೆ ಈ ಹಾಡುಗಳು ಹಿಂದೂಧರ್ಮ, ವರ್ಣಾಶ್ರಮ ಮತ್ತು ದಶಾವತಾರದ ನೀತಿಯ ಜಾಡಿನಲ್ಲಿ ನಡೆದಿರುವುದರಿಂದ ಆ ಸಂಬಂಧದ ಯಥೇಚ್ಛ ವಿವರಗಳನ್ನು ಕೊಟ್ಟಿದ್ದಾರೆ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಅತ್ಯಂತ ಮುಖ್ಯ ಸಂಗತಿಯೆಂದರೆ ಬ್ರಾಹ್ಮಣೇತರ ಜನಸಮೂಹದಲ್ಲಿ ಅವರ ಉಸಿರಾಟದಂತೆ ಬಳಕೆಯಲ್ಲಿರುವ ಜನಪದ ಗೀತೆಗಳ ರೀತಿಯಲ್ಲಿ ಬಾಯಿಂದ ಬಾಯಿಗೆ ಹರಿದುಬರುತ್ತಲೇ ನಿರಂತರವಾಗಿ ಬೆಳೆಯುವ, ಹೆಚ್ಚು ಹೆಚ್ಚು ಕಲಾತ್ಮಕವಾಗುವ, ಸೃಜನಶೀಲಗುಣ ಈ ಸಂಪ್ರದಾಯದ ಹಾಡುಗಳಿಗೆ ಇಲ್ಲವಾಗಿದೆ. ಸಂಗೀತದ ತಾಳಲಯಗಳಿಗೆ ಅನುಗುಣವಾಗಿ ಯಾರೋ ಒಬ್ಬರು ರಚಿಸಿರುವುದನ್ನು ಕೊಂಚವೂ ಕ್ರಮ ತಪ್ಪದೆ, ಯಾವ ಕಿಂಚಿತ್ ವ್ಯತ್ಯಾಸವೂ ಇಲ್ಲದೆ ಯಾಂತ್ರಿಕವಾಗಿ ಇವುಗಳನ್ನು ಹಾಡಲಾಗುತ್ತದೆ. ಸಂಪ್ರದಾಯದ 'ಸುಂದರ' ಸಂಕೋಲೆಗಳ ಒಳಗೆ ಪಂಜರದ ಅರಗಿಳಿಗಳಾಗಿ ಬೆಳೆದು ಬಂದ ಬ್ರಾಹ್ಮಣ ಮಹಿಳೆಯರ ವಾತಾವರಣವು ಶೂದ್ರಾತಿಶೂದ್ರ ಹೆಣ್ಣುಗಳ ರೀತಿಯಲ್ಲಿ ಹೆಚ್ಚು ಮುಕ್ತವಾದ ಸ್ಥಿತಿಯನ್ನು ಅನುಭವಿಸುವ ಗಾಳಿಬೆಳಕಿನ ಹೇರಳ ಅವಕಾಶಗಳನ್ನು ಹೊಂದದ ಕಾರಣದಿಂದಾಗಿ ಕ್ರಿಯಾತ್ಮಕವಾದ ಯಾವ ಭಾವನೆಗಳನ್ನೂ ಸೃಷ್ಟಿಸಲು ಸಾಧ್ಯವಾಗದ ಬೆಂಗಾಡಾಗಿ ಪರಿವರ್ತನೆಯನ್ನು ಪಡೆಯಿತು. ಚರಿತ್ರೆಯ ಈ ಬಗೆಯ ಅನಿವಾರ್ಯತೆಗಳತ್ತ ನಾವು ಗಮನಹರಿಸಬೇಕಾದುದು ತುಂಬಾ ಮುಖ್ಯವಾದ ಅಂಶವಾಗಿದೆ. ಹೀಗಾಗಿ ಸಂಪ್ರದಾಯದ ಹಾಡುಗಳನ್ನು ನೇರವಾಗಿ ಜಾನಪದದ ತೆಕ್ಕೆಯಲ್ಲಿ ತಂದು ಅಡಗಿಸುವುದು ಕಷ್ಟವಾಗುತ್ತದೆ. ಈ ನಡುವೆಯೂ 'ಗೃಹಿಣೀಗೀತೆಗಳು' ಗ್ರಂಥದಲ್ಲಿರುವ ಗೊಲ್ಲತಿಯ ಹಾಡು, ಕೇಶವಧವಳ, ಬದುಕು ಮಾಡಲಾರೆ, ಮೈಸೂರು ಅರಮನೆಗೆ ಬೆಂಕಿ ಬಿದ್ದದ್ದು, ರೈಲಿನ ಹಾಡು, ನಲ್ಲಿಯ ಹಾಡು, ಬೀಗಿತ್ತೀ ಹಾಡು, ಜರಿಯುವ ಹಾಡು, ತೊಟ್ಟಿಲು ಹಾಡು, ಮುಂತಾದ ಹಾಡುಗಳಲ್ಲಿ ಜನಪದ ಅಂಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದಾಗಿದೆ.

ಪೂರ್ಣಸೂರ್ಯಗ್ರಹಣ (ಎಂ. ಚಿದಾನಂದಮೂರ್ತಿ)

ಗ್ರಹಣಕ್ಕೆ ಸಂಬಂಧಿಸಿದ ಈತನಕದ ಯಥೇಚ್ಛವಿವರಗಳನ್ನು ಕಲೆಹಾಕಿ 'ಪೂರ್ಣಸೂರ್ಯಗ್ರಹಣ' ಕೃತಿಯಲ್ಲಿ ಚಿದಾನಂದಮೂರ್ತಿಯವರು ಆಶ್ಚರ್ಯಕರವಾದ ರೀತಿಯ ಒಂದು ವಿಶಿಷ್ಟ ಅಧ್ಯಯನವನ್ನು ನಡೆಸಿದ್ದಾರೆ : (1) ಗ್ರಹಣ ಮತ್ತು ಸಾಮಾನ್ಯ ಮನುಷ್ಯ (2) ಗ್ರಹಣಗಳ ಬಗ್ಗೆ : ಪುರಾಣಗಳು, ನಂಬಿಕೆಗಳು, ರಿಚುಯಲ್ಲುಗಳು (3) ಗ್ರಹಣಗಳು : ಪ್ರಾಚೀನ ಕನ್ನಡಿಗರು ಕಂಡಂತೆ (4) ಫೆಬ್ರುವರಿ ಹದಿನಾರು : ನನ್ನ ಅನುಭವ (5) ಗ್ರಹಣದ ಸಾಮಾಜಿಕ ಸಮೀಕ್ಷೆ

(6) ಸೂರ್ಯಗ್ರಹಣ ಅದ್ಭುತ ಮಹಾಶಾಂತಿ ಮಹೋತ್ಸವ (7) ಸಮೂಹ ಮಾಧ್ಯಮದಲ್ಲಿ ಗ್ರಹಣ (8) ಉಪಸಂಹಾರ – ಮುಂತಾದ ಭಾಗಗಳಲ್ಲಿ ಗ್ರಹಣಕ್ಕೆ ಸಂಬಂಧಿಸಿದ ವಿಪುಲ ಸಾಮಗ್ರಿಯ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಈ ಲೇಖಕರು ತಮ್ಮ ಅಧ್ಯಯನದ ಬಗೆಯನ್ನು ಕುರಿತು ಆರಂಭದಲ್ಲಿಯೇ "...ಗ್ರಹಣದ ವಿಷಯದಲ್ಲಿ ವಿಜ್ಞಾನ ತಳೆದಿರುವ ನಿಲುವು, ಹೊರಗೆಡಹಿರುವ ಸಂಗತಿಗಳು ಈ ಪುಸ್ತಕದ ವ್ಯಾಪ್ತಿಯಿಂದ ಹೊರಗು. ಸಾಮಾನ್ಯ ಮನುಷ್ಯ–ಅನಾಗರಿಕ, ಅವಿದ್ಯಾವಂತ, ಅಕ್ಷರವಂತ, ವಿದ್ಯಾವಂತ – ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ದೇಶಗಳಲ್ಲಿ ಗ್ರಹಣವನ್ನು ಅರ್ಥಮಾಡಿಕೊಂಡ ರೀತಿ ಮತ್ತು ಕರ್ನಾಟಕದಲ್ಲಿ ಫೆಬ್ರವರಿ 80ರಲ್ಲಿ ಗ್ರಹಣವನ್ನು ವಿಜ್ಞಾನಿಗಳನ್ನು ಹೊರತುಪಡಿಸಿ ಉಳಿದಜನ ಕಂಡು ಪ್ರತಿಕ್ರಿಯಿಸಿದ ರೀತಿ, ಅವರ ಸಾಂಪ್ರದಾಯಿಕ ನಂಬಿಕೆ, ರಿವಾಜುಗಳು ಈ ಅಧ್ಯಯನದ ವಸ್ತು. ಇಲ್ಲಿ ಮುಖ್ಯವಾಗಿ ಸಮಾಜ ಸಂಸ್ಕೃತಿಗಳೇ ಲಕ್ಷ್ಯದಲ್ಲಿರುವುದರಿಂದ ಸಮಾಜೋ - ಸಾಂಸ್ಕೃತಿಕ ಅಧ್ಯಯನವೆಂದು ಕರೆದಿದೆ. ಮೂಢನಂಬಿಕೆಗಳನ್ನು ನಂಬುವುದು ಮೂಢನಂಬಿಕೆಯಾಗಬಹುದು. ಆದರೆ ಅವುಗಳ ಅಧ್ಯಯನವನ್ನು ನಿರಾಕರಿಸುವುದು ಮೌಢ್ಯವಾಗಬಲ್ಲದು, ಮೂಢನಂಬಿಕೆಗಳ ಕ್ರಮಬದ್ಧ ನಿರ್ಲಿಪ್ತ ಅಧ್ಯಯನ ವೈಜ್ಞಾನಿಕವಾಗಿರಬಲ್ಲದು ಎಂಬುದನ್ನು ಓದುಗರ ಲಕ್ಷ್ಯಕ್ಕೆ ತರುತ್ತಿದ್ದೇನೆ... ಮೂಢನಂಬಿಕೆಗಳ ಉಚ್ಚಾಟನೆ ನನ್ನ ಪುಸ್ತಕದ ಉದ್ದೇಶವೆಂದೂ ಹೇಳಿಕೊಳ್ಳಲಾರೆ. ಅವುಗಳ ಪ್ರತಿಪಾದನೆಯಂತೂ ನನ್ನ ಉದ್ದೇಶವಲ್ಲ. ಕೆಲವು ಸಂಗತಿಗಳನ್ನು ಹಿಡಿದಿಡುವುದು ಮಾತ್ರ ನನ್ನ ಉದ್ದೇಶ. ಮತ್ತು ಇಂದಿನ ಭಾರತೀಯ ಮನಸ್ಸನ್ನು ಅರ್ಥಮಾಡಿಕೊಳ್ಳುವುದೂ ಈ ಉದ್ದೇಶದಲ್ಲಿ ಸೇರಿದೆ." ಎಂದು ಸ್ಪಷ್ಟಪಡಿಸಿದ್ದಾರೆ. ನಮ್ಮ ಸುತ್ತಣ ಮಾನವ ಮನಸ್ಸುಗಳು ಗ್ರಹಣದ ಸಂಬಂಧದಲ್ಲಿ ದಾಖಲಿಸಿರಬಹುದಾದ ಎಲ್ಲ ಅಂಶಗಳ ಕಡೆಗೂ ಮೈಯೆಲ್ಲಾ ಕಣ್ಣಾಗಿದ್ದುಕೊಂಡು ತುಂಬು ನಿರ್ಲಿಪ್ತ ಧಾಟಿಯಲ್ಲಿ ಈ ಬರವಣಿಗೆಯು ಉದ್ದಕ್ಕೂ ಸಾಗಿರುವುದನ್ನು ಕಾಣುತ್ತೇವೆ.

ಈ ಅಧ್ಯಯನವನ್ನು ಕುರಿತು–ಪ್ರಸಿದ್ಧ ಮಾನವಶಾಸ್ತ್ರಜ್ಞರೂ, ಸಮಾಜ ವಿಜ್ಞಾನಿಯೂ ಆಗಿರುವ ಹಿರೇಮಲ್ಲೂರ ಈಶ್ವರನ್ ಮತ್ತು ಭಾಷಾವಿಜ್ಞಾನಿಯೂ, ಜಾನಪದ ತಜ್ಞರೂ ಆದ ಎ. ಕೆ. ರಾಮಾನುಜನ್ ಅವರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ 'ಮುನ್ನುಡಿ'ಯಲ್ಲಿ ರಾಮಾನುಜನ್ ಹೇಳಿರುವ "...ಇದು ಕನ್ನಡದಲ್ಲಂತೂ ಹೊಸರೀತಿಯ ಬಹುಮುಖ ಕಾರ್ಯ. ಇಲ್ಲಿನ ವಿವಿಧ ವಿಷಯಗಳ ಓರಣವಾದ ಸಂಗ್ರಹ, ನಿರ್ವಿಕಾರ ಶೈಲಿ, ಒಂದು ಸಾಮೂಹಿಕ ಅನುಭವ ಆಗುತ್ತಿದ್ದ ಹಾಗೇ ಅದನ್ನು ಪರಿಶೀಲಿಸಿ ಜನಮನಕ್ಕೆ ಕನ್ನಡಿಹಿಡಿಯುವ ಆಸಕ್ತಿ–ಇವು ಜಾನಪದ, ಮಾನವಶಾಸ್ತ್ರ, ಸಮಕಾಲೀನ ಭಾರತದ ಅಧ್ಯಯನಗಳಿಗೆ ಅಪೂರ್ವ ಕೊಡುಗೆ. ಇದನ್ನು Serious journalism ಅಂತಲೂ ಅನ್ನಬಹುದು.

ಹೊಸ ಸಂಶೋಧನೆಗಳಿಗೆ ಇದು ಒಳ್ಳೆಯ ಆರಂಭ. ಇಲ್ಲಿ ಪ್ರಶ್ನಾವಳಿ, ಅಂಕಿ–ಅಂಶಗಳ sampling ಇತ್ಯಾದಿ ತಂತ್ರಗಳನ್ನು, ಇನ್ನಷ್ಟು ಸೂಕ್ಷ್ಮಗೊಳಿಸಬಹುದೇನೋ, 'ಮೂಢನಂಬಿಕೆ'ಗಳ ಅರ್ಥದ ಬಗ್ಗೆ ಇನ್ನಷ್ಟು ಸಂಕೀರ್ಣವಾಗಿ ಯೋಜನೆ ಮಾಡಬಹುದೇನೋ ಅನ್ನಿಸಿದರೂ ಈ ಪುಸ್ತಕ ತನ್ನ ಮಿತಿಯಲ್ಲಿ ಕೃತಾರ್ಥ. ಇಲ್ಲಿ ಅನುಭವಿಯೊಬ್ಬರ ಪಾಂಡಿತ್ಯ ದಂತಗೋಪುರದಿಂದಿಳಿದು ಬಂದು ಅನುದಿನದ ಅರಿವಿಗೆ ಉಪಕರಣವಾಗಿದೆ" ಎಂಬ ಮಾತುಗಳಲ್ಲಿ ಈ ಕೃತಿಯ ಸತ್ವವನ್ನು ಕುರಿತು ವಿವರಿಸಲಾಗಿದೆ.

ಶಿವಗಂಗೆ ಸುತ್ತಿನ ಜನಪದ ಕತೆಗಳು (ಸಂ : ಸುಧಾಕರ)

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕು ಶಿವಗಂಗೆ ಬೆಟ್ಟದ ಸುತ್ತ ಮುತ್ತಲಿನ ಊರುಗಳಲ್ಲಿ ಬಳಕೆಯಲ್ಲಿರುವ ಇಪ್ಪತ್ತೇಳು ಜನಪದ ಕತೆಗಳನ್ನು ನಮ್ಮ ಪ್ರಮುಖ ಜಾನಪದ ತಜ್ಞರಲ್ಲಿ ಒಬ್ಬರಾದ ಸುಧಾಕರ ಅವರು ಸಂಗ್ರಹಿಸಿ, ಈ ಸಂಕಲನವನ್ನು ಹೊರತಂದಿದ್ದಾರೆ. ಇಲ್ಲಿನ ಜನಪದ ಕತೆಗಳನ್ನು ಸಂಪಾದಕರು ರಮ್ಯ, ಅತಿಮಾನುಷ, ಹಾಸ್ಯ, ಬುದ್ಧಿವಂತಿಕೆ ಹಾಗೂ ವಿವರಣಾತ್ಮಕ ವಿಭಾಗಗಳಲ್ಲಿ ಸಮರ್ಪಕವಾಗಿ ಸೇರಿಸಿದ್ದಾರೆ. ಜಾನಪದದ ಸೊಗಡಿನಿಂದ ಕೂಡಿರುವ ಈ ಕತೆಗಳು ಕರ್ನಾಟಕದ ಜನಪದ ಕತೆಗಳಲ್ಲಿನ ಉತ್ತಮ ಮಾದರಿಗಳಾಗಿದ್ದು–ಕನ್ನಡ ಜನತೆಯ ಲೋಕಾನುಭವ, ಬದುಕಿನ ಮುನ್ನೋಟ ಮತ್ತು ನಿಸ್ಸಹಾಯಕತೆಯ ನಡುವೆಯೂ ನುಗ್ಗಿ ಹೊಸತಾದುದ್ದರ ಕಡೆಗೆ ನಿರಂತರವಾಗಿ ತುಡಿಯುವ ಮನುಷ್ಯಚೇತನದ ಅಸಲೀತನದ ಬಗ್ಗೆ ಕೈಮಾಡಿ ತೋರಿಸುವಷ್ಟು ಮಟ್ಟದಲ್ಲಿ ಎಲ್ಲ ಅರ್ಥಗಳಲ್ಲೂ ದಷ್ಟಪುಷ್ಟವಾಗಿವೆ. "ಕ್ಷೇತ್ರಕಾರ್ಯದಲ್ಲಿ ಪ್ರತ್ಯಕ್ಷವಾಗಿ ತೊಡಗಿ, ಸಮರ್ಥ ವಕ್ತೃಗಳ ಮುಖೇನ ಸಂಗ್ರಹಿಸಿದ ಕಥೆಗಳು–ತಂತ್ರ, ಭಾಷೆ, ಶೈಲಿಗಳ ದೃಷ್ಟಿಯಿಂದ–ಎಷ್ಟು ಸತ್ವಪೂರ್ಣವಾಗಿರುತ್ತವೆ" ಎಂದು ಸುಧಾಕರ ಅವರು ಹೇಳುವ ಮಾತುಗಳಿಗೆ ಇಲ್ಲಿನ ಎಲ್ಲ ಕಥೆಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ.

ಜಾನಪದ ಕ್ಷೇತ್ರದ ನಾಡಿಯನ್ನು ಚೆನ್ನಾಗಿ ಬಲ್ಲವರಾದ ಸುಧಾಕರ ಅವರಂಥ ವಿದ್ವಾಂಸರಿಂದ ಇಂಥದೊಂದು ಸಂಕಲನಕ್ಕೆ ಉತ್ತಮ ಪ್ರಸ್ತಾವನೆಯನ್ನು ಅವರನ್ನು ಬಲ್ಲವರೆಲ್ಲ ನಿರೀಕ್ಷಿಸುವುದು ಸಹಜವೇ ಆಗಿದೆ. ಅವರೇ ತಮ್ಮ ಆರಂಭದ ಮಾತುಗಳಲ್ಲಿ ಪ್ರಸ್ತಾಪಿಸಿರುವಂತೆ "ಇಲ್ಲಿನ ಜನಪದ ಕಥೆಗಳನ್ನು ಭಾರತೀಯ ಕಥಾಸಾಹಿತ್ಯದ (ಪಂಚತಂತ್ರ, ಕಥಾಸರಿತ್ಸಾಗರ, ಬೇತಾಳ ಪಂಚ ವಿಂಶತಿ ಕಥೆಗಳು, ಜಾತಕ ಕಥೆಗಳು ಮೊದಲಾದವು) ಹಿನ್ನಲೆಯಲ್ಲಿ ಪರಸ್ಪರ ಪ್ರಭಾವ ಹಾಗೂ ಮೂಲ, ಚೂಲಗಳನ್ನು ಕುರಿತು ವಿವೇಚಿಸಬೇಕೆಂದು ಆ ಬಗೆಗೆ ಓದಿ ಟಿಪ್ಪಣಿಯನ್ನೆಲ್ಲಾ ಮಾಡಿಕೊಂಡರೂ...ಸಾಕಷ್ಟು ಕಾಲಾವಧಿಯ ಅಭಾವದಿಂದಾಗಿ ಅವಸರದಲ್ಲಿ 'ಸಂತೆ

ಹೊತ್ತಿಗೆ ಮೂರುಮೊಳ' ಎಂದು ನೆಯ್ಯಲು ಮನಸ್ಸಾಗದ ಆ ಬಯಕೆಯನ್ನು ಕೈಬಿಡಬೇಕಾಯಿತು' ಎಂದು ವಿವರಿಸಿದ್ದಾರೆ; ಈ ವಿವರಣೆಯು ಉತ್ತಮ ಸಂಕಲನ ವೊಂದು ಒಳಗೊಳ್ಳಲೇ ಬೇಕಾಗಿದ್ದ ಅತ್ಯವಶ್ಯವೂ, ಅವಿಭಾಜ್ಯವೂ ಸಹ ಆಗಿರ ಬೇಕಿದ್ದ ಪ್ರಮುಖ ಭಾಗದ ಕೊರತೆಯನ್ನು ಎತ್ತಿ ಹೇಳುತ್ತದೆ. ಈ ಕೊರತೆಯ ಹೊರತು, ಮಿಕ್ಕೆಲ್ಲ ಅಂಶಗಳು–ಕತೆಗಳ ತಿರುಳು, ಭಾಷೆ, ಕತೆಗಾರರ ಹಿನ್ನೆಲೆಯು, ಅರ್ಥಕೋಶ ಮೊದಲಾದವುಗಳೆಲ್ಲ—ಈ ಸಂಕಲನದ ಉತ್ತಮಿಕೆಯನ್ನು ಸಾರುತ್ತವೆ.

ನಾನು ಯಾರು ? (ಜಿ. ವಿ. ಡಿ) ಈ ಒಗಟುಗಳ ಸಂಕಲನದಲ್ಲಿ 549 ಒಗಟು ಗಳಿವೆ. ಸಂಪಾದಕರು ಹಳೇಮೈಸೂರಿನ ಹಲವಾರು ಕಡೆಗಳಲ್ಲಿ ಈ ಒಗಟುಗಳನ್ನು ಸಂಗ್ರಹಿಸಿದ್ದಾರೆ; ಸಾಧ್ಯವಿದ್ದಷ್ಟೂ ಈ ತನಕದ ಒಗಟುಗಳ ಸಂಕಲನಗಳಲ್ಲಿ ಇಲ್ಲ ದವುಗಳನ್ನು ಕಲೆಹಾಕಲು ಪ್ರಯತ್ನಿಸಿದ್ದಾರೆ. ಇಲ್ಲಿನ ಒಗಟುಗಳ ಅಧ್ಯಯನಕ್ಕೆ ಪೂರಕವಾಗಬಹುದಾದ ಎಪ್ಪತ್ತು ಪುಟಗಳ ಸುದೀರ್ಘ ಪ್ರಸ್ತಾವನೆಯು ತುಂಬ ಉಪಯುಕ್ತವಾದುದ್ದಾಗಿದೆ; ಈ ಭಾಗದಲ್ಲಿ ಒಗಟುಗಳ ಉಗಮ, ವಿಕಾಸ, ಇತಿಹಾಸ, ಸ್ವರೂಪ, ರಚನೆ, ವರ್ಗೀಕರಣ–ಮುಂತಾದ ವಿಷಯಗಳನ್ನು ಕುರಿತು ಚರ್ಚಿಸ ಲಾಗಿದೆ.

"ಅಜ್ಜನ ಹೊಟ್ಟೆ ಹಿಡ್ಕೊಂಡು। ಮೊಮ್ಮಗ ನೇತಾಡ್ತ ಅವ್ನೆ"ಎಂದು ಗೇರು ಬೀಜವನ್ನು ವರ್ಣಿಸಿದರೆ, ಬಿದಿರನ್ನು ಕುರಿತು "ಅಕ್ಕ ಹಸರಕ್ಕ। ಗೊಬ್ಬಳಿಪುರದ ನಿಂಗಕ್ಕ। ನೀನಿದ್ದರೆ ಒಂದು ಹೆಸರು। ಸತ್ತರೆ ಸಾವಿರ ಹೆಸರು'' ಎಂದು ಈ ಸಂಕಲನದ ಒಗಟುಗಳು ಬಣ್ಣಿಸಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಈ ಕೃತಿಯು ಕನ್ನಡ ಒಗಟುಗಳ ಪ್ರಕಟಣೆಯ ದಿಕ್ಕಿನ ಒಂದು ಗಮನಾರ್ಹ ಸಂಗ್ರಹ ವಾಗಿದೆ.

ಜಾಣೆ ಕನ್ನಡವ ತಿಳಿದ್ದೇಳೆ (ಸಂ : ಶಾಂತಿನಾಯಕ) ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲು, ನಾಡವರು, ಉಪ್ಪರ ನಾಮಧಾರಿ, ಹವ್ಯಕರು—ಮುಂತಾದ ಜನವರ್ಗಗಳಲ್ಲಿ ಕಂಡುಬರುವ ಸುಮಾರು 500 ಒಗಟುಗಳನ್ನು ಅದೇ ಜಿಲ್ಲೆಯ ಶಾಂತಿನಾಯಕ ಅವರು ಅತ್ಯಂತ ಹೆಚ್ಚಿನ ಆಸ್ಥೆವಹಿಸಿ ಸಂಗ್ರಹಿಸಿದ್ದಾರೆ ಈ ಭಾಗದ ಉಪಭಾಷೆಗಳ ವೈವಿಧ್ಯಗಳ ಜೊತೆಯಲ್ಲಿಯೇ ಇಲ್ಲಿ ವಾಸಿಸುವ ಜನರ ಬುದ್ಧಿಮತ್ತೆ, ಕಲ್ಪನಾವಿಲಾಸ ಹಾಗೂ ದಿನ ನಿತ್ಯದ ಅನುಭವವನ್ನು ಅನಾಯಾಸ ವಾಗಿ ಕಾವ್ಯವಾಗಿಸುವ ಚೋದ್ಯ ಇಲ್ಲಿ ಅನೇಕ ರೀತಿಗಳಲ್ಲಿ ದಾಖಲಾಗಿದೆ:

(i) ಹಸ್ರಂಗಿ ಬಾವ ಯಾವಾಗ್ಬತ್ತೆ ?
ಶಿವರಾತ್ರಿ ಮುಗಿಸಿ ನಿಮ್ಮೂರಿಗ್ಬತ್ತೆ ? (ಮಾವಿನಮಿಡಿ)

(2) ಹೊಳಿ ಬಾಳಿಕಾಯಿ (ಮೀನು)

(3) ಅಮ್ಮನ ಟ್ರಾನ್ಸಿಸ್ಟರ್ (ಮಗು)

(4) ಸೂರ್ಯನು ಕಾಣದ ಗಂಗೆ ಕುಂಬಾರನು ಮಾಡಿದ ಮಂಡಕೆ (ತೆಂಗು)

(5) ಭೀಮ ನಿಂತಿದ್ದಾನೆ ಅರ್ಜುನ ಮಲಗಿದ್ದಾನೆ (ಕಂಬ–ತೊಲೆ)

(6) ಬಾವಿಲಿ ನೀರು। ನೀರಲಿ ಬೇರು। ಬೇರಿಗೆ ಬೆಂಕಿ (ದೀಪ)

ಈ ಒಗಟುಗಳು ಕನ್ನಡ ನಾಡಿನ ಸುಂದರ ನೆಲೆಯಾದ ಕರಾವಳಿ ಪ್ರದೇಶದ ಜನಗಳ ಸುಂದರವಾದ ಅಭಿವ್ಯಕ್ತಿ ವಿಧಾನವನ್ನು ಸಮರ್ಥವಾಗಿ ಮನವರಿಕೆ ಮಾಡಿ ಕೊಡುತ್ತವೆ. ತಮ್ಮ ವಿಸ್ತಾರವೂ, ಔಚಿತ್ಯಪೂರ್ಣವೂ ಆದ ಪ್ರಸ್ತಾವನೆಯಲ್ಲಿ ಶ್ರೀಮತಿ ಶಾಂತಿ ಅವರು ಇದನ್ನೆಲ್ಲ ವಿವರವಾಗಿ ಚರ್ಚಿಸಿದ್ದಾರೆ. ಇಷ್ಟು ಅಚ್ಚುಕಟ್ಟಾಗಿ ಈ ಸಂಕಲನವನ್ನು ಸಂಪಾದಿಸಿರುವ ಈ ಲೇಖಕಿ ಅಭಿನಂದನಾರ್ಹ ರಾಗಿದ್ದಾರೆ.

ಇಜಿಯಣ್ಣನ ಹಾಡು (ಸಂ: ಬಸವರಾಜ ಮಲಶೆಟ್ಟಿ)

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಮಲಪನಗುಡಿಯ ಕಟುಗರ ಎಲ್ಲಮ್ಮನಿಂದ ಸಂಗ್ರಹಿಸಲಾಗಿರುವ 'ಇಜಿಯಣ್ಣನ ಹಾಡು' ಈ ವರ್ಷ ಪ್ರಕಟ ವಾಗಿರುವ ಜಾನಪದ ಕೃತಿಗಳಲ್ಲಿ ಒಂದು ಗಮನಾರ್ಹವಾದ ಖಂಡಕಾವ್ಯವಾಗಿದೆ. ಮಲ್ಲಾಣಿಯೆಂಬ ಸೂಳೆಯ ಮೋಹದಲ್ಲಿ ಬಂಧಿತನಾದ ಕಥಾನಾಯಕ ಇಜಿಯಣ್ಣ ಕೊನೆಯಲ್ಲಿ ಕಿಚ್ಚಿಗೆ ಬೀಳಬೇಕಾದ ಸಂದರ್ಭದಲ್ಲಿ–ತನ್ನೊಡನೆ ಮಲ್ಲಾಣಿಯು ಬರಲೊಪ್ಪದೆ ಆತನ ಧರ್ಮಪತ್ನಿಯಾದ ರುಕ್ಮಿಣಿಯು ಸಹಗಮನಕ್ಕೆ ಮುಂದಾಗುವ ಪ್ರಧಾನವಾದ ಕತೆಯು ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಕಾಣಿಸಿಕೊಂಡಿದೆ. "ಪುರುಷನೊಬ್ಬ ತನ್ನ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಕಿಚ್ಚಿಗೆ ಬಿದ್ದು ಆತ್ಮಬಲಿ ಯನ್ನೀಯುವುದು ಅಪರೂಪದ ಅಂಶವಾಗಿದೆ. ಅವನೊಂದಿಗೆ ಅವನ ಪ್ರೀತಿಯ ಹೆಣ್ಣು–ಮಡದಿ, ಸೂಳೆ ಬಲಿಯಾಗಬೇಕಾದುದು ಅಂದಿನ ಒಪ್ಪಿತ ಕ್ರಮವೆಂದು ಕಾಣುತ್ತದೆ" ಎಂದು ಸಂಪಾದಕರು ವಿಶ್ಲೇಷಿಸಿದ್ದಾರೆ. ರುಕ್ಮಿಣಿಯು ಸಹಗಮನಕ್ಕೆ ಮುನ್ನ ಆಕೆಯ ತವರಿನವರು "ನನ್ಮಗಳ ಉಂಡಾಡು ನನ್ನ ಮನಿಯಾಗ" ಎಂದು ಕೇಳಿಕೊಂಡರೂ ಕೂಡ ಆಕೆ ಅದಕ್ಕೆ ಸಮ್ಮತಿಸದೆ "ಉಂಡೀನಿ ಊಟಗಳ, ಕಂಡೀನಿ ಮೈಬಣ್ಣ। ನನ್ನ ಗಂಡನ ಮುಂದ ಕೊಂಡಕ್ಕ ಹ್ವಾದರ। ಚಂದಿರನ ಪದವಿ ಬರುವು ದಯ್ಯ" ಎಂಬ ಗಟ್ಟಿಯಾದ ನಿರ್ಧಾರವನ್ನು ಕೈಗೊಳ್ಳುವುದನ್ನು ಗಮನಿಸಿದಾಗ ಆ ಕಾಲದಲ್ಲಿ ಸಹಗಮನಕ್ಕೆ ಅನೇಕ ಹೆಣ್ಣುಗಳು, ತಾವೇ ಮುಂದಾಗಿ ಹೋಗುವ ಮನಃಸ್ಥಿತಿಯಲ್ಲಿರುವಂತೆ ಸಮಾಜವು ತನ್ನ ನಂಬಿಕೆಗಳ ಮೂಲಕ ಸಿದ್ಧಗೊಳಿಸಿರುತ್ತಿದ್ದ ಚಿತ್ರವನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯದ ಒಂದು

ಉತ್ತಮ ಕೃತಿಯಾಗಿ 'ಇಜಿಯಣ್ಣನ ಹಾಡು' ಈ ಕಾರಣಗಳಿಗಾಗಿ ಆಸಕ್ತರ ಕುತೂಹಲವನ್ನು ಕೆರಳಿಸಿದೆ.

ಹೆಂಗಸರ ಗೀತೆಗಳು (ಸಂ: ಎಲ್. ಆರ್. ಹೆಗಡೆ)

ಉತ್ತರ ಕನ್ನಡ ಜಿಲ್ಲೆಯ ಅನೇಕ ಕೆಳಜಾತಿಗಳು ಮತ್ತು ದಲಿತ ವರ್ಗದಲ್ಲಿ ಬಳಕೆಯಲ್ಲಿರುವ ಜನಪದ ಸಾಹಿತ್ಯವನ್ನು ಹಲವಾರು ವರ್ಷಗಳಿಂದಲೂ ಬೆಳಕಿಗೆ ತಂದಿರುವ ಸ್ತುತ್ಯರ್ಹವಾದ ಕಾರ್ಯದಲ್ಲಿ ನಿರಂತರವಾಗಿ ಪಾಲ್ಗೊಂಡಿರುವ ಎಲ್. ಆರ್. ಹೆಗಡೆಯವರು—ಇದೀಗ ಅದೇ ಜಿಲ್ಲೆಯ ಹವ್ಯಕ ಜನಸಮೂಹದ ಮಹಿಳೆಯರಲ್ಲಿರುವ ಜನಪದ ಹಾಡುಗಳನ್ನು ಆ ಸುತ್ತಮುತ್ತಲಿನ ಅನೇಕಾನೇಕ ಹಳ್ಳಿಗಳಲ್ಲಿ ಸಂಗ್ರಹಿಸಿ 'ಹೆಂಗಸರ ಗೀತೆಗಳು' ಕೃತಿಯಲ್ಲಿ ಅಳವಡಿಸಿದ್ದಾರೆ. ಮದುವೆಗೆ ಸಂಬಂಧಿಸಿದ ವಿವಿಧ ಘಟ್ಟಗಳಲ್ಲಿ ಹಾಡಲಾಗುವ ಗೀತೆಗಳು ತಮ್ಮ ಹಲವಾರು ಹಬ್ಬ ಹರಿದಿನಗಳಲ್ಲಿ ಹಾಡಲಾಗುವ ಹಾಡುಗಳು ಮತ್ತು ವಿವಿಧ ಕಥಾ ಗೀತೆಗಳು—ಹವ್ಯಕ ಸಮಾಜದ ಮಹಿಳೆಯರ ಜೀವನ ಚಿತ್ರವನ್ನು, ನಂಬಿಕೆಗಳನ್ನು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಈ ಗೀತೆಗಳ ಅಧ್ಯಯನಕ್ಕೆ ಬೇಕಾಗುವ ಪೂರಕ ಸಾಮಗ್ರಿಯನ್ನು ಹೆಗಡೆಯವರು ಈ ಸಂಕಲನದಲ್ಲಿ ನೀಡಿದ್ದಾರೆ. "ಉತ್ತರ ಕನ್ನಡದ ರಮಣಿಯರೆಂಬ ನುಡಿಕೋಗಿಲೆಗಳ ಇಂಪಿನ ಗಾನದ ಸೊಬಗು ಮತ್ತು ಸೊಗಸುಗಳು ಇಲ್ಲಿ ವ್ಯಕ್ತವಾಗುತ್ತವೆ. ಧಾಟಿಗಳ ವೈವಿಧ್ಯಮಯ ಗೀತೆಗಳ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಹಾಡು ಮತ್ತು ಶೇಡಿ (ರಂಗವಲ್ಲಿ) ಇವುಗಳನ್ನು ತಮ್ಮ ಜೀವನದಲ್ಲಿ ಮುಖ್ಯವಾಗಿ ಅಳವಡಿಸಿದ ಈ ಹೆಂಗಳೆಯರ ಉತ್ಸಾಹ, ಶ್ರದ್ಧೆ, ಭಕ್ತಿ ಚೆನ್ನಾಗಿ ಬಿಂಬಿತವಾಗಿದೆ" ಎಂದು ವಿವರಿಸುತ್ತಾ ಸಂಪಾದಕರು ಈ ಬಗೆಯ ಉತ್ಸಾಹವನ್ನು ತಾಳಿರುವುದು ಸೂಕ್ತವಾಗಿದೆ.

ಜನಪದ ಜೀವನ ತರಂಗಗಳು (ಸಂ: ಎಂ. ಎನ್. ವಾಲಿ)

ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಹಲವಾರು ತ್ರಿಪದಿಗಳನ್ನು ಕಲೆಹಾಕಿರುವ ವಾಲಿಯವರು ಹಿರಿಯರಾದ ಸಿಂಪಿಲಿಂಗಣ್ಣನವರ ಸಲಹೆಯ ಮೇರೆಗೆ ಅಲ್ಲಿನ 400 ತ್ರಿಪದಿಗಳನ್ನು ಮಾತ್ರ ಆಯ್ಕೆಮಾಡಿ 'ಜನಪದ ಜೀವನ ತರಂಗಗಳು' ಸಂಕಲನವನ್ನು ಹೊರ ತಂದಿದ್ದಾರೆ. ಈ ಗೀತೆಗಳನ್ನು ದೇವತಾಸ್ಮರಣೆ, ತವರು, ಎತ್ತು–ಹೊಲ, ಚೆಲುವು, ಗಣತನ, ಶುಭಶೋಭನ, ಸಂವಾದ, ಅನುಭವ, ಹಾಸ–ಪರಿಹಾಸ, ಪೌರಾಣಿಕ—ಐತಿಹಾಸಿಕ ಮುಂತಾದ ವಿಭಾಗಗಳಲ್ಲಿ ಅಳವಡಿಸಿದ್ದಾರೆ. ಆ ಪ್ರದೇಶದ ಅನೇಕ ಪದಗಳು ಅರ್ಥವಾಗಲು ಅನುಕೂಲವಾಗುವಂತೆ ಅರ್ಥಕೋಶವನ್ನು ನೀಡಿದ್ದಾರೆ. ಈಗಾಗಲೇ ಈ ಜಿಲ್ಲೆಗಳಲ್ಲಿ ಸಂಗ್ರಹಿಸಲಾಗಿರುವ ಪ್ರಸಿದ್ಧ ಜನಪದ ಗೀತೆಗಳ ಸಂಕಲಗಳಲ್ಲಿ ಕಂಡುಬರುವ

ಕೆಲವು ತ್ರಿಪದಿಗಳು ಮತ್ತು ಅವುಗಳ ಹತ್ತಿರದ ಪಾಠಾಂತರಗಳು–ಇಲ್ಲಿನ ಅನೇಕ ಗೀತೆಗಳನ್ನು ಓದುವಾಗ ಕಾಣಿಸಿಕೊಂಡರೂ ಕೂಡ ಸಾಕಷ್ಟು ಶ್ರಮವಹಿಸಿ ಈ ಕೃತಿಯನ್ನು ಸಂಪಾದಕರು ಹೊರತಂದಿದ್ದಾರೆ. ಈ ಬಗೆಯ ಇನ್ನಷ್ಟು ಹೊಸ ಸಂಕಲನಗಳು ಕೂಡ ಆ ಭಾಗದಲ್ಲಿ ಹೊರಬರಬೇಕಾಗಿದೆ.

ರಿವಾಯತ ಪದಗಳು (ಸಂ : ತೇಜಸ್ವಿ ಕಟ್ಟೀಮನಿ)

ಉತ್ತರ ಕರ್ನಾಟಕದ ಜನಪದ ಗೀತೆಗಳಲ್ಲಿ ಗಮನಾರ್ಹ ಭಾಗವೇ ಆಗಿರುವ ರಿವಾಯತಪದಗಳನ್ನು ಮೊಹರಂ ಹಾಗು ಇತರ ಹಬ್ಬಗಳ ಸಂದರ್ಭದಲ್ಲಿ(ಮುಸ್ಲಿಮರ ಉರುಸು, ಹಿಂದೂಗಳ ದೀಪಾವಳಿ ಇತ್ಯಾದಿ) ಹಿಂದೂಗಳು ಮತ್ತು ಮುಸ್ಲಿಮರು ಸೇರಿ ಅನ್ಯೋನ್ಯವಾಗಿ ಹಾಡುವುದನ್ನು ಕಾಣಬಹುದು. ತೇಜಸ್ವಿ ಕಟ್ಟೀಮನಿಯವರು ಈ ಬಗೆಯ ಹಾಡುಗಳನ್ನು ಆಯ್ಕೆಮಾಡಿ 'ರಿವಾಯತ ಹಾಡುಗಳು' ಸಂಕಲನದ ಮೂಲಕ ಹೊರತಂದಿದ್ದಾರೆ. ಈ ಗೀತೆಗಳಲ್ಲಿ ಕಥನ, ನೀತಿ, ಪ್ರೇಮ, ಉರುಸು ಐತಿಹಾಸಿಕ-ಮುಂತಾದ ವಿಭಾಗಗಳಿಗೆ ಸೇರುವ ಪದಗಳನ್ನು ವಿಂಗಡಿಸಿದ್ದಾರೆ. ಇವುಗಳು ಹಳ್ಳಿಯ ಬದುಕಿನಲ್ಲಿ ಹೇಗೆ ಹಾಸುಹೊಕ್ಕಾಗಿ ಕಾಣಸಿಗುತ್ತವೆಂಬುದನ್ನು ಸಂಪಾದಕರು ಚರ್ಚಿಸಿದ್ದಾರೆ. ಈ ಧಾಟಿಯಲ್ಲಿಯೇ ಕಂಡುಬರುವ ಪದಗಳಲ್ಲಿ "ಇಂಗ್ರೇಜಿ ಜನರು ಕೂಡ್ಯಾರೊ", "ಸ್ವರಾಜ್ಯ ಚಳುವಳಿ ಎಬ್ಬಿಸ್ಯಾರೊ", "ಗಾಂಧಿ ಮಾರಾಯ"–ಮುಂತಾದ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಉತ್ತಮ ಹಾಡುಗಳು ಮತ್ತು "ಕಡ್ಲಿಮಟ್ಟಿ ಸ್ಟೇಷನ್ ಕಥಿ" ಇಂತಹ ಹೃದಯ ವಿದ್ರಾವಕ ಗೀತೆಗಳು ಕೂಡ ಇಲ್ಲಿ ಸೇರಿರುವುದನ್ನು ಕಾಣಬಹುದಾಗಿದೆ. ಹಿಂದೂ–ಮುಸ್ಲಿಂ ಬಾಂಧವರ ಸಾಂಸ್ಕೃತಿಕ ಸಂಬಂಧಗಳನ್ನು ಕುರಿತಾದ ಜಾತ್ಯತೀತ ನೀತಿಯ ಈ ಬಗೆಯ ಸಾಹಿತ್ಯವನ್ನು ಇನ್ನಷ್ಟು ಹೊರತರುವುದು ನಿಜಕ್ಕೂ ಅತ್ಯವಶ್ಯವಾದ ಕಾರ್ಯವಾಗಿದೆ.

ಏನಾರ ತಿಳಕೊಳ್ಳಲಿ (ಸಂ: ಮಲ್ಲಿಕಾರ್ಜುನ ಲಠ್ಠೆ, ಶಿವರಾಜ ದೇವಪ್ಪ)

ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕು ಕೋನಾಪುರ ಗ್ರಾಮದ ರಾಮಪ್ಪ ಯಾದವ ಎಂಬ ಅನುಭಾವ ಪಂಥದ ಜನಪದ ಕವಿಯ 94 ಹಾಡುಗಳನ್ನು 'ಏನಾರ ತಿಳಕೊಳ್ಳಲಿ' ಸಂಕಲನದಲ್ಲಿ ಕಲೆ ಹಾಕಲಾಗಿದೆ. ರಾಮಪುರದ ಬುಕ್ಕ, ಪಿಸೂಲಿಯ ಕರಿಬಸವ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ, ಸಾವಳಗಿ ಮಹಮ್ಮದ, ರಾಯಕೋಡಿ ಭೀಮಣ್ಣ–ಮುಂತಾದ ಅನುಭಾವಿಗಳ ತತ್ವದ ಪದದ ಜಾಡಿನಲ್ಲಿ ಸಾಗಿರುವ ರಾಮಪ್ಪ–

ಶ್ರೇಷ್ಠ ಕುಲದವನಲ್ಲ ಶಾಸ್ತ್ರ ಕಲಿತವನಲ್ಲ
ಶಾರದಾಂಬೆಯ ಕರುಣೆ ಕೃಪೆಯೆನಗೆ ಇಲ್ಲ
ಶಾಮಸುಂದರ ನಮ್ಮ ಗೊಲ್ಲಕುಲ ಗೋಪಾಲ
ಗೋತ್ರದೊಳು ಜನಿಸಿದೆನು ಜಗದಾಂಬೆಸುತನೆ

—ಎಂದು ವಿನಯ ಸೌಜನ್ಯಾದಿಗಳನ್ನು ಆರಂಭದಲ್ಲಿ ಮೆರೆದಿದ್ದಾನೆ. "ಕೆಟ್ಟ ಕೆಲಸ ಯಾಕ ಮಾಡಿದಕ್ಕಾ! ಮುಂದೆ ಯಮ ಬಂದು ಕೇಳುತ್ತಾನೆ ಲೆಖ್ಖಾ" ಎಂದು ಹೇಳುತ್ತಾ, ಬದುಕಿನ ಎಲ್ಲ ಘಟ್ಟಗಳಲ್ಲಿ ಅತ್ಯಂತ ನಿಷ್ಕಲ್ಮಶವಾಗಿ ಬದುಕುವುದರಲ್ಲಿಯೇ ಅದರ ಸಾರ್ಥಕ್ಯ ಅಡಗಿದೆ ಎಂಬುದನ್ನು ತನ್ನ ಹಲವಾರು ಗೀತೆಗಳಲ್ಲಿ ಸ್ಪಷ್ಟಪಡಿಸುತ್ತಾನೆ. ಶ್ರೀಸಾಮಾನ್ಯರ ಬದುಕಿನ ಪದರು ಪದರುಗಳನ್ನು ಬಿಚ್ಚಿ ಹಾಡಿದ್ದರಿಂದ ಕವಿಯ ಅನುಭವ ಇಲ್ಲಿ ಲೋಕಾನುಭವಕ್ಕಿಳಿದಿದೆ" ಎಂದು ಸಂಪಾದಕರು ಗುರುತಿಸಿದ್ದಾರೆ. ತತ್ವಪದಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಈ ಸಂಕಲನವು ಒಂದು ಉಪಯುಕ್ತವಾದ ಕೃತಿಯಾಗಿದೆ.

ಹೆಳವರು ಮತ್ತು ಅವರ ಕಾವ್ಯಗಳು (ಸಂ : ಎಚ್. ಎಲ್. ನಾಗೇಗೌಡ)

ಜಾನಪದ ಕ್ಷೇತ್ರದಲ್ಲಿ ಆರಂಭದಿಂದಲೂ ತೀವ್ರಾಸಕ್ತಿಯಿಂದ ಕೆಲಸ ಮಾಡುತ್ತಿರುವ ಎಚ್. ಎಲ್. ನಾಗೇಗೌಡರು ತಮ್ಮ ಒಂದೂವರೆ ದಶಕದಷ್ಟು ದೀರ್ಘ ಕಾಲದ ಶ್ರಮಪೂರ್ಣ ಸಂಗ್ರಹಕಾರ್ಯ ಮತ್ತು ಅಧ್ಯಯನದ ಫಲವಾಗಿ ಹೊರತಂದಿರುವ 'ಹೆಳವರು ಮತ್ತು ಅವರ ಕಾವ್ಯಗಳು' ಕೃತಿಯು ಇತ್ತೀಚಿನ ಪ್ರಮುಖ ಜಾನಪದ ಪ್ರಕಟಣೆಗಳಲ್ಲಿ ಒಂದಾಗಿದೆ. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನಾನಾ ಭಾಗಗಳಲ್ಲಿ ಕಾಣಿಸಿಕೊಳ್ಳುವ ಹೆಳವ ಜನಾಂಗದ ಚರಿತ್ರೆ, ನಂಬಿಕೆ, ಆಚರಣೆ ಮತ್ತು ನಡವಳಿಕೆಗಳ ಬಗೆಗೆ ಯಥೇಚ್ಛ ಮಾಹಿತಿಯ ಜೊತೆಗೆ ಅವರಲ್ಲಿ ಬಳಕೆಯಲ್ಲಿರುವ ಜನಪದ ಕಾವ್ಯಗಳನ್ನು ಕಲೆಹಾಕಿ ಈ ಗ್ರಂಥದಲ್ಲಿ ಅಳವಡಿಸಲಾಗಿದೆ. ಹೊಗಳುವ ಹಾಡುಗಳ ಕರ್ತೃಗಳಾದ ಈ ಹೆಳವರು ಶಿಷ್ಟಸಾಹಿತ್ಯದಲ್ಲಿ ಕಾಣಸಿಗದ ಅನೇಕ ಕುಲ, ಜಾತಿ ಮತ್ತು ಮನೆತನಗಳ ಚರಿತ್ರೆ, ಐತಿಹ್ಯ ಹಾಗೂ ಜನಪದ ಪುರಾಣಗಳ ವಿವರಗಳನ್ನು ತಮ್ಮಲ್ಲಿ ಬಚ್ಚಿಟ್ಟುಕೊಂಡಿರುತ್ತಾರೆ. ಜಾತಿಪದ್ಧತಿಯ ಶ್ರೇಣೀಕರಣದಲ್ಲಿ ಕೆಳಜಾತಿಯವರಾಗಿರುವ ಇವರು ಅಸ್ಪೃಶ್ಯರಲ್ಲದಿದ್ದರೂ ಕಾಡುಗೊಲ್ಲರು ಮತ್ತಿತರ ಗಿರಿಜನರಂತೆ ತಮ್ಮದೇ ಪ್ರತ್ಯೇಕ ಹಟ್ಟಿಗಳಲ್ಲಿ ವಾಸಿಸುತ್ತ ಬ್ರಾಹ್ಮಣೇತರ ಮೇಲು ಜಾತಿಗಳವರ ಗೊತ್ತಾದ ಮನೆಗಳಲ್ಲಿ ಗಂಟೆ ಬಾರಿಸುತ್ತ ಹಾಡುತ್ತಿರುತ್ತಾರೆ. ನಾಗೇಗೌಡರು ಸರಿಯಾಗಿಯೇ ಗುರುತಿಸಿರುವಂತೆ "ಶಿಷ್ಟ ಇತಿಹಾಸಕಾರರಿಂದ ನಿರ್ಲಕ್ಷಿಸಲ್ಪಟ್ಟ ಹಳ್ಳಿಯ ಎಷ್ಟೋ ಧೀಮಂತ ಮನೆತನಗಳ, ಕುಲವಂತರ ಚರಿತ್ರೆ ಹೆಳವರ ಬಾಯಲ್ಲಿ ಅವರ ಕಡತಗಳಲ್ಲಿ ಗಂಟೆಗಳ ಮೇಲೆ ಜೀವಂತವಾಗಿ ಉಳಿದಿವೆ. ಈ ದೃಷ್ಟಿಯಿಂದಲೂ ಹೆಳವರು ಹೇಳುವ ವಂಶಾವಳಿ ಚರಿತ್ರೆಗಳು ಗಮನಾರ್ಹವಾದವುಗಳು."

ಹೆಳವರಲ್ಲಿ ದೊರೆಯುವ ಜನಪದ ಸಾಹಿತ್ಯವನ್ನು ಕಲೆಹಾಕುವ ಮುನ್ನ, ಈ ಕೃತಿಯಲ್ಲಿ ಸಂಪಾದಕರು ಆಸ್ಥೆವಹಿಸಿ ಆ ಜನಾಂಗದ ಬಗೆಗೆ ನಾನಾ ರೂಪಗಳ

ಮೂಲಕ ಜನಬಳಕೆಯಲ್ಲಿ, ಶಾಸನಗಳಲ್ಲಿ ಹಾಗೂ ಚೂರುಪಾರು ಚಾರಿತ್ರಿಕ ಸಂಗತಿಗಳಲ್ಲಿ ಕಾಣಿಸಿಕೊಳ್ಳುವ ಸಮಗ್ರ ವಿವರಗಳನ್ನು ಕಲೆಹಾಕಿ ಈ ಬಗ್ಗೆ ಆಳವಾದ ಅಧ್ಯಯನ ನಡೆಸುವವರಿಗೆ ಉಪಯುಕ್ತವಾದ ವೇದಿಕೆಯನ್ನು ಸಿದ್ಧಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ಬೇಸಾಯ ಮತ್ತು ಪಶುಪಾಲನೆಯಲ್ಲಿ ತಮ್ಮನ್ನು ಪ್ರಧಾನವಾಗಿ ತೊಡಗಿಸಿಕೊಂಡಿರುವ ಕರ್ನಾಟಕದ ಗೊಲ್ಲ, ಕುರುಬ, ಕುಂಚಿಟಿಗ, ಬೇಡ, ಒಕ್ಕಲಿಗ, ಸೋಣಬ ಮುಂತಾದ ಜಾತಿಗಳು ರೂಪುಗೊಂಡ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲುವ ಕೆಲವು ಅಗತ್ಯ ಮಾಹಿತಿಗಳು ಸಹ ಇಲ್ಲಿ ದೊರೆಯುತ್ತವೆ. "ನೆನೆಯಬಾರದೋನು ಮತ್ತು ಹೆಳವ' ಎಂಬ ಹಲವಾರು ಪಾಠಾಂತರಗಳುಳ್ಳ ಜನಪದ ಕತೆಯು ಪುರಾತನ ಜಾತಿ ಸಂಘರ್ಷದ ಪ್ರಮುಖ ಘಟ್ಟವೊಂದನ್ನು ಸ್ಪಷ್ಟವಾಗಿ ಸೂಚಿಸುವ ದಾಖಲೆಯಾಗಿದ್ದು–ಜಡಗೊಂಡ ಜಾತಿಗಳ ಇಕ್ಕಟ್ಟಿನ ನಡುವೆ ಸಹಜವಾಗಿ ಅರಳಬೇಕಾದ ಸ್ನೇಹ, ಪ್ರೇಮ ಬಾಂಧವ್ಯಗಳು ಸಹ ಪೂರ್ವನಿಶ್ಚಿತತೆಯ ಬಂಡೆ ಯಡಿಯಲ್ಲಿ ಉಸಿರಾಡಲು ಸಾಧ್ಯವಾಗದೆ ಹೇಗೆ ನರಳುತ್ತವೆಂಬುದನ್ನು ಗುರುತಿಸ ಬಹುದಾಗಿದೆ.

ಮೈಸೂರು, ಮಂಡ್ಯ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳ ಆಯ್ದ ನೆಲೆಗಳಿಂದ ಸಂಗ್ರಹಿಸಿರುವ ಹೆಳವರ ಹಾಡುಗಳು ಸುಮಾರು ಎರಡುನೂರು ಪುಟಗಳಷ್ಟು ದೊಡ್ಡಪ್ರಮಾಣದಲ್ಲಿ ಇಲ್ಲಿ ಕಾಣಿಸಿಕೊಂಡಿವೆ. 'ಹೆರಗನಹಳ್ಳಿ ಲಕ್ಕಮ್ಮ', 'ಭೈರವ', 'ಚಾಮುಂಡಿ' ಮತ್ತು 'ಯಮುನಾಳು ದೇವಮ್ಮ' ಮುಂತಾದ ಹಾಡುಗಬ್ಬಗಳು ಹೆಳವರ ಜನಪದ ಸಾಹಿತ್ಯದಲ್ಲಿನ ವೈಶಿಷ್ಟ್ಯಗಳನ್ನು ಪರಿಚಯಿಸುತ್ತವೆ. ಇತರ ವೃತ್ತಿಗಾಯಕ ಗುಂಪುಗಳಲ್ಲಿ ಕೂಡ ದೊರೆಯುವ 'ಕರಿಬಂಟ' ಮತ್ತು 'ಮಾಗಡಿ ಕೆಂಪೇಗೌಡ' ಕಥನ ಕವನಗಳು ಗಮನಾರ್ಹವಾದ ಪಾಠಾಂತರಗಳಾಗಿವೆ.

ಭೂಮಿ ಹುಣ್ಣಿಮೆ (ಲೇ : ಶ್ರೀಕಂಠ ಕೂಡಿಗೆ)

ತರುಣ ಲೇಖಕರಾದ ಶ್ರೀಕಂಠ ಕೂಡಿಗೆ ತಮ್ಮ ಆಸಕ್ತಿಯ ವಿಷಯವಾದ ಜಾನಪದವನ್ನು ಕುರಿತು ಆಗಾಗ ಬರೆದ ಹದಿಮೂರು ಲೇಖನಗಳನ್ನು 'ಭೂಮಿ ಹುಣ್ಣಿಮೆ' ಸಂಕಲನದಲ್ಲಿ ಅಳವಡಿಸಿದ್ದಾರೆ. ಮಲೆನಾಡಿನ ಜಾನಪದ ವೈವಿಧ್ಯ ವನ್ನು ಅರಿತುಕೊಳ್ಳುವ ದಿಕ್ಕಿನಲ್ಲಿ ಹೆಚ್ಚು ಸಹಾಯಕವಾಗಿ ನಿಲ್ಲುವ ಇಲ್ಲಿನ ಎಲ್ಲ ಲೇಖನಗಳಲ್ಲೂ ಪರಿಪೂರ್ಣತೆಯನ್ನು ಕಾಣುವ ಸಡಗರವನ್ನು ಸ್ವಯಂ ಲೇಖಕರೇ ತೋರದಿರುವ ಆರೋಗ್ಯಕಾರಿಯಾದ ಲಕ್ಷಣವು ಇಲ್ಲಿ ಕಂಡುಬರುತ್ತದೆ. ತಮ್ಮ ಲೇಖನ-ವ್ಯವಸಾಯದ ಆರಂಭದ ದಿನಗಳಲ್ಲಿನ ಕೆಲವು ಬರಹಗಳು "ಪರಿಚಯಾತ್ಮಕ ಪರಿಧಿಯಲ್ಲಿ ನಿಲ್ಲುವ ಸಾಧ್ಯತೆ ಇದೆ. ಹಾಗಿದ್ದೂ ಬೇರೆ ಬೇರೆ ಪ್ರದೇಶದ

ಜನಪದ ಜೀವನ ಮತ್ತು ಸಂಸ್ಕೃತಿಯ ಅಭ್ಯಾಸಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುವಷ್ಟು ಮಟ್ಟಿಗಾದರೂ ಅವುಗಳ ಸಾರ್ಥಕತೆ ಇದೆಯೆಂಬುದು ನನ್ನ ಭಾವನೆ" ಎಂದು ಕೂಡಿಗೆಯವರು ಮುನ್ನುಡಿಯಲ್ಲಿ ವಿವರಿಸಿದ್ದಾರೆ.

ಪ್ರತಿವರ್ಷ ದೀಪಾವಳಿಗೆ ಮೊದಲು ಬರುವ ಹುಣ್ಣಿಮೆಯ ದಿನದಂದು ಮಲೆನಾಡಿನ ರೈತ ಬಾಂಧವರು ಫಲಸಮೃದ್ಧಿಯ ಸಂಕೇತವಾಗಿ ಅಪ್ಪಟ ಹಾಲು ಬೆಳ್ದಿಂಗಳಿನಲ್ಲಿ ಆಚರಿಸುವ ವಿಶಿಷ್ಟವಾದ ಹಬ್ಬದ ವಿಧಿವಿಧಾನಗಳನ್ನು ಈ ಲೇಖಕರು ತಮ್ಮ 'ಭೂಮಿ ಹುಣ್ಣಿಮೆ' ಬರಹದಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. 'ಹಳ್ಳಿಗರ ಲೆಕ್ಕಾಚಾರ' ವನ್ನು ಕುರಿತ ಇಲ್ಲಿನ ಮತ್ತೊಂದು ಲೇಖನವು ಅತ್ಯಂತ ಕುತೂಹಲಕಾರಿಯಾಗಿದ್ದು ಜನಪದ ವಾತಾವರಣದಲ್ಲಿ ವ್ಯಾಪಿಸಿರುವ ಅಪರೂಪದ ಜಾಣ್ಮೆಯ ಬಗೆಗಳನ್ನು ಚಿತ್ರಿಸುತ್ತದೆ. ಮುಯ್ಯ್, ಕೆರಕ, ಕುರುತಾಪಣೆ, ಹುಲುಸು, ಹರ್ಸೇವು–ಮುಂತಾದ ಪದಗಳು ಮಲೆನಾಡಿನ ಜನತೆಯ ಬದುಕಿನಲ್ಲಿ ಉಪಯೋಗಿಸಲ್ಪಡುವ ಬಗೆ ಮತ್ತು ಆ ಸಂದರ್ಭಗಳಲ್ಲಿನ ಹಿನ್ನೆಲೆಯನ್ನು ಕೂಡಿಗೆಯವರು ಕಲೆಹಾಕಿದ್ದಾರೆ.

'ಲಾವಣಿಗಳು ಮತ್ತು ಸಾಹಿತ್ಯಕ ಕಥನ ಕವನಗಳು', 'ದೇಸೀ ಪರಂಪರೆ ಮತ್ತು ಜನಪದ ಸಾಹಿತ್ಯ', 'ಅಂಟಿಗೆ-ಪಂಟಿಗೆ' ಹಾಗೂ 'ಜನಪದ ಶಿಶುಪ್ರಾಸಗಳು' - ಈ ಕೃತಿಯಲ್ಲಿನ ಉತ್ತಮ ಲೇಖನಗಳಾಗಿವೆ. ಈತನಕ ಚರ್ಚೆಗೆ ಒಳಪಟ್ಟಿರುವ ಅನೇಕ ಸಂಗತಿಗಳ ಬೆಳಕಿನಲ್ಲಿ ಕೂಡಿಗೆಯವರು ಈ ಬರಹಗಳನ್ನು ಸಿದ್ಧಪಡಿಸಿದ್ದಾರೆ. ಹೀಗೆ ಸಿದ್ಧಪಡಿಸುವಾಗ ತಮಗೆ ದೊರೆತಿರುವ ಹೊಸ ಸಾಮಗ್ರಿಯೊಡನೆ ಅಧ್ಯಯನದ ಹಾದಿಯಲ್ಲಿ ಇನ್ನಷ್ಟು ಮುನ್ನಡೆಯುವ ಹಂಬಲ, ಆಶಯಗಳನ್ನು ಉದ್ದಕ್ಕೂ ಪ್ರಕಟಿಸಿದ್ದಾರೆ.

ಜನಪದ ಸಾಹಿತ್ಯ ಸಂವಾದ (ಲೇ : ಡಿ. ಲಿಂಗಯ್ಯ)

ಡಿ. ಲಿಂಗಯ್ಯನವರ 'ಜನಪದ ಸಾಹಿತ್ಯ ಸಂವಾದ' ಕೃತಿಯು ಎಂಟು ಲೇಖನಗಳನ್ನು ಒಳಗೊಂಡಿದೆ. ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯದ ಬಗ್ಗೆ ವಿಪುಲ ಮಾಹಿತಿಯನ್ನು ಹೊಂದಿರುವ ಲಿಂಗಯ್ಯನವರು ಸಾಹಿತ್ಯದ ಕೆಲವು ವಿಶಿಷ್ಟ ಮುಖಗಳನ್ನು ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಆರಂಭದ ಎರಡು ಲೇಖನಗಳು ಮಹಿಳೆ ಮತ್ತು ಮಕ್ಕಳ ಬಗೆಗೆ ಜನಪದ ವಾತಾವರಣವು ಹೊಂದಿರುವ ಭಾವನೆ ಮತ್ತು ನಂಬಿಕೆಗಳನ್ನು ವಿವರಿಸುತ್ತವೆ. ಅನಕ್ಷರಸ್ಥ ಜನವರ್ಗಗಳ ನಡುವಣ ನಾನಾ ಬಗೆಯ ಸೃಜನಶೀಲ ಗುಣವು ತನ್ನ ಇಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಕೂಡ ಹಲವು ಹತ್ತು ಬಗೆಗಳಲ್ಲಿ ಚಿಗುರೊಡೆದು ನಿಲ್ಲುವ ಅಕ್ಷಯ ಶಕ್ತಿಯನ್ನು ಹೊಂದಿರುವ ರೀತಿಯನ್ನು ಈ ಮೇಲಿನ ಬರಹಗಳು ಅಚ್ಚುಕಟ್ಟಾಗಿ

ಚಿತ್ರಿಸುತ್ತವೆ. 'ಸನ್ನೆ ಪದಗಳಲ್ಲಿ ಹಾಸ್ಯ' ಲೇಖನವು ಹಳ್ಳಿಗಳಲ್ಲಿ ನೆಲೆಗೊಂಡಿರುವ ಸೂಕ್ಷ್ಮ ವಿಡಂಬನೆಯನ್ನು ಪರಿಚಯಿಸುತ್ತದೆ. 'ಮಾಸ್ತಿ ಪೂಜೆ' ಮತ್ತು 'ಹಳ್ಳಿಯ ಹಬ್ಬಗಳು' ಬರಹಗಳಲ್ಲಿ ಆಯಾಯ ವಸ್ತುವಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನಕ್ಕೆ ಪೂರಕವಾಗಬಲ್ಲ ವೈವಿಧ್ಯಮಯವಾದ ಸಾಮಗ್ರಿಯು ದೊರೆಯುತ್ತದೆ.

ಸಂಕೀರ್ಣ

ಜಿ. ಎಸ್. ಶಿವರುದ್ರಪ್ಪ

ಈ ವರ್ಷದ ಸಂಕೀರ್ಣ ವಿಭಾಗಕ್ಕೆ ಬಂದಿರುವ ಪುಸ್ತಕಗಳು, ಸಂಖ್ಯೆಯಲ್ಲಿ ಹೆಚ್ಚಿಲ್ಲವಾದರೂ, ವೈವಿಧ್ಯತೆಯ ದೃಷ್ಟಿಯಿಂದ ಗಮನಾರ್ಹವಾಗಿವೆ ಎನ್ನಬಹುದು. ಸಿದ್ಧಲಿಂಗಯ್ಯನವರ 'ಅವತಾರಗಳು', ಶ್ರೀನಿವಾಸ ಹಾವನೂರರ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ ಹಸಿಗತೆ ಕಂಪ್ಯೂಟರ್ ಇತ್ಯಾದಿ' ಎಂಬ ಕೃತಿ, ವಿ. ವಿ ಪೂಜಾರರ 'ಪವಾಡ ಕಥೆಗಳು ಮತ್ತು ಇತರ ಲೇಖನಗಳು', 'ನಾಟ್ಯಶಾಸ್ತ್ರವನ್ನು ಕುರಿತ ಶ್ರೀರಂಗರ ಎರಡು ವ್ಯಾಖ್ಯಾನಗಳು'—ಇಂಥ ಕೆಲವನ್ನು ಇಲ್ಲಿ ಹೆಸರಿಸ ಬಹುದು.

'ಸ' ಕಾರದಿಂದ ಶುರುವಾಗುವ ಶೀರ್ಷಿಕೆಯುಳ್ಳ ಹಾ. ಮಾ. ನಾಯಕರ ಬಹುಸಂಖ್ಯೆಯ ಪುಸ್ತಕಗಳಲ್ಲಿ 'ಸಮೂಹ' ಎನ್ನುವ ಕೃತಿಯೂ ಒಂದು. ಇದು ಅವರ ಅಂಕಣ ಲೇಖನಗಳ ಒಂದು ಸಂಗ್ರಹ. 288 ಪುಟಗಳ ಈ 'ಸಮೂಹ'ದಲ್ಲಿ ಅವರು 1979ನೆ ಜನವರಿಯಿಂದ ಅದೇ ವರ್ಷದ ಡಿಸೆಂಬರ್ ವರೆಗೆ ವಾರಕ್ಕೆ ಒಂದರಂತೆ ಪ್ರಜಾವಾಣಿ ಪತ್ರಿಕೆಗೆ ಬರೆದ ಐವತ್ತೆರಡು ಅಂಕಣ ಲೇಖನಗಳಿವೆ. ಈಗಾಗಲೇ ಹಿಂದಿನ 'ಸಾಹಿತ್ಯ ವಾರ್ಷಿಕ'ಗಳಲ್ಲಿ ನಾಯಕರ ಇನ್ನೆಷ್ಟೋ ಅಂಕಣ ಲೇಖನ ಸಂಗ್ರಹ ಗಳನ್ನು ಕುರಿತು ನಾವು ಈಗಾಗಲೇ ಹೇಳಿರುವ ಮಾತುಗಳಿಗಿಂತ ಬೇರೆಯಾದ ಯಾವುದೇ ಮಾತನ್ನು, ಈ ವರ್ಷ ಪ್ರಕಟವಾದ 'ಸಮೂಹ'ವನ್ನು ಕುರಿತು ಹೇಳಬೇಕೆಂದು ಅನ್ನಿಸುತ್ತಿಲ್ಲ. ವ್ಯಕ್ತಿಗಳನ್ನು ಕುರಿತು, ಸಭೆ-ಸಮಾರಂಭಗಳನ್ನು ಕುರಿತು, ಕೃತಿಗಳನ್ನು ಕುರಿತು, ಘಟನೆಗಳನ್ನು ಕುರಿತು, ಹಲವು ಹತ್ತು ಸಮಸ್ಯೆ ಗಳನ್ನು ಕುರಿತು ಹಾ. ಮಾ. ನಾಯಕರ ಅನ್ನಿಸಿಕೆಗಳು, ಆಲೋಚನೆಗಳು, ಪ್ರತಿ ಕ್ರಿಯೆಗಳು ಒಂದು ನಿಶ್ಚಿತವಾದ ಚೌಕಟ್ಟಿನಲ್ಲಿ ರೂಪುಗೊಂಡಿವೆ. ಆಕರ್ಷಕವಾದ ಬರವಣಿಗೆ, ನೆನಪಿನಲ್ಲಿರಿಸಿಕೊಳ್ಳಬಹುದಾದ ದಾಖಲೆಗಳು, ಈ ಕೃತಿಯ ಲಕ್ಷಣ ವಾಗಿವೆ.

ಶಾಂತವೇರಿ ಗೋಪಾಲಗೌಡರು ಸಮಾಜವಾದೀ ಪಕ್ಷದ ಮುಖಂಡರಾಗಿ ಕರ್ನಾಟಕದ ಜನಮನದಲ್ಲಿ ಅಚ್ಚಳಿಯದ ನೆನಪಾಗಿ ಉಳಿದಿದ್ದಾರೆ. ಅವರ ಒಂದು ವರ್ಷದ, ಅಂದರೆ 1960 ನೆ ಇಸವಿಯ ದಿನಚರಿಯನ್ನು ಸಂಪಾದಿಸಿ 'ಗೋಪಾಲ ಗೌಡರ ಡೈರಿ, ಪತ್ರಗಳು ಇತ್ಯಾದಿ' ಎಂಬ ಹೆಸರಿನ, ಒಂದೂನೂರಾ ನಾಲ್ಕು

ಪುಟಗಳ ಪುಸ್ತಕವನ್ನು ಹೆಚ್. ಸಿ. ವಿಷ್ಣುಮೂರ್ತಿಯವರು ಪ್ರಕಟಿಸಿದ್ದಾರೆ. ಮೇಲುನೋಟಕ್ಕೆ ಅಂತಹ ಅತ್ಯಪೂರ್ವವಾದ ಘಟನೆಗಳನ್ನು ಅಥವಾ ಆಲೋಚನೆಗಳನ್ನು ಹಿಡಿದಿರಿಸಿರುವಂತೆ ತೋರದೆ ಹೋದರೂ, ಶ್ರೀ ಗೋಪಾಲಗೌಡರ ಸುತ್ತಾಟಗಳು, ಸಂಘಟನೆಗಳು, ಅವರ ನೂರಾರು ತರಲೆ-ತಾಪತ್ರಯಗಳು, ಜನದ ಬಗ್ಗೆ ಅವರು ಇರಿಸಿಕೊಂಡ ಸಂಪರ್ಕಗಳು, ಅವರ ಮಾನವೀಯತೆ ಇತ್ಯಾದಿಗಳನ್ನು ಕುರಿತ ಎಳೆಗಳು ಈ ಬರೆಹದಲ್ಲಿ ಅಲ್ಲಲ್ಲಿ ಮಿಂಚುತ್ತವೆ. ಇವುಗಳ ನಡುವೆಯೂ ಅವರಿಗಿದ್ದ ಜೀವನ ಪ್ರೀತಿ, ಕಲೆ ಸಾಹಿತ್ಯಗಳನ್ನು ಕುರಿತ ತೀವ್ರವಾದ ಕಳಕಳಿ, ಇತ್ಯಾದಿಗಳ ಒಂದು ಇಣುಕು ನೋಟವೂ ಓದುಗರಿಗೆ ಲಭಿಸುತ್ತದೆ. ಇದು ಅವರ ದಿನಚರಿ ಹಾಗೂ ಪತ್ರಗಳನ್ನು ಕುರಿತ ಮೊದಲ ಸಂಪುಟವೆಂದು ಸಂಪಾದಕರು ಮುನ್ನುಡಿಯಲ್ಲಿ ಸೂಚಿಸಿರುವುದರಿಂದ, ಗೌಡರ ದಿನಚರಿಯ ಇನ್ನಿತರ ಸಂಪುಟಗಳು ಮುಂದೆ ಪ್ರಕಟವಾದಾಗ, ಶ್ರೀ ಗೋಪಾಲಗೌಡರ ಸಮಗ್ರ ವ್ಯಕ್ತಿತ್ವದ ಪರಿಚಯವಾಗಬಹುದು. ಈ ಪ್ರಸ್ತುತ ದಿನಚರಿಯ ಸಂಪುಟದಲ್ಲಿ ಒಂದೆಡೆ, 1960 ರ ಆಗಸ್ಟ್ ಆರನೆ ತಾರೀಖಿನ ದಿನ "ಇಲ್ಲಿ ಎಲ್ಲಾ ಥಂಡಿ-ರಾಜಕೀಯವೂ ಥಂಡಿ. ನಮ್ಮ ಗೆಳೆಯರಂತೂ ಉಸಿರಾಡಲು ಕೂಡಾ ಹಿಂದೆಗೆಯುತ್ತಿದ್ದಾರೆ. ನಿರಾಶೆ, ಅಸಹಾಯಕತೆ, ವಿಮುಖತೆ, ಜಿಗುಪ್ಸೆ ಎಲ್ಲಾ ಸೇರಿ ನಿಶ್ಚೇಷ್ಟಿತರಾಗಿದ್ದಾರೆ. ಜೀವನ ನಡಸುವುದು ತೀರಾ ಕಷ್ಟವಾಗಿದೆ. ಈ ಜನಕ್ಕೆ ಹೋರಾಡಲೂ ಶಕ್ತಿಯಿಲ್ಲ" (ಪು. 59)—ಎಂದು ಗೋಪಾಲಗೌಡರು ಬರೆದಿದ್ದಾರೆ. ಈ ಮಾತನ್ನು ನಮ್ಮ ಇಂದಿನ ಪರಿಸರಕ್ಕೂ ಅನ್ವಯಿಸಬಹುದಲ್ಲವೆ?

ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷವೂ ಕರ್ನಾಟಕದ ಹಲವು ಹತ್ತು ಕಡೆ ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನೂ, ಅದ್ದೂರಿಯಾದ ವಾರ್ಷಿಕ ಮಹಾ ಸಾಹಿತ್ಯ ಸಮ್ಮೇಳನವನ್ನೂ ಏರ್ಪಡಿಸುತ್ತದೆ. ಇದಕ್ಕೆಲ್ಲ ಭಾರೀ ಹಣ ಖರ್ಚಾಗುತ್ತದೆ. ಈ ಬಗೆಯ ಸಮ್ಮೇಳನಗಳಿಂದ ಆಗುವ ಸಾಹಿತ್ಯೇತರ ಪ್ರಯೋಜನಗಳು ಏನೆಂಬುದನ್ನು ವಿವರಿಸಬೇಕಾಗಿಲ್ಲ. ಆದರೆ ಸಾಹಿತ್ಯಕವಾಗಿ ಆಗುವ ಪ್ರಯೋಜನ ಎಷ್ಟು ಕಳಪೆ ಅಥವಾ ವ್ಯರ್ಥವಾಗಿರಬಹುದೆನ್ನುವುದಕ್ಕೆ 1982 ನೆ ಫೆಬ್ರುವರಿ 13, 14, 15 ರಂದು ಸಿಂದಗಿಯಲ್ಲಿ ನಡೆದ ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನದ ನಡವಳಿಕೆಗಳನ್ನು ಹಿಡಿದಿರಿಸಿರುವ 'ವಿಜಯವಾಣಿ' ಎಂಬ ಸುಮಾರು ನೂರು ಪುಟಗಳ ಪುಸ್ತಕವನ್ನು ನೋಡಬೇಕು. ವಿಜಾಪುರ ಜಿಲ್ಲಾ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಈ ಪುಸ್ತಕದಲ್ಲಿ, ಆ ಸಮ್ಮೇಳನದ ಉದ್ಘಾಟನಾ ಭಾಷಣ, ಅಧ್ಯಕ್ಷ ಭಾಷಣ, ಹಾಗೂ ವಿವಿಧ ಗೋಷ್ಠಿಗಳಲ್ಲಿ ಮಂಡಿತವಾದ ಒಂಬತ್ತು ಲೇಖನಗಳು ಸಂಗ್ರಹಿತವಾಗಿವೆ. ಬಿಜಾಪುರ ಜಿಲ್ಲೆಯ ಸಾಹಿತ್ಯ ನಿರ್ಮಿತಿಗಷ್ಟೆ ಸೀಮಿತವಾಗಿರುವ ಇಲ್ಲಿನ ಪ್ರಬಂಧದೊಳಗಣ ಸಮೀಕ್ಷೆಗಳ ಉದ್ದೇಶ ಒಂದರ್ಥದಲ್ಲಿ ಒಳ್ಳೆಯದಾದರೂ, ಕತೆ, ಕಾವ್ಯ, ನಾಟಕ, ಕಾದಂಬರಿ, ಶಿಶುಸಾಹಿತ್ಯ, ಜಾನಪದ, ಇತ್ಯಾದಿಗಳನ್ನು ಕುರಿತ ಸಮೀಕ್ಷೆಗಳು, ಯಾವ ನಿಜವಾದ 'ಅಧ್ಯಯನ'ದ ಅಥವಾ ವಿಮರ್ಶೆಯ

ಪರಿಣಾಮಗಳೂ ಆಗದೆ, ಕೇವಲ ಸಾಮಯಿಕ ಬರೆಹಗಳಾಗಿ, ಹಲವಾರು ಲೇಖಕರ ಹಾಗೂ ಕೃತಿಗಳ ಪಟ್ಟಿಗಳಾಗಿವೆ. ಯಾರ ಹೆಸರನ್ನು ಬಿಟ್ಟರೆ ಯಾರು ಏನೆಂದು ಕೊಂಡಾರೋ ಎಂಬ ದಾಕ್ಷಿಣ್ಯದಿಂದ ಅಥವಾ ಭಯದಿಂದ ಯಾವುದೇ ಮೌಲ್ಯ ಪ್ರಜ್ಞೆಯಿಲ್ಲದೆ ಹೆಸರುಗಳ ಸರಮಾಲೆಯಾಗಿವೆ ಹಲವು ಸಮೀಕ್ಷೆಗಳು. ಈ ಕೃತಿ ಸಮ್ಮೇಳನವನ್ನು ಕುರಿತ ಒಂದು ದಾಖಲೆಯಾದೀತೆ ಹೊರತು, ಸಾಹಿತ್ಯವಾಗಿ ಇದರಿಂದ ಆಗಿರುವ ಪ್ರಯೋಜನ ಅತ್ಯಲ್ಪ ಎಂದು ಹೇಳದೆ ವಿಧಿಯಿಲ್ಲ.

'ಬೇಂದ್ರೆ ಸ್ಮೃತಿ', ಬಿ. ಎಂ. ಶ್ರೀ ಪ್ರತಿಷ್ಠಾನವು ಪ್ರಕಟಿಸಿರುವ ಐವತ್ತಾರು ಪುಟಗಳ ಒಂದು ಸಂಕೀರ್ಣಸ್ವರೂಪದ ಕೃತಿಯಾಗಿದೆ. ಬೇಂದ್ರೆಯವರು ನಿಧನರಾದ ಸಂದರ್ಭದಲ್ಲಿ, ಅವರ ನೆನಪಿಗೆ ಸಂದ ಗೌರವದ ಹಲವು ಮುಖಗಳು ಇಲ್ಲಿವೆ. ಕರ್ನಾಟಕದ ವಿವಿಧ ಕ್ಷೇತ್ರಗಳ ಮಹನೀಯರು ಹಾಗೂ ಪತ್ರಿಕೆಗಳು ಬೇಂದ್ರೆ ಯವರಿಗೆ ಅರ್ಪಿಸಿದ ಶ್ರದ್ಧಾಂಜಲಿ ಇದರಲ್ಲಿದೆ. ಮಾಸ್ತಿ, ಎಂ. ವಿ. ಸೀತಾರಾಮಯ್ಯ, ಗೊರೂರು, ಕುರ್ತಕೋಟಿ ಮತ್ತು ಶಕುಂತಲಾ ನಾಯಿಕ ಇವರುಗಳು ಬರೆದ ಕಿರುಲೇಖನಗಳು, ಇವುಗಳ ಜತೆಗೆ ಬೇಂದ್ರೆ ಸಾಹಿತ್ಯವನ್ನು ಕುರಿತು ಅಭ್ಯಾಸಿಗಳಿಗೆ ಉಪಯುಕ್ತವಾಗಬಹುದಾದ 'ಬೇಂದ್ರೆಜೀವನ-ಕೃತಿ ಸೂಚಿ' ಮತ್ತು ಒಂದೆರಡು ಪದ್ಯಗಳು ಇದರಲ್ಲಿ ಸಮಾವೇಶವಾಗಿವೆ. ಈ ಕೃತಿಯಲ್ಲಿ ಮಾಸ್ತಿ, ಎಂ.ವಿ.ಸೀ. ಕುರ್ತಕೋಟಿ, ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರ ಕಿರು ಲೇಖನಗಳು ಬೇಂದ್ರೆಯವರನ್ನು ಕುರಿತಂತೆ, ಸ್ವಾರಸ್ಯ ಮಾದ ಸಂಗತಿಗಳನ್ನು ಮತ್ತು ನೆನಪುಗಳನ್ನು ನಿರೂಪಿಸುವಂಥವುಗಳಾಗಿವೆ. ಈ ಕೃತಿ ಕೇವಲ ಸಾಂದರ್ಭಿಕವಾದರೂ, ಬೇಂದ್ರೆಯವರಂಥ ಮಹತ್ವದ ಲೇಖಕರು ನಿಧನರಾದಾಗ ಕನ್ನಡ ನಾಡು ತೋರಿದ ಒಂದು ಪ್ರತಿಕ್ರಿಯೆಯಾಗಿ ಗಮನಿಸ ತಕ್ಕದ್ದಾಗಿದೆ.

ಭರತನಾಟ್ಯ ಶಾಸ್ತ್ರವನ್ನು ಕನ್ನಡದಲ್ಲಿ ಮೊಟ್ಟಮೊದಲಿಗೆ ಸಮಗ್ರವಾಗಿ ಅನುವಾದಮಾಡಿ ವಿಮರ್ಶಾತ್ಮಕ ಟಿಪ್ಪಣಿಗಳೊಡನೆ ದೊರಕಿಸಿ ಕೊಟ್ಟವರು ದಿವಂಗತ ಶ್ರೀರಂಗ (ಆದ್ಯರಂಗಾಚಾರ್ಯ) ಅವರು. ನಾಟ್ಯಶಾಸ್ತ್ರದ ಕೆಲವು ಬಿಡಿ ಬಿಡಿ ಸಂಗತಿಗಳನ್ನು ಕುರಿತು ವ್ಯಾಖ್ಯಾನ ರೂಪವಾಗಿ ಬರೆಯುವ ಉದ್ದೇಶದಿಂದ ಶ್ರೀರಂಗರು ತೊಡಗಿದ ಪರಿಣಾಮವಾಗಿ, ಇದೀಗ 'ನಾಟ್ಯಶಾಸ್ತ್ರದಲ್ಲಿ ನಟ', 'ನಾಟ್ಯಶಾಸ್ತ್ರದಲ್ಲಿ ನಾಟ್ಯಮಂಡಪ' ಎಂಬ ಹೆಸರಿನ ಎರಡು ಕಿರುಕೃತಿಗಳು ಪ್ರಕಟವಾಗಿವೆ. ಅನುಕ್ರಮವಾಗಿ 32 ಮತ್ತು 34 ಪುಟಗಳ ಪರಿಮಿತಿಯನ್ನುಳ್ಳ ಈ ಎರಡು ಪುಸ್ತಕಗಳನ್ನು ಹೆಗ್ಗೋಡಿನ ನೀನಾಸಂ ರಂಗ ಶಿಕ್ಷಣ ಕೇಂದ್ರದ ಪರವಾಗಿ ಸಾಗರದ ಅಕ್ಷರ ಪ್ರಕಾಶನದವರು ಪ್ರಕಟಿಸಿದ್ದಾರೆ.

ನಾಟ್ಯಶಾಸ್ತ್ರ ಅನೇಕ ಪಾಠಭೇದಗಳಿಂದ ಹಾಗೂ ಅರ್ಥಸಂದಿಗ್ಧ ಸಂಗತಿಗಳಿಂದ ಕೂಡಿರುವ ಕೃತಿ. ನಾಟ್ಯಶಾಸ್ತ್ರದಲ್ಲಿ 'ನಾಟ್ಯಮಂಡಪ' ಎಂಪರೆ ಒಮ್ಮೊಮ್ಮೆ ಪ್ರೇಕ್ಷಾಗೃಹ ಎಂದೂ, ಒಮ್ಮೊಮ್ಮೆ ರಂಗಸ್ಥಲವೆಂದೂ ಹೇಳುವಂತೆ ಕಂಡು ಬರುತ್ತದೆ. ಶ್ರೀರಂಗ ಅವರು ನಾಟ್ಯಮಂಡಪದ ಖಚಿತವಾದ ಅರ್ಥವೇನಿರಬಹುದೆಂಬುದನ್ನು ಕುರಿತು, ವಿವರಿಸುವ ಸಂಗತಿಗಳು ಇಂದಿನ ರಂಗಪ್ರಯೋಗಕ್ಕೂ ಉಪಯುಕ್ತವಾಗುವಂತಿವೆ. ಇನ್ನು 'ನಾಟ್ಯಶಾಸ್ತ್ರದಲ್ಲಿ ನಟ' ಎಂಬ ಕೃತಿಯೂ ಸಹ, ನಟನ ಸ್ವಭಾವ, ಸಿದ್ಧತೆ, ಸಾಮರ್ಥ್ಯ ಇತ್ಯಾದಿಗಳನ್ನು ಒಂದೆಡೆ ಸಂಗ್ರಹಿಸಿ ಕೊಡುತ್ತದೆ. ಈ ಎರಡೂ ಕೃತಿಗಳು ನಟರಿಗೆ ಹಾಗೂ ನಿರ್ದೇಶಕರಿಗೆ ತುಂಬ ಪ್ರಯೋಜನಕಾರಿಯಾದವುಗಳೆಂದು ಹೇಳಬೇಕಾಗಿಲ್ಲ. ಇದರ ಜತೆಗೆ ಇಂದಿನ ನಟರಿಗೆ ಹಾಗೂ ನಿರ್ದೇಶಕರಿಗೆ ಭಾರತೀಯನಾಟ್ಯಪರಂಪರೆಯ ಪರಿಜ್ಞಾನ ಎಷ್ಟೊಂದು ಮುಖ್ಯವಾದದ್ದು ಎಂಬುದನ್ನು ನೆನೆದರೆ, ಶ್ರೀರಂಗರು ಅನುವಾದಿಸಿರುವ ಭರತನ ನಾಟ್ಯಶಾಸ್ತ್ರ ಮತ್ತು ಅವುಗಳ ವ್ಯಾಖ್ಯಾನ ರೂಪವಾಗಿರುವ ಈ ಎರಡು ಕಿರು ಕೃತಿಗಳ ಮಹತ್ವ ಎಷ್ಟೆಂಬುದು ಮನದಟ್ಟಾಗುತ್ತದೆ.

ಮಾಧವ ಕುಲಕರ್ಣಿಯವರ 'ಯೋಚನೆಗಳು, ಲೇಖನಗಳು' ಒಂಬತ್ತು ವೈಚಾರಿಕ ಲೇಖನಗಳ ಒಂದು ಸಂಗ್ರಹವಾಗಿದೆ. ಕೇವಲ ಅರುವತ್ತುನಾಲ್ಕು ಪುಟಗಳ ಈ ಕೃತಿಯಲ್ಲಿ, ಶಿಕ್ಷಣ, ಸಾಹಿತ್ಯ, ರಾಜಕೀಯ, ಚಲನಚಿತ್ರ ಹಾಗೂ ನಮ್ಮ ಪರಿಸರದ ಮೌಲ್ಯ ವಿವೇಚನೆಯನ್ನು ಕುರಿತು ಕುಲಕರ್ಣಿಯವರು ನಡೆಯಿಸಿದ ಗಾಢವಾದ ಚಿಂತನೆಗಳು ಇದರಲ್ಲಿವೆ. ಈ ಎಲ್ಲಾ ಲೇಖನಗಳ ಹಿಂದೆ ನಿಶಿತವಾದ ಹಾಗೂ ತಿವ್ರಕಳಕಳಿಯನ್ನುಳ್ಳ ಮನಸ್ಸೊಂದು, ತಕ್ಕ ಏಕಾಗ್ರತೆಯಿಂದ ಕೆಲಸ ಮಾಡಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಕೆಲವೆಡೆ ಎಲ್ಲೋ ಆಳದಲ್ಲಿ ಹೀಗೆ ವಿಚಾರಮಾಡುವ ಈ ಮನಸ್ಸು, ಅದಕ್ಕೆ ಅಗತ್ಯವಾದ ಒಂದು ವಸ್ತುನಿಷ್ಠ ಹಾಗೂ ನಿಷ್ಪಕ್ಷಪಾತ ನಿಲುವುಗಳನ್ನು ಇನ್ನೂ ಪಡೆಯಬೇಕಾಗಿತ್ತೇನೋ ಅನ್ನಿಸುವಂತೆ ಭಾಸವಾಗುತ್ತದೆ. 'ಸಾಮಾನ್ಯರ ಪ್ರತಿಕ್ರಿಯೆ ಮತ್ತು ಕಲೆ', 'ಶಿಕ್ಷಣ ವಿದ್ಯೆ ಮತ್ತು ಜ್ಞಾನಾರ್ಜನೆ' ಇಂಥ ಲೇಖನಗಳನ್ನು ಗಮನಿಸಬಹುದು. 'ಕನ್ನಡ ಸಾಹಿತ್ಯದ ಅಭ್ಯಾಸ ಮತ್ತು ಸಾಹಿತಿಗಳು' ಎಂಬ ಲೇಖನದಲ್ಲಿ ಸೂಚಿತವಾಗಿರುವ ಲೇಖಕರ ಆಶಯಗಳು ಮೌಲಿಕವಾಗಿವೆ ಮತ್ತು ಅವುಗಳನ್ನು ಪಲವು ವಿಶ್ವವಿದ್ಯಾಲಯಗಳು, ಆಂಶಿಕವಾಗಿ ಕಾರ್ಯಗತಗೊಳಿಸಿವೆ. ವಿಶ್ವವಿದ್ಯಾಲಯಗಳಲ್ಲಿ ನವ್ಯಕಾವ್ಯಕ್ಕೆ ಮನ್ನಣೆ ಸಿಗುತ್ತಿಲ್ಲವೆಂದು ಲೇಖಕರು ಹೇಳುತ್ತಾ (ವಾಸ್ತವವಾಗಿ ಈ ಅಭಿಪ್ರಾಯ ಸರಿಯಲ್ಲ ಅಥವ ಕುಲಕರ್ಣಿಯವರು ಸರಿಯಾಗಿ ಗಮನಿಸಿಲ್ಲ) "ವ್ಯವಹಾರಜ್ಞಾನವುಳ್ಳ ಸಾಹಿತಿ ಮಿತ್ರರೊಬ್ಬರು ಥಕ್ಕನೆ ಹೇಳಿದರು. ನವ್ಯಕವಿಯೊಬ್ಬರು ಉಪಕುಲಪತಿಯಾದರೆ ಮನ್ನಣೆ ತಾನಾಗಿ ಸಿಕ್ಕುತ್ತದೆ." ಈ

ಮಾತನ್ನು ಹೇಳುತ್ತಾ ಕುಲಕರ್ಣಿಯವರು ಒಗ್ಗರಣೆ ಹಾಕುತ್ತಾರೆ. 'ಎಷ್ಟು ಸತ್ಯವಾದ ಮಾತು' (ಪು 15) ಎಂದು. ಇಂಥ ಮಾತನ್ನು ತಮಾಷೆಗಾಗಿ ಹೇಳುವುದು ಕೂಡಾ, ಹಾಗೆ ಹೇಳುವ ಅಥವಾ ಅಂಥ ಮಾತನ್ನು ಸಮರ್ಥಿಸುವ ಮನಸ್ಸಿನ ಅನಾರೋಗ್ಯದ ಪ್ರತೀಕವಾಗುತ್ತದೆ-ಎಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

'ಪವಾಡ ಕಥೆಗಳು ಮತ್ತು ಇತರ ಲೇಖನಗಳು' ವಿ. ಜಿ. ಪೂಜಾರ ಅವರು ಬರೆದ ಅರವತ್ತೊಂದು ಪುಟಗಳ ಒಂದು ಪುಸ್ತಕ, ಇಲ್ಲಿರುವ ಹತ್ತು ಲೇಖನಗಳಲ್ಲಿ, ಮೊದಲ ನಾಲ್ಕು ವೀರಶೈವ ಸಾಹಿತ್ಯವನ್ನು ಅಂದರೆ ವಚನಕಾರರು ಹಾಗೂ ಅವರ ನಂತರ ಬಂದ ಕೆಲವು ಕವಿಗಳ ಸಾಧನೆಯನ್ನು, ಅವರು ನಿರ್ಮಿಸಿದ ಸಂಪ್ರದಾಯವನ್ನು ಕುರಿತ ವ್ಯಾಖ್ಯಾನಗಳಾಗಿವೆ. ಈ ನಾಲ್ಕು ಲೇಖನಗಳು ವೀರಶೈವ ಸಾಹಿತ್ಯವನ್ನು, ಅದನ್ನು ಕುರಿತು ಬಂದಿರುವ ಇದುವರೆಗಿನ ವಿಮರ್ಶೆಯನ್ನು ತಕ್ಕ ಮಟ್ಟಿಗೆ ಓದಿಕೊಂಡವರ ತಿಳುವಳಿಕೆಯನ್ನು ಕಿಂಚಿತ್ತೂ ಹೆಚ್ಚು ಮಾಡುವಂತೆ ತೋರುವುದಿಲ್ಲ. ಯಾವುದೇ ಹೊಸ ವಿಚಾರವನ್ನಾಗಲೀ, ದೃಷ್ಟಿ ಕೋನವನ್ನಾಗಲೀ ಅವು ತೆರೆಯುವಂತೆ ತೋರುವುದಿಲ್ಲ. ಆದರೆ ಉಳಿದ ಲೇಖನಗಳು (ಐದರಿಂದ ಹತ್ತರವರೆಗಿನವು) ನಿಜವಾಗಿಯೂ ಬೇರೆಯ ನಿಟ್ಟಿನಿಂದ ಕಂಡ ಹಾಗೂ ವಿಶ್ಲೇಷಿಸುವ ವಿಚಾರ ಸರಣಿಯೊಂದನ್ನು ಪರಿಚಯಮಾಡಿ ಕೊಡುತ್ತವೆ. 'ಧಾರ್ಮಿಕ ಮಹಾಪುರುಷರ ಅಲೌಕಿಕ ಜನನ ಹಾಗೂ ಅವತಾರ' ಮತ್ತು ಪವಾಡಗಳನ್ನು ಕುರಿತ ವಿಶ್ಲೇಷಣೆ ಹಾಗೂ 'ಬಸವಣ್ಣನವರ ವಚನಗಳಲ್ಲಿ ಪವಾಡಗಳನ್ನು ಕುರಿತ ಪರಿಶೀಲನೆ,-ಇವು ತುಂಬ ಸ್ವಾರಸ್ಯವೂ, ವಿಚಾರ ಪ್ರಚೋದಕವೂ ಆದ ಲೇಖನಗಳಾಗಿವೆ. ಜಗತ್ತಿನ ಎಲ್ಲ ಪುರಾಣ ಹಾಗೂ ಕಾವ್ಯಗಳು, ಯಾಕೆ ಮಹಾಪುರುಷರ ಜನನದಲ್ಲಿರುವ ಅಲೌಕಿಕತೆಯನ್ನು ಒತ್ತಿ ಹೇಳುತ್ತವೆ ಎನ್ನುವುದನ್ನು ವಿಚಾರ ಮಾಡುತ್ತಾ, ಆ ಹಿನ್ನೆಲೆಯಿಂದ ವೀರಶೈವ ಪುರಾಣಗಳೂ ಹೇಗೆ ಈ ಪರಂಪರೆಗೆ ಸೇರುತ್ತವೆಯೆನ್ನುವುದನ್ನು ಪೂಜಾರರು ಚರ್ಚಿಸಿರುವ ಸಂಗತಿ ಹೊಸತಾಗಿದೆ. ಹಾಗೆಯೆ ಪವಾಡಗಳ ಉಗಮ, ಸ್ವರೂಪ, ಮತ್ತು ಉದ್ದೇಶಗಳನ್ನು ವಿವೇಚಿಸುತ್ತಾ, ಬಸವಣ್ಣನವರನ್ನು ಕುರಿತ ಪವಾಡಗಳು, ಹೇಗೆ ಅವರನ್ನು ವಸ್ತುವನ್ನಾಗಿ ತೆಗೆದುಕೊಂಡ ಕವಿಗಳ ಕೃತಿಗಳಲ್ಲಿ, ಕೃತಿಯಿಂದ ಕೃತಿಗೆ ಹೇಗೆ ಮಾರ್ಪಾಡು ಹೊಂದಿವೆ ಎಂಬುದನ್ನು ಮತ್ತು ಬಸವಣ್ಣನವರು ತಮ್ಮ ವಚನಗಳಲ್ಲಿ ಕೆಲವೆಡೆ ಉಲ್ಲೇಖಿಸುವ ಸಂದರ್ಭಗಳು ಈ ಬಗೆಯ ಮಾರ್ಪಾಡಿಗೆ ಆಧಾರವಾಗಿ ಬಳಕೆಯಾಗಿವೆ ಎಂಬುದನ್ನು ಪೂಜಾರರು, ತೋರಿಸಿ ಕೊಟ್ಟಿರುವ ಸಂಗತಿ ಸೊಗಸಾಗಿದೆ. ಪವಾಡಗಳನ್ನು ಮಾನವ ಶಾಸ್ತ್ರ ಹಾಗೂ ಸಮಾಜ ವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಇಂಥ ಪ್ರಯತ್ನಗಳು, ನಮ್ಮಲ್ಲಿ ತೀರಾ

ಕಡಿಮೆ ಎನ್ನಬೇಕು. ವೀರಶೈವ ಸಾಹಿತ್ಯವನ್ನು ಕುರಿತು ಇನ್ನೂ ಕೊಟ್ಟಣ ಕುಟ್ಟುವ ಬರಹಗಳೇ ಬರುತ್ತಿರುವ ಈ ಪರಿಸರದಲ್ಲಿ, ಅನ್ಯಜ್ಞಾನ ಶಾಖೆಗಳ ಬೆಳಕಿನಲ್ಲಿ ಅದನ್ನು ಅಧ್ಯಯನ ಮಾಡುವುದರಿಂದ ಆಗುವ ಪ್ರಯೋಜನಗಳ ಒಂದು ಸಾಧ್ಯತೆಯನ್ನು, ಪೂಜಾರ ಅವರ ಈ ಕೃತಿಯ ಉತ್ತರಾರ್ಧದ ಕೆಲವು ಲೇಖನಗಳು ಸೂಚಿಸುತ್ತವೆ.

ಶ್ರೀನಿವಾಸ ಹಾವನೂರ ಅವರ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತ, ಕಂಪ್ಯೂಟರ್ ಇತ್ಯಾದಿ' ಎಂಬ ಶೀರ್ಷಿಕೆಯ ಕೃತಿ ಮೇಲು ನೋಟಕ್ಕೆ ಒಂದು ಸಂಕೀರ್ಣ ಸ್ವರೂಪದ ಕೃತಿಯಂತೆ ತೋರುವುದಾದರೂ, ಈ ಪುಸ್ತಕವನ್ನು ಓದಿ ಮುಗಿಸಿದ ನಂತರ ಇದು ಸತ್ವತಃ ಸಂಶೋಧನಾತ್ಮಕ ವರ್ಗಕ್ಕೆ ಸೇರುವ ಲಕ್ಷಣವನ್ನುಳ್ಳದ್ದೆನಿಸುತ್ತದೆ. ಮುನ್ನುಡಿಯನ್ನು ಬರೆದ ಚಿದಾನಂದ ಮೂರ್ತಿಯವರೂ ಈ ಕೃತಿಯ ಲೇಖನಗಳು' ಕನ್ನಡ ಸಂಶೋಧನ ಪ್ರಪಂಚಕ್ಕೆ ಒಂದು ವಿಶಿಷ್ಟ ವಿನೂತನ ಕೊಡುಗೆ" ಎಂದಿದ್ದಾರೆ. ಆದರೆ ಈ ಕೃತಿಯಲ್ಲಿ ಮೌಲಿಕವಾದ ಸಂಶೋಧನೆ ಮುಖ್ಯವಾಗಿದ್ದರೂ, ಈ ಕೃತಿಯ ಒಟ್ಟು ಸ್ವರೂಪ, ಸಂಶೋಧನೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆ ಮತ್ತಿತರ ಕ್ಷೇತ್ರಗಳಿಗೆ ಸೇರಿದ ಲೇಖನಗಳ ಒಂದು ಸಂಗ್ರಹದಂತಿದೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ಮೊದಲ ಎರಡು ಲೇಖನಗಳಲ್ಲಿ, ಮೊದಲ ಲೇಖನ 'ಕನ್ನಡ ಸಾಹಿತ್ಯ ಚರಿತ್ರೆಯ ಕಾಲ ವಿಭಾಗ–ಒಂದು ಸಮನ್ವಯ', ಇದುವರೆಗಿನ ಸಾಹಿತ್ಯ ಚರಿತ್ರೆಯ ತಿಳಿವಿಗೆ ಅಂತ ಹೊಸದೇನನ್ನೂ ಸೇರಿಸುವಂತೆ ತೋರುವುದಿಲ್ಲ. ಎರಡನೆಯ ಲೇಖನ, 'ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯ', ಹದಿನೆಂಟನೆಯ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಬರಡುಗಾಲ ಎಂಬ ಸಾಮಾನ್ಯ ತಿಳಿವಳಿಕೆಯನ್ನು ಸಾಧಾರವಾಗಿ ನಿರಾಕರಿಸಿ, ಆ ಕಾಲದ ಸಾಹಿತ್ಯ ನಿರ್ಮಿತಿಯ ಹಲವು 'ಮೊದಲು'ಗಳ ಕಡೆಗೆ ಓದುಗರ ಗಮನವನ್ನು ಸೆಳೆಯುತ್ತ, ಮುಂದಿನ ನವೋದಯ ಸಾಹಿತ್ಯಕ್ಕೆ ಅದು ಹೇಗೆ ಪೂರ್ವಸಿದ್ಧತೆಯನ್ನೊದಗಿಸಿತು ಎನ್ನುವುದನ್ನು ಸಮರ್ಥವಾಗಿ ಪ್ರತಿಪಾದಿಸುತ್ತದೆ. 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ' ಎಂಬ ಮೂರು ಬರೆಹಗಳು ಇದುವರೆಗೂ ಬೇರೆಡೆಗೆ ದೊರೆಯದ ಅನೇಕ ಅಧಿಕೃತ ಸಂಗತಿಗಳನ್ನು ದಾಖಲು ಮಾಡುವ ಚಾರಿತ್ರಿಕ ಸಂಶೋಧನೆಯ ಅಪೂರ್ವ ನಿದರ್ಶನವಾಗಿವೆ. ಇದಕ್ಕೆ ಪೂರಕವೆಂಬಂತೆ, ಐ. ಮಾ. ಮುತ್ತಣ್ಣನವರು 1969 ರಷ್ಟು ಹಿಂದೆಯೇ ಬರೆದ, 632 ಪುಟಗಳ 'ಹತ್ತೊಂಬತನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಎಂಬ ಬೃಹತ್ ಕೃತಿಯನ್ನು ಕೂಲಂಕಷವಾದ ವಿಮರ್ಶೆಯನ್ನು ಮಾಡಿ, ಆ ಬೃಹತ್ ಸಂಪುಟದ ರಚನೆಯ ಹಿಂದಿರುವ ಲೇಖಕರ 'ಅತೀವ ಅಲಕ್ಷ'ವನ್ನೂ ಬೇಜವಾಬ್ದಾರಿತನದಿಂದ ಆಗಿರುವ

ಅವಿವೇಕಗಳನ್ನೂ, ನಿಖರವಾದ ಮಾಹಿತಿಗಳ ಹಿನ್ನೆಲೆಯಲ್ಲಿ ಹಾವನೂರರು ಬಿಚ್ಚಿ ಬಯಲಿಗೆಳೆಯುತ್ತ, ಆ ಒಂದು ಕೃತಿ ರಚನೆಗೆ ತೊಡಗಿದ ಮುತ್ತಣ್ಣನವರ ಮೂಲ ಮನೋಧರ್ಮ ಎಷ್ಟೆಂದು ಘಾತುಕವಾದದ್ದೆನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಹಾವನೂರರ ಈ ವಿಮರ್ಶೆ ಬರುವವರೆಗೂ, ಅಂದರೆ ಮುತ್ತಣ್ಣನವರ ಈ ಕೃತಿ ಪ್ರಕಟವಾದ ಹದಿಮೂರು ವರ್ಷಗಳ ಈ ಅಂತರದಲ್ಲಿ ಯಾವುದೇ ವಿದ್ವಾಂಸರು ಅಥವಾ ವಿಮರ್ಶಕರು ಈ ಕೃತಿಯ ಪೊಳ್ಳುತನವನ್ನು ಪತ್ತೆ ಹಚ್ಚದೆ ಹೋದ ರೆಂಬುದು ಕನ್ನಡ ವಿಮರ್ಶೆಯ ಆಶ್ಚರ್ಯಗಳಲ್ಲೊಂದಾಗಿದೆ. 'ಶ್ರೀಕಂಠೇಶಗೌಡರ ಕಾಲದ ಕನ್ನಡ ಸಾಹಿತ್ಯ', ಮತ್ತು 'ಕನ್ನಡದ ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ'–ಈ ಎರಡು ಲೇಖನಗಳೂ ಅನೇಕ ಹೊಸ ಸಂಗತಿಗಳನ್ನು ಪರಿಚಯಿಸು ತ್ತವೆ. 'ಕಾದಂಬರಿ' ಎಂಬ ಹೆಸರೇ ಮೂಲತಃ ಮರಾಠಿಯಿಂದ ಕನ್ನಡಕ್ಕೆ ಬಂತೆಂಬುದನ್ನು ಹಾವನೂರರು ತೋರಿಸಿಕೊಟ್ಟಿದ್ದಾರೆ.

'ಕನ್ನಡದಲ್ಲಿ ಹನಿಗತೆಗಳು' ಎಂಬ ಲೇಖನ ತುಂಬ ಸ್ವಾರಸ್ಯವಾದದ್ದು. ನಮಗೆ ಪರಿಚಿತವಾಗಿರುವ 'ಸಣ್ಣ ಕತೆ' (Shrot Story) ಗಳಿಗಿಂತ ಭಿನ್ನವಾದ ಕಿರುಗತೆಗಳನ್ನು ಹಾವನೂರರು 'ಹನಿಗತೆ'ಗಳೆಂದು ಕರೆದು, ಹನಿಗತೆಗಳ ಸ್ವರೂಪ ಲಕ್ಷಣಗಳನ್ನು ನಿರ್ಣಯಿಸಿ, ಕನ್ನಡದಲ್ಲಿ ಈ ವರ್ಗಕ್ಕೆ ಸೇರುವ 'ಹನಿಗತೆ' ಗಳ ಹಾಗೂ ಅಂಥ ಕತೆಗಾರರ ಸಂಗತಿಗಳನ್ನು ನಿರೂಪಿಸಿರುವ ರೀತಿ ತೀರಾ ಹೊಸ ದಾಗಿದೆ. ಕನ್ನಡದ 'ಹನಿಗವನ' (ಯಾಕೋ ಈ ಹೆಸರು ಬಳಕೆಗೆ ಬಂದಂತೆ ಕಾಣುವುದಿಲ್ಲ) ಅಥವಾ ಚುಟಕಗಳಿಗೆ ಸಂವಾದಿಯಾದ ಈ ಹನಿಗತೆಗಳ ಪರಂಪರೆ ಮುಂದುವರಿದುಕೊಂಡು ಬಾರದೆ ಇರುವುದು ಕೂಡಾ ಸೋಜಿಗದ ಸಂಗತಿಯಾಗಿದೆ.

ಕನ್ನಡ ಸಾಹಿತ್ಯದ ಅಭ್ಯಾಸಕ್ಕೆ ಕಂಪ್ಯೂಟರ್ ಅನ್ನು ಬಳಸಿದವರಲ್ಲಿ ಹಾವನೂರರೇ ಮೊದಲಿಗರು. ಮುದ್ದಣನ 'ರಾಮಾಶ್ವಮೇಧ' ಕೃತಿಯನ್ನು ಕಂಪ್ಯೂಟರ್‌ಗೆ ಹಾಕಿ, ಶ್ರೀರಾಮಚಂದ್ರನ ಕತೆಯನ್ನು ಹೇಳುವ ಮುದ್ದಣ, ಉಳಿದ ದೇವತೆಗಳ ಹೆಸರುಗಳಿಗಿಂತ, ಶಿವನ ಹೆಸರನ್ನೆ ಯಾಕೆ ಹೆಚ್ಚಾಗಿ (ಅಂದರೆ 350 ಸಲ) ಬಳಸಿದ್ದಾನೆಂಬುದನ್ನು ಗುರುತಿಸಿ, ಮುದ್ದಣನಿಗಿರುವ ಶಿವಪಕ್ಷಪಾತವನ್ನು ತೋರಿಸಿ ಕೊಟ್ಟಿದ್ದಾರೆ. ಹಾಗೆಯೇ ಬೇಂದ್ರೆಯವರ ಕಾವ್ಯಾಭ್ಯಾಸಕ್ಕೆ ಕಂಪ್ಯೂಟರ್ ಅನ್ನು ಬಳಸುವುದರಿಂದಾಗುವ ಪ್ರಯೋಜನವನ್ನು ಪ್ರಸಾಪಿಸಿದ್ದಾರೆ. ಇದರಿಂದ ಸಾಹಿತ್ಯದ ಅರ್ಥವಂತಿಕೆಗೆ ಹಾಗೂ ವಿಮರ್ಶೆಗೆ ಒದಗುವ ಲಾಭವೇನೆಂಬುದನ್ನು ಇನ್ನೂ ಕಾದು ನೋಡಬೇಕಾಗಿದೆ.

ಒಟ್ಟಿನಲ್ಲಿ ಹಾವನೂರರ ಈ ಕೃತಿ ಸಾಹಿತ್ಯದ ಅಧ್ಯಯನ ಹಾಗೂ ಅರ್ಥ ವಂತಿಕೆಗೆ ಅಗತ್ಯವಾದ ಹಲವು ಮೌಲಿಕವಾದ ಸಂಗತಿಗಳನ್ನೂ, ವಿಚಾರಗಳನ್ನೂ ಒದಗಿಸುತ್ತದೆ.

'ಅವತಾರಗಳು' ಸಿದ್ದಲಿಂಗಯ್ಯನವರು ಬರೆದ ಒಂದು ಅಪರೂಪದ ಪುಸ್ತಕವಾಗಿದೆ. ಇಲ್ಲಿರುವುದು ಲೋಕಕಲ್ಯಾಣಾರ್ಥವಾಗಿ ಭಗವಂತನು ಎತ್ತಿದ ಹತ್ತವತಾರಗಳನ್ನು ಕುರಿತ ವ್ಯಾಖ್ಯಾನ ಅಥವಾ ವಿಮರ್ಶೆ ಅಲ್ಲ ; ನಮ್ಮ ಪರಿಸರದಲ್ಲಿರುವ ಅಸಂಖ್ಯಾತ ದೇವರುಗಳು, ನಗರ ಹಾಗೂ ಗ್ರಾಮಾಂತರ ಪರಿಸರಗಳಲ್ಲಿ ಜನರನ್ನು ಸುಲಿದು ತಿನ್ನಲು ತಾಳುವ 'ಅವತಾರ' ಅಥವಾ ಅಸಹಜ ನಡವಳಿಕೆಗಳನ್ನು ಕುರಿತ ಸ್ವಾರಸ್ಯವಾದ ನಿರೂಪಣೆ. ಸಿದ್ದಲಿಂಗಯ್ಯನವರು ಹಲವಾರು ವರ್ಷಗಳಿಂದ ಮತ್ತು ಅನೇಕ ಕಡೆಗಳಲ್ಲಿ ಪ್ರತ್ಯಕ್ಷವಾಗಿ ಕಂಡ, ಕೇಳಿದ ಸಂಗತಿಗಳ ಆಧಾರಗಳಿಂದ, ಊರೂರು ಕೇರಿಗಳಲ್ಲಿ ಮನೆಮಾಡಿಕೊಂಡ ಈ 'ದೇವರು'ಗಳು, ಜನದ ಅಜ್ಞಾನ, ದಾರಿದ್ರ್ಯ ಮತ್ತು ಕುರುಡು ನಂಬಿಕೆಗಳನ್ನು ಬಂಡವಾಳಮಾಡಿಕೊಂಡು, ತಾಳುವ ಅನೇಕ 'ಅವತಾರ'ಗಳನ್ನು ತಮಾಷೆಯಧಾಟಿಯಲ್ಲಿ ವರ್ಣಿಸಿದ್ದಾರೆ. ದೇವರುಗಳಿಗೆ ಸಂಬಂಧಿಸಿದ ಪೂಜೆಗಳು, ಆಚರಣೆಗಳು, ಹಬ್ಬಗಳು, ಜಾತ್ರೆಗಳು ಮತ್ತು ಈ ಸಂದರ್ಭದಲ್ಲಿ ದೇವರುಗಳು ಮೈಮೇಲೆ ಬರುವ ವಿವಿಧ ವೈಚಿತ್ರ್ಯಗಳು ಮತ್ತು ಅವುಗಳ ಹಿಂದೆ ಇರುವ ಅಜ್ಞಾನ ಮೂಲವಾದ ಹಾಗೂ ಗೂಢವಾದ ಉದ್ದೇಶಗಳು ಇಲ್ಲಿ ತಕ್ಕ ನಿದರ್ಶನಗಳಿಂದ ದಾಖಲಾಗಿವೆ. 'ದೇವರು'ಗಳಲ್ಲಿ ಕಂಡು ಬರುವ ವರ್ಗಭೇದಗಳೂ, ಜಾತಿಭೇದಗಳೂ, ತರತಮಗಳೂ ನಮ್ಮ ಸಾಮಾಜಿಕ ಪರಿಸ್ಥಿತಿಯ ತದ್ರೂಪವೇ ಆಗಿದೆ ಎಂಬುದನ್ನು ಸಿದ್ದಲಿಂಗಯ್ಯನವರ ಈ ಬರೆಹ ಸ್ಪಷ್ಟವಾಗಿ ತೋರಿಸುತ್ತದೆ. "ಶಿಷ್ಟ ದೇವರುಗಳ ಮುಖ ಪ್ರಸನ್ನವಾಗಿದ್ದರೆ, ಜನಪದ ದೇವರುಗಳ ಮುಖ ಕೋಪದಿಂದ ಕೂಡಿರುತ್ತದೆ." ... "ಜನಪದ ದೇವತೆಗಳು ಗಂಡಾಗಲಿ ಹೆಣ್ಣಾಗಲಿ ಆವೇಶಹೆಚ್ಚು ; ಶಿಷ್ಟದೇವತೆಗಳು ಇನ್ನೊಂದುಥರ ಅವುಗಳ ಲಕ್ಷಣ ಸೌಮ್ಯತೆ ಮತ್ತು ಸೌಂದರ್ಯ" (ಪು. 30) — ಇಂಥ ಮಾತುಗಳನ್ನೂ ಮತ್ತು ಇವುಗಳ ಹಿಂದಿನ ಕಾರಣಗಳನ್ನು ಸಮಾಜ ಶಾಸ್ತ್ರದ ಹಾಗೂ ನಮ್ಮ ಸಾಮಾಜಿಕ ರಚನೆಯ ಹಿನ್ನೆಲೆಯಲ್ಲಿ ವಿವೇಚಿಸುವುದು ತುಂಬ ಅಗತ್ಯವಾಗಿದೆ. ಆದರೆ ಸಿದ್ದಲಿಂಗಯ್ಯನವರ ಈ ಬರೆಹ ಅವರೇ ಹೇಳಿಕೊಂಡಿರುವಂತೆ 'ಗೇಲಿಗುಣ'ದಿಂದ ಕೂಡಿರುವುದರಿಂದ, ಅವರ ಬರವಣಿಗೆ ವಿಚಾರ ಪ್ರಚೋದನೆ ಮಾಡುವುದಕ್ಕಿಂತ ಕೇವಲ ತಮಾಷೆ ಹಾಗೂ ಮನೋರಂಜನೆಯ ಕಡೆಗೆ ವಾಲುತ್ತದೆ. ಆದರೂ ಅದು ದೇವರುಗಳ ಬಗೆಗೆ ಜನರಿಗಿರುವ ನಂಬಿಕೆಯ ಬೇರುಗಳನ್ನು ಅಲುಗಾಡಿಸುವುದರಲ್ಲಿ ತಕ್ಕ ಮಟ್ಟಿಗೆ ಸಫಲವಾಗಿದೆ ಎನ್ನಬಹುದು. ಆದರೆ, ಸಿದ್ದಲಿಂಗಯ್ಯನವರು, ಅವರಿಗಿರುವ ಅನುಭವ ಹಾಗೂ ಅಧ್ಯಯನದ ಹಿನ್ನೆಲೆಯಿಂದ ಇದೇ ವಿಷಯವನ್ನು ಕುರಿತು ತುಂಬ ತೀವ್ರವಾಗಿ ಮತ್ತು ವಿಚಾರ ಪ್ರಚೋದಕವಾಗಿ ಬರೆಯುವುದು ಒಳ್ಳೆಯದು ಎಂದು ಸೂಚಿಸಲು ಇಷ್ಟಪಡುತ್ತೇವೆ.

'ಮಾರ್ಕ್ಸ್‌ವಾದ ಮತ್ತು ಕಾವ್ಯ'

ಜಾರ್ಜ್‌ಥಾಮ್ಸನ್‌ರ 'Marxim and Literature' ಎಂಬ, ಪುಸ್ತಕದ ಕನ್ನಡ ಅನುವಾದ. ಅನುವಾದಕರು ಎಚ್.ಕೆ. ರಾಮಚಂದ್ರಮೂರ್ತಿಯವರು.

ಕೇವಲ ತೊಂಬತ್ತೈದು ಪುಟಗಳ ಈ ಕೃತಿ ಸಾಹಿತ್ಯದ ಉಗಮ ಹಾಗೂ ಪರಂಪರೆಯನ್ನು ಹೊಸ ನಿಟ್ಟಿನಿಂದ ವ್ಯಾಖ್ಯಾನಿಸುವ ಒಂದು ಪ್ರಯತ್ನವಾಗಿದೆ. ಸಾಹಿತ್ಯದ ಅಥವಾ ಕಲೆಯ ಉಗಮವೇ ಮನುಷ್ಯನ ಸಾಮೂಹಿಕ ಬದುಕಿನ ದುಡಿಮೆ ಮತ್ತು ಮಂತ್ರವಿದ್ಯೆಯ ಪರಿಣಾಮವಾದದ್ದು ಬರಬರುತ್ತಾ ಅದು ಹೇಗೆ ಚರಿತ್ರೆಯ ಉದ್ದಕ್ಕೂ ಅಂದಂದಿನ ಸಾಮಾಜಿಕ ಬದಲಾವಣೆಗಳಿಗೆ ಅನುಸಾರವಾಗಿ ವ್ಯತ್ಯಾಸ ಹೊಂದುತ್ತಾ ಬಂದು, ಬಂಡವಾಳಷಾಹೀ ಸಾಮಾಜಿಕ ಸಂದರ್ಭದಲ್ಲಿ ಕಾವ್ಯ ಕೂಡಾ ಒಂದು ಉತ್ಪಾದನೆಯ ವಸ್ತುವಿನಂತೆ ಆಯಿತೆಂಬ ಸಂಗತಿಯ ಕಡೆಗೆ ಲೇಖಕರು ಓದುಗರ ಗಮನವನ್ನು ಸೆಳೆಯುತ್ತಾರೆ. ಬೂರ್ಜ್ವಾ ಕಾವ್ಯವು ಸಾಮಾಜಿಕ ಬದಲಾವಣೆಗಳ ಹಿಂದಿನ ಶಕ್ತಿಗಳನ್ನು ಅರ್ಥಮಾಡಿಕೊಳ್ಳಲಾಗದ ಸ್ಥಿತಿಯನ್ನು ತಲುಪಿ "ಈಗ ಕಾವ್ಯ ರಚನೆ ಮಾಡುತ್ತಿರುವವರು ಜನಸಮುದಾಯವೂ ಅಲ್ಲ, ಒಂದು ವಿಶಿಷ್ಟವರ್ಗವೂ ಅಲ್ಲ–ಒಂದು ಸಣ್ಣ ಕೂಟ" (ಪು. 82) ವಾಗಿ, "ಕಾವ್ಯವೆನ್ನುವುದು ಮೂಲತಃ ಕವಿ ಹಾಗೂ ಜನಸಮುದಾಯದ ನಡುವಣ ಸಂಪರ್ಕದಿಂದ ನಡೆಯುವ ಸಾಮಾಜಿಕಕ್ರಿಯೆ" (ಪು, 82) ಎನ್ನುವುದನ್ನು ಇವತ್ತಿನ ಬರೆಹಗಾರರು ಗುರುತಿಸಿಕೊಳ್ಳಬೇಕಾಗಿದೆ. ಹೀಗಾಗಿ ಸಾಹಿತ್ಯ ತನ್ನ ಆದಿಮ ಕಾಲದಲ್ಲಿ ಹೇಗೆ, ಅದು ಸಾಮಾಜಿಕ ಬದುಕಿನ ಅಂಗವಾಗಿತ್ತೊ, ಅಶೋತ್ತರವಾಗಿತ್ತೋ, ಹಾಗೆ ಮತ್ತೆ "ಅದನ್ನು ಇಂದಿನ ಅವಶ್ಯಕತೆಗೆ ತಕ್ಕಂತೆ ಅಳವಡಿಸಿಕೊಂಡು, ಹೊಸದಾದ ರೀತಿಯಲ್ಲಿ ಅರ್ಥವಿಸಿ, ಅದರ ಸಹಜ ಶಕ್ತಿಯನ್ನು ಉದ್ದೀಪನಗೊಳಿಸಿ ಅದನ್ನು ಜನತೆಯ ಸ್ವತ್ತಾಗುವಂತೆ ಮಾಡಬೇಕು" (ಪು. 92).

ಮಾರ್ಕ್ಸ್‌ವಾದದಿಂದ ಮಾರ್ಗದರ್ಶನ ಪಡೆದು ಸಾಹಿತ್ಯವನ್ನು ಅಧ್ಯಯನ ಮಾಡುವುದು ಅಗತ್ಯವಾಗಿರುವ ಇಂದಿನ ಸಂದರ್ಭದಲ್ಲಿ, ರಾಮಚಂದ್ರಮೂರ್ತಿಯವರ ಈ ಅನುವಾದ ಸಮಯೋಚಿತವಾದ ಒಂದು ಕೊಡುಗೆಯಾಗಿದೆ. ಈ ಕೃತಿಯಭಾಷೆ, ಅನುವಾದವೆನ್ನಿಸದಷ್ಟು ಸೊಗಸಾಗಿದೆ.

ಕೆ. ವಿ. ಸುಬ್ಬಣ್ಣನವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಿರುವ 'ರಂಗದಲ್ಲಿ ಅಂತರಂಗ' ಎಂಬ ಕೃತಿ ನಟ ಶಿಕ್ಷಣವನ್ನು ಕುರಿತ ಒಂದು ಅಪೂರ್ವ ಕೃತಿ. ಇದರ ಮೂಲ, ರಷ್ಯನ್ ನಟ, ಹಾಗೂ ಮಹಾನ್ ನಿರ್ದೇಶಕನಾದ ಸ್ಟಾನಿಸ್ಲಾವಸ್ಕಿಯ An Actor prepares' ಎಂಬ ಕೃತಿ. ಬಹುಶಃ ಜಗತ್ತಿನಲ್ಲೇ ಪ್ರಪ್ರಥಮವಾಗಿ ಅಭಿನಯ ಶಾಸ್ತ್ರಕ್ಕೆ ಬುನಾದಿಯನ್ನು ಹಾಕಿಕೊಟ್ಟ ಕೃತಿ ಇದು. ಇಡೀ ಕೃತಿ ಒಂದು ರೀತಿಯಲ್ಲಿ ಅಭಿನಯ ಕಲೆಯನ್ನು ಕುರಿತು, ನಾಟಕದ ನಿರ್ದೇಶಕರು, ತಮ್ಮ ನಟ ಶಿಷ್ಯರಿಗೆ, ಕೊಟ್ಟ ತರಬೇತಿಯ ದಿನಚರಿಯ ರೂಪದಲ್ಲಿ ನಿರೂಪಿತವಾಗಿದೆ. ಹದಿನಾರು ಅಧ್ಯಾಯಗಳಲ್ಲಿ ನಾಲ್ಕುನೂರು ಪುಟಗಳಷ್ಟು ಹರಹಿಕೊಂಡ ಈ ಕೃತಿ ಅಭಿನಯದ ಸೂಕ್ಷಾತಿಸೂಕ್ಷ್ಮಗಳನ್ನು ವಿಸ್ಮಯಕಾರಿಯಾದ ರೀತಿಯಲ್ಲಿ ನಿರೂ

ಪಿಸುತ್ತದೆ. ಕನ್ನಡ ರಂಗಭೂಮಿಯಲ್ಲಿ ಆಸಕ್ತರಾದವರು, ನಟರು, ನಿರ್ದೇಶಕರು, ಎಲ್ಲರೂ ಅತ್ಯಗತ್ಯವಾಗಿ ಓದಿ ಲಾಭಪಡೆಯಬೇಕಾದ ಕೃತಿ ಇದು.

'ರಮಣಾಶ್ರಮದ ಪತ್ರಗಳು' ತೆಲುಗಿನಿಂದ ಕನ್ನಡಕ್ಕೆ ಅನುವಾದಿತವಾದ, ಎಪ್ಪತ್ತೈದು ಪತ್ರಗಳ ಒಂದು ಕೃತಿ. ಶ್ರೀಮತಿ ಸೂರಿನಾಗಮ್ಮನವರು, ಅರುಣಾಚಲದ ರಮಣಮಹರ್ಷಿಗಳ ಸನ್ನಿಧಿಯಲ್ಲಿದ್ದು, ನವಂಬರ್ 1945 ರಿಂದ, ಜನವರಿ 1950 ರವರೆಗಿನ ಕಾಲದಲ್ಲಿ, ಬರೆದ ಪತ್ರಗಳು. ಮೊದಲ ಪತ್ರದ ಸಂಬೋಧನೆ, 'ಅಣ್ಣಾ' ಎಂದು ಇರುವುದರಿಂದ, ತಂಗಿಯಾದವಳು ಅಣ್ಣನಿಗೆ ಬರೆದ ಪತ್ರಗಳೆಂದು ಊಹಿಸಬಹುದು. ಈ 75 ಪತ್ರಗಳು ಶ್ರೀಮತಿ ಸೂರಿನಾಗಮ್ಮನವರು, ಭಗವಾನ್ ರಮಣರ ಸನ್ನಿಧಿಯಲ್ಲಿದ್ದುಕೊಂಡು ಅಲ್ಲಿ ತಾವುಕಂಡ ವಿವಿಧ ವ್ಯಕ್ತಿಗಳನ್ನು, ಘಟನೆಗಳನ್ನು, ಶ್ರೀ ರಮಣರ ಬದುಕಿನ ಕ್ರಮವನ್ನು, ಉಪದೇಶದ ವಿಧಾನಗಳನ್ನು, ತುಂಬ ಶ್ರದ್ಧೆ ಹಾಗೂ ಗೌರವಗಳಿಂದ ಈ ಪತ್ರಗಳಲ್ಲಿ ನಿವೇದಿಸಿಕೊಂಡಿದ್ದಾರೆ. ಈ ಪತ್ರಗುಚ್ಛವನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದ ಮಾಡಿದವರು ಕೆ. ಎ ನಾರಾಯಣನ್ ಅವರು.

'ತಿರುಕ್ಕುರಳ್' ತಮಿಳು ಭಾಷೆಯ ಅತೀರಾ ಪ್ರಾಚೀನವಾದ ಒಂದು ಕೃತಿ. ಧರ್ಮ-ಅರ್ಥ-ಕಾಮಗಳನ್ನು ವಸ್ತುವನ್ನಾಗಿ ಉಳ್ಳ ಈ ನೀತಿಕಾವ್ಯ, ತಮಿಳು ವೇದವೆಂದು ಪ್ರಶಂಸಿತವಾಗಿ, ಗೌರವಾನ್ವಿತವಾದ ಸ್ಥಾನವನ್ನು ಪಡೆದುಕೊಂಡಿದೆ. ಕೇವಲ ಎರಡು ಪಂಕ್ತಿಗಳ ಮೂಲವಾನದಲ್ಲಿ ಅತ್ಯಂತ ಕಿರಿಯ ಛಂದೋಬಂಧದಲ್ಲಿ ರಚಿತವಾಗಿರುವ ಈ ಕೃತಿ ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವಾಗಿದೆ. ಇದನ್ನು ಕನ್ನಡಕ್ಕೆ ಅನುವಾದ ಮಾಡುವ ಪ್ರಯತ್ನ, ಕ್ರಿ ಶ. 1898ರಷ್ಟು ಹಿಂದೆಯೇ ಕವಿಚರಿತಕಾರರಾದ ಶ್ರೀ ಎಸ್. ಜಿ. ನರಸಿಂಹಾಚಾರ್ಯರಿಂದ ಪ್ರಾರಂಭವಾಗಿ ಅನಂತರ ಬಿ. ಎಂ. ಶ್ರೀಕಂಠಯ್ಯನವರಿಂದ, ಮತ್ತೆಮುಂದೆ 1952ರಲ್ಲಿ ಎಲ್. ಗುಂಡಪ್ಪನವರಿಂದ ನಡೆದಿದೆ. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರೂ ಇದರ ಅನುವಾದ ಮಾಡಲು ಪ್ರಯತ್ನಿಸಿದ್ದರೆಂಬುದು. ಪ್ರಬುದ್ಧ ಕರ್ನಾಟಕದ ಸಂಚಿಕೆಯೊಂದರಲ್ಲಿ ಕಾಣಿಸಿಕೊಂಡ ಕೆಲವು ತುಣುಕುಗಳು ಸಾಕ್ಷಿಯಾಗಿವೆ ಎಂದು ನನಗೆ ನೆನಪು. ಆದರೆ ಈ ಎಲ್ಲ ಮಹನೀಯರ ಅನುವಾದಗಳು ತಿರುಕ್ಕುರಳ್‌ನ ಭಾಗಶಃ ಅನುವಾದಗಳಾಗಿದ್ದವೇ ಹೊರತು, ಅದನ್ನು ಸಮಗ್ರವಾಗಿ ಕನ್ನಡಕ್ಕೆ ತಂದವುಗಳಲ್ಲ. ಆದರೆ ಇದೀಗ ಮದುರೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಪಾ. ಶ. ಶ್ರೀನಿವಾಸ ಅವರು, ತಿರುಕ್ಕುರಳ್ ಅನ್ನು ಮೊಟ್ಟಮೊದಲಿಗೆ ಕನ್ನಡಕ್ಕೆ ಸಮಗ್ರವಾಗಿ ತಂದ ಯಶಸ್ಸಿಗೆ ಪಾತ್ರರಾಗಿದ್ದಾರೆ.

ಶ್ರೀನಿವಾಸ ಅವರು ಅನುವಾದಿಸಿರುವ ಈ ತಿರುಕ್ಕುರಳ್ ಸಮಗ್ರವಾಗಿದೆ ಮಾತ್ರವಲ್ಲ, ತಮಿಳು ಮೂಲವನ್ನು ಕನ್ನಡ ಲಿಪಿಯಲ್ಲಿ ಕೊಟ್ಟು, ಅದರ

ಪದಶಃ ಅರ್ಥವನ್ನು ಕನ್ನಡದಲ್ಲಿ ಬಿಡಿಸಿ ತೋರಿಸಿ, ಅನಂತರ ಇಡೀ ಪದ್ಯದ ಕನ್ನಡ ಅನುವಾದವನ್ನು ಸರಳವಾದ ಗದ್ಯದಲ್ಲಿ ಕಾಣಿಸಿ, ಕುರಳ್‌ನ ಒಂದೊಂದು ಪದ್ಯದ ಒಟ್ಟು ಅರ್ಥವನ್ನು ಓದುಗರು ಗ್ರಹಿಸಲು ಅನುಕೂಲವಾಗುವಂತೆ ಮಾಡಿದ್ದಾರೆ. ಹೀಗೆ 1330 ಕಿರುಪದ್ಯಗಳ ಅನುವಾದಗಳನ್ನೊಳಗೊಂಡ ಈ ಕೃತಿಗೆ, ಕವಿ-ಕಾವ್ಯ ವಿಚಾರಕ್ಕೆ ಸಂಬಂಧಿಸಿದ ವಿಸ್ತಾರವಾದ, ತುಂಬ ಉಪಯುಕ್ತವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹಾಗೆಯೇ, ಕೃತಿಯ ಕೊನೆಗೆ ತಿರುಕ್ಕುರಳ್‌ಗೇ ಸಂಬಂಧಿಸಿದ ತಮಿಳು–ಕನ್ನಡ ಪದಕೋಶವೊಂದನ್ನು ಸಿದ್ಧಪಡಿಸಿದ್ದಾರೆ. ಒಟ್ಟಿನಲ್ಲಿ ನಡೆದಿರುವ ಈ ಕೆಲಸದ ಹಿಂದೆ ಇರುವ ಶ್ರಮ-ಶ್ರದ್ಧೆ ಹಾಗೂ ಪ್ರಾಮಾಣಿಕತೆಗಳು ಅಭಿನಂದನೀಯವಾಗಿವೆ. ಕನ್ನಡನಾಡಿನಾಚೆಗಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳೂ, ಅಲ್ಲಲ್ಲಿನ ಭಾಷಾಪರಿಸರದಲ್ಲಿ ಎಂತಹ ಮೌಲಿಕವಾದ ಕೆಲಸವನ್ನು ಮಾಡಬಹುದೆನ್ನುವುದಕ್ಕೆ ಶ್ರೀನಿವಾಸ ಅವರ ಈ ಅನುವಾದ ಮಾದರಿಯಾಗಿದೆ. 610 ಪುಟಗಳ ಈ ಕೃತಿಯನ್ನು ಮದುರೆಯ ಕಾಮರಾಜ ವಿಶ್ವವಿದ್ಯಾಲಯವು ಪ್ರಕಟಿಸಿದೆ. ತೌಲನಿಕ ಅಧ್ಯಯನದ ಇಂದಿನ ಸಂದರ್ಭದಲ್ಲಿ ಶ್ರೀನಿವಾಸರ ಈ ಕೃತಿಗೆ ಮಹತ್ವದ ಸ್ಥಾನವಿದೆ ಎಂಬುದರಲ್ಲಿ ಸಂದೇಹವಿಲ್ಲ.

ಅನುಬಂಧ - 1

ಎಸ್. ವಿ. ವಿಮಲ

1982 ರ ಪ್ರಕಟಣೆಗಳು

ಕಾವ್ಯ

ಅರವಿಂದ ನಾಡಕರ್ಣಿ

ಸಂಗ್ರಹ ಕಾವ್ಯ : ಸುಂದರ ಪುಸ್ತಕ ಪ್ರಕಾಶನ, ಧಾರವಾಡ ; ಪು. ೧೫೬

ಅವಧಾನಿ, (ಜಿ. ಎಸ್.)

ಹೊತ್ತು ಮುಳುಗುವ ಮುನ್ನ : ಬಂಡಾಯ ಪ್ರಕಾಶನ, ಹೊನ್ನಾವರ (ಉ.ಕ.) ! ಪು. ೩೬

ಉಪ್ಪಿನ ಸಿದ್ದರಾಮ

ದೇವಾ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ ; ಪು. ೪೧

ಎಕ್ಕುಂಡಿ (ಎಸ್. ಆರ್.)

ಬೆಳ್ಳಕ್ಕಿಗಳು : ಬಯಲು ಸೀಮೆ ಪ್ರಕಾಶನ, ಬೆಂಗಳೂರು, ಪು. ೬೮

ಕೃಷ್ಣಕುಮಾರ್ (ಸಿ. ಪಿ.)

೧. ಶ್ರೀಕೃಷ್ಣಕರ್ಣಾಮೃತ ಸಾರ : ಚಿತ್ರಭಾನು ಪ್ರಕಾಶನ, ಮೈಸೂರು ; ಪು. ೨೮
೨. ನೂರೊಂದು : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೩೨

ಕೆಂಪಹನುಮಯ್ಯ (ಟಿ)

ಜಾನಪದ ಕವನ ಗುಚ್ಛ : ದಿಗ್ವಿಜಯ ಪ್ರಕಾಶನ, ಬೆಂಗಳೂರು ; ಪು. ೬೭

ಕೇದಾರನಾಥ ಕೋಮಲ್

ಅನು : ಟಿ. ಜಿ. ಪ್ರಭಾಶಂಕರ 'ಪ್ರೇಮಿ'

ಸೂರ್ಯನ ಸುತ್ತ : ಶರಣ ಪ್ರಕಾಶನ, ಬೆಂಗಳೂರು ; ಪು. ೩೭

ಕೇಶವ (ಎಂ. ಬಿ.)

ಸಿಡಿಕ್ಯಾಕ ಸಿಂಗಾರಿ : ಅಖಿಲ ಕರ್ನಾಟಕ ಕಬ್ಬಿಗರ ಕೂಟ, ಗದಗ ; ಪು. ೪೧

ಗಂಗಾಧರಾಚಾರ್ (ಹೆಚ್. ಹೆಚ್.)

ಗೆಲ್ಲಬೇಕು : ಗ್ರಂಥ ಗಂಗೋತ್ರಿ ಪ್ರಕಾಶನ, ಶ್ರೀರಂಗಪಟ್ಟಣ ; ಪು. ೬೨ + ೧೬

ಗೀತಾಚಾರ್ಯ ನಾ., ಎಲ್ಲಪ್ಪ ವೈ. ಸಂ.

ಕಾಣಿಕೆ : ಕರ್ನಾಟಕ ಸಂಘ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ; ಪು. ೪೮

ಗುಡಿಬಂಡೆ ಪೂರ್ಣಿಮ (ಸಂ.)

ಮುಂದೇನೆ ಸಖಿ ಮುಂದೇನೆ : ವಿದ್ಯಾನಂದ ಪ್ರಕಾಶನ, ಗುಡಿಬಂಡೆ ; ಪು. ೫೧

ಗುರುಪಾದ ಕೆ. ಹೆಗಡೆ

ವಾಸ್ತವ : ವಾಸ್ತವ ಪ್ರಕಾಶನ, ಸಾಗರ ; ಪು. ೫೪

ಗೋಕಾಕ್ (ವಿ. ಕೃ.)

ಭಾರತ ಸಿಂಧು ರಶ್ಮಿ (ಸೇ. ೧ ಮತ್ತು ೨) : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು ; ಪು. xl + ೫೭೩

ಚಂದ್ರಶೇಖರ ಪಾಟೀಲ

ಹೂವು ಹಣ್ಣು ತಾರೆ : ಸಂಕ್ರಮಣ ಪ್ರಕಾಶನ, ಧಾರವಾಡ ; ಪು. ೮೦

ಚನ್ನವೀರಯ್ಯ (ಸಿ. ಎನ್.)

ಬಿನತಿ : ಜ್ಞಾನ ವಾಹಿನಿ, ಬೆಂಗಳೂರು ; ಪು. ೬೩

ಚಿದಾನಂದ ನೀಲಕಂಠ ಪತ್ತಾರ ಮತ್ತು ಇತರರು

ನಮನ : ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಅಂಕಲಗಿ ; ಪು. ೫೨

ಚೆನ್ನಣ್ಣ ವಾಲಿಕಾರ

೧. ಬಂಡೆದ್ದ ದಲಿತರ ಬೀದಿ ಹಾಡುಗಳು : ದರ್ಪಣ ಪ್ರಕಾಶನ, ದೇವಗಾಂವ (ಬೆಳಗಾವಿ ಜಿಲ್ಲೆ) ; ಪು. ೮೪

೨. ಮಾದರ ಸಾಬವ್ವನ ಗೋರಿ ಗೀತೆ ; ಚಂದ್ರನಾಥ ಪ್ರಕಾಶನ, ಧಾರವಾಡ, ಪು. ೩೨

ಚೊಕ್ಕಮೂರ್ತಿ ಪಾಟೀಲ (ಸಂ.)

ಕಮ್ಮಟದ ಕವಿತೆಗಳು : ಅಭಯ ಪ್ರಕಾಶನ, ಹರಿಹರ ; ಪು. ೮ + ೪೨

ಜಯಂತ ಕಾಯ್ಕಿಣಿ

ಕೋಟಿ ತೀರ್ಥ : ಅಕ್ಷರ ಪ್ರಕಾಶನ, ಸಾಗರ ; ಪು. ೮ + ೮೮

ಜಯದೇವಿ ತಾಯಿ

ಬಂದೇವು ಕಲ್ಯಾಣಕೆ : ಕನ್ನಡ ಕೋಟೆ ಪ್ರಕಾಶನ, ಬಸವ ಕಲ್ಯಾಣ ; ಪು. ೪೪

ಜಾನಕೀ ತನಯ

ಪ್ರಿಯದರ್ಶಿ ಮತ್ತು ಕಿಸಾಗೋತಮಿ : ವಿದ್ಯಾಶಂಕರ ಪ್ರಕಾಶನ, ಮೈಸೂರು ; ಪು. ೫೨

ಜೈಪ್ರಕಾಶ್ (ಎಂ. ಎನ್.)

ಗೆಜ್ಜೆ ದನಿಗಳ ನಡುವೆ : ಆತ್ರೇಯ ಪ್ರಕಾಶನ, ಸಾಲಿಗ್ರಾಮ, ಪು ೬೬

ತಲೆಂಗಳ ರಾಮ ಕೃಷ್ಣಭಟ್ಟ

ರಾಜಮಕುಟ : ಭಾರದ್ವಾಜ ಪ್ರಕಾಶನ, ಮಂಗಳೂರು ; ಪು. ೧೭

ತಿಮ್ಮನಹಳ್ಳಿ ವೇಣುಗೋಪಾಲ್ (ಆರ್.)

ಸಿಡಿದೆದ್ದವರ ಒಂದು ಅಧ್ಯಾಯ : ಕೆಂಪು ದೀಪ ಪ್ರಕಾಶನ, ತಿಮ್ಮನಹಳ್ಳಿ ; ಪು. ೨೦ + ೩೬

ತೋರಣಗಟ್ಟೆ (ಆರ್.) ಓಬಳೇಶ್

ಹಂಬಲ : ಹೆಚ್. ಜಿ. ವೆಂಕಟೇಶ್ ಮತ್ತು ಇತರರು, ಭದ್ರಾವತಿ ; ಪು. ೪೨

ದಾಸೇಗೌಡ (ಜಿ. ವಿ.)

ಬದುಕು ಬರೆಯಿತು : ತೇಜಸ್ವಿನಿ ಪ್ರಕಾಶನ, ತುಮಕೂರು ; ಪು. ೧೦ + ೬೩

ದುಂಡಿರಾಜ್ (ಎಚ್)

ನಮ್ಮ ಗೋಡೆಯ ಹಾಡು : ಸ್ಫಟಿಕ ಪ್ರಕಾಶನ, ಮಂಗಳೂರು ; ಪು. ೪೦ + ೪

ನಾರಾಯಣ ಕಂಗಿಲ
ಮತ್ತೇನೆಂದರೆ : ಅಕ್ಷರ ಪ್ರಕಾಶನ, ಸಾಗರ ; ಪು. ೫೨

ನಾಗೇಶ ರಾಂಪೂರ, ಚನ್ನಪ್ಪ ಕಟ್ಟಿ (ಸಂ.)
ಎರಡು ಸೆಲೆ ಒಂದು ನೆಲೆ : ನೆಲೆ ಪ್ರಕಾಶನ, ಸಿಂದಗಿ ; ಪು. ೪೭

ನಿಸಾರ್ ಅಹಮದ್ (ಕೆ. ಎಸ್.)
ಅನಾಮಿಕ ಆಂಗ್ಲರು : ಬನಶಂಕರಿ ಪ್ರಕಾಶನ, ಬೆಂಗಳೂರು ; ಪು. ೨೪ + ೧೨೦

ನೀಲಗಂಗಾಚರಂತಿ ಮಠ
ಗೀತ ಬಸವ : ಅಮೃತ ಪ್ರಕಾಶನ, ಬೆಳಗಾವಿ ; ಪು. ೮೮

ನುಗಡೋಣಿ ಅಮರೇಶ ಹಳೆಮನಿ
ನೀನು ಅವರು ಪರಿಸರ : ಪ್ರೇಮ ಪ್ರಕಾಶನ, ರಾಯಚೂರು ; ಪು. ೯ + ೩೬

ಪುರಾಣಿಕ (ಡಿ. ವ್ಹಿ.) ಸಂ.
ಬೆಳ್ಳಿ ಮೂಡಲಿಲ್ಲ : ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಸಂಕೇಶ್ವರ ; ಪು. ೮೪

ಪೂರ್ವಾಚಾರ್ಯ (ಕ. ಭಾ.)
ಮುಕ್ತಜೀವ : ಸೂರ್ಯ ಪ್ರಕಾಶನ, ಸೊಲ್ಲಾಪುರ ; ಪು. ೫೪

ಪ್ರಭಾಕರ ಶಿಶಿಲ (ಸಂ.)
ಉಸಿರಿಲ್ಲದವರು : ಸಾಹಿತ್ಯ ಸಂಘ, ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ (ದ. ಕ.); ಪು. ೫೨

ಪೋಲೀಸ ಪಾಟೀಲ (ಬಿ. ಆರ್.)
ಕೆಂಡ ಉಗುಳುವವರು : ಸುರುಚಿ ನವ ಪ್ರಕಾಶನ, ಬನಹಟ್ಟಿ (ವಿಜಾಪುರ ಜಿಲ್ಲೆ) ; ಪು. ೪೮

ಬಸವನಗೌಡ ಪಾಟೀಲ (ಸಂ.)
ಹಿಂಗ ಬಿಟ್ರ ದೇಶ ಆಳ್ಯಾಳ : ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ ; ಪು. ೭ + ೪೭

ಬಸವರಾಜ ಪಕ್ಕುಂದ
ಶೋಕ ಸಭೆ : ಜನತಾ ಗ್ರಂಥಮಾಲೆ, ಧಾರವಾಡ ; ಪು. ೮೨ + ೪

ಬಾಪುಗೌಡ ಪಾಟೀಲ
ಕಟ್ಟಾಣಿ ಸತಿಯೆಂದು ಕರಪೇನ : ಕವಿತಾ ಪ್ರಕಾಶನ, ತಾಳಿಕೋಟೆ ; ಪು. ೭೩ + ೧೧

ಬುರ್ಲಿ (ಎಸ್. ಎ.)
ಆ-ರಾಮ : ಯಮುನಾ ಪ್ರಕಾಶನ, ಮದ್ರಾಸ್ ; ಪು. ೫೦

ಬೆಳ್ಳೆ ಚಂದ್ರಶೇಖರ ಶೆಟ್ಟಿ
ಕಡಲು : ಶಶಾಂಕ ಪ್ರಕಾಶನ, ಕುಂದಾಪುರ (ದ. ಕ.) ; ಪು. ೩೮ + ೧೨

ಬೇಂದ್ರೆ (ದ. ರಾ.)
ಪರಾಕಿ : ಸಮಾಜ ಪುಸ್ತಕಾಲಯ, ಧಾರವಾಡ ; ಪು. ೬೫

ಭಗತರಾಜ ನಿಜಾಮಕರ
ಇವನೊಬ್ಬ ಬೇರೆ ಹುಟ್ಟಿದ : ಬರಪ ಪ್ರಕಾಶನ, ರಾಯಚೂರು ; ಪು. ೪೭ + ೧೩

ಮಂದಣ್ಣ (ಎಂ. ಎಸ್.)
ನೆನಪಿನ ಬಳ್ಳಿ : ಮಾನವೀಯ ಪ್ರಕಾಶನ, ಬೆಂಗಳೂರು ; ಪು. ೧೬ + ೪೮

ಮಲ್ಲೇಶ ಬಾರ್ಕರ್, ಪ್ರಕಾಶ್ (ಎಸ್. ಎಂ.) (ಸಂ.)
ದುಂದುಭಿ : ಹೊಸಪೇಟೆ ಟೈಮ್ಸ್, ಹೊಸಪೇಟೆ ; ಪು. ೭೦

ಮಹೇಂದ್ರ ಪ್ರಸಾದ್
ಪ್ರಜ್ಞೆಯ ಕನಸುಗಳು : ಭಾನು ಪ್ರಕಾಶನ, ಬೆಂಗಳೂರು ; ಪು. ೧೨ + ೩೨

ಮುನಿವೆಂಕಟಪ್ಪ (ವಿ.)
ಕೆಂಡದ ನಡುವೆ : ಪಂಚಮ ಪ್ರಕಾಶನ, ಬೆಂಗಳೂರು ; ಪು. ೪೮

ಮೇಟಿ ಮುದಿಯಪ್ಪ
ಕಡಲಾಳದ ಮುತ್ತು : ಮೇಟಿ ಪ್ರಕಾಶನ, ಬೇವಿನಹಾಳ ; ಪು. ೩೦

ರಘುನಾಥ (ಸ.)
ಗತಿ : ಸಾಹಿತ್ಯ ಪ್ರಕಾಶನ, ಪಾಶ್ಚಾಪೂರ ; ಪು. ೪೨

ರವೀಂದ್ರ (ವಿ.) ಪಾಟೀಲ
ಕುದಿ : ವೀರಸಂಗ ಪ್ರಕಾಶನ, ಗುಲಬರ್ಗಾ ; ಪು. ೪೦

ರಾಮಚಂದ್ರ ಶರ್ಮ
ಈ ಶತಮಾನದ ನೂರು ಇಂಗ್ಲಿಷ್ ಕವನಗಳು : ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು ; ಪು. ೧೯೬

ರಾಮಾನುಜಮ್ (ಪಿ. ಎಸ್.)
ಆಯನ : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು ; ಪು. ೬೩

ರಾಮೇಶ್ವರ (ಎ. ಕೆ.)
ಪರಿಸರದ ಪದಗಳು : ಕವಿರಾಜ ಮಾರ್ಗ ಪ್ರಕಾಶನ, ಕಲಬುರ್ಗಿ ; ಪು. ೫೦

ರೇವಣ್ಣ (ಕೆ. ಎಂ.)
ಸೃಷ್ಟಿ-ಸ್ಥಿತಿ : ಸೃಜನ ಪ್ರಕಾಶನ, ಚಿಕ್ಕಮಗಳೂರು ; ಪು. ೫೨

ಲಕ್ಷ್ಮೀನಾರಾಯಣ ಭಟ್ಟ (ಎನ್. ಎಸ್.)
ಸುನೀತ (ಷೇಕ್ಸ್‌ಪಿಯರನ ಆಯ್ದ ಸಾನೆಟ್ಟುಗಳು) : ವರ್ಧಮಾನ ಪ್ರಕಾಶನ, ಬೆಂಗಳೂರು; ಪು. ೩೦ + ೫೪

ವರಹಾಲರಾವ್ (ಸಿ) ತೆಲುಗು ಮೂಲ
ಅನು : ಕೆ. ನಾರಾಯಣ ಸ್ವಾಮಿ
ನರಬಲಿ : ಸಿದ್ಧಾರ್ಥ ಪ್ರಕಾಶನ, ಹೊಸೂರು ; ಪು. ೫೪.

ವಸಂತ ಕುಷ್ಟಗಿ
ಗಾಂಧಾರಿಯ ಕರುಣೆ : ಶಿವಪುರ ಪ್ರಕಾಶನ, ಕಲಬುರಗಿ : ಪು. ೧೩ + ೭೬.

ವೆಂಕಮ್ಮ, ಆರ್. ಗೊರೇಬಾಳ
ಬೆಳಗು ; ಯಮುನಾರಾ, ಗೊರೇಬಾಳ, ಹುನಗುಂದ ; ಪು. ೨೪ + ೫೮.

ವಿಠ್ಠಲ ಪೆರುಮನೆ
    ಯಾತ್ರಿಕರು ಮತ್ತು ಆನೆಕಾಲು : ಹೆಜ್ಜೇನು ಪ್ರಕಾಶನ, ಧಾರವಾಡ ; ಪು. ೧೦ + ೯೬.

ವಿಜಯ ಪಾಟೀಲ (ಸಂ.)
    ಬಂತೋ ಬಂತು ಕನ್ನಡದ ದಂಡು : ವಿಮೋಚನಾ ಪ್ರಕಾಶನ, ಧಾರವಾಡ : ಪು. ೨೭.

ವಿಜಯಲಕ್ಷ್ಮಿ ಸುಬ್ಬರಾಜ್
    ತ್ರಿಶಂಕು : ಸತ್ರಸಾಲ ಪ್ರಕಾಶನ, ಬೆಂಗಳೂರು ; ಪು. ೫೬ + ೧೪.

ವೇಣುಗೋಪಾಲ ಸೊರಬ
    ಸುಳ್ಳು ಬದುಕು : ಸವಿತಾ ಪ್ರಕಾಶನ, ಕನಕಪುರ ; ಪು. ೮ + ೫೬.

ಶಶಿಕಲಾ ವಸ್ತ್ರದ
    ಪ್ರಶ್ನೆ : ದೀಪ್ತಿ ಪ್ರಕಾಶನ, ಚಿಂಚೋಳಿ ; ಪು. ೫೬.

ಶ್ರೀನಿವಾಸ ಜೋಶಿ
    ಪರಿಗ್ರಹಣ : ಪ್ರೇರಣಾ ಪ್ರಕಾಶನ, ಯರಗೇರಾ ; ಪು. ೧೯.

ಶ್ರೀನಿವಾಸ ಶೆಟ್ಟಿ
    ಮುಳ್ಳುಗಳು : ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ : ಪು. ೬೫.

ಶ್ರೀಪಾದ ಶೆಟ್ಟಿ
    ಪ್ರಿಯ ಶರಾವತಿ : ಅಂಕುರ ಪ್ರಕಾಶನ, ಹೊನ್ನಾವರ ; ಪು. ೫೬ + ೮.

ಸಣ್ಣಬಾಳಪ್ಪ ಹೊಸಮನಿ
    ಒಳದನಿ : ಮಂಜುಶ್ರೀ ಪ್ರಕಾಶನ, ಶಿವಮೊಗ್ಗ, ಪು. ೫೦.

ಸ್ವಾಮಿ (ಎಸ್. ಜಿ.)
    ಚೆಲುವೆ : ಪ್ರೀತಿ ಪ್ರಕಾಶನ, ರಾಯಚೂರು ; ೪೨.

ಸಿದ್ಧಲಿಂಗ ಪಟ್ಟಣಶೆಟ್ಟಿ
    ಮತ್ತೆ ಬಂದಿದ್ದಾಳೆ : ಸುಂದರ ಪುಸ್ತಕ ಪ್ರಕಾಶನ, ಧಾರವಾಡ ; ಪು. ೬೬.

ಸಿದ್ಧಲಿಂಗ ದೇಸಾಯಿ
    ಚಿಗರಿ : ಪ್ರತಿಭಾ ಗ್ರಂಥಮಾಲೆ, ಧಾರವಾಡ ; ಪು. ೪೭.

ಸುಜನಾ
    ಒಂದೆ ಸೂರಡಿಯಲ್ಲಿ : ಮೈತ್ರೀ ಪ್ರಕಾಶನ, ಮೈಸೂರು ; ಪು. ೧೩ + ೨೦೫.

ಸುಜನಾ
    ಇಬ್ಬನಿ ಆರಿತು : ಸಾಧನ ಸಾಹಿತ್ಯ ಮಂದಿರ, ಮೈಸೂರು : ಪು. ೧೯೪ + ೧೨.

ಸುಜನಾ
    ಉಡಿದಾರ : ಮೈತ್ರೀ ಪ್ರಕಾಶನ, ಮೈಸೂರು ; ಪು. ೧೧೯.

ಸುಭಾಸ ಸವದಿ
    ತಿಳನ್ನೈತಿ ನಿನ್ನೆಳಕ : ಸುಭಾಸ ಸವದಿ, ನಾಗರಾಳ ; ಪು. ೫೬.

ಸುಮನ ಬಾಗಿಲು ಕೋಟೆ (ಯಜುರ್ವೇದಿ)
    ಸುಮಬಂಧನ : ಶ್ರೀ ಬತ್ತೇರೇಶ ಪ್ರಕಾಶನ, ಕಲಬುರಗಿ ; ಪು. ೧೩ + ೫೦ + ೨.

ಹರಿಕೃಷ್ಣ ಭರಣ್ಯ
ಕುತುಬ್ ಮಿನಾರ್ : ಸಾಧನ ಪ್ರಕಾಶನ, ಪಾಣಾಜೆ : ಪು. ೧೦ + ೩೨.

ಹರಿನಾರಾಯಣ ಮಾಡಾವು
ಅಂಗರಾಗ : ಕನ್ನಡ ಸಂಘ, ಸಂತ ಫಿಲೋಮಿನಾ ಕಾಲೇಜು, ಪುತ್ತೂರು ; ಪು. ೬ + ೪೨.

ನಾಟಕ

ಅಮರಹಂಸ
ಚಿಂತಾಕೃತಿ : ಶೈಲಿ ಪ್ರಕಾಶನ, ಬೆಂಗಳೂರು ; ಪು. ೪೮.

ಅಮರಹಂಸ
ಜಾರಿದ ಹೆಜ್ಜೆ : ಶೈಲಿ ಪ್ರಕಾಶನ, ಬೆಂಗಳೂರು ; ಪು. ೪೪.

ಕುಮಾರ ಪ್ರೇಮ
ಮೃತ್ಯು : ಅಭಿವ್ಯಕ್ತಿ ಪ್ರಕಾಶನ, ಹೊನ್ನಾಳಿ ; ಪು. ೨೪.

ಕೃಷ್ಣತಂತ್ರಿ (ಆರ್.)
ತರೀಕೆರೆಯ ಗಂಡುಗಲಿ : ಅಶ್ವಿನಿ ಪ್ರಿಂಟರ್ಸ್, ತರೀಕೆರೆ ; ಪು. ೫೦.

ಕೆರಳ್ಳಿ ಗುರುನಾಥ ರೆಡ್ಡಿ
ಒಂದು ಗೀತರೂಪಕ ಇನ್ನೊಂದು ನಾಟಕ : ವಿಚಾರ ಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ ; ಪು. ೩೫ + ೫.

ಗೌರೀಶ ಕಾಯ್ಕಿಣಿ
ಆಕಾಶ ನಾಟಕಗಳು : ಅಕ್ಷರ ಪ್ರಕಾಶನ, ಸಾಗರ ; ಪು. ೮ + ೬೬.

ಚಂದ್ರಶೇಖರ (ಬಿ.)
ಸಂಚಯನ : ಕಲಾಗಂಗೋತ್ರಿ, ಬೆಂಗಳೂರು ; ಪು. ೨೪ + ೪.

ಚಂದ್ರಶೇಖರ ಕಂಬಾರ (ಸಂ.)
ಕನ್ನಡ ನಾಟಕ ಸಂಪುಟ ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೨೪ + ೧೨೫೨.

ಚನ್ನವೀರಯ್ಯ (ಸಿ. ಎನ್.)
ಏನ್ನಂತಪ್ಪ ಕಾಲ : ಜ್ಞಾನವಾಹಿನಿ, ಬೆಂಗಳೂರು ; ಪು. ೫೫.

ಪ್ರಸನ್ನ
ತದ್ರೂಪಿ : ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು ; ಪು. ೧೧೧.

ಬಾಪೂಗೌಡ ಪಾಟೀಲ
ಸತ್ಯನ ಸಂಗತಿ : ಕವಿತಾ ಪ್ರಕಾಶನ, ತಾಳಿಕೋಟೆ ; ಪು. ೨೭.

ಬಿರಾದಾರ (ಮ. ಗು.)
ಜೀವಂತ ಗೋರಿಗಳು ಮತ್ತು ಹದ್ದುಗಳು ; ಚಿತ್ಕಳಾ ಪ್ರಕಾಶನ, ಕಲಬುರ್ಗಿ ; ಪು. ೬೬.

ಮೇಘ ಮಿತ್ರ
ದಾಟುವವರು : ಮಿತ್ರ ಭಾರತಿ ಪ್ರಕಾಶನ, ಜಮಖಂಡಿ ; ಪು. ೮೬ + ೮.

ರಘುಸುತ

ಸಪ್ತರ್ಷಿಗಳು : ಲಕ್ಷ್ಮೀ ಪ್ರಸನ್ನ ಪ್ರಕಾಶನ, ಮತ್ತಿಕೆರೆ ; ಪು. ೪೬.

ರಾಮಚಂದ್ರದೇವ

ರಥ ಮುಸಲ : ಅಕ್ಷರ ಪ್ರಕಾಶನ, ಸಾಗರ ; ಪು. ೭೬ + ೪.

ರಾಮದಾಸ್

ಗರುಡಗಂಬ : ಜ್ಯೋತಿಷ್ಮತಿ ಪ್ರಕಾಶನ, ಅಜ್ಜರಕಾಡು ; ಪು. ೪೮.

ವಸಂತ ಕವಲಿ

ಎನ್ನ ಮುದ್ದಿನ ಮುದ್ದಣ : ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು ; ಪು. ೭೮.

ವಿಜಯಾ

ಏಳು ನಾಟಕಗಳು : ಇಳಾ ಪ್ರಕಾಶನ, ಬೆಂಗಳೂರು ; ಪು. ೨೦ + ೨೨೮.

ವಿಶ್ವನಾಥ ರಾವ್ (ಟಿ.)

ಧರ್ಮವೀರ ಗುರುಗೋವಿಂದ ಸಿಂಹ : ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು ; ಪು. ೧೦೭.

ವೀರಪ್ಪ ಮೊಯ್ಲಿ (ಎಂ.)

1. ಪ್ರೇಮವೆಂದರೆ : ಪು. ೩೯.
2. ಮಿಲನ : ಪು. ೪೮ + ೨.

—ವರ್ಧಮಾನ ಪ್ರಕಾಶನ, ಬೆಂಗಳೂರು.

ವೀರನಾಯಕ (ಹೆಚ್.ವಿ.)

ದುರ್ಗದ ಸಿಂಹಿಣಿ ಓಬವ್ವ : ಶ್ರೀ ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ (ಚಿತ್ರದುರ್ಗ ಜಿಲ್ಲೆ) ; ಪು. ೧೦೮.

ಶೂದ್ರ ಶ್ರೀನಿವಾಸ್

ಗಾಂಧಾರಿ : ಶೂದ್ರ ಪ್ರಕಾಶನ, ಬೆಂಗಳೂರು ; ಪು. ೯೨.

ಶ್ರೀನಿವಾಸ್ (ನಾ.)

ಎರಡು ನಾಟಕಗಳು : ಅರ್ಪಿತ ಪ್ರಕಾಶನ, ಮೈಸೂರು ; ಪು. ೨೨.

ಶ್ರೀರಂಗ

ದಾರಿ ಯಾವುದಯ್ಯಾ ವೈಕುಂಠಕೆ : ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಪು. ೬೦.

ಶೌಕತ್ ಅಲಿ (ಜಿ.)

ಎಲ್ಲಾರೂ ಅಂಥವ್ರ : ಯಮುನಾ ಪ್ರಕಾಶನ, ಬೇಲೇರಿ : ಪು. ೨೮ + ೪.

ಸನದಿ (ಬಿ. ಎ.)

ನೀಲಾಂಬಿಕಾ : ಸಂಗಮ ಪ್ರಕಾಶನ, ಮುಂಬಯಿ ; ಪು. ೬೫.

ಸ್ವಾಮಿ (ಬಿ. ಎಸ್.)

ಬಿಟ್ಟೆನೆಂದರೆ ಬಿಡದೀ ಮಾಯೆ : ನವೀನ ಪ್ರಕಾಶನ, ಬೆಂಗಳೂರು ; ಪು. ೭೧.

ಸಣ್ಣ ಕತೆ

ಕಮಲಾ ಹಂಪನಾ
1. ರೆಕ್ಕೆ ಮುರಿದಿತ್ತು : ಸುಂದರ ಪುಸ್ತಕ ಪ್ರಕಾಶನ, ಧಾರವಾಡ ; ಪು. ೧೨೦.
2. ಚಂದನಾ : ವರ್ಧಮಾನ ಪ್ರಕಾಶನ. ಬೆಂಗಳೂರು ; ಪು. ೬೬.

ಗಂಗಾ ಪಾದೇಕಲ್
ಪುಲಪೇಡಿ ಮತ್ತು ಇತರ ಕತೆಗಳು : ಕನ್ನಡ ಸಂಘ, ಸಂತ ಫಿಲೋಮಿನಾ ಕಾಲೇಜು, ಪುತ್ತೂರು ; ಪು. ೯೧.

ಜಯಂತ ಕಾಯ್ಕಿಣಿ
ತೆರೆದಷ್ಟೇ ಬಾಗಿಲು : ಅನನ್ಯ ಪ್ರಕಾಶನ, ಮೈಸೂರು : ಪು. ೧೨೮.

ತಿಪ್ಪೇಸ್ವಾಮಿ (ಅನು)
ಗಂಗಾ-ಕಾವೇರಿ : ಪುಸ್ತಕ ಚಿಲುಮೆ, ಮೈಸೂರು ; ಪು. ೮ + ೨೩೪.

ತಿರುಮಲೇಶ್ (ಕೆ. ವಿ.)
ನಾಯಕ ಮತ್ತು ಇತರರು : ಅಕ್ಷರ ಪ್ರಕಾಶನ, ಸಾಗರ ; ಪು. ೧೦೦.

ನಟರಾಜ್ (ಎಂ. ಬಿ.)
ನೋಟಕ : ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ ; ಪು. ೧೭೫ + ೬.

ಪಾಟೀಲ (ಎಸ್. ಪಿ.) ಅನು :
ಮಹಿಳೆಯರ ಕೆಲವು ಮರಾಠಿ ಕಥೆಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೧೨ + ೮.

ಬಸವರಾಜ ಮಹಾಂತ ಪೂರ (ಟಿ.)
ಬೆಳೆ ಮೇದ ಬೇಲಿಗಳು : ಮಹಾದೇವಿ ಪ್ರಕಾಶನ, ಆಳಂದ (ಗುಲ್ಬರ್ಗಾ ಜಿಲ್ಲೆ) ; ಪು. ೬೨.

ರತ್ನಾಕರ ವೈದ್ಯ
ನಾಲ್ಕು ತರಂಗ : ಜ್ಞಾನ ಜ್ಯೋತಿ ಹಳ್ಳಿ ರಾಯನ ಪ್ರಕಾಶನ. ಅಲ್ಲಿಪುರ ; ಪು. ೧೨೪ + ೮.

ರಾಮಚಂದ್ರ ಶರ್ಮ
ಆಯ್ದ ಕಥೆಗಳು : ಅಕ್ಷರ ಪ್ರಕಾಶನ, ಸಾಗರ ; ಪು. ೨೪೦ + ೧೬.

ಲಕ್ಷ್ಮೇಶ್ವರ (ಎ. ಎಫ್.)
ಜೀವನ ನಕ್ಕಿತು : ನವೀನ ಸಾಹಿತ್ಯ ಪ್ರಕಟನಾಲಯ, ಹುಬ್ಬಳ್ಳಿ ; ಪು. ೮೬ + ೮.

ಶಾಂತಿನಾಥ ದೇಸಾಯಿ
ಪರಿವರ್ತನೆ : ಅನನ್ಯ ಪ್ರಕಾಶನ, ಮೈಸೂರು ; ಪು. ೧೧೨.

ಶಾಮಸುಂದರ (ಬಿ.)
ಕೆಂಡಸಂಪಿಗೆ : ಮಿತ್ರ ಪ್ರಕಾಶನ, ಮೈಸೂರು ; ಪು. ೪ + ೧೩೦.

ಶಿರಾಳಿ (ಎಮ್. ಜಿ.) ಇಂಗ್ಲಿಷ್‌ಮೂಲ
ಅನು : ಇಂದಿರಾಪ್ರಿಯ
ಕುಂಭಪುರದ ಬಹದ್ದೂರ : ಅಖಿಲ ಕರ್ನಾಟಕ ಕಬ್ಬಿಗರ ಕೂಟ, ಗದಗ ; ಪು. ೪೩

08394

ಹಾಡ್ಲಹಳ್ಳಿ ನಾಗರಾಜ್

ನಕ್ರ ಹಾಗೂ ನಾನು : ಭವಾನಿಪ್ರಕಾಶನ, ಮಡಿಕೇರಿ ; ಪು. ೯೮

ನಿರಂಜನ (ಪ್ರ. ಸಂ.)
ಅನು : ಸಿ. ಎಚ್. ಪ್ರಹ್ಲಾದರಾವ್

ತಾತನ ಹುಟ್ಟುಹಬ್ಬ : ಪು. ೪ + ೧೫೦

ನಿರಂಜನ (ಪ್ರ.ಸಂ.)
ಅನು : ಹೆಚ್. ಎಸ್. ರಾಘವೇಂದ್ರರಾವ್

ಬಾಲಮೇಧಾವಿ : ಪು. ೪ + ೨೧೦

ನಿರಂಜನ (ಪ್ರ.ಸಂ.)
ಅನು : ಕೆ. ವಿ. ನಾರಾಯಣ

ಇಬ್ಬರು ಗೆಳೆಯರು : ಪು. ೪ + ೧೭೬

ನಿರಂಜನ. (ಪ್ರ.ಸಂ.)
ಅನು : ಎಸ್ಸಾರ್ಕೆ

ಅಬಿಂದಾಸಯಿಾದ್ : ಪು. ೪ + ೧೮೧

ನಿರಂಜನ (ಪ್ರ. ಸಂ.)
ಅನು : ಬಸವರಾಜನಾಯ್ಕರ

ನಿಗೂಢಸೌಧ : ಪು. ೪ + ೨೦೦

ನಿರಂಜನ (ಪ್ರ.ಸಂ.)
ಅನು : ಶ್ರೀಕಾಂತ

ಬೆಳಗಾಗುವ ಮುನ್ನ : ಪು. ೨೦ + ೧೫೭

ನಿರಂಜನ (ಪ್ರ.ಸಂ.)
ಅನು : ವಾಸುದೇವ

ಮರಳುಗಾಡಿನ ಮದುವೆ : ಪು. ೪೮ + ೧೭೦

ನಿರಂಜನ (ಪ್ರ.ಸಂ.)
ಅನು : ಈಶ್ವರಚಂದ್ರ

ಕಿವುಡು ವನದೇವತೆ : ಪು. ೩೮ + ೧೬೮

ನಿರಂಜನ (ಪ್ರ ಸಂ.)
ಅನು : ಸಿ.ಕೆ. ನಾಗರಾಜರಾವ್

ಸಾವಿಲ್ಲದವರು : ಪು. ೧೬ + ೨೧೨

(ಮೇಲಿನ ಈ ಒಂಭತ್ತು ಪುಸ್ತಕಗಳು ವಿಶ್ವಕಥಾಕೋಶ ಮಾಲಿಕೆಯ ಕೊನೆಯ ಕಂತಿನ ಸಂಪುಟಗಳು), ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

ಕಾದಂಬರಿ

ಅಶೋಕಬಾಬು
ನೆಲಕಚ್ಚಿದ ನೌಕೆ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೪+೧೩೨

ಆದ್ಯರಾಮಾಚಾರ್ಯ
ಧನಂಜಯ : ವರದರಾಜ ಪ್ರಕಾಶನ, ಬೆಂಗಳೂರು ; ಪು. ೨೩೬+೧೮+೪

ಆರ್ಯಾಂಬಪಟ್ಟಾಭಿ
ಕುಣಿಕೆ : ಬಾಪ್ಕೋ ಪ್ರಕಾಶನ, ಬೆಂಗಳೂರು ; ಪು. ೬೦

ಇಂದಿರಾ (ಎಂ.ಕೆ.)
ತಾಳಿದವರು : ಹೇಮಂತ ಸಾಹಿತ್ಯ, ಬೆಂಗಳೂರು : ಪು. ೧೪೦

ಈಚನೂರು ಶಾಂತ
ಬಂಧಿತರು ; ದೊಡ್ಡಮನೆ ಪ್ರಕಾಶನ, ಈಚನೂರು

ಎರಿಕ್‌ಮರಿಯಾರೇಮಾರ್ಕ್
ಅನು : ಪಡುಕೋಣೆ ರಮಾನಂದ
ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ ; ಬಾಪ್ಕೊ ಪ್ರಕಾಶನ. ಬೆಂಗಳೂರು; ಪು. ೩೩೨+೮

ಕೃಷ್ಣರಾಜು (ಟಿ.ಎನ್.)
ಪಶ್ಚಿಮಾಯಣ ; ಮನೋಹರ ಗ್ರಂಥಮಾಲೆ, ಧಾರವಾಡ ; ಪು. ೧೪೪

ಕೊಂಡಮುದಿ ಶ್ರೀರಾಮಚಂದ್ರಮೂರ್ತಿ
ಅನು : ವಂಶಿ
ಕಿರುಗೆಜ್ಜೆಯ ಮರುದನಿ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೮+೨೧೨

ಗಾಯತ್ರಿಮೂರ್ತಿ
ಹಂಬಲ : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೧೩೨+೮

ಗೀತಾನಂದ
ಶವದ ಸಾಕ್ಷಿ : ಪ್ರಶಾಂತ ಪ್ರಕಾಶನ, ಮೈಸೂರು ; ಪು. ೧೦೬

ಚನ್ನವೀರಯ್ಯ (ಸಿ. ಎನ್.)
ಮೂಕವೇದನೆ : ಜ್ಞಾನವಾಹಿನಿ, ಬೆಂಗಳೂರು ; ಪು. ೩೨೪

ಚನ್ನವೀರಯ್ಯ (ಸಿ.ಎನ್.)
ಮುಸುಕು ಮಾಂಗಲ್ಯ : ಜ್ಞಾನವಾಹಿನಿ, ಬೆಂಗಳೂರು ; ಪು. ೨೩೧

ಚನ್ನವೀರಯ್ಯ (ಸಿ.ಎಸ್.)
ಸಿಡಿದೆದ್ದ ಸಿ.ಐ.ಡಿ. ಜ್ಞಾನವಾಹಿನಿ: ಬೆಂಗಳೂರು ಪು. ೧೫೪

ಚೈತನ್ಯ
ಬಯಸಿ ಬಂದ ಕೊಲೆ : ಪ್ರಶಾಂತ ಪ್ರಕಾಶನ, ಮೈಸೂರು : ಪು. ೮೦

ಚೈತನ್ಯ
    ಮರಳಿದ ಮೋಹಿನಿ : ಪ್ರಶಾಂತ ಪ್ರಕಾಶನ, ಮೈಸೂರು, ಪು. ೧೦೨

ಚಂದ್ರಶೇಖರ ಕಂಬಾರ
    ಸಿಂಗಾರವ್ವ ಮತ್ತು ಅರಮನೆ : ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು ಪು. ೨೦೨

ಛಾಯಾದೇವಿ ನಂಜಪ್ಪ
    ಹೂವು ಗಂಧ : ಪ್ರದೀಪ ಪ್ರಕಾಶನ, ಬೆಂಗಳೂರು ; ಪು. ೧೫೬

ಛಾಯಾದೇವಿ ನಂಜಪ್ಪ
    ಸ್ನೇಹಬಿಂದು : ಛಾಯಾ ಪ್ರಕಾಶನ, ತುಮಕೂರು ; ಪು. ೧೯೫

ಜಯಂಪುಕೃಷ್ಣ ; ಅನು : ವಂಶಿ
    ಕುಂದಣದ ಗೊಂಬೆ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು : ಪು. ೪ + ೮೦

ತಲ್ವಾಡಿ (ಬಿ. ಎಸ್.)
    ಕಣಿವೆ : ಭಾವನಾ ಪ್ರಕಾಶನ, ಮೈಸೂರು ; ಪು. ೧೩೦

ತನುಜ
    ತಿರುವು ; ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೧೪೪

ತಿರುಮಲೇಶ್ (ಕೆ. ವಿ.)
    ಆರೋಪ : ನೆಲಮನೆ ಪ್ರಕಾಶನ, ಮೈಸೂರು : ಪು. ೧೬೬

ತಿರುಮಲೇಶ್ (ಕೆ. ವಿ.)
    ಅನೇಕ : ಅಕ್ಷರ ಪ್ರಕಾಶನ, ಸಾಗರ ; ಪು. ೪೮

ತ.ರಾ.ಸು.
    ದುರ್ಗಾಸ್ತಮಾನ : ಕಾವ್ಯಾಲಯ, ಮೈಸೂರು ; ಪು. ೬೯೮

ನಚಿಕೇತ
    ರಕ್ತಾಕಾಂಕ್ಷಿ ; ಪ್ರತಾಪ ಪ್ರಕಾಶನ, ಮೈಸೂರು ; ಪು. ೧೦೨

ನಾರಾಯಣ (ಪಿ. ವಿ.)
    ನಿರ್ಧಾರ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೪ + ೧೪೨

ನೀರಜಾಬಾಪು
    ಹಸಿರುತೀರ : ನವಸುಮ ಪ್ರಕಾಶನ, ಬೆಂಗಳೂರು ; ಪು. ೧೧೪ + ೪

ಪರಮಶಿವ ನಡುಬೆಟ್ಟ
    ಪುನರುತ್ಥಾನ : ಗುರುಕೃಪಾ ಪ್ರಕಾಶನ, ಘಟ್ಟವಾಡಿಪುರ ; ಪು. ೭ + ೧೪೪

ಪರಿಮಳ ಸೋಮೇಶ್ವರ್ ; ರೂಪಾಂತರ : ಸಿರುಪಮಾ ಅಸಮಗಾನ ; ಹೇಮಂತ ಸಾಹಿತ್ಯ
    ಬೆಂಗಳೂರು ; ಪು. ೧೩೩.

ಪ್ರಕಾಶ್ (ಜಿ.)
    5 ಮ್ಯಾನ್ ಕಿಲ್ಲರ್ಸ್ : ಚೌದುರಿ ಪಬ್ಲಿಕೇಷನ್ಸ್, ಮೈಸೂರು ; ಪು. ೪೩

ಪೋಲ್ಕಂಪಲ್ಲಿ ಶಾಂತಾದೇವಿ
ಅನು : ಕೆ. ಆರ್. ಪದ್ಮಜೆ
    ವರಮಾಲ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೪ + ೧೫೬

ಪ್ರೇಮಾಭಟ್
    ಗೊಂದಲ : ಗೀತಾ ಬುಕ್ ಹೌಸ್, ಮೈಸೂರು ; ಪು. ೧೪೦

ಬರಗೂರು ರಾಮಚಂದ್ರಪ್ಪ
    ಬೆಂಕಿ : ಅಜಂತಸಾಹಿತ್ಯ, ಬೆಂಗಳೂರು ; ಪು. ೧೨೦

ಬಾಲು (ಡಿ. ಆರ್.)
    ಮೋಹಿತ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೧೧೬ + ೪

ಮಾಧವರಾವ್ (ಆರ್. ಬಿ.)
    ತಾಂಡವನೃತ್ಯ : ಆರ್. ಬಿ. ಪ್ರಕಾಶನ, ಬೆಂಗಳೂರು ; ಪು. ೯೦

ಮಾಲತಿ ಚಂದೂರ್
ಅನು : ಮಿಸ್ ಸಂಪತ್
    ಥಿಂಕ್ : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೧೫೪ + ೮

ಮಹಾದೇವಯ್ಯ (ಟಿ. ಎನ್.)
    ತೋಟದಮನೆ : ಮಿತ್ರಪ್ರಕಾಶನ, ಮೈಸೂರು ; ಪು. ೪ + ೧೦೮

ಮುಕ್ತಾ (ಸಿ. ಎನ್.)
    ದುಂಬಿ ಕೊರೆದ ಹೂವು : ನಂದಾ ಪಬ್ಲಿಕೇಷನ್ಸ್, ಮೈಸೂರು ; ಪು. ೧೯೨

ಮುಗಳಿ (ರಂ. ಶ್ರೀ.)
    ಅಗ್ನಿವರ್ಣ : ಉಷಾ ಸಾಹಿತ್ಯಮಾಲೆ, ಮೈಸೂರು ; ಪು. ೧೬ + ೨೯೨

ಮೊಗಸಾಲೆ (ನಾ)
    ಪ್ರಕೃತಿ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೮ + ೧೨೮

ಯಾಮಿನಿ ಸರಸ್ವತಿ
ಅನು : ರಾಮಣ್ಣ ಆರ್ಡಿಜ್ಜೆ
    ಆಕಾಶ ಮಲ್ಲಿಗೆ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೮ + ೧೧೨

ರಮಾ ಪಾಂಡುರಂಗಂ
ಅನು : ವೆಂಕಟಸುಬ್ಬರಾವ್
    ಸೃಜನ : ವಸುಮ ಪ್ರಕಾಶನ, ಬೆಂಗಳೂರು ; ಪು. ೮ + ೧೦೨

ರಾಜಶೇಖರ ಭೂಸನೂರುಮಠ
    ಅಟ್ಲಾಂಟಿಸ್ : ಐ.ಬಿ.ಎಚ್ ಪ್ರಕಾಶನ, ಬೆಂಗಳೂರು ; ಪು. ೧೭೬ + ೪

ರಾಮಲಕ್ಷ್ಮಿ ನೇರಳ್ಳ
ಅನು : ವಂಶಿ
    ದೀಪ ಬೆಳಗಿತು : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೪ + ೧೨೪

ರಾಧಾದೇವಿ (ಹೆಚ್. ಜಿ.)
    ಸಿರಿದೇವಿ ನಕ್ಕಾಗ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು ; ಪು. ೧೮೦

ರಾಧಾದೇವಿ (ಹೆಚ್. ಜಿ.)
    ಅಮೃತ ಘಳಿಗೆ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು ; ಪು. ೧೫೮

ರಾಮಕೃಷ್ಣ (ಎಂ)
    ಅಂತರಗಂಗೆ : ಗೀತಾ ಬುಕ್ ಹೌಸ್, ಮೈಸೂರು ; ಪು. ೭೭೨

ರಾಮದಾಸ್

ಮುಕ್ತಪ್ರೇಮ : ಜ್ಯೋತಿಸ್ಮೃತಿ ಪ್ರಕಾಶನ, ಅಜ್ಜರಕಾಡು ; ಪು. ೧೩೦

ರಾಸುಮಣಿ

ಕೃಷ್ಣಕಾಂತ : ಮಣಿ ಪ್ರಕಾಶನ, ಮೈಸೂರು ; ಪು. ೪೮

ರುದ್ರಮೂರ್ತಿ ಶಾಸ್ತ್ರಿ (ಸು)

ಪ್ರೇಮಗಾನ : ಪರಿಮಳ ಬುಕ್ ಹೌಸ್, ಬೆಂಗಳೂರು ; ಪು. ೧೩೨

ಲಲಿತಾನಾಯಕ (ಬಿ. ಟಿ.)

ನೋಟ–ಬೆಲೆ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು, ೮ + ೧೨೭

ವಾಣಿ

ಅಲೆ ನೆಲೆ : ಡಿ. ವಿ. ಕೆ. ಮೂರ್ತಿ, ಮೈಸೂರು ; ಪು. ೨೪೬

ವಿಜಯಸಾಸನೂರ

ಗೀತಸಂಗೀತ : ಎಸ್. ಬಿ. ಪ್ರಕಾಶನ, ಬೆಂಗಳೂರು ; ಪು. ೯೫

ವಿಜಯಶ್ರೀ

ಚಂದ್ರಿಕಾಚಕೋರಿ : ಭಾರತೀ ಪ್ರಕಾಶನ, ಮೈಸೂರು ;

ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಸುಳಿಗೆ ಸಿಕ್ಕವರು : ಪ್ರಜಾ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ; ಪು. ೨೨೮ + ೬

ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಪ್ರೇಮರಶ್ಮಿ ; ಪ್ರಕಾಶಸಾಹಿತ್ಯ, ಬೆಂಗಳೂರು ; ಪು. ೧೧೭

ವೆಂಕಟರಾಮ್ (ತ. ಪು.)

ಪ್ರತಿಫಲ : ಹೇಮಂತ ಸಾಹಿತ್ಯ, ಬೆಂಗಳೂರು ; ಪು. ೧೪೦

ಶಕುಂತಲಾ ಬಾಲು

ಅನು : ಅಂದನೂರು ಶೋಭ

ಆರತಿ : ವಾಗ್ದೇವಿ ಪುಸ್ತಕಗಳು, ಮೈಸೂರು ; ಪು. ೨೧೧ + ೪

ಶಿವರಾಂ (ಎಂ.) [ರಾಶಿ]

ಪಂಪಾಪತಿಯ ಕೃಪೆ : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೧೪೪ + ೪

ಶ್ರೀಕೃಷ್ಣ ಆಲನಹಳ್ಳಿ

ಭುಜಂಗಯ್ಯನ ದಶಾವತಾರಗಳು : ನೆಲಮನೆ ಪ್ರಕಾಶನ, ಮೈಸೂರು ; ಪು. ೮ + ೫೨೮

ಶ್ರೀಧರ (ಎಸ್)

ಸ್ಫೋಟ : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೭೬

ಶೈಲಜಾ ಪ್ರಕಾಶ್

ಆಸೆಗೊಂದು ಆಸರೆ : ಶಿವರಂಜನಿ ಪಬ್ಲಿಕೇಷನ್, ಮೈಸೂರು ; ಪು. ೧೩೫

ಸರ್ ಆರ್ಥರ್ ಕಾನನ್‌ಡಾಯ್ಲ್

ಅನು : ವಾಸುದೇವರಾವ್.

ಷರ್ಲಾಕ್ ಹೋಮ್ಸ್‌ರ ರಕ್ತಪರಿಶೋಧನೆ ; ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು ; ಪು. ೧೩೩

ಸರೋಜ ನಾರಾಯಣರಾವ್.
ವಾನಪ್ರಸ್ಥ : ಸುರುಚಿ ಪ್ರಕಾಶನ, ಮೈಸೂರು ; ಪು. ೧೯೨

ಸಾಲಿರಾಮಚಂದ್ರ ರಾಯ
ಯದುಪತಿ : ಸುಂದರ ಪುಸ್ತಕ ಪ್ರಕಾಶನ, ಧಾರವಾಡ; ಪು. ೧೩೮.

ಸಾಯಿಸುತೆ
ವಸಂತದ ಚಿಗುರು : ವಾಸವಾಂಬ ಪ್ರಕಾಶನ, ಬೆಂಗಳೂರು ; ಪು. ೨೫೯.

ಸಾಯಿಸುತೆ
ಬಿಳಿ ಮೋಡಗಳು : ವಾಸವಾಂಬ ಪ್ರಕಾಶನ, ಬೆಂಗಳೂರು ; ಪು. ೨೭೦.

ಸುಂದರ ನಾಡಕರ್ಣಿ
ವೇಷ : ಮಿತ್ರ ಪ್ರಕಾಶನ, ಮೈಸೂರು; ಪು. ೪ + ೧೦೪

ಸುಜಾತ
ಅನು : ಭಾಷ್ಯಂ ತನುಜೆ
ಸ್ವರ್ಗದೀಪ : ಶೇಪಲತ ಪ್ರಕಾಶನ, ಬೆಂಗಳೂರು ; ಪು. ೧೫೪.

ಸುಭಾಶ ಚಿಟಗುಪ್ಪಕರ್
ಸಂಕೋಲೆ : ಆಕ್ರೋಶ ಪ್ರಕಾಶನ, ಗುಲಬರ್ಗಾ ; ಪು. ೧೦೯.

ಸುನೀತಿ ಕೃಷ್ಣಸ್ವಾಮಿ
1. ಗಿಣಿ ರಾಗಿಣಿ ವಿರಾಗಿಣಿ : ಜ್ಯೋತಿ ಪ್ರಕಾಶನ, ಬೆಂಗಳೂರು ; ಪು. ೧೬೮.
2. ಸಂಧ್ಯಾಕಿರಣ : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೧೯೬ + ೮.

ಸೋಮಣ್ಣವರ್ (ಎಸ್. ವಿ.)
ಬ್ಲೂಬೇಬಿ : ರಾಜ್ಯೋದಯ ಪ್ರಕಾಶನ, ಚಿಕ್ಕಮಗಳೂರು ; ಪು. ೮೪.

ಹರ್ಮನ್ ಮೆಲ್ವಿಲ್
ಅನು : ವಿ. ಸೀತಾರಾಮಯ್ಯ
ಮೋಬಿಡಿಕ್ : ಪ್ರಸಾರಾಂಗ, ಬೆಂ. ವಿ. ವಿ., ಬೆಂಗಳೂರು ; ಪು. ೪೭೨ + ೧೨

ಹೂಲಿ ಶೇಖರ್
ಗುದು ಮುರಿಗಿ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೨೧೫.

ವಿಮರ್ಶೆ

ಅರ್ಜುನ ಪುರಿ ಅಪ್ಪಾಜಿಗೌಡ
ಕುವೆಂಪು ಸಾಹಿತ್ಯ ಪರಿಚಯ : ಶ್ರೀ ಸಿದ್ಧಾರೂಢ ಪ್ರಕಾಶನ, ಮದ್ದೂರು ; ಪು. ೫೪.

ಅನಂತರಾಮಯ್ಯ, ಆರ್. ಎಲ್. ಮತ್ತು ಇತರರು
ಟಾಲ್‌ಸ್ಟಾಯ್ : ಕ. ಅ. ಸಂಸ್ಥೆ, ಮೈ. ವಿ. ವಿ. ನಿ., ಮೈಸೂರು ;

ಅಶೋಕ (ಟಿ. ಪಿ.)
ಕಾರಂತರ ಕಾದಂಬರಿಗಳಲ್ಲಿ ಗಂಡು-ಹೆಣ್ಣು : ಅಕ್ಷರ ಪ್ರಕಾಶನ, ಸಾಗರ ; ಪು. ೯೮.

ಆರ್ವಿಯಸ್ ಸುಂದರಂ

ತೆಲುಗು ಭಾಷೆ ಮತ್ತು ಸಾಹಿತ್ಯ : ಪ್ರಸಾರಾಂಗ, ಮೈ. ವಿ. ವಿ., ಮೈಸೂರು. ಪು. ೧೬ + ೧೪೮.

ಇನಾಂದಾರ್ (ವಿ. ಎಂ.)

ಪಾಶ್ಚಾತ್ಯ ಕಾವ್ಯ ಮೀಮಾಂಸೆ : ಉಷಾಸಾಹಿತ್ಯ ಮಾಲೆ, ಮೈಸೂರು ; ಪು. ೮ + ೬೧೯

ಕಂಬಿ (ವ್ಹಿ. ಎಸ್.)

ಚಾಮರಸನ ಅಮನಸ್ಕ ಕಾವ್ಯ : ಶ್ರೀ ವಿದ್ಯಾ ಪ್ರಕಾಶನ, ಧಾರವಾಡ

ಕಮಲಾ ಹಂಪನಾ

ಜೈನ ಸಾಹಿತ್ಯ ಪರಿಸರ : ವರ್ಧಮಾನ ಪ್ರಕಾಶನ, ಬೆಂಗಳೂರು ; ಪು. ೩ + ೧೬೯.

ಕೀರ್ತಿನಾಥ ಕುರ್ತಕೋಟಿ

ಯಶೋಧರ ಚರಿತೆಯ ಕಾವ್ಯ ತಂತ್ರ : ಪ್ರಸಾರಾಂಗ, ಬೆಂ.ವಿ.ವಿ , ಬೆಂಗಳೂರು ಪು.೩೬.

ಕೃಷ್ಣಕುಮಾರ್ (ಸಿ.ಪಿ.)

ಕುವೆಂಪು ಸಾಹಿತ್ಯ - ಕೆಲವು ಮುಖಗಳು : ಚಿತ್ರಭಾನು ಪ್ರಕಾಶನ, ಮೈಸೂರು ; ಪು. ೮-೭೨

ಕೊಟ್ರಶೆಟ್ಟಿ (ಎಂ.ಬಿ.)

ವೀರಶೈವ ದರ್ಶನ ಹಾಗೂ ಸಾಹಿತ್ಯ ಸಮೀಕ್ಷೆ : ಸಿರಿಗನ್ನಡ ಪ್ರಕಾಶನ, ಧಾರವಾಡ ; ಪು. ೮-೯೬

ಗೌರೀಶ ಕಾಯ್ಕಿಣಿ

ಪ್ರಜ್ಞಾನೇತ್ರದ ಬೆಳಕಿನಲ್ಲಿ : ಕಾಲಗತಿ ಪ್ರಕಾಶನ, ರಾಯಬಾಗ ; ಪು. ೧೧೨-೮

ಚಿಕ್ಕಣ್ಣ (ಕಾ.ತ.) ಸಂ.

ಕನಕಕಿರಣ : ಕಾಳಿದಾಸ ಸಾಂಸ್ಕೃತಿಕ ಸಂಘ, ಬೆಂಗಳೂರು ; ಪು. ೩೨೫

ಜಯಪ್ರಕಾಶ ಮಾವಿನಕುಳಿ

ಅವಲೋಕನ : ಸ್ಫಟಿಕ ಪ್ರಕಾಶನ, ಮಂಗಳೂರು ; ಪು. ೧೨೮

ಜವರೇಗೌಡ (ದೇ)

ಕುವೆಂಪು ಸಾಹಿತ್ಯ : ಕೆಲವು ಅಧ್ಯಯನಗಳು (ಸಂ 3) ಸಹ್ಯಾದ್ರಿ ಪ್ರಕಾಶನ, ಮೈಸೂರು ಪು. ೪-೨೫೬

ನಾರಾಯಣ (ಪಿ.ವಿ.)

ವಚನವ್ಯಾಸಂಗ : ಭಾಗ್ಯಲಕ್ಷ್ಮಿ ಪ್ರಕಾಶನ. ಬೆಂಗಳೂರು ; ೧೫೬ + ೮

ಭಗವಾನ್ (ಕೆ.ಎಸ್.)

ಬದಲಾವಣೆ : ಮಹಿಮ ಪ್ರಕಾಶನ, ಮೈಸೂರು ; ಪು. ೮ + ೨೦೦

ಮೂರ್ತಿರಾವ್ (ಎ.ಎನ್.)

ಸಾಹಿತ್ಯ ಮತ್ತು ಸತ್ಯ : ಡಿ.ವಿ.ಕೆ. ಮೂರ್ತಿ, ಮೈಸೂರು ; ಪು. ೧೩೪

ರಮಜಾನ್ ದರ್ಗಾ

ಸಾಹಿತ್ಯ ಮತ್ತು ಸಮಾಜ : ಭಾರತೀಯ ಪ್ರಕಾಶನ, ಮೈಸೂರು ; ಪು. ೯೬ + ೧೦

ಲಿಂಗಯ್ಯ (ಡಿ.)
ಕಾವ್ಯಚಿಂತನ : ದಿನಕರ ಪ್ರಕಾಶನ, ಬೆಂಗಳೂರು ; ಪು. ೬೬

ವಿಜಯಕುಮಾರ್ ಆರ್. ಮತ್ತು ಇತರರು
ಕಾದಂಬರಿ ; ಕನ್ನಡ ಸಂಘ, ಸೇಂಟ್ ಜೋಸೆಫ್ ಕಾಮರ್ಸ್ ಕಾಲೆಜು, ಬೆಂಗಳೂರು ; ಪು. ೯ + ೧೪೯

ವಿಮಲಾರಾಮರಾವ್
ದಾಸ್ತ್ರೊಯೆವಸ್ಕಿ : ಪ್ರಸಾರಾಂಗ, ಮೈ.ವಿ.ವಿ.ನಿ., ಮೈಸೂರು ; ಪು. ೧೬ + ೧೫೨

ವೆಂಕಟರಾಯಾಚಾರ್ಯ (ಕೆ.)
ಸಾಹಿತ್ಯ ದೀಪಿಕಾ : ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು ; ಪು. ೨೨೪

ವೆಂಕಟರಾಮಪ್ಪ (ಕೆ.)
ಕವಿ ನೇಮಿಚಂದ್ರ ; ಅರ್ಕಾವತಿ ಪ್ರಕಾಶನ, ಮೈಸೂರು ; ಪು. ೯೨ + ೪

ಶಾಂತಾ (ಕೆ.) ಸಂ.
ಮಾಲಾರ್ಪಣೆ : ಎ.ಆರ್.ಕೃ. ಸಂಸ್ಕೃತಿಪೀಠ, ಬೆಂಗಳೂರು : ಪು. ೧೮೭

ಶಿವರಾಮು ಕಾಡನಕುಪ್ಪೆ (ಸಂ)
ಶಿವರಾಮಕಾರಂತ - ಹತ್ತು ಅಧ್ಯಯನಗಳು ; ಭಾರತೀ ಪ್ರಕಾಶನ, ಮೈಸೂರು ; ಪು. ೧೫೨

ಶಿವರುದ್ರಪ್ಪ (ಜಿ.ಎಸ್.)
ಪ್ರತಿಕ್ರಿಯೆ : ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು ; ಪು. ೧೪೦

ಶಿವರುದ್ರಪ್ಪ (ಜಿ.ಎಸ್.) ಸಂ.
1. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : (ಸಂಪುಟ 5) ೫೦೬ + ೧೬
2. ವಿವಿಧ : ಪು. ೯೨ + ೧೨
3. ದಶವಾರ್ಷಿಕ ಸಾಹಿತ್ಯ ಸಮೀಕ್ಷೆ : ಪು. ೨೧೬ + ೧೨
4. ಭಾರತೀಯತೆ ಮತ್ತು ಕನ್ನಡ ಲೇಖಕ
5. ಸಾಹಿತ್ಯವಾರ್ಷಿಕ – 1980 : ಪು. ೩೧೦ + ೧೬
– ಕನ್ನಡ ಅಧ್ಯಯನ ಕೇಂದ್ರ, ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು
6. ಸಾಹಿತ್ಯ ವಿಮರ್ಶೆ - 1979 : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ; ಪು. ೧೨೬ + ೮

ಶ್ರೀಕಂಠಕೂಡಿಗೆ
ಒದಗೆ : ದಖಿನ್ ಪಬ್ಲಿಷರ್ಸ್, ಬೆಂಗಳೂರು : ಪು. ೪ + ೧೪೩

ಶೇಷಗಿರಿರಾವ್ (ಎಲ್.ಎಸ್.)
ಫ್ರಾನ್ಜ್‌ಕಾಫ್ಕ : ಪ್ರಸಾರಾಂಗ, ಮೈ.ವಿ.ವಿ.ನಿ., ಮೈಸೂರು ; ಪು. ೧೦ + ೧೨೦

ಸನದಿ (ಬಿ.ಎ.)
ಜನಕಾವ್ಯದೃಷ್ಟಿ : ಕಾಲಗತಿ ಪ್ರಕಾಶನ, ರಾಯಭಾಗ ; ಪು. ೨ + ೧೦೧

ಸಿದ್ಧಲಿಂಗ ಪಟ್ಟಣಶೆಟ್ಟಿ
ಅನುಶೀಲನ : ಅನನ್ಯ ಪ್ರಕಾಶನ, ಮೈಸೂರು ; ಪು. ೧೨೨

ಸುಜನಾ
ಪರಂಪರೆ : ಮೈತ್ರಿ ಪ್ರಕಾಶನ, ಮೈಸೂರು ; ಪು. ೧೬೨

ಹೆಗಡೆ (ಎಲ್.ಆರ್.) ಸಂ.
ಕುಮಾರವ್ಯಾಸ : ಜ್ಞಾನಸಾಧನ ಗ್ರಂಥಮಾಲೆ, ಕುಮಟಾ; ಪು. ೮೨

ಹಂಪ ನಾಗರಾಜಯ್ಯ (ಸಂ)
1. ಲಕ್ಷ್ಮೀಶಕವಿ : ಪು. ೮+೧೦೪
2. ರುದ್ರಭಟ್ಟಕವಿ : ಪು. ೧೩೩+೮
—ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಜೀವನ ಚರಿತ್ರೆ, ಸಂಭಾವನಾ ಗ್ರಂಥ

ಅನಂತಕುಲಕರ್ಣಿ
ವಿಠ್ಠಲಭಾಯಿ ಪಟೇಲ್ : ಶ್ರೀ ದ್ವೈಪಾಯನ ಟ್ರಸ್ಟ್, ಮುಂಬಯಿ ; ಪು. ೧೪೦.

ಅರಳುಮಲ್ಲಿಗೆ ಪಾರ್ಥಸಾರಥಿ
1. ಕಲಾತಪಸ್ವಿ: ರಾಘವೇಂದ್ರ ಪ್ರಕಾಶನ, ಬೆಂಗಳೂರು; ಪು. ೧೩೬.
2. ಶ್ರೀಪಾದರಾಜರು: ಶ್ರೀಪಾದರಾಜಮಠ, ಮುಳಬಾಗಿಲು, ಪು. ೧೫೦.

ಆದ್ಯರಾಮಾಚಾರ್ಯ
ರಚನಾ: ವರದರಾಜ ಪ್ರಕಾಶನ, ಬೆಂಗಳೂರು; ಪು. ೧೦೪.

ಇನಾಂದಾರ್ (ವಿ. ಎಂ.)
ಶಿವರಾಮ ಕಾರಂತ (ಬದುಕು-ಬರೆಹ) ; ಉಷಾ ಸಾಹಿತ್ಯ ಮಾಲೆ, ಮೈಸೂರು; ಪು. ೮+೧೪೩.

ಕಾಮಾಕ್ಷಮ್ಮ (ಬಿ.)
ಕಸ್ತೂರಿ ಬಾ: ಕಾರ್ತಿಕೇಯ ಪ್ರಕಾಶನ, ಹರಿಹರ; ಪು. ೧೬೮+೮.

ಕೀರ್ತಿನಾಥ ಕುರ್ತಕೋಟಿ
ದ. ರಾ. ಬೇಂದ್ರೆ: ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು; ಪು. ೩೨+೪.

ಗದಗಕರ (ಎನ್. ಎಸ್.)
ಓ. ಪ್ರತಿಭಾನ್ವಿತ ಕನ್ನಡಿಗರು: ಸುಂದರ ಪುಸ್ತಕ ಪ್ರಕಾಶನ, ಧಾರವಾಡ; ಪು. ೧೨೦.

ಮೂರ್ತಿರಾವ್ (ವರ್ಣಿ
ಸಾಹಿತ್ಯ ಪೂರ್ಣ ಕರ್ವೆ : ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು : ಪು. ೮೭+೧೨

ರಮಜಾನ್ ದರ್ಗಾ ಸಸಮನಿ
ಸಾಹಿತ್ಯ ಘುಗುಡ್ಡದ ಶರಣಮ್ಮನವರು: ವೀರಶೈವ ಅಧ್ಯಯನ ಸಂಸ್ಥೆ, ಗದಗ; ಪು. ೮೨.

ಚನ್ನಪ್ಪ (ಎಸ್.) ಸಂ.
ಬೇಂದ್ರೆ ಸ್ಮರಣೆ: ಅರ್ಕಾವತಿ ಪ್ರಕಾಶನ, ಮೈಸೂರು; ಪು. ೨೮.

ಚಿನ್ನಪ್ಪ (ಬಿ. ಎನ್.)
ನಾಟಕರತ್ನ ಗುಬ್ಬಿ ವೀರಣ್ಣ; ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು; ೧೦೦ + ೧೨.

ಜವರೇಗೌಡ (ದೇ.)
1. ಅಮೆರಿಕಾಗಾಂಧಿ: ನರೇಶ್ ಅಂಡ್ ಕಂಪೆನಿ, ಬೆಂಗಳೂರು; ಪು. ೧೯೭.
2. ಯಾತ್ರಿಕರು: ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು; ಪು. ೧೬೦ + ೧೬.

ಪರಮಶಿವಯ್ಯ (ಜೀ. ಶಂ.)
ಕಲಾಸಾಧಕ: ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು; ಪು. ೫೫ + ೬.

ಪ್ರಭುಶಂಕರ
ಬೆರಗು: ಅಪರ್ಣಾ ಪ್ರಕಾಶನ, ಮೈಸೂರು; ಪು. ೯೪ + ೮.

ಪಾಟೀಲ ಪುಟ್ಟಪ್ಪ
ಸರ್ ಸಾಹೇಬರು; ವೀರಶೈವ ಅಧ್ಯಯನ ಸಂಸ್ಥೆ, ಗದಗ; ಪು. ೧೨೨.

ಮಾಗಿ (ಬಿ. ಎಂ.)
ನಾಗರಾಳ ದೊಡ್ಡಪ್ಪನವರು: ವೀರಶೈವ ಅಧ್ಯಯನ ಸಂಸ್ಥೆ, ಗದಗ; ಪು. ೭೮.

ಮಾಲಗಿತ್ತಿ (ವ್ಹಿ.ಸಿ.)
ಜಿ. ಎಸ್. ದಂಡಾವತಿಮಠರು: ವೀರಶೈವ ಅಧ್ಯಯನ ಸಂಸ್ಥೆ, ಗದಗ; ಪು. ೫೬.

ಮುಗಳಿ (ರಂ. ಶ್ರೀ.)
ಜೀವನ ರಸಿಕ: ಉಷಾ ಸಾಹಿತ್ಯ ಮಾಲೆ, ಮೈಸೂರು; ಪು. ೮ + ೧೮೩.

ನಿಷ್ಣುಮೂರ್ತಿ (ಹೆಚ್. ಸಿ.)
ಗೋಪಾಲಗೌಡ ಶಾಂತವೇರಿ: ಅನನ್ಯ ಪ್ರಕಾಶನ, ಮೈಸೂರು; ಪು. ೧೨೪.

ಶ್ರೀನಿವಾಸಯ್ಯ (ಹೊ)
ಎನ್. ಎಸ್. ಹರ್ಡೀಕರ್: ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು; ೯೧ + ೧೨.

ಶಾಂತಾದೇವಿ ಮಾಳವಾಡ
ಭಾರತದ ಮಾನಸ ಪುತ್ರಿಯರು: ಪ್ರತಿಭಾ ಗ್ರಂಥಮಾಲೆ, ಧಾರವಾಡ; ಪು. ೧೭೧.

ಸರೋಜ್ ಮೋಹನ್ ಮಿಶ್ರ
ಅನು: ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ, ಮಾಣಿಕ ಬಂದ್ಯೋಪಾಧ್ಯಾಯ: ಸಾಹಿತ್ಯ ಅಕಾಡೆಮಿ, ಹೊಸದೆಹಲಿ; ಪು. ೯೨.

ಸಿದ್ದಯ್ಯ ಪುರಾಣಿಕ
ಮಹಾದೇವಿ: ಕ. ಅ. ಪೀಠ, ಕ.ವಿ.ವಿ., ಧಾರವಾಡ, ಪು. ೯೦.

ಹರಿಹರಪ್ರಿಯ
ಕನ್ನಡದ ಹೇಮಾಹೇಮಿಗಳು: ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು; ಪು. ೧೧೨.

ಹಿರೇಮಲ್ಲೂರು ಈಶ್ವರನ್

ವಲಸೆ ಹೋದ ಕನ್ನಡಿಗನ ಕಥೆ: ಸುರುಚಿ ಪ್ರಕಾಶನ, ಮೈಸೂರು; ಪು. ೮ + ೧೪೪.

ಕವಿತಾಕೃಷ್ಣ (ಸಂ.)

ವಿಜಯುವಂದನ: ಬಿ. ಎಸ್. ಮಂಜುನಾಥನ್, ತುಮಕೂರು; ಪು. ೯೮.

ಕೃಷ್ಣರಾಯ (ಶಾ. ಮಂ.) ಸಂ.

ತ.ರಾ.ಸು. ಬದುಕು-ಬರೆಹ : ವಿಶ್ವಭಾರತೀ ಪ್ರಕಾಶನ, ಮಡಂಗಾವ್ (ಗೋವಾ); ಪು˴ ೫೧೨:

ಜ್ಯೋತಿ ಹೊಸೂರ
ಬಸವರಾಜ ಮಲಶೆಟ್ಟಿ } ಸಂ.
ನಿಂಗಣ್ಣ ಸಣ್ಣಕ್ಕಿ

ಬೆಳುವಲ: ಕಾಲಗತಿ ಪ್ರಕಾಶನ, ರಾಯಬಾಗ; ಪು. ೨೦ + ೫೧೬.

ಲಠ್ಠೆ (ಎಂ. ಎಸ್.) ಸಂ.

ಜಾನಪದ ಸಂಪದ : ಎಂ. ಎಸ್. ಸುಂಕಾಪುರ ಅಭಿನಂದನ ಸಮಿತಿ, ಕಲಬುರ್ಗಿ; ಪು. ೩೮೮.

ವಸಂತ ಪಾಟೀಲ
ಭೂಸರೆಡ್ಡಿ (ಎಸ್. ಎಸ್.) } ಸಂ.

ನಾಡಭೂಷಣ: ಮುರುಘಾಮಠ, ಧಾರವಾಡ; ಪು. ೧೩೪ + ೩೫.

ಶಾಂತಾದೇವಿ ಕಣವಿ
ಚೆನ್ನಕ್ಕ ಎಲಿಗಾರ } ಸಂ.
ಮಾಲತಿ ಪಟ್ಟಣಶೆಟ್ಟಿ

ಪ್ರಶಾಂತ: ವಾಗ್ದೇವಿ ಪುಸ್ತಕಗಳು, ಮೈಸೂರು; ಪು. ೨೨೪ + ೧೨.

ಸೀತಾರಾಮಯ್ಯ (ಎಂ. ವಿ.)
ಶೇಷಶಾಸ್ತ್ರಿ (ಆರ್.) } ಸಂ

ಮಣಿಹ : ಬಿ, ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ; ಪು. ೪೩೨ + ೧೬

ಪ್ರವಾಸ ಸಾಹಿತ್ಯ, ಪ್ರಬಂಧ

ಅನಂತರಾಮು (ಕೆ.)

ಸಕ್ಕರೆಯ ಸೀಮೆ : ಅನಂತ ಪ್ರಕಾಶನ, ಮೈಸೂರು ; ಪು. ೧೨ + ೭೪೪

ಶಿವರಾಮ ಕಾರಂತ

ಪೂರ್ವದಿಂದ ಅತ್ಯಪೂರ್ವಕ್ಕೆ : ಅಕ್ಷರ ಪ್ರಕಾಶನ, ಸಾಗರ ; ಪು. ೨೩೭ + ೧೦

ಧಾರವಾಡಕರ (ರಾ.ಯ)

ತೂರಿದ ಚಿಂತನೆಗಳು ; ಧಾರವಾಡಕರ. ರಾ.ಯ., ಧಾರವಾಡ ; ಪು. ೭ + ೧೫೫

ಮಣಿ
ಕಂಡಿದ್ದು-ಕೇಳಿದ್ದು ; ಗುರುಕೃಪಾ ಪ್ರಕಾಶನ, ಬೆಂಗಳೂರು ; ಪು. ೮ + ೧೪೪

ವೆಂಕಟಾಚಲಶಾಸ್ತ್ರಿ (ಟಿ. ವಿ.)
ಸದ್ದೆಂತೆಂ ಬರಗಂಡ ; ಮಿತ್ರ ಪ್ರಕಾಶನ, ಮೈಸೂರು ; ಪು. ೮ + ೫೬

ವೇಣುಗೋಪಾಲ ಸೊರಬ
ಸಮುದಾಯ ಮತ್ತು ರಾಜಕಾರಣ ; ಮಾನವೀಯ ಪ್ರಕಾಶನ, ಬೆಂಗಳೂರು; ಪು. ೮ + ೫೬

ಶಿವಾನಂದರಾವ್ (ಬಿ. ಪಿ.)
ಸಾಹಿತ್ಯ ಮತ್ತು ಸಾಮಾಜಿಕ ಬದಲಾವಣೆ : ಶೀತಲ್ ಪ್ರಕಾಶನ, ಕುಮಟಾ ; ಪು. ೫೬ + ೮

ಶ್ರೀರಂಗರಾಜು (ಎಚ್.ವಿ.)
ವೇಲ್ಸ್‌ದಿನಚರಿಯಿಂದ ; ತ. ವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೮ + ೧೭೮

ಸಂಪಾದಿತ ಕೃತಿಗಳು

ಕೃಷ್ಣರಾವ್ (ಕೆ. ಎಂ.) ಸಂ.
ಕುಮಾರವ್ಯಾಸ (ವಿರಾಟ ಪರ್ವ ಸಂಗ್ರಹ) ಸಿಂಧು ಶಯನ ಪ್ರಕಾಶನ, ಬೆಂಗಳೂರು ; ಪು. ೧೨೬

ಪಾಟೀಲ (ಎಸ್. ಪಿ.) ಸಂ.
ಹಸ್ತಿಮಲ್ಲ ವಿರಚಿತ ಪೂರ್ವ ಪುರಾಣಂ : ಅಭಿನಂದನ ಪ್ರಕಾಶನ, ಧಾರವಾಡ ; ಪು. ೫೬

ಮಲ್ಲಿಕಾರ್ಜುನ ಶಿ. ಲಠ್ಠೆ. (ಸಂ)
ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರ ವಚನಗಳು : ವೀರಶೈವ ಅಧ್ಯಯನ ಸಂಸ್ಥೆ, ಗದಗ ; ಪು. ೩೬ + ೨೬೭.

ಮಂಜಪ್ಪ ಶೆಟ್ಟಿ (ಎಂ. ಪಿ.) ಸಂ.
ಪಾಯಣ್ಣ ವ್ರತಿ ವಿರಚಿತ ಸಮ್ಯಕ್ತ್ವ ಕೌಮುದಿ : ಕ. ಅ. ಸಂಸ್ಥೆ, ಮೈ.ವಿ.ವಿ.ನಿ. ಮೈಸೂರು ; ಪು. ೫೫ + ೧೯೬.

ಮಂಜುನಾಥನ್ (ಜಿ. ಜಿ.) ಸಂ.
ನಾಗವ ವಿರಚಿತ ಮಾಣಿಕಸ್ವಾಮಿ ಚರಿತ್ರೆ : ಕ.ಅ. ಸಂಸ್ಥೆ, ಮೈ.ವಿ.ವಿ.ನಿ. ಮೈಸೂರು ; ಪು. ೪೨ + ೮೬.

ರಾಘವೇಂದ್ರರಾವ್ (ಕೆ.) ಸಂ.
ವೃತ್ತ ವಿಲಾಸ ವಿರಚಿತ ಧರ್ಮ ಪರೀಕ್ಷೆ : ಕ.ಅ. ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು ; ಪು. ೧೬ + ೩೪ + ೨೦೦.

ರಾಜೇಗೌಡ (ಹ.ಕ.) ಸಂ.
ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರನ ಕಾವ್ಯ ; ಕ.ಅ. ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು ; ಪು. ೩೦ + ೩೧೪.

ಪಾಲಿ (ಎಂ. ಎನ್.) ಸಂ.

ಕವಿಗಂಗಾಧರ ವಿರಚಿತ ಸಾಲೋಟಗಿ ಶ್ರೀ ಶಿವಯೋಗೀಶ್ವರ. ಡಂಗುರ ಪದಗಳು : ವೀರಶೈವ ಅಧ್ಯಯನ ಸಂಸ್ಥೆ, ಗದಗ ; ಪು. ೧೪ + ೧೧೧

ಶಿರೂರ (ಬಿ. ವ್ಹಿ)

ಜಕ್ಕಣ್ಣಯ್ಯನ ನಿರಾಳ ಮಂತ್ರ ಗೋಪ್ಯ : ವೀರಶೈವ ಅಧ್ಯಯನ ಸಂಸ್ಥೆ, ಗದಗ ; ಪು. ೨೪ + ೨೦೫.

ಸುಂಕಾಪುರ (ಎಂ. ಎಸ್.) ಸಂ.

ಕೆಸ್ನೂರ ದೇವರ ಸ್ವರ ವಚನಗಳು : ವೀರಶೈವ ಅಧ್ಯಯನ ಸಂಸ್ಥೆ, ಗದಗ ; ಪು. ೮ + ೧೧೨

ಸಂಶೋಧನೆ

ಗುಂಜಾಳ (ಎಸ್.ಆರ್.) ಉತ್ತಂಗಿ ಚೆನ್ನಪ್ಪನವರು ದೇವನ ಕೃತಿಗಳ ಸಮೀಕ್ಷೆ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ಪು. ೧೨ + ೩೨೮

ತಪಸ್ವೀ ಕುಮಾರ್ (ನಂ)

ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ : ಪ್ರಸಾರಾಂಗ, ಮೈ.ವಿ.ವಿ ನಿ., ಮೈಸೂರು ; ಪು. ೧೦ + ೨೦೫.

ನೇಗಿನಹಾಳ (ಎಂ. ಬಿ.)

ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ :

ರುಕ್ಮಿಣಿ ಪರ್ವತಿ.

ಅಂಬಿಕಾತನಯದತ್ತರ ಭಾವಗೀತೆಗಳು : ಉಷಾಸಾಹಿತ್ಯ ಮಾಲೆ, ಮೈಸೂರು ; ಪು. ೨೦ + ೨೫೬.

ವಿಜಯಲಕ್ಷ್ಮಿ (ಆರ್. ಎನ್.)

ಕನ್ನಡ ಸಾಂಗತ್ಯ ಪ್ರಕಾರ (ಒಂದು ಸಂಕ್ಷಿಪ್ತ ಸಮೀಕ್ಷೆ) : ಪ್ರಸಾರಾಂಗ, ಮೈ ವಿ.ವಿ.ನಿ., ಮೈಸೂರು ; ಪು. ೮ + ೧೦೯.

ವಿದ್ಯಾಶಂಕರ (ಎಸ್.)

ವೀರಶೈವ ಪುರಾಣಗಳು-ಒಂದು–ಅಧ್ಯಯನ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೪೭೬ + ೧೮ + ೧೮

ಶಂಕರನಾರಾಯಣ (ತೀ.ನಂ.)

ಕಾಡು ಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು : ಪ್ರಸಾರಾಂಗ, ಮೈ.ವಿ.ವಿ.ನಿ., ಮೈಸೂರು ; ಪು. ೮ + ೨೧೦

ಶಂಕರನಾರಾಯಣ (ಎಚ್. ಎಮ್.)

ಶ್ರೀಹರಿಹರದೇವಾಲಯ : ಶಾರದಾ ಮಂದಿರ, ಮೈಸೂರು ; ಪು. ೧೬ + ೪೬೮

ಶೇಷಶಾಸ್ತ್ರಿ (ಆರ್.)

ಕರ್ನಾಟಕದ ವೀರಗಲ್ಲುಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೨೪ + ೩೬೯

ಶೇಷಶಾಸ್ತ್ರಿ (ಆರ್.)
ಶಾಸನ ಪರಿಚಯ : ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು ; ಪು. ೧೪೦

ಸಂಧ್ಯಾರೆಡ್ಡಿ (ಕೆ. ಆರ್.)
ಕನ್ನಡ ಜನಪದ ಕಥೆಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೨ + ೫೪೪

ಜಾನಪದ

ಕಾಶೀಪುಟ್ಟ ಸೋಮಾರಾಧ್ಯ ಮತ್ತು ವೀರಣ್ಣ ರಾಜೂರ (ಸಂ)
ಪರಸಂಗಗಳು : ಮಂಗಳ ಪ್ರಕಾಶನ, ಧಾರವಾಡ, ಪು. ३೬ + ೨೨೬

ಕ್ಯಾತನಹಳ್ಳಿ ರಾಮಣ್ಣ
ಗೊಂದಲಿಗರು ; ಒಂದು ಅಧ್ಯಯನ : ಕ.ಅ. ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು, ಪು. ೧೪ + ೧೦೨

ಚಿದಾನಂದಮೂರ್ತಿ (ಎಂ.)
ಪೂರ್ಣ ಸೂರ್ಯಗ್ರಹಣ ; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು; ಪು. ३೨ + ೨೨೨ + ೨೪ Plates.

ಜೀನಹಳ್ಳಿ ಸಿದ್ದಲಿಂಗಪ್ಪ
ಜಾನಪದ ಸಂಯೋಜನೆ : ಪ್ರೇಮಪ್ರಕಾಶನ, ಜೀನಹಳ್ಳಿ ; ಪು. ೧೧೨ + ೧೨

ತೇಜಸ್ವಿ ಕಟ್ಟೀಮನಿ (ಸಂ)
ರಿವಾಯತ ಪದಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೨೪

ದಾಸೇಗೌಡ (ಜಿ. ವಿ.) ಸಂ.
ನಾನು ಯಾರು ? : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೭೨

ನಳಿನಿ (ಎಂ. ಬಿ.) ಸಂ.
ಕಾಡುಮಲ್ಲಿಗೆ : ಕ.ಅ. ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು ; ಪು. ೧೮ + ೮೨

ನಾಗೇಗೌಡ (ಎಚ್.ಎಲ್.)
ಹೆಳವರು ಮತ್ತು ಅವರ ಕಾವ್ಯಗಳು : ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು ; ಪು. ३೭೮ + ೬೪

ಪದ್ಮಪ್ರಸಾದ್ (ಕಾವ್ಯಜೀವಿ)
ಕೋಲಾಟಗಳು ಮತ್ತು ಕೋಲು ಪದಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೧೦ + ३೪

ಬಸವರಾಜ ಮಲಶೆಟ್ಟಿ (ಸಂ)
ಇಜಿಯಣ್ಣನ ಹಾಡು : ಯುವಕರ ಸಂಘ, ರಾಮನಗರ ; ಪು. ೧೭ + ೧೨೬.

ಮತಿಘಟ್ಟ ಕೃಷ್ಣಮೂರ್ತಿ (ಸಂ.)
ಗೃಹಿಣೀ ಗೀತೆಗಳು : (ಸಂ. ೨) ಮತಿಘಟ್ಟ ಕೃಷ್ಣಮೂರ್ತಿ. ಬೆಂಗಳೂರು ; ಪು. ೧೧೮೪;

ಮಲ್ಲಿಕಾರ್ಜುನ ಶಿ. ಲಕ್ಕೆ
ಶಿವರಾಜ ಮಾದೇವಪ್ಪ } ಸಂ.

ಏನಾರಾ ತಿಳಕೊಳ್ಳಲಿ : ರಮೇಶ ಪ್ರಕಾಶನ, ಕೋನಾಪುರ, ಗುಲಬರ್ಗಾ ; ಪು. ೧೧೦.

ರಾಜೇಂದ್ರ (ಡಿ. ಕೆ.)

ಜಾನಪದ ಸಂಪದ : ತಳಗವಾದಿ ಪ್ರಕಾಶನ, ಮೈಸೂರು ; ಪು. ೪ + ೧೫೨.

ಲಿಂಗಯ್ಯ (ಡಿ.)

ಜನಪದ ಕಾವ್ಯ ಸಂಪಾದ : ದಿನಕರ ಪ್ರಕಾಶನ, ಬೆಂಗಳೂರು ; ಪು. ೮೨.

ವಾಲಿ (ಎಂ. ಎನ್.) ಸಂ

ಜನಪದ ಜೀವನ ತರಂಗಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೨ + ೬೪.

ವೀರಣ್ಣ ದಂಡೆ

ಜನಪದ ಕಾವ್ಯ ಮೀಮಾಂಸೆ : ಮೂಡಲ ಪ್ರಕಾಶನ, ಕಲಬುರ್ಗಿ ; ಪು. ೭ + ೬೩.

ಶಾಂತಿ ನಾಯಕ (ಸಂ)

ಜಾಣೆ ಕನ್ನಡವ ತಿಳಿದ್ದೇಳಿ : ಜಾನಪದ ಪ್ರಕಾಶನ, ಹೊನ್ನಾವರ ; ಪು. ೬೪.

ಶ್ರೀಕಂಠ ಕೂಡಿಗೆ

ಭೂಮಿ ಹುಣ್ಣಿಮೆ : ದಖನ್ ಪಬ್ಲಿಷರ್ಸ್, ಬೆಂಗಳೂರು ; ಪು. ೧೨೦.

ಸ್ವಾಮಿ (ಬಿ. ಎಸ್.)

ಜನಪದ ಝೇಂಕಾರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೮ + ೧೧೬.

ಸುಧಾಕರ (ಸಂ)

ಶಿವಗಂಗೆ ಸುತ್ತಿನ ಜನಪದ ಕಥೆಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೭೮ + ೮.

ಹೆಗಡೆ (ಎಲ್. ಆರ್.) ಸಂ.

ಹೆಂಗಸರ ಗೀತೆಗಳು : ಜ್ಞಾನ ಸಾಧನ ಗ್ರಂಥಮಾಲೆ, ಕುಮಟಾ ; ಪು. ೧೧೯.

ಹಂಪ ನಾಗರಾಜಯ್ಯ (ಸಂ)

ಜಾನಪದ ಅಧ್ಯಯನ ವಿಚಾರ ಸಂಕಿರಣ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೧೨೭.

ಸಂಕೀರ್ಣ

ಅಯ್ಯಪ್ಪ ಪಣಿಕ್ಕರ್,

ಅನು : ಅಕ್ಷರ ರಂಗಭೂಮಿ ಪೂರ್ವ-ಪಶ್ಚಿಮ : ಅಕ್ಷರ ಪ್ರಕಾಶನ, ಸಾಗರ ; ಪು. ೨ + ೨೬.

ಕೃಷ್ಣಕುಮಾರ್ (ಸಿ. ಪಿ.)

ಟಾಲ್‌ಸ್ಟಾಯ್ ಕಲಾ ಮೀಮಾಂಸೆ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೩೬.

ಜಾರ್ಜ್ ಥಾಂಸನ್

ಅನು : ಎಚ್. ಕೆ. ರಾಮಚಂದ್ರ ಮೂರ್ತಿ

ಮಾರ್ಕ್ಸ್‌ವಾದ ಮತ್ತು ಕಾವ್ಯ : ಪ್ರಸಾರಾಂಗ, ಮೈ. ವಿ. ವಿ. ನಿ., ಮೈಸೂರು ; ಪು. ೪ + ೯೫.

ತಿರುವಳ್ಳುವರ್
ಅನು : ಪಾ. ಶಾ. ಶ್ರೀನಿವಾಸ
ತಿರುಕ್ಕುಱಳ್ : ಮಧುರೈ ಕಾಮರಾಜ ವಿಶ್ವವಿದ್ಯಾನಿಲಯ, ಮಧುರೈ ; ಪು. ೬೧೬ + ೧೫ + ೨೭.

ನಾಯಕ (ಹಾ. ಮಾ.)
ಸಮೂಹ (ಸಂಪುಟ 1.) : ಮಿತ್ರ ಪ್ರಕಾಶನ, ಮೈಸೂರು ; ಪು. ೨೯೦.

ಪೂಜಾರ (ವ್ಹಿ. ಜಿ.)
ಪವಾಡ ಕಥೆಗಳು ಮತ್ತು ಇತರ ಲೇಖನಗಳು : ವಿಜಯ ಪ್ರಕಾಶನ, ಸುರಪುರ ; ಪು. ೮ + ೬೨.

ಬಿರಾದಾರ (ಶಂ. ಗು.) ಪ್ರ. ಸಂ.
ವಿಜಯವಾಣಿ : ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ ; ಪು. ೯೮.

ಮಲ್ಲೇ ದೇವರು (ಎಚ್. ಪಿ.) ಸಂ.
ಸರ್ವೋದಯ ; ಗಾಂಧೀ ಭವನ, ಮೈ. ವಿ. ವಿ. ನಿ., ಮೈಸೂರು ; ಪು. ೨ + ೨೨೦.

ಮಾಧವ ಕುಲಕರ್ಣಿ
ಯೋಚನೆಗಳು ಲೇಖನಗಳು ; ಶ್ರೀ ಪ್ರಶಾಂತ ಪ್ರಕಾಶನ, ಮೈಸೂರು ; ಪು. ೪ + ೬೪.

ವಿಜಯಕುಮಾರ (ಹ. ನಂ) ಸಂ.
ಅಲ್ಲಮನ ವಚನ ಪ್ರಕೋಶ ; ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು ; ಪು ೧೦೮೦ + ೮

ವಿಷ್ಣುಮೂರ್ತಿ (ಎಚ್. ಸಿ.) ಸಂ.
ಗೋಪಾಲಗೌಡರ ಡೈರಿ ಪತ್ರಗಳು, ಇತ್ಯಾದಿ : ಅನನ್ಯ ಪ್ರಕಾಶನ, ಮೈಸೂರು ; ಪು ೧೦೮

ಶಿವಾನಂದರಾವ್ (ಬಿ. ಪಿ.)
ಭಾರತದ ಪ್ರಾಚೀನ ವಿದ್ಯಾ ಪೀಠಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೮ + ೫೦.

ಶ್ರೀನಿವಾಸ ಹಾವನೂರ.
1. ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ : ಅನನ್ಯ ಪ್ರಕಾಶನ, ಮೈಸೂರು ; ಪು. ೧೬೪.
2. ಮಾತಂಗಿ ಮತ್ತು ಇತರ ಕಾದಂ ಕಥನಗಳು ; ಪ್ರತಿಭಾ ಗ್ರಂಥಮಾಲೆ, ಧಾರವಾಡ ; ಪು. ೨೮೭.

ಶ್ರೀರಂಗ
1. ನಾಟ್ಯ ಶಾಸ್ತ್ರದ ನಟ : ಪು. ೩೬.
2. ನಾಟ್ಯ ಶಾಸ್ತ್ರದಲ್ಲಿ ನಾಟ್ಯ ಮಂಡಪ ; ಪು. ೪೦.

—ಅಕ್ಷರ ಪ್ರಕಾಶನ, ಸಾಗರ ;

ಸ್ತಾನಿಸ್ಲಾವ್ಸ್ಕಿಯ
ಅನು : ಕೆ. ವಿ. ಸುಬ್ಬಣ್ಣ.
ರಂಗದಲ್ಲಿ ಅಂತರಂಗ : ಅಕ್ಷರ ಪ್ರಕಾಶನ, ಸಾಗರ ; ಪು. ೪೦೮ + ೨೦ + ೪

ಸೀತಾರಾಮಯ್ಯ, (ಎಂ. ವಿ.)
ಜಾಲಿಹಾಳ (ಗೋ. ಅ.) } ಸಂ.
ಬೇಂದ್ರೆ ಸ್ಮೃತಿ : ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ; ಪು. ೮ + ೫೬.

ಸಿದ್ಧಲಿಂಗಯ್ಯ.
    ಅವತಾರಗಳು : ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು ; ಪು. ೯೨.

ಸೂರಿನಾಗಮ್ಮ
ಅನು : ಕೆ. ಎ. ನಾರಾಯಣನ್
    ಶ್ರೀರಮಣಾಶ್ರಮದ ಪತ್ರಗಳು ; ರಮಣ ಮಹರ್ಷಿ, ಶಿಕ್ಷಣ ಕೇಂದ್ರ,
    ಬೆಂಗಳೂರು. ಪು ೧೬೩.

ಮಕ್ಕಳ ಸಾಹಿತ್ಯ

ಐ ಬಿ ಎಚ್ ಪ್ರಕಟಣೆಗಳು, ಬೆಂಗಳೂರು.

ಮಕ್ಕಳ ಸಾಹಿತ್ಯ.
    ಐ. ಬಿ. ಎಚ್. ಪ್ರಕಟಣೆಗಳು, ಬೆಂಗಳೂರು.

ಅನಂತ ಪೈ.
    ಗಾಂಪನ ಗುಂಪು : ಪು. ೩೨

ಅನಂತ ಪೈ.
ಅನು : ಶಿವರಾಮ ಕಾರಂತ.
    ಬ್ರಾಹ್ಮಣನೂ ಹೋತವು ; ಪು. ೩೨

ಅಮೃತ ಸೋಮೇಶ್ವರ.
    ಕೊರಗರು ; ಪು. ೪೮

ಅಂಬಳಿಕೆ ಹಿರಿಯಣ್ಣ
    ತೊದವರು ; ಪು. ೫೪

ಆಚಾರ್ (ಕೆ. ವಿ.)
    ಯಜಮಾನ್ ಕಿಟ್ಟಪ್ಪನವರು ; ಪು. ೪೪

ಈಶ್ವರಪ್ಪ (ಎಂ. ಜಿ.)
    ಮ್ಯಾಸಬೇಡರು ; ಪು. ೪೮.

ಎನ್ಕೆ
1. ಸಾವಿರದ ಪರಕವಿ ಬೇಂದ್ರೆ ; ಪು. ೫೨.
2. ಕೃಷ್ಣಾನದಿ ; ಪು. ೪೮

ಕಮಲಾ ಚಂದ್ರಕಾಂತ್.
    ಹಾರುವಕಳ್ಳ ಕೇಸರಿ ; ಪು. ೩೨.

ಗೊರೂರು ರಾಮಸ್ವಾಮಿ ಅಯ್ಯಂಗಾರ್
    ಹೇಮಾವತಿ ನದಿ : ಪು. ೪೮

ಲೂಯಿ (ಎಂ.) ಫರ್ನಾಂಡಿಸ್ ಮತ್ತು ರಾಮರಾವ್ (ಆರ್. ಎಸ್.)
ಎಚ್ಚಮನಾಯಕ : ಪು. ೩೨

ಲೂಯಿ (ಎಂ) ಫರ್ನಾಂಡಿಸ್ ಮತ್ತು ಕಾಮತ್ (ಬಿ ಆರ್.) ರಾಣಿಯ ಕಂಠಹಾರ : ಪು. ೩೨.

ಲೂಯಿ (ಎಂ.) ಫರ್ನಾಂಡಿಸ್
ಅನು : ಶಿವರಾಮಕಾರಂತ

ಹೊನ್ನ ಮುಂಗುಸಿ ಮತ್ತು ಇತರ ಕತೆಗಳು : ಪು. ೩೨

ವಿಭಾಘಾಯ್

• ಲಾಲ್ ಬಹದ್ದೂರ್ ಶಾಸ್ತ್ರಿ : ಪು. ೩೨

ವೆಂಕಟಾಚಲ ಶಾಸ್ತ್ರಿ (ಟಿ. ವಿ.)

ರಾವ್ ಬಹದ್ದೂರ್ ಎಂ. ಶಾಮರಾಯರು : ಪು. ೬೦

ವೇಣುಗೋಪಾಲ ಸೊರಬ

ತುಂಗಭದ್ರಾ : ಪು. ೪೮

ಶಂಸ ಐತಾಳ

ಪ್ರವಾಸಿಗರು ಕಂಡ ಕನ್ನಡಿಗರ ಜನಜೀವನ : ಪು. ೫೨

ಶ್ರೀಕಂಠಕೂಡಿಗೆ

ಕೊಂಡಮಾಮ : ಪು. ೪೮

ಶ್ರೀನಿವಾಸಯ್ಯ (ಹೊ.)

ಸಿಂಹಳದಲ್ಲಿ ಶಶಿ : ಪು. ೭೮

ಸೀತಾರಾಮ್ (ಸಿ.)

ನಂಜನಗೂಡು : ಪು. ೫೨

ಸುಬ್ಬರಾವ್ (ಟಿ. ಎಂ.)

ಅಡಕೆ : ಪು. ೫೬

ಸುಬ್ಬರಾವ್

ಶಿವಾಜಿಯ ಕಥೆಗಳು : ಪು ೩೨

ಸುಬ್ಬರಾವ್ ಮತ್ತು ಚಂದ್ರಶೇಖರ ಕಂಬಾರ

ಮಾಯವಾದ ಉಡುಗೊರೆ ರಹಸ್ಯ : ಪು. ೩೨

ಸುಶೀಲಾ ಸೊಂಡೂರು

ಕರ್ನಾಟಕ ಗ್ರಾಮೀಣ ಮಕ್ಕಳ ಆಟಗಳು : ಪು. ೫೬

ಹೆಗಡೆ (ಎಲ್. ಆರ್.)

ಉತ್ತರ ಕರ್ನಾಟಕದ ಸಿದ್ದಿ ಜನರು : ಪು. ೪೮

ಕಾರ್ಲೊ ಕಲಾಡಿ
ಅನು : (ಎನ್.) ಪ್ರಹ್ಲಾದರಾವ್

ಪಿನೋಕಿಯೊ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ಪು. ೧೨೦ + ೩೪ (ಬಣ್ಣದ ಚಿತ್ರಗಳು)

ಕಾರಂತ (ಬಿ. ವಿ.)

ರಾಮಪ್ಪ (ಪಿ. ಎಸ್.)

ನೀಲಿ ಕುದುರೆ ; ಅಕ್ಷರ ಪ್ರಕಾಶನ, ಸಾಗರ ; ಪು. ೫೬

ಕೃಷ್ಣಮೂರ್ತಿ (ಹೆಚ್. ಆರ್.)

ಹಕ್ಕಿಗಳನ್ನು ಗುರುತಿಸು : ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ; ಪು. ೬೦

ಗೋಪಾಲಕೃಷ್ಣರಾವ್ (ಕೆ. ಎಲ್)

(ಅನು)

೧. ಬೂದು ಕುದುರೆ : ಪು. ೨೦
೨. ಮೀನುಗಾರ ಮತ್ತು ಹೊನ್ನ ಮೀನು : ಪು. ೧೬
೩. ಹೊರಟಿತು ಇಲಿ ಮರಿ ನೀರನು ತರಲು

—ಪ್ರಗತಿ ಪ್ರಕಾಶನ, ಮಾಸ್ಕೊ. ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು

ಚಂದ್ರಶೇಖರ್ (ಬಿ. ಎಸ್.)

ಗೋಗ್ರಹಣ : ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು ; ಪು. ೮೦

ಜಯಂತಿ ಮನೋಕರನ್

ಅನು : ಭೈರರಾಜ

ನನ್ನ ಪ್ರೀತಿಯ ಪ್ರಪಂಚ : ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ, ಪು. ೫೪

ಪಳಕಳ ಸೀತಾರಾಮ ಭಟ್

ನಚಿಕೇತ : ಯುಗ ಪುರುಷ ಪ್ರಕಟಣಾಲಯ, ಕಿನ್ನಿಗೋಳಿ (ದ.ಕ.) ; ಪು. ೩೮

ನಾಗರಾಜ ಶೆಟ್ಟಿ (ಟಿ. ಎಸ್.)

ನವಿಲುಗರಿ : ನಿರ್ಮಲ ಪ್ರಕಾಶನ, ತಿಪಟೂರು ; ಪು. ೧೦೦

ನಾಗೇಶ

ಮಕ್ಕಳ ಭಾಗವತ : ಸಮಾಜ ಪುಸ್ತಕಾಲಯ, ಧಾರವಾಡ ; ಪು. ೧೩೬

ನಾರಾಯಣರಾವ್ ತಾಳೀಕೋಟೆ

೧. ಬಾಲ ಭಾರತ (ಸಂ. ೩) : ಶ್ರೀರಾಮ ಸೇವಾ ಟ್ರಸ್ಟ್, ರಾಯಚೂರು ;
೨. ಬಾಲ ಮಹಾಭಾರತ (ಸಂ. ೪) : ಶ್ರೀರಾಮ ಸೇವಾ ಟ್ರಸ್ಟ್, ರಾಯಚೂರು : ಪು. ೧೬೨

ಬಳೂರಗಿ (ಡಿ. ಆರ್.)

೧. ಕಾಂತಗಳು : ಪು. ೨೪
೨. ಸೌರಶಕ್ತಿ : ಪು. ೩೨

—ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು

ಬಾಲಸುಬ್ರಹ್ಮಣ್ಯಂ (ಡಿ. ಕೆ.)

ಅಜ್ಜ ಹೇಳಿದ ಕತೆಗಳು : ಮಕ್ಕಳ ಸಾಹಿತ್ಯ ಪ್ರಕಾಶನ, ಗುಬ್ಬಿ ; ಪು. ೩೨

ಭಾಸ್ಕರ ಫಣಿಕ್ಕರ್ (ಪಿ. ಟಿ.)

ಅನು : ಕೆ. ಚಂದ್ರಹಾಸ

ಎಳೆಯರಿಗಾಗಿ ಮಾರ್ಕ್ಸ್‌ವಾದ : ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು ; ಪು. ೩೪

ರಮಾನಂದ (ಎಸ್.)
    ಅರೇಬಿಯಾದ ಇರುಳು : ಪ್ರತಿಭಾ ಗ್ರಂಥಮಾಲೆ, ಧಾರವಾಡ ; ಪು. ೪೨

ಲಕ್ಷ್ಮಣರಾವ್ (ಜಿ. ಆರ್.) ಸಂ.
    ಅರವತ್ತು ಪ್ರಶ್ನೆಗಳು : ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ; ಪು. ೭೬

ವರದರಾಜ ಹುಯಿಲಗೋಳ
    ವಸುಭಾಗನ ಪಂಚತಂತ್ರದ ಕಥೆಗಳು : ಸಮಾಜ ಪುಸ್ತಕಾಲಯ, ಧಾರವಾಡ ; ಪು. ೧೧೮

ವೇಣು (ಬಿ. ಎಲ್.)
    ಗುಹೆ ಸೇರಿದವರು : ಬಾಪ್ಕೊ ಪ್ರಕಾಶನ, ಬೆಂಗಳೂರು ; ಪು. ೮೮

ಶ್ರೀನಿವಾಸಯ್ಯ (ಹೊ.)
    ಶಶಿ ಕಂಡ ಜರ್ಮನಿ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೪೦

ಶೇಖರಪ್ಪ ಹುಲಿಗೇರಿ (ಬಿ.)
    ಬಣ್ಣದ ಬಗರಿ : ಶ್ರೀ ವಿಜಯ ಮಹಾಂತ ಪ್ರಕಾಶನ, ರಾಯಚೂರು; ಪು. ೨೮

ಅನುಬಂಧ 2

ಕನ್ನಡ ಭಾಷಾ—ಸಾಹಿತ್ಯ ಲೇಖನ ಸೂಚಿ

ಟಿ. ವಿ. ವೆಂಕಟರಮಣಯ್ಯ

ಪರಿವಿಡಿ

ಭಾಷಾಶಾಸ್ತ್ರ

ಸಾಹಿತ್ಯ (ಸಾಮಾನ್ಯ)

ಕನ್ನಡ ಸಾಹಿತ್ಯ (ಸಾಮಾನ್ಯ)

ಜಾನಪದ

ದಾಸಸಾಹಿತ್ಯ

ವಚನ/ವೀರಶೈವ ಸಾಹಿತ್ಯ

ಕನ್ನಡ ಕಾವ್ಯ (ಪ್ರಾಚೀನ)

ಕನ್ನಡ ಕಾವ್ಯ (ಆಧುನಿಕ)

ನಾಟಕಗಳು/ರಂಗಭೂಮಿ

ಕಾದಂಬರಿಗಳು

ಕಥೆಗಳು/ಕಥಾಕಾರರು

ಸಾಹಿತಿಗಳು (ವ್ಯಕ್ತಿತ್ವ-ವಿಚಾರ)

ಅನ್ಯ ಭಾರತೀಯ ಸಾಹಿತ್ಯ/ಸಾಹಿತಿಗಳು

ಅನ್ಯದೇಶೀಯ ಸಾಹಿತ್ಯ

ಇತಿಹಾಸ/ಶಾಸನಗಳು/ಸಂಶೋಧನೆ/ಹಸ್ತಪ್ರತಿಗಳು

ಭಾಷಾಶಾಸ್ತ್ರ

ಅನಂತನಾರಾಯಣ (ಎಚ್. ಎಸ್)

ಆಂಧ್ರಪ್ರದೇಶದಲ್ಲಿ ಕನ್ನಡ ಭಾಷೆ [ಸಾಧನೆ. ಏಪ್ರಿಲ್-ಜೂನ್ ಪು. ೯-೧೬]

ಜಯಂತಿಬಾಯಿ (ಎಂ)

ನಾಗವರ್ಮ-ಭಾಷಾಂತರದ ಪಿತಾಮಹ [ಪ್ರ.ಕ. ಮಾರ್ಚ್. ಪ. ೫೧-೬೬]

ತಾರಾನಾಥ (ಎನ್. ಎಸ್)

ಭಾಷೆ-ವ್ಯಾಕರಣ-ಕೋಶ-ಸೂಚಿ-ಪರಾಮರ್ಶನ ಕೃತಿಗಳು (೮೧ ರಲ್ಲಿ ಪ್ರಕಟಿತ) [ಗ್ರಂ. ಲೋ ೧-೬-೮೨, ಪು, ೩೭-೩೮]

ನಾಯಕ (ಹಾ. ಮಾ.)

ಉರ್ದು ಅಕಾದೆಮಿ; ದ್ವಿಪವ್ಯವಸ್ಥೆ [ಸಮೂಹ. ಸಂ, ೧. ಪು, ೧೨೦-೧೨೪]

ಒಂದು ಜಗತ್ತು ಒಂದು ಭಾಷೆ [—,,— ಪು, ೭೭-೮೧]

ಸಂಸ್ಕೃತದ ಸ್ಥಾನ [—,,— ಪು, ೧೭೨-೧೭೬]

ಸಂಸ್ಕೃತದ ಗತಿ [—,,— ಪ್ರಮ, ೨೪-೧-೮೨ ಪು. ೧೭]

ಭಾಸ್ಕರರಾವ್ (ಬಿ)

ಶಬ್ದದ ಹಿಂದಿರುವ ಪಿತೂರಿ [ಪ್ರವಾ ೧೦-೧-೮೨ ಸಾಪು. ಪು. ೧ಮತ್ತು೩]

ಮಹದೇವಯ್ಯ (ಟಿ. ಆರ್)

ಕನ್ನಡದಲ್ಲಿ ನಿಘಂಟು ಶಾಸ್ತ್ರ [ಸಾಧನೆ. ಏಪ್ರಿಲ್-ಜೂನ್ ಪು,೧೭-೩೧]

ಮುದಗಲ್ಲ (ಪ್ರಹ್ಲಾದ)

ಸ್ವ ಚುರಮುರಿ ಶೇಷಗಿರಿರಾಯರು ಕಂಡ 'ಕನ್ನಡ ಭಾಷೆ' [ಸಾಧನೆ. ಏಪ್ರಿಲ್-ಜೂನ್ ಪು, ೭೨-೯೫]

ರಘುಪತಿ (ಕೆಮ್ತೂರು)

ಕರ್ನಾಟಕ ನಾಮಶಾಸ್ತ್ರ : ಒಂದು ಸ್ಥೂಲ ಪರಿಚಯ [ಸಾಧನೆ. ಜುಲೈ-ಸೆಪ್ಟೆಂಬರ್ ಪು. ೯೪-೧೦೩]

ವಾರಿ (ಮ. ಗೋ)

ಮಹಾಪ್ರಾಣಗಳು-ಒಂದು ಟಿಪ್ಪಣಿ [ಸಾಧನೆ. ಜುಲೈ-ಸೆಪ್ಟೆಂ, ಮಂಥನ. ಪು. ೧೩೪-೧೩೬]

ವಿ. ಎ. ಜೆ.

ಎಸ್ಪರಾಂಟೋ : ಪ್ರಪಂಚಕ್ಕೊಂದು ಭಾಷೆ [ಕ. ಮಾರ್ಚ್. ಪು. ೩೮-೪೦]

ಶಾಸ್ತ್ರಿ (ಕೆ. ಜಿ)

ಭಾಷಾ ಬಾಂಧವ್ಯ : ವೈಜ್ಞಾನಿಕ ದೃಷ್ಟಿ [ಕ. ಭಾ. ಆಗಸ್ಟ್-ನವೆಂ. ಪು. ೯೫-೧೦೦]

ಶಿವಣ್ಣ (ಎಸ್)
‘ಶಬ್ದಮಣಿದರ್ಪಣ’ದ ಒಂದು ಪ್ರಯೋಗದ ಆಕರ [ಸಾಧನೆ. ಅಕ್ಟೋ-ಡಿಸೆಂ, ಮಂಥನ, ಪು. ೧೫೭-೧೫೮]

ಶಿವಾನಂದ (ವಿ)
ಸಮಾಸ ರಚಕಗಳು [ಸಾಧನೆ. ಏಪ್ರಿಲ್-ಜೂನ್ ಪು. ೧೧೨-೧೩೭]

ಶಬ್ದಾರ್ಥ

ಕಂಬಿ (ವ್ಹಿ. ಎಸ್)
‘ಷಟ್‌ಸ್ಥಲ’ ಪದಪ್ರಯೋಗಾರ್ಥ [ಬಸವಪಥ. ಜನ ೮೨–ಪು. ೫೮-೬೪]

ಕೃಷ್ಣೇಗೌಡ (ಹಾ.ತಿ)
ಅಡುಳಿ (ಜಾನಪದ ಪದ)- ಒಂದು ಟಿಪ್ಪಣಿ [ಸಾಧನೆ. ಜುಲೈ-ಸೆಪ್ಟೆಂ. ಮಂಥನ. ಪು. ೧೩೭-೧೪೦]

ಗೋಪಿನಾಥರಾವ್ (ಟಿ.ಎ)
ಬಾಳ್ಗಟ್ಟಿ : ಒಂದು ಟಿಪ್ಪಣಿ [ಪ್ರ. ಕ. ಮಾರ್ಚ್. ಪು. ೯೪-೯೬. ಕಮ್ಮಟದ ಕಿಡಿಗಳು]

ನಾಗರಾಜಯ್ಯ (ಹಂಪ)
ಸಂಚಿವಾರ : ಶಬ್ದಾರ್ಥ ಜಿಜ್ಞಾಸೆ [ಕ.ಸಾ.ಪ. ೬೬-೨; ೬೭-೧. ೮೧ ಮತ್ತು ಜೂನ್ ೮೨. ಪು. ೧೦-೧೪

ಪೈ (ಎಂ. ಮಾಧವ)
ಬುಂಭುಕ–ಜುಂಬುಕ ; ಭುಂಭುಕ (ಶಬ್ದಾರ್ಥ) [ಸಾಧನೆ. ಜುಲೈ-ಸೆಪ್ಟೆಂ. ಮಂಥನ. ಪು. ೧೪೦-೧೪೪]

ತುಳುಭಾಷೆ

ಕೇಕುಣ್ಣಾಯ (ಕೆ. ಪದ್ಮನಾಭ)
ತುಳುವಿನ ಬಾಲಭಾಷೆ (ಸ್ವರೂಪ ಮತ್ತು ರಚನಾ ವೈಶಿಷ್ಟ್ಯಗಳು) [ತುಳುವ. ೩-೩. ಜುಲೈ–ಸಪ್ಟೆಂ. ಪು. ೩-೧೪]

ನಾಯಕ (ಹಾ.ಮಾ)
ತುಳುವಿಗೊಂದು ನಿಘಂಟು [ಸಮೂಹ. ಸಂ. ೧ : ಪು. ೨೫೪–೨೫೮]

ನಾವಡ (ಎ.ವಿ)
ತುಳು ಭಾಷೆಯ ಪ್ರಗತಿ [ಕ.ಏಪ್ರಿಲ್. ಪು. ೩೪–೩೮]

ಭಟ್ (ಹರಿಕೃಷ್ಣ)
ದಕ್ಷಿಣ ಕನ್ನಡ ಹವ್ಯಕರ ಬೈಗಳು : ಒಂದು ವಿಶ್ಲೇಷಣೆ [ಸಾಧನೆ. ಆಕ್ಟೋ-ಡಿಸೆಂ. ಪು. ೭೯-೯೩]

ರೈ (ಕುದ್ಕಾಡಿ ವಿಶ್ವನಾಥ)
ರೂಢಿಚ್ಯುತ ಕೆಲವು ತುಳು ಪದಗಳು [ತುಳುವ. ಜುಲೈ–ಸೆಪ್ಟೆಂ. ಪು. ೧೫–೧೮]

ಸಾಹಿತ್ಯ

ಸಾಮಾನ್ಯ

ಅನಂತರಂಗಾಚಾರ್ (ಎನ್)
ಬೌದ್ಧ ಜೈನ ರಾಮಾಯಣಗಳು [ಪ್ರ.ಕ.೬೪-೩ ಮತ್ತು ೪. ಡಿಸೆಂ. ೮೨ ಮತ್ತು ಮಾರ್ಚ್ ೮೩ ಪು. ೩೧–೩೬]

ಅನಂತರಾಮಯ್ಯ (ಆರ್. ಎಲ್)
ನೀವು ಪುಸ್ತಕವನ್ನು ಯಾರಿಗೆ ಅರ್ಪಿಸುವಿರಿ ? [ಗ್ರಂಲೋ ೧-೧೧-೮೨. ಪು. ೧-೫]
ಪುಸ್ತಕದ ಮುಂಪುಟಗಳು [ಗ್ರಂಲೋ. ೧-೯-೮೨. ಪು. ೧-೪]

ಅಶೋಕ (ಟಿ.ಪಿ)
ಸಾಹಿತ್ಯ ಮತ್ತು ಮನೋವಿಜ್ಞಾನ [ಸಾಧನೆ. ಜನ–ಮಾರ್ಚ್. ಪು. ೫೪-೬೪]

ಕಲ್ಗುಡಿ (ಬಸವರಾಜ)
ಸಾಹಿತ್ಯದ ಸ್ವರೂಪ : ಸಮಾಜ ಹಾಗೂ ಪರಿವರ್ತನ ಶೀಲತೆ–ಇವುಗಳ ಸಂಬಂಧವನ್ನು ಕುರಿತ ಕೆಲವು ವಿಚಾರಗಳು [ಸಾಧನೆ. ಜನ-ಮಾರ್ಚ್, ಪು.೭೨-೯೦]

ಕಾಯ್ಕಿಣಿ (ಗೌರೀಶ)
Classic ಮತ್ತು Romantic ಇವುಗಳಿಗೆ ಕನ್ನಡ ಪರ್ಯಾಯಗಳು ? [ಸಾಧನೆ. ಎಪ್ರಿಲ್-ಜೂನ್. ಪು. ೩-೮]

ಕಾರಂತ (ಶಿವರಾಮ)
ನನ್ನ ದೃಷ್ಟಿಯಲ್ಲಿ : ಸಾಹಿತ್ಯ ಮತ್ತು ಇತರ ಜ್ಞಾನ ಕ್ಷೇತ್ರಗಳು [ಸುಧಾ. ೨೮-೧೧-೮೨. ಪು. ೬೬]

ಕೊಟ್ರಶೆಟ್ಟಿ (ಎಂ.ಬಿ)
ಕೊಲರಿಜ್‌ನ ದೃಷ್ಟಿಯಲ್ಲಿ ಇಮ್ಯಾಜಿನೇಷನ್ [ಕ.ಭಾ. ಆಗಸ್ಟ್-ನವೆಂ. ಪು. ೭-೧೬]

ಖರೆ (ವಿಷ್ಣು)
ಭಾರತೀಯ ಭಾಷೆಗಳು ಮತ್ತು ನೊಬೆಲ್ ಪ್ರಶಸ್ತಿ [ಪ್ರವಾ ೧೯-೧೨-೮೨. ಸಾ ಪು. ಪು. ೧ಮತ್ತು೪]

'ಗ್ರಂಥಲೋಕ'
ಬೆಳ್ಳಿ ಹಬ್ಬದ ಹೊಸ್ತಿಲಲ್ಲಿ ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ [ಗ್ರಂಲೋ. ೧-೧-೮೨. ಪು. ೬-೯]
ಪುಸ್ತಕದ ಪ್ರಚಾರ ಮತ್ತು ಮಾರಾಟ [ಗ್ರಂಲೋ. ೧–೪-೮೨. ಪು. ೧–೨]

ಗಿರಡ್ಡಿ (ಗೋವಿಂದರಾಜ)
ಭೈರಪ್ಪನವರ ನವ್ಯ ಅನಿಸಿಕೆಗಳು [ಮಯೂರ. ಸೆಪ್ಟೆಂ. ೨೬-೨೯]

ಗೋಪಾಲಕೃಷ್ಣ (ಹೆಚ್.ಆರ್.)
ಸಾಹಿತ್ಯ ಹಾಗೂ ವೈಜ್ಞಾನಿಕ ಕ್ಷೇತ್ರದಲ್ಲಿ ಮಾವು [ಸಪ್ತಗಿರಿ. ಅಕ್ಟೋ. ಪು. ೧೫–೧೬]

ಗೋಪಾಲಕೃಷ್ಣಯ್ಯ (ಕೆ.ಎಲ್)
ಸಾಹಿತ್ಯ ಮತ್ತು ಪುರಾಣ ಪ್ರತೀಕಗಳು [ಸಾಧನೆ. ಜನ-ಮಾರ್ಚ್. ಪು. ೨೯–೫೩]

ಜೀವಣ್ಣ (ಕಮ್ಮತ್ತಹಳ್ಳಿ)

ಸಾಹಿತ್ಯದಲ್ಲಿ ಸವಿಪಾಕ-ಸವಿಯೂಟ [ಕ.ನು. ೧೬-೮-೮೨ ಪು. ೯-೧೦]

ದರ್ಗಾ.(ರಮಜಾನ)

ಬಂಡಾಯ ಸಾಹಿತಿ [ಸಾಹಿತ್ಯ ಮತ್ತು ಸಮಾಜ. ಪು. ೪೨-೫೪]

—ಮಾರ್ಕ್ಸ್‌ವಾದಿ ಯುವ ಲೇಖಕರೊಡನೆ [,, ಪು. ೧೧-೧೨]

—ಸಾಹಿತ್ಯ ಮತ್ತು ಸಮಾಜ [,, ಪು. ೬-೧೦]

—ಸಾಹಿತಿಯ ಸಾಮಾಜಿಕ ಪ್ರಜ್ಞೆ [,, ಪು. ೧-೫]

ನಾಗರಾಜ್ (ಡಿ.ಆರ್)

ಸಾಹಿತ್ಯ, ತತ್ವಜ್ಞಾನ, ತಾತ್ತ್ವಿಕ ನಿಲುವುಗಳು ಇತ್ಯಾದಿ [ಸಾಧನೆ. ಜನ–ಮಾರ್ಚ್-ಪು. ೧-೧೦]

ನಾಯಕ (ಹಾ.ಮಾ)

ಗ್ರಂಥಲೋಕದ ಸುತ್ತ ಮುತ್ತ (ಮಾಸ್ತಿಯವರ 'ಸುಬ್ಬಣ್ಣ'ದ ಜರ್ಮನ್ ಅನುವಾದ ಕಾರಂತರ 'ಪೂರ್ವದಿಂದ ಅತ್ಯಪೂರ್ವಕ್ಕೆ', ದೀಘನಿಕಾಯದ ಅನು : ಹಿರೇಮಲ್ಲೂರರ 'ವಲಸೆಹೋದ ಕನ್ನಡಿಗನ ಕತೆ' ಇತ್ಯಾದಿ) [ಗ್ರಂಲೊ. ೧.೯-೮೨. ಪು. ೧೪]

—ಗ್ರಂಥಲೋಕದ ಸುತ್ತ ಮುತ್ತ (ಕೊಲಂಬಿಯಾದ ಕಾದಂಬರಿಕಾರ-ಗೇಬ್ರಿಯಲ್ ಗಾರ್ಷಿಯ ಮಾರ್ಕ್ವೆಜ್ ; ಎಕ್ಕುಂಡಿ ಅವರ 'ಬೆಳ್ಳಕ್ಕಿಗಳು', ರಾಮಚಂದ್ರಶರ್ಮ ಅವರ 'ಈ ಶತಮಾನದ ನೂರು ಇಂಗ್ಲಿಷ್ ಕವನಗಳು') [ಗ್ರಂಲೋ. ೧-೧೧-೮೨-ಪು. ೧೭-೧೮]

—ಗ್ರಂಥಲೋಕದ ಸುತ್ತಮುತ್ತ (ಪುಸ್ತಕ ವ್ಯಾಪಾರ ; ಐ.ಮಾ. ಮುತ್ತಣ್ಣನವರ 'ಪ್ರಶ್ನೋತ್ತರ' ಆತ್ಮಕಥೆ ; ಲೀಲಾಭಟ್ಟರ 'ಭೂತ-ನಾಗರ ನಡುವೆ'; ಪಿ.ಎಸ್. ರಾಮಾನುಜಂ ರ 'ಮಿಣುಕು') [ಗ್ರಂಲೋ. ೧-೧-೮೨-ಪು. ೩೭–೩೯]

—ಗ್ರಂಥಲೋಕದ ಸುತ್ತಮುತ್ತ (ಫಿರ್ಜಾಸಿಯ 'ಷಹನಾಮ'ದ ಆಂಗ್ಲ ಅನುವಾದ ; ಪ್ರಿಂಟರ್ಸ್ ಪ್ರಕಾಶನ ; ಹಾವನೂರರ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತಿ, ಕಂಪ್ಯೂಟರ್ ಇತ್ಯಾದಿ' ; ಕೆ. ಅನಂತರಾಮು ಅವರ 'ಸಕ್ಕರೆಯ ಸೀಮೆ : ಎನ್ಕೆ ಅವರ 'ಕನ್ನಡ ವ್ಯಾಸ ಭಾರತ' ಇತ್ಯಾದಿ) [ಗ್ರಂಲೋ ೧–೮-೮೨.ಪು ೧೨-೧೩]

—ಗ್ರಂಥಲೋಕದ ಸುತ್ತಮುತ್ತ (ಜರ್ಮನಿಯ ಲೇಖಕರ ಅಂಚೆಮನೆ—ಹೊಸಬಾಳೆ ಸೀತಾರಾಮರಾಯರ 'ಸ್ವಾಗತ'—ಪಿ.ಎಸ್. ರಾಮಾನುಜಂ ರ 'ಅಯನ' ಕವನ ಸಂಕಲನ–'ಜಯಂತಿ' ಹಾಗೂ 'ಸಂಕ್ರಮಣ ಶತಕ') [ಗ್ರಂಲೋ-೧–೭–೮೨-ಪು ೧೪–೧೬]

—ಬುಖಾರೆಸ್ಟ್‌ನಿಂದ ಭಾರತಕ್ಕೆ (ಡೆಮಿಟ್ರಿಯನ್) [ಪ್ರಮ ೧೪.೩-೮೨–ಪು ೨೫]

—ನ್ಯಾಷನಲ್ ಬುಕ್‌ಟ್ರಸ್ಟ್ [ಪ್ರಮ. ೫–೯-೮೨-ಪು. ೧೫]

ನಾಯಕ (ಹಾ.ಮಾ.)

ಗ್ರಂಥಲೋಕದ ಸುತ್ತಮುತ್ತ (ಎಂ.ಕೆ. ಮೆನನ್ ಅವರ 'ಅವಕಾಶಿಗಳ್' ಕಾದಂಬರಿ–ಎಚ್. ಜಿ. ಸಣ್ಣಗುಡ್ಡಯ್ಯನವರ 'ಪಾರಿಜಾತ' ಪ್ರಣಯ ಗೀತೆಗಳು ಇತ್ಯಾದಿ) [ಗ್ರಂಲೋ. ೧-೬-೮೨, ಪು. ೪೧-೪೩]

– ಕಾಗದದ ಹೂವು (ಭಾರತೀಯರು ಆಂಗ್ಲದಲ್ಲಿ ಬರೆಯುತ್ತಿರುವ ಸಾಹಿತ್ಯ ಕುರಿತ ವಿಚಾರಗೋಷ್ಠಿ) [ಪ್ರ.ಮ. ೩–೧೦–೮೨]

—ಗ್ರಂಥಲೋಕದ ಸುತ್ತ-ಮುತ್ತ (ಕೆ.ಪಿ.ಎಸ್. ಮೆನನ್–ವಿಶ್ವಕಥಾಕೋಶ ಯೋಜನೆ–ಗೋಕಾಕರ 'ಭಾರತಸಿಂಧುರಶ್ಮಿ') [ಗ್ರಂಲೋ. ? ಪು. ೧೪-೧೫]

—ಮಹಾ ಕಾವ್ಯದ ದಾರಿ [ಸಮೂಹ ಸಂ. ೧. ಪು. ೨೦೨-೨೦೬]

ನಾರಾಯಣ (ಕೆ.ವಿ.)
ಕೃತಿಕಾರ ಮತ್ತು ಕೃತಿ [ಸುಧಾ ೧೯-೧೨-೮೨. ಪು. ೬೬]

ಪಟ್ಟಣಶೆಟ್ಟಿ (ಸಿದ್ಧಲಿಂಗ)
ಆಯ್. ಎ, ರಿಚರ್ಡ್ಸ್‌ನ ಕಾವ್ಯ ಸಿದ್ಧಾಂತಗಳು [ಅನುಶೀಲನ-ರಸ ಸ್ವರೂಪ [ಪು. ೨೭-೩೨]

ಪ್ರಧಾನ್ ಗುರುದತ್ತ
ಅನುವಾದ (1981ರಲ್ಲಿ) [ಗ್ರಂಲೋ. ೧-೬-೮೨, ಪು. ೩೦-೩೨]

ಮಲ್ಲಿಕಾರ್ಜುನ (ಮೊರಬ)
ಸಾಹಿತ್ಯ ಮತ್ತು ಪರಂಪರೆ [ಸಾಧನೆ, ಜನ–ಮಾರ್ಚ್, ಪು. ೬೫-೭೧]

ಮೂಡ್ರ (ವಿಲ್ಯಂ)
ಸಾಹಿತ್ಯ ಮತ್ತು ಭಾಷಾ ವಿಜ್ಞಾನ [— ,, — ಪು. ೧೧–೧೯]

ಮಿಡ್ಲ್‌ಟನ್‌ಮರಿ (ಜೆ)
ಇಂಗ್ಲಿಷ್ ಬೈಬಲ್ ಮತ್ತು ಭವ್ಯಶೈಲಿ, ಅನು: ಎಡ್ವರ್ಡ್ ನೊರೋನ [ಪ್ರ.ಕ. ೬೪-೩ ಮತ್ತು ೪ ಡಿಸೆಂ, ೮೨ ಮತ್ತು ಮಾರ್ಚ್ ೮೩, ಪು. ೭೯–೯೧]

ಶರ್ಮ (ರಾಮಚಂದ್ರ)
ಕಾವ್ಯ ಮತ್ತು ಮಾನವೀಯತೆ (ನನ್ನ ದೃಷ್ಟಿಯಲ್ಲಿ) [ಸುಧಾ ೧೪-೧೧-೮೨, ಪು. ೬೬]

ಹೆದ್ದೂರಶೆಟ್ಟಿ (ಬಾಪು)
ಸಾಹಿತ್ಯ ಮತ್ತು ರಾಜಕೀಯ [ಸಾಧನೆ, ಜನ–ಮಾರ್ಚ್, ಪು. ೨೦-೨೮]

ಕನ್ನಡ ಸಾಹಿತ್ಯ (ಸಾಮಾನ್ಯ)

ಐತಾಳ (ಶಂಸ)
ಪ್ರಬಂಧ–ಪತ್ರ–ಪ್ರವಾಸ [ಗ್ರಂಲೋ. ೧-೬-೮೨, ಪು. ೧೩]

ಗೊರೂರು (ರಾಮಸ್ವಾಮಿ ಅಯ್ಯಂಗಾರ್)
ಎಲ್ಲೆಡೆ ಕನ್ನಡ ಕಲಿಸುವ ಅಕ್ಷರದಾನ ಕ್ರಾಂತಿಗೆ ಗೊರೂರು ಆಗ್ರಹ (ಅ.ಭಾ. ೫೫ನೇ ಕ.ಸಾ. ಸಮ್ಮೇಳನದ ಅಧ್ಯಕ್ಷ ಭಾಷಣ) [ಪ್ರವಾ. ೨೫–೧೨–೮೨]

ಚಂದ್ರಶೇಖರ್ (ಎಸ್.ವಿ)
ಜಿ.ವಿ.ನಾ. ರವರ ಕಾವ್ಯ ಧರ್ಮ ಮತ್ತು ಮನೋಧರ್ಮ [ಸರ್ವೋದಯ ಪಥ, ಪು.೨೨೧–೨೨೯]

ಜವರೇಗೌಡ (ದೇ)
ಗಾಂಧಿ ಸಾಹಿತ್ಯ [ಸರ್ವೋದಯ ಪಥ, ಪು. ೧೩೯–೧೪೫]

ನಾಗರಾಜಯ್ಯ (ಹಂಪ)

ಉದ್ಘಾಟನಾ ಭಾಷಣ [೧೯೮೨ ಫೆಬ್ರ. ೧೩ ಮತ್ತು ೧೪ರಂದು ನಡೆದ ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ] [ವಿಜಯವಾಣಿ]

ನಾಯಕ (ಹಾ.ಮಾ.)

ಲೇಖಕರ ಸಂಘಟನೆ [ಪ್ರಮ. ೧೪-೨-೮೨, ಪು. ೨೫]

– ಸಿ.ಪಿ.ಕೆ. ಕೃತಿ ಶತ [ಪ್ರಮ. ೨೮-೨-೮೨]

– ಮುಂಬಯಿಯಲ್ಲಿ ಮೂಕಜ್ಜಿಗೆ ಪ್ರಶಸ್ತಿ [ಸಮೂಹ. ಸಂ. ೧. ಪು. ೪೩–೪೮]

—1981ರ ಕನ್ನಡ ಪ್ರಕಟಣೆಗಳು [ಗ್ರಂ.ಲೋ. ೧-೬-೮೨, ಪು. ೧–೩]

—ಕನ್ನಡ ಲೇಖಕಿರಿಗೊಂದು ಸಂಘ [ಸಮೂಹ ಸಂ. ೧, ಪು. ೧೨೫-೧೨೯]

ನಿಸಾರ್ ಅಹಮದ್ (ಕೆ.ಎಸ್.)

ಮುಂಬೈ ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಂತರ್ಭಾರತಿ ಕವಿಗೋಷ್ಠಿಯ ಅಧ್ಯಕ್ಷ ಭಾಷಣ [ಕ.ಸಾ.ಪ. ೬೭–೨, ೬೭-೧, ಡಿಸೆಂ. ೮೧–ಜೂನ್ ೮೨, ಪು. ೧–೯]

ಪದ್ಮ (ಎಂ.ಬಿ.)

ಕನ್ನಡದಲ್ಲಿ ಗಾಂಧಿ ಸಾಹಿತ್ಯ [ಸರ್ವೋದಯ ಪಥ, ೫೩೦-೫೩೯]

ಪ್ರಭು (ಎಂ.ಎನ್)

ಉ.ಕ. ಜಿಲ್ಲೆ-ಆಧುನಿಕ ಸಾಹಿತ್ಯದ ಕೊಡುಗೆ [ಕಾನಡಾ ವೃತ್ತ ೧೯೮೨, ವಜ್ರಮಹೋತ್ಸವ ಸಂಚಿಕೆ, ಪು. ೧೪೫-೧೫೬]

ಪಾಟೀಲ (ಸುರೇಶ)

ಇದು ಬರಿ ಬೆಡಗಲ್ಲೋ ಅಣ್ಣ (ನಿಸಾರರ ವಿಮರ್ಶಾ ಕೃತಿ) [ಗ್ರಂಲೋ. ೧-೩-೮೨, ಪು. ೧೮-೧೫]

ಪೂರ್ಣಾನಂದ (ರಾ.ಶಂ.)

ಗೌರವ ಗ್ರಂಥಗಳು (೧೯೮೧ರಲ್ಲಿ ಪ್ರಕಟಿತ) [ಗ್ರಂಲೋ. ೧-೬-೮೨, ಪು. ೪೦]

ಪೈ (ಎಂ. ಮಾಧವ)

ಎಂ. ಗೋವಿಂದ ಪೈ ವಾಙ್ಮಯದಲ್ಲಿ ನುಡಿಯ ನಡೆ [ಕಾನಡಾ ವೃತ್ತ ೧೯೮೨, ವಜ್ರಮಹೋತ್ಸವ ಸಂಚಿಕೆ, ಪು. ೧೨೧-೧೨೪]

ಭಗವಾನ್

ಕುವೆಂಪು ಅವರ ಗದ್ಯ [ಬದಲಾವಣೆ ಪು. ೪೩]

—ಕುವೆಂಪು ಕಂಡ ದಲಿತ ಜೀವನ [–,,– ಪು. ೧೫೪-೧೬೫]

ರಾಮಚಂದ್ರ (ಸಿ.ಎನ್.)

ಜೀವನ ಚರಿತ್ರೆ-ಆತ್ಮಕತೆ (81ರಲ್ಲಿ ಪ್ರಕಟಿತ) [ಗ್ರಂಲೋ. ೧–೬–೮೨, ಪು. ೨೭-೨೮]

ವಸ್ತ್ರದ (ಶಶಿಕಲಾ)

ಮಹಿಳಾ ಸಾಹಿತ್ಯ [ವಿಜಯವಾಣಿ, ಪು. ೪೮-೫೨]

ಶಾಲಿನಿ (ರಘುನಾಥ)

ಯಶವಂತ ಚಿತ್ತಾಲ: ಕೆಲವು ಅಧ್ಯಯನಗಳು (ಜಿ.ಎಸ್. ಭಟ್ಟರಿಂದ ಸಂಪಾದಿತ ಕೃತಿ) [ಪ್ರ.ಕ. ಮಾರ್ಚ್, ಪು. ೯೭–೧೦೧]

—ಸಾಹಿತ್ಯ ಚರಿತ್ರೆ-ವಿಚಾರ ವಿಮರ್ಶೆ (81ರಲ್ಲಿ ಪ್ರಕಟಿತ) [ಗ್ರಂಲೋ. ೧-೬-೮೨, ಪು. ೩೨-೩೭]

ಹಾವನೂರ (ಶ್ರೀನಿವಾಸ)

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ-೧; ಸ್ಥೂಲ ನೋಟ [ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ. ಪು. ೨೦-೨೩]

—೨. ಮುದ್ರಣ ಪೂರ್ವ ಯುಗ [–,,– ಪು. ೨೪-೩೮]

—೩. ದ್ವಿತೀಯ ಯುಗ (೧೯ನೆಯ ಶತಮಾನ) [–,,– ಪು. ೩೯–೬೧]

—ಕಾವ್ಯಾಭ್ಯಾಸಕ್ಕೆ ಕಂಪ್ಯೂಟರ್ ಸಹಾಯ (ಬೇಂದ್ರೆಯವರಿಗೆ ಅನ್ವಯಿಸಿ) [–,,– ಪು. ೧೩೩-೧೪೮]

—ಕನ್ನಡ ಸಾಹಿತ್ಯ ಚರಿತ್ರೆಯ ಕಾಲ ವಿಭಾಗ-ಒಂದು ಸಮನ್ವಯ [–,,– ಪು. ೧-೧೧]

—ಶ್ರೀಕಂಠೇಶಗೌಡರ ಕಾಲದ ಕನ್ನಡ ಸಾಹಿತ್ಯ [-,,- ಪು. ೬೯-೮೬]

—19ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ" (ಐ.ಮಾ. ಮುತ್ತಣ್ಣರ ಕೃತಿ) [–,,– ಪು. ೬೨-೬೮]

—ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯ [-,,- ಪು. ೧೨-೧೯]

ಸಾಸನೂರು (ಬಿ.ಟಿ.)

ವಿಜಾಪುರ ಜಿಲ್ಲಾ ಕ.ಸಾ. ಸಮ್ಮೇಲನ, ಸಿಂದಗಿ (ವಿಜಾಪುರ ಜಿಲ್ಲಾ ಸಾಹಿತ್ಯ ಸಮೀಕ್ಷಾ ಗೋಷ್ಠಿ ಉದ್ಘಾಟನಾ ಭಾಷಣ [ವಿಜಯವಾಣಿ, ಪು. vi-xvi]

ಬಸವಾರಾಧ್ಯ (ಎನ್)

ಪರಿಷ್ಕರಣಕಾರ್ಯ-ಶಾಸ್ತ್ರೀಯ ನಿರ್ವಹಣೆ (ಫ.ಗು. ಹಳಕಟ್ಟಿ ಅವರ 'ವಚನಶಾಸ್ತ್ರಸಾರ') [ಪ್ರ.ವಾ. ೧೭-೧೦-೮೨, ಸಾ.ಪು. ಪು. ४]

ಮುದಗಲ್ಲ (ಪ್ರಹ್ಲಾದ)

ಮರಾಠಿಯಲ್ಲಿ ಕುಮಾರವ್ಯಾಸ ? [ಕ. ನವೆಂ. ಪು. ೬೯-೭೨]

ಬಾಲ ಸಾಹಿತ್ಯ

ಚನ್ನಪ್ಪ (ಎಸ್.)

ಬಾಲಸಾಹಿತ್ಯ (81ರಲ್ಲಿ ಪ್ರಕಟಿತ) [ಗ್ರಂಲೋ. ೧-೬-೮೨, ಪು. ೨೪-೨೫]

'ತುಳುವ'

ಬೆಂಗಳೂರಿನಲ್ಲಿ ನಡೆದ ಮಕ್ಕಳ ಸಾಹಿತ್ಯ ಸಮ್ಮೇಳನ [ತುಳುವ ಅಕ್ಟೋ-ಡಿಸೆಂ. ಪು. i-vii]

ಪತ್ಕಾರ (ಭಾಸ್ಕರ)

ಮಕ್ಕಳ ಸಾಹಿತ್ಯ ಮತ್ತು ಜನಸಾಮಾನ್ಯರ ಸಾಹಿತ್ಯ [ಬೆಳುವಲ. ಪು. ೨೨೪-೨೩೫]

ಪೂರ್ಣಾನಂದ (ಆರ್.ಎಸ್.)

'ನನ್ನ ಗೆಳೆಯ ಎಸ್ಕಿಮೊ ಇಗ್ಲಿಯುಕ್' ('ಸಿಸು' ಸಂಗಮೇಶ್ವರ ಕೃತಿ) [ಗ್ರಂಲೋ.೧-೩-೮೨ ಪು. ೭]

ಪ್ರೇಮಕುಮಾರ್ (ಹರಿಯಬ್ಬೆ)

'ಕೆಂಪು ಕಾರು' (ರಸಿಕಪುತ್ತಿಗೆಯವರ ಕಿರುಕಾದಂಬರಿ) [ಪ್ರವಾ. ೨೪-೧-೮೨, ಸಾ.ಪು. ೪]

—'ನಿಲುವಂಗಿ ರಾಜಕುಮಾರಿ ಮತ್ತು ಇತರ ಕಥೆಗಳು' (ಆರ್. ವಸುಮತಿ ಅವರ ಕೃತಿ)

[ಪ್ರ.ವಾ. ೨೪-೧-೮೨, ಸಾ.ಪು. ಪು. ೪]

